40th year of publication. 5-1-1961 ಅಂನೇ ವರ್ಷ

ಸಂಪುಟ ೪೦ Vol. 40

ನವಯುಗ

ಸಂಚಿಕೆ ೧೮ No. 18

ಜೆಲೆ 0=13

NAVAYUGA KANNADA WEEKLY UDIPI

ಕನ್ನಡಿಗರಿಗೆ ಎಚ್ಚರಿಕೆ

ಕನ್ನಡಿಗರು ನಾಡಿನ ಪುಣ್ಯ ಕಾಪಾಡಬೇಕು

ಮಣಿಪಾಲದಲ್ಲಿ ನಡೆದ ಅರನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಸ್ಥಾನದಿಂದ ಶ್ರೀ ಅ. ನ. ಕೃ. ಕನ್ನಡಿಗರಿಗೆ ನೀಡಿದ ಉಜ್ವಲ ಹಿತವಾದಗಳನ್ನು ಇಲ್ಲಿ ಸಂಗ್ರಹಿಸಿ ಕೊಡಲಾಗಿದೆ.

ನಡೆದು ಬಂದ ದಾರಿ

ಕನ್ನಡ ಸಾಹಿತ್ಯ ಕ್ರಿ. ಶ. ಅರನೆಯ ಶತಮಾನದಿಂದ ಇಲ್ಲಿಯ ವರೆಗೆ ನಾನಾ ರೂಪದಲ್ಲಿ ಬೆಳೆದು ಬಂದಿದೆ. ಶಾಸನ ಪದ್ಯಗಳಿಂದ ಆರಂಭವಾದ ಕಾವ್ಯಶ್ರೀ ಹೊಸ ಕಾವ್ಯದ ವರೆಗೆ ನಡೆದು ಬಂದಿದೆ. ಚಂಪೂ ಕಾವ್ಯಗಳಿಂದ ಷಟ್ಪದಿ ಕಾವ್ಯಗಳು; ಷಟ್ಪದಿ ಕಾವ್ಯಗಳಿಂದ ಸಾಂಗತ್ಯ; ಸಾಂಗತ್ಯದಿಂದ ತ್ರಿಪದಿ; ತ್ರಿಪದಿಯಿಂದ ಗದ್ಯ ಮುನ್ನಡೆದ ಪ್ರತಿಯೊಂದು ಘಟ್ಟದಲ್ಲಿಯೂ ಸಾಹಿತ್ಯದ ಗುಣ ಗೌರವಕ್ಕೆ ಧಕ್ಕೆಯೊದಗಿತೆಂದು ಲಾಕ್ಷಣಿಕರು ಆಕ್ಷೇಪಿಸಿದರು. ಲಾಕ್ಷಣಿಕರು ಹೇಳುವಂತೆ ಒಂದೊಂದು ವೈಲುಗಲ್ಲು ಮಟ್ಟದಾಗಲೂ ಕನ್ನಡದ ಸತ್ತ್ವ ಕ್ಷೀಣವಾಗುತ್ತ ಬಂದಿದೆಯೇ ಎಂದು ನಾವು ವಿಚಾರ ಮಾಡಬೇಕು. ನಮ್ಮ ಪ್ರಾಚೀನ ಕಾವ್ಯ ಪರಂಪರೆ ನಮ್ಮ ದೊಡ್ಡ ಸಂಪತ್ತು. ಅದನ್ನು ಕಡೆಗಣಿಸುವುದು ಶ್ರೇಯಸ್ಕರವಲ್ಲ. ಆದರೆ ಸಾಹಿತ್ಯ ಬಾವಿಯ ನೀರಿನಂತೆ, ಚಲನವಲನವಿಲ್ಲದೆ ಒಂದೇ ಎಡೆ ನಿಂತಿರಬೇಕೆಂದು ಅಪೇಕ್ಷಿಸುವುದು ತಪ್ಪು.

ಸಾಹಿತ್ಯ ಕಾಲೋಚಿತವೂ ಹೌದು; ಕಾಲಾತೀತವೂ ಹೌದು. ಸಮಕಾಲೀನ ಜಗತ್ತಿನ ಶಿಶುವಾದ ಕವಿ, ಸಮಕಾಲೀನ ಜಗತ್ತಿನ ಕಷ್ಟಸುಖ, ಓರಿಕೋರಿ, ಆಸೆ ನಿರಾಸೆಗಳನ್ನು ಅಭಿವ್ಯಕ್ತಗೊಳಿಸುತ್ತಾನೆ. ಹಿಂದೆ ನಡೆದುದು, ಇಂದು ನಡೆಯುತ್ತಿರುವುದು, ನಾಳೆ ನಡೆಯುವುದನ್ನೂ ಕವಿ ಮುಕ್ತಕಣ್ಣನಾಗಿ ನೋಡುತ್ತಾನೆ; ಅದಕ್ಕೇ ಅವನನ್ನು 'ದ್ರಷ್ಟಾರ', 'ಮನೀಷಿ' ಎಂದು ಉಪನಿಷತ್ತು ಕರೆದುದು. ಈ ದೃಷ್ಟಿಯಿಂದ ನೋಡುವಾಗ ಪ್ರಾಚೀನ ಕವಿಗಳು ಜೀವನಾನುಭವವನ್ನಾಗಲಿ, ರಸಾನುಪ್ರೇಕ್ಷೆಯನ್ನಾಗಲಿ, ಸತ್ಯಾವಿಷ್ಕಾರವನ್ನಾಗಲಿ ಮುಗಿಸಿಲ್ಲವೆಂದು ಧಾರಾಳವಾಗಿ ಹೇಳಬಹುದು. ಲೋಕಾಯತನ ಮತ್ತು ಅದಕ್ಕೆ ಹೊಂದಿಕೊಂಡ ಸಮಸ್ಯೆಗಳು ಬೆಳೆದಂತೆ ಅನುಭವವೂ ಬೆಳೆಯುತ್ತದೆ; ಈ ಅನುಭವದ ಪ್ರತೀಕವೇ ಸಾಹಿತ್ಯ. ಅನುಭವದಲ್ಲಿಯಲ್ಲದೆ ದೃಷ್ಟಿ ವೈಶಾಲ್ಯದಲ್ಲಿಯೂ ಇಂದಿನ ಸಾಹಿತ್ಯ, ಪ್ರಾಚೀನ ಸಾಹಿತ್ಯಕ್ಕಿಂತ ಮುಂದೆ ನಡೆದಿದೆಯೆಂದು ನಾನು ಭಾವಿಸುತ್ತೇನೆ. ಅನೇಕ ಪ್ರಾಚೀನ ಕವಿಗಳು ಸ್ವಜಾತಿ, ಮತ ಪ್ರತಿಪಾದನೆಗೆ ಕಾವ್ಯವನ್ನು ಬಳಸಿಕೊಂಡಿದ್ದಾರೆ; ಇಂದಿನ ಸಾಹಿತ್ಯ ಈ ದೋಷದಿಂದ ದೂರವಾಗಿದೆ. ಕಾಲಧರ್ಮ ಹಾಗು ಕಡಲಾಚೆಯಿಂದ ಬಂದ ವಿಚಾರಧಾರೆಯ ಪ್ರಭಾವದಿಂದ ಆಧುನಿಕ ಕನ್ನಡ ಸಾಹಿತ್ಯ ಕೇವಲ ವರ್ಗಗಳಿಗೆ ಮೀಸಲಾಗದೆ ಇಡಿಯ ಜನಪದಕ್ಕೆ ಸಮೀಪವಾಗುತ್ತಿದೆ. ಸಾಹಿತ್ಯ 'ಎಲ್ಲರಿಗೂ ಇಲ್ಲ' ಎನ್ನುವ ತಪ್ಪು ಭಾವನೆ ದೂರವಾಗಿ, ಪ್ರತಿಯೊಬ್ಬ ಮಾನವನೂ ಸಾಹಿತ್ಯದಿಂದ ತನ್ನ ಜೀವನಕ್ಕೆ ಅಗತ್ಯವಾದ ಶಾಂತಿ, ತುಷ್ಟಿ, ಆನಂದ, ಶಕ್ತಿಗಳನ್ನು ದೊರಕಿಸಿಕೊಳ್ಳಬಹುದೆಂಬ ಭಾವನೆ ಬೆಳೆದಿದೆ. ಉದಾತ್ತವಾದ ಈ ಭಾವನೆ ಬೆಳಗುವುದಕ್ಕೆ ಆಧುನಿಕ ಸಾಹಿತಿಗಳು ಹಗಲಿರುಳು ಶ್ರಮಿಸಿದ್ದಾರೆಂದು ಧಾರಾಳವಾಗಿ ಹೇಳಬಹುದು.

ಸಾಹಿತ್ಯದ ವ್ಯಾಪ್ತಿ

ನಾವೂ ನಮ್ಮಪರಲ್ಲೇ ಅಡಕವಾಗಿದ್ದ ಕನ್ನಡ ಸಾಹಿತ್ಯ ಈಗೀಗ ತನ್ನ ಪ್ರಾಂತ್ಯದ ಗಡಿಯನ್ನು ದಾಟಿ ಹೊರಗೆ ಹೋಗಲು ಯತ್ನಿಸುತ್ತಿದೆ. ಪ್ರಾಂತ್ಯ ಭಾಷೆಗಳ ಸಾಹಿತ್ಯ ಕೇವಲ ಪ್ರಾಂತ ಸಾಹಿತ್ಯವಲ್ಲ. ಅವೂ ಭಾರತೀಯತೆಯನ್ನೇ ಪ್ರತಿಪಾದಿಸುತ್ತವೆ. ಹಲ ಪ್ರಾಂತ್ಯ, ಭಾಷೆ, ಸಂಸ್ಕೃತಿಯ ಸಮುಚ್ಚಯವೇ ಭಾರತ. ನಮ್ಮ ಸೇವೆ ಕನ್ನಡ ನಾಡು ನುಡಿಗಳ ಸೇವೆಗೆ ಮೀಸಲಾದರೂ ಅದೂ ಭಾರತದ ಸೇವೆಯೇ! ಭಾವುಕನಾದ ಕವಿ ಯಾವ ಭಾಷೆಯನ್ನೇ ಅವಲಂಬಿಸಲಿ ಸಾಮಾನ್ಯರಿಗಿಂತ ಮೇಲು ಮಟ್ಟದಲ್ಲೇ ನಿಂತು ಮಾತನಾಡುತ್ತಾನೆ. ಕವಿ ಹೃದಯವನ್ನು ಏಕಸೂತ್ರ ಬಂಧಿಸುವಂತೆ ಕವಿವಾಣಿ ಭಾಷಾನುಯಾಯಿಗಳನ್ನು ಏಕಸೂತ್ರದಲ್ಲಿ ಬಂಧಿಸಬಲ್ಲುದು. 'ಸ್ವಾತಂತ್ರ್ಯ' ಶಬ್ದಕೋಶದ ಒಂದು ಪದವಲ್ಲ. ಅದು ಅಂಗಡಿಗಳಲ್ಲಿ ದೊರೆಯುವ ಅಗ್ಗದ ಮಾಲೂ ಅಲ್ಲ. ಸ್ವಾತಂತ್ರ್ಯ ಒಂದು ವಸ್ತುವಲ್ಲ—ಅದೊಂದು ಮನೋಭಾವ ಈ ಮನೋಭಾವವನ್ನು ಇದಕ್ಕೆ ಅನುಕೂಲವಾದ ವಾತಾವರಣವನ್ನು ನಾವು ನಿರಂತರ ಪರಿಶ್ರಮದಿಂದ ನಿತ್ಯ ಸೃಷ್ಟಿಸುತ್ತಿರಬೇಕು. ಮಾನವನ ಪ್ರಾಣಧಾರಣೆಗೆ ಅನ್ನ ಬೇಕು, ಮಾನ ರಕ್ಷಣೆಗೆ ಬಟ್ಟೆ ಬೇಕು. ಅನ್ನ ಬಟ್ಟೆಗಳ ಸಮಸ್ಯೆಯನ್ನು ಸಂಪೂರ್ಣ ಪರಿಹರಿಸಿರುವ ರಾಷ್ಟ್ರಗಳಲ್ಲಿ 'ಮಾನವ' ಏನಾಗಿದ್ದಾನೆ? ಅನ್ನಾಭಾವ ಮಾನವ ಜೀವನವನ್ನು ಕುಂಠಿತಗೊಳಿಸುತ್ತದೆ. ಅದರವನು 'ಪರಸುಟ್ಟ' ನಾಗುವುದರಿಂದ ಮಾನವತೆಯೇ ನಿಶ್ಶೇಷವಾಗುತ್ತದೆ. ಮಾನವನಿಗೆ 'ತನ್ನತನ'ದ ಅರಿವು ಮಾಡಿಕೊಡುವ ಮಹತ್ವದ ಹೊಣೆಗಾರಿಕೆ ಬುದ್ಧಿ ಜೀವಿಗಳದ್ದಾಗಿರುತ್ತದೆ. ಮಾನವನಲ್ಲಿ ಆತ್ಮ ನಂಬಿಕೆಯನ್ನು ಮೂಡಿಸುವುದೇ ಸಂಸ್ಕೃತಿ. ಸಮ್ಯಕ್ ಜ್ಞಾನ, ಸಮ್ಯಕ್ ಜಾಂತ್ರ್ಯ, ಸಮ್ಯಕ್ ಬೋಧಗಳ ಪೂರ್ಣಾವತಾರವೇ ಸಂಸ್ಕೃತಿ. ಸಂಸ್ಕೃತಿಯು ನೆಲೆಯರಿತವನೇ ಸ್ವಾತಂತ್ರ್ಯದ ಬೆಲೆಯನ್ನರಿಯಬಲ್ಲ. ಸ್ವಾತಂತ್ರ್ಯ, ಸಂಸ್ಕೃತಿಯು ಅವಿನಾಭಾವವನ್ನು—ನಿಜ ಸ್ವರೂಪವನ್ನು ಲೋಕಕ್ಕೆ ತಿಳಿಸಿಕೊಡುವ ಗುರುತರ ಹೊಣೆಗಾರಿಕೆ ಸಾಹಿತಿಯದು. ತನ್ನ ಅಂತರ್ಗತವಾದ ಅಪಾರ ಶಕ್ತಿಯನ್ನು ವ್ಯಕ್ತಿ ಅರಿಯಬೇಕಲ್ಲದೆ ಲೋಕ ಹಿತಕ್ಕಾಗಿ ಅದನ್ನು ಅನುಸಂಧಾನ ಮಾಡಬೇಕು. ವಿಶ್ವ ಸಿಡಿದೇಳುವಂತೆ ಅದನ್ನು ಕಾಪಾಡಬಲ್ಲುದು ಮಾನವೀಯತೆಯೊಂದೇ—ಕವಿ ಆ ಮಾನವೀಯತೆಯ ಪ್ರವಾದಿ.

ಆಧುನಿಕ ಸಾಹಿತ್ಯ

ಗೀತೆಗಳು ಮತ್ತು ಸಣ್ಣ ಕತೆಗಳಿಂದಲೇ ಕನ್ನಡ ನವೋದಯ ಆರಂಭವಾಯಿತು. ಸುಮಾರು ೨೦ ವರ್ಷಗಳ ಕಾಲ ಈ ಸಾಹಿತ್ಯ ಪ್ರಕಾರಗಳು ಕನ್ನಡಿಗರ ಕಣ್ಣನವನ್ನು ಸೆಳೆಸುವು. ಕನ್ನಡಿಗರು ಹೆಮ್ಮೆಪಡುವಂಥ ಕೃತಿಗಳು ಬೆಳಕಿಗೆ ಬಂದುವು. ಎರಡನೆ ಮಹಾಯುದ್ಧಾನಂತರ ಕಾದಂಬರಿ ಸಾಹಿತ್ಯ ಪ್ರಸಂಚದ ಸರ್ವಾಧಿಕಾರಿಯಾಗಿದೆ. ಪ್ರಕಟವಾಗಿರುವ ಕಾದಂಬರಿಗಳ ಸಂಖ್ಯೆಯಷ್ಟೇ ಗುಣವೂ ದೊಡ್ಡದಾಗಿದೆ. ಸರಿರಿಗೂ ಅರ್ಥವಾಗುವ ಲಲಿತ ಗದ್ಯಶೈಲಿಯ ನಿರ್ಮಾಣಕ್ಕೆ ಆಧುನಿಕ ಕಾದಂಬರಿಗಳು ಅಪಾರಸೇವೆ ಸಲ್ಲಿಸಿವೆ. ಕಾದಂಬರಿಗಳ ಅತಿವ್ಯಾಪ್ತಿಯಿಂದ ಉಳಿದಸಾಹಿತ್ಯಪ್ರಕಾರಗಳುಕೃಶವಾಗುತ್ತಿವೆ ಎಂಬ ಮಾತು ಸತ್ಯವಾದರೂ, ಈ ಕಾರಣಕ್ಕೆ ಕಾದಂಬರಿಗಳ ಬೆಳೆಯನ್ನು ಕುಂಠಿತಗೊಳಿಸಬೇಕೆಂಬ ವಾದ ಸರಿಯಲ್ಲ. ಒಳ್ಳೆಯ ಕಾದಂಬರಿಗಳ ಜತೆಗೆ ಕೆಟ್ಟ ಕಾದಂಬರಿಗಳು ಬರುವುದು ಸಹಜ. ಕೆಟ್ಟ ಕಾದಂಬರಿಗಳು ಬರುತ್ತಿವೆಯೆಂದು ಕಾದಂಬರಿಗಳೇ ಬೇಡ ಎನ್ನುವುದು ವಿವೇಕವಲ್ಲ. ಸಾಮಾನ್ಯ ಓದುಗನಿಗೆ ಪಥ್ಯವಾಗುವಂತೆ, ರುಚಿಸುವಂತೆ ವೈಜ್ಞಾನಿಕ ವಿಷಯಗಳನ್ನು ಹೇಳುವ ರೀತಿಯನ್ನು ನಮ್ಮ ವೈಜ್ಞಾನಿಕ ಲೇಖಕರು ಇನ್ನೂ ಸಾಧಿಸಿಕೊಳ್ಳಬೇಕಾಗಿದೆ. ಅದಕ್ಕೆ ಅವಶ್ಯಕವಾದ ಶೈಲಿ, ಶಬ್ದ ಸಂಪತ್ತು ಕಲಾತ್ಮಕ ನಿರೂಪಣೆಗಳನ್ನು ಅವರು ರೂಢಿಸಿಕೊಳ್ಳಬೇಕಾಗಿದೆ

ಸಾಹಿತ್ಯ ಪ್ರಕಾರಗಳು

ಕನ್ನಡ ನಾಡಿನ ಸಾಂಸ್ಕೃತಿಕ ಹಿನ್ನೆಲೆಗನುಗುಣವಾದ ರಂಗಭೂಮಿ ಇನ್ನೂ ಜನ್ಮತಳೆಯಬೇಕಾಗಿದೆ. ಇದಕ್ಕೆ ನಾಟಕಕಾರರು ಹೆಚ್ಚಿಭಾರ ಹಾಕಬೇಕು. ಲೋಕಜಾತ, ಜಾನಪದ ವಸ್ತುಗಳೆರಡೂ ಗಂಭೀರವಾದ ರೀತಿಯಲ್ಲಿ ಪ್ರತಿಪಾದಿಸಲ್ಪಡಬೇಕು. ನಾಟಕ ನೋಡುವುದು ಕ್ಷಣಿಕ ವಿಲಾಸಕ್ಕೆ ಎಂಬ ಭಾವನೆ ತೊಲಗಿ ಅದು ವಿದ್ಯಾಮಂದಿರ, ಕಲಾದೇವಿಯ ದಿವ್ಯಮಂದಿರವೆಂಬ ಭಾವನೆ ಜನರಲ್ಲಿ ಬೆಳೆಯಬೇಕು. ಪ್ರಾಚೀನ ಕನ್ನಡ ಕಾವ್ಯಗಳಲ್ಲಿ ಸೊಗಸಾದ ನಾಟಕಗಳು ಹುದುಗಿವೆ. ಕಾವ್ಯ ನಾಟಕಗಳಲ್ಲದೆ ನಿತ್ಯಜೀವನದ ಚಿತ್ರಗಳು, ಸಮಸ್ಯೆಗಳನ್ನು ಗಂಭೀರವಾಗಿ ಸ್ರತಿಪಾದಿಸುವ ನಾಟಕಗಳು ನಮಗೆ ಬೇಕು. ಕನ್ನಡ ಕವಿಗಳು, ವೀರರು, ಧರ್ಮ ಪ್ರವರ್ತಕರು, ರಾಷ್ಟ್ರ ನಿರ್ಮಾತೃಗಳು—ಇವರ ಜೀವನ, ನಾಟಕಕ್ಕೆ ಉತ್ತಮ ವಸ್ತುಗಳನ್ನೊದಗಿಸಬಲ್ಲುದು. ದೇಶಾಭಿಮಾನ, ಧರ್ಮಾಭಿಮಾನ, ಆತ್ಮಾಭಿಮಾನಗಳನ್ನು ಪ್ರಚೋದಿಸುವ ನಾಟಕಗಳ ಅವಶ್ಯಕತೆ ಅತ್ಯಧಿಕವಾಗಿದೆ.

ಇಂದು ವೈಯಕ್ತಿಕ ಅಭಿಮಾನ, ಜಾ

(೧೨ನೇ ಪುಟ ನೋಡಿರಿ)

ESTD. 1921

NAVAYUGA
KANNADA WEEKLY,
UDIPI.

Founder:
Late Sri A. B. Shetty,
Former Minister for Public Health, Govt. of Madras & Govt. of Mysore.

•

ನವಯುಗ

ಪ್ರತಿ ಗುರುವಾರ
ಉಡುಪಿಯಿಂದ ಹೊರಡುವ
ರಾಷ್ಟ್ರೀಯ ವಾರಪತ್ರಿಕೆ

ಸ್ಥಾಪನೆ: ೧೯೨೧.

ಗೌರವ ಸಂಪಾದಕರು:
ಎಸ್. ಗೋಪೀಚಂದ ರಾವ್, ವಿದ್ವಾನ್.
ಬಿ. ಶಾಮರಾಯ ಶೆಟ್ಟಿ, ಬಿ. ಎ., ಎಲ್. ಟಿ.

ಸಂಚಾಲಕ ಸಂಪಾದಕರು:
ಕೆ. ಹೊನ್ನಯ್ಯ ಶೆಟ್ಟಿ.

•

ಚಾಹೀರಾತು ದರಗಳು:
ನಿಯಮಿತ (ಕಂಟ್ರಾಕ್ಟ್)
ಕಲಂ ಇಂಚಿಗೆ ರೂ. 2-00
ಅನಿಯಮಿತ (ಕೆಜುವಲ್)
ಕಲಂ ಇಂಚಿಗೆ ರೂ. 3 00
ಪೆಜ್ಜಿನ ವಿವರಗಳಿಗೆ ವ್ಯವಹರಿಸಿರಿ.

ಚಂದಾ:
ವಾರ್ಷಿಕ ಚಂದಾ (ಅಂಚೆವೆಚ್ಚ ಸೇರಿ) ರೂ. 6-25
ಬಿಡಿಪ್ರತಿ ರೂ. 0-13

ಚಂದಾಹಣವನ್ನಾಗಲೀ ಚಾಹೀರಾತಿನ ಹೊಬಲಗನ್ನಾಗಲೀ ಕಾಂಚಕೇಟ್ ಬೇಂಕಿನ ಯಾವುದೇ ರಾಜಿಯಲ್ಲಿ ಯಾವ ಬಿಲ್ಲೂ ಇಲ್ಲದೆ 'ನವಯುಗ'ದ ಖಾತೆಗೆ ಜಮೆ ಮಾಡುವಸೌಕರ್ಯವಿರುವುದು.

ಕಥಾವಿಹಾರ

ಹೀಗೆಯೂ ನಡೆದಿತ್ತು!

ಕಾಯುದೆಯಿಂದ ಸಾಮಾಜಿಕ ಪರಿಸ್ಥಿತಿಯು ಸುಧಾರಿಸುವಂತಿಲ್ಲ; ಜನಮನ ಪರಿವರ್ತನೆಯಿಂದಲೇ ಅದು ಸಾಧ್ಯವೆಂಬುದನ್ನು ವಿನೋಬಾ ಹೇಳುತ್ತಿದ್ದಾರೆ. ಇದಕ್ಕೊಂದು ನಿದರ್ಶನವಾಗಿ ನಿಂತಿದೆ ನಮ್ಮೆಲ್ಲರ ಅನುಭವವೊಂದು!

ಶ್ರೀ ಕೆ. ತಿಮ್ಮಪ್ಪ ಶೆಟ್ಟಿ.

ನಾನು ಮತ್ತು ರಾಘವ ಮಾಸ್ಟ್ರು ಪಾನ ಪ್ರತಿಬಂಧ ಸಭೆಗೆ ಹೋಗಿದ್ದೆವು. ನಾವಿಬ್ಬರೂ ಪಾನಪ್ರತಿಬಂಧ ಅತೀ ಅಗತ್ಯ ಎಂಬುದಾಗಿ ಭಾಷಣ ಜಡಿಯಬೇಕೆಂದು ಭಾವಿಸಿದ್ದರೂ, ಕೆಲವು ಭಾಷಣಗಳು ನಮ್ಮನ್ನೇ ಹಿಂದೆಕ್ಕೆ ಜಡಿದು ಬಿಟ್ಟುದ್ದರಿಂದ ನಮ್ಮ ಭಾಷಣಗಳನ್ನು ಮನಃ ಒದರಲು ಇಚ್ಛಿಸಲಿಲ್ಲ. ಸಭೆಯು ಬರ್ಖಾಸ್ತ್ ಆದೊಡನೆ ಊರ ಮಹನೀಯರಾದ ಮತ್ತು ಅಂದಿನ ಅಧ್ಯಕ್ಷರಾದ ಸುಂದರ ರಾಯರ 'ಹೆಸರಿನಲ್ಲಿ' ಟೀವಾರ್ಟಿ ಬೇರೆ ಇತ್ತು. ನಾವಿಬ್ಬರು ಗಣ್ಯರಲ್ಲದಿದ್ದರೂ ಕಾಫಿಯ ಪುಣ್ಯ ಸಿಕ್ಕಿತ್ತು.

ನಾವು ಕೆಲವರು ಮಾನ್ಯ ಶ್ರೀ ಅಲ್ಲದ ನಾಮಾನ್ಯರು ನಮ್ಮ ಕಾಫಿಯನ್ನು ಸವಿಗಿಸಿ ಹೊರಬಂದ ಬಳಿಕ ಬಾಟ್ಲಿ ಬಾಟ್ಲಿ ಸೋಡಾಗಳು ಒಳ ಹೋದುವು. "ಛಿ! ಛಿ! ಇದೇನು ವಿಪರೀತ? ಇವರೇನು ಕಾಫಿಗೆ ಸೋಡಾಂ ಹಾಕಿ ಕುಡಿಯುತ್ತರೇನು?" ಎಂದೆ ನಾನು "ಅಲ್ಲ ಅವರು ಸೋಡಾ ಹಾಕಿ ಬೇರೆ 'ಎಕ್ಸ್ಟ್ರಾ ಕಾಫಿ ಮಾಡ್ತಾರಿ" ಎಂದರು ನಮ್ಮ ರಾಘವ ಮಾಸ್ಟ್ರು.

ಕಾಫಿ ಕುಡಿದು, ಕೆಂಪಾದ ಕಣ್ಣುಗಳನ್ನು (ನಮಗೇನೂ ಕಾಫಿ ಕುಡಿದು ಕಣ್ಣು ಕೆಂಪಾಗಲಿಲ್ಲ) ತಿರುಗಿಸುತ್ತಿದ್ದ ಹೆತ್ತಾರು ಮಾನ್ಯರು ಹೊರಬಿದ್ದರು. ನಮ್ಮ ಸುಂದರ ರಾಯರ ಭಾವ ಶಂಕರ ರಾಯರು ತಮ್ಮ ಟ್ಯಾಂಕರಿನ ಹಾಗಿದ್ದ ಹೊಟ್ಟೆಯ ಗುರುತ್ವಾಕರ್ಷಣಕ್ಕೆ ಸರಿಯಾಗಿ ಹೆಜ್ಜೆಯಿಡುತ್ತಾ ಹೊರ ಬಂದಾಗ, ಕಾಫಿಗೆ ಉಪಯೋಗಿಸಿದ್ದ ಬಾಳೆ ಹಣ್ಣಿನ ಸಿಪ್ಪೆ ಹೊಟ್ಟೆಯಿಂದಾಗಿ ಕಾಣದೆ ಹೋಯಿತು. ಪರಿಣಾಮವಾಗಿ ಧಡಾಲನೆ ಜಾರಿ ಬಿದ್ದರು. ನಾನು ಬಾವಿಸಿದ್ದೆ ಅವರ ಹೊಟ್ಟೆ ಸಿಡಿದಾಗಿಯೂ ಒಡೆದಿರಲೇ ಬೇಕೆಂದು! ಆದರೆ ಹಾಗಾಗಲಿಲ್ಲ. ಈಚೆ ಬದಿಯಲ್ಲಿ ರಾಮಯ್ಯನಿರಿಸಿದ ಗೂಡಂಗಡಿಯ ಬೀಡಾಕಟ್ಟೆ, ಮುರುಕು ಚಿಮಿಣಿ ಅವರ ಕಾಲಿನ ತಾಡನಕ್ಕೆ ಜಾರಿ ಹೋಗಿ, ಆಚೆ ಬದಿಯಲ್ಲಿ ಹಂಟೆ ಹೊಡೆಯುವವರ ಮೇಲೆ ಬಿದ್ದಿತು.

ಅರ್ಥಕೋಶದಲ್ಲೂ ಇಲ್ಲದ ಸಹಸ್ರಾರು ಶಬ್ದಗಳಿಂದ ಆ ಬಾಳೆ ಹಣ್ಣಿನ ಸಿಪ್ಪೆಯನ್ನು ಅಬ್ಬರಿಸಿ ಶಪಿಸುತ್ತಾ, (ಅದನ್ನು ಎಸೆದವರಿಗೂ) ಯಾರದನ್ನು ಎಸೆದವನೋ ಅವನನ್ನು ಒಕ್ಕಲೆಬ್ಬಿಸಿ ಓಡಿಸುವೆನೆನ್ನುತ್ತ ಹೊರ ಬಂದರು.

ಅಂತೂ ನಮಗೆ ಆದೊಂದು ನಗೆಯ ಹಬ್ಬ ಹಾಗೆ ಎಲ್ಲವೂ ಕೊನೆಗೊಂಡಾಗ ರಾತ್ರಿ ಗಂಟೆ ಎಂಟು. ಮತ್ತೆ ನಾನು ನಮ್ಮ ರಾಘವ ಮಾಸ್ಟ್ರು ಹರಟುತ್ತಾ ನಮ್ಮ ನಡತೆಯ ಕಡೆ ಹೊರಟಿದ್ದೆವು. ಸ್ವಲ್ಪ ದೂರ ಹೋದ ಮೇಲೆ ಮಾರ್ಗದ ಬದಿಯಲ್ಲಿ ಯಾರೋ ನಿಂತಂತೆ ಕಂಡಿತು. ನಾವು ಸ್ವಲ್ಪ ಹೊತ್ತು ನಿರೀಕ್ಷಿಸಿದರೂ ಅದು ಕದಲಲಿಲ್ಲ. ಇದು ಪ್ರೇತ ವಿರಬಹುದೇನೋ ಎನ್ನುತ್ತಾ ನಾವು ಅದರ ಮುಖಕ್ಕೆ ಟಾರ್ಚು ಬೆಳಗಿದೆವು. ಅದು ನಿಜಕ್ಕೂ ಪ್ರೇತವಾಗಿರಲಿಲ್ಲ; ನಮ್ಮ ಆಚೆ ಮನೆ ದೂಮ.

ದೂಮ ಅಂದುಬಿಟ್ಟರೆ ಸರಿ, ಕೂಡಲೇ ಸಾರಾಯಿಯ ನೆನಪಾಗಲೇ ಬೇಕು. ಅವನು ಖಂಡಿತವಾಗಿಯೂ ಕುಡಿದಿರಬೇಕೆಂದು ಖಂಡಿತವೂಡಿದೆವು. ಆದರೂ ಸುಮ್ಮನಿರದೆ 'ಅದಾರು ದೂಮನೆ? ಎಲ್ಲಿಗೆ ಹೊರಟಿದ್ದಿ' ಎಂದೆ ನಾನು.

ಅದಕ್ಕೆ ಉತ್ತರದ ಬದಲು 'ನೀವು ಯಾರು?" ಎಂದ ದೂಮ, ಪೋಲಿಸ್ ಇನ್ಸ್‌ಪೆಕ್ಟರನ ಪ್ರೇತದಂತೆ! ಅವಕ್ಕೆ ನಾವು "ನಾವು!" ಎಂದೆವು. "ನಾವು ಎಂದರೆ ಯಾರು? ನಿಮಗೇನು ಹೆಸರಿಲ್ಲವೇ ನಿಮಗೆ ನಾಲಗೆ ಮಗುಚೋಗಿದೆಯೆ? ನೀನೇನು ಕುಡಿದ್ದಿರಾ?" ಎಂದನಲ್ಲಾ ಭೀಮನ ಹಾಗೆ ದೂಮ!

ಅಯ್ಯೋ ಇದೆಂತಹ "ಭರಣಿ ಕೃತ್ತಿಕ" ನಮಗೆ ಗಂಟು ಬಿತ್ತು ಅನ್ನುತ್ತಾ ನಾವು ಮೆಲ್ಲನೆ ಜಾರಲು ಪ್ರಾರಂಭಿಸಿದೆವು.

"ಯಾರದು? ನಿಲ್ಲಿ!" ಎಂದು ದೂಮ ಗರ್ಜಿಸಿದ. ನಾವು ಮೊತನಾಡದೆ ಸುಮ್ಮನೆ ನಿಂತೆವು. ಅಷ್ಟರಲ್ಲಿ ಅವನು ದುಡುಮ್ಮನೆ ನಮ್ಮ ಮೇಲೆ ಧಾವಿಸುತ್ತಾ ಬರಬೇಕೆ? ಅವನ ಧಾಳಿಗೆ ನಾವು ಅವಕಾಶ ಕೊಟ್ಟು ಅತ್ತಿತ್ತ ಸರಿದು ನಿಂತೆವು. ಅವನು ನಮ್ಮ ಮಧ್ಯದಿಂದ ನಿರಾಧಾರವಾಗಿ ಮುಂದೆ ಹೋಗಲಾಗಿ ಮಾರ್ಗದ ಬದಿಯಲ್ಲಿ ಮಳೆ ಬಂದು ನಿಂತ ನೀರಿನ ಸಣ್ಣ ಕೆಸರಿನ ಹಳ್ಳಕ್ಕೆ ಬೋರಲಾಗಿ ಬಿದ್ದ. ನಾವು ನಗುವನ್ನು ಸಹಿಸಲಾರದೆ ಕಾಲು ಕೆತ್ತೆವು.

ಇದರ ಮೊದಲೊಮ್ಮೆ ಹೀಗೆಯೇ ಆಗಿತ್ತು. ನಾವು ಫಸ್ಟ್ ಶೋ ಸಿನಿಮಾ ನೋಡಿ ಹಿಂದಿರುಗುತ್ತಿದ್ದೆವು. ನಮ್ಮ ಮನೆಗೆ ಸ್ವಲ್ಪ ದೂರ ಮಾರ್ಗದಲ್ಲಿ ದೂಮ ನಮಗೆ ಇದಿರಾದ. ನಾವು ದೂರದಿಂದ ಬರುತ್ತಿರುವಾಗಲೇ

"ಏಯ್ ಮಿಸ್ಟರ್, ಯಾಕೆ ಮಲಗಿದ್ದಿಯಾ ಇಲ್ಲಿ ಹೀಗೆ, ಎಳೋ ಯಾಕೆ ಹೀಗೆ ಕಣ್ಣು ತೆರೆಯಾಗಲ್ಲದೆ ಕುಡಿದಿದ್ದೀಯಾ? ಹುಂ. ಹುಂ. ಎಳೋ! ಏ ಮಿಸ್ಟರ್!" ಅನ್ನುವ ದೂಮನ ಒದರಾಟ ಕಣ್ಣಿಗೆ ಬಿತ್ತು. ನಾವು ಬಳಿ ಬಂದು ನೋಡಿದಾಗ ದಾರಿಯಲ್ಲಿ ಎಮ್ಮೆಯೊಂದು ಮಲಗಿದ್ದು, ಆದರ ಬಳಿನಿಂತು ದೂಮ ಹೀಗೆ ಒದರುತ್ತಿದ್ದ. ಇದು ಯಾರೋ ಕುಡಿದುಬಂದು ಬಿದ್ದ. 'ಮಿಸ್ಟರ್" ಆಗಿರಬೇಕೆಂದು ಅವನ ಭಾವನೆ.

ನಾವಿಬ್ಬರೂ ಅವನ ಪಾಡನ್ನು ನೋಡಿ ಮನಸಾರೆ ನಗಲೇ ಬೇಕಾಯಿತು. ಮತ್ತೆ ಸ್ವಲ್ಪ ಕನಿಕರವನ್ನು ಮನಸ್ಸಿನಲ್ಲಿ ಮೂಡಿಸಿ ಅವನನ್ನು ಅವನ ಮನೆತನಕ ಮುಟ್ಟಿಸೋಣವೆಂದು ಬಯಸಿದೆವು. ಹಾಗೆ ಅವನ 'ಹಾಂ-ಹೂಂ'ಗಳಿಗೆ 'ಹೂಂ-ಹೂಂ' ಅನ್ನುತ್ತಾ ಅವನ ಮನೆಗೆ ಮುಟ್ಟಿಸಿದೆವು.

ಹೊಟ್ಟೆ ತುಂಬಾ ಕುಡಿದ ಮೇಲೆ ಮೈಸೂರು ವೃಂದಾವನದ ಕಾರಂಜಿಯಂತೆ ಬಾಯಲ್ಲಿ ಮದ್ಯವನ್ನು ಚಿಮ್ಮಿಸುವ ದೂಮ—ಈ ದೂಮ ಆ ದಿನ ಪಾನನಿರೋಧ ಸಭೆಗೂ ಬಂದದ್ದೇ ಆಶ್ಚರ್ಯದ ವಿಷಯ. ದೂಮನೇನೂ ಚಿಲ್ಲರೆ ವ್ಯಕ್ತಿಯಲ್ಲ. ಆತ ಹಿಂದೆ ದೊಡ್ಡ ದಿಂಡಾಳಾಗಿದ್ದ. ಒಳ್ಳೆಯ ದುಡಿಮೆಗಾರನೂ ಹೌದು. ತನ್ನ ಹಾಗಿದ್ದವರೆಲ್ಲಾ ದುಡಿಮೆಯನ್ನೊತ್ತಟ್ಟಿಗೆ ಬಿಟ್ಟು "ಕಾಯಿಸಿ ಕಾಸುಗಳಿಸುವುದನ್ನು" ನೋಡಿದ ದೂಮ ತಾನೂ ಕಾಯಿಸಲಾರಂಭಿಸಿದ. ಹಣ್ಣು—ಬೆಲ್ಲಗಳನ್ನು ಬೇಯಿಸಲಾರಂಭಿಸಿದ. "ಏನು ದೂಮ ನೀನೂ ಕಾಯಿಸ್ತಿಯಾ?" ಅಂದ

(೧೧ನೇ ಪುಟ ನೋಡಿರಿ)

40 ವರ್ಷಗಳ ಭದ್ರ ಹಾಗೂ ಸಮರ್ಥ ಬೇಂಕಿಂಗ್ ಸೇವೆ
ದಿ. ಪಾಂಗಾಳ ನಾಯಕ್ ಬೇಂಕ್ ಲಿ.,
ಪ್ರಧಾನ ಕಛೇರಿ: ಉಡುಪಿ, (ದ. ಕನ್ನಡ.)
ನಮ್ಮ 3 ವರ್ಷ ವಾಯಿದೆಯ ಕ್ಯಾಷ್ ಸರ್ಟಿಫಿಕೇಟುಗಳಲ್ಲಿ ತೇವಣಿ ಮಾಡಿರಿ.
ಬಡ್ಡಿ ಶೇಕಡಾ 5ರಂತೆ. ರೂ. 87-00 3 ವರ್ಷಗಳ ಅಂತ್ಯದಲ್ಲಿ ಬಡ್ಡಿ ಕೂಡಿ ರೂ. 100-00 ಒದಗಿಸುವುದು.
ಕರೆ, ಚೆಕ್ಕುವಾಯಿದೆ, ನಿರಖು ಠೇವಣಾತಿಗಳ ಮೇಲೆ ಬಡ್ಡಿ ಶೇಕಡಾ 4½ರ ವರೆಗೆ.
ರೂ. 1 ಕೋಟಿಗೂ ಮಿಕ್ಕಿದ ಚಲಾವಣಾ ಭಂಡವಾಳ
ಶಾಖೆಗಳು: ಬೆಂಗಳೂರು, ಮಂಗಳೂರು, ಬೇಲೂರು, ಶಿವಮೊಗ್ಗ, ಭದ್ರಾವತಿ, ತುಮಕೂರು, ಕುಣಿಗಲ್, ಕಾಸರಗೋಡು, ಇತ್ಯಾದಿ.
(ಸ್ಥಾಪನೆ: 1920)

ಣಿನೋವುಗಳ ಅತ್ಯುತ್ತಮ ಸಂಹಾರಿ

ಅಮೃತಾಂಜನ

ವಿಚಾರವರ್ಷ

ಗ್ರಹಗಳ ಹುಟ್ಟನ್ನು ಕುರಿತು ಹೊಸ ಸಿದ್ಧಾಂತ

ಆಕಾಶದ ಗ್ರಹಗಳ ಗುಟ್ಟನ್ನು ಇಷ್ಟರಲ್ಲೇ ಅರಿತುಕೊಂಡ ನೀವು ಗ್ರಹೇತರ ಗೋಳ ರೂಪಗಳ ರಹಸ್ಯವನ್ನು ತಿಳಿದುಕೊಳ್ಳಲು ಆತುರಪಡುವುದು ಸ್ವಾಭಾವಿಕವೇ. ಶ್ರೀ ಬೋರಿಸ್ ಲೆವಿನ್ಸ್‌ರ ಪುಸ್ತಕದ ಸಾರಾಂಶವನ್ನು ಶ್ರೀ ಎಂ. ರಂಗ ರಾವು ಅವರು ಕನ್ನಡಿಗರಿಗೆ ಒದಗಿಸಿದ ಲೇಖನ ಮಾಲೆಯ ಎಳನೆ ಅಧ್ಯಾಯದಲ್ಲಿ ಇದಕ್ಕೆ ಸಮಾಧಾನವಿದೆ.

೭. ಇತರ ಗೋಳರೂಪಾದಿಗಳು

ಅಲ್ಪ ಗ್ರಹಗಳು:

ಗ್ರಹಗಳಲ್ಲಿ ಸಮೀಪ ಗ್ರಹಗಳೂ, ದೂರ ಗ್ರಹಗಳೂ ಎಂದು ಎರಡು ಬಗೆಗಳಿರುವಂತೆ ಅಲ್ಪಗ್ರಹಗಳೂ, ಉಲ್ಕೆಗಳೂ ಬಾಲದ ಚುಕ್ಕೆಗಳೂ ಮುಂತಾದುವುಳ್ಳಲ್ಲಿ ಕೂಡ ಎರಡು ಶಾಖೆಗಳಿವೆ.

ಸೂರ್ಯನ ಸುತ್ತಲೂ ಇರುವ ಆದಿ ಮೇಘದಿಂದ ಮೊತ್ತಮೊದಲು ಅನೇಕ ಗೋಳಗಳು ಉತ್ಪತ್ತಿಯಾದುವೆಂದೂ, ಅವುಗಳಲ್ಲಿ ಕೆಲವು ವಿಚ್ಛಿನ್ನವಾಗಿ, ಅವುಗಳ ಶಕಲಗಳಿಂದ ಬೇರೆ ಗೋಳಗಳು ಏರ್ಪಟ್ಟುವೆಂದೂ ಇದಕ್ಕೆ ಮೊದಲು ನಾವು ತಿಳಿದುಕೊಂಡೆವು. ಆ ವಿಧವಾಗಿ ವಿಚ್ಛಿನ್ನವಾದ ಗೋಳಗಳ ತುಣುಕುಗಳೇ ಈಗ ಕಾಣಿಸುವ ಅಲ್ಪ ಗ್ರಹಗಳೂ, (ಆಸ್ಟ್ರಾಯಿಡ್ಸ್) ಉಲ್ಕೆಗಳೂ, ಬಾಲದ ಚುಕ್ಕೆಗಳೂ ಆಗಿವೆ.

ಇವುಗಳಲ್ಲಿ ಅಲ್ಪಗ್ರಹಗಳೂ ಉಲ್ಕೆಗಳೂ ಸೂರ್ಯನ ಸಮೀಪ ಪ್ರಾಂತಕ್ಕೆ ಸೇರಿರುತ್ತವೆ. ಧೂಮಕೇತುಗಳು ದೂರ ಪ್ರಾಂತಕ್ಕೆ ಸೇರಿದುವು. ಅಂತೆಯೇ ಅಲ್ಪ ಗ್ರಹಗಳಲ್ಲಿಯೂ, ಉಲ್ಕೆಗಳಲ್ಲಿಯೂ, ಕಲ್ಲು ಪದಾರ್ಥಗಳಿವೆ. ದೂಮಕೇತುಗಳ ಕೇಂದ್ರಗಳಲ್ಲಿರುವುದು ಮುಖ್ಯವಾಗಿ ಘನೀಭವಿಸಿದ ವಾಯುಗಳು ಮಾತ್ರವೇ.

ಸಮೀಪಗ್ರಹಗಳಲ್ಲಿ ತುಟ್ಟ ತುದಿಯದು ಅಂಗಾರಕ. ದೂರಗ್ರಹಗಳಲ್ಲಿ ಮೊಟ್ಟ ಮೊದಲನೆಯದು ಗುರು. ಈ ಎರಡಕ್ಕೂ ನಡುವೆ ಬಹಳ ದೊಡ್ಡ ಅಂತರ—೩೬ ಕೋಟಿ ಮೈಲುಗಳಷ್ಟು ಇದೆ. ಈ ಸಂದು ಜಾಗೆಯಲ್ಲಿ ಸುಮಾರು ಎರಡು ಸಾವಿರದಷ್ಟು ಅಲ್ಪಗ್ರಹಗಳಿವೆ. ಇವುಗಳಲ್ಲಿ ಕೆಲವು ದೊಡ್ಡವು; ಅವುಗಳ ಪ್ರಮಾಣ ನೂರಾರು ಮೈಲುಗಳಷ್ಟಿವೆ. ವತ್ತೆ ಕೆಲವು ಚಿಕ್ಕವು; ಅವುಗಳ ಪ್ರಮಾಣ ಒಂದು ಮೈಲು ಕೂಡಾ ಇರಲಾರದು. ಇಂಥವು ಉಲ್ಕೆಗಳಿಗಿಂತ ಅಷ್ಟೇನೂ ದೊಡ್ಡವಲ್ಲ. ಅಲ್ಪ ಗ್ರಹಗಳಲ್ಲಿ ಹೆಚ್ಚು ಭಾಗವು ತಮ್ಮ ಸರ ಹದ್ದುಗಳಲ್ಲಿಯೇ ತಿರುಗುತ್ತವೆ. ಕೆಲವು ಮಾತ್ರ ದೀರ್ಘ ವೃತ್ತಾಕಾರಗಳಲ್ಲಿ ತಿರುಗುತ್ತಾ, ಸೂರ್ಯನಿಗೆ ದೂರ ಪ್ರಾಂತದಲ್ಲಾಗಲೀ ಸಮೀಪ ಪ್ರಾಂತದಲ್ಲಾಗಲೀ ಪರಿಭ್ರಮಿಸಿಕೊಂಡಿರುತ್ತವೆ.

ಉಲ್ಕೆಗಳು

ಉಲ್ಕೆಗಳ ಆಕಾರ ಪ್ರಮಾಣ ಬಹಳ ಕಡಮೆ. ಬಹಿರಾಕಾಶದಲ್ಲಿ ಇವೇ ಅಸಂಖ್ಯಾತವಾಗಿವೆ. ಆದರೆ ಇವು ಭೂಮಿಯನ್ನು ಸಮೀಪಿಸಿ ನಮ್ಮ ವಾತಾವರಣದೊಳಗೆ ಹೊಕ್ಕು ಗಾಳಿಯ ಒರಸುವಿಕೆಯಿಂದ ಉಷ್ಣವೇರಿ ಬೆಳಗಲಾರಂಭಿಸಿದಾಗಷ್ಟೇ ನಾವು ಇವುಗಳನ್ನು 'ಬೀಳುವ ನಕ್ಷತ್ರ' ಗಳಾಗಿ ನೋಡುತ್ತೇವೆ ಸಾಧಾರಣವಾಗಿ ಉಲ್ಕೆಗಳು ಗಾಳಿಯ ಸರೆಗಳಲ್ಲಿಯೇ ಮಸಿಯಾಗಿ ಹೋಗುತ್ತವೆ. ಇವುಗಳ ವೇಗವು ಸೆಕೆಂಡಿಗೆ ೧೨ ಮೈಲಿಗಿಂತಲೂ ಹೆಚ್ಚು. ಆದರೆ ಕೆಲವು ದೊಡ್ಡ ಪ್ರಮಾಣವಿರುವ ಉಲ್ಕೆಗಳು ಅದಕ್ಕಿಂತ ಕಡಮೆ ವೇಗದಲ್ಲಿ ಭೂಮಿಯಿಂದ ಆಕರ್ಷಿಸಲ್ಪಟ್ಟಾಗ, ಅವು ಗಾಳಿಯಲ್ಲಿ ಸಾಂತವಾಗಿ ಮಸಿಯಾಗಲಾರವು. ಅವುಗಳ ಶೇಷಾಂಶಗಳು ಶಿಲಾರೂಪದಲ್ಲಿ ಭೂಮಿಯ ಮೇಲೆ ಬೀಳುತ್ತವೆ. ಅವುಗಳನ್ನು ನಾವು ಪರೀಕ್ಷಿಸಿ ಅವುಗಳಲ್ಲಿರುವ ಪದಾರ್ಥವೆಂಥದು? ಅವುಗಳ ನಿರ್ಮಾಣ ಹೇಗೆ ಏರ್ಪಟ್ಟಿತು? ಎಂಬವುಗಳನ್ನು ತಿಳಿದುಕೊಳ್ಳಬಹುದು. ಈ ಉಲ್ಕಾಶಿಲೆಗಳು ಸಣ್ಣ ಸಣ್ಣ ಶಕಲಗಳ ಕೂಡಿಕೆಯಿಂದ ಏರ್ಪಟ್ಟವೆಂದು ಸ್ಪಷ್ಟವಾಗಿದೆ.

ಅಂಗಾರಕನಿಗೂ ಗುರುವಿಗೂ ಮಧ್ಯದಲ್ಲಿ ಒಮ್ಮೊನೊಮ್ಮೆ ಒಂದು ಭಾರೀಗ್ರಹವಿತ್ತೆಂದೂ, ಅದು ವಿಚ್ಛಿನ್ನವಾಗಿ, ಅದರಿಂದ ಈ ಅಲ್ಪ ಗ್ರಹಗಳೂ ಉಲ್ಕೆಗಳೂ ಹುಟ್ಟಿದುವೆಂದೂ ಒಂದು ಸಿದ್ಧಾಂತವು ಅಮಲಿನಲ್ಲಿದೆ. ಆದರೆ ಅಲ್ಪ ಗ್ರಹಗಳೆಲ್ಲಾ ಒಂದೇ ಗ್ರಹಕ್ಕೆ ಸಂಬಂಧಿಸಿದ ತುಣುಕುಗಳಾದರೆ, ತಲೆಗೊಂದು ಕಕ್ಷೆಯಲ್ಲಿ ಸಂಚರಿಸುವ ಕಾರಣವೇನೋ ಗೊತ್ತಾಗುವುದಿಲ್ಲ. ಉಲ್ಕೆಯ ಶಿಲೆಗಳು ಚಿಕ್ಕ ಚಿಕ್ಕ ಕಲ್ಲಿನ ಚೂರುಗಳಿಂದ ಸೇರಿಕೊಂಡು ಉಂಟಾಯಿತೇಕೋ ತಿಳಿಯುವುದಿಲ್ಲ.

ಇವು ಹೇಗುಂಟಾದುವು?

ಸ್ಮಿತ್ ಸಿದ್ಧಾಂತ ಪ್ರಕಾರ, ಈ ಅಲ್ಪ ಗ್ರಹಗಳೂ, ಉಲ್ಕೆಗಳೂ ಒಂದು ಗೋಳವಾಗಿ ಎಂದೂ ಸೇರಿಕೊಂಡಿರಲೇ ಇಲ್ಲ. ಮೊತ್ತಮೊದಲಿದ್ದ "ವಾಯುಕಣ ಮೇಘ"ದಿಂದ ಅನೇಕ ಗ್ರಹಪಿಂಡಗಳುತ್ಪತ್ತಿಯಾದುವು. ಇವು ಒಂದಕ್ಕೊಂದು ಢೀಕೊಡುವುದರಿಂದ ತುಂಡುಗಳಾಗಿ, ಆ ಮೂಲಕ ಚಿಕ್ಕ ಚಿಕ್ಕ ಗ್ರಹಗಳು ಏರ್ಪಟ್ಟುವು. ಸುತ್ತಲಿರುವ ಮೇಘದಲ್ಲಿ ಪದಾರ್ಥ ಕಣಗಳು ಕ್ಷೀಣವಾಗಿದ್ದಷ್ಟು ಕಾಲವೂ, ಈ ಶಕಲಗಳು ಆ ಪದಾರ್ಥವನ್ನು ಕೂಡಗಟ್ಟಿಕೊಂಟು, ಇನ್ನೂ ಬೆಳೆಯುವ ಅವಕಾಶವನ್ನು ಉಳಿಸಿಕೊಂಡೇ ಸಾಗಿದುವು. ಆದರೆ ಆ ಪದಾರ್ಥ ಕಣಗಳು ತಗ್ಗಿ ಹೋದ ಮೇಲೆ ಅಲ್ಪ ಗ್ರಹಗಳ ಬೆಳವಣಿಕೆ ನಿಂತಿತು. ಆದರೆ ಅವು ಒಂದಕ್ಕೊಂದು ತಾಗಿ ವಿಚ್ಛಿನ್ನವಾಗುವ ಕಾರ್ಯಕ್ರಮವು ಮಾತ್ರ ಕೊನೆ ಸಾಗುತ್ತಲೇ ಹೋಯಿತು.

ಅಂಗಾರಕನಿಗೂ, ಸೂರ್ಯನಿಗೂ ಮಧ್ಯದಲ್ಲಿರುವ ಪ್ರಾಂತದಲ್ಲಿ ಅಲ್ಪ ಗ್ರಹಗಳು ಕಾಣಬರುವುದಿಲ್ಲ. ಆದರೆ ಅಂಗಾರಕನಿಗೂ, ಗುರುವಿಗೂ ಮಧ್ಯದಲ್ಲಿರುವ ಪ್ರಾಂತದಲ್ಲಿ ಇವು ಸಾವಿರಾರು ಸಂಖ್ಯೆಯಲ್ಲಿವೆ. ಆದರೆ ಇವುಗಳಲ್ಲಿ ೬೦ ಮೈಲಿಗಿಂತ ಹೆಚ್ಚು ವ್ಯಾಸವುಳ್ಳವು ೬೦ ಅಥವಾ ೭೦ಕ್ಕಿಂತ ಹೆಚ್ಚಿಗಿಲ್ಲ. ಇವು ಒಂದನ್ನೊಂದು ಆಪ್ಪಳಿಸಿಕೊಂಡೂ, ಉಲ್ಕೆಗಳೊಂದಿಗೆ ಹೊಡೆದಾಡಿಕೊಂಡೂ ಶಿಥಿಲವಾಗುತ್ತಾ ಇವೆ; ಅವುಗಳ ಪ್ರಮಾಣವೂ ತಗ್ಗಿ ಹೋಗುತ್ತಾ ಇದೆ. ದೊಡ್ಡವಗಳ ಸಂಖ್ಯೆಯೂ ಕಡಮೆಯಾಗುತ್ತಿದೆ.

ಚೂರುಗಳಾಗಿ ಹೋದ ಅಲ್ಪ ಗ್ರಹಗಳು ತಿರುಗಿ ಕೂಡಿಕೊಳ್ಳುವುದಿಲ್ಲ. ಸೂರ್ಯ ರಶ್ಮಿಯ ಒತ್ತಾಯಕ್ಕೊಳಗಾಗಿ ಅವು ಸೂರ್ಯನ ಮೇಲೆ ಬಿದ್ದು ಹೋಗುತ್ತವೆ. ಇದು ಹೇಗೆ ನಡೆಯುವುದೆಂದು ನೋಡೋಣ.

ರಾಶಿ ಚಕ್ರಕಾಂತಿ

ಸೂರ್ಯನು ತನ್ನ ಗುರುತ್ವಾಕರ್ಷಣದಿಂದ ದೂರದಲ್ಲಿರುವ ಗೋಳಗಳನ್ನು ಆಕರ್ಷಿಸುತ್ತದೆ. ಆದರೆ ಸೂರ್ಯನ ಕಿರಣಗಳು ಆ ಗೋಳವನ್ನೇ ದೂಂಕ್ಕೆ ದೂಡಿ ಹಾಕಲು ಪ್ರಯತ್ನ ಮಾಡುತ್ತವೆ. ದೀಪದ ಚಿಮಣಿಯ ಮೇಲೆ ಅತಿ ಚಿಕ್ಕ ಕಾಗದದ ಚೂರನ್ನೊಯ್ದರೆ ಅದು ಮೇಲೆ ಹಾರಿಕೊಂಡು ಹೋಗುತ್ತದಲ್ಲವೆ? ಅತಿ ಸೂಕ್ಷ್ಮವಾದ ಕಣಗಳ ಮೇಲೆ ಗುರುತ್ವಾಕರ್ಷಣೆಗಿಂತಲೂ ಸೂರ್ಯ ಕಿರಣಗಳ ಒತ್ತಡವೇ ಹೆಚ್ಚಾಗಿದ್ದು, ಅವು ಸೂರ್ಯನಿಗೆ ದೂರದೂರವಾಗಿ ಹೋಗುವಂತಾಗುತ್ತದೆ. ಈ ಸೂರ್ಯ ಕಿರಣಗಳ ಒತ್ತಡವೇ ಸೂರ್ಯನ ಸುತ್ತಲೂ ತಿರುಗುವ ಅಲ್ಪ ಗ್ರಹ ಶಕಲಗಳ ಮೇಲೆ ಮತ್ತೊಂದು ವಿಧವಾಗಿ ವರ್ತಿಸುತ್ತದೆ. ಅದು ಅವುಗಳ ವೇಗವನ್ನು ತಗ್ಗಿಸುತ್ತದೆ. ವೇಗವು ತಗ್ಗಿದಂತೆ ಆ ಶಕಲಗಳು ಸೂರ್ಯನನ್ನು ಸಮೀಪಿಸುತ್ತವೆ. ತಕ್ಕಷ್ಟು ಸಮೀಪಕ್ಕೆ ಬರುತ್ತಲೇ ಅವು ಸೂರ್ಯನ ಉಷ್ಣೋಗ್ರತೆಗೊಳಗಾಗಿ ಮಸಿಯಾಗಿ ಹೋಗುತ್ತವೆ.

ಈಗ ರಷ್ಯಾ ಅಮೆರಿಕಾ ದೇಶಗಳು ಕೃತ್ರಿಮ ಉಪಗ್ರಹಗಳನ್ನು ನಿರ್ಮಿಸಿ ಆಕಾಶಕ್ಕೆ ಕಳುಹಿಸಲಾರಂಭಿಸಿವೆಯಷ್ಟೆ? ಸೆಕೆಂಡಿಗೆ ಐದಾರು ಮೈಲು ವೇಗದಷ್ಟೆ ಹೋಗಬಲ್ಲ ರಾಕೆಟ್ಟನ್ನು ಆಕಾಶಕ್ಕೆ ಕಳುಹಿಸಿದರೆ, ಅದು ತಿರುಗಿ ಭೂಮಿಗೆ ಬರುವಂತಿಲ್ಲ. ಆಕಾಶದೊಳಗೆ ಹೋಗಲಿಕ್ಕೂ ಇಲ್ಲ. ಭೂಮಿಯ ಸುತ್ತಲೂ ತಿರುಗುತ್ತಾ ಇರುತ್ತದೆ. ಆದರ ವೇಗವು ಹೆಚ್ಚಿದಂತೆ ಅದು ಭೂಮಿಯ ಸುತ್ತಲೂ ದೊಡ್ಡ ವಲಯದಲ್ಲಿ ತಿರುಗುತ್ತದೆ. ವೇಗ ತಗ್ಗಿದರೆ ವಲಯಚಿಕ್ಕದಾಗುತ್ತದೆ. ಈ ಸೂತ್ರದಂತೆಯೇ ಅಲ್ಪಗ್ರಹ ಶಕಲಗಳು ಸೂರ್ಯನ ಹತ್ತಿರ ಹೋಗಿ, ಉಷ್ಣಕ್ಕೆ ಕರಗಿ ಆವಿಯಾಗಿ ಸೂರ್ಯನ ಸುತ್ತಲೂ ಇರುವ ವಾತಾವರಣದೊಳಗೆ ಅಂತರ್ಹಿತವಾಗಿ ಬಿಡುತ್ತವೆ.

ಮೇಲೆ ಹೇಳಿದಂತೆ ಅಲ್ಪಗ್ರಹ ಶಕಲಗಳು ಅಂಗಾರಕನಾಚೆಗಿರುವ ಪ್ರಾಂತದಿಂದ ಸೂರ್ಯನ ಕಡೆಗೆ ಜರುಗುವ ಕಾಲವನ್ನೂ ಅಂದಾಜು ಮಾಡಲಾಯಿತು. ಒಂದು ಸೆಂಟಿಮೀಟರು ಪ್ರಮಾಣವುಳ್ಳ ಶಕಲವು ಹತ್ತುಕೋಟಿ ವರ್ಷ ಕಾಲದಲ್ಲಿ ಸೂರ್ಯನನ್ನು ಸಮೀಪಿಸುತ್ತದೆ. ಅದರ ಹತ್ತನೇ ಒಂದೆಂಶದ್ದು ಕೋಟಿ ವರ್ಷಗಳ್ಳು ಸೂರ್ಯನನ್ನು ಸೇರುತ್ತದೆ. ಇವುಗಳ ಮಸಿ ಸೂರ್ಯನ ಸುತ್ತಲೂ ತುಂಬಿದ್ದು ಸೂರ್ಯಕಾಂತಿಯನ್ನು ಎಲ್ಲಾ ಕಡೆಗೂ ಚೆದರಿಸುತ್ತದೆ. ಈ ಕಾಂತಿಯನ್ನು "ರಾಶಿ ಚಕ್ರಕಾಂತಿ" ಎನ್ನುತ್ತಾರೆ.

ಬಾಲದ ಚುಕ್ಕೆಗಳು (ಧೂಮಕೇತು)

ಗುರುಗ್ರಹಕ್ಕೆಂತಲೂ ದೂರದಲ್ಲಿರುವ ಅಲ್ಪಗ್ರಹಗಳಂತಹವು ಟೆಲಿಸ್ಕೋಪಿನಲ್ಲಿ ಕಾಣಿಸುವುದಿಲ್ಲ. ಇವುಗಳಲ್ಲಿ ಸೂರ್ಯನ ಸಮೀಪಕ್ಕೆ ಬರುವಂಥವು ಮಾತ್ರವೇ ನಮಗೆ ಕಾಣಿಸುತ್ತವೆ. ಇವೇ ಧೂಮಕೇತು ಅಥವಾ ಬಾಲದ ನಕ್ಷತ್ರಗಳು.

(೪ನೇ ಪುಟ ನೆಲೀಡಿರಿ)

ಸ್ಥಾಪನೆ: 1924

ದಿ ಕರ್ಣಾಟಕ ಬೇಂಕ್ ಲಿಮಿಟೆಡ್

(ಶೆಡ್ಯೂಲ್ಡ್ ಬೇಂಕ್)

ಪ್ರಧಾನ ಆಫೀಸು: ಮಂಗಳೂರು—3.

ಈ ಕೆಳಗಿನ ಬಡ್ಡಿದರಗಳಲ್ಲಿ ಶೇವಣಾತಿಗಳನ್ನು ಸ್ವೀಕರಿಸಲಾಗುವುದು

ಒಂದು ತಿಂಗಳಿಗೆ	.... ಸಾ|| ಸೇಕಡಾ	3-75	ನ.ಪೈಸೇ
ಮೂರು ತಿಂಗಳುಗಳಿಗೆ	.... ,	4-00	,,
ಆರು ತಿಂಗಳುಗಳಿಗೆ	.... ,,	4 25	,,
12 ತಿಂಗಳುಗಳಿಂದ 23 ತಿಂಗಳುಗಳ ವರೆಗೆ	.... ,,	4-50	,,
24 ತಿಂಗಳುಗಳಿಂದ 48 ತಿಂಗಳುಗಳ ವರೆಗೆ	.... ,,	4·75	,,

"ಹನಿ ಡಿಪೋಸಿಟ್ಸ್" ನಲ್ಲಿ

ನಿಮ್ಮ ದೈನಂದಿನ ಉಳಿತಾಯವನ್ನು ವಿನಿಯೋಗಿಸಿರಿ.

THE KARNATAKA BANK LIMITED.

ಸಮ್ಮೇಳನದ ಕಥೆ

೪೨ನೆಯ ಕನ್ನಡ ಸಾಹಿತ್ಯ ಸಮ್ಮೇಳನ

ಉಡುಪಿಯ ಸಮೀಪದ ಮಣಿಪಾಲದಲ್ಲಿ ದಿನಾಂಕ ೨೭, ೨೮ ಮತ್ತು ೨೯ ರಂದು ನಡೆದ ೪೨ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ವಿವಿಧ ಕಾರ್ಯಕಲಾಪಗಳ ವಿವರಗಳನ್ನು ಇಲ್ಲಿ ನೀವು ಸಮಗ್ರವಾಗಿ ಕಾಣುವಿರಿ.

(ನಮ್ಮ ಪ್ರೇಷಿತ ಪ್ರತಿನಿಧಿಗಳಿಂದ)

೪೨ನೆಯ ಕನ್ನಡ ಸಾಹಿತ್ಯ ಸಮ್ಮೇಳನವು ಮಣಿಪಾಲದಲ್ಲಿ ದಶಂಬರ ತಾ. ೨೭, ೨೮ ಮತ್ತು ೨೯ ರಂದು ವೈಭವೋಪೇತವಾಗಿ ಜರಗಿತು. ಇದುವರೆಗಿನ ಸಮ್ಮೇಳನಗಳಿಗಿಂತ ವಿಶಿಷ್ಟ ರೀತಿಯಲ್ಲಿ ಮತ್ತು ಪರಿಸ್ಥಿತಿಗಳಲ್ಲಿ ಸಮೋಪೇತಗೊಂಡಿದ್ದ ಈ ಸಮ್ಮೇಳನವು ಎಲ್ಲ ಕನ್ನಡಿಗರ ಮನಸ್ಸನ್ನೂ ತನ್ನತ್ತ ಸೆಳೆದಿತ್ತು. ಕರ್ನಾಟಕದ ನಾನಾ ಮೂಲೆಗಳಿಂದ ಪ್ರತಿನಿಧಿಗಳು ಬಂದಿದ್ದು ಇವರೆಲ್ಲರಿಗೂ ಮಿತಮೆಚ್ಚದಲ್ಲಿ ವಸತಿ ಮತ್ತು ಭೋಜನಗಳ ವ್ಯವಸ್ಥೆಯು ಇದ್ದು, ಇದು ಎಲ್ಲರ ಮೆಚ್ಚುಗೆಗೆ ಪಾತ್ರವಾಗಿತ್ತು. ಕಲಾ ವಸ್ತು ಪ್ರದರ್ಶನಗಳಲ್ಲದೆ ವೈಭವದ ಹಾಗೂ ಕರ್ನಾಟಕ ವಿಶ್ವವಿದ್ಯಾಲಯಗಳ ಪ್ರಸಾರಾಂಗಗಳು, ರಾಜ್ಯ ಸರಕಾರದ ಕಲೆ ಮತ್ತು ಸಂಸ್ಕೃತಿ ಶಾಖೆ ಹಾಗೂ ಮತ್ತೆ ಕೆಲವು ಪುಸ್ತಕ ವ್ಯಾಪಾರಿ ಸಂಸ್ಥೆಗಳು ಗ್ರಂಥ ಮತ್ತು ಪುಸ್ತಕ ಪ್ರದರ್ಶನಗಳಲ್ಲಿ ಭಾಗ ವಹಿಸಿದ್ದುವು. ಕನ್ನಡ ಟೈಪ್ ರೈಟರ್ ಕೂಡ ಪ್ರದರ್ಶನಾಲಯದಲ್ಲಿ ಪ್ರದರ್ಶಿಸಲ್ಪಟ್ಟಿತ್ತು. ಶ್ರೀ ಕಲಾಮಂಗಲಂ ಶ್ರೀ ಕಂಠಯ್ಯನವರು 'ನಿಂ ಭೂವಲಯ' ಗ್ರಂಥದ ಪ್ರದರ್ಶನವನ್ನೂ ಏರ್ಪಡಿಸಿದ್ದರು. ಪ್ರದರ್ಶನದಲ್ಲಿ ಸಹಯೋಗ ನೀಡಿದ ಸಂಘ ಸಂಸ್ಥೆಗಳು ಸಂಸ್ಥೆಯಲ್ಲಿ ಕಡೆಯೆಯಿದ್ದರೂ ಗಣದಲ್ಲಿ ಹಿರಿಯ ಸ್ಥಾನವನ್ನು ಪಡೆದಿದ್ದುವೆನ್ನಬಹುದು.

ತಾ. ೨೭ರಂದು ಉಡುಪಿ ನಗರದಿಂದ ಸಮ್ಮೇಳನದ ಸ್ಥಾನ ಮಣಿಪಾಲದ 'ಮುದ್ರಣ ಮಂಟಪ'ದ ಕಡೆಗೆ ನಿಯೋಜಿತ ಅಧ್ಯಕ್ಷ ಶ್ರೀ ಅ. ನ. ಕೃ. ರವರನ್ನು ಅಭೂತಪೂರ್ವ ವೈಭವಗಳಿಂದ ಮೇರವಣಿಗೆಯ ಮೂಲಕ ಕರೆತಂದ್ಯಲಾಯಿತು. ಶ್ರೀ ಅ. ನ. ಕೃ. ರವರೊಡನೆ ಸ್ವಾಗತ ಸಮಿತಿಯ ಅಧ್ಯಕ್ಷ ಡಾ. ಮಾಧವ ಪೈಯವರಲ್ಲದೆ ಸಾಹಿತ್ಯ ಪರಿಷತ್ಪ್ರಕ್ಷ ಶ್ರೀ ಶಿವಮೂರ್ತಿ ಶಾಸ್ತ್ರಿಗಳೂ ವಾಹನದಲ್ಲಿ ಮಂಡಿಸಿದ್ದು ಸಮ್ಮೇಳನವು ರಾಜಕೀಯ ದುರಂತವಾಗುವುದೆಂದು ಊಹಿಸಿದ್ದವರ ತಲೆಗೆ ತಣ್ಣೀರೆರೆದಂತಾಗಿತ್ತು. ಮೆರವಣಿಗೆ ಹೋಗುವ ದಾರಿಯುದ್ದಕ್ಕೂ ಇದುವರೆಗೆ ಸಮ್ಮೇಳನಗಳ ಅಧ್ಯಕ್ಷ ಸ್ಥಾನ ವಹಿಸಿದ್ದ ಮಹಾನ್ ಕನ್ನಡ ಸೇವಕರ ಹೆಸರಿನಲ್ಲಿ ಒಂದೊಂದು ಮಂಟಪವನ್ನು ಕಟ್ಟಲಾಗಿತ್ತು. ದಾರಿಯುದ್ದಕ್ಕೂ ಕನ್ನಡದ ಏಕತೆಯ, ಕಾಸಂಗೋಡು ಕನ್ನಡ ನಾಡು ಎಂದು ಮುಂತಾದ ಘೋಷಣೆಗಳು ಪ್ರತಿಧ್ವನಿಸುತಿದ್ದುವು. ಅಲ್ಲಲ್ಲಿ ವಿವಿಧ ಸಂಘಸಂಸ್ಥೆಗಳೂ ವ್ಯಕ್ತಿಗಳೂ ಶ್ರೀ ಅ.ನ. ಕೃ.ರವರಿಗೆ ಗೌರವಾರ್ಪಣೆ ಮಾಡುತಿದ್ದರು. ಮುಂದೆ ಶ್ರೀ ಶಾಸ್ತ್ರಿಗಳೇ ಹೇಳಿದಂತೆ ಸಮ್ಮೇಳನಾಧ್ಯಕ್ಷರ ಸ್ವಾಗತ ಕ್ರಮವು "ನಭೂತೋ" ಎಂಬಂತಾಗಿತ್ತು.

ಉಡುಪಿಯ ಮಹಾತ್ಮಾ ಗಾಂಧೀ ಸ್ಮಾರಕ ಕಲಾ ಶಾಲೆಯಲ್ಲಿ ನಗರ ಸಭೆಯ ಪರವಾಗಿ ಶ್ರೀ ಅ. ನ. ಕೃ. ಅವರಿಗೆ ಒಂದು ಸನ್ಮಾನ ಪತ್ರವನ್ನು ಸಭಾಪತಿ ಡಾ. ಕೆ. ಎಲ್. ಪಿತಾಳರು ಅರ್ಪಿಸಿದರು. ಶ್ರೀ ಅ. ನ. ಕೃ. ಅವರು ತನಗಿತ್ತ ಗೌರವಕ್ಕಾಗಿ ನಾಗರಿಕರಿಗೂ ಪುರಸಭೆಗೂ ಆಭಾರ ಮನ್ನಿಸಿದರು.

ಮೊದಲನೆಯ ದಿನ:

ಉಡುಪಿ ನಗರ ಸಭಾಪತಿ ಡಾ. ಕೆ. ಎಲ್. ಪಿತಾಳರಿಂದ ಪೂರ್ವಾಹ್ನ ರಾಷ್ಟ್ರಧ್ವಜವಂದನೆಯೊಂದಿಗೆ 'ಮುದ್ದಣ ಮಂಟಪ'ದಲ್ಲಿ ಸಮ್ಮೇಳನದ ಕಾರ್ಯಕಲಾಪಗಳಿಗೆ ನಾಂದಿಯಾಯಿತು. ನಿಶ್ಚಿತ ಸಮಯಕ್ಕೆ ಸರಿಯಾಗಿ ವಾದ್ಯಘೋಷಗಳೊಡನೆ ನಿಯೋಜಿತ ಅಧ್ಯಕ್ಷರು ಮೆರವಣಿಗೆಯಲ್ಲಿ ಪತ್ನೀಸಮೇತರಾಗಿ ಬಂದು ಆಸನವನ್ನಲಂಕರಿಸಿದರು. ಕಿಕ್ಕಿರಿದ ಜನಸ್ತೋಮ ಎದ್ದು ನಿಂತು ತನ್ನ ಶ್ರದ್ಧಾಗೌರವ ಭಾವವನ್ನು ಪ್ರದರ್ಶಿಸಿತು. ಉಡುಪಿಯ ಶ್ರೀ ಎಚ್.ಕೆ ರಾಮಚಂದ್ರ ಮೂರ್ತಿಯವರಿಂದ ಪ್ರಾರ್ಥನೆಯೊದನಂತರ ಸ್ವಾಗತ ಸಮಿತಿಯ ಉಪಾಧ್ಯಕ್ಷ ಶ್ರೀ ಟಿ ಎ. ಪೈ ಅವರು ಗಣನೀಯ ವ್ಯಕ್ತಿ ಹಾಗೂ ಪದಾಧಿಕಾರಿಗಳಿಂದ ಬಂದ ಸಂದೇಶಗಳನ್ನು ಓದಿ ಹೇಳಿದರು. ಅನಂತರ ಶಿವಳ್ಳಿ ಪಂಚಾಯತದ ಅಧ್ಯಕ್ಷ ಶ್ರೀ ಟಿ. ರವೀಶ ಪೈಯವರು ತಮ್ಮ ಪಂಚಾಯತದ ಪರವಾಗಿ, ನಿಯೋಜಿತ ಅಧ್ಯಕ್ಷ ಅ.ನ. ಕೃ. ಉದ್ಘಾಟಕ ಎಸ್. ವಿ. ಕೃ. ಮತ್ತು ಪರಿಷತ್ ಅಧ್ಯಕ್ಷ ಶಿವಮೂರ್ತಿ ಶಾಸ್ತ್ರಿಯವರಿಗೆ ಮಾನಪತ್ರವನ್ನರ್ಪಿಸಿದರು. ಸ್ವಾಗತ ಸಮಿತಿಯ ಅಧ್ಯಕ್ಷ ಡಾ। ಮಾಧವ ಪೈ ಅವರು ಅಧ್ಯಾತ್ಮ ತತ್ತ್ವವನ್ನು ಸಾರುವ ಕೇಂದ್ರವಾದ ಉಡುಪಿಯು ವಿದ್ಯಾ ಕೇಂದ್ರವಾಗಿಯೂ ಪರಿಣಮಿಸಿದೆಯೆಂಬುದನ್ನು ತಿಳಿಸಿ, ಜಿಲ್ಲೆಯ ಸಾಹಿತ್ಯ ಕೃಷಿಯನ್ನು ಸ್ಮರಿಸಿ, ನಾಡಿನ ಹಾಗೂ ನುಡಿಯ ಉತ್ಕರ್ಷ, ಆಕರ್ಷಣಗಳಿಗೆ ಕಾರಣವಾಗಿ ನಾಡಿನವರಲ್ಲಿ ನವಚೈತನ್ಯವನ್ನೂ ಜಾಗ್ರತಿಯನ್ನೂ ಈ ಸಮ್ಮೇಳನವು ತುಂಬಲೆಂದು ಹಾರೈಸಿ, ಎಲ್ಲರಿಗೂ ಹಾರ್ದಿಕ ಸ್ವಾಗತವನ್ನು ಕೋರಿದರು.

ತದನಂತರ ರಾಜ್ಯ ಸಭೆಯ ಉಪಾಧ್ಯಕ್ಷ ಶ್ರೀ ಎಸ್. ವಿ. ಕೃ. ಸಮ್ಮೇಳನವನ್ನು ಉದ್ಘಾಟಿಸಿದರು. ಸಾಹಿತ್ಯದ ಬಗ್ಗೆ ಸವಿನುಡಿಗಳನ್ನಾಡಿ ಜನಜೀವನದ ಸುತ್ತ ಬೆಳೆದುಬರುತ್ತಿರುವ ಕನ್ನಡ ಸಾಹಿತ್ಯವನ್ನು ಪ್ರಶಂಸಿಸಿದರು. ಕನ್ನಡಕ್ಕಾಗಿ ದುಡಿದು, ಮಡಿಯುತ್ತಿರುವವರನ್ನು ಸ್ಮರಿಸಿಕೊಂಡರು. ಕನ್ನಡ—ಕನ್ನಡ ನಿಘಂಟುವಿನ ಕಾರ್ಯ ತ್ವರಿತವಾಗಿ ನಾಗಿ ಬೇಗ ಮುಗಿಯಬೇಕು, ವಿಜ್ಞಾನ ಕೋಶ ರಚನೆಯ ಪ್ರಯತ್ನ ಬಹುಬೇಗ ಸಿದ್ಧಿಸಬೇಕು; ಮೈಸೂರು ಸರಕಾರವು ತನ್ನ ಪ್ರಾಚ್ಯವಿಮರ್ಶನ ಶಾಖೆಯನ್ನು ಪುನರುಜ್ಜೀವನಗೊಳಿಸಬೇಕು; ಕನ್ನಡ ನಾಡಿನಿಂದ ಹೊರಗಿರುವ ಅನೇಕ ಕನ್ನಡ ಸೋದರರು ನೆರೆಯ ಪ್ರಾಂತಗಳಲ್ಲಿದ್ದು, ಈ ಗಡಿಯ ಸಮಸ್ಯೆಗಳನ್ನು ಪರಸ್ಪರ ಸೌಹಾರ್ದದಿಂದ ಬಿಡಿಸಿಕೊಳ್ಳಬೇಕು ಎಂದು ಮುಂತಾಗಿ ಹೇಳಿದರು. ಶ್ರೀ ಶಿವಮೂರ್ತಿ ಶಾಸ್ತ್ರಿಗಳು ನಾಲ್ಕು ಉಪಚಾರದ ಮಾತುಗಳನ್ನಾಡಿದರು.

ಹಿಂದಿನ ಸಮ್ಮೇಳನದ ಅಧ್ಯಕ್ಷರಾದ ಶ್ರೀ ಡಿ. ಎಲ್. ನರಸಿಂಹಾಚಾರ್ಯರ ಅನುಪಸ್ಥಿತಿಯಲ್ಲಿ ಗೈರ್ಹಾಜರಿ ನಡೆದಿದ್ದ ಸಮ್ಮೇಳನದ ಅಧ್ಯಕ್ಷರಾಗಿದ್ದ ಶ್ರೀ ಮಾಸ್ತಿ ವೆಂಕಟೇಶ ಐಯ್ಯಂಗಾರರು ಅಧ್ಯಕ್ಷಸ್ಥಾನಕ್ಕೆ ಶ್ರೀ ಅನಕೃರವರನ್ನು ಸೂಚಿಸುವ ಅವರ ಪತ್ರವನ್ನು ಓದಿ ಹೇಳಿದರು. ಪರಿಷತ್ತಿನ ಕಾರ್ಯದರ್ಶಿ ಶ್ರೀ ಕೆ. ಗೋಪಾಲಕೃಷ್ಣ ರಾಯರು ಇದನ್ನು ಅನುಮೋದಿಸಿದರು. ಹಿರಿಯರಾದ ಕವೀಂದ್ರ ಬೇಂದ್ರೆ, ಕನ್ನಡದ ಆಸ್ತಿಮಾಸ್ತಿ ಮತ್ತು ಕರ್ನಾಟಕ ಮೈಸೂರು ವಿಶ್ವವಿದ್ಯಾಲಯಗಳ ಪರವಾಗಿ ಡಾ। ಆರ್. ಸಿ. ಹಿರೇಮಠರು ಅವರನ್ನು ಅಭಿವಂದಿಸಿದರು. ಅನಂತರ, ವಿವಿಧ ಸಂಘ ಸಂಸ್ಥೆಗಳ ಪರವಾಗಿ ಅಧ್ಯಕ್ಷ ಅನಕೃರವರಿಗೆ ಹಾರಗಳನ್ನು ಸಮರ್ಪಿಸಲಾಯಿತು.

ಇದೇ ಸಂದರ್ಭದಲ್ಲಿ ಕನ್ನಡ ಟೈಪ್ ರೈಟರ್ ನಿರ್ಮಾತ ಶ್ರೀ ಅನಂತ ಸುಬ್ಬರಾಯರಿಗೆ ಮಾನಪತ್ರ ಮತ್ತು ಹಮ್ಮಿಣಿಯನ್ನು ಸ್ವಾಗತ ಸಮಿತಿಯ ಅಧ್ಯಕ್ಷರು ಕೊಟ್ಟರು. ಶ್ರೀ ಸುಬ್ಬರಾಯರು ಅದನ್ನು ಕೃತಜ್ಞತಾ ಭಾವದಿಂದ ಸ್ವೀಕರಿಸಿದರು.

ಶ್ರೀ ಅನಕೃರವರು ಸುಮಾರು ಎರಡು ತಾಸುಗಳ ವರೆಗೆ ನಿಘಂಟು ಹಾಗೂ ಆಸ್ಪಲಿತ ವಾಣಿಯಿಂದ ಅಧ್ಯಕ್ಷ ಭಾಷಣ ಮಾಡಿದರು. (ಇದರ ಮುಖ್ಯಾಂಶಗಳನ್ನು ಮೊದಲನೆಯಸುಟದಲ್ಲಿ ಸಂಗ್ರಹಿಸಿಕೊಡಲಾಗಿದೆ.) ತಮ್ಮ ಭಾಷಣದಲ್ಲಿ ಅವರು ಕನ್ನಡ ಸಾಹಿತ್ಯ ಪರಿಷತ್ತಿನ ನಿಸ್ತೇಜತೆಯನ್ನೂ ಬಲಹೀನತೆಯನ್ನೂ ವಿವರಿಸಿ, ಅದು ಮಾಡಬೇಕಾದ ಕೆಲಸವನ್ನು ಮಾಡುವುದಕ್ಕೆ ತಪ್ಪಿದೆಯೆಂದು ಆರೋಪಿಸಿದರು. ಕನ್ನಡ ರಾಜ್ಯದ ಸರಕಾರ ಕನ್ನಡದ ಬಗ್ಗೆ ಅಲಕ್ಷ್ಯ ತೋರಿಸುತ್ತಿದೆಯೆಂದು ದೂರಿದರು. ಅಲ್ಲದೆ, ಕನ್ನಡ ಸಾಹಿತ್ಯದ ಆಗು ಹೋಗುಗಳು, ಅದರ ವಿವಿಧ ವೈಖರಿ ವೈಭವಗಳನ್ನು. ಚರ್ಚಿಸುವುದಕ್ಕೆಂತ ಕೆಜ್ಜಾಗಿ ಈ ನಾಡಿನ ಹಾಗೂ ಇದರ ಜನತೆಯ ವಿವಿಧ ಸಮಸ್ಯೆಗಳನ್ನು ಚರ್ಚಿಸಿದ್ದರು. ವಿಷಯ ನಿಯಾಮಕ ಸಮಿತಿಗೆ ಸದಸ್ಯರನ್ನು ಆಯ್ತೆಯಾದ ಮೇಲೆ ಪೂರ್ವಾಹ್ನದ ಕಾರ್ಯಕ್ರಮಗಳು ಕೊನೆಗೊಂಡುವು.

ಅಂದು ಅಪರಾಹ್ನ ಮಂಗಳೂರಿನ ಶ್ರೀ ಕೆ. ಸೂರ್ಯನಾರಾಯಣ ಅಡಿಗರು ಗ್ರಂಥ ಮತ್ತು ಕಲಾ ಪ್ರದರ್ಶನದ ಉದ್ಘಾಟನೆಯನ್ನು ಮಾಡಿದರು. ಶ್ರೀ ಅ. ನ. ಕೃ. ನಮ್ಮ ಪ್ರಾಚೀನ ಕಲೆಯು ನಶಿಸುತ್ತಿರುವುದಕ್ಕೆ ಖೇದವನ್ನು ವ್ಯಕ್ತಪಡಿಸಿ, ರಾಜ ಮಹಾ ರಾಜರು ನೀಡುತಿದ್ದಂತೆಯೇ ಇಂದು ಜನತಾ ಸರಕಾರ ಕಲಾವಿದರ ಹೀನಸ್ಥಿತಿಯನ್ನು ಹೋಗಲಾಡಿಸಲು ಆರ್ಥಿಕ ಸಹಾಯ ನೀಡುವುದು ಅವಶ್ಯವೆಂದರು. ಕನ್ನಡಿಗರು ತಮ್ಮ ಕಲೆ-ಸಂಸ್ಕೃತಿಗಳತ್ತ ಅಲಕ್ಷ್ಯ ತೋರಿಸುತ್ತಿರುವುದನ್ನೂ ಇನ್ನೂ ಮಂದುವರಿಸಿದರೆ, ಇನ್ನೊಂದೇ ತಲೆಮಾರಿನೊಳಗೆ ಅವು ನಾಮಾವಶೇಷವಾಗುವುವೆಂದೂ ಎಚ್ಚರಿಸಿದರು.

ಸಂಜೆ ನಾಡಯುಷಿ ಶ್ರೀ ದ.ರಾ. ಬೇಂದ್ರೆಯವರ ಹಿರಿತನದಲ್ಲಿ ಕವಿ ಸಮ್ಮೇಳನವು ನಡೆಯಿತು. ಪ್ರಿನ್ಸಿಪಾಲ ಡಿ. ಎಸ್. ಕರ್ಕಿ ಅವರು ಪ್ರಾಸ್ತಾವಿಕ ಭಾಷಣವನ್ನು ಮಾಡಿದರು. ಈ ಸಮ್ಮೇಳನದಲ್ಲಿ ಮಂಗಳೂರಿನ ನೇಡಿಯೂಪು ಕೃಷ್ಣ ಭಟ್ಟ, ಉಡುಪಿಯ ಎಸ್. ವೆಂಕಟರಾಜ, ಮೈಸೂರಿನ ಕೆ. ಎಸ್ ನರಸಿಂಹಸ್ವಾಮಿ, ಬಿ. ಎಸ್. ಶಿವರುದ್ರಪ್ಪ, ಪೂರ್ಣಚಂದ್ರ ತೇಜಸ್ವಿ, ಅಕಬರ ಅಲಿ, ಕನ್ನಿಗೋಳಿಯ ಅ. ಗೌ. ಕಿನ್ನಿಗೋಳಿ, ಪೆರಡಾಲದ ಕಯ್ಯಾರ ಕಿಞ್ಞಣ್ಣ ರೈ, ಬಂಕಿಕೊಡ್ಲದ ಎಸ್. ಆರ್. ಎಕ್ಕುಂಡಿ, ಕುಮಟೆಯ ಬಿ.ಎಚ್. ಶ್ರೀಧರ, ಧಾರವಾಡದ ಜೈನ್ನೀರ ಕಣವಿ, ಗುಂಡ್ಮಿಯ ಚಂದ್ರಶೇಖರ ಪಿತಾಳರು ಸ್ವರಚಿತ ಕವಿತೆಗಳನ್ನು ಓದಿದರು. ಶ್ರೀ ಎಕ್ಕುಂಡಿಯವರ ಕವಿತೆ ಹಾಗೂ ಹಾಡಿದ ಸೊಬಗು ಶ್ರೋತೃಕರನ್ನು ಮುಗ್ಧಗೊಳಿಸಿತ್ತು. ಕೊನೆಯಲ್ಲಿ ಶ್ರೀ ಬೇಂದ್ರೆಯವರೂ ತಮ್ಮ ನಾಲ್ಕು ಕವನಗಳನ್ನು ಹಾಡಿದರು.

ಆ ದಿನ ರಾತ್ರೆ ಶ್ರೀ ಉ. ಲಕ್ಷ್ಮೀನಾರಾಯಣ ಆಚಾರ್ಯರು ಬರೆದಿದ್ದ ಶ್ರೀ ರಾಮಾಶ್ವಮೇಧ ಮೊದಲಭಾಗ ಮತ್ತು ಶಶಿಪ್ರಭಾ ಪರಿಣಯವೆಂಬ ಯಕ್ಷಗಾನಗಳನ್ನು ದ. ಕ. ಜಿಲ್ಲೆಯ ಬಡಗತಿಟ್ಟಿನ ಯಕ್ಷಗಾನ ಬಯಲಾಟದ ನುರಿತ ಕಲಾವಿದರು ಶ್ರೀಗಳಾದ ಹಾರಾಡಿ ರಾಮ, ಉಡುಪಿ ಬಸವ, ವೀರಭದ್ರ, ನಾರಾಯಣ ಮೊದಲಾದವರು ಶ್ರೀಗಳಾದ ಗೋಪಾಲ ಕಮ್ತಿ, ಹಿರಿಯಡ್ಕ ಗೋಪಾಲ, ಎಚ್. ಕಿಟ್ಟು ಮುಂತಾದವರ

ಠೇವಣಾತಿಗಳು.....ಆಕರ್ಷಕ ಬಡ್ಡಿ ದರಗಳು

ಜೀವನದ ವೆಚ್ಚವು ದಿನೇ ದಿನೇ ಹೆಚ್ಚುತ್ತಲಿದ್ದರೂ, ಕಷ್ಟಪಟ್ಟು ಉಳಿಸಿದ ನಿಮ್ಮ ಹಣಕ್ಕೆ—ಅತ್ಯಗತ್ಯವಿರುವ ಸುರಕ್ಷಿತತೆ ಮತ್ತು ಭದ್ರತೆಗಳೊಂದಿಗೆ—ಅತ್ಯಾಕರ್ಷಕ ದರದಲ್ಲಿ ಬಡ್ಡಿ ಕೊಟ್ಟು, ನಿಮ್ಮನ್ನು ಸಂತುಷ್ಟರಾಗಿ ಮಾಡಲು

ಕೊರ್ಪೊರೇಶನ್ ಬೇಂಕು

ತಾನು ಠೇವಣಾತಿಗಳ ಮೇಲೆ ಕೊಡುವ ಬಡ್ಡಿ ದರಗಳನ್ನು ಇತ್ತೀಚೆಗೆ ಬದಲಾಯಿಸಿದೆ.

ವಿವರಗಳನ್ನು ನಿಮಗೆ ಸಮೀಪವಿರುವ ಇದರ ಶಾಖೆಯಿಂದ ಪಡೆಯಬಹುದು.

ದಿ. ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್

ಹಿಮ್ಮೇಳದೊಂದಿಗೆ ಅಭಿನಯಿಸಿದರು.

ನಡುವಣದಿನ:

ದಕ್ಷಿಣ ಕನ್ನಡ ಜಿಲ್ಲೆಯ ಬರೆಹಗಾರರ ಸಭೆಯೊಂದು ಪೂರ್ವಾಹ್ನದ ಕಾರ್ಯಕ್ರಮಗಳಿಗೆ ಮೊದಲು ನಡೆಯಿತು. ಜಿಲ್ಲೆಯ ಸುಮಾರು ೫೦—೬೦ ಬರೆಹಗಾರರು ತಂತಮ್ಮ ಪರಿಚಯವನ್ನು ಪರಸ್ಪರ ಮಾಡಿಕೊಂಡರು. ಕೆಲವರು ಈ 'ಪಂಚಯಕ್ರಮ'ದ ಬಗ್ಗೆ ಅಸಮಾಧಾನ ವ್ಯಕ್ತಮಾಡಿದರೆಂದೂ ತಿಳಿದು ಬರುತ್ತದೆ.

ಸಮ್ಮೇಳನಾಧ್ಯಕ್ಷ
ಶ್ರೀ ಆ. ನ. ಕೃಷ್ಣರಾಯರು.

* * *

ಅನಂತರ ಸುಪ್ರಸಿದ್ಧ ಸಾಹಿತ್ಯಾಚಾರ್ಯರಾದ ಕಾರಂತ ಶ್ರೀ ಶಿವರಾಮ ಕಾರಂತರ ಪುರಿತನದಲ್ಲಿ ಬಾಲಸಾಹಿತ್ಯ ಮತ್ತು ವಯಸ್ಕ ಸಾಹಿತ್ಯದ ಬಗ್ಗೆ ವಿಚಾರ ಗೋಷ್ಠಿಯು ಏರ್ಪಡಿಸಲ್ಪಟ್ಟಿತು. ಪ್ರಸ್ತಾವನೆ ಮಾಡಬೇಕಾಗಿದ್ದ ರಾಜ್ಯದ ಶಿಕ್ಷಣ ಮಂತ್ರಿ ಶ್ರೀ ಗಣಮುಖಿಯವರು ಅನುಪಸ್ಥಿತರಾಗಿದ್ದರು. ಅಧ್ಯಕ್ಷ ಕಾರಂತರು ಪೀಠಿಕೆಯ ಮಾತುಗಳನ್ನು ಆಡುತ್ತ ಎಳೆಯರಲ್ಲಿ ಓದಿನ ಅಭಿರುಚಿ ಹುಟ್ಟಿಸಲಾರದ ನಾವು, ಶಾಲೆಗಳಲ್ಲಿ ಮಕ್ಕಳ ಗಂಟಲಿಗೆ ಔಷಧದಂತೆ ಪಾಠಗಳನ್ನು ಸುರಿಯುತ್ತಿರುವ ನಾವು ಶಿಕ್ಷಣ ಕ್ಷೇತ್ರದಲ್ಲಿ ಅಸಫಲರಾಗಿದ್ದೇವೆ ಎಂದು ಹೇಳಿದರು. ಎಳೆಯರು ವಯಸ್ಕರಲ್ಲ, ವಯಸ್ಕರು ಎಳೆಯರೂ ಅಲ್ಲ. ಅವರದು ಕೇವಲ ವಯಸ್ಸಿನ ಮೆಟ್ಟಲುಗಳಲ್ಲ; ಮನಸ್ಸಿನ ಮೆಟ್ಟಲುಗಳು. ಅವರ ವಿರಕ್ತಿ ನಿರಭಿರುಚಿಗಳನ್ನು ಗೆಲ್ಲುವ ದಾರಿ ಯಾವುದೆಂದು ನಾವು ಹುಡುಕಬೇಕೆಂದರು. ಅನಂತರ, ಶ್ರೀ ಸಡುಕೋಣೆ ರಮಾನಂದರು ೧೨ ವರ್ಷದ ವರೆಗಿನ ಮಕ್ಕಳಿಗಾಗಿರುವ ಶಿಶುಸಾಹಿತ್ಯದ ಬಗ್ಗೆ, ಶ್ರೀ ಎಸ್. ಮುಕುಂದ ರಾಯರು ೧೨ ವರ್ಷ ವಯಸ್ಸಿನ ಮೇಲಿನವರ ಬಾಲ ಸಾಹಿತ್ಯದ ಬಗ್ಗೆ ಹಾಗೂ ಶ್ರೀ ನೆಗೂರ ರಂಗನಾಥರು ವಯಸ್ಕರ ಶಿಕ್ಷಣದ ಸಾಹಿತ್ಯದ ಬಗ್ಗೆ ತಯಾರಿಸಿತಂದ ಬೋಧಪ್ರದವಾದ ಪ್ರಬಂಧಗಳನ್ನು ಓದಿ ಹೇಳಿದರು. ಈ ಮೂರೂ ಸಾಹಿತ್ಯ ಪ್ರಕಾರಗಳಲ್ಲಿ ನಡೆದ ಕೃಷಿ ಏನೇನೂ ತೃಪ್ತಿಕರವಾಗಿಲ್ಲವೆಂದು ಮೂವರೂ ಅಭಿಪ್ರಾಯಿಸಿದ್ದರು. ಅಧ್ಯಕ್ಷ ಸ್ಥಾನದಿಂದ ಶ್ರೀ ಕಾರಂತರು ಮಾತನಾಡುತ್ತ, ಬಾಲಕರಿಗೆ ಹಾಗೂ ವಯಸ್ಕರಿಗೆ ಅವರ ಮನೋವೃತ್ತಿಯನ್ನು ಸರಿಯಾಗಿ ಅಭ್ಯಸಿಸಿದ ತಜ್ಞರೇ ಸಪ್ತಕಗಳನ್ನು ರಚಿಸಬೇಕು. ಪಠ್ಯಪುಸ್ತಕ ರಚನೆಯಲ್ಲಿ ಅಂತಹರಿಗೇನೇ ಪ್ರಾತಿನಿಧ್ಯವಿರಬೇಕು ಎಂದು ಮುಂತಾಗಿ ಹೇಳಿ, ತಮ್ಮ ಪೀಠಿಕೆಯ ಮಾತುಗಳನ್ನು ಸವಿವರವಾಗಿ ಸ್ವಾನುಭವೋಕ್ತಿಗಳಿಂದ ವಿವರಿಸಿದರು. ಈ ನಡುವೆ ಶ್ರೀ ಕುಲಕರ್ಣಿ ಪಂಡಿತರು ಮನೆಗಳಲ್ಲಿ ಅಲಂಕಾರಕ್ಕಾಗಿ ತೂಗಹಾಕುವ ಚಿತ್ರಗಳ ಬಗ್ಗೆ ಅತೀವ ಜಾಗ್ರತೆಯಿರಬೇಕೆಂದೂ ಪ್ರಣಯ ಚಿತ್ರಗಳು, ಸೀನೇಮಾ ತಾರೆಯರ ಪಟಗಳು ಎಳೆಯ ಮಕ್ಕಳ ಮನಸ್ಸನ್ನು ಕುಮಾರ್ಗಕ್ಕೆ ಹೆಚ್ಚುವುವೆಂದೂ ಅಭಿಪ್ರಾಯಪಟ್ಟರು. ಅಂದು ಅಪರಾಹ್ನ ಗದ್ಯ ಸಾಹಿತ್ಯ ವಿಮರ್ಶಾ ಗೋಷ್ಠಿಯು ಜರಗಿತು. ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಪ್ರಾಧ್ಯಾಪಕ ಡಾ| ಆರ್. ಸಿ. ಹಿರೇಮಠರು ಅಧ್ಯಕ್ಷಸ್ಥಾನವನ್ನಲಂಕರಿಸಿದ್ದರು. ಶ್ರೀ ಕರುಳಿ ಭೀಮರಾಯರು ಪ್ರಾಸ್ತಾವಿಕ ಭಾಷಣ ಮಾಡಿ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನಡೆದ ಕನ್ನಡ ಸಾಹಿತ್ಯದ ಬೆಳೆ ಹಾಗೂ ಪತ್ರಿಕೆಗಳ ಪಾತ್ರವನ್ನು ಹೃದಯಂಗಮವಾಗಿ ವಿವರಿಸಿದರು. ಶ್ರೀ ಜಿ. ವರದರಾಜ ರಾಯರು ಗದ್ಯ ಸಾಹಿತ್ಯಕ್ಕೆ ಪ್ರಾಚೀನ ಪ್ರೇರಣೆ, ಇಂದಿನ ಪ್ರೇರಣೆ, ಅವರ ಪ್ರಾಮುಖ್ಯ ಘಟ್ಟಗಳು, ಅದು ಶಿಥಿಲ ಬಂಧವೆ, ವಜ್ರ ಬಂಧವೆ, ಅ. ನ. ಕೃ., ಕಾರಂತ ಮೊದಲಾದವರ ಕೃತಿಗಳಲ್ಲಿನ ವೈವಿಧ್ಯಗಳನ್ನು ವಿವೇಚಿಸುತ್ತ, ಗದ್ಯ ಸಾಹಿತ್ಯವು ಸರ್ವಾಂಗಸುಂದರವಾಗಬೇಕು; ಸರ್ವಕಾರ್ಯ ಸಾಧಕವಾದುದು ಗದ್ಯ. ಇದರ ಶೈಲಿ ನೈಜವಾಗಿರಬೇಕು—ಎಂದು ಹೇಳಿದರು ಶ್ರೀ ಬಿ.ಎಚ್. ಶ್ರೀಧರ ಅವರು ಇದುವರೆಗಿನ ಗದ್ಯ ಸಾಹಿತ್ಯದ ನೆಲೆ, ಬೆಲೆ ಮತ್ತು ತೂಕಗಳು, ಸಾಹಿತ್ಯಕಾರರು ಇದುವರೆಗೆ ಮುಟ್ಟಿದ ವಿಷಯಗಳಿಗಿಂತ ಮುಟ್ಟಿದುದೇ ಹೆಚ್ಚಿರಲು ಕಾರಣ, ಕವಿಯ ದೃಷ್ಟಿ ಹೇಗೆ ವಿಸ್ತಾರವಾಗುತ್ತದೆ. ಒಳ್ಳೆಯ ಪ್ರಬಂಧಗಳ ಲಕ್ಷಣ, ಪರಾನುಕರಣೆಯಿಂದ ಅಸ್ಪಷ್ಟತೆ, ಅನಿಶ್ಚಿತತೆಗಳು ಮತ್ತು ವಿಡಂಬನಾತ್ಮಕ ಹಾಗೂ ವಿನೋದಾತ್ಮಕ ಸಾಹಿತ್ಯಗಳ ಕುರಿತು ಅಭ್ಯಾಸಪೂರ್ಣ ಪ್ರಬಂಧವನ್ನು ಓದಿದರು. ಶ್ರೀ ಹಾ. ಮಾ. ನಾಯಕರ ಅನುಪಸ್ಥಿತಿಯಲ್ಲಿ ಶ್ರೀ ಎಚ್. ಕೆ. ರಾಮಚಂದ್ರ ಮೂರ್ತಿಯವರು ಅವರು ಬರೆದು ಕಳಿಸಿದ್ದ ವಿಜ್ಞಾನ ಹಾಗೂ ಶಾಸ್ತ್ರೀಯ ಸಾಹಿತ್ಯದ ಶೈಲಿಯ ಬೆಳವಣಿಗೆ, ವಿಜ್ಞಾನ ಸಾಹಿತ್ಯವನ್ನು ರಚಿಸಲು ಕನ್ನಡದಲ್ಲಿ ಕಸುವನ್ನು ಹೇಗೆ ತರಬಹುದು ಎಂದು ಮುಂತಾಗಿ ವಿವೇಚಿಸಿದಲೇಖನವನ್ನು ವಾಚಿಸಿದರೂ ಅಧ್ಯಕ್ಷರು ಗದ್ಯ ಸಾಹಿತ್ಯದ ಎಲ್ಲ ಪ್ರಕಾರಗಳ ಮೇಲೆಯೂ ವಿಮರ್ಶೆಯ ಕಿರಣವನ್ನು ಚೆಲ್ಲಿ. ನಮ್ಮ ವಿಚಾರ ಶಕ್ತಿ ಬೆಳೆದರೆ ಭಾಷೆ ಬೆಳೆಯುತ್ತದೆ; ಭಾಷೆಯಲ್ಲಿ ಪಾಂಡಿತಂತಿಕೆ ಸಾಧುವಲ್ಲ; ಸಾಧ್ಯವಲ್ಲ ಎಂದು ನಿರೂಪಿಸಿದರು.

ಆ ಮೇಲೆ, ಶ್ರೀ ಕೆ. ಎಸ್. ಧರಣೇಂದ್ರಯ್ಯನವರು "ಜೈನ ಕವಿ-ಕಾವ್ಯಗಳು" ಎಂಬ ಕುರಿತಾಗಿ ಉಪನ್ಯಾಸವಿತ್ತರು. ತೀರ್ಥಹಳ್ಳಿಯ ಶ್ರೀ ಕೆ. ಆರ್. ಲಿಂಗಪ್ಪನವರು ವಿವಿಧ ಜನಪದ ಗೀತೆಯನ್ನು ಸುಶ್ರಾವ್ಯವಾಗಿ ಹಾಡಿ, ಜನಸಂದಣಿಯ ಹೃದಯವನ್ನು ಸೂರೆಗೊಂಡರು. ಶ್ರೀಮತಿ ಶಕುಂತಲಾಬಾಯಿ ಪಾಂಡುರಂಗರಾಯರು ಹರಿಶ್ಚಂದ್ರ ಕಾವ್ಯದ ರಾಜ್ಯ ಸಮರ್ಪಣ ಭಾಗವನ್ನು ವೀಣೆವಾದಿಸಿ ವಾಚಿಸಿದರು. ಅಂದು ರಾತ್ರೆ ಮಂಗಳೂರಿನ ಭಾರತ ಕಲಾ ನಿಕೇತನದವರು 'ಸನ್ಯಾಸಿಯ ಗೊಂಗಡಿ' ಎಂಬ ಪ್ರಹಸನವನ್ನು ಅಭಿನಯಿಸಿದರು. ಶ್ರೀ ಬಾಲಗೋಪಾಲರ ಅಭಿನಯವು ಮನೋಜ್ಞವಿತ್ತು.

ಕೊನೆಯದಿನ:

ಮೂರನೆಯ ದಿನ ಕುಂದಾಪುರದ ಅಸಿಸ್ಟೆಂಟ್ ಕಮಿಶನರ್ ಶ್ರೀ ಕೆ. ನರಸಿಂಹ ಮೂರ್ತಿಯವರ ನೇತೃತ್ವದಲ್ಲಿ ಕನ್ನಡ ಕಾದಂಬರಿ ಗೋಷ್ಠಿಯು ಜರಗಿತು. ಸಮ್ಮೇಲನಾಧ್ಯಕ್ಷ ಶ್ರೀ ಅನಕೃರವರು ಪ್ರಾಸ್ತಾವಿಕವಾಗಿ ಮಾತಾಡುತ್ತ, ಕನ್ನಡದ ಹಳೆಯ ಪದ್ಯಕಾವ್ಯಗಳಲ್ಲಿಯೂ ಕಾದಂಬರಿಯ ಲಕ್ಷಣಗಳಿವೆಯೆಂದು ಹೇಳಿ, ಅದು ಬೆಳೆದು ಬಂದ ಬಗೆಯನ್ನು ವಿವರಿಸಿದರು. ಕಥೆಗಳು ದಂತದ ಕೆಲಸವಾದರೆ ಕಾದಂಬರಿ ರಚನೆ ಮರದ ಕೆಲಸವೆಂದು ತಿಳಿಸಿ, ಇವುಗಳ ಗುಣಾವಗುಣಗಳನ್ನು ಪರಿಶೀಲಿಸಬೇಕಾದವ ಓದುಗನೆಂದರು. ಇದರ ಮೇಲೆ, ಮಡಿಕೇರಿಯ ಶ್ರೀ ಎಲ್. ಎಸ್. ಶೇಷಗಿರಿ ರಾಯರು ಕನ್ನಡ ಕಾದಂಬರಿಕಾರರು ಚಿತ್ರಿಸಿರುವ ಸಮಸ್ಯೆಗಳು, ಚಿತ್ರಣದ ನೆಲೆ, ಬೆಲೆ, ತೂಕ, ಇವರು ಮುಟ್ಟಿದ ಜೀವನ, ಅನುಭವ, ಬದುಕಿನ ಹಂತಗಳು, ಇವರ ದರ್ಶನವ್ಯಾಪ್ತಿ, ಕಾದಂಬರಿ ರಚನೆಗೆ ಮೂಲ ಸಾಮಗ್ರಿ ಎನಿಸುವ ಅನುಭವ, ಸಾಹಿತ್ಯದ ನೈತಿಕ



ಸ್ವಾಗತ ಸಮಿತಿಯ ಅಧ್ಯಕ್ಷ
ಡಾ| ಟಿ. ಮಾಧವ ಸೈ.

* * *

ಮೌಲ್ಯ, ನೀತಿಯ ಸಂಬಂಧವಿಲ್ಲದ ಮೌಲ್ಯಗಳು, ಕಾದಂಬರಿಗಳಲ್ಲಿ ಬರುವ ವ್ಯಕ್ತಿ—ಚಿತ್ರನಿರೂಪಣೆಯಲ್ಲಿ ಮನೋವಿಶ್ಲೇಷಣೆಯ ತಂತ್ರದ ಯಶಸ್ಸು—ಇವನ್ನು ಕುರಿತ ಸುವಿಸ್ತೃತ ಪ್ರಬಂಧವನ್ನು ಓದಿದರು. ಕಾದಂಬರಿಕಾರನ ದೃಷ್ಟಿಕೋಣ, ವ್ಯಕ್ತಿನಿಷ್ಠ ಹಾಗೂ ವಸ್ತುನಿಷ್ಠ ದೃಷ್ಟಿಕೋಣಗಳಿಂದ ಎದ್ದಿರುವ ಸಮಸ್ಯೆ, ವ್ಯಕ್ತಿ ಜೀವನವನ್ನು ಕೇವಲ ಭಾವನಾತ್ಮಕವಾಗಿ ಅವಲೋಕಿಸುವುದರಿಂದ ಕಾದಂಬರಿಗಳಲ್ಲಿ ಉಂಟಾದ ವಿಕಾರಗಳ ಕುರಿತು ಉಡುಪಿಯ ಶ್ರೀ ವಿ. ಎಂ. ಇನಾಮದಾರರು ಬರೆದ ಪ್ರಬಂಧವನ್ನು ಅವರ ಗೈರುಹಾಜರಿಯಲ್ಲಿ ಶ್ರೀ ಸೇವನಮಿರಾಜ ಮಲ್ಲರು ಓದಿದರು. ಕಾದಂಬರಿ ಸಾಹಿತ್ಯದಲ್ಲಿ ನಿಸರ್ಗ ಚಿತ್ರಣ, ಸ್ಥಾನೀಯ ಹಿನ್ನೆಲೆಯ ಚಿತ್ರಣ, ಪತಿಹಾಸಿಕ ಕಾದಂಬರಿಗಳಲ್ಲಿರಬೇಕಾದ ಲಕ್ಷಣ, ಜೀವಂತ ವ್ಯಕ್ತಿಗಳ ಜೀವನ ನಿರೂಪಿಸುವ ಕಾದಂಬರಿಗಳ ಅಭಾವ—ಭಾರತೀಯ ಮತ್ತು ಪಾಶ್ಚಾತ್ಯ ಕಾದಂಬರಿಗಳ ತುಲನೆಯ ಕುರಿತು ತಯಾರಿಸಿದ ಪ್ರಬಂಧವನ್ನು ಗೋಕಾಕದ ಶ್ರೀ ಕೃಷ್ಣಮೂರ್ತಿ ಪುರಾಣಿಕರು ಓದಿದರು. ಅಧ್ಯಕ್ಷರು ಮಾತನಾಡಿ, ಅನುಕರಣೆಗಿಂತ ಮೌಲಿಕ ಕಾದಂಬರಿಗಳು ಸತ್ವಯುತವಾಗುವುವೆಂದೂ ಕನ್ನಡ ಕಾದಂಬರಿಕಾರರು ಈ ಬಗ್ಗೆ ಪ್ರಯತ್ನ ವಹಿಸಿರುವರೆಂದೂ ಇನ್ನೂ ಅಧಿಕ ಕೃಷಿಯಾಗಬೇಕೆಂದೂ ಅಂದರು. ಶ್ರೀಮತಿ ಎಂ. ಕೆ. ಜಯಲಕ್ಷ್ಮಿಯವರು ಸ್ತ್ರೀಯರ ದೃಷ್ಟಿಕೋಣದ ಬಗ್ಗೆ ಸ್ವಲ್ಪ ಕಾಲ ಮಾತಾಡಿದರು.

ಸಮ್ಮೇಳನದ ಉದ್ಘಾಟಕ
ಶ್ರೀ ಎಸ್. ವಿ. ಕೃಷ್ಣಮೂರ್ತಿ ರಾಯರು.

* * *

ಅಪರಾಹ್ನ ಶ್ರೀಗಳಾದ ಎಚ್. ಕೆ. ರಾಮಚಂದ್ರ ಮೂರ್ತಿ, ಜಿ. ಶ್ರೀನಿವಾಸ ರಾವ್, ದೇವಂಗಿ ಚಂದ್ರಶೇಖರ, ಮಹಾಬಲೇಶ್ವರ ಭಟ್ಟ, ನಾರಾಯಣ ಶೆಟ್ಟಿ ಕಂದಾವರರ ಕಾವ್ಯ ವಾಚನವು ಆಯಿತು. ಆ ಮೇಲೆ ಸಮ್ಮೇಳನದ ಬಹಿರಂಗ ಅಧಿವೇಶನವು ಸೇರಿತು. ರಾಜ್ಯದ ಹೆಸರನ್ನು ಕರ್ನಾಟಕವೆಂದಿರಿಸಬೇಕು, ಪರ ಪ್ರಾಂತಗಳಲ್ಲಿ ಸೇರಿ ಹೋದ ಕನ್ನಡದ ಭಾಗಗಳು ಶೀಘ್ರದಲ್ಲಿ ಕರ್ನಾಟಕಕ್ಕೆ ಸೇರಬೇಕು, ಸಾಹಿತ್ಯ ಪರಿಷತ್ತಿನ ಘಟನೆಯ ತಿದ್ದುಪಡಿಗೆ ಸಂಬಂಧಪಟ್ಟ ವರದಿಯ ಮೇಲೆ ಜೂನ್ ೬೧ರ ಒಳಗೆ ಅಂತಿಮ ತೀರ್ಮಾನಕ್ಕೆ ಬರಬೇಕು ಮೊದಲಾದ ೧೫ ಗೊತ್ತುವಳಿಗಳು ಸ್ವೀಕೃತವಾದುವು. ಘಟನಾ ಸಂಬಂಧದಲ್ಲಿ ಮೊದಲು ತುಸು ಕಾವೇರಿದ ಪ್ರಸಂಗವು ತಲೆದೋರಿದಂತೆ ಕಂಡು ಬಂದಿತ್ತು.

ಸಾಂಸ್ಕೃತಿಕ ಕಾರ್ಯಕ್ರಮದ ಅಂಗವಾಗಿ, ಪರಿಷತ್ತಿನ ಕಡೆಯಿಂದ ಅಧ್ಯಕ್ಷ

(ಎನೇ ಪುಟ ನೋಡಿರಿ)

ಉಡುಪಿ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟ್‌ನಲ್ಲಿ

O. P. No 50/1960

ಜಲಜ ಶೆಡ್ತಿ —ಅರ್ಜದಾರಳು.

ಮೇಲ್ಕಂಡ ಅರ್ಜಿಯಲ್ಲಿ ಹೇಳಿದ ಅರ್ಜದಾರಳ ಗಂಡ ಮೃತ ಕೆ. ಕೊರಗಯ್ಯ ಶೆಟ್ಟಿ—ದಿ ಕೆಥೊಲಿಕ್ ಬೆಂಕ್ ಲಿ. ಉಡ್ಪಿ ಬೆಂಕಿನಲ್ಲಿ S. B. account no 33/35 ನೆಗೆ ಸದ್ರಿ ಕೊರಗಯ್ಯ ಶೆಟ್ಟಿ ಮತ್ತು ಅರ್ಜದಾರಳ ಹೆಸರಿನಲ್ಲಿ ಡಿಪೊಜಿಟು ಯಿಟ್ಟ ರೂಪಾಯಿ 1030/ನ್ನು ವಸೂಲು ಪಡೆಯುವರೆಗೆ ಸದ್ರಿ ಮೃತರು ತಾ 9—9—1957ರಲ್ಲಿ ರಿಜಿಸ್ಟ್ರಿಸಿದಂ ಬರೆದಿಟ್ಟ ಮೇಲು ನಾಮೆ ಮೇರೆಗೆ ತಾನು ಹಕ್ಕುದಾರಳಾಗಿ ಹಾಗೆ ವಸೂಲು ಪಡೆಯುವರೇ ತನಗೆ ಸಕ್ಸೆಶನ್ ಸರ್ಟಿಫಿಕೇಟು ಕೊಡುವಂತೆ ಕೊಟ್ಟ ಸದ್ರಿ ಅರ್ಜಿಯು ತಾ ೧೭ಕು 23—1—61ಕ್ಕೆ ಯಿಟ್ಟರುವದ್ರಿಂದ ಆಕ್ಷೇಪ ಹೇಳಿಕ್ಕವರು ಆ ದಿನ ಸದ್ರಿ ಕೋರ್ಟುಮುಂದೆ ಹಾಜ್ರಾಗಿ ಜ್ಯಾಹೀರು ಮಾಡಿಕೊಳ್ಳತಕ್ಕದ್ದು.

P. Padmanabha Rao.
Vakil for Petitioner.

Udipi Dated 2—1—1961

ಮಾನವನಿಗಾಗಿ ನಿಯಮ ನಿಬಂಧನೆಗಳು ನಿರ್ಮಾಣಗೊಂಡಿವೆ; ನಿಯಮ ನಿಬಂಧನೆಗಳಿಗಾಗಿ ಮಾನವ ನಿರ್ಮಾಣವಾಗಿಲ್ಲ; ಆತ ಸ್ವಾಮಿ, ಅವು ಸೇವಕರು.

ನವಯುಗ

ವರುಷ ೪	ಉಡುಪಿ ೫-೧-೩೧	ವಾರ ೧೮

ಶಿಕ್ಷಣದ ಎರಡು ಪ್ರಶ್ನೆಗಳು

ಇಂದು ಭಾರತದ ಮುಂದಿರುವ ಹಲವಾರು ಆಂತರಿಕ ಸಮಸ್ಯೆಗಳಲ್ಲಿ ಶಿಕ್ಷಣವೂ ಒಂದಾಗಿದೆ. ಆನುವಂಶಿಕ ಸಂಸ್ಕಾರಗಳಿಂದ ದೂರ ಸರಿದು, ನವೀನ ಸಂಸ್ಕಾರಗಳನ್ನು ಸಮುಚಿತವಾಗಿ ಪಡೆಯುತ್ತಿರುವ ಭಾರತೀಯರಿಗೆ ಶಿಕ್ಷಣದ ಮೂಲಕವೇ ಇಂದಿನ ಕಾಲಮಾನಯೋಗ್ಯವಾದ ಸಂಸ್ಕಾರ ಪ್ರದಾನ ಮಾಡುವುದು ಅಗತ್ಯವಾಗಿದೆ. ಕೇವಲ ಜೀವನ ವ್ಯವಹಾರವಷ್ಟೇ ಇಂದಿನ ಶಿಕ್ಷಣದ ಪ್ರಯೋಜನವಲ್ಲವೆಂಬುದನ್ನು ನಾವು ಮರೆಯುವಂತಿಲ್ಲ. ಅದುದರಿಂದ ನಮ್ಮ ಶೈಕ್ಷಣಿಕ ಪ್ರಗತಿಯು ಯಶಸ್ವಿಯಾಯಿತೆಂದರೆ, ಭಾರತದ ಅಭಿವೃದ್ಧಿಯ ಪಥವು ಸುಗಮವಾದಂತಾಗುವುದೆನ್ನಬಹುದು. ಈ ದಿಸೆಯಲ್ಲಿ ನಾವು ಇಂದು ನೀಡುತ್ತಿರುವ ಶಿಕ್ಷಣವು ಪ್ರಭಾವಶಾಲಿಯೂ ಪರಿಣಾಮಕಾರಿಯೂ ಉಪಯುಕ್ತವೂ ಆಗಿರಬೇಕಾದುದು ಅತ್ಯವಶ್ಯ; ಆದರೆ, ಈ ಶಿಕ್ಷಣ ಕ್ಷೇತ್ರ ನಮ್ಮ ಆದರ್ಶಗಳಿಗೆ ಸರಿಯಾಗಿ ಹೊಂದಿಕೊಂಡು ಮುಂದೆ ಬಂದಿದೆಯೇ ಎಂಬುದನ್ನು ಅವಲೋಕಿಸಿದರೆ, ಪಂಡಿತರ್ಕ್ಕೂ ನಾವು ತಲೆ ತಗ್ಗಿಸಬೇಕಾಗುತ್ತದೆ.

ಅಖಿಲಭಾರತ ಶಿಕ್ಷಣ ಪರಿಷತ್ತಿನಲ್ಲಿ ಅಧ್ಯಕ್ಷ ಭಾಷಣ ಮಾಡುತ್ತ ಮದ್ರಾಸದ ಶಿಕ್ಷಣ ಪಟು ಶ್ರೀ ಸಿ. ಸುಬ್ರಹ್ಮಣ್ಯಂ ರವರು ವ್ಯಕ್ತಗೊಳಿಸಿದ ಅಭಿಪ್ರಾಯ ಸರ್ವಮಾನ್ಯವಾಗಿದೆ. ಪ್ರಾಥಮಿಕ ಹಂತಗಳಿಂದ ವಿಶ್ವವಿದ್ಯಾಲಯ ಮಟ್ಟದವರೆಗೂ ಶಿಕ್ಷಣ ಮಾಧ್ಯಮವು ಮಾತೃಭಾಷೆಯಾಗಬೇಕೆಂಬುದನ್ನು ತಾತ್ತ್ವಿಕವಾಗಿ ಎಲ್ಲರೂ ಒಪ್ಪಿಕೊಂಡುತೆಯೇ ಆಗಿದೆ. ಉತ್ತರ ಭಾರತದ ಕೆಲವು ವಿಶ್ವವಿದ್ಯಾಲಯಗಳಲ್ಲಿ ಹಿಂದಿ ಮಾಧ್ಯಮವು ಕೆಲವಾರು ವರ್ಷಗಳಿಂದ ನಡೆದುಬರುತ್ತಿರುವುದನ್ನೂ ದಕ್ಷಿಣದಲ್ಲೂ ಪ್ರಾಯೋಗಿಕ ಹಂತಗಳಲ್ಲಿ ಒಂದೆರಡೆಡೆಮಾತೃಭಾಷಾ ಮಾಧ್ಯಮವನ್ನು ತೊಡಗಿಸಿರುವುದನ್ನೂ ನಾವು ಮರೆಯಬಾರದು. ಮಾಧ್ಯಮಿಕ ಶಿಕ್ಷಣವನ್ನು ಮಾತೃಭಾಷೆಯಲ್ಲೇ ಪಡೆದ ವಿದ್ಯಾರ್ಥಿಗಳು ಪ್ರೌಢ ಶಿಕ್ಷಣವನ್ನು ಇಂಗ್ಲಿಷ್ ಮಾಧ್ಯಮದಲ್ಲಿ ಜೀರ್ಣಿಸಿಕೊಳ್ಳಲು ಅಶಕ್ತರಾಗಿರುವುದೇ ಶಿಕ್ಷಣದ ಮಟ್ಟವು ಕುಸಿಯುತ್ತಿರಲು ಇರುವ ಪ್ರಧಾನ ಕಾರಣಗಳಲ್ಲಿ ಒಂದೆಂಬುದು ಚಿರಸತ್ಯ. ಶಿಕ್ಷಣ ಮಾಧ್ಯಮವು ಮಾತೃಭಾಷೆಯಾಯಿತೆಂದರೆ, ಆಗ, ವಿದ್ಯಾರ್ಥಿಗಳು ಕಬ್ಬಿಣದ ಕಡಲೆಗಳನ್ನು ಜಗಿಯಬೇಕಾದ ಪ್ರಮೇಯವೊದಗದು. ಆದರೆ, ಇಲ್ಲಿ ಎಡತಾಕುವ ಸಮಸ್ಯೆಯೊಂದೇ. ಪ್ರಾದೇಶಿಕ ಭಾಷೆಗಳಲ್ಲಿ ಆಧುನಿಕ ವಿಷಯಗಳನ್ನು ನಿರೂಪಿಸುವ ಪುಸ್ತಕಗಳ ಅಭಾವವಿದೆ ಎಂಬುದು. ಈ ಅಭಾವವು ಹೋಗದೆ ಮಾಧ್ಯಮಿಕ ಭಾಷೆ ಬದಲಾಯಿಸುವುದು ಸಾಧ್ಯವಿಲ್ಲವೆಂದು ಕುಳಿತರೆ, ಪ್ರಾಯಃ ಇನ್ನೂ ಒಂದು ಶತಮಾನದ ಕಾಲ ಇಂಗ್ಲಿಷೋ ಅಥವಾ ಮತ್ತಾವುದೋ ಮುಂದುವರಿಯಬೇಕಾಗಬಹುದು. ಪ್ರಾದೇಶಿಕ ಭಾಷೆಗಳಲ್ಲಿ ಮಾಧ್ಯಮಿಕ ಶಿಕ್ಷಣವನ್ನು ಕೊಡಬೇಕೆಂದಾಗಲೂ ಇದೇ ಪ್ರಶ್ನೆ ಮುಂದೆ ಬಂದಿತ್ತು; ಆದರೆ, ಈಗ ಆ ಪ್ರಶ್ನೆ ಇಲ್ಲವೇ ಇಲ್ಲವೆಂಬಂತಾಗಿದೆ. ಸುರಿತ ಅಧ್ಯಾಪಕರೂ, ಪಠ್ಯ ಪುಸ್ತಕಗಳೂ ಧಾರಾಳವಿಲ್ಲವೆ? ಸಹಾಯಕ ಪುಸ್ತಕಗಳೂ ಈಗೀಗ ಬರತೊಡಗಿಲ್ಲವೆ? ಪ್ರಾದೇಶಿಕ ಭಾಷೆಯಲ್ಲೂ ಅವಶ್ಯಕ ಗ್ರಂಥ ಬರೆಯಬಲ್ಲ ಬುದ್ಧಿಜೀವಿಗಳಿದ್ದಾರೆ. ವೈಜ್ಞಾನಿಕ ವಿಷಯಗಳ ಮಟ್ಟಿಗೆ ಅಷ್ಟೊಂದು ತೀವ್ರದಲ್ಲಿ ಮುಂದುವರಿಯುವುದು ಹಾನಿಪ್ರದವೆನಿಸೀತು. ಆದರೂ ಸಮರ್ಥ ಪ್ರತಿಭಾನ್ವಿತ ವ್ಯಕ್ತಿಗಳಿಂದ ನಮಗೆ ಬೇಕಾದ ಕೃತಿಗಳನ್ನು ರಚಿಸಿಕೊಳ್ಳುವುದು ಸಾಧ್ಯವಿದೆ. ಒಂದು ಕೆಲ ಕಾಲ ತುಸು ಪ್ರಯಾಸವೆನಿಸಿದರೂ ನಮ್ಮ ಪ್ರಾಧ್ಯಾಪಕ ವರ್ಗದವರು ಸಮರ್ಥ ರೀತಿಯನ್ನು ವಿದ್ಯಾರ್ಥಿಗಳಿಗೆ ಕಲಿಸಲು ಶಕ್ತನಾಗುವುದು ಖಂಡಿತವೆ. ಈ ಬಗ್ಗೆ ಆಸಕ್ತಿ ಮಾತ್ರ ಬೇಕಾಗುತ್ತದೆ. ಆಂಗ್ಲ ವೃತ್ತಪತ್ರಿಕೆಗಳು ಮಾಡುವ ಕಾರ್ಯವೆಲ್ಲವನ್ನೂ ಪ್ರಾದೇಶಿಕ ಭಾಷೆಗಳೂ ಗೆಯ್ಯುತ್ತಿರುವಾಗ ಬೋಧ ಭಾಷೆಯಾಗಲು ಈ ಭಾಷೆ ಸಮರ್ಥವಲ್ಲವೆಂಬ ಕಲ್ಪನೆ ತೀರ ಹುಚ್ಚಾಗಿದೆಯೆನ್ನಬೇಕು. ರಾಜ್ಯಸರಕಾರಗಳು ಪ್ರಾದೇಶಿಕ ಭಾಷೆಯನ್ನೇ ಸರಕಾರಿ ಭಾಷೆಯನ್ನಾಗಿ ಮಾಡಲು ಘೋಷಿಸಿ ಅನಂತರ ವಿಶ್ವವಿದ್ಯಾಲಯ ಶಿಕ್ಷಣದ ಮಾಧ್ಯಮವನ್ನು ಬದಲಾಯಿಸಲು ಪ್ರಯತ್ನ ಮಾಡಬೇಕು; ಹೊಸತನ್ನು ತರುವಲ್ಲಿ ಹಳೆಯದರಲ್ಲಿದ್ದ ಗುಣಗಳನ್ನು ಮಾತ್ರ ಮರೆಯಬಾರದು.

ಇಲ್ಲಿ ಪತ್ಯ ಹಾಗೂ ಇನ್ನಿತರ ಪುಸ್ತಕಗಳ ಕುರಿತು ನಾಲ್ಕು ಮಾತು ಆಡಬಹುದು. ವಿದ್ಯಾರ್ಥಿಗಳಲ್ಲಿ ಓದುವ ಪ್ರವೃತ್ತಿ ಬೆಳೆಯಬೇಕಾದರೆ, ಇವು ಆಕರ್ಷಕವಾಗಿರುವುದು ಅತ್ಯವಶ್ಯ. ಉತ್ತಮ ಮುದ್ರಣ, ಕಾಗದ ಹಾಗೂ ಅಂದವಾದ ರಚನೆಗಳಿಂದ ಪುಸ್ತಕದ ತೂಕವು ಗೆಚ್ಚುವುದು. ಮಕ್ಕಳಲ್ಲಿ ಓದುವ ಪ್ರವೃತ್ತಿಯನ್ನು ಹೆಚ್ಚಿಸಬೇಕಾದರೆ, ಅವರಿಗೆ ಓದಗಿಸುವ ಪುಸ್ತಕಗಳೂ ಮೌಲ್ಯಯುಕ್ತವಾಗಿರಬೇಕಾಗುತ್ತದೆ. ಅವರವರ ಪ್ರಾಯದ ಸ್ವಾಭಾವಿಕ ಮನೋವೃತ್ತಿಯನ್ನು ಆಮೂಲಾಗ್ರವಾಗಿ ವೈಜ್ಞಾನಿಕವಾಗಿ ಅಭ್ಯಸಿಸಿದ ತಜ್ಞರು ಮಾತ್ರ ಇವರಿಗೆ ಪುಸ್ತಕ ಬರೆಯುವುದಕ್ಕೆ ಹೋಗಬೇಕು. ಆದರೆ, ನಮ್ಮ ಪ್ರಾದೇಶಿಕ ಭಾಷೆಗಳ ಕಸುವನ್ನು ಪಯೋಗಿಸಿ ಇಂತಹ ಉಪಯುಕ್ತ ಪುಸ್ತಕಗಳನ್ನು ಬರೆದವರೆಷ್ಟುಮಂದಿ? ನಮ್ಮ ರಾಜ್ಯ ಸರಕಾರವೇ ಪ್ರಕಟಿಸಿದ ಭಾಷಾ ಪಾಠಪುಸ್ತಕವಾದರೂ ಮಕ್ಕಳಲ್ಲಿ ಹುದುಗಿರುವ ಸುಪ್ತ ಚೇತನವನ್ನು ಕೆರಳಿಸುವಂತೆ ತಯಾರಾಗಿದೆಯೆ? ಪಾಶ್ಚಿಮಾತ್ಯ ಪುಸ್ತಕಗಳ ಹೆಸರಂತೂ ಬಹುದೂರವಳಿಯಿತು. ಇದರಿಂದಾಗಿಯೇ ಓದಬೇಕೆಂಬ ಮಕ್ಕಳು ಪ್ರಾಯಃ ಶ್ರೀಮಂತರೇ ಓದಬೇಕಾದ ಕಾದಂಬರಿಗಳಿಗೆ ಶರಣುಬರುತ್ತಾರೆ. ಇದು ಅವರ ಮನಸ್ಸಿನ ಮೇಲೆ ವಿಕೃತ ಪರಿಣಾಮ ಬೀರುವ ಅವಕಾಶ ಹೆಚ್ಚು. ಶಿಶು ಸಾಹಿತ್ಯ— ಭಾಲಸಾಹಿತ್ಯ ಕೃಷಿ ನಮ್ಮಲ್ಲಿ ಏನೇನೂ ನಡೆದಿಲ್ಲ. ಪುಸ್ತಕದ ಅಂಗಡಿಗಳಲ್ಲಿ ನಾವು ಆಂಗ್ಲಭಾಷೆಯ ಅತ್ಯಂತಾಕರ್ಷಕವಾದ ನೂರಾರುಪುಸ್ತಕಗಳನ್ನು ಕಾಣಬಹುದು. ಬೀದಿಯಲ್ಲಿಹೋಗುವ ಮಗು ಇದರಿಂದ ಆಕರ್ಷಿತವಾಗಿ ಅದನ್ನು ಕೊಂಡುಕೊಡುವಂತೆ ತನ್ನ ಹೆತ್ತವರನ್ನು ಕಾಡುತ್ತದೆ. ಇಂತಹ ಹೊತ್ತಗೆಗಳು ನಮ್ಮ ಭಾಷೆಗಳಲ್ಲೂ ಬೆಳೆಯಬೇಕು. ವಿಜ್ಞಾನ ಖಗೋಳ, ಭೂಗರ್ಭ ಮೊದಲಾದ ಆಧುನಿಕ ಶಾಸ್ತ್ರಗಳನ್ನೂ ಹೃದಯ ಮನೋಹಾರಿ ಶೈಲಿಯಲ್ಲಿ ಕಥೆಯಂತೆ ಹೇಳುವ ಪುಸ್ತಕಗಳು ಬೇಕು. ಶುಷ್ಕ ವೇದಾಂತ ದಂತಿದ್ದರೆ, ಓದುವುದೂ ಬೇಸರವಲ್ಲವೆ?

ನಮ್ಮ ರಾಜ್ಯ ಸರಕಾರ ಶಿಕ್ಷಣದ ಸ್ತರವನ್ನು ಉನ್ನತೀಕರಿಸಿ, ಉತ್ತಮ ನಾಗರಿಕರನ್ನು ತಯಾರಿಸಲು ಬಯಸುವುದಾದರೆ, ಇವುಗಳತ್ತ ಮೊತ್ತಮೊದಲು ಗಮನ ಕೊಡಬೇಕು. ಸಾರ್ವತ್ರಿಕ ಅನಿವಾರ್ಯ ಉಚಿತ ಶಿಕ್ಷಣವನ್ನು ಕೊಡಲು ಯೋಚಿಸುತ್ತಿರುವಾಗ ಶಿಕ್ಷಣದ ಮಟ್ಟವು ಪರ್ವತದಿಂದ ಜಾರುತ್ತಿರುವುದನ್ನು ಕಂಡೂ ಪ್ರಪಾತಕ್ಕೆ ಬೀಳುವುದಕ್ಕೆ ಅವಕಾಶ ಕೊಡಬಾರದು. ಈ ಬಗ್ಗೆಯೂ ಅವಶ್ಯ ಕಾಳಜಿ ವಹಿಸಬೇಕು.

ಹಸಿವೆಯಿಂದ ಮುಕ್ತಿ

ಅಜಿತ ಪ್ರಸಾದ ಜೈನರ ಉತ್ತರಾಧಿಕಾರಿಯಾಗಿ ಸರ್ವ ಮಂತ್ರಿ ಶಾಖೆಯನ್ನೂ ಸಮರ್ಥರೀತಿಯಲ್ಲಿ ಸಾಗಿಸಬಲ್ಲವರೆಂದು ಹೇಳಲ್ಪಟ್ಟ ಶ್ರೀ ಸ. ಕ. ಪಾಟೀಲರು ಆ ಖಾತೆ ಶಾಖೆಯಲ್ಲಿ ಮಾತ್ರ ಇನ್ನೂ ಅದೇನೋ ನಿಧಾನವಾಗಿಯೇ ಸಾಗುತಿದ್ದಾರೆ. ಆಹಾರದ ವಿಷಯದಲ್ಲಿ ನಾವಿನ್ನೂ ಪರದೇಶಗಳನ್ನೇ ಹೊಂದಿಕೊಂಡಿರುವುದು ಹೇಯವಾದರೂ, ಹಾಗೆ ಮಾಡಿಲ್ಲವಾದರೆ, ನಾವು ಉಪವಾಸ ಬಿದ್ದು ಸಾಯಬೇಕಾಗಬಹುದು. ಪಾಟೀಲರ ಚುರುಕು ಬುದ್ಧಿಗೆ ಈಗ ಹೊಸತೊಂದು ಯೋಜನೆ ಮೂಡಿದೆ "ಹಸಿವೆಯಿಂದ ಮುಕ್ತಿ" ಚಳವಳಿಯನ್ನು ಪ್ರಾರಂಭಿಸಿ, ಅದನ್ನು ಮುಂದಿನ ಐದು ವರ್ಷಗಳ ಕಾಲ ನಡೆಸಿಕೊಂಡು ಹೋಗುವ ಆಲೋಚನೆ ಇವರದು. ತೃತೀಯ ಪಂಚವಾರ್ಷಿಕಯೋಜನೆಯಲ್ಲಿ ಆಹಾರ ಸ್ವಾವಲಂಬನಾ ಬಗೆಟನ್ನು ಬಿಡಿಸಲು ಇದೂ ಒಂದು ಆಂದೋಲನ. ಆಹಾರದ ಅಭಾವ ನೀಗಿಸುವುದರೊಡನೆ ಪೌಷ್ಟಿಕ ಆಹಾರ ದೊರೆಯುವಂತೆ ಮಾಡುವುದೂ ಈ ಚಳವಳಿಯ ಗುರಿ. ಆದರೆ, ಶ್ರೀ ಪಾಟೀಲರ ಈ ಆಂದೋಲನ ಯಶಸ್ವಿಯಾಗಿ ಅದರಲ್ಲಿ ಸಫಲ ಲಭಿಸಬೇಕಾದರೆ, ದೇಶದ ಇಡಿ ಪ್ರಜೆಗಳು, ಮುಖ್ಯವಾಗಿ ಕೃಷಿಕರು ಉತ್ಸಾಹದಿಂದ ಭಾಗವಹಿಸಬೇಕು. ಕೃಷಿಕರೆಲ್ಲರೂ ಸಂಪೂರ್ಣ ಸಹಕಾರ ನೀಡಿದರೆ, ತಮ್ಮ 'ಹಸಿವೆಯಿಂದ ಮುಕ್ತಿ' ಚಳವಳಿಯಿಂದ ರಾಷ್ಟ್ರದ ಆಹಾರ ಸಮಸ್ಯೆ ಮುಂದಿನ ಐದೇ ವರ್ಷಗಳಲ್ಲಿ ಬಗೆಹರಿಯುವುದೆಂಬ ಆತ್ಮವಿಶ್ವಾಸ ಅವರಿಗಿದೆ. ಸಾಕಷ್ಟು ಉದ್ದ ಮತ್ತು ಬಲಶಾಲಿಯಾದ ದೊಣ್ಣೆಯೊಂದನ್ನು ಕೊಟ್ಟರೆ, ಈ ಬ್ರಹ್ಮಾಂಡವನ್ನೇ ಎತ್ತಬಲ್ಲೆ ಎಂದೊಬ್ಬ ವಿಜ್ಞಾನಿ ಅಂದಿದ್ದನಂತೆ. ಆತ ಎತ್ತಲು ದೊಣ್ಣೆಯೂರುವ ಸ್ಥಳವೆಲ್ಲಿಯೆಂದು ಯೂ ರೂ ಚಿಂತಿಸಬೇಕಾಗಿಲ್ಲ. ಅಂತಹ ದೊಣ್ಣೆ ಕೈಸೇರಿದ ನಂತರ ತಾನೇ ಎತ್ತುವ ವಿಚಾರ! ಶ್ರೀ ಪಾಟೀಲರೂ ಅಂತೆಯೇ! ರೈತಾಪಿ ಜನರಲ್ಲಿ ಉತ್ಸಾಹವೇ ಇಲ್ಲವಾದರೆ, ಅವರು ಆಹಾರ ಹೆಚ್ಚು ಬೆಳೆಸದೆ ಹೋದರೆ, ಸಸ್ಯ—ಪ್ರಕೃತಿ ಹೆಚ್ಚು ಕೊಡಲಿಲ್ಲವಾದರೆ, ಪಾಪ, ಪಾಟೀಲರೇನುತಾನೆ ಮಾಡಬಲ್ಲರು?

ಸಂಕ್ಷಿಪ್ತ ಸುದ್ದಿಗಳು

ಆಶೀರ್ವಾದ ಬಲ

ಶ್ರೀ ನಿಜಲಿಂಗಪ್ಪನವರು ಎಬ್ಬಿಸಿದ ಬಿರುಗಾಳಿಯಲ್ಲೂ ಕೂಡಲು ಕೊಂಕಿಸದೆ ಅಜೇಯರಾಗಿ ನಿಲ್ಲುವುದು ಮೈಸೂರು ಮುಖ್ಯಮಂತ್ರಿ ಶ್ರೀ ಜತ್ತಿಯವರಿಗೆ ಸಾಧ್ಯವಾಯಿತೇನೋ! ನಿಜ. ಆದರೆ, ಇದಕ್ಕೆ ಅವರ ವೈಯಕ್ತಿಕ ಹಿರಿಮೆಗಿಂತಲೂ ಕಾಂಗ್ರೆಸ್ ವರಿಷ್ಠರ ವರಾಶೀರ್ವಾದದ ವಜ್ರ ಕವಚ—ಶಿರಾಸ್ತ್ರಾಣಗಳೇ ಕಾರಣವೆಂದು ಎಲ್ಲರೂ ಬಲ್ಲರು. ಮಂತ್ರಿಮಂಡಳಿಯನ್ನು ವಿಸ್ತರಿಸಿ, ಭಿನ್ನಾಭಿಪ್ರಾಯಗಳಿಗೂ ಅವಕಾಶ ಕೊಡುವುದಕ್ಕೆ ವರಿಷ್ಠರು ಜತ್ತಿಯವರಿಗಿತ್ತ ಅಧಿಕಾರವನ್ನಿವರು ಚಲಾಯಿಸಲು ಮುಂದುವರಿದಿಲ್ಲ. ಸರದಾರ ನಗರದ ಕಾಂಗ್ರೆಸ್ ಅಧಿವೇಶನಾನಂತರವೇ ಈ ಬಗ್ಗೆ ಅಂತಿಮ ನಿರ್ಧಾರ ಕೈಗೊಳ್ಳುವ ಜತ್ತಿಯವರು ವರಿಷ್ಠರಿಂದ ಮತ್ತೇನು ಬಯಸುತ್ತಿರುವರೋ! ವರಿಷ್ಠ ಮಂಡಳಿಯ ಆಜ್ಞಾಧಾರಕರಿಬ್ಬರೂ. ಆದರೂ ಈ ಇಬ್ಬರೊಳಗಿನ ಬಿರುಕು ಮಾತ್ರ ಬೆಸೆಯುವ ಸಲ್ಲಕ್ಷಣ ತೋರಿ ಬರದಿರುವುದು ಜನರ ದುರ್ದೃಷ್ಟ.

ದೇಶಮುಖರಿಗೆ ನಿವೃತ್ತಿ

ಪ್ರತ್ಯೇಕ ಮಹಾರಾಷ್ಟ್ರ ರಾಜ್ಯದ ಬೇಡಿಕೆಗೆ ಕೇಂದ್ರ ಸರಕಾರ ನೊಪ್ಪುವಾಕದ್ದರಿಂದ, ಮಂತ್ರಿ ಪದವಿಗೆ ರಾಜಿನಾಮೆಯಿತ್ತು ಹೊರಬಂದ ಡಾ! ಸಿ.ಡಿ. ದೇಶಮುಖರು ಮಂತ್ರಿ ಪದವಿಗಿಂತ ವಿಶ್ವವಿದ್ಯಾಲಯ ಸಹಾಯ ಧನಾಯೋಗದ ಅಧ್ಯಕ್ಷಪದಕ್ಕೆ ಸಮರ್ಥರೆಂಬುದನ್ನು ತನ್ನ ಕುಶಲತೆಯಿಂದ ತೋರಿಸಿ ಕೊಟ್ಟರು. ವಿಶ್ವವಿದ್ಯಾಲಯ ಸ್ವಾವೇಶಕ್ಕೆ ನಿರ್ಬಂಧ, ಯೋಗ್ಯತಾಸಂಪನ್ನರಿಗೆ ಮಾತ್ರ ಉಚ್ಚ ಶಿಕ್ಷಣದ ಸೌಲಭ್ಯ ಕಾಲೇಜುಗಳಲ್ಲಿ ವಿದ್ಯಾರ್ಥಿ ಸಂಖ್ಯೆಗೆ ಮಿತಿ—ಮೊದಲಾದ ಆದರ್ಶಗಳನ್ನು ಅವರು ಮುಂದೆ ತಂದಿದ್ದಾರೆ. ಇವುಗಳಲ್ಲಿ ಆದರ್ಶ-ಗ್ರಾಹ್ಯಗಳ ನಿರ್ಧಾರವಿನ್ನೂ ಆದಂತೆ ತೋರುವುದಿಲ್ಲ. ಇದೇ ತಾ. ೧೪ರಂದು ನಿವೃತ್ತರಾಗಲಿರುವ ಇವರ ಇಂಗಿತವನ್ನು ಮುಂದೆ ಅಧಿಕಾರಗ್ರಹಣಮಾಡಲಿರುವ ಆಂಧ್ರ ವಿಶ್ವವಿದ್ಯಾಲಯದ ಉಪಕುಲಪತಿ ಶ್ರೀ ಸಿ. ಕೃಷ್ಣರವರು ತಿಳಿದುಕೊಂಡು ಮುಂದುವರಿಸಬೇಕಾಗಿದೆ. ಡಾ! ದೇಶಮುಖರ ಮುಂದಿನ ಜೀವನ ಯಾವ ಕ್ಷೇತ್ರವನ್ನು ಹಿಡಿಯುವುದು ಎಂಬ ಕುತೂಹಲ ಎಲ್ಲರಿಗೂ.

• ಹೋಳಿಗೆಗೆ ತುಪ್ಪವೂ ಬೇಕು

- ಜನರ ತೊಂದರೆಗಳನ್ನು ಅರ್ಥಮಾಡಿಕೊಂಡು, ತಮ್ಮ ಕರ್ತವ್ಯವನ್ನು ಸರಿಯಾಗಿ ನಿರ್ವಹಿಸಿ ಪೋಲೀಸರು ನಿಜವಾದಕಲ್ಯಾಣಾಧಿಕಾರಿಗಳಾಗಬೇಕೆಂದು ಪ್ರಧಾನಿ ನೆಹರೂ ಪೋಲೀಸರನ್ನು ಕೇಳಿ

ಕೊಂಡರಂತೆ. ಪೋಲೀಸರು ಜನತೆಯ ಸುಖದುಃಖಗಳನ್ನು ಕಂಡುಕೊಂಡು ಅವರೊಡನೆ ಸಹಕರಿಸುವಂತೆಯೇ ಜನತೆಯೂ ಪೋಲೀಸರೊಡನೆ ಸಹಕರಿಸಬೇಕೆಂಬುದನ್ನು ಮರೆಯಬಾರದು. ನಾಗರಿಕರು ನಾಗರಿಕ ನಿಯಮಗಳನ್ನು ತಿಳಿತಿಳಿದೂ ಉಲ್ಲಂಘಿಸುತ್ತಿರುವ ಘಟನೆಗಳು ಆಗಾಗ ನಡೆಯುತ್ತಲೇ ಇರುತ್ತವೆ. ರಾತ್ರೆ ದೀಪವಿಲ್ಲದೆ ವಾಹನಪ್ರೋಷಿಸುವುದು ಇವುಗಳಲ್ಲಿ ಸರ್ವ ಸಾಮಾನ್ಯವಾಗಿದೆ. ಪೋಲೀಸರು ಮಾತ್ರ ಕಲ್ಯಾಣ ಸಾಧಕರಾದರೆ ಸಾಲದು, ನಮ್ಮ ನಾಗರಿಕರೂ ಕಲ್ಯಾಣ ಸಾಧಕರಾಗಿ ಮುಂದುವರಿಯಬೇಕು. ಹೋಳಿಗೆ ಮಾತ್ರ ಕೈಸೇರುವುದಕ್ಕಿಂತ ತುಪ್ಪವೂ ಲಭಿಸತೆಂದರೆ, ಆಗ ಅದರ ರುಚಿ ಕೇವಲ ಆಸ್ವಾದನೀಯ; ವರ್ಣನೀಯವಲ್ಲ!

ಜಗಲಿ ಹಾರದವನು....

ಪ್ರಧಾನಿ ಮತ್ತು ಮುಖ್ಯಮಂತ್ರಿಗಳ ಆಯ್ಕೆಯು ಲೋಕಸಭೆ ಹಾಗೂ ಶಾಸನ ಸಭೆಗಳ ಮೂಲಕವೇ ನಡೆಯುವುದರಿಂದ ಅವರ ಮೇಲೆ ಪದೇ ಪದೇ ಅವಿಶ್ವಾಸಗಳು ಹುಟ್ಟುವುದು. ತಪ್ಪುವುದು ಎಂದು ಲೋಕಸಭಾಧ್ಯಕ್ಷ ಶ್ರೀ ಅನಂತಶಯನಂ ಅಯ್ಯಂಗಾರರು ಆಡಿದ್ದಾರೆ, ಶ್ರೀ ಐಯ್ಯಂಗಾರರು ಲೋಕಸಭಾಧ್ಯಕ್ಷರಾಗಿ ಬಹು ಚಾಣಾಕ್ಷತೆಯನ್ನೇನೋ ಪ್ರದರ್ಶಿಸಿದ್ದಾರೆ. ಜರ್ಮನಿಯಲ್ಲಿಯೂ ಇದೇ ಮಾದರಿಯಿರುವುದೆಂದು ಹೇಳಿದ್ದಾರೆ. ಆದರೆ, ನಾವು ನಮ್ಮ ಒಂದು ಪಕ್ಷದಲ್ಲಿಯೇ ಸಮರಸವನ್ನುಂಟುಮಾಡಲು ಸೋತುಸೋತು ಗುತ್ತಿರುವಾಗ, ಪಕ್ಷಕ್ಕೆ ವಿಶ್ವಾಸವೇ ಮಂತ್ರಿಗಳಲ್ಲಿಲ್ಲದಿರುವಾಗ, ಇಡಿ ಶಾಸನ ಸಭೆಯ ವಿಶ್ವಾಸವಿರುವುದೆಂದು ನಂಬುವುದಾದರೂ ಹೇಗೆ?

ಅಡಿಯ ಹಿಂದಿಡೆ ನರಕ...

ಸರದಾರ ನಗರದಲ್ಲಿ ಇದೇ ೬ರಿಂದ ನಡೆಯಲಿರುವ ಕಾಂಗ್ರೆಸ್ ಅಧಿವೇಶನದಲ್ಲಿ ಒಂದು ಗೊತ್ತುವಳಿ ಮಂಡಿಸಲ್ಪಡುವ ನಿರೀಕ್ಷೆಯಿದೆ. ಇಡಿಯ ಭಾರತವನ್ನು ಐದು ಆಡಳಿತಾತ್ಮಕ ವಿಭಾಗಗಳನ್ನಾಗಿ ವಿಂಗಡಿಸಬೇಕೆಂಬುದೇ ಈ ಸಲಹೆ. ಇದರಿಂದ ಭಾಷಾಭಿಮಾನದ ಉದ್ರೇಕಗಳು ನೀಗುವುದೆಂದೂ ಐಕ್ಯ ಭಾವಬಲಿಯುವುದೆಂದೂ ಗೊತ್ತುವಳಿ ಮಂಡಿಸಿದ ಶ್ರೀ ಜಸ್ವಾಲ ಸಿಂಗರು ಹೇಳುತ್ತಾರೆ. ಭಾಷಾನುಗುಣ ರಾಜ್ಯ ರಚನೆಯನ್ನು ಒಪ್ಪಿಕೊಂಡು, ಅದನ್ನು ಅದಷ್ಟು ಮಟ್ಟಿಗೆ ಕಾರ್ಯಕೃತಗೊಳಿಸಿದ ಕಾಂಗ್ರೆಸ್ಸು ಪಂಜಾಬಿ ಸುಬಾ ಮತ್ತು ಪ್ರತ್ಯೇಕ ವಿದರ್ಭರಾಜ್ಯಗಳ ಬೇಡಿಕೆಯ ಸಂಬಂಧ ಮುಂದಿಟ್ಟ ಹೆಜ್ಜೆಯನ್ನು ಹಿಂದಿಡಲು ಉತ್ಸಾಹ ತೋರಿಸಲಾರದೆಂದೇ ಬಾವಿಸಬಹುದು. ಪ್ರತ್ಯೇಕ ಪಂಜಾಬಿ ಸುಬಾದ ಬೇಡಿಕೆಯನ್ನು ಮುಂದಿಟ್ಟು ಉಪವಾಸ ಪ್ರಾರಂಭಿಸಿದ ಫತೇಸಿಂಗರು ಪ್ರಧಾನಿ ನೆಹರುರವರನ್ನು ಕಂಡು ವಿಚಾರ ವಿನಿಮಯ ಮಾಡಲು ಸಿದ್ಧರಿರುವುದಾಗಿ ಘೋಷಿಸಿದ್ದಾರೆ; ಆದರೆ, ಉಪವಾಸ ಮುಕ್ತಾಯಗೊಳಿಸುವ ಬಗ್ಗೆ ಏನೂ ಅಂದಿಲ್ಲ.

ಅಲ್ಲಲ್ಲಿಯ ಸುದ್ದಿಸಾರ

ಹೊಸ ವರ್ಷದ ಅಭಿನಂದನೆ—ದಿ| ಉಪೇಂದ್ರ ಪೈಗಳಿಂದ ಉಪಕೃತಮಿಸಲ್ಪಟ್ಟ ಸಾರ್ವಜನಿಕ ಹಿರಿಯ ಸೇವಕರೊಬ್ಬರನ್ನು ಅಭಿನಂದಿಸುವ ಕಾರ್ಯಕ್ರಮವು ತಾ. 1ರಂದು ಸನ್ಮಾನ ಸಮಿತಿಯವರಿಂದ ಉಡುಪಿ ಮುಳಂದ ನಿವಾಸದಲ್ಲಿ ವಿಜೃಂಭಣೆಯಿಂದ ನೆರವೇರಿಸಲ್ಪಟ್ಟಿತು. ಈ ವರ್ಷದ ಮುಖ್ಯ ಅತಿಥಿಗಳು ಜಿಲ್ಲೆಯ ಸುಪ್ರಸಿದ್ಧ ಸಚೇಚರೂ ಮಾಜಿ ಮಂತ್ರಿಗಳೂ ಆಗಿದ್ದ ಶ್ರೀ ಬಿ. ವೈ. ಕುಂಠ ಬಾಳಿಗ ಎಂ.ಎಲ್.ಎ. ಅವರಾಗಿದ್ದರು. ಸಭೆಯ ಅಧ್ಯಕ್ಷತೆಯನ್ನು ಜಿಲ್ಲಾ ಕಾಂಗ್ರೆಸ್ಸಿನ ಅಧ್ಯಕ್ಷ ಶ್ರೀ ಟಿ. ಎ. ಪೈಗಳು ವಹಿಸಿದ್ದರು. ಸತ್ಕಾರ ಸಮಿತಿಯ ಪರವಾಗಿ ಶ್ರೀ ಟಿ. ರಮೇಶ ಪೈಗಳು ಸ್ವಾಗತ ಭಾಷಣ ಮಾಡಿ ಮುಖ್ಯ ಅತಿಥಿಗಳ ಸಾರ್ವಜನಿಕ ಕೆಲಸಗಳನ್ನು ವಿವರಿಸಿದರು. ತರುವಾಯ ಸತ್ಕಾರ ಸಮಿತಿಯ ಪರವಾಗಿ ಬೇರೆ ಬೇರೆ ಸಂಸ್ಥೆಗಳಿಂದ ಮುಖ್ಯ ಅತಿಥಿಗಳಿಗೆ ಪುಷ್ಪಾಹಾರಗಳನ್ನರ್ಪಿಸಲಾಯಿತು. ಡಾ. ಕೆ. ಎಲ್. ಐತಾಳ್, ಶ್ರೀಗೋವಾದ ಅರ್. ಫೆರ್ನಾಂಡೀಸ್, ಪಿ. ಪದ್ಮನಾಭ ರಾವ್, ಎಲ್. ಎಚ್. ಪ್ರಭು, ಬಿ. ರ್ಯಾಮಣ್ಣಯ ಸೆಟ್ಟಿ ಇವರು ಮುಖ್ಯ ಅತಿಥಿಗಳ ವಿಶಿಷ್ಟ ಗುಣಗಳನ್ನೆತ್ತಿ ಮಾತನಾಡಿ ಶುಭಾಕಾಂಕ್ಷೆ ಕೋರಿದರು. ಅತಿಥಿ ಶ್ರೀ ಬಾಳಿಗರು ಸಂದರ್ಭೋಚಿತ ಉತ್ತರ ಕಿತ್ತು ಸತ್ಕಾರಕ್ಕಾಗಿ ಆಭಾರ ಸೂಚಿಸಿದರು. ಅಧ್ಯಕ್ಷ ಶ್ರೀ ಪೈಗಳು ಪ್ರಜಲಿತ ವಿದ್ಯಮಾನಗಳನ್ನು ವಿವರಿಸಿ ದೇಶದ ಉನ್ನತಿಗಾಗಿ ಸರ್ವರೂ ಶ್ರಮಿಸಬೇಕೆಂದೂ ಸಮಯದ ಸದ್ವಿನಿಯೋಗ ಮಾಡಬೇಕೆಂದೂ ಹೇಳಿದರು. ಬಳಿಕ ಶ್ರೀ ಎ. ಜೆ. ಅಲ್ಲೆಯವರು ಧನ್ಯವಾದಗಳನ್ನರ್ಪಿಸಿದರು.

ಬಂಟರ ಯಾನೆ ನಾಡವರ ಸಂಘದ ವಾರ್ಷಿಕ ಮಹಾ ಸಭೆಯು ತಾ. 25-12-60ರಂದು ಮಂಗಳೂರು ರಾಮಕೃಷ್ಣ ವಿದ್ಯಾರ್ಥಿ ಭವನದಲ್ಲಿ ಶ್ರೀ ಬಂಬ್ರಾಣ ನಾರಾಯಣ ಪೂಂಜರ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ಜರಗಿತು. ಶ್ರೀ ಎ. ಶಂಕರ ಅಳ್ವರು ಅಧ್ಯಕ್ಷರ ಪರಿಚಯ ಭಾಷಣ ಮಾಡಿದರು. ಶ್ರೀ ಕೆ. ಸುಂದರರಾಮ ಸೆಟ್ಟಿರು ಸಂದೇಶಗಳನ್ನು ಓದಿದರು. ಎಡ್ವೋಕೇಟ್ ಬಿ. ಬಿ. ಸೆಟ್ಟಿರು, ಶ್ರೀ ಪಿ. ಎಸ್. ತಿಮ್ಮಪ್ಪ ಸೆಟ್ಟರ ತೈಲ ಚಿತ್ರವನ್ನು ಅನಾವರಣ ಮಾಡುತ್ತ ಶ್ರೀ ಸೆಟ್ಟಿರು ಮಾಡಿದ ಸೇವೆಗಳನ್ನು ವಿವರಿಸಿ, ಅವರ ಕಾರ್ಯದಕ್ಷತೆ, ಪ್ರಾಮಾಣಿಕತೆನ, ಜನಪ್ರಿಯತೆ ಮೊದಲಾದುವನ್ನು ಕೊಂಡಾಡಿದರು. ಶ್ರೀ ಪಾಂಡುರಂಗ ಕಾಮತರು ಶ್ರೀ ಕುಲಮ್ಯಂರ ಸೆಟ್ಟರ ತೈಲ ಚಿತ್ರವನ್ನು ಅನಾವರಣ ಗೈದರು. ಬಳಿಕ ಸಂಘದ ಕಾರ್ಯದರ್ಶಿ ಮತ್ತು ಕೋಶಾಧಿಕಾರಿಗಳು ಗತ ವರ್ಷದ ವರದಿಯನ್ನೋದಿದರು. ಶ್ರೀ ಪಿ. ಎಸ್. ತಿಮ್ಮಪ್ಪ ಸೆಟ್ಟರು ಭವನದ, ಶ್ರೀ ಎಸ್. ದಾಸಣ್ಣಶೆಟ್ಟರು ಬಡ ವಿದ್ಯಾರ್ಥಿ ಫಂಡಿನ, ಡಾ. ಕೆ. ಬಿ. ಸೆಟ್ಟಿರು ವಿದ್ಯಾರ್ಥಿನಿ ಭವನದ ವರದಿಗಳನ್ನು ಓದಿದರು. ಶ್ರೀಮತಿ ಲೀಲಾವತಿ ಕೆ. ರೈಯರು ಬಟ್ವಾಳ ತಾಲೂಕು ಬೋರ್ಡಿಗೆ ಆರಿಸಿ ಬಂದ ಬಗ್ಗೆ ಅವರನ್ನು ಅಭಿನಂದಿಸಲಾಯಿತು. ಲಘು ಫಲಾಹಾರಾನಂತರ ಅಧ್ಯಕ್ಷರ ಭಾಷಣವಾಗಿ ಹಲವಾರು ವಿಷಯಗಳು ಚರ್ಚಿಸಲ್ಪಟ್ಟು ಅಡಳಿತ ಕಮಿಟಿಯ ಚುನಾವಣೆ ನಡೆಯಿತು. ಈ ಸಭೆಯಲ್ಲಿ ಬೆಂಗಳೂರು ಒಕ್ಕಲಿಗರ ಸುವರ್ಣಮಹೋತ್ಸವ ಸಮಿತಿಯ ಕೆಲವು ಸದಸ್ಯರು ಬಂದಿದ್ದು ಭಾಷಣಗಳನ್ನು ಮಾಡಿದರು. ರಾತ್ರಿ ಇವರಿಗೆ ವಿಜಯಾ ಬ್ಯಾಂಕ್ ಸದನದಲ್ಲಿ ಭೋಜನ ಸತ್ಕಾರಕೂಟ ನಡೆಯಿತು.

ಪರಿಯೊಳಿ ಸಮಾಜ ಸುಧಾರಕ ಸಂಘ—ಇದರ ವಾರ್ಷಿಕ ಮಹಾ ಸಭೆಯು ತಾ. 10-1-61ನೇ ಮಂಗಳವಾರ ಮಧ್ಯಾಹ್ನ ಎರಡು ಗಂಟೆಗೆ ಉಡುಪಿ ನಾಯಕ್ ಅಯಂ ಪೇಟಾಶ್ರಯದ ಕಟ್ಟಡದಲ್ಲಿ ಶ್ರೀ ಸುಂದರ್ ಬಿ. ಉದ್ಯಾವರ ಇವರ ಅಧ್ಯಕ್ಷತೆಯಲ್ಲಿ ಜರಗಲಿರುವುದೆಂದೂ ಸಮಾಜಾಭಿಮಾನಿಗಳು ಬರಬೇಕೆಂದೂ ಸಂಬಂಧಪಟ್ಟವರು ತಿಳಿಸುತ್ತಾರೆ.

ವೆಂಗಮೀರ ವ್ಯವಸ್ಥಾಪಕ ಮಂಡಳಿ ಮುಂಬಾಯಿ—ಇದರ ಸದಸ್ಯರ ವಿಶೇಷ ಮಹಾ ಸಭೆಯು ತಾ. 25-12-60ರಂದು ಜರಗಿತು. ಅಂದಿನ ದಿವಸ ಪ್ರಕೃತ ಇರುವ ಮಂಡಳಿಯ ಖಾದುಪತ್ಯಗಾರರ ಮತ್ತು ಪ್ರಧಾನ ಕಾರ್ಯದರ್ಶಿಯವರ 5 ವರ್ಷಗಳ ಅವಧಿಯು ತಾ. 31-12-60ಕ್ಕೆ ಮುಗಿಯುವುದರಿಂದ ಸರ್ವ ಶ್ರೀ ಬೈಕಂಪಾಡಿ ಶಿವ ಸಾಲಿಯಾನ್, ತಣ್ಣೀರು ಬಾವಿ ಶಾನಾರಾಯಣ ಬಿ. ಬಂಗೇರ, ಮಂಗಳೂರು ಪೋಲಿಸ್ ಪಿ ಕಕೇರ ತಾಡಿಪಟ್ಟ ಕೇಪಪ್ಪ ಸಿ ಪಕುಬಿದ್ರಿ ಮತ್ತು ಎರ್ಮಾಳು (ಬಡಾ) ಎಲ್ಲಪ್ಪ ಕೆ. ಕೊಂಟೆಂಕಾರ ಇವರನ್ನು ಮುಂದಿನ 5 ವರ್ಷಗಳ ತನಕ ಖಾದುಪತ್ಯಗಾರನ್ನಾಗಿಯೂ, ಕಣ್ಣಂಗಾರು ಶ್ರೀ ಹೊನ್ನಯ್ಯ ಕೆ. ಪುತ್ರನನ್ನು ಪ್ರಧಾನ ಕಾರ್ಯದರ್ಶಿಯರನ್ನಾಗಿಯೂ ಸರ್ವಾನುಮತದಿಂದ ಆರಿಸಲಾಯಿತು.

ವಿಜ್ಞಾಪನೆ—ಉಡುಪಿ ಮುನಿಸಿಪಲ್ ಸರಹದ್ದಿನೊಳಗೆ ತಾ. 26—12—60ರಿಂದ ಎರಡು ವಾರಗಳ ತನಕ ರಾಷ್ಟ್ರೀಯ ಪೈತ್ರಿಯೂ ರೋಗನಿವಾರಣಾ ಯೋಜನೆಯ ಅಧಿಕಾರಿಗಳು ಸುಸರಾವರ್ತಿ ಧರ್ಮಾರ್ಥವಾಗಿ ಹೆಟ್ರಾಜನ್ ಮಾತ್ರೆಗಳನ್ನು ಪ್ರತಿಯೊಂದು ಮನೆಗೂ ಬಂದು ಹಂಚುತಿದ್ದಾರೆ. ಮೊದಲನೆಯ ಬಾರಿ ಹೆಟ್ರಾಜನ್ ಮಾತ್ರೆಗಳನ್ನು ತೆಗೆದುಕೊಳ್ಳದವರು ಈ ಬಾರಿ ತಪ್ಪದೆ ತೆಗೆದುಕೊಂಡು ಭಯಂಕರವಾದ ಪೈಲೇರಿಯೂ ರೋಗಬಾಧೆಯಿಂದ ಮುಕ್ತರಾಗುವಂತೆ ಮಾಡುವದಲ್ಲದೆ ಸಂಬಂಧಪಟ್ಟ ಅಧಿಕಾರಿಗಳೊಡನೆ ಸಹಕರಿಸಬೇಕಾಗಿ ನಗರಸಭಾಪತಿ ಡಾ. ಕೆ. ಎಲ್. ಐತಾಳರು ವಿನಂತಿಸುತ್ತಾರೆ.

ಶಿವಲ್ಲಿ-ಇಟ್ಲಿಯ ಕೆಫೋಲಿಕ್ ಬ್ಯಾಂಕಿಗೆ ನೂತನ ವಿದ್ಯುದ್ದೀಪವನ್ನು ಬೆಳಗಿಸುವ ಕಾರ್ಯಕ್ರಮವು ರಿ| ಫಾ| ಯೆಜ್ ಗೊನ್ಸಾಲ್ವಿಸ್ ಇವರ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ಜರಗಿತು. ಶ್ರೀ ಕೆ. ಎಂ. ಹೊಳ್ಳರು ಭಾಷಣಕ್ಕೆ ಮೇಲೆ ಇಜಂಟ್ ಶ್ರೀ ಎಂ. ಬಾಕ್ಕರ ಶೇಟ್ ಇವರು ಧನ್ಯವಾದಾರ್ಪಣೆ ಮಾಡಿದರು. ಲಘುಫಲಾಹಾರಸಹಾ ಇತ್ತು.

ಹೆಂಗಾರ ಕಟ್ಟೆ—ಸ್ಥಳೀಯ ಕರ್ನಾಟಕ ಸಂಘವು ಕಳದ ತಾ 30ರಂದು ಶ್ರೀಸುಪ್ರಸಿದ್ಧ ಸಾಹಿತಿ ಶ್ರೀ ಅ ನ ಕೃಷ್ಣರಾಯರನ್ನು ಸನ್ಮಾನ ಸತ್ಕಾರಕ್ಕೆತ್ತು ಗೌರವಿಸಿತು. ಸಭಾಧ್ಯಕ್ಷತೆಯನ್ನು ಶ್ರೀ ಬಳ್ಳಾರಿ ಬೀಚಿಯವರು ವಹಿಸಿದ್ದರು. ಶ್ರೀ ಕೆ. ಶಿವರಾಮ ಸೆಟ್ಟಿರು ಸ್ವಾಗತಿಸಿದ ಮೇಲೆ ಶ್ರೀ ಗುಂಡ್ಮಿ ಚಂದ್ರಶೇಖರ ಐತಾಳರು ತಮ್ಮ ಕೆಲವು ಕವಿತೆಗಳನ್ನು ಓದಿದರು. ಬಳಿಕ ಅಧ್ಯಕ್ಷರ ಹಸ್ತದಿಂದ ಅನಕೃರವರಿಗೆ ಸನ್ಮಾನ ಪತ್ರವನ್ನೂ ಉಡುಗೆರೆಯನ್ನೂ ಅರ್ಪಿಸಲಾಯಿತು. ಶ್ರೀ ಅನಕೃರವರು ನೂತನಾಡುತ್ತಾಕನ್ನಡಮ್ಮನಸೇವೆಯಲ್ಲಿ ಸಂಘ ಸಂಸ್ಥೆಗಳ ಪಾತ್ರವನ್ನು ಎತ್ತಿ ತೋರಿಸಿದರು. ಕನ್ನಡ ಕಾದಂಬರಿಗಳ ಉಗಮ, ಬೆಳವಣಿಗೆಗಳ ನಾನಾ ಘಟ್ಟಗಳನ್ನೂ ಕಾದಂಬರಿಗಳ ಹಲವಾರು ಮುಖಗಳನ್ನೂ ತೋರಿಸಿಕೊಟ್ಟು ತಮ್ಮ ತಮ್ಮ ಪ್ರದೇಶಗಳಲ್ಲಿನ ಜನ ಜೀವನವನ್ನು ಚಿತ್ರಿಸುವಇಂದಿನಕಾದಂಬರಿ ಕಾರರಾದ ಶ್ರೀಕಾರಂತ, ಸುರಾಜಕೆ, ಕಟ್ಟೀಮನಿ ಮೊದಲಾದವರ ಸೇವೆಯನ್ನು ಪ್ರಶಂಸಿಸಿದರು. ಅಧ್ಯಕ್ಷ ಬೀಚಿಯವರು ಮೂತನಾಡಿ ಸಭೆಯನ್ನು ನೆಗೆಡಲ್ಲಿ ತೇಲಾಡಿಸಿದರು.

ಉಡುಪಿಯ ಹಿಂದೀ ಪ್ರಚಾರ ಪರಿಷತ್ತಿನ—ಎರಡನೆಯ ವಾರ್ಷಿಕ ಸಭೆಯು ಉಡುಪಿಯ ಸಂಸ್ಕೃತ ಪ್ರಾಥಮಿಕ ಶಾಲೆಯ ಅಧ್ಯಾಪಕ ಶ್ರೀ ಪಿ. ಹರಿದಾಸ ಆಚಾರ್ಯರ ಹಿರಿತನದಲ್ಲಿ ತಾ ೩೧ ರಂದು ನಡೆಯಿತು. ಬಿಹಾರಿನ ದೇವಘರ ಹಿಂದೀ ವಿದ್ಯಾಪೀಠದ ಪ್ರತಿನಿಧಿ ಸ್ವಾಮಿ ಪ್ರಕಾಶಾನಂದರೆವರು ಆರಂಭ ಭಾಷಣಮಾಡುತ್ತ ಭಾರತೀಯ ಭಾಷೆಗಳೆಲ್ಲಾ ಏಕಲಿಪಿಯೊಗ ಬೇಕೆಂಬ ಅಂದೋಲನದ ಬಗ್ಗೆ ಪ್ರಸ್ತಾಪಿಸಿದರು. ಅವರು ಮುಂದುವರಿದು, ಉತ್ತರ ಭಾರತದ ಹಿಂದೀ ಭಾಷಾ ಪ್ರದೇಶಗಳಾದ ಉತ್ತರ ಪ್ರದೇಶ, ರಾಜಸ್ಥಾನ ಮಧ್ಯಪ್ರದೇಶ ಮತ್ತು ಬಿಹಾರ ರಾಜ್ಯಗಳು ದಕ್ಷಿಣ ಭಾರತದ ಒಂದೊಂದು ಭಾಷೆಯನ್ನು ಅವಶ್ಯ ಸ್ವೀಕರಿಸಿ, ಅದನ್ನು ಕಲಿಸುವ ವ್ಯವಸ್ಥೆ ಮಾಡ ಬೇಕೆಂದು ಹೇಳಿದರು ದಕ್ಷಿಣ ಭಾರತೀಯರು ಹಿಂದಿಯನ್ನು ಸ್ವೇಚ್ಛೆಯಿಂದ ಕಲಿಯುತ್ತಿರುವುದನ್ನವರು ಮೆಚ್ಚಿ ದಕ್ಷಿಣದ ಭಾಷೆಗಳು ಕಲಿಯಲು ತುಸು ಪ್ರಯಾಸವೆಂಬುದರಿಂದ ಉತ್ತರೀಯರು ಕಲಿಯಲೇ ಬೇಕು ಎಂಬ ವಾದವನ್ನು ತಾವು ಮುಂದಿಟ್ಟಿರುವುದಾಗಿ ಹೇಳಿದರು.

ಆನಂತರ, ‘ದೇಶ ಪ್ರೇಮ ಎಂಬ ವಿಷಯದ ಮೇಲೆ ಶ್ರೀಗಳಾದ ಟಿ. ಪ್ರಭಾಕರ ಶಿಕ್ಷಕ, ಪಿ. ರಾಜಗೋಪಾಲ ಆಚಾರ್ಯ, ಎಂ. ವಿಟ್ಟಲ ಶೆಟ್ಟಿಗಾರರು ಮಾತನಾಡಿ, ನಮ್ಮ ರಾಷ್ಟ್ರದ ಭದ್ರತೆಗಾಗಿ, ಸ್ವಾತಂತ್ರ್ಯ ರಕ್ಷಣೆಗಾಗಿ ನಾವು ಭಾರತೀಯರು ಎಂಬ ಭಾವನೆಯನ್ನು ಬೆಳಸಿ, ಜನ್ಮಭೂಮಿಯನ್ನು ಪ್ರೀತಿಸಬೇಕು ಎಂದರು. ‘ಜನನೀ ಜನ್ಮ ಭೂಮಿಶ್ಚ ಸ್ವರ್ಗಾದಪಿ ಗರೀಯಸಿ, ಎಂಬ ಉಕ್ತಿಯನ್ನು ವಿಶೇಷಿಸಿ, ಮೊದಲು ಜನನಿ, ಆನಂತರ ಜನ್ಮಭೂಮಿಯನ್ನು ಪ್ರೀತಿಸುವುದು ಸೂಕ್ತವೆಂದು ಅಭಿಪ್ರಾಯಿಸಿದರು.

ಪ್ರಾರಂಭದಲ್ಲಿ ಪರಿಷತ್ತಿನ ಪ್ರಧಾನ ಕಾರ್ಯದರ್ಶಿ ಶ್ರೀ ಎಸ್ ಗೋಪೀಚಂದ ರಾಯರು ಅಧ್ಯಕ್ಷರನ್ನೂ ಅತಿಥಿಗಳನ್ನೂ ಸ್ವಾಗತಿಸಿದರು ಕೊನೆಯಲ್ಲಿ ಸಾಹಿತ್ಯ ಕಾರ್ಯದರ್ಶಿ ರಮೇಶ ಪಡಿಯಾರರು ಧನ್ಯವಾದಗಳನ್ನರ್ಪಿಸಿದರು.

ಭುವನೇಂದ್ರ-ಸಿಂಡಿಕೇಟ್ ಪಂದ್ಯಾಟಗಳು—ಕಳದ ತಾ 24ರಂದು ಉಡುಪಿ ವಿಕ್ಟೋರಿಯೂ ಜುಬಿಲಿ ಯೂನಿಯನ್ ಕ್ಲಬ್ಬಿನ ಆವಾರದಲ್ಲಿ ಶ್ರೀ ಟಿ. ಎ. ಪೈಗಳ ಅಧ್ಯಕ್ಷತೆಯಲ್ಲಿ ತಾಲೂಕು ಬೋರ್ಡು ಅಧ್ಯಕ್ಷ ಶ್ರೀ ಯಂ. ಮಧ್ವರಾಜರಿಂದ ಉದ್ಘಾಟಿಸಲ್ಪಟ್ಟ ಭುವನೇಂದ್ರ-ಸಿಂಡಿಕೇಟ್ ಪಂದ್ಯಾಟಗಳು 7 ದಿನ ನಡೆದು ಕಳದ ತಾ. 30ರಂದು ಶ್ರೀ ಟಿ. ಎ. ಪೈಗಳ ಅಧ್ಯಕ್ಷತೆಯಲ್ಲಿ ಸಮಾರೋಪ ಸಮಾರಂಭವು ನಡೆಯಿತು ಶ್ರೀ ಕೆ. ಕೆ. ಪೈಗಳು ಸ್ವಾಗತಿಸಿದ ಮೇಲೆ ಶ್ರೀಯು. ಲಕ್ಷ್ಮೀನಾರಾಯಣಚಾರ್ಯರು ಭಾಷಣಮಿತ್ತರು. ಈ ಸಂದರ್ಭದಲ್ಲಿ ಪ್ರಕಟಿಸಲಾದ ಸವನೀರನ್ನು ನವಭಾರತ ಸಂಪಾದಕರಾದ ಶ್ರೀ ವಿ. ಯಸ್. ಕುಡುವರು ಉದ್ಘಾಟಿಸಿ ವಿಜಯಿಗಳಿಗೆ ಬಹುಮಾನ ವಿತರಣೆ ಮಾಡಿದರು. ಅಧ್ಯಕ್ಷ ಶ್ರೀ ಟಿ. ಎ. ಪೈಗಳು ಈ ಸ್ಪರ್ಧೆಯಲ್ಲಿ ಹೆಚ್ಚಿನ ಆಸಕ್ತಿ ತಾಳಿದವರಿಗೆ ಅಭಿನಂದನೆ ಸಲ್ಲಿಸಿದರು. ಶ್ರೀ ಯನ್. ವಿ. ಕಾಮತರು ಧನ್ಯವಾದಗಳನ್ನರ್ಪಿಸಿದರು.

ಧರ್ಮಾರ್ಥ ನೇತ್ರ ಚಿಕಿತ್ಸಾ ಶಿಬಿರ—ಪದ್ಮ ಶ್ರೀ ಡಾ. ಎಂ. ಸಿ. ಮೋದಿಯವರ ಕಂಪಾಪರದ ಈ ಶಿಬಿರದ ಸಮಾರೋಪ ಸಮಾರಂಭವು ತಾ. 1ರಂದು ಬೋರ್ಡು ಹೈಸ್ಕೂಲಿನ ಕಲಾಮಂದಿರದಲ್ಲಿ ನವಭಾರತ ಸಂಪಾದಕ ಶ್ರೀ ವಿ. ಯಸ್. ಕುಡುವರ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ನೆರವೇರಿತು.

ನೋಟಿಸು

ಕಾಸರಗೋಡು ಮುನ್ಸಿಫ್ ಕೋರ್ಟಿನಲ್ಲಿ

O. S. No. 309/1960

ಪರಮೇಶ್ವರಿ ಹೆಂಗಸು — ವಾದಿಳು.

Vs.

ಬಸ್ತು ಕ್ರಾಸ್ತ — ಪ್ರತಿವಾದಿ.

ಪೆರ್ಡಾಲ ತಿನೇ ಗ್ರಾಮದ ಬಾಸುಮೂಲೆ ಎಂಬಲ್ಲಿರುವ ಇನಾಸ ಕ್ರಾಸ್ತರ ಮಗ ಪ್ರತಿವಾದಿ ಬಸ್ತು ಕ್ರಾಸ್ತರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ:—

ವಾದಿಳು ನಿಮ್ಮಿಂದ ಬರತಕ್ಕ ಗೇಣಿಯ ಬಗ್ಗೆ ನಿಮ್ಮ ಮೇಲೆ ಮಾಡಿದ ಮೇಲ್ಕಂಡ ದಾವೆಹರಜಿಯು ತಾ. 25-1-1961ಕ್ಕೆ ಆಯ್ಕೆ ತನ್ನಿಗೆ ಇಟ್ಟಿರುತ್ತದೆ. ಆ ದಿನ ನೀವು ಬೆಗಲು 11 ಘಂಟೆಗೆ ಕೋರ್ಟು ಮುಂದೆ ಹಾಜ್ರಾಗಿ ಉದಾಹರಿಸತಕ್ಕದ್ದು. ತಪ್ಪಿದ್ರೆ ಏಕಪಕ್ಷವಾಗಿ ತೀರ್ಮಾನಿಸಲಾದೀತು ಎಂಬ ಕಂಗ್ತಿ ಈ ಮೂಲಕ ತಿಳಿಸೋಣಾಗುತ್ತದೆ

K. S Venkappa Rai,
Advocate for Plaintiff.

Kasaragod, 2—1—1961.

ವರ್ಗ—ಊಳಿಗ

ಮೊದಲಾದ ಯಾವತ್ತೂ ತರದ ಎಕೌಂಟ್ ಪುಸ್ತಕಗಳು ವಿವಿಧ ಸೈಜುಗಳಲ್ಲಿ ದೊರೆಯುತ್ತವೆ.

ವಿಚಾರಿಸಿರಿ—

ನವಯುಗ ಪ್ರೆಸ್, ಉಡುಪಿ

(೫ನೇ ಪುಟದಿಂದ)

ಶಾಸ್ತ್ರಿಗಳು, ಪ್ರತಿನಿಧಿಗಳ ಪರವಾಗಿ ಶ್ರೀ ಜಿ. ವೆಂಕಟ ಸುಬ್ಬಯ್ಯನವರು ಸ್ವಾಗತ ಸಮಿತಿಯವರನ್ನು ಅಭಿನಂದಿಸಿದರು. ಸಮ್ಮೇಳನಾಧ್ಯಕ್ಷರು ಸಮಾರೋಪ ಭಾಷಣ ಮಾಡುತ್ತ, ಕನ್ನಡ ಸಾಹಿತ್ಯ ಪರಿ

ಸ್ವಾಗತ ಸಮಿತಿಯ ಉಪಾಧ್ಯಕ್ಷ
ಶ್ರೀ ಟಿ. ಎ. ನೈ.

* * *

ಷತ್ತು ಕನ್ನಡಿಗರ ಸಂಸ್ಥೆ. ಇದು ಸರಕಾರದ ನೆರವಿಲ್ಲದೆ ಕನ್ನಡಿಗರ ಬೆಂಬಲದಿಂದಲೇ ನಡೆಯಬೇಕು; ಇದಕ್ಕೆ ಕನ್ನಡಿಗರೂ ಪರಿಷತ್ತಿನ ಅಧಿಕಾರಿಗಳೂ ಮುಡಿಯಬೇಕು ಎಂದು ಹೇಳಿ, ಸ್ವಾಗತ ಸಮಿತಿಯು ಕಾರ್ಯವು ಸುಸಂಬದ್ಧವಾಗಿ, ಸುಯೋಗ್ಯವಾಗಿ ನಡೆಯುವಂತೆ

ಸ್ವಾಗತ ಸಮಿತಿಯ ಉಪಾಧ್ಯಕ್ಷ
ಡಾ| ಕೆ. ಎಲ್. ಪಿತಾಳೆ.

* * *

ಪ್ರಯತ್ನಪಟ್ಟುದಕ್ಕೆ ಅಧ್ಯಕ್ಷ ಮೂಳವಪ್ಪೆ, ಕಾರ್ಯದರ್ಶಿ ಕೆ. ಶಿ. ಹರಿದಾಸ ಭಟ್ಟ ಮೊದಲಾದವರನ್ನು ಅಭಿನಂದಿಸಿದರು. ಸ್ವಾಗತಸಮಿತಿಯ ಪರವಾಗಿ ಶ್ರೀ ಹರಿದಾಸ ಭಟ್ಟರು ಎಲ್ಲರಿಗೂ ವಂದನಾರ್ಪಣೆಗೈದರು.

ತದನಂತರ, ಶ್ರೀಮತಿ ಶಕುಂತಲಾ ಬಾಯಿ ಪಾಂಡುರಂಗರಾಯ ಶ್ರೀ ಸುಂದರಾಚಾರ್ಯರವರ ಕಾವ್ಯವಾಚನ, ಶ್ರೀ ವಿನ್ಸೆಂಟ್‌ರವರ ಜಲತರಂಗ, ಶ್ರೀ ಕೆ. ಆರ್. ಲಿಂಗಪ್ಪನವರ ಜಾನಪದ ಗೀತವಾಚನ, ಶ್ರೀಗಳಾದ ರಾಮಪ್ರಸಾದ್, ಪಂಚಾಕ್ಷರಪ್ಪ ಹಾಗೂ ಬೀಚಿಯವರ ಉಪನ್ಯಾಸಗಳು ನಡೆದುವು. ಶ್ರೀ ಅನಕೃ ಅಂತಿಮವಾಗಿ ಮಾತಾಡಿ, ಸಾಹಿತ್ಯ ಪರಿಷತ್ತಿನ ಸದಸ್ಯರಾಗಿ ಕನ್ನಡಿಗರು ಅದನ್ನು ಸಮೃದ್ಧಗೊಳಿಸುವಂತೆ ಕರೆಯಿತ್ತರು. ರಾತ್ರಿಯಲ್ಲಿ ಡಾ| ಬಾಲಕೃಷ್ಣ ಶೆಟ್ಟಿ ಮತ್ತು ಬಳಗದವರ ಭಾಗೂನಾಟಕ, ಹಾಗೂ ಪುತ್ತೂರಿನ ವಾದ್ಯ ಕಲಾವಿದರಿಂದ ಸೆಕ್ಸೋ ವಾದ್ಯವಾದನ ಕಾರ್ಯಕ್ರಮವು ನಡೆಯಿತು.

ಸ್ವಾಗತ ಸಮಿತಿಯ ಕಾರ್ಯದರ್ಶಿ
ಪ್ರೊ| ಕು. ಶಿ. ಹರಿದಾಸ ಭಟ್ಟ.

* * *

ಈನಡುವೆ, 'ಮಲೆನಾಡು', 'ಜ್ವಾಲಾಮುಖಿ' ಪತ್ರಿಕೆಗಳ ಸಾಹಿತ್ಯ ಸಮ್ಮೇಳನಾಂಕಗಳು ಶ್ರೀ ಅನಕೃರವರ ಹೆಸ್ತಗಳಿಂದ ಉದ್ಘಾಟಿತವಾಗಿದ್ದುವು. ಶ್ರೀ ಕರ್ಲಮಂಗಲಂ ಶ್ರೀಕಂಠಯ್ಯನವರು ಸಿರಿಭೂವಲಯದ ಮಹತ್ವದ ಬಗ್ಗೆ ಮಾತಾಡಿದ್ದರು. ಶ್ರೀ ಪಿಪ್ಪೇಸಾಮಿಯವರು ಇಲ್ಲೇ ಬಿಡಿಸಿದ್ದ 'ಮಧ್ವಸರೋವರ'ದ ಕಾಲಕೃತಿಯನ್ನು ಅನಕೃಂಗೆ ಕಾಣಿಕೆಯಾಗಿತ್ತರು. ಮುದ್ರಣ ಮಂಟಪವನ್ನು ಅಲಂಕರಿಸಿದ್ದ ಕನ್ನಡ ಸಾಹಿತ್ಯಕಾರರ ತೈಲ ಚಿತ್ರಗಳು ಎಲ್ಲರ ಗಮನವನ್ನು ಸೆಳೆದಿದ್ದುವು. ಇವುಗಳ ನಿರ್ಮಾತರಾದ ಉಡುಪಿ ಟೋರ್ಡ್ ಹೈಸ್ಕೂಲಿನ ಚಿತ್ರಕಲಾಧ್ಯಾಪಕ ಶ್ರೀ ಬಿ. ಪಿ. ಬಾಯರಿಯವರ ಬಗ್ಗೆ ಅನಕೃ ಸದಭಿಪ್ರಾಯದ ಮಾತುಗಳನ್ನಾಡಿ ಹಸ್ತಚಿತ್ರ ಕಲೆಗೆ ಪ್ರೋತ್ಸಾಹ ನೀಡುವಂತೆ ವಿನಂತಿಸಿದ್ದರು.

ಸಾಹಿತ್ಯಕಾರ ಹಾಗೂ ಸಾಹಿತ್ಯ ಪ್ರೇಮಿಗಳಿಂದ ಕೂಡಿದ ಸ್ವಾಗತ ಸಮಿತಿಯ ಕಾರ್ಯದಕ್ಷತೆಯಿಂದ, ಸಾಹಿತ್ಯ ಪ್ರೇಮಿಗಳ ಸಹಯೋಗದಿಂದ ಈನೆಯ ಸಾಹಿತ್ಯ ಸಮ್ಮೇಳನವು ರಾಜಕಾರಣೆಗಳ ಮೆರವಣಿಗೆಯಾಗದೆ ಸಾಹಿತ್ಯಕಾರರ ಸಮ್ಮೇಳನವೇ ಆಗಿತ್ತೆಂದು ಹೇಳಬಹುದು. ಸಮ್ಮೇಳನದಲ್ಲಿ ನಡೆದಿದ್ದ ವಿವಿಧ ಗೋಷ್ಠಿಗಳು ಪ್ರಭಾವಪೂರ್ಣವಾಗಿದ್ದುವೇನೋ ನಿಜ. ಆದರೆ, ಹೆಚ್ಚಿನ ಪ್ರಬಂಧಕಾರರು ತಾವು ತಯಾರಿಸಿದ ಪ್ರಬಂಧಗಳನ್ನು ಸಂಪೂರ್ಣ ಓದುವ ಅವಕಾಶ ಕಡಿಮೆಯಾಗಿತ್ತು; ಮುದ್ರಣದ ಪ್ರತಿಗಳು ಕಾರಣಾಂತರಗಳಿಂದ ತಡವಾಗಿದುದರಿಂದ ಪ್ರಬಂಧಗಳ ಉಪಯೋಗ ಪರ್ಯಾಪ್ತ ಪ್ರಮಾಣದಲ್ಲಿ ಮಾಡಿಕೊಳ್ಳದಂತಾಯಿತು. ಆದರೂ ಮುಂದಿನ ಸಮ್ಮೇಳನಗಳಿಗೆ ಈ ಈನೆಯ ಸಮ್ಮೇಳನವು ಸೂಕ್ತ ಮಾರ್ಗದರ್ಶನ ಮಾಡಿದೆ; ಪರಿಷತ್ತು ಮತ್ತು ಕನ್ನಡಿಗರ ನಡುವೆ ಸಮಧುರ ಬಾಂಧವ್ಯವಿರಬೇಕೆಂಬುದನ್ನು ತೋರಿಸಿಕೊಟ್ಟಿದೆ ಇದರಿಂದ ಸರಿಯಾದ ಪಾಠವನ್ನು ಎಲ್ಲರೂ ಕಲಿತುಕೊಳ್ಳುವುದು ಅವಶ್ಯವಿದೆ.

ಪುಸ್ತಕ ವಿಮರ್ಶೆ

(ವಿಮರ್ಶೆಗಾಗಿ ಪುಸ್ತಕಗಳನ್ನು ಕಳುಹಿಸುವವರು ಎರಡೆರಡು ಪ್ರತಿಗಳನ್ನು ಕಳುಹಿಸಬೇಕಾಗಿ ವಿನಂತಿ.—ಸಂ. ನ.)

ಪರಮಾಣು ಶಕ್ತಿ ಮತ್ತು ಅದರ ಶಾಂತಿ ಕಾಲದ ಉಪಯೋಗಗಳು: ಲೇಖಕರು ಶ್ರೀ ಯು. ಲಕ್ಷ್ಮೀನಾರಾಯಣ ಆಚಾರ್ಯ, ಎಂ. ಎ., ಎಲ್. ಟಿ. ಪ್ರಕಾಶಕರು ಶ್ರೀ ಯು. ಗೋಪಾಲಕೃಷ್ಣಾಚಾರ್ಯ, ತೆಂಕಪೇಟೆ, ಉಡುಪಿ. ಪುಟಗಳು: ೧೯೫. ಬೆಲೆ: ರೂ. ೫—೦೦.

ಮಾನವನ ದೈನಂದಿನ ಜೀವನದಲ್ಲಿ ವಿಜ್ಞಾನವು ಮಹತ್ವದ ಪ್ರಭಾವ ಬೀರುತ್ತದೆ; ವಿಜ್ಞಾನವಾದರೂ ದಿನದಿಂದ ದಿನಕ್ಕೆ ಮುಂದುವರಿದು, ಅದ್ಭುತ ಆವಿಷ್ಕಾರಗಳಿಗೆ ಜನ್ಮವೀಯುತ್ತಿದೆ. ದ್ವಿತೀಯ ಮಹಾ ಯುದ್ಧದಲ್ಲಿ ಮಿತ್ರರಾಷ್ಟ್ರಗಳಿಗೆ ಜಯವನ್ನು ತಂದುಕೊಟ್ಟ ಅಣುಶಕ್ತಿಯಿಂದು ಅದ್ವಿತೀಯ ಪ್ರಭಾವ ಬಾಲಿಯಾಗಿದೆ. ಅಣ್ವಸ್ತ್ರ ಸ್ಫೋಟನದ ಪರೀಕ್ಷೆಗಳು ಒಂದೆಡೆ ಜರಗುತ್ತಿರುವಂತೆಯೇ ಶಾಂತಿಗಾಗಿ ಅಣುಶಕ್ತಿಯನ್ನು ಬಳಸಿಕೊಳ್ಳಬೇಕೆಂಬ ವಾದವೂ ಎದ್ದೇಳ ತೊಡಗಿದೆ. ಅದ್ಭುತ ಪ್ರಾಕೃತಿಕ ಶಕ್ತಿಯನ್ನು ವಿಜ್ಞಾನಿಗಳು ಕಂಡು ಹಿಡಿದರಾದರೂ ಅದನ್ನು ಮೊತ್ತಮೊದಲು ಬಳಸಿಕೊಳ್ಳುವ ಭಾಗ್ಯವು ಯುದ್ಧೋಚ್ಚಟಗಳದ್ದಾಯಿತು. ಇಂತಹ ಪರಮಾಣು ಶಕ್ತಿಯ ಬಗ್ಗೆ ಆಧುನಿಕ ಭೌತಶಾಸ್ತ್ರದಲ್ಲಿ ನಡೆಸಿದ ವಿವಿಧ ಪ್ರಯೋಗಗಳನ್ನೂ ಶಾಸ್ತ್ರೀಯ ಮೂಲ ಭಾವನೆಯನ್ನೂ ಈ ಪುಸ್ತಕದಲ್ಲಿ ಸವಿವರವಾಗಿ ವಿವರಿಸಲಾಗಿದೆ. ಪರಮಾಣುಶಕ್ತಿಯನ್ನು ಶಾಂತಿ ಕಾಲದಲ್ಲಿ ಜನತೆಯ ಹಿತಕ್ಕಾಗಿ ಯಾವ ರೀತಿಯಾಗಿ ಬಳಸಿಕೊಳ್ಳಬಹುದು ಎಂಬುದರ ವಿವರಣೆಯೂ ನಮಗಿಲ್ಲಿ ದೊರೆಯುತ್ತದೆ. ಭೌತವಿಜ್ಞಾನದ ಕಬ್ಬಿಣ ವನ್ನು ತಿಳಿದವರು ಸುಲಭದಲ್ಲಿ ಅರ್ಥಮಾಡಿಕೊಳ್ಳುವಂತಿಲ್ಲವಾದರೂ ಅರಿಸಿಕೊಳ್ಳಬಹುದಾದ ವಿಷಯ ನಿರೂಪಕ ಗ್ರಂಥವಿದು. ಕನ್ನಡದಲ್ಲಿ ವೈಜ್ಞಾನಿಕ ಗ್ರಂಥಗಳು ವಿರಳ ಮತ್ತು ಭೌತ ಶಾಸ್ತ್ರಕ್ಕೆ ಸಂಬಂಧಿಸಿದುವು ಅಪರೂಪ. ಪರಮಾಣುವಿನ ಬಗ್ಗೆ ಬರೆದ ಪುಸ್ತಕಗಳು ಅತಿ ವಿರಳ; ಇಲ್ಲವೆಂದರೂ ಸಲ್ಲುವುದು. ಆಧುನಿಕ ಸಂಶೋಧನೆ—ಪ್ರಯೋಗಗಳ ಜ್ಞಾನವು ಪ್ರಾದೇಶಿಕ ಭಾಷಾ ಮಾಧ್ಯಮದಲ್ಲಿಯೂ ಆಗುವುದು ಅಪೇಕ್ಷಣೀಯವೆಂಬುದರಿಂದ ಕನ್ನಡಿಗರಿಗೆ ಪರಿಚಿತರಾದ ಸ್ಥಳೀಯ ಎಂ. ಜಿ. ಎಂ. ಕಾಲೇಜಿನ ಭೌತಶಾಸ್ತ್ರ ಪ್ರಾಧ್ಯಾಪಕರಾದ ಶ್ರೀ ಆಚಾರ್ಯರು ತಾವು ಬಹು ಪರಿಶ್ರಮಪಟ್ಟು ಈ ಗ್ರಂಥವನ್ನು ಬರೆಯುವ ಸಾಹಸ ಮಾಡಿದ್ದಾರೆ. ೧೯೫೫-೫೬ರಲ್ಲಿ ಮದ್ರಾಸು ವಿಶ್ವವಿದ್ಯಾಲಯವು ಪ್ರಾದೇಶಿಕ ಭಾಷೆಗಳಲ್ಲಿನ ವೈಜ್ಞಾನಿಕ ಗ್ರಂಥಗಳಿಗೆ ಬಹುಮಾನಸೀಡುವ ಸ್ಪರ್ಧೆಯಲ್ಲಿ ಈ ಪುಸ್ತಕಕ್ಕೆ ಒಂದು ಮಾನ ಸಿಕ್ಕಿತ್ತು. ಈ ವರ್ಷ ಇದೇ ಹೊತ್ತಗೆಗೆ ಕರ್ನಾಟಕ ಶಿಕ್ಷಣ ಸಮಿತಿಯ ವಿಶೇಷ ಪಾರಿತೋಷಕವು ಲಭಿಸಿದೆ. ೧೯೫೫ರ ಸುಮಾರಿಗೆ ಬರೆದ ಈ ಗ್ರಂಥವು ಇಂದಿಗೂ ಅಪೂರ್ಣವಾಗಿಬಾರದೆಂದು ಅಂದಿನಿಂದಿನ ವರೆಗೆ ಪರಮಾಣು ಶಕ್ತಿಯ ಬಗ್ಗೆ ನಡೆದ ಸಂಶೋಧನೆಗಳನ್ನು ಪರಿಶಿಷ್ಟದಲ್ಲಿ ಸೇರಿಸಲಾಗಿದೆ, ಸ್ವಯಂ ಪಂಡಿತರಾದ ಆಚಾರ್ಯರು ತಮ್ಮ ಪರಿಶ್ರಮದ ಫಲವನ್ನು ಅಭಿರುಚಿಯುಳ್ಳವರಿಗೂ ಉಣಿಸುವ ಸಲುವಾಗಿ ಮಾಡಿದ ಸಾಹಸಕ್ಕೆ ತಕ್ಕ ಪ್ರತಿಫಲವನ್ನು ಕನ್ನಡಿಗರು ಕೊಡಬೇಕು. ಕರ್ನಾಟಕದ ಎಲ್ಲ ಪುಸ್ತಕ ಭಂಡಾರಗಳೂ ಶಾಲೆ ಕಾಲೇಜುಗಳೂ ಈ ಅಪೂರ್ವ ಪುಸ್ತಕಗಳನ್ನು ಸಂಗ್ರಹಿಸಿ ತಮ್ಮ ಸದಸ್ಯರಿಗೆ ಪರಿಚಯ ಮಾಡಿಕೊಡಬೇಕು. ಮುನ್ನುಡಿಕಾರ ಡಾ. ಕೆ. ಎಲ್. ಪಿತಾಳೆರಂತೆ ಲೇಖಕರಿಂದ ಇನ್ನೂ ಇಂತಹ ಪುಸ್ತಕಗಳು ಹೊರಬರಲೆಂದು ಆಶಿಸಬಹುದು.

ನೋಟೀಸು

ಕಾಸರಗೋಡು ಮು. ಕೋರ್ಟಿನಲ್ಲಿ
ಮಂಗಳೂರು ಡಿ. ಮು. ಕೋರ್ಟು

O. S. 478/1958
R. E. A. 352/1960

Mrs. ರಮಾ ಬಾಯಿ —ಅರ್ಜಿದಾರಳು,
ಮತ್ತು
ಕೆ. ಕಮಲಾಕ್ಷ ಮಲ್ಯ ಪಗೈರೆರು
—ರೆಸ್ಪಾಂಡೆಂಟರು.

ಕೃಷ್ಣ ಮಲ್ಯರ ಮಕ್ಕಳು ೧ನೇ ರೆಸ್ಪಾಂಡೆಂಟ್—ಗಣೇಶ ಮಲ್ಯ—ಮತ್ತು ೨ನೇ ರೆಸ್ಪಾಂಡೆಂಟ್-ಲಕ್ಷ್ಮೀನಾರಾಯಣ ಮಲ್ಯ ಇವರಿಗೆ-

ಮೇಲ್ಕಂಡ ಅರ್ಜಿದಾರಳು ದಾಕ್ಲುಮಾಡಿದ ಅರ್ಜಿಯು ತಾ. 20—1—1961ಕ್ಕೆ ನಿಮ್ಮ ಮುದ್ದು ಯಾ ವಕೀಲ ಮುಖಾಂತ್ರ ಹಾಜರಾತಿ ಬಗ್ಗೆ ಇಟ್ಟಿರುತ್ತದೆ. ಆ ದಿವಸ ಹಾಜರಾಗದಿದ್ದರೆ ನಿಮ್ಮನ್ನು ತಿಳ್ಯಾಮಾಡಿ ಅರ್ಜಿ ತೀರ್ಮಾನಮಾಡಲಾದೀತು.

(By Order of Court)
K Narayana Nayak,
Advocate for Petitioner.

ಕಾಸರಗೋಡು 30—12—1960

ಆಧ್ಯಾತ್ಮ ವಿಚಾರ

ಭಗವದ್ಗೀತೆಯ ಪ್ರಕಾಶ

ಕರ್ಮ ತ್ಯಾಗ ಮತ್ತು ನಿಷ್ಕಾಮ ಕರ್ಮಗಳೆಂದೂ ಮುಕ್ತಿಯನ್ನು ಸೇರುವ ಎರಡು ರಾಜ ಮಾರ್ಗಗಳು. ಆದರೂ ಕರ್ಮ ತ್ಯಾಗದ ಮಾರ್ಗಕ್ಕಿಂತ ನಿಷ್ಕಾಮ ಕರ್ಮ ಯೋಗವು ಉತ್ತಮವಾದುದು.

ಶ್ರೀ ಎಂ. ಬಿ. ಶಂಕರ ರಾವ್, ಐ. ಎ. ಎಸ್. (ನಿವೃತ್ತ)

ಕಿರಣ ೫: ತ್ಯಾಗಯೋಗ

ಅರ್ಜುನ:—ಕೃಷ್ಣನೇ, ಒಂದುಬಾರಿ, ಕರ್ಮಗಳನ್ನು ಬಿಟ್ಟು ತ್ಯಾಗಿಯಾಗುವುದು ಮಾನವಶ್ರೇಷ್ಠತೆ ಎನ್ನುವೆ. ಇನ್ನೊಂದಾರಿ ನಿಷ್ಕಾಮಕರ್ಮವೇ ಸಂಪೂರ್ಣ ಯೋಗವೆನ್ನುವೆ. ಇವು ಒಂದಕ್ಕೊಂದು ವ್ಯತಿರಿಕ್ತವಾಗಿವೆ. ಖಂಡಿತವಾಗಿ, ಇವೆರಡರಲ್ಲಿ ಯಾವುದು ಉತ್ತಮ ಮಾರ್ಗವು ಎಂಬುದನ್ನು ತಿಳಿಸು.

ಭಗವಾನ:—ಕರ್ಮಗಳನ್ನು ತ್ಯಜಿಸಿ ತ್ಯಾಗಿಯಾಗುವುದೂ ಸರಿ, ನಿಷ್ಕಾಮ ಕರ್ಮಗಳನ್ನು ಮಾಡುತ್ತಿರುವುದೂ ಸರಿ. ಈ ಎರಡೂ ದಾರಿಗಳು ಮುಕ್ತಿಯನ್ನು ಸೇರುವ ಹೆದ್ದಾರಿಗಳು. ಆದರೆ ಸಂಪೂರ್ಣ ತ್ಯಾಗಕ್ಕಿಂತಲೂ ನಿಷ್ಕಾಮಕರ್ಮವೇ ಉತ್ತಮವು. ದುರಾಶೆ ಮತ್ತು ಆಸೂಯೆಯಿಲ್ಲದ ನಿಷ್ಕಾಮ ಕರ್ಮಿಯು ತ್ಯಾಗಿಗೆ ಸರಿಸಮಾನನು. ಇವೆರಡು ದಾರಿಗೂ ಒಂದೇ ಎಂದು ಗ್ರಹಿಸುವವನು ಯಾವ ವಿಧದ ಸಂಶಯಕ್ಕೂ ಒಳಗಾಗನು. ಅಜ್ಞಾನಿಗಳು ಮಾತ್ರ ಈ ಎರಡು ಮಾರ್ಗಗಳು ಬೇರೆ ಬೇರೆ ಎಂದು ಸಂಶಯಿಸುವರು. ತ್ಯಾಗಿಯಿಂದಾಗುವ ಯೋಗವು, ನಿಷ್ಕಾಮಕರ್ಮಿಯಿಂದಲೂ ಆಗುವುದು. ಮುಕ್ತಿಯು ಇಬ್ಬರಿಗೂ ಲಭಿಸುವುದು. ತ್ಯಾಗಯೋಗವು ಬಹಳ ಕಷ್ಟದ ದಾರಿ. ನಿಷ್ಕಾಮಕರ್ಮಗಳಿಂದ ಬೇಗನೇ ಪರಮಾತ್ಮನಲ್ಲಿ ಐಕ್ಯವಾಗಬಹುದು. ನಿಷ್ಕಾಮಕರ್ಮಿಯು ಇತರರನ್ನು ತನ್ನಂತೆಯೇ ಕಾಣುವನು. ತನ್ನ ಕರ್ಮಗಳಿಂದ ಇತರರನ್ನು ಕೂಡ ಪರಿಶುದ್ಧಿಸುವನು. ಅವನು ನೋಡುವಾಗಲೂ, ಕೇಳುವಾಗಲೂ, ಮುಟ್ಟುವಾಗಲೂ, ಘ್ರಾಣಿಸುವಾಗಲೂ, ನಡೆಯುವಾಗಲೂ, ಉಣ್ಣುವಾಗಲೂ, ಶ್ವಾಸವನ್ನಾಡಿಸುವಾಗಲೂ, ನಿದ್ರಿಸುವಾಗಲೂ, "ನನ್ನಿಂದೇನೂ ಆಗದು", ಎಂದೇ ಭಾವಿಸುವನು. ಇಂದ್ರಿಯಗಳಿಗೂ, ದೇಹಕ್ಕೂ, ಮಾತ್ರ ಸಂಬಂಧವಲ್ಲದೆ, ಆತ್ಮಕ್ಕೂ, ಇಂದ್ರಿಯಗಳಿಗೂ ಸಂಬಂಧವಿಲ್ಲವೆಂದು ತಿಳಿಯುವನು. ತಾನು ಮಾಡುವ ಸಕಲ ಕರ್ಮಗಳನ್ನೂ ಭಗವಂತನ ಪಾದದಡಿಗಳಿಗೆ ಸಮರ್ಪಿಸುವನು. ನೀರು ತಾನರೆಯನ್ನು ತೊಯಿಸುವುದಿಲ್ಲ. ಪಾಪವು ನಿಷ್ಕಾಮ ಕರ್ಮಿಗಳಿಗೆ ತಾಗುವುದಿಲ್ಲ. ನಿಷ್ಕಾಮ ಕರ್ಮಿಗಳ ಮನಸ್ಸು ಯಾವಾಗಲೂ ಶುದ್ಧವಾಗಿಯೇ ಉಳಿಯುವುದು. ಅವರಲ್ಲಿ ಕ್ರಮೇಣ ಶಾಂತಿಯು ನೆಲಸುವುದು. ಫಲಾಪೇಕ್ಷೆಯವನು ಮಾತ್ರ ಇಂದ್ರಿಯಗಳಿಂದ ಕಾಡಲ್ಪಡುವನು. ಆತನಲ್ಲಿ ಜ್ಞಾನವು ಉದಿಸದು. ಜ್ಞಾನದ ಪ್ರಕಾಶವು ರವಿಯ ಪ್ರಕಾಶದಷ್ಟೆ ಬಲ ಉಳ್ಳದ್ದು. ಪರಮಾತ್ಮನ ಧ್ಯಾನವನ್ನೆ ಗುರಿಯಾಗಿಟ್ಟುಕೊಂಡು, ಅವನಲ್ಲಿ ಸಂಪೂರ್ಣ ಶರಣನಾಗಿ, ಅವನ ನಾಮದಿಂದಲೇ ಸಂತೋಷವನ್ನು ಪಡೆದು, ಬೇರೆಯಾವ ಫಲವನ್ನೂ ನೆನೆಸದೆ ಇರುವ ಮಾನವನು ಪಾಪಗಳನ್ನು ತಪ್ಪುಭಾವದಿಂದ ಮಾಡಿದರೂ, ಅವುಗಳಿಂದ ಅವನಿಗೆ ಯಾವ ಬಾಧೆಗಳೂ ಬಾರದು. ಯೋಗಿಗಳು ಪರಮಾತ್ಮನನ್ನು ಮಾನವನಲ್ಲೂ, ಪಶುವಿನಲ್ಲೂ, ಎಲ್ಲಾ ಜೀವಜಂತುಗಳಲ್ಲೂ ಕಾಣುವರು. ಪರಮಾತ್ಮನೆಂದರೆ ಶುದ್ಧ ಹೊಂದಿದ ಆತ್ಮ. ಆತನು ಎಲ್ಲರಲ್ಲೂ ಇರುವನು. ಆತನಲ್ಲಿ ಲೀನನಾಗಿರುವ ಮಾನವನು ಸುಖ ಬಂದಾಗ ಹಿಗ್ಗನು, ಕಷ್ಟ ಬಂದಾಗ ಕುಗ್ಗನು. ಬಾಹ್ಯ ವಸ್ತುಗಳ ಮೋಹದಿಂದ ಹೊರ ಬಂದವನು ತನ್ನ ಆತ್ಮದಲ್ಲಿ ಶುದ್ಧತೆಯನ್ನು ನೆಲೆಗೊಳಿಸುವನು. ಕಾಲಕ್ರಮೇಣ ಆತನು ಪರಮಾತ್ಮನಲ್ಲಿ ಐಕ್ಯನಾಗಿ ಸುಸ್ಥಿರವಾದ ಮುಕ್ತಿಯನ್ನು ಪಡೆಯುವನು. ತನ್ನ ದೇಹವನ್ನು ತೊರೆಯುವ ಮೊದಲೇ ದುರಾಶೆಗಳನ್ನೂ, ಕೋಪವನ್ನೂ, ತೊರೆದು ಬಿಟ್ಟ ಪುಣ್ಯಾತ್ಮನು ಸಂಪೂರ್ಣ ಯೋಗಿಯಾಗುವನು. ಆತನು ದಿವ್ಯ ಜ್ಯೋತಿಯಿಂದ ಪ್ರಕಾಶಿಸುವನು. ಕೊನೆಗೆ ಪರಮಾತ್ಮನಲ್ಲಿ ಸೇರುವನು. ಆತನು ಮಾಡಿದ ಪಾಪಗಳು ನಾಶವಾಗಿ, ಆತನ ಸಂಶಯಗಳು ತೊಲಗಿ, ಮನಸ್ಸು ಸ್ಥೈರ್ಯವನ್ನು ಹೊಂದಿ, ಆತನಲ್ಲಿ ಸಂಪೂರ್ಣ ಶಾಂತಿಯು ಉದ್ಭವವಾಗುವುದು. ಪರಮಾತ್ಮನು ಅವನಲ್ಲಿ ಕೂಡುವನು. ಅರ್ಜುನನೇ, ನನ್ನನ್ನು ಶೋಧಿಸಿ ತಿಳಿದ ಯೋಗಿಯು ಸರ್ವರೂ ಸುಖಿಗಳಾಗಿ ಬಾಳಬೇಕೆಂಬ ನಿಯಮವನ್ನು ಹಿಡಿದು, ಮೊದಲು ಕರ್ಮಯೋಗಿಯಾಗಿಯೂ, ಅನಂತರ ಕ್ರಮೇಣ ತ್ಯಾಗಿಯಾಗಿಯೂ, ಎಲ್ಲವನ್ನೂ ಬಿಟ್ಟು, ನನ್ನಲ್ಲಿ ಸಂಪೂರ್ಣ ಭಕ್ತಿಯನ್ನು ಇಟ್ಟು ಲೋಕವನ್ನು ಬೆಳಗಿಸುವನು. ಕರ್ಮಯೋಗದಿಂದ ತ್ಯಾಗಯೋಗವು ತನ್ನಿಂದ ತಾನೇ ಒದಗುವುದು.

ವಿಚಾರವರ್ಷ

(೩ನೇ ಪುಟದಿಂದ)

ಧೂಮಕೇತುಗಳ ಕೇಂದ್ರಗಳು ಅಥವಾ ತಲೆಗಳು ಕೇವಲ ಮಬ್ಬಿನಂತಹ ಪದಾರ್ಥವಲ್ಲವೆಂದು ಶಾಸ್ತ್ರವೇತ್ತರಿಗೆ ಗೊತ್ತು. ಏತಕ್ಕೆಂದರೆ, ಧೂಮಕೇತು ಸೂರ್ಯನನ್ನು ಸಮೀಪಿಸಿದಾಗ ಸೂರ್ಯನ ಆಕರ್ಷಣೆಗೆ ಅದರ ಕೇಂದ್ರವು ಚೆಲ್ಲಾಪಿಲ್ಲಿದರಾಗಿ ಹೋಗುವುದಿಲ್ಲ. ಆದರೆ ಇತ್ತೀಚಿನ ವರೆಗೆ ಶಾಸ್ತ್ರವೇತ್ತರು ಧೂಮಕೇತುಗಳ ಕೇಂದ್ರಗಳನ್ನು ಪದಾರ್ಥ ಕಣಗಳ ಪುಂಜಗಳೆಂದು ಸರಿಗಣಿಸಿದರು. ಆದರೆ ಅವರೊಂದು ಸಂಗತಿಯನ್ನು ಮರೆತರು. ಅವರು ಊಹಿಸುವಂತ ಹುತ್ತದಲ್ಲಿ ಕಣಗಳ ಮಧ್ಯೆ ಸಂಘರ್ಷಣೆಯೊಗುವ ಉಷ್ಣವು ಉತ್ಪತ್ತಿಯಾಗಿ ಕಣಗಳೆಲ್ಲಾ ಕಾಲಕ್ರಮದಲ್ಲಿ ಘನ ಪದಾರ್ಥವಾಗಿ ಕೂಡಿಕೊಳ್ಳುತ್ತವೆ. ಹಾಗೆ ಕೂಡಿಕೊಂಡುವೇ ಧೂಮಕೇತುಗಳ ಕೇಂದ್ರಗಳು. ಇದರಲ್ಲಿ ಘನರೂಪ ಹೊಂದಿದ ವಾಯುಗಳೂ, ಅವುಗಳ ನಡುವೆ ಶಿಲಾ ಶಕಲಗಳೂ ಇವೆ ಇವುಗಳ ನೀಳ ಕೆಲವು ಫಲಾಂಗಗೋ ಮೈಲುಗಳೋ ಇರಬಹುದು.

ನಾವು ಗಮನಿಸಲು ಅವಕಾಶವಿಲ್ಲದ ಬಾಲದ ಚುಕ್ಕೆಗಳು ಸೌರ ಕೂಟದಲ್ಲಿ ಸಾವಿರಾರು ಸಂಖ್ಯೆಗಳಲ್ಲಿವೆ. ಇವು ಸಮೀಪ ಗ್ರಹಗಳ ಪ್ರಾಂತಕ್ಕೆ ಬಾರವು. ಅವೆಲ್ಲಾ ಸೂರ್ಯನಿಗೆ ಬಹಳ ದೂರದಲ್ಲಿ ತಿರುಗುತ್ತವೆ. ಅವುಗಳಿಗೆ ಸೂರ್ಯಾಕರ್ಷಣೆ ಕಡಿದಿರುವ ಕಾರಣದಿಂದ ಅನೇಕ ನೂರು ಕೋಟಿ ವರ್ಷಗಳ ವರೆಗೆ ಅವುಗಳ ಕೇಂದ್ರಗಳಲ್ಲಿ ಘನೀಭವಿಸಿರುವ ವಾಯು ಪದಾರ್ಥವು ಸ್ವಲ್ಪವೂ ಜಿದುಗುವುದಿಲ್ಲ. ಒಮ್ಮೆಮ್ಮೆ ಸಮೀಪದಲ್ಲಿರುವ ನಕ್ಷತ್ರಗಳ ಪ್ರಭಾವದಿಂದ ಇವು ಸಂಚರಿಸುವ ಕಕ್ಷೆಗಳು ಮಾರುವುದುಂಟು. ಈ ಮಾರ್ಪಾಡಿನ ಫಲಿತವಾಗಿ ಇವು ಸೂರ್ಯನಿಗೆ ಹತ್ತಿರವಾಗಿ ಬರುವಂತಾದರೆ, ಆಗ ಇವುಗಳ ಕೇಂದ್ರಗಳಿಂದ ವಾಯುಗಳು ಮೇಲಕ್ಕೆ ಚಿಮ್ಮಿಕೊಂಡು ಬರುತ್ತವೆ. ಆಗ ಇವುಗಳ ದಾರಿ ಅತಿದೀರ್ಘವಾಗಿ ಬಾಲದಾಕಾರವಾಗಿ ನಮಗೆ ಗೋಚರಿಸುತ್ತದೆ.

ಆದರೆ ಗ್ರಹಗಳ ಆಕರ್ಷಣೆಯಿಂದ ಇವುಗಳ ಕಕ್ಷೆಗಳು ಸಂಕುಚಿತವಾಗುತ್ತವೆ. ಮುಖ್ಯವಾಗಿ ಧೂಮಕೇತು ಗುರುಗ್ರಹವನ್ನು ಸಮೀಪಿಸಿದಾಗ ಅದರ ಮಾರ್ಗದಲ್ಲಿ ಬದಲಾವಣೆ ಬಹಳ ಸ್ಪಷ್ಟವಾಗಿ ಕಾಣಿಸುತ್ತದೆ. ಹೀಗೆ ಗುರುವಿಗೆ ಸಮೀಪ ಬಂದು ಸಣ್ಣ ಸಣ್ಣ ವಲಯಗಳಲ್ಲಿ ತಿರುಗುವ ಅನೇಕ ಧೂಮಕೇತುಗಳಿವೆ.

ಚಿಕ್ಕ ವಲಯಗಳಲ್ಲಿ ತಿರುಗುವ ಧೂಮಕೇತುಗಳು ತಮ್ಮ ಕೇಂದ್ರಗಳಲ್ಲಿರುವ ವಾಯು ಪದಾರ್ಥವನ್ನು ಬಹಳ ಮಟ್ಟಿಗೆ ಕಳೆದುಕೊಳ್ಳುತ್ತವೆ. ಅದರೊಂದಿಗೆ ಶಿಲಾ ಶಕಲಗಳು ಕೂಡಾ ಸ್ವಲ್ಪ ಮಟ್ಟಿಗೆ ಹೋಗಿ, ಉಳಿದುವು ಕವಚದಂತೆ ಏರ್ಪಟ್ಟು, ಹುದುಗಿ ಹೋದ ವಾಯು ಪದಾರ್ಥವನ್ನು ಸಂರಕ್ಷಿಸಿಕೊಳ್ಳುತ್ತವೆ.

ಧೂಮಕೇತುವಿನ ಕೇಂದ್ರದಿಂದ ಹೊರಟ ಪದಾರ್ಥವು ಧೂಮಕೇತು ಹೋದ ಮಾರ್ಗದ ಬೆಂಬತ್ತಿಕೊಂಡೇ ಹೋಗುತ್ತದೆ. ಈ ಪದಾರ್ಥವು ಭೂಮಿಗೆ ಸಮೀಪ ಬಂದಾಗ "ಉಲ್ಕಾವರ್ಷಣ" ವುಂಟಾಗುತ್ತದೆ.

ಧೂಮಕೇತುವಿನ ಕೇಂದ್ರಗಳಲ್ಲಿ ಕರಡು ಕಟ್ಟಿಕೊಂಡಿರುವ ವಾಯುಗಳಲ್ಲಿ ಮೀಥೇನ್, ಅಮೋನಿಯಾ, ನೀರು, ಕರಿಯ ಮಿಲವಾಯುವೊದಲಾದುವಿವೆ. ಇವುಗಳ ಪಾಲು ಹೆಚ್ಚುಕಡಮೆ ದೂರ ಗ್ರಹಗಳಲ್ಲಿರುವಷ್ಟೇ ಇರುತ್ತವೆ. ಇವುಗಳನ್ನು ನೋಡಿದರೆ ದೂರಗ್ರಹಗಳು ಉತ್ಪತ್ತಿಯಾದ ಆದಿಮೇಘ ಭಾಗದಿಂದಲೇ ಇವು ಕೂಡಾ ಉತ್ಪತ್ತಿಯಾದುವೆಂದು ನಾವು ತಿಳಿದುಕೊಳ್ಳಬಹುದಾಯಿತು.

(ಮುಂದಿನವಾರ: ಭೂಮಿಯ ಒಳಭಾಗ)

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ, ಪ್ರತಿಯೊಬ್ಬರಿಗೂ ಅತ್ಯುಪಯುಕ್ತವಾದ ಹೊಸ ಪುಸ್ತಕ

LETTER WRITING MADE EASY

ಸುಲಭದಲ್ಲಿ ಪತ್ರಲೇಖನ

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.

ಬೆಲೆ ರೂ 1-4-0 (1=25).

ಮನೆಯೆಂದಾದಲ್ಲಿ ಇರಲೇಬೇಕಾದ ಗೃಹವೈದ್ಯ

ಮನೆ ಮದ್ದು

ನಬರೆದವರು: ಡ್ಯಾರ್ ಕೊರಡ್ಕಲ್ ವೆಂಕಟ್ರಾವ್, ಎಲ್. ಐ. ಎಮ್

ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಯಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ. ಹೆರಿಗೆ ವಿಧಾನ ಸವಿಸ್ತಾರವಾಗಿ ಕೊಡಲ್ಪಟ್ಟಿದೆ. ಬೆಲೆ ರೂ. ಎರಡು.

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
ದಿ| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

(ENGLISH MADE EASY)

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ. ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು.

ಬೆಲೆ: ರೂ. ಎರಡು. ಉತ್ತಮ ಪ್ರತಿ: ರೂ. ಎರಡೂವರೆ

ವಿ. ಸೂ.—ಅಯಾಯ ಪುಸ್ತಕದ ಬೆಲೆಯೊಂದಿಗೆ ಟಪ್ಪಾಲು ಖರ್ಚಿಗಾಗಿ 0=25 N.P ಸೇರಿಸಿ ಮನಿಯಾರ್ಡರು ಮಾಡಿದರೆ ಪುಸ್ತಕಗಳಿಸಿಲಾಗುವುದು.

ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ನಿಗ[illegible]ರೆ ನಮಗೆ ಬರೆಯಿರಿ.

ನವಭಾರತ ಪುಸ್ತಕ ಭಂಡಾರ, ಉಡುಪಿ

ಕನ್ನಡ ಪುಸ್ತಕಗಳಿಗೆ—

ನವಭಾರತ ಪುಸ್ತಕ ಭಂಡಾರ,
ಉಡುಪಿ.

ಅಭಿಪ್ರಾಯ

ಬಹುಮಾನಪತ್ರಗಳು ಜನಪ್ರಿಯವಾಗಬೇಕೆ?

ಭಾರತ ಸರಕಾರದ ಪಂಚವಾರ್ಷಿಕ ಬಹುಮಾನ ಪತ್ರಗಳು ಆರಂಭ ಶೂರತನವನ್ನು ಮಾತ್ರ ತೋರಿಸಿದುವು. ಇವನ್ನು ಇನ್ನೂ ಜನಪ್ರಿಯಗೊಳಿಸಬೇಕಾದರೆ, ಇರುವ ನ್ಯೂನತೆಗಳನ್ನು ದೂರೀಕರಿಸಬೇಡವೆ?

ಈ ವರ್ಷದ ಎಪ್ರಿಲ್ ಮೊದಲನೆ ದಿನದಿಂದ ಐದು ವರ್ಷಗಳಲ್ಲಿ ನಿಬಡ್ಡಿಯಿಂದ ಮರುಪಾವತಿ ಮಾಡುವ ಬಹುಮಾನ ಪತ್ರಗಳ ರೂಪದಲ್ಲಿ ಜನತೆಯಿಂದ ಸಾಲ ಪಡೆಯುವ ಹೊಸ ವಿಧಾನವೊಂದನ್ನು ಭಾರತ ಸರಕಾರವು ವ್ಯವಸ್ಥಿತಗೊಳಿಸಿದೆ. ಈ ಕ್ರಮವು ಅಸಾಧಾರಣವೆಂದೂ ಜನಪ್ರಿಯವೆಂದೂ ಮೊದಲ ದಿನಗಳಲ್ಲಿ ಇವನ್ನು ಮಾರುವಲ್ಲಿ ಜನರು ಗುಂಪು ಸೇರುತಿದ್ದುದನ್ನು ಕಂಡಾಗ ಹೇಳಬಹುದಾಗಿತ್ತು. ಜನರು ಬೆಚ್ಚಗಿನ ಸ್ವಾಗತ ನೀಡಿದುದರಿಂದಲೇ ಮೊದಲ ಮೂರು ತಿಂಗಳಲ್ಲಿ ೯.೨ ಕೋಟಿ ರೂಪಾಯಿಗಳು ಶೇಖರಗೊಂಡಿದ್ದವು. ಆದರೆ, ಅನಂತರದ ಮೂರು ತಿಂಗಳಲ್ಲಿ, ಎಂದರೆ ಜುಲೈ, ಅಗಸ್ಟ್ ಮತ್ತು ಸಪ್ಟಂಬರಗಳಲ್ಲಿ ಈ ವಿಧಾನದ ಸ್ವಯ ಕೊಡಿದ ಹಣವು ಕೇವಲ ೫೦ ಲಕ್ಷವಷ್ಟು ಎಂದು ವರದಿಗಳು ಬಂದಿವೆ. ಈ ಇಳಿತವನ್ನು ಗಮನಿಸದೆ ಬಿಡುವಂತಿಲ್ಲ. ಇದರ ಕಾರಣವು ಸರ್ವಾಲೋಚಕವಿದೆ. ಜನತೆಯಲ್ಲಿ ಮೊದಲಿದ್ದ ಉತ್ಸಾಹ ಅನಂತರ ಭಂಗವಾಗಲು ಕಾರಣವೇನೆಂಬುದನ್ನು ಕಂಡುಕೊಳ್ಳದೆ ಹೋದರೆ, ಈ ಯೋಜನೆಯೇ ಸಂಪೂರ್ಣ ಅಸಫಲವಾಗುವುದು. ೧೯೫೪ರಲ್ಲಿ ಇದೇ ಮಾದರಿಯಲ್ಲಿ ವ್ಯವಹಾರಕ್ಕೆ ತಂದೊಂದು ಯೋಜನೆಯು ಸಿಸ್ಫಲವಾದ ದುರ್ದೈವಿ ಘಟನೆಯನ್ನು ನಾವು ಮರೆತು ಬಿಡುವಂತಿಲ್ಲ. ಪ್ರಾರಂಭ ಶೂರತನದ ನಂತರ ಇದಕ್ಕೆ ಜನಾದರ ಬಿಚ್ಚಿ ದೊರೆಯದಿದ್ದುದರಿಂದ, ೧೯೫೫ರಲ್ಲಿಯೇ ಅದನ್ನು ಬಿಟ್ಟುಕೊಡಲೇ ಬೇಕಾಯಿತು. ಈ ಘಟನೆಯು ಹೊಸ ಯೋಜನೆಯ ಕಾರ್ಯ ವಿಧಾನವನ್ನು ಕಂಬೋಧಿಸಲು ನೆರವಾಗುವುದು.

ಈ ಬಹುಮಾನ ಪತ್ರಗಳ ಯೋಜನೆಯಲ್ಲಿ ಒಂದಲ್ಲ ೧೯ ಸಲ ಬಹುಮಾನ ದೊರೆಯುವ ಅವಕಾಶಗಳಿವೆ; ಅದರಿ, ಕೊಡಲಾಗುವ ಬಹುಮಾನಗಳ ಸಂಖ್ಯೆ ಸಾಕೆ? ಒಬ್ಬ ಸಾಮಾನ್ಯ ವ್ಯಕ್ತಿಯು ಐದು ವರ್ಷಗಳ ವರೆಗೆ ತನ್ನ ಹಣಕ್ಕೆ ಬಡ್ಡಿಯನ್ನು ಕಳೆದು ಕೊಳ್ಳುವುದಕ್ಕೆ ಸಿದ್ಧನಾದಾನೆ? ಯಾರೇ ಆಗಲಿ, ತನ್ನ ಹಣವನ್ನು ಆದಾಯ ಬರುವಂತೆ ವಿನಿಯೋಗಿಸಲು ಬಯಸುತ್ತಾನೆಯೇ ಹೊರತು ಅನ್ಯಥಾ ಅಲ್ಲ. ರಾತ್ರಿದಲ್ಲಿನ ಹಣದಲ್ಲಿ ಒಂದು ಭಾಗ ಈ ಉದ್ದೇಶಕ್ಕೆ ಹೊರತಾಗಿರಬಹುದಾದರೂ ಅದರ ಮೊತ್ತ ಅತ್ಯಲ್ಪವೇ. ಆದ ದರಿಂದ, ಬಹುಮಾನಗಳ ಒಟ್ಟು ಮೊತ್ತವನ್ನೂ ಸಂಖ್ಯೆಯನ್ನೂ ಹೆಚ್ಚಿಸಿದರೆ, ಆಕರ್ಷಣೀಯವೆನಿಸಬಹುದಾದರೂ ಬಹುಮಾನಗಳ ಮರುಮರೀಚಿಕೆಯೆದುರು ಐದು ವರ್ಷ ಸುಮ್ಮನುಳಿಯುವವರು ಅತಿ ವಿರಳರೇ ಸರಿ.

ಈ ದೋಷವನ್ನು ದೂರೀಕರಿಸಲು ಒಂದು ಪರಿಹಾರವನ್ನು ಸೂಚಿಸ ಬಹುದು. ಕೊಡಲಾಗುವ ಬಹುಮಾನಗಳಲ್ಲದೇ ಒಂದು ಸಾಮಾನ್ಯದರದ ಬಡ್ಡಿಯನ್ನೂ ನಡೆಯಗೊಡಬೇಕು. ಸರಕಾರವು ಬಹುಮಾನಗಳ ರೂಪದಲ್ಲಿ ನೀಡುವುದೆಂದು ಘೋಷಿಸಲಾದ ಹಣದಲ್ಲಿಯೇ ಒಂದಂಶವನ್ನು ನಿಶ್ಚಿತ ಬಡ್ಡಿಯ ರೂಪದಲ್ಲಿ ಎಲ್ಲ ಪತ್ರದಾರರಿಗೆ ಹಂಚಿ, ಉಳಿದುದನ್ನು ಬಹುಮಾನಗಳ ಮೂಲಕ ನಿತರಿಸಬಹುದು. ಈಗ ಬಹುಮಾನಗಳ ಬೆಚ್ಚನ್ನು ಮಿಟಲೇ ಕಡ ಇರುವುದು. ಇದೇ ಬೆಚ್ಚನ್ನು ಬಡ್ಡಿಯ ಮತ್ತು ಬಹುಮಾನಗಳಲ್ಲಿ ಹಂಚಿಹಾಕುವುದರಿಂದ ನಷ್ಟವೇನೂ ಆಗುವುದಿಲ್ಲ. ಬಡ್ಡಿಯನ್ನು ವರ್ಷಂಪ್ರತಿ ಕೊಡುವ ಅಗತ್ಯವಿಲ್ಲ. ಅಂಚೆಮನೆಯ ಕೇಶ್‌ಸರ್ಟಿಫಿಕೇಟುಗಳಂತೆಯೇ ಐದು ವರ್ಷಾನಂತರ ಹೆಚ್ಚಿಸಿದ ಮೌಲ್ಯವನ್ನು ನೀಡುವ ವ್ಯವಸ್ಥೆ ಮಾಡಬಹುದು. ಆಗ, ಜನರನ್ನು ಈ ಯೋಜನೆಯು ಇನ್ನೂ ಹೆಚ್ಚಾಗಿ ಆಕರ್ಷಿಸಬಲ್ಲುದು. ಬಹುಮಾನಗಳು ಅದೃಷ್ಟದಾಟವಾದರೂ ನಿಶ್ಚಿತವಾದ ದರದಲ್ಲಿ ತನ್ನ ಹಣಕ್ಕೆ ಬಡ್ಡಿಯು ನಡೆಯುತ್ತದೆ; ತನ್ನದು ಹೊಟ್ಟೆ ಹಣದಂತಾಗಲಿಲ್ಲ ಎಂಬ ಸಮಾಧಾನ ಜನತೆಗೆ.

ಈಗ ಬಹುಮಾನದ ನಿಯಮಗಳಂತೆ ಕೊಂಡುಕೊಂಡ ಬಹುಮಾನ ಪತ್ರವು ಅನಂತರದ ಎಲ್ಲಾ 'ಡ್ರಾ'ಗಳಲ್ಲಿ ಬಹುಮಾನಾರ್ಹವಾಗುವುದು. ಒಂದಕ್ಕೆ ಮೊದಲು ಬಹುಮಾನ ಸಿಕ್ಕಿದರೆ, ಅದಕ್ಕೆ ಮುಂದೆಯೂ ದೊರೆಯಬಹುದು. ಈ ಕ್ರಮವು ಅದನ್ನು ಹೆಚ್ಚು ಬಹುಮಾನ ಪತ್ರಗಳಿಗೆ ಬಹುಮಾನಿತವಾಗುವ ಅವಕಾಶವನ್ನು ತಪ್ಪಿಸುವುದು. ಇದಕ್ಕಾಗಿ ಎಲ್ಲ ಪತ್ರಗಳಿಗೂ ಎಲ್ಲ 'ಡ್ರಾ'ಗಳಲ್ಲಿಯೂ ಭಾಗ ವಹಿಸಲು ಬಿಡುವುದಾದರೂ ಒಂದು ಪತ್ರಕ್ಕೆ ಒಂದೇ ಬಹುಮಾನವೆಂಬ ನೀತಿಯನ್ನನುಸರಿಸಬೇಕು. ಒಂದು ಪತ್ರವು ಒಂದು ಬಾರಿ ಬಹುಮಾನಿತವಾಗಿ, ಮುಂದೆ ಅದಕ್ಕಿಂತ ದೊಡ್ಡ ಬಹುಮಾನ ಪಡೆಯಿತೆಂದರೆ, ಎರಡು ಬಹುಮಾನಗಳ ಅಂತರದಷ್ಟು ಹಣವನ್ನು ಮಾತ್ರ ಅದು ಪಡೆಯುವಂತಾಗಬೇಕು. ಹೀಗೆ ಉಳಿದ ಹಣವನ್ನು ಮತ್ತಿನ ಪತ್ರಗಳಿಗೆ ಬಹುಮಾನವಾಗಿ ಹಂಚಬೇಕು.

ಈ ಸಂಬಂಧದಲ್ಲಿ ಜನತೆಯ ವಿಶ್ವಾಸಕ್ಕೆ ಎರವಾಗುವಂತಿರುವ ಇನ್ನೊಂದು ನಿಯಮವಿದೆ. ಎಲ್ಲ ಬಹುಮಾನ ಪತ್ರಗಳೂ, ಮಾರಲ್ಪಟ್ಟವು ಮತ್ತು ಮಾರಲ್ಪಡದಿರುವವು; 'ಡ್ರಾ' ಗಳಲ್ಲಿ ಬಹುಮಾನ ಪಡೆಯಬಹುದು. ಮಾರಲ್ಪಡದಿರುವ ಪತ್ರಗಳಿಗೆ ಬಹುಮಾನಗಳಲ್ಲಿ ಹಲವಾರು ಬಂದುದರಿಂದಾಗಿಯೇ ಜನತೆಯ ವಿಶ್ವಾಸವು ದೂರವಾಗುತ್ತ ಬರುತ್ತಿದೆ. ಈ ಅನುಕೂಲ ಮನೋವೃತ್ತಿಯು ಬೆಳೆಯುತ್ತ ಬಂದುದರಿಂದಲೇ ದ್ವಿತೀಯ ತ್ರಿಮಾಸಗಳಲ್ಲಿ ಪತ್ರಗಳ ಮಾರಾಟ ಸಂಪೂರ್ಣ ಕುಸಿಯಿತೆಂದು ಹೇಳಬಹುದು. ಬಹುಮಾನಗಳು ನ್ಯಾಯವಾಗಿ ಸೇರಬೇಕಾದುದು ದಡ್ಡತೆತ್ತು ಪತ್ರವನ್ನು ಕೊಂಡುಕೊಂಡವನಿಗೆ. ಇದಕ್ಕೆ ಜೊಂದಿ ಕೊಂಡು ಬಹುಮಾನ ಪತ್ರಮಾಲಿಕೆಯನ್ನು ಪುನರ್ವಿಂಗಡಿಸುವುದರಿಂದ ನ್ಯಾಯವಾದ ಬಹುಮಾನಾರ್ಹನಿಗೇನೇ ಬಹುಮಾನ ಸಿಗುವುದು ಮತ್ತದರಿಂದ ಜನಪ್ರಿಯತೆಯೂ ಬೆಳೆಯುವುದು.

ಇವು ನಗರಗಳ ಜನತೆಯ ಅಭಿಮತವಾದರೆ, ನಮ್ಮ ಹಳ್ಳಿಗಳ ಪರಿಸ್ಥಿತಿ ವಿಭಿನ್ನವಾದುದು. ಬಹುಮಾನ ಪತ್ರಗಳನ್ನು ಮಾರುವ ಸ್ಟೇಟ್ ಬೇಂಕಿನ ಶಾಖೆಗಳು ಅಥವಾ ಅಂಚೆಮನೆಗಳ ಅಧಾವ, ಜನತೆಯ ಅನಕ್ಷರತೆ, ಸುದ್ದಿಗಳು ತಿಳಿಯದಿರುವಿಕೆ, ಐದು ವರ್ಷಗಳವರೆಗೆ ಜೋಪಾಸನೆ ಮಾಡಿಡುವ ತ್ರಾಸ—ಇವೇ ಮೊದಲಾದ ವಿಘ್ನ ಪರಂಪರೆಯನ್ನು ಹಳ್ಳಿಗರು ಎದುರಿಸಬೇಕಾಗುವುದು. ಕೆಲವೆಡೆ ಕೆಲವೊಂದು ಬೇಂಕುಗಳು ಮೊದಲಾಗಿ ಪಡೆಕೊಂಡು ಅವನ್ನು ತಮ್ಮ ಗಿರಾಕಿಗಳಿಗೆ ಒದಗಿಸುತ್ತಿರುವುದಾದರೂ ಇಷ್ಟರಿಂದಲೇ ಅದು ಪರ್ಯಾಪ್ತ ಪ್ರಚಾರ ಹೊಂದುವುದು ಸಾಧ್ಯವಿಲ್ಲ. ನಮ್ಮ ಹಳ್ಳಿಗರು ಹಣವನ್ನು ಕೂಡಿಸಿಡುವುದರಲ್ಲಿ ನಿಸ್ಸೀಮರು. ಬೆಳ್ಳಿ ಬಂಗಾರಗಳ ರೂಪದಲ್ಲಿಯೋ, ರೂಪಾಯಿ ನಾಣ್ಯಗಳಲ್ಲಿಯೋ ಅವರು ಸಂಗ್ರಹಿಸುವುದುಂಟು. ಅಲ್ಲದೇ ಅದೃಷ್ಟದ ಮೇಲೆ ನಮ್ಮ ನವನಾಗರಿಕರಿಡುವ ವಿಶ್ವಾಸಕ್ಕಿಂತ ಗ್ರಾಮೀಣ ಜನತೆಗೆ ನಂಬಿಕೆ ಹೆಚ್ಚು. ಆದುದರಿಂದ ಪ್ರಯತ್ನ ನಡೆಸಿದರೆ, ಬಹುಮಾನಪತ್ರಗಳು ಗ್ರಾಮೀಣ ಪ್ರದೇಶದಲ್ಲಿ ಸಾಕಷ್ಟು ಜನಪ್ರಿಯವಾಗಬಹುದು.

ಸರಕಾರವು ತಮ್ಮ ಬಹುಮಾನ ಪತ್ರಗಳನ್ನು ಪ್ರಚಾರ ಮೂಲಕ ಅತಿಪ್ರಿಯಗೊಳಿಸಬೇಕು. ಸುಗ್ಗಿಯ ಕಾಲದಲ್ಲಿ ಸಂತೆ—ಧಾನ್ಯ ಪೇಟೆಗಳಲ್ಲಿ ಪ್ರಚಾರಾಂದೋಲನವನ್ನು ಕೈಗೊಳ್ಳಬೇಕು. ಈ ಸಮಯದಲ್ಲಿ ರೈತ ಜನರ ಕೈಯಲ್ಲಿ ಸಾಕಷ್ಟು ಹಣವು ಸಂಗಾಡತ್ತಿರುವುದರಿಂದ ಒಂದೈದು ರೂಪಾಯಿಗಳ ಬಹುಮಾನ ಪತ್ರಗಳನ್ನು ಕೊಂಡುಕೊಳ್ಳಲು ಹಿಂದೆ ಮುಂದೆ ನೋಡಲಾರರು. ಬಹುಮಾನ ಪತ್ರಗಳ ಮಾಲಿಕೆಯ ಸಂಖ್ಯೆಗಳು ಹಾಗೂ ಬಹುಮಾನಿತವಾದ ಪತ್ರ ಸಂಖ್ಯೆಗಳನ್ನು ಪ್ರಾದೇಶಿಕ ಭಾಷೆಗಳಲ್ಲಿಯೂ ಪ್ರಕಟಿಸಬೇಕು; ಅವು ಗ್ರಾಮೀಣ ಪ್ರದೇಶಗಳಲ್ಲಿ ದೊರೆಯುವ ವ್ಯವಸ್ಥೆ ಮಾಡಬೇಕು.

'ಬಹುಮಾನ ಪತ್ರ'ಗಳಲ್ಲಿ ಮೇಲೆ ಸೂಚಿಸಲಾದ ಕೆಲವೊಂದು ಕೊರತೆಗಳೂ ನ್ಯೂನತೆಗಳೂ ಎಲ್ಲರನ್ನೂ ಹಿಂಜರಿಯುವಂತೆಮಾಡಿವೆ; ಅವುಗಳಲ್ಲಿಟ್ಟಿದ್ದ ವಿಶ್ವಾಸವನ್ನು ಮಾಯವಾಗಿಸಿ ಬಿಟ್ಟಿವೆ. ಇವು ಮುಖ್ಯವಾದುವುಗಳು—ಎಲ್ಲರಿಗೂ ಕಾಣುವಂತಹವು ಇವನ್ನು ದೂರೀಕರಿಸಿದರೆ, ಈ ಯೋಜನೆಯು ಸಣ್ಣ ಉಳಿತಾಯ ಯೋಜನೆಗಿಂತ ಸಂಪೂರ್ಣ ಯಶಸ್ವಿಯಾಗುವುದು; ರಾಷ್ಟ್ರೀಯ ಅಭಿವೃದ್ಧಿ ಯೋಜನೆಗೆ ಹಣವೂ ಲಭಿಸುವುದು ಈಗ ಬೇಕಾಗಿರುವುದೆಂದರೆ, ಅದರ ಪ್ರಚಾರ, ಮಾರುವ ಪ್ರಾತಿನಿಧಿಗಳ ವಿಸ್ತಾರ ಮತ್ತು ಜನ ವಿಶ್ವಾಸಕ್ಕಾಗಿ ಲೋಪದೋಷಗಳ ಪರಿಹಾರ.

ಉಡುಪಿ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

O. S. 286/1958; R. E. P.527/1960

ರಾಮಣ್ಣ ಯೂನೆ ಲಕ್ಷ್ಮಿನಾರಾಯಣ ತಂತ್ರಿ —ಅರ್ಜಿದಾರ

ಮತ್ತು

ಶ್ರೀ. ಗೋಪಾಲ ಕೃಷ್ಣ ಉಪಾಧ್ಯ, ದಾಸು ಉಪಾಧ್ಯರ ಮಗ—ಉಡ್ಡಿ ತಾಲ್ಲೂಕು ಶಿವಳ್ಳಿ ಗ್ರಾಮದ ಗುಂಡಿಬೈಲು — ಎದ್ರಿ.

ಸದ್ರಿ ಎದ್ರಿಗೆ ಈ ಮೂಲಕ ತಿಳಿಯಪಡಿಸುವುದೇನಂದರೆ:—

ನಿಮ್ಮ ಬಾಬ್ತು ಸ್ಥಿರಾಸ್ತಿಯನ್ನು ಜಪ್ತಿ ಅಪೇಕ್ಷಿಸಿ ಅರ್ಜಿದಾರನು ದಾಖಲು ಮಾಡಿದ ಮೇಲ್ಕಂಡ ಅಮಲ್ದಾರಿಯ ತಾರೀಕು 6-1-1960ಕ್ಕೆ ಇಟ್ಟಿರುತ್ತದೆ. ಆಕ್ಷೇಪಣೆ ಏನಾದರೂ ಇದ್ದರೆ ಆ ದಿನ ಸೂರ್ಯಾಸ್ತ 10 ಘಂಟೆಗೆ ಸದ್ರಿ ಕೋರ್ಟು ಮುಂದೆ ಬಂದು ಹಾಜರ್ಗಿ ಜ್ಞಾಪಿಸಿರು ಮಾಡಿಕೊಳ್ಳತಕ್ಕದ್ದು.

K. Ramakrishna Rao,
Vakil for Petitioner.

Dated 17—12—1960.

ಉಡುಪಿ ನಗರಸಭೆಯ ಬೆಳ್ಳಿ ಹಬ್ಬದ
ಸಲುವಾಗಿ

ಬೃಹತ್ ವಸ್ತುಪ್ರದರ್ಶನ

1961 ಜನವರಿ 8ರಿಂದ ಆರಂಭ

ಉಡುಪಿ ಮಕರ ಸಂಕ್ರಮಣದ ಉತ್ಸವದ ಪರ್ವಕಾಲದಲ್ಲಿ
ನಗರಸಭೆಯ ರಜತೋತ್ಸವದ ಅಪೂರ್ವ ಯೋಗ!
ಕನಿಷ್ಟ ಹದಿನಾಲ್ಕು ದಿನಗಳ ಪರ್ಯಂತ ದೈನಂದಿನ
ನಾಟಕ, ವಿನೋದ, ಸ್ಪರ್ಧೆಯೇ ಮೊದಲಾದ
ವಿವಿಧ ಆಕರ್ಷಣಗಳು!

ಸ್ಟಾಲ್ ಆಪೇಕ್ಷಿಸುವ ಪ್ರದರ್ಶಕರು ಅಥವಾ

"ರಜತೋತ್ಸವ ವಿಶೇಷಾಂಕ"ದಲ್ಲಿ

ಜಾಹೀರಾತು ಕೊಡಲಿಚ್ಛಿಸುವವರು ಅಪೇಕ್ಷೆಯನ್ನು ತಿಳಿಸಬೇಕು.

ನಾಟಕ, ವಿನೋದ, ಜಾದು, ಗೊಂಬೆ ಆಟ, ನೃತ್ಯ, ಸರ್ಕಸ್
ಕುಸ್ತಿ ಇತ್ಯಾದಿ ಪ್ರದರ್ಶನ ಕೊಡಲಿಚ್ಛಿಸುವವರು
ಕೂಡಲೇ ಬರೆಯಿರಿ:—

ಪ್ರಧಾನ ಕಾರ್ಯದರ್ಶಿ,
ಉಡುಪಿ ಮುನ್ಸಿಪಾಲಿಟಿ ಸಿಲ್ವರ್ ಜ್ಯೂಬಿಲಿ ಸೆಲೆಬ್ರೇಶನ್ ಕಮಿಟಿ,
"ಮುನ್ಸಿಪಲ್ ಆಫೀಸು", ಉಡುಪಿ, ದ. ಕ.

ಸೂಚನೆ

"ನವಯುಗ"ದಲ್ಲಿ ಪ್ರಕಟಣೆಗಾಗಿ ಲೇಖನಗಳನ್ನು ಆಮಂತ್ರಿಸಲಾಗಿದೆ. ಇವು ಚಿಕ್ಕದಿರ ಬೇಕಲ್ಲದೆ ಕಾಗದದ ಒಂದೇ ಪುಗ್ಗಲಿನಲ್ಲಿರಬೇಕು. ಲೇಖಕಬಂಧುಗಳು ಸಹಕರಿಸಬೇಕಾಗಿ ವಿನಂತಿ. —ಸಂ.ನ.

ಕಥಾವಿಹಾರ

(೨ನೇ ಸುಟದಿಂದ)

ರೆ "ಊರಿಡೀ ಕಾಯುತ್ತಿರುವಾಗ ನಾನೇ ಕೆಟ್ಟಸುಮ್ಮನಿರಲಿ? ಹಾಗೇನೂ ನಾನು ಮೂರ್ಖಿಕ್ಕೇಂತಲೇ ಮಾಡೋದಲ್ಲಾ. ನನಗೆ ಹೇಗೂ ಬೇಕು. ಹಾಗೆ ಸ್ವಲ್ಪ ಒಂದ ವರಿಗೂ...." ಅನ್ನುತ್ತಿದ್ದ. ಹಾಗೂ ಹೀಗೂ ಒಂದು ಸಾವಿರ ರೂಪಾಯಿಯನ್ನು ಹತ್ತಿರ ಬ್ಯಾಂಕಿನಲ್ಲಿಯು ಜಮೆಮಾಡಿದ್ದ ಅನ್ನಿ. ಹೆಂಡತಿಯು ಒಳ್ಳೆ ದುಂಡಗಾಗಿದ್ದಳು. ಕೈಗಳಲ್ಲಿ ಎರಡೆರಡು ಚಿನ್ನದ ಬಳೆಗಳನ್ನೂ ಗಲಕು ಗಿಲಕು ಮಾಡಲು ಆರಂಭಿಸಿದ್ದಳು.

ಆದರೆ ಆ ಪಾನ ನಿರೋದ ಸಭೆಗೆ ಬಂದ ದೂಮನನ್ನು ನೋಡಿ. ಇವನೆಲ್ಲ ಇನ್ನು ಅಧ್ಯಕ್ಷರಿಗೆ ಕಲ್ಲು ಬೀರುತ್ತಾನೋ ಎಂದು ನಾವು ಭಾವಿಸಿದೆವು. ಆದರೆ ಅಧ್ಯಕ್ಷರು ತಮ್ಮ ಧನಿಯೇ (ಅಂದರೆ ತನ್ನ ಖಾಯಂ ಅತಿಥಿಯೇ) ಎಂದು ತಿಳಿದ ಮೇಲೆ ದೂಮನೂ ಆಸೀನನಾದ ನಗು ನಗುತ್ತಲೇ.

ಭಾಷಣಗಳು ಆರಂಭವಾದುವು. ದೂಮ ಎದ್ದಾಗ "ಎಲ್ಲಿಗೋ ಏನೋ?" ಎಂದುಕೊಂಡೆವು. ಆದರೆ ಅವನು ಸಭೆಯ ಮುಂದೆ ನಿಂತು, ವೇದಿಕೆಯ ಮೇಲೆ ಸಮುದ್ರಗಂಭೀರ ಧ್ವನಿಯಿಂದ "ಪೂಜ್ಯ ಅಧ್ಯಕ್ಷರೇ ಮತ್ತು ಏನೆಂದ್ರೆ...." ಅಂತ ಆರಂಭಿಸಿದಾಗಲೇ "ಓ ದೂಮನೂ ಭಾಷಣ ಮಾಡುತ್ತಾನೆಯೇ" ಅಂತ ನಾವು ಮೂಗಿನ ಮೇಲೆ ಬೆರಳಿಟ್ಟದ್ದು. ಹಿಂದೆ ಕೂತ ತನ್ನ ಧನಿ—ಅಧ್ಯಕ್ಷರು ಇದ್ದಾರೆ ಎಂಬ ಭಾವನೆ ಅವನಿಗೆ ಬಂದೊಡನೆ ಅವನ ವಾಗ್ಧಾರೆ ಎಚ್ಚರಿಯೇ ಆಯಿತು. ಕಟ್ಟಕಡೆಗೆ ಅದು ಪಾನ ನಿರೋಧದ ಬದಲು ಪಾನ ಪ್ರತಿಬಂಧವಾಯಿತು. ಅದೂ ಸರಿಯೇ. ಆದರೆ ಅದು "ಪಾನ ನಿರೋಧ ಪ್ರತಿಬಂಧ" ವಾದಾಗ ಮಾತ್ರ ಅಧ್ಯಕ್ಷರು 'ಛೂ ಛೂ ದೂಮ" ಅಂದರು. ದೂಮ ತನ್ನ ವಾಕ್ಯಗಳನ್ನು ತಿದ್ದಿಕೊಳ್ಳಬೇಕಾಯಿತು.

ಅಂತೂ ಆ ಪಾನನಿರೋಧ ಸಭೆ (ಅಂದರೆ ಸಭೆಯಲ್ಲಿ ಪಾನನಿರೋಧ) ಕೊನೆಗೊಂಡದ್ದು ಮಂಗಳವಾಗಿಯೇ; ಅದು ಸಂತೋಷದ ವಿಷಯ. ಬಂದಿದ್ದ ಸೋಲೀಸರೂ ಪಾನನಿರೋಧ ಸಭೆಯ ಶಿಸ್ತನ್ನೂ ಪಾಲಿಸಲು ಸಿದ್ಧರಾಗಿಯೇ ಇದ್ದರು.

ಪಾನನಿರೋಧ ಸಭೆ ಕಳೆದು ಹತ್ತು ದಿನಗಳಾಗಬೇಕಾದರೆ ಊರಲ್ಲಿ ಡೀ ಪಾನೇ ಪಾನ! ಬಕುಶಃ ಸರಕಾರದವರು ಡಿ. ಡಿ. ಟಿ. ಹಾಯಿಸಿ ಹಿಂತಿರುಗಿ ಅವರು 'ಹೆಲ್ತಾಫೀಸಿ'ಗೆ ಮುಟ್ಟುವಷ್ಟರಲ್ಲಿ ಇಲ್ಲಿ ಇಮ್ಮಡಿ ಉಟಾಗುವ ನೊಣಗಳಂತೆ, ಈ ಪಾನನಿರೋಧದ ಪ್ರಚಾರ ಸಭೆಗಳ ಪರಿಣಾಮವಾಗಿರಲೂಬಹುದು.

ಕುಡಿಯುವುದರ ಉದ್ದೇಶವಾಗಲೀ ಅರ್ಥವಾಗಲೀ ಏನು ಎಂಬ ಕಡೆಗೆ ಯಾರ ಲಕ್ಷ್ಯವೂ ಇರಲಿಲ್ಲ. ಆ ಮಗ್ಯಪಾನದಲ್ಲಿ (ಅರ್ಥಾತ್ ವಾಟಿಸ್ ಅನ್ನಾರೆ) ಯಾವ ವಿಟಾಮಿನ್ ಇದೆ ಎಂದು ಯಾರೂ ರೋಧಿಸಲಿಲ್ಲ. ಆ ಮದ್ಯಪಾನವನ್ನು ತಯಾರಿಸುವ ವಸ್ತುಗಳೊಂದಿಗೆ ಹಾಕುವಂತಹ ಪಾಷಾಣ ಸಾಮಗ್ರಿ (poisonous substance)ಗಳೇನು ಎಂಬುದಾಗಿ ಯಾರೂ ವಿಚಾರಿಸಲಿಲ್ಲ. ಅದಕ್ಕೆ ಹಾಕುವ ಅಮೋನಿಯಂ ಸಲ್ಫೇಟ್, ಸುಪರ್ ಫೋಸ್ಫೇಟ್‌ಗಳು, ಹಳೇ ಬ್ಯಾಟರಿಗಳು, ಕಾಡಿನ ಗರ್ಭನಾವವಾಗುವ ಮರದ ತೊಗಟೆಗಳು-ಇವುಗಳ ಪರಿಣಾಮವನ್ನು ವಿಚಾರಿಸಲು ಯಾರೂ ಮುಂದರಿಯಲಿಲ್ಲ.

ಕಡೆಗೊಮ್ಮೆ ನಮ್ಮ ಧನಿಗಳು (ಅಂದರೆ ಹೇಳುವ ಕ್ರಮ, ನಮ್ಮ ಧನಿಗಳಲ್ಲ!) ಭಾವ ಶಂಕರರಾಯರು (ಟ್ಯಾಂಕರ್ ಹೊಟ್ಟೆ ಶಂಕರರಾಯರು) 'ಪಾರ್ಟಿ ಪೇಲ್' ಅಗಿ "ಸತ್ತುಕೊಂಡ" ಸುದ್ದಿ ತಿಳಿದೊಡನೆ ಊರಿಗೇ ಊರೇ ಆಶ್ಚರ್ಯಗೊಂಡಿತು. ಅದು ಫೇಲಾದುದು ಹಾರ್ಟಲ್ಲ. ಅವರ ಕರುಳು ಎಂಬುದು ಎಲ್ಲಿರಿಗೂ ಗೊತ್ತು. ಮೊದಲೇ ಹೊಟ್ಟೆಯೆಂದರೆ ಹೊಟ್ಟೆ! ಅದರ ಮೇಲೆ ಗಿಡಕ್ಕೆ ಹಾಕಿದರೆ ಬೆಳೆಯುವ ಫಾಸ್ಫೇಟನ್ನು ಕರುಳಿಗೆ ಹಾಕಿದರೆ ಅದು ಬೆಳೆಯದಿದ್ದೀತೆ? ಅಂತೂ ಅವರು ಸತ್ತುದು ಊರಿಗೆ ಸುಖವಾಯಿತು ಅಂತ ಪಾನಸಿಯರು ಸಂತೋಷಪಟ್ಟರು.

ದಿನ ಹೂಗೇ ಉಳಿಯುತ್ತೆಯೆ? ಒಂದು ದಿನ ದೂಮನೂ ರೋಗದ ಬಾಯಿಗೆ ಬಿದ್ದ. ಆಸ್ಪತ್ರೆಗೆ ಹೋದ. ಡಾಕ್ಟರರು ಅವನ ಹೊಟ್ಟೆಗೊಂದು ಬಡಿದು "ಕುಡಿದಿದ್ದೀಯಾ, ಅಭ್ಯಾಸವುಂಟೆ?" ಅಂತ ಕೇಳಿದರಂತೆ. "ಕುಡಿದಿದ್ದಿಂದ್ಲೇ ಈ ತನಕ ಬದುಕಿದ್ದ" ಅಂತ ಉತ್ತರ ಕೊಟ್ಟನಂತೆ ದೂಮ. "ಹೌದ್ರಿಂ. ಈತನಕ ಬದುಕಿದ್ದೇ ಹೆಚ್ಚಾಯಿತು. "ಕರುಳಿನಲ್ಲಿ ಹುಣ್ಣು ಇದೆ. ಹೊಟ್ಟೆ ಕೊಯ್ಯಬೇಕು." ಅಂತ ಅವರು ಮಂಜೂರು ಮಾಡಿದರು.

ಹೊಟ್ಟೆ ಕೊಯ್ದರೂ ತೊಂದರೆಯಿಲ್ಲ ಸುಸ್ಥಿತಿ ಹೊಲಿಯುವಾಗ ಹೊಟ್ಟೆಯಲ್ಲಿ ಒಂದು ಗೆಲನ್ ಹೆಚ್ಚು ಹಿಡಿಯುವಷ್ಟು ದೊಡ್ಡದು ಮಾಡಿಯೇ ಹೊಲಿಯುತ್ತಿದ್ದರಾಗುತ್ತಿತ್ತು, ಅಂತ ಅವನ ಲಂಕರಿಕ ಅಭಿಮತವಾಗಿತ್ತು.

ಅಂತೂ ಕಡೆಗೆ ದೂಮನ ಹೊಟ್ಟೆ ಅಪರೇಶನ್ ಆಯಿತು. ಆಸ್ಪತ್ರೆಯಿಂದ ಹೊರಬಿದ್ದ. 'ಇನ್ನು ಕುಡಿದರೆ ಸಾಯುವದು ಖಂಡಿತ" ಅಂದಿದ್ದಂತೆ ಡಾಕ್ಟರರು ತಿಂಗಳ ಮಗುವಿಗೆ ಮೊಲೆ ಬಿಡಿಸಿದ ಹಾಗೆ ಆಗಿತ್ತು ಅವನ ಸ್ಥಿತಿ. ಕಡೆಗೂ ಅವನಿಂದ ತಾಳಲಾಗಲಿಲ್ಲ. ಕುಡಿದೇ ಕುಡಿದ. ಆ ತನಕ ಬಾಕಿಯುಳಿದದನ್ನೆಲ್ಲಾ ಕುಡಿದ. ಇನ್ನು ಎರಡು ಮಕ್ಕಳ ತಾಯಿಯಾಗಿದ್ದ ಅವನ ಹೆಂಡತಿ "ಹೀಗೆ ಕುಡಿದರೆ ಹೇಗೆ?" ಅಂತ ಯೋಚಿಸಿ. "ನನಗೆ ಗತಿಯೇನು?" ಅಂತ ಚಿಂತಿಸುತ್ತಿದ್ದಳು.

ಸ್ವಲ್ಪ ದಿನಗಳ ಮೇಲೆ ಆಸ್ಪತ್ರೆಯಲ್ಲಿ ದೂಮ ಇಹಲೋಕವನ್ನು ಬಿಟ್ಟು ನಿರಂತರವೂ ನಿರಾತಂಕವಾಗಿ ಮದ್ಯವು ಸಿಕ್ಕೇ ತೊಂಬ ಆಶೆಯಿಂದ ಪರಲೋಕಕ್ಕೆ ಧಾವಿಸಿ ಹೋದ.

ಅವನು ಹೋಗಿ ವಾರ ಒಂದಾಗಲಿಲ್ಲ ಸುಂದರ ರಾಯರು ಸುಖಿಯು ಆಯಿತು; ನಿರಾತಂಕವಾಗಿ ಬದ್ದಿರಲೊಂದು ನೆಪಿಯೂ ಆಯಿತು ಎಂದು ದೂಮನ ಮನೆ (ಅಂದರೆ ಈಗ ಅಕ್ಕಮ್ಮನ ಮನೆ) ಯಲ್ಲಿ ಕಾಣ್ಯ ಹೂಡಿದರು. ದೂಮ ಇರುವಾಗಲೇ ಅಕ್ಕಮ್ಮನಿಗೆ ಧನಿಗಳೊಂದಿಗೆ 'ಕೈ' ಇತ್ತು ಅಂತ ವದಂತಿಯಿತ್ತು. ಅದು ಕೇಗಿದ್ದರೂ ಆಧಾರವಿಲ್ಲದ ಅಕ್ಕಮ್ಮನಿಗೆ ಸುಂದರ ರಾಯರು ಆಧಾರವಿತ್ತರು ಅಕ್ಕಮ್ಮನೂ ಈಗ ಸಿಂಗಾರಿಯಾಗಿ ಸುಂದರ ರಾಯರ ಸುಂದರಿಯಾದಳು.

ಆದರೆ ಯಾರ ವಿಧಿಯೋ ಅದು ಸುಂದರ ರಾಯರನ್ನೂ ಆಸ್ಪತ್ರೆಗೆ ಒಡಿಸಿಯೇ ಒಡಿಸಿತು. ಅವರದೂ ಹೊಟ್ಟೆ ಅಪರೇಶನ್ ಆಯಿತು. "ನೀ ಕುಡಿಯುವುದು ಬಿಡಲೇ ಬೇಕು" ಎಂದು ಡಾಕ್ಟರರು ಖಂಡಿತವಾಗಿ ನುಡಿದು ಆಸ್ಪತ್ರೆಯಿಂದ ಕಳಿಸಿದ್ದರು.

ಆದರೆ ದಿನದಂತೆ ದಿನ ನಿಲ್ಲುತ್ತದೆಯೆ? ಅಕ್ಕಮ್ಮನ ಮನೆಯಲ್ಲಿ ಆರಾಮವಾಗಿ ಬಿದ್ದಿರುವಾಗ ಆ ಗಂಗಾದೇವಿ (ಗಂಗಸರ!) ಯ ನೈಕೆ ಇನ್ನೊಂದು ಕೈಯಲ್ಲಿ ಹಿಡಕೊಳ್ಳಬಾರದು ಅಂತ ಮನದಲ್ಲಿ ತೋರುವುದು ಸಹಜವೇ 'ಹೇಗಿದ್ದರೂ ಸಾಯುವ ತನಕ! ಸಾಯುವ ತನಕ ಸಿಕ್ಕಿದಷ್ಟು ಕುಡಿಯುವುದು. ಆ ಮೇಲೆ ಕುಡಿಯುವುದ ಕ್ಕಾಗುತ್ತದೆಯೆ?" ಅಂತ ಭಾವಿಸಿ ಕುಡಿಯಲಾರಂಭಿಸಿದರು.

ಕುಡಿದುದೇ ಕುಡಿದುದು! ದಿನಕಳೆದಂತೆ ರಾಯರಿಗೆ ಹಸಿವಿಲ್ಲ. ಕಾಫಿ ಹಿಡಿಯುವುದಿಲ್ಲ. ತಿಂಡಿ ಬೇಡ. ಅನ್ನ ಸೇರುವುದಿಲ್ಲ. ಡಾಕ್ಟರರೂ ಆಗಮಿಸಿದರು. "ಕಡೆಗೆ ಬೇಡ, ಬೇಡ, ಏನೂ ಬೇಡ....ಈ ಲೋಕವೇ ಬೇಡ. ಅಲ್ಲಿ ದೂಮನ ಮನೆಯಲ್ಲಿ ತಮ್ಮ ಭಾವ ಶಂಕರ ರಾಯರು ತಮ ಟ್ಯಾಂಕರನ್ನು ಶುಂಬಿಸುತ್ತಿರುವಾಗ ತಮ್ಮ ಡ್ರಮ್ ಯಾಕೆ ಖಾಲಿ ಬಿಡಬೇಕು ಅಂತ ಅವರೂ ಹೊರಟೇ ಹೋದರು.

ಅಕ್ಕಮ್ಮ ಈಗ ಸಿರಿವಂತಳಾಗಿದ್ದಳು ಮತ್ತೊಮ್ಮೆ ಕಾಯಿಸಲು ಹೇಗೂ ಅವಳಿಗೆ ದೂಮ ಕಲಿಸಿದ್ದ. ಕಾಯಿಸಿದಳು. ದುಡ್ಡುಗಳಿಸಿ ತಮ್ಮ ಮಕ್ಕಳನ್ನು ಕಾಪಾಡಿದಳು. ಆದರೆ ಆ ಮಕ್ಕಳಿಗೆ ಶಾಲೆಯ ಬದಲು ಬಂದುದು ತನ್ನ ತಂದೆಯ ಬುದ್ಧಿಯೇ ಸರಿ. ರಾತ್ರಿ ಹಗಲು ಮದ್ಯದ ಗಂಧವೇ ಮೂಗಿಗೆ ಬಡಿಯುತ್ತಿರುವಾಗ ಮದ್ಯವೇನು? ನೀರೇನು? ಎರಡೂ ಒಂದೆ. ಬಾಯಾರಿದರೆ ನೀರಿನ ಬದಲು ಒಳಹೋಗಿ ಬಾಟ್ಲಿಯನ್ನು ಗಳಗಳನೆ ಕುಡಿದರೆ ಸರಿ. ಯಾವುದೋಳ್ಳೆ ಏನೋ?

ಹಾಗೆ ಅವರು ದೊಡ್ಡವರಾದರು. ಅಕ್ಕಮ್ಮ ಮುದುಕಿಯಾಗುತ್ತಾ ಬರುವಾಗ ಮಕ್ಕಳಿಬ್ಬರು ಯುವಕರಾದರು. ಪೇಟೆಯಿಂದ ಹಳ್ಳಿಗೆ ಎಲ್ಲೆಲ್ಲಿಗೆ ಯಾರ್ಯಾರಿಗೆ ಬೇಕೋ ಅವರಿಗೆಲ್ಲಾ ಸಾರಾಯಿ ಮಾಡುವ ಅಧಿಕಾರ ಅವರಿಗೆ ಸಿಕ್ಕಿತು.

ನೋಟೀಸು.

ಡ. ಕ. ಸಬೋರ್ಡಿನೇಟ್ ಜಡ್ಜರ ಕೋರ್ಟಿನಲ್ಲಿ

O. S. No. 91/1960.

ಶಾರದ ಹೆಗ್ಗಡ್ತಿ ಕೂಡಾ — ವಾದಿರು

ಮತ್ತು

ಸೂರ್ಯಣ್ಣ ಹೆಗ್ಡೆ ಕೂಡಾ — ಪ್ರತಿವಾದಿರು.

1ನೇ ಪ್ರತಿವಾದಿ—ಸೂರ್ಯಣ್ಣ ಹೆಗ್ಡೆ. 2ನೇ ಪ್ರತಿವಾದಿ— ಸುಬ್ಬಣ್ಣ ಹೆಗ್ಡೆ ಅಕ್ಕಮ್ಮ ಹೆಗ್ಗಡ್ತಿ ಮಕ್ಕಳು ಉಡ್ತಿ ಶಾಲ್ಯ ಕರ್ಡೂರು ಗ್ರಾಮದ ಕುಳ್ಳಂಜಾರಬೈಲಿನವರು.

ಮೇಲಿನ ವಾದಿಯರು ಮತ್ತು ಪ್ರತಿವಾದಿಯರ ಕುಟುಂಬದ ಬಾಬು ಯಾನ ತ್ತೂ ಸೊತ್ತುಗಳ ವಿಷಯ ಮಗಬೇಕೆಂದು ವಗೈರೆ ನಿವೃತ್ತಿ ಕೇಳಿ ದಾಖ್ಲು ಮಾಡಿದ ದಾವೆಯೂ ಮತ್ತು ಮರಗಳು ಇತ್ಯಾದಿ ಸ್ವತಂತ್ರ ಆಧಿವಾಜನರ ಮುಖಾಂತರ ಕಡಿದು ಆಸ್ತಿಯನ್ನು ಆರೂಪ ಪಡಿಸಿದ ಹಾಗೆ ದಾಖ್ಲು ಮಾಡಿದ R I A. 1116/1960ನೇ ಇಂಜಿಕ್ಷನ್ ಅರ್ಜಿಯೂ ತನ್ನದಾಗಿ ತಾರೀಕು 28-1-1961 ಕ್ಕೆ ಮೇಲಿನ ಕೋರ್ಟಿನಲ್ಲಿ ಇಟ್ಟಿರುತ್ತದೆ ಆ ಕುರಿತು ಏನಾದರೂ ಆಕ್ಷೇಪಗಳಿದ್ದರೆ ಸದ್ರಿ ದಿನದ ಮೇಲಿನ ಕೋರ್ಟು ಮುಂದೆ ಹಗಲು ಘಂಟೆ 11ಕ್ಕೆ ನೀವು ಬಂದಾಗಲೀ ಯಾ ವಕೀಲರ ಮುಖಾಂತರವಾಗಲೀ ಹಾಜರಾಗಿ ಜ್ಞಾಪೀರು ಮಾಡಿಕೊಳ್ಳತಕ್ಕದ್ದು. ತಪ್ಪಿದಲ್ಲಿ ನಿಮ್ಮ ಗೈರುಹಾಜರಿಯಲ್ಲಿ ವ್ಯಾಜ್ಯವನ್ನೂ ಅರ್ಜಿಯನ್ನೂ ತೀರ್ಮಾನ ಮಾಡೋಣಾದೀತೆಂದು ತಿಳಿಯತಕ್ಕದ್ದು.

(ಕೋರ್ಟು ಹುಕುಂ ಪ್ರಕಾರ)

B. Manjaya Hegde,
Advocate for Plaintiffs.

Mangalore, 20—12—1960.

ನೋಟೀಸು.

ಕಾಸರಗೋಡು ಮುನ್ಸಿಫ್ ಕೋರ್ಟಿನಲ್ಲಿ

R. E. P. 375/1960
O. S. 311/1953

ಅಹಮ್ಮದ್ ಅಲಿ ಶಿರೂಲು (D.H.)— ಅರ್ಜಿದಾರ.

ಮತ್ತು

1. ಕೇಶವ, 2. ಮಂಜುನಾಥ, 3. ರಾಮಚಂದ್ರ—ಕೃಷ್ಣ ನಾಯ್ಕರ ಮಕ್ಕಳು, ಕೈಪಾಟಿ ಗ್ರಾಮದ ಕುಂಬ್ಳೆ ಎಂಬಲ್ಲಿರುವವರು —ರೈಪೊಂಡೆಂಟ್ರು.

ಇನರೊಳಗೆ

ಸದ್ರಿ ರೈಪೊಂಡೆಂಟರಿಗೆ ತಿಳಿಯಪಡಿಸುವುದೇನೆಂದ್ರೆ:—

ಸದ್ರಿ ಅಮ್ಲಜ್ಯಾರಿ ಅರ್ಜಿಯಲ್ಲಿ ರೈಪೊಂಡೆಂಟರ ಬಾಬ್ತು ಸ್ತಿರಾಸ್ತಿ ಏಲಂನ ಕುರಿತು ಶರ್ತ ನಿಶ್ಚೈಸುವ ಬಗ್ಗೆ ತಾರೀಕು 9—1—1961ಕ್ಕೆ ಮೇಲ್ಕಂಡ ಕೋರ್ಟಿನಲ್ಲಿ ಇಟ್ಟಿರುತ್ತದೆ. ಆದುದರಿಂದ ಅದಕ್ಕೇನಾದರೂ ಆಕ್ಷೇಪಗಳಿದ್ದಲ್ಲಿ ಆ ದಿನ್ನ ನೀವು ಸದ್ರಿ ಕೋರ್ಟಿನಲ್ಲಿ ಪೂರ್ವಾಪ್ಷ 11 ಗಂಟೆಗೆ ಹಾಜ್ರಾಗಿ ಜ್ಯಾಹೀರು ಮಾಡಿಕೊಳ್ಳತಕ್ಕದ್ದು. ತಪ್ಪಿದಲ್ಲಿ ಏಕಪಕ್ಷವಾಗಿ ತೀರ್ಮಾನಿಸಲಾಗುವುದು ಎಂತ ತಿಳಿಸುವ ನೋಟೀಸು.

(B. O. of Court)

K. Shankar Rao,
Advocate for Petitioner.

Kasaragod, 24—12—1960.



ಕುಮಾರಿ ಬಿಲ್ಲೆಗಳು

(Registered)

ಈ ದೇಶೀಯ ತಯಾರಿಕೆಯ ಗುಣಾಂಶವು ವರ್ಷಗಟ್ಟಲೆಯಿಂದ ವಿಖ್ಯಾತವಾಗಿದೆ ಮತ್ತು ಪ್ರಮುಖ ಕೆಮಿಸ್ಟರಿಂದ ಈ ಕೆಳಗಿನ ದರಗಳಲ್ಲಿ ವಿಕ್ರಯಿಸಲ್ಪಡುತ್ತದೆ. ಟ್ಯೂಬಿಗೆ ರೂ. 3=00 (ಸಾದಾ), ರೂ. 5=00(ಸ್ಪೆಶ್ಯಲ್), ರೂ. 8=00 (ಎಕ್ಸ್ಟ್ರಾ ಸ್ಪೆಶ್ಯಲ್).

P. DEVEE & Co. (M. I.) CALCUTTA—40

ಸ್ಟಾಕಿಸ್ಟರು: ಷಾ ಕಂಪೆನಿ, ಮಂಗಳೂರು—1.

ನವಯುಗ ವಾರ ಪತ್ರಿಕೆಗೆ ಚಂದಾದಾರರಾಗಿ ಪ್ರೋತ್ಸಾಹಿಸಿರಿ.

NAVAYUGA
REGD. NO.B. G. 176

UDIPI, THURSDAY
5-1-1961

LICENSE NO. 31
Licensed to Post without Prepayment

ಕನ್ನಡಿಗರಿಗೆ ! ಎಚ್ಚರಿಕೆ

(೧೧ನೇ ಪುಟದಿಂದ)

ತ್ಯಭಿಮಾನ, ಜಿಲ್ಲಾಭಿಮಾನಗಳ ಪ್ರದರ್ಶನಕ್ಕೆ ವಿಮರ್ಶೆ ಒಂದು ಆಯುಧವಾಗಿದೆ. ರಾಗದ್ವೇಷಗಳ ಮೆರೆದಾಟದಲ್ಲಿ ಕಾವ್ಯಗುಣ ಮೂಲೆ ಗುಂಪಾಯಿತು. ಈ ವ್ಯಾಧಿ ನಿವಾರಣೆಯಾದುದಲ್ಲದೆ ಕನ್ನಡ ಸಾಹಿತ್ಯಕ್ಕೆ ಉಳಿಗಾಲವಿಲ್ಲ. ಕವಿಯ ಜಾತಿ, ಕುಲ, ಗೋತ್ರಗಳನ್ನು ಮರೆತು, ಅವನ ಕಾವ್ಯವನ್ನು ನಿಸ್ವಕ್ಷಪಾತ ದೃಷ್ಟಿಯಿಂದ, ಸಹೃದಯತೆಯಿಂದ, ರಸಿಕತೆಯಿಂದ ನೋಡುವ ದೃಷ್ಟಿ ನಮ್ಮಲ್ಲಿ ಬೆಳೆಯಬೇಕು; ಕವಿಯ ಪ್ರತಿಭೆಯನ್ನೇ ವಿಮರ್ಶಕನಲ್ಲೂ ಪ್ರತಿಭೆಯಿದ್ದರೆ ಉತ್ತಮ ವಿಮರ್ಶೆ ಬರಲು ಸಾಧ್ಯ.

ಕಿರಿಯ ಲೇಖಕರು

ಹಿರಿಯರು ಹೊತ್ತಿನ ಬೆಳಸಿನ ಪಂಜನ್ನು ನನ್ನು ಕೈಗಿತ್ತು ಹೋಗಿರುವಂತೆ, ನಾವು ಈ ಪಂಜಿಗೆ ನಮ್ಮ ತಪಸ್ಸು, ಸೇವೆ, ತ್ಯಾಗದ ತೈಲವೆರೆದು ಕಿರಿಯರ ಕೈಗಿತ್ತು ಹೋಗಬೇಕು. ಕಿರಿಯರಲ್ಲಿ ಸಾಹಿತ್ಯ ಸೇವೆ ಮಾಡಬೇಕೆಂಬ ಆಕಾಂಕ್ಷೆಯಷ್ಟೇ ಸಾಲದು, ಸೇವೆ ಸಫಲವಾಗುವುದಕ್ಕೆ ಅತ್ಯವಶ್ಯವಾದ ಪಾಂಡಿತ್ಯ, ಭಾಷಾಸಿದ್ಧಿ, ಜೀವನಾನುಭವಗಳನ್ನು ದೊರಕಿಸಿಕೊಳ್ಳಬೇಕು. ದೂರಾರು ಸಹಸ್ರಾರು ಕೃತಿಗಳನ್ನು ಓದಿ ಜೀರ್ಣಿಸಿಕೊಳ್ಳಬೇಕು. ತುಸು ಜಾಗ್ರತೆ ವಹಿಸಿ ಮುಂದುವರಿಯಬೇಕು.

ಸಾಹಿತ್ಯದಲ್ಲಿ ಜಾತೀಯತೆ

ಒಂದು ಕೃತಕ ವ್ಯಮಂಜನವನ್ನು ನಿರ್ಮಿಸಿಕೊಂಡು, ಅದರ ಜವಾಸ್ತವ ಸೌಂದರ್ಯದಲ್ಲಿ ಸೌಖ್ಯ ಕಾಣುವುದಕ್ಕಿಂತ ನಿತ್ಯ ಜೀವನದಲ್ಲಿ ಹಾಸು ಹೊಕ್ಕಾಗಿರುವ ಸೌಂದರ್ಯ, ತ್ಯಾಗ, ಸತ್ಯ, ಔದಾರ್ಯ, ಅನುಕಂಪಾದಿ ಗುಣಗಳನ್ನು ಕಾಣುವುದು, ಹೆಚ್ಚು ಶ್ರೇಯಸ್ಕರವೆಂಬ ಭಾವನೆಯೇ ಆಧುನಿಕ ಸಾಹಿತ್ಯದ ಪ್ರೇರಕ ಶಕ್ತಿ ನಿತ್ಯ ಜೀವನದ ಕಾಳಜಿಗಳನ್ನು ತೊಡೆದು ಇದು ಪರಿಶುದ್ಧವೂ ಸುಭಗವೂ ಆಗುವಂತೆ ಶ್ರಮಿಸುವುದೇ ಆಧುನಿಕ ಸಾಹಿತಿಯ ಜೀವನದ ಉದ್ದೇಶವಾಗಿದೆ. ಸಾಹಿತ್ಯ ರಂಗದಲ್ಲಿ ಕೋಮುವಾರು ಭಾವನೆ ಬೆಳೆದಿಲ್ಲವೆಂದು ಭಾವಿಸಿ ಸುಮ್ಮನಿರುವುದು ಅಪಾಯಕಾರಿ ಈ ರಂಗದಲ್ಲಿಯೂ ಕೋಮುವಾರು ವಿಷ ಬೆಳೆಯತ್ತಿರುವ ದೈತ್ಯ ಶಕ್ತಿಗಳನ್ನು ನಾವು ನಿರ್ಭಯದಿಂದ, ನಿರ್ದಾಕ್ಷಿಣ್ಯದಿಂದ ಎದುರಿಸಬೇಕು. ಕೋಮುವಾರು ಭಾವನೆಯಿಂದ ನಮ್ಮ ರಾಜಕೀಯ, ಸಾಮಾಜಿಕ, ಶೈಕ್ಷಣಿಕ ರಂಗಗಳು ಕಲುಷಿತವಾಗಿರುವಾಗ, ಅವುಗಳಿಗೆ ಬೆಳಕನ್ನು ನೀಡಬಲ್ಲುದು ಸಾಹಿತ್ಯರಂಗವೊಂದೇ. ಸಾಹಿತ್ಯರಂಗವೂ ರಾಜಕೀಯ ರಂಗದ ಮಟ್ಟಕ್ಕಿಳಿದರೆ ನಾಡಿಗೆ ಕೇಡುಂಟಾಗುತ್ತದೆ. ವಿದ್ವತ್ ರಂಗದಲ್ಲಿ ವಾದ ವಿದ್ವತ್ ರಂಗಕ್ಕೇ ಆಡಕವಾಗಬೇಕು. ಬೀದಿಯ ಗಾಂಪರು ಅದರಲ್ಲಿ ಕೈಯಿಕ್ಕಿದೇ ಶದ ಶಾಂತಿಯನ್ನು ಕದಡುವುದು ಅನ್ಯಾಯ.

ನಮ್ಮ ಸಮಸ್ಯೆಗಳು

ಕೆಲವು ಯಂತ್ರ ಸೌಲಭ್ಯಗಳಲ್ಲದೆ ಈ ಯುಗದಲ್ಲಿ ಯಾವ ಪ್ರಗತಿಯನ್ನೂ ಸಾಧಿಸಲು ಶಕ್ಯವಿಲ್ಲ. ಕನ್ನಡಕ್ಕೆ ಅತ್ಯವಶ್ಯವಾಗಿ ಬೇಕಾಗಿರುವುದು ಟೈಪ್‌ರೈಟರ್, ಮೊನೋ ಟೈಪ್, ಲಿನೋ ಟೈಪ್ ಯಂತ್ರಗಳು ಕನ್ನಡದ ಟೈಪ್ ರೈಟರ್ ಯಂತ್ರ ಬಳಕೆಗೆ ಬರದಿರುವುದರಿಂದ ಸರಕಾರದ ಹಾಗೂ ಸಾರ್ವಜನಿಕರ ಕೆಲಸ ಕಾರ್ಯಗಳು ಸುಗಮವಾಗಿ ನಡೆಯಲು ಸಾಧ್ಯವಿಲ್ಲವಾಗಿದೆ. ಸರಕಾರವು ಈಗ ತೆಗೆದುಕೊಂಡಿರುವ ಅರು ಟೈಪ್‌ರೈಟರ್‌ಗಳಲ್ಲಿಯೇ ತೃಪ್ತರಾಗದೆ, ಸುಬ್ಬರಾಯರ ಯಂತ್ರದ ಸ್ವಾಮಿತ್ವ ಪಡೆದುಕೊಂಡು ಕನ್ನಡಿಗರ ಕೊರತೆಯನ್ನು ನಿವಾರಿಸಬೇಕು; ಇತರರ ಯಂತ್ರಗಳನ್ನೂ ಬೆಳೆಸಬೇಕು. ನಮ್ಮ ಪುರಾತತ್ವ ಶಾಖೆಯು ಈಗ ಕೇಂದ್ರದೊಳಗಿರುವುದರಿಂದ ಯಾವ ಕಾರ್ಯಗಳೂ ನಡೆಯಲಾರವು ಆದುದರಿಂದ, ಈ ಇಲಾಖೆಯ ಕರ್ನಾಟಕ ಭಾಗವನ್ನು ಪ್ರಾಂತ ಸರಕಾರ ಕೇಂದ್ರ ಸರಕಾರದಿಂದ ಹಿಂದಕ್ಕೆ ಪಡೆಯಬೇಕು. ಏಕಲಿಪಿಯ ವಾದದಿಂದ, ನಿರ್ಣಯಗಳಿಂದ ಆಂಧ್ರ-ಕರ್ನಾಟಕ ರಾಜ್ಯಗಳಿಗೂ ಹಿತವಾಗುವುದಿಲ್ಲ. ಆಂಧ್ರ ಕರ್ನಾಟಕಕ್ಕಿರುವ ಮಧುರ ಬಾಂಧವ್ಯಕ್ಕೆ ಇಂತಹ ಪ್ರಯತ್ನಗಳು ಹುಳಿ ಹಿಂಡುತ್ತವೆ. ಕನ್ನಡದ ಚಲಚ್ಚಿತ್ರಗಳು ಉನ್ನತವಾಗಬೇಕು. ಕನ್ನಡಕಾದಂಬರಿಗಳ ಕಥೆಯನ್ನೇ ನಿರ್ಮಾಪಕರು ಆಳವಡಿಸಬೇಕು; ಸಾಹಿತಿಗೆ ಅರ್ಹಗೌರವ ನೀಡಬೇಕು. ಕನ್ನಡ ನಟನಟಿಯರು ಕನ್ನಡವನ್ನು ಮರೆಯಬಾರದು. ಕನ್ನಡದ ಕಲಾವಿದರನ್ನು ತಿರಸ್ಕಾರದಿಂದ ಕಾಣುವ ಸರಕಾರದ ಮನೋಭಾವ ದೂರವಾಗಬೇಕು; ಇಲ್ಲವಾದರೆ, ಇನ್ನೊಂದೇ ತಲೆಮಾರಿನಲ್ಲಿ ನಮ್ಮ ಪುರಾತನ ಕಲೆಯು ನಿರ್ನಾಮವಾಗುವುದು.

ಕನ್ನಡ ಪತ್ರಿಕೋದ್ಯಮ ಅಭೂತಪೂರ್ವ ಪ್ರಗತಿಯನ್ನು ಸಾಧಿಸಿದೆಯೆಂದರೆ ತಪ್ಪಲ್ಲ. ಈಚೆಗೆ ಹುಟ್ಟಿಕೊಂಡಿರುವ ಸಣ್ಣ ಪತ್ರಿಕೆಗಳ ಅತಿವ್ಯಾಪ್ತಿಯಿಂದಾಗಿ ಪ್ರಸಾರ ಸಂಖ್ಯೆ ಇಳಿಮುಖವಾಗಿರಬಹುದು; ಪ್ರತಿ ಜಿಲ್ಲೆ, ಪ್ರತಿ ತಾಲೂಕಿನ ಕಷ್ಟ ಸುಖಗಳನ್ನು ಸರಕಾರಕ್ಕೂ ಜನತೆಗೂ ತಿಳಿಸಿಕೊಡುವ ಸಣ್ಣ ಪತ್ರಿಕೆಗಳು ಬೆಳೆಯಬೇಕಾದುದಗತ್ಯ. ಆದರೆ ಇವುಗಳಲ್ಲಿ ಕೆಲವು ಅಡ್ಡದಾರಿ ಹಿಡಿದು 'ಪೀತವರ್ಣ' ತಳೆದಿರುವುದು ಚಿಂತೆಗೂ ಭಯಕ್ಕೂ ಕಾರಣವಾಗಿದೆ. ಕೆಲವು ಜನನಾಯಕರು, ಪುಢಾರಿಗಳು, ಸರಕಾರಿ ಅಧಿಕಾರಿಗಳು ಇಂಥ ಪತ್ರಿಕೆಗಳ ಪೋಷಕರಾಗಿದ್ದಾರೆ. ಈ ವಿಷಬೀಜ ಮೊಳೆತು, ಚಿಗುರೊಡೆಯಲು ಅವಕಾಶವಿತ್ತರೆ ಜನರ ಬಾಳೇ ದುಸ್ಸಹವಾಗುತ್ತದೆ. ಮೈಸೂರು ಸರಕಾರ ತಮ್ಮ ಉದ್ಯೋಗಗಳು, ಅವುಗಳ ಸಿದ್ಧ ಕೃತಿಗಳ ಪ್ರಸಾರಕ್ಕೆ ಪ್ರತಿವರ್ಷ ೧೦ ಲಕ್ಷ ರೂಪಾಯಿಗಳ ವ್ಯಯ ಮಾಡುತ್ತದೆ. ಈ ಹಣವು ಮದರಾಸಿಗೆ ಹೋಗುತ್ತಿರುವುದು ತಪ್ಪಬೇಕು. ಜನಗಣತಿಯ ಸಮಯ ನಿಜವಾದ ಕನ್ನಡಿಗರಿಗೆ ಮುಖ್ಯವಾಗಿ ಗಡಿನಾಡುಗಳವರಿಗೆ ಅನ್ಯಾಯವಾಗದಂತೆ ನೋಡಿಕೊಳ್ಳಬೇಕು. ರಾಜ್ಯದ ನೌಕರಿಗಳಲ್ಲಿ ಅನ್ಯನಾಡವರು ಬಂದು ತೂರಿಕೊಳ್ಳುವುದು ತಪ್ಪಿ ಕನ್ನಡನಾಡಿನ ನೌಕರಿಗಳಲ್ಲಿ ಕನ್ನಡಿಗರೇ ಇರುವಂತಾಗಬೇಕು.

ಕನ್ನಡ ರಾಜ್ಯದ ಆಡಳಿತ ಶಿಕ್ಷಣ ವ್ಯವಹಾರ ಭಾಷೆ ಕನ್ನಡವೆಂದು ರಾಜ್ಯ ಸರಕಾರ ಕೂಡಲೇ ಘೋಷಿಸಬೇಕು ಹಿಂದಿಯಾಗಲಿ, ಇಂಗ್ಲಿಷಾಗಲಿ ಈ ಸ್ಥಾನದಲ್ಲಿ ನಿಲ್ಲಲು ಸಾಧ್ಯವಿಲ್ಲ. ದೇಶಭಾಷೆಯಾದ ಹಿಂದಿಯನ್ನು ಕನ್ನಡಿಗರು ಕಲಿಯುವುದಂತೂ ಅನಿವಾರ್ಯ. ಹಿಂದಿಯೊಂದಿಗೆ ಸಂಸ್ಕೃತವನ್ನೂ ಕಡ್ಡಾಯವಾಗಿ ಕಲಿಸಬೇಕು. ನಮ್ಮ ಸಂಸ್ಕೃತಿಯ ತಾಯಿಬೇರು ಸಂಸ್ಕೃತ. ಸಂಸ್ಕೃತವನ್ನು ಉಪೇಕ್ಷಿಸಿದರೆ 'ಹಿಂದೊತ್ತ್ವ'ವೇ ನಾಶವಾಗುತ್ತದೆ. ಕನ್ನಡ, ಸಂಸ್ಕೃತ, ಹಿಂದೀ ಭಾಷೆಗಳ ಜತೆಗೆ ಇಂಗ್ಲಿಷ್ ಕಡ್ಡಾಯವಾಗಿರಬೇಕು. ಹಿಂದಿಯಮೇಲಣ ಅತಿಮೋಹದಿಂದ ನಾವು ಇಂಗ್ಲಿಷ್ ಭಾಷೆಗೆ ತಿಲತರ್ಪಣ ನೀಡುವುದು ಮೂರ್ಖತನ. ಪಂಚವಾರ್ಷಿಕ ಯೋಜನೆಗಳ ಬಗ್ಗೆ ಜನರಿಗೆ ತಿಳಿವು ಕೊಡಲು ಕೇಂದ್ರ ಸರಕಾರ ಎಲ್ಲ ಪ್ರಾಂತ್ಯಗಳ ಬುದ್ಧಿಜೀವಿಗಳು, ಕಲಾವಿದರ ನೆರವು ಕೋರಲು ನಿಶ್ಚಯಿಸಿರುವುದು ಸ್ತುತ್ಯ. 'ನಾವು ಭಾರತೀಯರು' ಎಂಬ ಭಾವನೆ ಇನ್ನೂ ನಮ್ಮ ಜನರಲ್ಲಿ ಬೆಳೆಯಬೇಕಾಗಿದೆ. ಈ ಭಾವನೆ ಬೆಳೆಸಲು ಯತ್ನಿಸುತ್ತಿರುವ ಕೇಂದ್ರ ಸರಕಾರಕ್ಕೆ ಸಂಪೂರ್ಣ ಸಹಕಾರವೀಯುವುದು ಬುದ್ಧಿಜೀವಿಗಳ ಕರ್ತವ್ಯ. ಮಂಗಳೂರನ್ನು ದೊಡ್ಡ ಬಂದರಾಗಿ ಪರಿವರ್ತಿಸಲು ಇದ್ದ ಅಡ್ಡಿ ಆತಂಕಗಳೆಲ್ಲ ಹೋಗಿವೆ. ಈಗ ಕೊಟ್ಟದನ್ನು ಸಂತೋಷದಿಂದ ಸ್ವೀಕರಿಸಿ, ಮುಂದಿನ ಬೇಡಿಕೆಗಳಿಗಾಗಿ ಹೋರಾಡಬೇಕು. ಹೊರನಾಡ ಕನ್ನಡಿಗರು ತಮ್ಮ ಕನ್ನಡತನವನ್ನು ಮರೆಯದಿರುವುದು ಸ್ತುತ್ಯ. ರಾಜ್ಯಸರಕಾರ ಹಾಗೂ ಕನ್ನಡ ಸಾಹಿತ್ಯ ಪರಿಷತ್ತು ಇಂಥಕರ ಸಂಘ ಸಂಸ್ಥೆಗಳ ನಿಕಟ ಸಂಪರ್ಕವನ್ನಿಟ್ಟುಕೊಂಡು ಅವರಿಗೆ ಕಾಲೋಚಿತ ಸಲಹೆ, ಸಹಾಯಗಳನ್ನು ನೀಡಬೇಕು.

ಗಡಿನಾಡುಗಳು

ನಮ್ಮ ಕೈಬಿಟ್ಟು ಹೋದ ಕನ್ನಡದ ಭಾಗಗಳನ್ನು ಪುನಃ ದೊರಕಿಸುವುದಕ್ಕೆ ಯಾವ ಸಂಘಟಿತ ಪ್ರಯತ್ನವೂ ನಡೆದಿಲ್ಲ. ತಮ್ಮದಲ್ಲದ ಬೆಳಗಾಂವಿಯನ್ನು ಮಹಾ ರಾಷ್ಟ್ರಕ್ಕೆ ಸೇರಿಸಲು ಮರಾಠಿಗರು ನಡಸುತ್ತಿರುವ ಪ್ರಯತ್ನಗಳನ್ನು ನೋಡುತ್ತ ರಾಜ್ಯ ಸರಕಾರ ತಾಟಸ್ಥ್ಯ ಧೋರಣೆ ತಳೆದಿರುವುದು ವಿಷಾದಕರ. ಈ ಪ್ರದೇಶಗಳ ಜನರು ಸಂಘಟಿತರಾಗಿ ತಮ್ಮ ನ್ಯಾಯವಾದ ಹಕ್ಕು ಬಾಧ್ಯತೆಗಳನ್ನು ಶಾಂತ ರೀತಿಯಲ್ಲಿ ಕೇಂದ್ರ ಸರಕಾರದ ಗಮನಕ್ಕೆ ತರಬೇಕು. ಕೇಂದ್ರ ಸರಕಾರವು ನಕಾರ ಹೇಳದಂತೆ ಅದನ್ನು ಒತ್ತಾಯ ಪಡಿಸುವ ಹೊಣೆಗಾರಿಕೆ ರಾಜ್ಯ ಸರಕಾರದ್ದು ಮತ್ತು ಸಮಸ್ತ ಕನ್ನಡಿಗರದ್ದು ಆಗಿದೆ.

ಉಪಸಂಹಾರ

ನಾವು ಬಯಸಿದ್ದು ವಿಶಾಲ ಕರ್ನಾಟಕ, ನಮಗೆ ದೊರೆತದ್ದು ವಿಶಾಲ ಮೈಸೂರು! ಕನ್ನಡ ಪ್ರಾಂತವನ್ನು ಎರಡಾಗಿ ವಿಂಗಡಿಸುವ ಪ್ರಯತ್ನಗಳಾಗುತ್ತಿವೆ. ಅಖಂಡ ಕರ್ನಾಟಕದ ರಕ್ಷಣೆಗೆ ಜನಬದ್ಧ ಕಂಕಣವಾಗಬೇಕು. ಯಾವ ಜಾತಿ, ಮತ, ಪಂಥ, ಕೋಮಿನ ದಾಕ್ಷಿಣ್ಯಕ್ಕೂ ಕಟ್ಟುಬಿದ್ದು ಕರ್ನಾಟಕವನ್ನು ಮತ್ತೆ ಒಡೆಯಲು ಅವಕಾಶ ಕೊಡಬಾರದು. ತಪೋಭೂಮಿಯೂದ ಈ ಕನ್ನಡನಾಡು ಜನತೆಯ ತಪಸ್ಸಿನಿಂದಲೇ ವರ್ಧಿಸಬೇಕು. ಪ್ರಕೃತಿ ಶ್ರೀಯ ಆಡುಂಬೊಲವಾದ ಈ ನಾಡಿನ ಪುಣ್ಯವನ್ನು ಕಾಪಾಡಿಕೊಂಡು ಇದರ ತಪೋಭಂಡಾರಕ್ಕೆ ನಮ್ಮ ತ್ಯಾಗ, ಸೇವೆ, ಪೌರುಷದ ಕಾಣಿಕೆಯನ್ನರ್ಪಿಸುವ ಹೊಣೆಗಾರಿಕೆ ನಮ್ಮ ಮೇಲಿದೆ.

ಸಿರಿಗನ್ನಡಂ ಗೆಲ್ಗೆ, ಹಿರಿಗನ್ನಡಂ ಗೆಲ್ಗೆ
ಸಿಂಗನ್ನಡಂ ಗೆಲ್ಗೆ, ಬಾಳ್ಗೆ
ಕನ್ನಡದ ತಾಯ್ ಗೆಲ್ಲೆ ಬಾಳ್ಗೆ.

ಪ್ರತಿಯೊಬ್ಬರಿಗೂ ಸಮೃದ್ಧಿ..... ೧೯೬೦

"ನೂರು ವರುಷ ಬಾಳುವ
ಸಿರಿಯ ಸುಖವ ಕಾಣುವ"

ಕವಿಯ ಹಾರೈಕೆ ನಮ್ಮೆಲ್ಲರ ಜೀವನದಲ್ಲಿ ಪೈಪೋಟಿ ಬರಲೆಂದು ಬಯಸುವೆವು: ಈ ಹೊಸ ವರ್ಷ ಮೂಡುವಂದು; ಹೊಂಬೆಳಕು ಬೀರುವಂದು.

ಟಿ. ಎ. ಪೈ
ಜನರಲ್ ಮೆನೆಜರ್

ಟಿ. ಎಂ. ಎ ಪೈ
ಮೆನೆಜಿಂಗ್ ಡೈರೆಕ್ಟರ್

ಸಿಂಡಿಕೇಟ್ ಬೇಂಕ್

ದಿ ಕೆನರಾ ಇಂಡಸ್ಟ್ರಿಯಲ್ & ಬೇಂಕಿಂಗ್ ಸಿಂಡಿಕೇಟ್ ಲಿಮಿಟೆಡ್

ಪ್ರಧಾನ ಕಾರ್ಯಾಲಯಃ ಉಡುಪಿ, ಮೈಸೂರು ರಾಜ್ಯ

ಸ್ಥಾಪನೆ: ೧೯೩೩

'NAVAYUGA' WEEKLY is in the list of periodicals and Newspapers approved for use in Secondary School as per proceedings Roc. No. 466 N/50 date 2-12-1950 of the Director of public Instruction Madras.

Edited, Printed & Published by K. H. Shetty, at the Navayuga Press, Udipi, S. India.

40th year of publication. 12-1-1961 ೪೦ನೇ ವರ್ಷ

ಸಂಪುಟ ೪೦ Vol. 40

ಸಂಚಿಕೆ ೧೯ No. 19

ಜೆಲೆ 0=13

ನವಯುಗ

NAVAYUGA KANNADA WEEKLY UDIPI

ಕಾಂಗ್ರೆಸಿಗರಿಗೆ ಕಿವಿಮಾತು

ಅಧಿಕಾರಕ್ಕೆ ಅಂಟಿಕೊಂಡಿರಬೇಡಿರಿ

ಕಾಂಗ್ರೆಸ್ಸಿನ ೬೭ನೆಯ ಸಮ್ಮೇಳನವು ಸರದಾರ ನಗರದಲ್ಲಿ ಸಮಾವೇಶಗೊಂಡಾಗ ಶ್ರೀ ನೀಲಂ ಸಂಜೀವ ರೆಡ್ಡಿಯವರು ಹತ್ತು ವರ್ಷಗಳಿಗೆ ಅಧಿಕವಾಗಿ ಅಧಿಕಾರದಲ್ಲಿರುವ ಕಾಂಗ್ರೆಸಿಗರು ಸ್ವೇಚ್ಛೆಯಿಂದ ಅದನ್ನು ಹೊಸ ಪೀಳಿಗೆಗೆ ತೆರವು ಮಾಡಿಕೊಟ್ಟು ತಾವು ಪಕ್ಷ ಸಂಘಟನೆಗೆ ದುಡಿಯಬೇಕು—ಎಂದು ಕರೆಯಿತ್ತರು.

ಸಂಕುಚಿತ ಪ್ರವೃತ್ತಿ ದೂರವಾಗಬೇಕು

ವೈವಿಧ್ಯಪೂರ್ಣ ಭಾರತದ ರಾಷ್ಟ್ರೀಯ ಜೀವನದಲ್ಲಿ ಐಕ್ಯದ ಬಲವಾದ ಪ್ರವಾಹವು ಹರಿಯುತ್ತಿದೆಯೆಂಬುದು ನಿಜ. ಆದರೂ ಜನತೆಯಲ್ಲಿ ಅಸಹನೆ ಹೆಚ್ಚಿರುತ್ತದೆ. ಪ್ರಾಂತೀಯತೆ, ಭಾಷೀಯತೆ ಮತ್ತು ಜಾತೀಯತೆಗಳು ತಲೆಯೆತ್ತಿರುವುದೇ ಇದಕ್ಕೆ ಸಾಕ್ಷಿ. ತನ್ನ ಪ್ರಾಂತ ಇಲ್ಲವೇ ಭಾಷೆಯ ಬಗ್ಗೆ ಪ್ರತಿಯೊಬ್ಬನೂ ಹೆಮ್ಮೆ ಪಡುವುದು ತಪ್ಪಲ್ಲ. ಈ ಭಾವನೆಯು ಪರಿಮಿತವಾಗಿಲ್ಲವಾದರೆ, ಇಡೀ ಭಾರತಕ್ಕೆ ಅಪಾಯವಿರುತ್ತದೆ.

ಪರಸ್ಪರ ವಿರೋಧಿ ಹಿತಾಸಕ್ತಿಗಳಿದ್ದರೆ, ಅದನ್ನು ನಿರ್ಣಯಿಸಲು ಎರಡೇ ಮಾರ್ಗಗಳಿವೆ. ಒತ್ತಾಯದಿಂದ ನಿರ್ಣಯ ಹೇರುವುದೊಂದು; ಪರಸ್ಪರ ವಿಚಾರ ಚರ್ಚೆಗಳ ಮೂಲಕ ಪ್ರಜಾಸತ್ತಾತ್ಮಕ ಪದ್ಧತಿಯನ್ನು ಅನುಸರಿಸುವುದು ಇನ್ನೊಂದು. ನಾವು ನಮ್ಮ ದೇಶದಲ್ಲಿ ಪ್ರಜಾಸತ್ತಾತ್ಮಕ ವಿಧಾನವನ್ನು ಅನುಸರಿಸಿದ್ದೇವೆ. ಈ ಪದ್ಧತಿಯನ್ವಯ: ಇನ್ನೊಂದು ಪಕ್ಷದವರ ಅಭಿಪ್ರಾಯವನ್ನು ಅಳವಡಿಸಿಕೊಳ್ಳಲು ಪ್ರಯತ್ನಿಸಬೇಕಾಗುತ್ತದೆ. ಕೊನೆಯ ನಿರ್ಣಯ ಸ್ವೀಕರಿಸುವುದಕ್ಕೆ ಮೊದಲು ಕೆಲವಷ್ಟಿಗೆ ಕೊಡು-ತೆಗೆದುಕೊಳ್ಳುವ ತತ್ತ್ವದ ಆಧಾರದ ಮೇಲೆ ಹೊಂದಾಣಿಕೆಯನ್ನು ಸಾಧಿಸಬೇಕಾಗುವುದು. ಪ್ರಜಾಸತ್ತಾತ್ಮಕ ಆಡಳಿತೆಯಲ್ಲಿ ಅಭಿಪ್ರಾಯ—ವಿಚಾರ ಸ್ವಾತಂತ್ರ್ಯಗಳು ಇರುತ್ತವೆ; ಆದರೂ ಸ್ವೀಕರಿಸಿದ ನಿರ್ಣಯಗಳನ್ನು ಯಾವುದೇ ಸಂಶಯ ವ್ಯಕ್ತಪಡಿಸದೆ ಒಪ್ಪಿಕೊಳ್ಳಬೇಕಾಗುವುದು. ಅದರಂತೆ ನಡೆಯದಿದ್ದರೆ, ನಮಗೆ ಅಧೋಗತಿಯು ಬಂದೊದಗುವುದು. ಹಿಂದೆ ನಡೆದ ಘಟನೆಗಳಿಂದ ನಾವು ಪಾಠ ಕಲಿತುಕೊಳ್ಳಬೇಕು; ನಮ್ಮ ಈಗಿನ ಆಚಾರವಿಚಾರಗಳನ್ನು ಅದಕ್ಕನುಗುಣವಾಗಿ ರೂಪಿಸಿಕೊಳ್ಳಬೇಕು. ಇದಕ್ಕಾಗಿ ಪ್ರಾಂತೀಯತೆ, ಭಾಷೀಯತೆ ಮತ್ತು ಜಾತೀಯತೆಯಂತಹ ಸಂಕುಚಿತ ಭಾವನೆಗಳನ್ನು ಬಿಟ್ಟುಕೊಡಬೇಕು; ಭಾವೋದ್ರೇಕಗಳಿಗೆ ಎಂದೂ ಅವಕಾಶಕೊಡಬಾರದು.

ಬಲಯ ಮಂಡಳಗಳ ರೂಪ ವಿಸ್ತಾರ

ಬಲಯ ಮಂಡಳಗಳು ತಂತಮ್ಮ ನಿತಿಯೊಳಗೆ ಬರುವ ವಿವಿಧ ರಾಜ್ಯಗಳ ಸಾಮಾನ್ಯ ಸಮಸ್ಯೆಗಳನ್ನಿಂದು ಚರ್ಚಿಸುತ್ತಿವೆ. ಆದರೆ, ಈ ಮಂಡಳಗಳು ಈಗ ಕೇವಲ ಸಲಹಾ ಸಮಿತಿಗಳಂತಿವೆ. ಇದರಿಂದಾಗಿ ಇವುಗಳಿಂದ ಪ್ರಭಾವಶಾಲಿ ಕಾರ್ಯ ನಡೆಯುವುದು ಸಾಧ್ಯವಿರುವುದಿಲ್ಲ. ತಾವು ಸ್ವೀಕರಿಸಿದ ನಿರ್ಣಯಗಳನ್ನು ಕಾರ್ಯಕೃತವಾಗುವಂತೆ ನೋಡಿಕೊಳ್ಳುವ ಮತ್ತು ಅವಶ್ಯಕತೆ ಬಿದ್ದಾಗ ಅವನ್ನು ಕಾರ್ಯಕಾರಿಗೊಳಿಸುವ ಅಧಿಕಾರ ಬಲಯ ಮಂಡಳಗಳಿಗೆ ಇದ್ದರೆ, ಇಂತಹ ಪ್ರಮೇಯ ಒದಗಿ ಬರುತ್ತಿರಲಿಲ್ಲ. ಎಲ್ಲ ಸಮಸ್ಯೆಗಳನ್ನೂ ಈ ಮಂಡಳಗಳು ಸ್ಥೂಲ ದೃಷ್ಟಿಯಿಂದ ಬಗೆಹರಿಸಬೇಕು. ಎಲ್ಲ ಹಿತಸಂಬಂಧಗಳಿಗೆ ಪ್ರಾತಿನಿಧ್ಯ ದೊರೆಯುವಂತೆ ಇವುಗಳನ್ನು ವಿಸ್ತರಿಸಬೇಕು. ಅದರೆ, ಸಂಪೂರ್ಣ ಚರ್ಚೆಯ ನಂತರ, ಸ್ವೀಕರಿಸಿದ ನಿರ್ಣಯಗಳನ್ನು ಎಲ್ಲರೂ ಒಪ್ಪಿಕೊಳ್ಳುವುದು ಅವಶ್ಯವಿದೆ. ಸಮಸ್ಯಾ ಪರಿಹಾರಕ್ಕೆ ಪ್ರಜಾಸತ್ತಾತ್ಮಕ ಮಾರ್ಗವೆಂದರೆ ಇದೆ. ಇಂದಿನ ವೈಷಮ್ಯ ಮಾಯವಾಗಬೇಕಾದರೆ, ಇರುವ ತಾರಕೋಪಾಯ ಇದೊಂದೇ.

ಜನವರಿ ೨೦ ರಂದು ಅಮೆರಿಕದ ಅಧ್ಯಕ್ಷ ಅಧಿಕಾರ ಸ್ವೀಕರಿಸುವ ಚುನಾಯಿತ ಅಧ್ಯಕ್ಷ ಶ್ರೀ ಜಾನ್ ಕೆನ್ನೆಡಿಯವರು ತಮ್ಮ ಮತದಾರನ್ನು ಅಭಿನಂದಿಸಿತ್ತಿರುವುದು. ಪಕ್ಕದಲ್ಲಿ ಶ್ರೀಮತಿ ಕೆನ್ನೆಡಿಯವರನ್ನು ಕಾಣಬಹುದು.

ಅಧಿಕಾರ ಬಯಸದೆ ಬಿಟ್ಟುಬನ್ನಿ

ಬಿಚ್ಚು ಮನಸ್ಸಿನಿಂದ ಹೇಳುವುದಾದರೆ, ಅಧಿಕಾರದ ಕೇಂದ್ರಗಳಾದ ಸಚಿವಾಲಯಗಳಲ್ಲಿ ಕಾಂಗ್ರೆಸಿಗರ ಚಟುವಟಿಕೆಗಳು ವಿಶೇಷವಾಗಿವೆ. ಅದರೆ, ಹಳ್ಳಿಗಳಲ್ಲಿ ಅವರು ಹೆಚ್ಚು ಹೆಚ್ಚು ಪ್ರಾಮಾಣಿಕತೆಯೊಡನೆ ಸೇವೆ ಸಲ್ಲಿಸುವ ಪಂಪಾಠ ಕಡಿಮೆಯಾಗುತ್ತಿದೆ. ಇದೂವುದೇ ರಾಜಕೀಯ ಕ್ರಮ ಕೈಗೊಳ್ಳಬೇಕಾದರೆ, ಅದು ಸರಕಾರದ ಮೂಲಕವೇ ನಡೆಯಬೇಕೆಂಬ ಪರಿಪಾಠ ಬಿದ್ದಿರುವುದರಿಂದ ಎಲ್ಲರೂ ಅಧಿಕಾರ ಸ್ಥಾನಗಳು ತಮಗೆ ಬೇಕೆಂದು ಹಂಬಲಿಸುವುದು ತಪ್ಪೇನಲ್ಲ. ಆದರೆ, ಸ್ವಾರ್ಥ ಸಾಧನೆಗಾಗಿ ಅಧಿಕಾರ ಸ್ಥಾನಗಳನ್ನು ಕಬಳಿಸಲು ನಡೆಸುವ ಕುತಂತ್ರಗಳನ್ನು ಸಹಿಸುವುದೂ ಸಾಧ್ಯವಲ್ಲ. ಈ ಸಂಬಂಧದ ಆರೋಪವನ್ನು ಕಾಂಗ್ರೆಸಿಗರ ಮೇಲೆ ಮಾತ್ರ ಹೇರುವುದು ಪರಿಯೆನಿಸುವುದಿಲ್ಲ. ಈಗ ಅಧಿಕಾರಸ್ಥಾನದಲ್ಲಿರುವವರೂ ಕೆಲವಷ್ಟಿಗೆ ಇದಕ್ಕೆ ಕಾರಣರಾಗಿದ್ದಾರೆ. ಒಂದು ಬಾರಿ ಅಧಿಕಾರಸ್ಥಾನ ಲಭಿಸಿತೆಂದರೆ, ಅದಕ್ಕೆ ಛತ್ರವಾಗಿ ಅಂಟಿಕೊಳ್ಳುವ ಜನರು ನಮ್ಮಲ್ಲಿ ಅನೇಕರಿದ್ದಾರೆ. ಇಂದು ನಮ್ಮ ಮನೆಯ ಇರುವ ಪಂಡಿತ ನೆಹರುರವರು ಅಂತರಾಷ್ಟ್ರೀಯ ಖ್ಯಾತಿವೆತ್ತ ಮೇಧಾವಿಗಳು. ಜನರ ಪಾಂಡಿತ್ಯ ಮತ್ತು

(೧೨ನೆ ಪುಟ ನೋಡಿರಿ)

ಮಂಗಳೂರಲ್ಲಿ ಈಗಾಗಲೇ ತೆರೆಯಲ್ಪಟ್ಟು ಪ್ರಗತಿಯಿಂದ ಮುಂದೆ ಸಾಗುತ್ತಿರುವ ಇನ್ನೊಂದು ಪ್ರಸಿದ್ಧ ಜವುಳಿ ಮಳಿಗೆ—

ಸಾರೀ ಎಂಪೋರಿಯಮ್

ಕೆಥೊಲಿಕ್ ಕ್ಲಬ್ಬಿನ ಎದುರು, ಹಂಪನಕಟ್ಟಾ, ಮಂಗಳೂರು-1

ನಿಮ್ಮ ಉತ್ತಮ ಆಯ್ಕೆಗೆ ಯೋಗ್ಯವೆಂದೆನಿಸಿದ ರೇಶ್ಮೆ ಸೀರೆಗಳೂ, ಹತ್ತಿ ನೂಲಿನ ಸೀರೆಗಳೂ ಸರ್ವೋತ್ಕೃಷ್ಟವಾಗಿವೆ. ಯಾವತ್ತೂ ತರದ ಶರ್ಟಿಂಗ್, ಕೋಟಿಂಗ್, ಚಿಂಟ್ಸ್, ಸಿಲ್ಕ್, ಸೈಲಾನ್ ಇತ್ಯಾದಿ ಬಟ್ಟೆಬರೆಗಳಿಗೂ ಸಂದರ್ಶಿಸಿರಿ—

SAREE EMPORIUM

Opposit Catholic Club,
HAMPANKATTA, MANGALORE—1.

ESTD. 1921

NAVAYUGA
KANNADA WEEKLY,
UDIPI.

Founder:
Late Sri A. B. Shetty,
Former Minister for Public Health Govt. of Madras & Govt. of Mysore.

●

ನವಯುಗ

ಪ್ರತಿ ಗುರುವಾರ
ಉಡುಪಿಯಿಂದ ಹೊರಡುವ
ರಾಷ್ಟ್ರೀಯ ವಾರಪತ್ರಿಕೆ

ಸ್ಥಾಪನೆ: ೧೯೩೧.

ಗೌರವ ಸಂಪಾದಕರು:
ಎಸ್. ಗೋವಿಂದ ರಾವ್,
ವಿದ್ವಾನ್.
ಬಿ. ರಾಮರಾಯ ಶೆಟ್ಟಿ.
ಬಿ. ಎ., ಎಲ್. ಟಿ.

ನಿರ್ವಾಹಕ ಸಂಪಾದಕರು:
ಕೆ. ಹೊನ್ನಯ್ಯ ಶೆಟ್ಟಿ.

●

ಜಾಹೀರಾತು ದರಗಳು:
ನಿಯಮಿತ (ಕಂಟ್ರಾಕ್ಟ್)
ಕಲಂ ಇಂಚಿಗೆ ರೂ. 2-00
ಅನಿಯಮಿತ (ಕೆಜುವಲ್)
ಕಲಂ ಇಂಚಿಗೆ ರೂ. 3 00
ಹೆಚ್ಚಿನ ವಿವರಗಳಿಗೆ ವ್ಯವಹರಿಸಿರಿ.

ಚಂದಾ:
ವಾರ್ಷಿಕ ಚಂದಾ (ಅಂಚೆವೆಚ್ಚ ಸೇರಿ) ರೂ. 6-25
ಪ್ರತಿಪ್ರತಿ ರೂ. 0-13

ಚಂದಾಯನ್ನಾಗಲೀ ಜಾಹೀರಾತಿನ ಪೊಬಲಗನ್ನಾಗಲೀ ಸಿಂಡಿಕೇಟ್ ಬೇಂಕಿನ ಯಾವುದೇ ಶಾಖೆಯಲ್ಲಿ ಯಾವ ಪಿರ್ಜಾ ಇಲ್ಲದೆ 'ನವಯುಗ'ದ ಖಾತೆಗೆ ಜಮೆ ಮಾಡುವಸೌಕರ್ಯವಿರುವುದು.

ಕಥಾವಿಹಾರ

(ಅ)ಪರಿಚಿತ ವ್ಯಕ್ತಿ

ಎಲ್ಲಿಗೊ ಹೊರಟು ಹೋಗಲು ರೇಲ್ವೆ ನಿಲ್ದಾಣಕ್ಕೆ ಬಂದು ಹುರಿಗಡಲೆ ಕಡಿಯುತ್ತಿರುವಾಗ ತಾಂಜಾವೂರಿನ ರತ್ನವ್ಯಾಪಾರಿಯ ಥಳಕಿನಲ್ಲೊಬ್ಬ ವ್ಯಕ್ತಿ ಎದುರಾದ. ಆತನ ವಿಚಿತ್ರ ಕಥೆಯನ್ನು ನೀವೂ ತಿಳಿದುಕೊಳ್ಳಿರಿ.

ಶ್ರೀ ಎಚ್. ಗೋಪಾಲ ಭಟ್ಟ

ಇಲ್ಲದೇ ಇರುವ ಮನೆ, ಮಠ, ಬಂಧು, ಬಳಗ, ಹೆಂಡತಿ ಮಕ್ಕಳು ಎಲ್ಲವನ್ನೂ ತ್ಯಜಿಸಿ ಯಾರಿಗೂ ಹೇಳದೆ, ಯಾರನ್ನೂ ಕೇಳದೆ ಯಾವುದಾದರೂ ಒಂದು ಊರಿಗೆ ಹೋಗಿ ಬರಬೇಕೆಂಬ ಪ್ರಬಲವಾದ ಆಸೆಯ ಕುಡಿಯೊಂದು ಮನದಲ್ಲಿ ಚಿಗುರಿದಾಗ ಸ್ವಲ್ಪವೇ ಇದ್ದ ಬಟ್ಟೆ ಬರೆಗಳನ್ನು ಸಣ್ಣ ಚೀಲವೊಂದಕ್ಕೆ ತುರುಕಿಸಿ ಬಾಡಿಗೆಯ ಮನೆಯಿಂದ ಹೊರ ಬಂದೆ. ಚೀಲ ಸಮೇತನಾಗಿ ಪ್ರವಾಸಾರ್ಥಿಯಾಗಿ ಹೊರಟ ನನಗೆ ವಿನೂತನ ನಿಲ್ದಾಣಕ್ಕೆ ತೆರಳಲೇ, ರೈಲ್ವೆ ಸ್ಟೇಷನ್ನಿಗೆ ಹೋಗಲೇ, ಬಸ್‌ಸ್ಟ್ಯಾಂಡಿಗೆ ಹೋಗಲೇ, ಟ್ಯಾಕ್ಸಿಯನ್ನು ಹುಡುಕಲೇ ಎಂಬುದು ಹೊಳೆಯದ ಪ್ರಯುಕ್ತ ತುಸುಕಾಲ ದ್ವಾರ ಪಾಲಕನಂತೆ ಮನೆಯ ಮುಂದೆಯೇ ನಿಂತೆ. ಮಿದುಳಿಗೆ ಕೊಂಚ ಕಸರತ್ತನ್ನು ಕೊಟ್ಟಾಗ 'ಎಲ್ಲ ಪ್ರಯಾಣಗಳಿಗಿಂತ ಪ್ಯಾಸೆಂಜರ್ ಟ್ರೈನಿನಲ್ಲಿ ಥರ್ಡ್‌ಕ್ಲಾಸ್ ಪ್ರಯಾಣವೇ ನಿನಗೆ ಸರಿಯಾದ್ದು' ಎಂಬ ಸಲಹೆಯನ್ನು ಮಿದುಳು ದಯಪಾಲಿಸಿತು. ಅದರ ಆಜ್ಞೆಯಂತೆ ರೈಲ್ವೆ ನಿಲ್ದಾಣದ ಅಭಿಮುಖವಾಗಿ ಹೊರಟಾಗ ಕಣ್ಣುಗಳು ಬೇಡ ಬೇಡವೆಂದರೂ ಮುಂದೆ ಬರುತಿದ್ದ, ಹಿಂದೆ ಹೋಗುತಿದ್ದ, ಪಕ್ಕದಲ್ಲಿ ಧಿಕ್ಕಿ ಹೊಡೆಯುತಿದ್ದ ನಾನಾ ವಿಧದ ಹೆಂಗಸರನ್ನೂ, ಗಂಡಸರನ್ನೂ, ಮಕ್ಕಳನ್ನೂ, ಮುದುಕರನ್ನೂ ನೋಡ ತೊಡಗಿದುವು. ಪಟ್ಟಣದ ಸುಂದರರನ್ನೂ, ಸುಂದರಿಯರನ್ನೂ ನೋಡಿ ನೋಡಿ ನನ್ನ ಕಣ್ಣುಗಳಿಗೇಕೆ ಇನ್ನೂ ಬೇಸರ ಬರಲಿಲ್ಲ ಎಂಬುದು ತಿಳಿಯಲಿಲ್ಲ. ಸದಾ ನಂಜನಗೂಡು (ಟೊತ್) ಪೌಡರನ್ನೇ ಮುಖಕ್ಕೆ ಬಳಿದು, ಕಾರ್ಬಾಲಿಕ್ ಸಾಬೂನನ್ನೇ ಸ್ನಾನಕ್ಕೆ ಉಪಯೋಗಿಸಿ, ಕೇಶರಾಶಿಗೆ ಕೆರೋಸಿನ್ ಆಯಿಲನ್ನೇ ತಿಕ್ಕಿ, ಲವಲವಿಕೆಯಿಂದ, ಉಲ್ಲಾಸಿತರಾದ, ಮಂದಸ್ಮಿತರಾದ, ಸುಕೋಮಲ ಕಾಯರಾದ, ನೀಳಕೇಶರಾಶಿಯ ನವ ತರುಣ ತರುಣಿಯರನ್ನೆಲ್ಲ ನೋಡಿ ನೋಡಿ ಅನೇಕ ಬಾರಿ ಮರಣಾನಂದವನ್ನು ಅನುಭವಿಸಿದ್ದ ನನ್ನಲ್ಲಿ, ರೈಲ್ವೆ ಸ್ಟೇಷನ್ನಿನತ್ತ ಹೋಗುತ್ತಿರುವಾಗ ಎದುರು ಬಂದ ಸುಂದರಿಯರಾಗಲೀ, ಸುಂದರರಾಗಲೀ ಯಾವ ಮಹತ್ವಪೂರ್ಣವಾದ ಬದಲಾವಣೆಯನ್ನೂ ಉಂಟುಮಾಡಲಿಲ್ಲ.

ಮಾರ್ಗ ಮಧ್ಯದಲ್ಲಿ ಕಣ್ಣಿಗೆ ಬಿದ್ದ ಉಡುಪಿ ಬಂಧುಗಳ ಹೋಟೆಲೊಂದಕ್ಕೆ ಸ್ನೇಹಿತ, ಬಂಧುರಹಿತನಾಗಿ ನುಗ್ಗಿ ಸ್ಪೆಷಲ್ ಕಾಫಿಯೆನ್ನುತ್ತಾ ಆರ್ಡಿನರಿ ಕಾಫಿಯನ್ನು ಸೇವಿಸಿ, ಹೋಟೆಲು ಪಕ್ಕದ ಗೂಡೊಂದರಲ್ಲಿದ್ದ ಮಲಬಾರ್ ಬಂಧುವಿನಲ್ಲಿ ಒಂದು ಪಾನ್ ಬೀಡವನ್ನು ಪಡೆದು ಅಗಿಯುತ್ತಾ ಜಗಿಯುತ್ತಾ ಅಕ್ಕ ಪಕ್ಕದಲ್ಲೇ ಹರಿದಾಡುತಿದ್ದ ಮನುಷ್ಯ ಪ್ರಾಣಿಗಳ ಚರ್ಯೆಯನ್ನೇ ವೀಕ್ಷಿಸುತ್ತಾ, ಸಂತೋಷ ಹಾಗೂ ವಿಷಾದಗಳನ್ನು ಸೂಚಿಸುತ್ತಾ ಸ್ಟೇಷನ್ ತಲುಪಿದೆ. ನನ್ನ ಮುಂದಿನ ಜನ್ಮದ ಪುಣ್ಯವೋ ಎಂಬಂತೆ ಅಲ್ಲಿ ನಾನಾ ಕಡೆಗೆ ಹೋಗುವ ರೈಲುಗಳು ನಿಂತಿದ್ದುವು. ಯಾವ ಕಡೆಗೆ ಹೋಗಲಿ ಯಾವ ರೈಲನ್ನೇರಲಿ ಎಂದು ತಿಳಿಯದೆ ತಲೆಕೆರೆಯುತ್ತಾ ನಿಂತು, ನಿಲ್ದಾಣದಲ್ಲಿ ತೂಕಡಿಸುತ್ತಾ ಕುಳಿತಿದ್ದ ಮಹನೀಯರನ್ನೇಕರನ್ನು ನೋಡಿ, ಅವರ ದರ್ಶನ ಭಾಗ್ಯದಿಂದಲೂ ಯಾವ ಯೋಚನೆಯೂ ಹೊಳೆಯದಿದ್ದ ಪ್ರಯುಕ್ತ ಪ್ಲಾಟ್‌ಫಾರಂ ಟಿಕೆಟೊಂದನ್ನು ಎರಡಾಣೆ ಕೊಟ್ಟು, ಎರಡು ನಯೇ ಪೈಸೆ ಬಿಟ್ಟು, ಕೊಂಡು ಖಾಲಿಯಾಗಿದ್ದ ಬೆಂಚೊಂದರ ಮೇಲಿನ ಧೂಳನ್ನು ಕೊಡಹಿ ಕುಳಿತೆ. ಬಾಯಲ್ಲಿದ್ದ ಬೀಡ ಬೇಡ ಬೇಡವೆಂದರೂ ಜಠರವನ್ನು ಸೇರಿದ್ದುದರಿಂದ ಮೆಲುಕಾಡಬೇಕೆಂಬ ಚಪಲವುಂಟಾಗಿ 'ಗರಮಾಗರಂ' ಹುರಿಗಾಳನ್ನು ಒಂದಾಣೆಗೆ ಕೊಂಡು ಒಂದೊಂದಾಗಿಯೇ ಬಾಯಿಗೆಸೆಯಲಾರಂಭಿಸಿದೆ. ಒಂದು ಬಾರಿ ಗಡಿಯೂರ ನೋಡಿದಾಗ, ಉತ್ತರಕ್ಕೆ ಮುಖಮಾಡಿಕೊಂಡು ನಿಂತಿದ್ದ ಗಾಡಿಯೊಂದು ದಕ್ಷಿಣಕ್ಕೆ ಸಿಳ್ಳು ಹಾಕುತ್ತಾ ಚಲಿಸಿತು; ಸಮಯವನ್ನು ಕೊಲ್ಲುವ ಉದ್ದಿಶ್ಯದಿಂದ ಅಲ್ಲೇ ಕುಳಿತೆ. ರೈಲ್ವೆ ನಿಲ್ದಾಣದ ಗಲಾಟೆಯಲ್ಲಿ ಪರದಾಡುತಿದ್ದ, ಬೀಳ್ಕೊಡುವ, ಬೀಳ್ಕೊಳ್ಳುತಿದ್ದ ರಸಿಕ ಹಾಗೂ ಅರಸಿಕ ಜನಗಳ ಗುಂಪನ್ನು ನೋಡಲಾಗದೆ ಕೊಂಚಕಾಲ ಕಣ್ಣು ಮುಚ್ಚಿಕೊಂಡು ತಪಸ್ಸಿಗೆ ಕುಳಿತವನಂತೆ ಕುಳಿತೆ. ನಾನು ಕಣ್ಣು ಬಿಟ್ಟು ನೋಡುವಾಗ ಯಾವ ದೇವರೂ ಪ್ರತ್ಯಕ್ಷವಾದ್ದು ಕಾಣದೆ, ಪಕ್ಕದಲ್ಲೇ ಯಾರೋ ಒಬ್ಬ ಅಪರಿಚಿತ ವ್ಯಕ್ತಿ ಕುಳಿತಿದ್ದುದು ಕಾಣಿಸಿತು. ಹುರಿಗಾಳನ್ನು ಬಾಯಿಗೆಸೆಯುತ್ತಲೇ ಆತನನ್ನು ನೋಡ ತೊಡಗಿದೆ. ಹೆಚ್ಚು ಬೆರಳಿಗೆ ಹನ್ನೊಂದು ಉಂಗುರಗಳು ಎಡಕೈಗೆ ಹೊಸಾ ಹೊಸ ವಾಚು, ಕಾಲಿಗೆ ಆಗ ತಾನೇ ಪಾಲಿಶ್ ಹಾಕಿಸಿದ್ದ ಬಾಟಾ ಷೂಗಳು, ಮುಖದಲ್ಲಿ ಪೊರಕೆ ಮೀಸೆ, ಉಟ್ಟಿದ್ದ ಪಟ್ಟೆಪಂಚೆ, ಧರಿಸಿದ್ದ ರೇಶ್ಮೆಯ ಅಂಗಿ—ಇವುಗಳನ್ನೆಲ್ಲ ನೋಡಿದಾಗ ತಿರುಚಿನಾಪಳ್ಳಿಯ ವಜ್ರ ವ್ಯಾಪಾರಿಯ ನೆನಪು ಬಂತು—ನನಗೆ. ಗುಜ್ಜಾನೆ ಮರಿಯುಂತಿದ್ದ ಆ ಧೂರ್ತ ಅಸಾಮಿಯನ್ನು ನರಸೇತಲ ನಾರಾಯಣನಾಗಿದ್ದ ನಾನು ನೋಡಿಯೂ ನೋಡದವನಂತೆ ಕತ್ತನ್ನು ನಲವತ್ತೈದು ಡಿಗ್ರಿ ಕೋಣಕ್ಕೆ ತಿರುಗಿಸಿದೆ. ಆತ ಯಾರನ್ನೋ ಕಾಯುತ್ತಿರಬಹುದೆಂದು ಭಾವಿಸಿದಾಗ 'ನಿನ್ನನ್ನೇ ಕಾಯುತ್ತಿರುವುದು' ಎಂಬಂತೆ 'ನಿಮ್ಮನ್ನು ಎಲ್ಲಿಯೋ ನೋಡಿದಂತಿದೆಯಲ್ಲಾ' ಎಂದರು.

ಬೆಚ್ಚಿ ಬಿದ್ದರೂ ಹುಚ್ಚನಂತಾಗದೆ "ಯಾರನ್ನು? ನನ್ನನ್ನೇ?" ಎಂದು ಕೇಳಿದೆ.

"ಹೌದು ನಿಮ್ಮನ್ನೇ! ಎಲ್ಲೋ ನೋಡಿದಂತಿದೆ ನಾನು" ಎಂದರು.

"ಇನ್ನೆಲ್ಲಿ? ಇಲ್ಲೇ ನೋಡ್ತಿದ್ದೀರಲ್ಲಾ! ಇದು ರೈಲ್ವೆ ಸ್ಟೇಷನ್. ಇಲ್ಲೇ ನೋಡ್ತಿದ್ದೀರಲ್ಲಾ!" ಎಂದೆ ಮಹಾ ಸಂಭಾವಿತನಂತೆ.

(೧೧ನೇ ಪುಟ ನೋಡಿರಿ)

ಸ್ಥಾಪನೆ: 1924

ದಿ ಕರ್ಣಾಟಕ ಬೇಂಕ್ ಲಿಮಿಟೆಡ್
(ಶೆಡ್ಯೂಲ್ಡ್ ಬೇಂಕ್)
ಪ್ರಧಾನ ಆಫೀಸು: ಮಂಗಳೂರು—3.

ಈ ಕೆಳಗಿನ ಬಡ್ಡಿದರಗಳಲ್ಲಿ ಠೇವಣಾತಿಗಳನ್ನು ಸ್ವೀಕರಿಸಲಾಗುವುದು.

ಒಂದು ತಿಂಗಳಿಗೆ	.... ಸಾ|| ಸೇಕಡಾ	3-75	ನ.ಪೈಸೇ
ಮೂರು ತಿಂಗಳುಗಳಿಗೆ	.... ,	4-00	,,
ಆರು ತಿಂಗಳುಗಳಿಗೆ	.... ,,	4-25	,,
12 ತಿಂಗಳುಗಳಿಂದ23 ತಿಂಗಳುಗಳ ವರೆಗೆ	.... ,,	4-50	,,
24 ತಿಂಗಳುಗಳಿಂದ 48 ತಿಂಗಳುಗಳ ವರೆಗೆ	.... ,,	4-75	,,

"ಹನಿ ಡಿಪೋಸಿಟ್ಸ್" ನಲ್ಲಿ
ನಿಮ್ಮ ದೈನಂದಿನ ಉಳಿತಾಯವನ್ನು ವಿನಿಯೋಗಿಸಿರಿ.

THE KARNATAKA BANK LIMITED.

ಜೆನೋವುಗಳ ಅತ್ಯುತ್ತಮ ಸಂಹಾರಿ

ಅಮೃತಾಂಜನ

ವಿಚಾರವರ್ಷ

ಗ್ರಹಗಳ ಹುಟ್ಟನ್ನು ಕುರಿತು ಹೊಸ ಸಿದ್ಧಾಂತ

ನಾವು ವಾಸವಾಗಿರುವ ಭೂಮಿಯ ಮೂಲರೂಪವೇನು, ಅದು ಇಂದಿನ ಸ್ಥಿತಿಗೆ ಹೇಗೆ ಬಂದಿತು, ಇಂದಿಗೂ ಈ ಭೂಗೋಳದೊಳಗಡೆ ಏನೇನಿವೆ—ಎಂದು ಮುಂತಾದ ಪ್ರಶ್ನೆಗಳಿಗೆ ಭಿನ್ನ ಭಿನ್ನಾಭಿಪ್ರಾಯಗಳಿವೆ. ಆಧುನಿಕ ಸೋವಿಯತ್ ಖಗೋಳ ಶಾಸ್ತ್ರಜ್ಞ ಶ್ರೀ ಬೋರಿಸ್ ಲೆವಿನ್ಸ್‌ರು ಇವನ್ನು ಸಂಗ್ರಹಿಸುವ ಪ್ರಯತ್ನ ಮಾಡಿದ್ದಾರೆ. ಶ್ರೀ ಎಂ. ರಂಗ ರಾವು ಅವನ್ನೇ ಕನ್ನಡಿಗರಿಗೆ ಒದಗಿಸುತಿದ್ದಾರೆ.

೮ ಭೂಮಿಯ ಒಳಭಾಗ

ಭೂಗರ್ಭದ ಉಷ್ಣದ ಕಾರಣವೇನು?

೨೦೦ ವರ್ಷಗಳ ಕೆಳಗೆ ಒಬ್ಬ ಫ್ರೆಂಚ್ ಶಾಸ್ತ್ರವೇತ್ತನು ಭೂಗರ್ಭದಲ್ಲಿ ಶಿಲೆಗಿಂತಲೂ ಭಾರವಾದ ಪದಾರ್ಥವಿರುವುದೆಂದು ತನ್ನ ಸಂಶೋಧನೆಯ ಮೂಲಕವಾಗಿ ರುಜು ಮಾಡಿದನು. ಅನಂತರ ಶಾಸ್ತ್ರವೇತ್ತರು ಗುಣಿಸಿ ಕಳೆದು ತೇಲಿಸಿದ ವಿಷಯವೇನಂದರೆ, ಭೂಮಿ ಯಾವತ್ತೂ ಒಂದೇ ವಿಧ ಪದಾರ್ಥದಿಂದ ಕೂಡಿರುವುದೆಂದು ಭಾವಿಸುವುದಾದರೆ, ಆ ಪದಾರ್ಥವು ನಿಶ್ಚಯವಾಗಿ, ಶಿಲೆಗಿಂತಲೂ ಐದು ಪಾಲು ಹೆಚ್ಚು ಭಾರವಾಗಿದೆ. ನಮಗೆ ಗೊತ್ತಿರುವಂತೆ ಭೂಮಿಯ ಮೇಲ್ಪರೆಯ ಪದಾರ್ಥಗಳೊಂದಿಗೆ ಹೋಲಿಸಿದರೆ, ಇದಕ್ಕಿಂತ ಬಹಳ ಹೆಚ್ಚು ಭಾರವಾದ ಪದಾರ್ಥವು (ಸಾಂದ್ರತೆಯುಳ್ಳದ್ದು) ಭೂಗರ್ಭದಲ್ಲಿರುವುದು ಸ್ಪಷ್ಟವಾಗುತ್ತದೆ.

೧೯ನೆಯ ಶತಾಬ್ದದ ಕೊನೆಯ ಭಾಗದಲ್ಲಿ ಶಾಸ್ತ್ರವೇತ್ತರು ದ್ರವ ಪದಾರ್ಥವು ಘನೀಭವಿಸಲಾಗಿ ಏರ್ಪಟ್ಟ ಶಿಲೆಗಳನ್ನೂ, ಅಗ್ನಿ ಪರ್ವತಗಳು ಸಿಡಿದಾಗ ಮೇಲೆದ್ದು ಹಾರುಬಂದ ಶಿಲಾದ್ರವವನ್ನೂ ಪರಿಶೀಲಿಸಿ, ಭೂಗರ್ಭದಲ್ಲಿರುವ ಉಷ್ಣದ ಪ್ರಾಮುಖ್ಯತೆಯನ್ನು ಗುರುತಿಸಿಕೊಂಡರು. ಇದರ ಫಲಿತವಾಗಿ ಭೂಮಿ ಒಂದಾನೊಂದು ಕಾಲದಲ್ಲಿ ಉರಿಯುತ್ತಾ ಇದ್ದ ಗೋಳವಾಗಿತ್ತೆಂದೂ, ಅದರ ಮೇಲು ಭಾಗವು ಕಾಲಕ್ರಮದಲ್ಲಿ ತಣ್ಣಗಾದರೂ ಭೂಗರ್ಭದೊಳಗೆ ಉಷ್ಣವು ಯಥಾಶಕ್ತಿಯಾಗಿಯೇ ಇರುವುದೆಂದೂ ಶಾಸ್ತ್ರವೇತ್ತರು ನಂಬುವಂತಾಯಿತು. ೧೯ನೇ ಶತಾಬ್ದದ ಶಾಸ್ತ್ರವೇತ್ತರು ಭೂಮಿಯ ಮೇಲ್ಪರೆಯ ೩೦೦ರಿಂದ ೬೦ ಮೈಲುಗಳ ವರೆಗೂ ಗಟ್ಟಿಯಾಯಿತೆಂದೂ, ಅದಕ್ಕಿಂತಲೂ ಆಳದಲ್ಲಿ ಇನ್ನೂ ದ್ರವ ರೂಪದಲ್ಲೇ ಇರುವುದೆಂದೂ ಹೇಳಿದರು.

ಸ್ಮಿತ್ ಸಿದ್ಧಾಂತದ ಪ್ರಕಾರ, ಭೂಮಿಯ ಘನ ಪದಾರ್ಥಗಳ ಕೂಡಿಕೆಯಿಂದಲೇ ಏರ್ಪಟ್ಟಿದೆ. ಅದು ಎಂದೂ ದ್ರವ ರೂಪದಲ್ಲಿದ್ದುದಿಲ್ಲ. ಭೂಗರ್ಭದೊಳಗಿನ ಉಷ್ಣತೆಗೆ ಮುಖ್ಯ ಕಾರಣ, ರೇಡಿಯೋ ಶಕ್ತಿಯುಳ್ಳ ಪದಾರ್ಥಗಳ ವಿಚ್ಛಿತ್ತಿಕೆಯಿಂದ ಹೊರಡುವ ಶಕ್ತಿ. ಮತ್ತೊಂದು ಅ ಮುಖ್ಯವಾದ ಕಾರಣವೆಂದರೆ, ಪದಾರ್ಥಗಳ ಸೇರಿಕೆಯಿಂದ ಹೊಂಟ ಶಕ್ತಿಗೆ, ಮೇಲಿಂದ ಬಂದು ಬಿದ್ದ ಪದಾರ್ಥವೂ ಕೂಡಿ ಭೂಮಿ ತನ್ನ ಪ್ರಮಾಣವನ್ನು ಹೆಚ್ಚಿಸಿಕೊಂಡಿತು. ಮೇಲಿಂದ ಬೀಳುವ ಪದಾರ್ಥವು ಭೂಮಿಯನ್ನು ತಾಗುತ್ತಲೇ, ಅದರ ವೇಗಶಕ್ತಿ ಉಷ್ಣಶಕ್ತಿಯಾಗಿ ಬದಲಾಯಿಸಿ ಹೋಗುತ್ತದೆ.

ಭೂಮಿಯ ಮೇಲ್ಭಾಗದಲ್ಲಿ ಉತ್ಪನ್ನವಾದ ಉಷ್ಣತೆಯ ಬಹಳ ಭಾಗವು ಆಕಾಶಕ್ಕೆ ಹಾರಿಕೊಂಡು ಹೋಗುತ್ತದೆ. ಸ್ವಲ್ಪ ಭಾಗ ಮಾತ್ರ ಭೂಮಿಯ ಮೇಲ್ಪರೆಯನ್ನು ಉಷ್ಣಗೊಳಿಸಲು ಸಹಕಾರಿಯಾಗುತ್ತದೆ. ಅಂತ್ಯವಿಲ್ಲದಷ್ಟು ಪದಾರ್ಥವು ಭೂಮಿಯ ಮೇಲೆ ಬಂದು ಬಿದ್ದು ಬಿದ್ದು, ಭೂಮಿಯ ಪ್ರಮಾಣವು ಹೆಚ್ಚಾದಷ್ಟೂ, ಅದರ ಗುರುತ್ವಾಕರ್ಷಣೆಯ ಶಕ್ತಿಯೂ ಹೆಚ್ಚುತ್ತದೆ. ಅದರಿಂದ ಬಾಹ್ಯ ಪದಾರ್ಥವು ಇನ್ನಷ್ಟು ವೇಗದಿಂದ ಬಂದು ಭೂಮಿಯನ್ನು ತಾಕುವಂತಾಯಿತು. ಅದರೆ ಬಾಹ್ಯ ಪದಾರ್ಥವು ಕಡಮೆಯಾದಂತೆ, ಈ ಪ್ರಕ್ರಿಯೆ ಕೂಡಾ ಕ್ಷೀಣಿಸಿತು. ಅದರೊಂದಿಗೆ ಈ ವಿಧವಾಗಿ ಭೂಮಿಗೆ ಲಭಿಸುವ ಉಷ್ಣತೆಯೂ ತಗ್ಗಿ ಹೋಯಿತು.

ಹೀಗೆ ಪದಾರ್ಥಪಾತದಿಂದ ಹೆಚ್ಚು ಉಷ್ಣವಾದ ಭೂಮಿಯ ಪರೆಗಳು ಈಗ ೧೫೦೦ ಮೈಲು ಅಡಿಯಲ್ಲಿರುವುದೆಂದೂ, ಅವು ಸಾವಿರ ಡಿಗ್ರಿಗಳಷ್ಟು ಉಷ್ಣೋಗ್ರತೆಯಲ್ಲಿರಬಹುದೆಂದೂ, ಅದರ ಮೇಲೂ, ಕೆಳಗೂ ಇರುವ ಪರೆಗಳು, ಶೀತಳ ಪದಾರ್ಥದಿಂದಲೇ ಏರ್ಪಟ್ಟಿಂಥವೆಂದೂ, ಅವುಗಳಿಗೆ ಉಷ್ಣವೇರಲು ಕಾರಣ ರೇಡಿಯೋ ಪದಾರ್ಥವೇ ಎಂದೂ ಸೊಫ್ರೊನೋವ್ ಎಂಬ ಸೋವಿಯೆಟ್ ಶಾಸ್ತ್ರವೇತ್ತನು ಅಂದಾಜಿ ಹಾಕಿದನು.

ರೇಡಿಯೋ ಪದಾರ್ಥಗಳು.

ಭೂಮಿಯಲ್ಲಿ ಸೇರಿರುವ ಪದಾರ್ಥಗಳಲ್ಲಿ ಸ್ವಲ್ಪ ಭಾಗ ರೇಡಿಯೋ ಪಾರ್ಮಿಕ ಶಕ್ತಿಯುಳ್ಳ ಯುರೇನಿಯಂ, ಥೋರಿಯಂ, ರೇಡಿಯಂ, ಪೊಟಾಸಿಯಂ(೪೦) ಇವುಗಳಿವೆ. ಈ ಪದಾರ್ಥಗಳ ಪರಮಾಣುಗಳು ತಮ್ಮಂತಾವೇ ಸ್ವರೂಪ ಬದಲಾಯಿಸಿಕೊಳ್ಳುತ್ತಾ ಅನೇಕ ದಶೆಗಳನ್ನು ಕಳೆದು, ಅನೇಕ ಹೀಲಿಯಂ ಪರಮಾಣುಗಳನ್ನು ವಿಸರ್ಜಿಸಿ ಸೀಸಕ್ಕೆ ಸಂಬಂಧಿಸುವ ಪರಮಾಣುಗಳಾಗಿ ಬದಲಾಯಿಸಿ ಹೋಗುತ್ತವೆ; ಸೊಟಾಸಿಯಂ (೪೦) ವಿಚ್ಛಿನ್ನವಾದಾಗ ಬರುವ ಪದಾರ್ಥಗಳು ಕಾಲ್ಸಿಯಂ ಮತ್ತು ಆರ್ಗಾನ್.

ಈ ರೇಡಿಯೋ ಪದಾರ್ಥಗಳು ಭೂಮಿಯೊಳಗಡೆಯಲ್ಲಿ ಸೇರಿಕೊಂಡು, ಅನೇಕ ನೂರು ಕೋಟಿ ವರ್ಷಗಳ ಮೇಲೆ ಹೀಗೆ ವಿಚ್ಛಿನ್ನವಾಗುವುದರ ಫಲಿತವಾಗಿ, ಅಂತ್ಯವಿಲ್ಲದಷ್ಟು ಉಷ್ಣೋತ್ಪತ್ತಿಯಾಗಿ, ಭೂಗರ್ಭದೊಳಗೆ ಕೆಲವು ಸಾವಿರ ಡಿಗ್ರಿ ಉಷ್ಣಮಂಜವು ಅಡಗಿಕೊಂಡಿರುವಂತಾಯಿತು. ಒಬ್ಬ ಸೋವಿಯೆಟ್ ಶಾಸ್ತ್ರವೇ

(೧೦ನೇ ಪುಟ ನೋಡಿರಿ)

ಕ್ಷಯರೋಗಕ್ಕೆ ಗೃಹಚಿಕಿತ್ಸೆ

ಸಾಮಾನ್ಯವಾಗಿ ಊಹಿಸಲಾಗಿರುವಂತೆ ಕ್ಷಯರೋಗಿಯು ಅಪಾಯಕಾರಿ ವ್ಯಕ್ತಿಯೇನಲ್ಲ. ಅವನ ಸಂಪರ್ಕದಲ್ಲಿರುವವರಿಗೆ ರೋಗವು ತಗಲಲು ಅವನ ಕಫವೇ (ಉಗುಳು) ಮುಖ್ಯ ಕಾರಣ. ಗೃಹಚಿಕಿತ್ಸೆಯು ಅಪಾಯರಹಿತವಾಗಿರಬೇಕಾದರೆ, ಕ್ಷಯರೋಗಿಗಳ ಕಫ (ಉಗುಳು) ವನ್ನು ಸರಿಯಾಗಿ ಸಂಗ್ರಹಿಸಿ ನಿರ್ಬಾಧಿತಗೊಳಿಸಬೇಕು.

ರೋಗಿಯು —

1. ಕೆಮ್ಮುವಾಗ ಬಾಯಿಯನ್ನು ಮರೆಮಾಡಿಕೊಳ್ಳಬೇಕು.
2. ಉಗುಳನ್ನು ಮುಚ್ಚಿದ ಪಾತ್ರೆ ಅಥವಾ ಪೀಕದಾನಿಯಲ್ಲಿ ಸಂಗ್ರಹಿಸಬೇಕು.
3. ಉಗುಳನ್ನು ಚೆಲ್ಲುವ ಅಥವಾ ಸುಡುವ ಮೊದಲು 10 ಮಿನಿಟುಗಳ ಸಮಯ ಕುದಿಸಬೇಕು.

ಈ ಸೂಚನೆಗಳನ್ನು ಭಾರತದ ಪ್ರತಿಯೊಂದು ಮನೆಯ ಗಮನಕ್ಕೆ ತರಬೇಕು. ಅದಕ್ಕಾಗಿ ವಿಶಾಲವಾಗಿ ಆರೋಗ್ಯ ನಿಯಮಗಳನು ಬೋಧಿಸಬೇಕು. ಟಿ. ಬಿ. ಮುದ್ರೆಗಳ ಪ್ರಚಾರವು ಅಂತಹ ಪ್ರಚಾರದೊಂದು ಅಂಗ.

ಟಿ.ಬಿ. ಮುದ್ರೆಗಳನ್ನು ಕೊಂಡುಕೊಂಡು ಕ್ಷಯರೋಗದೊಡನೆ ಹೋರಾಡಲು ಸಹಾಯ ಮಾಡಿರಿ.

ಒಂದು ಟಿ. ಬಿ. ಮುದ್ರೆಯ ಬೆಲೆ ಬರೇ ಹತ್ತು ನಯೇಪೈಸೆಗಳು.

ಮುದ್ರೆಗಳು ಸಿಗುವ ಸ್ಥಳಗಳು— (1) ಗೌರವ ಕಾರ್ಯದರ್ಶಿ, ಮೈಸೂರು ರಾಜ್ಯ ಕ್ಷಯರೋಗ ಸಮಿತಿ, ಗವರ್ನಮೆಂಟ್ ಟಿ. ಬಿ. ಸೆನಿಟೋರಿಯಂ, ಹಿಲ್ಡ್ ಮದ್ರಾಸ್ ರೋಡು, ಬೆಂಗಳೂರು-8. (2) ಮಹಿಳಾ ಮಂಡಲ, ಮತ್ತು ಶ್ರೀ ಬಸವೇಶ್ವರ ದೇವಸ್ಥಾನ, ಪಂಚ್ ಕಮಿಟಿ, ಕಲ್ಯಾಣ ಗ್ರೈನ್ ಮರ್ಚಂಟ್ಸ್ ಎಸೋಸಿಯೇಶನ್ ಮತ್ತು ಭಾರತ ಸಮಾಜ, ಬೀದರ. (3) ಗೌರವ ಕಾರ್ಯದರ್ಶಿ ದ. ಕ. ಜಿಲ್ಲಾ ಕ್ಷಯರೋಗ ಸಮಿತಿ, ಗವರ್ನಮೆಂಟ್ ವೆನ್‌ಲಾಕ್ ಹಾಸ್ಪಿಟಲ್, ಮಂಗಳೂರು. (4) ಶ್ರೀ ಯಲ್. ಎಸ್. ಕಾಮತ್, ಆರ್ಗನೈಜರ್, ಭಾರತ ಸೇವಕ ಸಮಾಜ, ಕೆನರಾ ಕಾಲೇಜು, ಕುಮಟಾ. (5) ಅಧ್ಯಕ್ಷರುಗಳು ಮಹಿಳಾ ಸಮಾಜ, ಕಾರ್ವಾರ, ಅಂಕೋಲಾ, ಕುಮಟಾ, ಗೋಕರ್ಣ, ಹೊನ್ನಾವರ, ಸಿದ್ದಾಪುರ, ಅಳಿಯೂರು, ಸೂಪ ಮತ್ತು ಯಲ್ಲಾಪುರ.

ಹನ್ನೊಂದನೇ ಟಿ. ಬಿ. ಮುದ್ರೆ ಮಾರಾಟ ಚಳವಳಿ

(ದಿ ಟ್ಯೂಬರ್‌ಕ್ಯೂಲೋಸಿಸ್ ಎಸೋಸಿಯೇಶನ್ ಆಫ್ ಇಂಡಿಯಾ ನ್ಯೂ ಡಿಲ್ಲಿ ಇವರಿಂದ ಪ್ರಾರಂಭಿಸಲ್ಪಟ್ಟದ್ದು.)

Space kindly donated by:

M/s. Mafatlal Gagalbhai & Co. Private Ltd., Bombay.

ರೋಗನಿಧಾನ

ಸೌರವಿಕಿರಣ--ಒಂದು ಸರಳ ಚಿಕಿತ್ಸೆ

ಭೂಮಿಯನ್ನು ಬೆಳಗುವ ಸೂರ್ಯನ ಕಿರಣಗಳು ಕೆಲವೊಂದು ರೋಗಗಳಿಗೆ ಸಿದ್ಧೌಷಧಿಗಳಾಗುವುವು. ಅವನ್ನು ಬಳಸಿಕೊಳ್ಳುವ ಪದ್ಧತಿ ಈಗೀಗ ಹೆಚ್ಚುತ್ತ ಬರುತ್ತಿದೆ.

ನಾವು ದಿನಂಪ್ರತಿ ಕಾಣುವ ಸೂರ್ಯನಮಗೆ ಬೆಳಕನ್ನೂ ಬಿಸುಪನ್ನೂ ಕೊಡುತ್ತಾನೆ. ಆತನಿಲ್ಲದೆ ನಮ್ಮ ಜೀವನ ಸಾಗುವುದೇ ಅಸಾಧ್ಯವೆಂಬುದರಿಂದ ನಮ್ಮ ಜೀವನದಾತನೂ ಅವನೇ ಎನ್ನಬಹುದು. ಸೂರ್ಯನೊಬ್ಬನಿಲ್ಲವಾದರೆ,ನಾವೂ ಇಲ್ಲ, ವನಸ್ಪತಿಗಳೂ ಇಲ್ಲ, ವಾಯು ಮಂಡಲವೂ ಇಲ್ಲ; ನೀರೂ ಇಲ್ಲ. ಚಳಿಯಿಂದ ಹಿಮಗಟ್ಟಿದ ಮಾನವನ ಶರೀರಕ್ಕೆ ಉಷ್ಣತೆಯನ್ನೊದಗಿಸಿ ಸೂರ್ಯ ಮೈಮುರಿಯುವಂತೆಸಗುತ್ತಾನೆಂಬುದು ಇಂದಿಗೆ ಹಳೆಯ ಮಾತಾಯಿತು. ಈಗ ಆತನ ಕಿರಣಗಳಿಂದ ಚಿಕಿತ್ಸೆ ನಡೆಸುವುದೂ ಸಾಧ್ಯವೆಂಬುದು ಗೊತ್ತಾಗಿದೆ. ಸೌರವಿಕಿರಣದಿಂದ ಮೂಡುವ "ಹೀಲಿಯೋಥೀರಪಿ" ಯೇ ಇಂತಹ ವೈಜ್ಞಾನಿಕ ಚಿಕಿತ್ಸೆ.

ಸಾಮಾನ್ಯವಾಗಿ ಸೂರ್ಯನ ಕಿರಣಗಳು ಭೂಮಿಯ ಎತ್ತರವನ್ನು ಹೊಂದಿಕೊಂಡು ಅದನ್ನು ಬಿಸಿ ಮಾಡುತ್ತವೆ. ನೆಲವು ಎತ್ತರವಾಗಿದ್ದರೆ, ಅಲ್ಲಿ ಬಿಸಿಲೂ ಹೆಚ್ಚು; ತಗ್ಗಿನಲ್ಲಿದ್ದರೆ ಕಡಿಮೆ. ವಾಯುಮಂಡಲದ ದಟ್ಟಣೆ, ಪಾರದರ್ಶತೆ, ವಾಯುವಿನ ಸಾಂದ್ರತೆ—ಧೂಳೀಕಣ ಮೊದಲಾದುವುಗಳಿಂದ ಬೀರುವ ಕಾವಿನ ಪ್ರಮಾಣದಲ್ಲಿ ಏರುಪೇರುಗಳಾಗಬಹುದು. ನಾವು ವಾಸವಮಾಡುತ್ತಿರುವ ಭೂಮಿಯ ಮೇಲೆ ವಾಯು ಮಂಡಲದ ಆವರಣವಿರುವುದರಿಂದಲೆ ಹಲವು ಬ್ರಹ್ಮಾಂಡವಿಕಿರಣಗಳಿಂದ ನಾವು ಬದುಕುಳಿದಿದ್ದೇವೆ;ಇಲ್ಲವಾದರೆ, ನಾವು ಸೂರ್ಯವಿಕಿರಣಗಳಿಂದ ಒಂದಲ್ಲ ಒಂದು ರೀತಿಯಿಂದ ವಿಕಲರಾಗಿ ಹೋಗುತಿದ್ದೆವು.

ತಾಶಕಂದದಲ್ಲಿ ಸೇರಿದ್ದ ಸೌರ ವಿಕಿರಣ ಚಿಕಿತ್ಸಕರ ಸಮ್ಮೇಳನದಲ್ಲಿ ಈ ಸಂಬಂಧದ ವಿಚಾರ ವಿನಿಮಯ ನಡೆಯಿತು. ಈ ಸಮ್ಮೇಳನದಲ್ಲಿ ಸೂರ್ಯನ ಕಿರಣಗಳಿಂದ ನವಯುವಕ್ರಿಮಿಯೂ ದೂರಪೂರ್ವ ಮತ್ತು ಪಾಮಿರ ಹಾಗೂ ಸೂರ್ಯನನ್ನೇ ಕಾಣದ ಉತ್ತರ ಧ್ರುವ ಪ್ರದೇಶಗಳಿಂದ ಪ್ರತಿನಿಧಿಗಳೂ ಬಂದಿದ್ದರು. ಉಉತ್ತರ ಧ್ರುವದ ನಿಕಟದಲ್ಲಿ ನೆಲಸಲು ಅಭ್ಯಾಸ ನೀಡುವ ಹಾಗೂ ಬೇರೆ ಬೇರೆ ರೋಗಗಳಿಗೆ ಸೌರ-ವಿಕಿರಣ ಚಿಕಿತ್ಸೆಯನ್ನು ನಡೆಸುವ ವಿಖ್ಯಾತ ಚಿಕಿತ್ಸಕರೂ ಸಮ್ಮೇಳನದಲ್ಲಿ ಉಪಸ್ಥಿತರಿದ್ದರು. ದೊಡ್ಡ ನಗರಗಳಲ್ಲಿ ಆರೋಗ್ಯ ಸಂಬಂಧದ ಸಮಸ್ಯೆಗಳನ್ನು ವಿಚಾರಿಸುವವರೂ ಇದ್ದರು.

ಸೌರ-ಚಿಕಿತ್ಸಕರ ಈ ಸಮ್ಮೇಳನದಲ್ಲಿ ಕೆಲವಾರು ಪ್ರಬಂಧಗಳನ್ನು ಓದಲಾಯಿತು. ಮಾನವನ ಅಂಗಗಳ ಮೇಲೆ 'ಇನ್ ಫ್ರಾರೇಸ್' ಮತ್ತು ಅಲ್ಟ್ರಾವಾಯ್ಲೆಟ್ ವಿಕಿರಣಗಳ ಪ್ರಭಾವವನ್ನು ಕುರಿತಾಗಿ ಇವುಗಳಲ್ಲಿ ನಿರೂಪಣೆಗಳಿದ್ದುವು. ಈ ಕಿರಣಗಳು ಒಂದಾಗಿ ಹಾಗೂ ಬೇರೆ ಬೇರೆಯಾಗಿ ಬೀರುವ ಪ್ರಭಾವವನ್ನೂ ವಿಮರ್ಶೆಯಲ್ಲಿ ಅಳವಡಿಸಿಕೊಳ್ಳಲಾಗಿತ್ತು.

ಸೂರ್ಯನ ಪ್ರಕಾಶವು ಮಾನವನ ಅಂಗಾಂಗಗಳ ಮೇಲೆ ಅವುಗಳ ಕೋಷಗಳ ಮೇಲೆ ಎಂತಹ ಪ್ರಾಭಾವ ಬೀರುವುದೆಂಬುದನ್ನು ನಾವು ತಿಳಿಯಬೇಕು. ಸೂರ್ಯತಪದಲ್ಲಿ ಕೂತುಕೊಳ್ಳುವುದರಿಂದ ನಮ್ಮ ಚರ್ಮದ ಸ್ನಾಯುತಂತುಗಳು ಹಾಗೂ ಮತ್ತಿತರ ಅಂಗಗಳ ಮೇಲೆ ಬಹುಪರಿಣಾಮವಾಗುವುವು. ಶರೀರದ ಅತಿ ಒಳಗೆ ಇರುವ ವಿವಿಧ ಅಂಗಗಳ ಈ ಬಿಸಿಲಿನಿಂದ ಪ್ರಭಾವಿತವಾಗುವುವು. ಈಯೆಲ್ಲ ಪ್ರಭಾವಗಳನ್ನು ಮೊತ್ತಮೊದಲಿಗೆ ರಶ್ಯನ್ ತಜ್ಞರು ಅಧ್ಯಯನ ನಡೆಸಿದರು. ಡಿಜೀವಾತುವಿನ ಅಭಾವದಿಂದಾಗುವ ರೋಗ, ಮತ್ತಿದರೊಡನೆ ಸಂಬಂಧವುಳ್ಳ ಫಾಸ್ಫೊರಸ್ ಮತ್ತು ಕೇಲ್ಶಿಯಂಗಳ ಅಭಾವದಿಂದ ತಲೆದೋರುವ ಪಿಡುಗು, ಎಲುಬು, ಕೀಲು ಮತ್ತು ಗ್ರಂಥಿಗಳ ಕ್ಷಯರೋಗ, ಶ್ವಾಸಕೋಶಗಳ ಕ್ಷಯ ರೋಗದ ಪ್ರಾರಂಭಿಕಾವಸ್ಥೆ, ಚರ್ಮರೋಗ, ಗಾಯ ಮತ್ತು ಗೀರುಗಳ ಸೂರಣ, ವಾಯು ಮಂಡಲದ ಅಸಂತುಲನದಿಂದ ಕಾಣುವ ರೋಗಗಳು ಸೌರ ಚಿಕಿತ್ಸೆಯಿಂದ ದೂರವಾಗುವುವು ಎಂದು ರಶ್ಯನ್ ವೈಜ್ಞಾನಿಕರು ಸಿದ್ಧಮಾಡಿ ತೋರಿಸಿದರು.

ಸೂರ್ಯನ ಕಿರಣಗಳಲ್ಲಿ ಸಪ್ತವರ್ಣಗಳು ಮಿಳನಗೊಂಡಿವೆಯೆಂಬುದು ಸರ್ವವಿದಿತ ಸಂಗತಿ. ಈ ಏಳು ಬಣ್ಣಗಳ ಪ್ರಭಾವವೂ ಬೇರೆ ಬೇರೆಯಾಗಿದೆ. ಉದಾಹರಣೆಗಾಗಿ ಆಲ್ಟ್ರಾವ್ಯಾಲೆಟ್ ವರ್ಣದ ಕಿರಣ ತರಂಗಗಳು ಕೀಟಾಣುನಾಶಕ ಮತ್ತು ಶುಷ್ಕರೋಗ ನಿವಾರಕ ಗುಣಗಳನ್ನು ಪಡೆದಿವೆ.

ಆದರೆ, ಸೌರ ಕಿರಣಗಳನ್ನು ಚಿಕಿತ್ಸೆಗೆ ಬಳಸಿಕೊಳ್ಳುವುದಕ್ಕೆ ಮೊದಲು ಒಂದು ವಿಷಯವನ್ನು ಅವಶ್ಯ ಯೋಚಿಸಿಕೊಳ್ಳಬೇಕಾಗಿದೆ. ಸೂರ್ಯನು ಗಾಯವನ್ನು ತುಂಬಿಸಬಲ್ಲ; ಅದರ ಜತೆಯಲ್ಲೇ ಕೆಲವೊಮ್ಮೆ ವಿಕಲರನ್ನಾಗಿಯೂ ಮಾಡಬಲ್ಲ ಅಷ್ಟೇ ಅಲ್ಲದೆ ಸೂರ್ಯ ಚಿಕಿತ್ಸೆಯ ಪರಿಣಾಮ ನಮಗೆ ಒಮ್ಮಿಂದೊಮ್ಮೆ ಗೋಚರವಾಗುವುದಿಲ್ಲ; ಇದರ ಅಣ್ವಂಶವಾದರೂ ನಮಗೆ ಕಾಣಬೇಕಾದರೆ, ಬಹುಕಾಲ ಹಿಡಿಯುವುದು. ಆದುದರಿಂದಲೇ ನಾನಾವಿಧದ ಯಂತ್ರಗಳ ಸಹಾಯದಿಂದ ಇದರ ಪ್ರಭಾವವನ್ನರಿತುಕೊಳ್ಳಲು ವಿಜ್ಞಾನಿಗಳು ತೊಡಗಿದ್ದಾರೆ. ಇಂತಹ ಆಧಾರ ಯಂತ್ರಗಳು ವಾಯು ಮಂಡಲದ ಪರಿಸ್ಥಿತಿಗಳ ಸೂಚನೆಗಳೆಲ್ಲವನ್ನೂ ಏಕತ್ರಗೊಳಿಸುತ್ತವೆ. ಇವುಗಳ ಸಹಾಯದಿಂದ ಚಿಕಿತ್ಸಕರು ಸೂರ್ಯನ ಪ್ರಕಾಶಕ್ಕೆ ಪ್ರತಿಯಾದ ಸಂವೇದನ ಶೀಲತೆಯನ್ನು ಅಭ್ಯಸಿಸುವರು; ಅದರ ಮೇಲೆ ನಿಯಂತ್ರಣ ಹೇರುವರು.

ಅರ್ಬುದ, ಶ್ವಾಸಕೋಶಗಳ ಕ್ಷಯ ರೋಗದ ಉನ್ನತಾವಸ್ಥೆ, ಹೃದ್ರೋಗ ನೊದಲಾದ ರೋಗಿಗಳಿಗೆ ಹಾಗೂ ವೃದ್ಧರಿಗೆ 'ಹಿಲಿಯೋಥೆರಪಿ' ಅಥವಾ ಸೌರ ಚಿಕಿತ್ಸೆ ಪ್ರಭಾವಶಾಲಿಯಾಗಲಾರದು. ಇಂತಹರ ಮೇಲೆ ಈ ಚಿಕಿತ್ಸೆಯ ಪ್ರಯೋಗ ನಡೆಸಿದರೆ ಪರಿಣಾಮ ವಿಪರೀತವಾಗಬಹುದು. ಆದರೂ ಸೌರ ಕಿರಣಗಳನ್ನು ಬಹುಮಿತ ಪ್ರಮಾಣದಲ್ಲಿ ಬಳಸಿಕೊಂಡಲ್ಲಿ ಚರ್ಮದ ಕೆಲವು ರಾಜರೋಗಗಳು ದೂರವಾಗುವುವೆಂದು ವೈಜ್ಞಾನಿಕರ ಅಭಿಪ್ರಾಯವಿದೆ.

ಸೂರ್ಯ ಕಿರಣದ ವಿಭಿನ್ನ ವರ್ಣಗಳು ವಿಭಿನ್ನ ಪ್ರಭಾವಕಾರಿಗಳೆಂದು ಮೊದಲೇ ಹೇಳಿದ್ದೇವೆ. ಡಾ। ನಿಕೋಲಾಯಿ ಮಿಶುಕರು ಈ ಪ್ರಭಾವಗಳ ಅಧ್ಯಯನ ನಡೆಸಿದರು. ತಾಶಕಂದದ ಸೆವಾಸ್ಟೊಪೊಲ್ ಸಂಸ್ಥಾನದಲ್ಲಿ ಮೊತ್ತಮೊದಲಿಗೆ ಇವುಗಳ ಪ್ರಯೋಗ ನಡೆಯಿತು. ಈ ಅಧ್ಯಯನದ ಫಲಸ್ವರೂಪವಾಗಿ ಸೌರ ಚಿಕಿತ್ಸೆಯಲ್ಲಿ 'ಕ್ರೊಮೋಹೀಲಿಯೋಥೆರಪಿ' ಎಂಬ ಒಂದು ಹೊಸ ವಿಭಾಗ ಪ್ರಾರಂಭಗೊಂಡಿತು. ಸೋವಿಯತ್ ಚಿಕಿತ್ಸಕರು ಈ ನವೀನ ಪ್ರಣಾಳಿಯತ್ತ ಸಾಕಷ್ಟು ಮುಂದುವರಿಯ ತೊಡಗಿದ್ದಾರೆ.

ಸೌರವರ್ಣಪಟ್ಟಿಯ ವಿಭಿನ್ನ ಭಾಗವು ಮಾನವನ ಅಂಗ ಮತ್ತು ಅವುಗಳಲ್ಲಿ ಆಗಬಹುದಾದ ವಿಭಿನ್ನಕ್ರಿಯೆಗಳ ಮೇಲೆ ವಿಭಿನ್ನ ಪ್ರಭಾವವನ್ನು ಬೀರುತ್ತವೆ ಎಂಬ ಸಿದ್ಧಾಂತವನ್ನೇ 'ಕ್ರೊಮೋಹೀಲಿಯೋಥೆರಪಿ' ಚಿಕಿತ್ಸಾಕ್ರಮವು ಅಭಿರಸಿಕೊಂಡಿದೆ. ಒಬ್ಬ ವೃದ್ಧ ಪುರುಷನಿರುವನೆಂದುಕೊಳ್ಳಿ. ಆತನ ಫಾಸ್ಫರಸ್ ಮತ್ತು ಕೇಲ್ಶಿಯಂಗಳ ಪಚನವು ಕೆಟ್ಟು ಹೋಗಿದೆಯೆಂದಿಟ್ಟುಕೊಳ್ಳಿ ಎಂದರೆ, ಆತನಲ್ಲಿ ಕೇಲ್ಶಿಯಮನ್ನು ಜೀರ್ಣಿಸುವ ಶಕ್ತಿಯು ಹ್ರಾಸಗೊಂಡಿದೆ. ಇದರಿಂದಾಗಿ ಆತನ ಎಲುಬುಗಳು ಮತ್ತು ಹಲ್ಲುಗಳು ನಿರ್ಬಲಗೊಂಡಿವೆ. ರೋಗಿಯ ಶರೀರದಲ್ಲಿ 'ಡಿ' ಜೀವಸತ್ವಗಳ ಅಭಾವ ತಲೆದೋರಿದೆ. ಆದುದರಿಂದ ಈತನಿಗೆ ಸೂರ್ಯ ಪ್ರಕಾಶ ಅಥವಾ ವರ್ಣಪಟ್ಟಿ ಚಿಕಿತ್ಸೆ ಅಗತ್ಯವೆನಿಸುವುದಿಲ್ಲ. ವರ್ಣಪಟ್ಟಿಗೆಯ ಒಂದಲ್ಪ ಅಂಶದಿಂದ ಈತನ ರೋಗವನ್ನು ನಿವಾರಿಸಬಹುದು. ಈ ಕಾರಣದಿಂದಲೇ 'ಪರಿಮಿತ' ಹೀಲಿಯೋಥೆರಪಿ ಚಿಕಿತ್ಸೆ ಉಪಯುಕ್ತವಾಗಿದೆ.

ಈಗೀಗ ಸೌರ ವಿಕಿರಣ ರೋಗಗಳನ್ನು ತಡೆಗಟ್ಟುವುದರಲ್ಲಿ ಮತ್ತು ಅವುಗಳ ಉಪಚಾರದಲ್ಲಿ ಉಪಯೋಗಕ್ಕೆ ಬರುತ್ತಿವೆ. ಸಣ್ಣ ಪಟ್ಟಿ ಮಕ್ಕಳಿಗೂ ಸೌರ ಚಿಕಿತ್ಸೆಯನ್ನು ಒದಗಿಸಲಾಗುತ್ತಿದೆ. ರಶ್ಯದ ಪ್ರತಿ ಕಿಂಡರ್ ಗಾರ್ಟನ್ ಶಾಲೆ, ವಿಶ್ರಾಮಗೃಹ, ಆರೋಗ್ಯಮಂದಿರ ಮತ್ತು ಚಿಕಿತ್ಸಾಲಯಗಳಲ್ಲಿ [ಸೂರ್ಯತಪದಲ್ಲಿ ಕೂರುವ, ಒರಗುವ ಮತ್ತು ಮಲಗುವ ವ್ಯವಸ್ಥೆಯು ಇದೆ. ಸೂರ್ಯನ ಪ್ರಕಾಶವೇ ಇಲ್ಲದಿರುವ ಉತ್ತರ ಧ್ರುವದಂತಹ ಹಿಮಪ್ರದೇಶದಲ್ಲಿ ಕೂಡ ದೀಪಗಳ ಸಹಾಯದಿಂದ ಕೃತಿಮ ಸೂರ್ಯ ಪ್ರಕಾಶವನ್ನು ನಿರ್ಮಿಸುವ ಸಾಹಸಕ್ಕವರು ಕೈಹಾಕಿದ್ದಾರೆ.

ಒಂದು ಗೊತ್ತಾದ ಹೊತ್ತು ಸೂರ್ಯ ಬಿಸಿಲಿಗೆ ಮೈಯೊಡ್ಡುವ ಮನುಷ್ಯನ ಶರೀರವು ಬಲಶೀಲವಾಗಿರುವುದೆಂಬುದು ಈಗ ಸಿದ್ಧವಾಗಿದೆ. ಸಾಮಾನ್ಯವಾಗಿ ಅವರು ಯಾವುದೇ ರೋಗಕ್ಕೆ ತುತ್ತಾಗುವುದಿಲ್ಲ. ಈ ಸೌರ ಚಿಕಿತ್ಸೆಯು ಇದೀಗ ಬಾಲ್ಯಾವಸ್ಥೆಯಲ್ಲಿದ್ದರೂ ಕಾಲಕ್ರಮದಲ್ಲಿ ಬೆಳೆದು ಬಂದು, ಮಾನವ ಕುಲಕ್ಕೆ ಉಪಯುಕ್ತ ಪ್ರಮಾಣದಲ್ಲಿ ಸಹಾಯ ಮಾಡುವುದೆಂದು ಅಭಿಪ್ರಾಯಪಡಬಹುದು.

ಪುತ್ತೂರು ಡಿ. ಮು. ಕೋರ್ಟಿನಲ್ಲಿ

R. E. P. 472/60.

O. S. 26/57.

[illegible] ಪ್ರಾಯ [illegible] ಪುತ್ತೂರು ತಾ. 2. ವಾದಿ ಇ. ಮೀಕ್ಷಾಯಿದಾರ P. C. ಕಂಪನಿ ಪ್ರೈ. [illegible] —ಅರ್ಜಿದಾರರು,

Vs

ಪ್ರತಿವಾದಿ— ಪಿ. ಬಾಲಕೃಷ್ಣ ನಾಯರ್— Lorry Driver ಕಾಸರಗೋಡು ಕಸಬಾ. ಸದ್ಯ[illegible] ಕಾಸರಗೋಡು ತಾಲೂಕು. ಈಗ ಬಾಲಿ ಪಟ್ಟಿ ಕಸಬಾ. ಪುತ್ತೂರು ತಾಲೂಕು p. o ಪಟ್ಟಿ. (ಪಟ್ಟಿ ಮಂಗಳೂರು ಡಿಸ್ಟ್ರಿಕ್ಟ್ ಲೋಕಲ್ ಪ್ರೈವೇಟ್ ಮಾಡುತ್ತಾನೆ) —ಎದ್ರಿ.

ನಿನೇ ಅರ್ಜಿದಾರನಾದ ಡಿಕ್ರಿ ಮೇಲ್ಜೀಟು ಪ್ರಕಾರ ಮೇಲ್ಜೀಟು ವಾರಂಟು ನೋಟೀಸು ಮಾಡಿ. ಡಿಕ್ರಿ ಮೇಲ್ಜೀಟು ಮಂಜೂರಾಗಿ ನಿಮ್ಮನ್ನು ವಾರಂಟಿನಲ್ಲಿ ಹಿಡಿಯಬೇಕಾಗಿ ಮಾಡಿದ ಮೇಲಿನ ಅಮಲ್ದಾರಿ ತಾರೀಕು 20—1—61 ಕ್ಕೆ ಇಟ್ಟಿರುವುದರಿಂದ ಅ ಕುರಿತು ನಿಮ್ಮ ಆಕ್ಷೇಪಣೆಗಳಿದ್ರೆ ನೀವು ಆ ದಿನ ಬೆಳಗ್ಗೆ ಗಂಟೆ 11ಕ್ಕೆ ಈ ಕೋರ್ಟು ಮುಂದೆ ಹಾಜರಾಗಿ ಉದಾಹರಿಸದಿದ್ರೆ ನಿಮ್ಮನ್ನು ಶಿಕ್ಷಾ ಮಾಡಿ ಈ ಅಮಲ್ದಾರಿ ಮುಂದುರಿಸಲಾದೀತೆಂತ ಈ ಮೂಲಕ ತಿಳಿಸಿಯದೆ.

Sd/- K. R. Shenoy.

Advocate for petr.

ಪುತ್ತೂರು 23—12 - 60.

---

40 ವರ್ಷಗಳ ಭದ್ರ ಹಾಗೂ ಸಮರ್ಥ ಬೇಂಕಿಂಗ್ ಸೇವೆ

ದಿ. ಪಾಂಗಾಳ ನಾಯಕ್ ಬೇಂಕ್ ಲಿ.,

ಪ್ರಧಾನ ಕಛೇರಿ: ಉಡುಪಿ, (ದ. ಕನ್ನಡ.)

ನಮ್ಮ 3 ವರ್ಷ ವಾಯಿದೆಯ ಕ್ಯಾಷ್ ಸರ್ಟಿಫಿಕೇಟುಗಳಲ್ಲಿ ಠೇವಣಿ ಮಾಡಿರಿ.

ಬಡ್ಡಿ ಶೇಕಡಾ 5ರಂತೆ. ರೂ. 87-00 3 ವರ್ಷಗಳ ಅಂತ್ಯದಲ್ಲಿ ಬಡ್ಡಿ ಕೂಡಿ ರೂ. 100-00 ಒದಗಿಸುವುದು.

ಕರೆ, ಚಿಕ್ಕವಾಯಿದೆ, ನಿರಖು ಠೇವಣಾತಿಗಳ ಮೇಲೆ ಬಡ್ಡಿ ಶೇಕಡಾ 4½ ವರೆಗೆ.

ರೂ. 1 ಕೋಟಿಗೂ ಮಿಕ್ಕಿದ ಚಲಾವಣಾ ಭಂಡವಾಳ

ಶಾಖೆಗಳು: ಬೆಂಗಳೂರು, ಮಂಗಳೂರು, ಬೇಲೂರು, ಶಿವಮೊಗ್ಗ, ಭದ್ರಾವತಿ, ತುಮಕೂರು, ಕುಣಿಗಲ್, ಕಾಸರಗೋಡು, ಇತ್ಯಾದಿ.

(ಸ್ಥಾಪನೆ: 1920)

ಅಭಿಪ್ರಾಯ

ನಾಟಕ ಸಾರ್ವಭೌಮರಾಗ ಬೇಡಿರಿ

ಮಾನವ ತನ್ನ ಜೀವನ ನಾಟಕದಲ್ಲಿ ಬಹು ಕುಶಲತೆಯಿಂದ ಅಭಿನಯಿಸುತ್ತಾನೆ; ಆದರೆ, ಆತ ದುರಂತ ನಾಟಕದ ನಾಯಕ ಪಾತ್ರವನ್ನಷ್ಟೆ ಯಶಸ್ವಿಯಾಗಿ ನಿರ್ವಹಿಸಬಲ್ಲ. ಈ ಪ್ರವೃತ್ತಿಯಿಂದ ತನ್ನ ಜೀವನವನ್ನೇ ರಣರಂಗ ಮಾಡಿಕೊಳ್ಳುವ ಈ ನಟನೆ ತಪ್ಪಿದರೆ ಮಾತ್ರ ಆತನ ಜೀವನ ಸುಖಾಂತವಾದೀತು.

ದುಃಖಾಂತ ನಾಟಕಗಳಲ್ಲಿ ನಾಯಕನ ಬಗ್ಗೆ ಪ್ರಪಂಚವು ಬಹು ಮಾತುಗಳನ್ನಾಡುವುದುಂಟು. ಆ ಪಾತ್ರವು ಶೇಕ್ಸ್‌ಪಿಯರನದಿರಲಿ ಅಥವಾ ಓರ್ವ ಸಾಮಾನ್ಯ ಸಾಹಿತ್ಯಕಾರನದಿರಲಿ, ಜನತೆಯು ಆತನ ಮಾತುಗಳನ್ನು ಬಾಯಿಪಾಠದೊಡನೆ, ದುಃಖಾಶ್ರಿತ ಆನಂದದೊಡನೆ ಕೇಳುತ್ತದೆ.

ಅಂತಹ ಅಭಿನಯವಾದರೂ ಲಾಭಪ್ರದವಾದುದು ಅದರಿಂದ ಅಭಿನಯಕಾರನು ಲಾಭ ಹೊಂದುತ್ತಾನೆ; ಪ್ರೇಕ್ಷಕರೂ ಲಾಭಪಡೆಯುತ್ತಾರೆ. ಪ್ರೇಕ್ಷಕ ತನ್ನ ಭಾವಗಳು ರಂಗಮಂಟಪದ ಮೇಲೆ ಪ್ರತಿಬಿಂಬಿತವಾಗಿರುವುದನ್ನು ಕಾಣುತ್ತಾನೆ, ಜೀವನವನ್ನು ತುಸು ದೂರದಿಂದ ನೋಡಲು, ಮನುಷ್ಯರನ್ನು ತುಸು ಒಳ್ಳೆಯ ರೀತಿಯಲ್ಲಿ ಪರೀಕ್ಷಿಸಲು ಕಲಿಯುತ್ತಾನೆ.

ಆದರೆ, ನಾವು ಜೀವನದಲ್ಲಿಯೂ ದುಃಖಾಂತ ನಾಟಕಗಳ ಪಾತ್ರಗಳಂತೆ ಅಭಿನಯಿಸಲು ತೊಡಗಿದೆವೆಂದರೆ, ದೊಡ್ಡ ಸಮಸ್ಯೆಯೊಂದು ಹುಟ್ಟಿಕೊಂಡಂತಾಗುತ್ತದೆ; ದುರ್ಭಾಗ್ಯದಿಂದ ನಮ್ಮಲ್ಲಿ ಹೆಚ್ಚಿನವರು ಈ ಸಮಸ್ಯೆಯನ್ನು ಎದುರಿಸುತಿದ್ದಾರೆ. ನಮ್ಮೆಲ್ಲರ ವೈಯಕ್ತಿಕ ಮತ್ತು ರಾಷ್ಟ್ರೀಯ ಜೀವನದಲ್ಲಿ ನಿರಾಶೆಯು ಬಂದು ಆವರಿಸುತ್ತದೆ; ಮತ್ತು ಇದರಿಂದ ನಾಟಕೀಯ ಪ್ರವೃತ್ತಿ ಬೆಳೆಯುತ್ತದೆ.

ಹೆಚ್ಚಾಗಿ ನಾವು ನಮ್ಮನ್ನು ಈ ಪ್ರವೃತ್ತಿ ಪ್ರವಾಹದಲ್ಲೇ ಹರಿಯಗೊಡುತ್ತೇವೆ; ಉದ್ದುದ್ದ ಭಾಷಣಗಳನ್ನು ಮಾಡುತ್ತೇವೆ; ಮತ್ತು ಈ ಮೂಲಕ ನಮ್ಮ ನಾಟಕೀಯ ಜೀವನಕ್ಕೆ ಸುವಿಸ್ತೃತವಾದ ವೇದಿಕೆಯನ್ನು ನಾವೇ ರಚಿಸಿಕೊಳ್ಳುತ್ತೇವೆ. ಈ ಭೂಮಿಕೆಯು ನಮ್ಮನ್ನು ಅಭಿಮಾನಧನರನ್ನಾಗಿಸುತ್ತದೆ; ನಾವು ವೇದಿಕೆಯ ಮೇಲೆ ನಮ್ಮ ಭಾವನೆಗಳನ್ನೂ ಅತಿರಂಜಿತಗೊಳಿಸುತ್ತೇವೆ. ನಾವು ಅಭಿನಯವನ್ನಾದರೂ ಅತಿ ಕಲಾವಂತರಂತೆಯೇ ಮಾಡುತ್ತೇವೆ; ಇದು ಅಭಿನಯವಲ್ಲ, ಯಥಾರ್ಥವೆಂಬಂತೆ ನಮ್ಮ ಅಭಿನಯ ಕೌಶಲ ಮೆರೆದಾಡುತ್ತದೆ. ನಮ್ಮನ್ನು ನಾವೇ ವೆಚ್ಚಿಕೊಳ್ಳುವಂತಹ ಸಂದರ್ಭ ಬರುವುದೂ ಇಲ್ಲವೆಂದಿಲ್ಲ.

ಒಬ್ಬ ಮಹಿಳೆಯ ಕಥೆಕೇಳಿ. ಆಕೆಯ ಪತಿರು ಬಹಳ ಸ್ವಾರಸ್ಯವಿದೆ. ಪತಿದೇವ ಆಕೆಯ ಒಂದು ಚಿಕ್ಕ ಬಯಕೆಯನ್ನು ಈಡೇರಿಸಲಿಲ್ಲ. ಈಗ ಆಕೆ ಬಹು ಅದ್ಭುತ ನಾಟಕವಾಡುತಿದ್ದಾಳೆ—ಆಕೆ ಹೇಳುತ್ತಾಳೆ—"ನಾನು ಸೇವಿಕೆ, ಕೇವಲ ದಾಸಿ; ಇಂತಹ ದುರ್ವ್ಯವಹಾರ ಪ್ರಸಂಗದಲ್ಲಿ ದುರಗೆನೆ ನಡೆದಿಲ್ಲ. ನಾನು ಕತ್ತಾದರೂ ಏಕೆ ಹೋಗಲಿಲ್ಲ? ಇಂತಹ ನಾಯಿ ಬಾಳಿಗಿಂತ ಸಾವೇ ಹಿತಕರ". ಈ ರೀತಿ ಭಾವನೆಗಳನ್ನು ಉದ್ವೇಗಗೊಳಿಸಿ ಕೊನೆಗೆ ಆಕೆ ಕಣ್ಣೀರು ಸುರಿಸತೊಡಗುತ್ತಾಳೆ!

ವಾಸ್ತವವಾಗಿ ವಿಷಯವೇನಿತ್ತು? ಏನೂ ಇಲ್ಲ. ನಿಜವಾಗಿಯೂ ಸಂಪೂರ್ಣ ಸಾಮಾನ್ಯ ಸಂಗತಿಯದು! ಪ್ರಾಯಃ ಅದು ಈಗ ಆಕೆಯ ನೆನಪಿನಲ್ಲೂ ಉಳಿದಿರಲಾರದು. ಆದರೂ ಆಕೆಯ ಮಾತುಗಾರಿಕೆ ಅಂದಿನಿಂದ ಇಂದಿಗೂ ನಡೆಯುತ್ತ ಬರುತ್ತಿದೆ; ಬಹಳ ಸ್ಥಾಯಿ ಹಾಗೂ ದುಃಖದಾಯಿಯೂದ ಸನ್ನಿವೇಶವನ್ನು ಕಲ್ಪಿಸಿ ಹೋಗುತ್ತದೆ.

ತಂದೆಯು ಕೋಪಮುದ್ರೆಯನ್ನು ಅಭಿನಯಿಸುತ್ತಾನೆ; ಅವನ ಮಗ ಅನ್ಯಾಯ ಪೀಡಿತನಾಗುವ ಅಭಿನಯ ಮಾಡುತ್ತಾನೆ. ಮಹಾ ಭಾರತದ ವೀರರಂತೆ ಸಂತೆಯ ಅಂಗಡಿಗಾರರು ಪರಸ್ಪರವಾಗಿ ಬಾಣಗಳನ್ನು ಬಿಡುತ್ತಿರುವುದನ್ನು ಕಾಣಬಹುದು. ಈಯೆಲ್ಲವುಗಳಲ್ಲಿಯೂ ಒಂದು ವಿಹಾ ಗಂಡಾಂತರವಿದೆ. ಶಾರೀರಿಕ ಉತ್ತೇಜನವು ವಿಚಾರಗಳನ್ನು ಪ್ರಭಾವಿತಗೊಳಿಸ ತೊಡಗುವುದು; ಅಭಿನಯಕಾರ ಅವಶ್ಯಕತೆಗಿಂತ ಅಧಿಕ ನಟಿಸಿ ಬಿಡುತ್ತಾನೆ. ಒಬ್ಬನ ಮಾತು ಇನ್ನೊಬ್ಬನಿಗೆ ಚುಚ್ಚಿದಂತಾಗುತ್ತದೆ. ಅಭಿನಯ ಮುಕ್ತಾಯವಾದರೂ ಅಭಾವ ಮಾಯವಾದಿಲ್ಲ.

ಈ ಅಭಿನಯಕಾರರು ಉಚ್ಚಸ್ಥದ ಸುಶೋಭಿತ ಉತ್ತರದಾತ ಮನುಷ್ಯರಾಗಿದ್ದರೆ, ಕಷ್ಟ ಮತ್ತಷ್ಟು ಹೆಚ್ಚುವುದು. ಬುದ್ಧಿವಂತಿಕೆಯಿಂದ ಭೂಮಿಕೆಯನ್ನು ಪ್ರಾರಂಭಿಸುವುದು; ಸಿದ್ಧಾಂತವನ್ನು ಬಿಟ್ಟುಕೊಡದಿರುವುದು ಮತ್ತು ಯುದ್ಧಕ್ಕೆ ಹೆದರದವನ ವೇಷ ಹಾಕುವುದು ಬಹಳ ಸುಲಭ. ಆದರೆ, ಆ ಭೂಮಿಕೆಯನ್ನೂ ಅವೇಷ ಭೂಷಣವನ್ನೂ ಸಮಯ ಬಂದಾಗ ತೀಳುವುದು ಮಾತ್ರ ಅತಿ ಸಯಾಸ; ಏಕೆಂದರೆ, ವಿಶ್ವ ರಂಗಭೂಮಿಯಲ್ಲಿ ಸರದಿಯಂತಹ ಯಾವುದೇ ವಸ್ತು ವಿರುವುದಿಲ್ಲ.

ಒಂದು ರಾಷ್ಟ್ರದ ಪ್ರಕಾಶಕರು ಇನ್ನೊಂದರ ವಿರುದ್ಧ ಅಪಮಾನ ಜನಕ ಭಾಷಣ ಮಾಡಿದರೆ, ಇದೇನೂ ಕ್ಷಮ್ಯ ಅಭಿನಯ ದೋಷವಾಗದು. ಇದರ ಪರಿಣಾಮವು ಕೋಟ್ಯಂತರ ಜನರಿಗೆ ಘಾತಕವಾಗಿ ಪರಿಣಮಿಸಬಹುದು. ಆದುದರಿಂದ ಅಂತಹ ಉನ್ನತ ಪದವಿಗಳಲ್ಲಿ ಅಭಿನಯ ಕುಶಲರು ವಿರಾಜಮಾನರಾಗಬೇಕಾದ ಆವಶ್ಯಕತೆ ನಮಗಿಲ್ಲ. ಅಲ್ಲಿ ನಮಗೆ ಬೇಕಾದವರು ಅಭಿನಯ ಸಾರ್ವಭೌಮರಲ್ಲ; ವಿವೇಕಿ, ಧೈರ್ಯವಂತ ಮತ್ತು ಆಳವಾದ ವಿನೋದ ವೃತ್ತಿಯುಳ್ಳವರು.

ನಾಟಕವು ರಮ್ಯವೆನಿಸುತ್ತದೆ. ಆದರೆ, ಈ ನಾಟಕಗಳ ಉದ್ದೇಶ ನಮ್ಮೊಳಗೆ ಹುದುಗಿರುವ ದುಃಖಾಂತ ನಾಟಕ ರಚನೆ ಮಾಡುವ ಪ್ರವೃತ್ತಿಯನ್ನು ತನ್ನ ಹೊಯ್ಲನೊಡನೆ ಕೊಚ್ಚಿಕೊಂಡೊಯ್ಯುವುದೇ ನಾಟಕಗಳ ಉದ್ದೇಶವಿರಬೇಕು. ನಾವೆಲ್ಲರೂ ಒಳ್ಳೆಯ ಅಭಿನಯಕಾರರು; ರಂಗಮಂಟಪಕ್ಕೆ ಪಾದಾರ್ಪಣ ಮಾಡುತ್ತಲೆ ಬಡಬಡಿಸಿ ನಡೆದುಬಿಡುತ್ತೇವೆ. ಆದರೆ, ಸಮಾಜದಲ್ಲಿ ನೆಲೆಸುವ ನಾವು ಒಂದಲ್ಪ ಶಾಂತಿಯಿಂದ ಮತ್ತು ಸುರುಚಿ ಪೂರ್ವಕ ಅಭಿನಯ ನಡೆಸಿದರೆ, ಅದೇ ಒಳ್ಳೆಯದಾಗುವುದು. ಏಕೆಂದರೆ, ಜೀವನ ನಾಟಕವು ಅಲ್ಪಕಾಲೀನವಾದುದು ಮತ್ತು ನಮ್ಮ ಸಂಭಾಷಣೆಯು ತೀವ್ರ ಪ್ರಸಾರಕವಿರುವುದು.



ವಿಶ್ವದ ಮೊದಲನೆ ಕೈಗಾರಿಕೆಯಲ್ಲಿ ಏಳನೆಯ ಸ್ಥಾನ ಭಾರತಕ್ಕೆ. ನಮ್ಮ ಕರ್ನಾಟಕದಲ್ಲಿ ಹಗಲು ರಾತ್ರಿ ಲಕ್ಷಾಂತರ ಮಾನವರು ಈ ಕೈಗಾರಿಕೆಯಲ್ಲಿ ತೊಡಗಿದ್ದಾರೆ. ಕಲಕತ್ತೆಯ ಸಮೀಪದ ಬರಕಪುರ ಕೇಂದ್ರ ಮತ್ಸ್ಯ ಸಂಶೋಧನಾ ಕೇಂದ್ರದಲ್ಲಿ ವಿವಿಧ ಮೀನುಗಳ ಜೀವನ ಚರಿತ್ರೆಯನ್ನು ತಜ್ಞರು ಅಭ್ಯಸಿಸುವ ದೃಶ್ಯವಿದು.

ನವಯುಗ ವಾರ ಪತ್ರಿಕೆಗೆ ಚಂದಾದಾರರಾಗಿ ಪ್ರೋತ್ಸಾಹಿಸಿರಿ.

ಠೇವಣಾತಿಗಳು.....ಆಕರ್ಷಕ ಬಡ್ಡಿ ದರಗಳು

ಜೀವನದ ವೆಚ್ಚವು ದಿನೇ ದಿನೇ ಹೆಚ್ಚುತ್ತಲಿದ್ದರೂ, ಕಷ್ಟಪಟ್ಟು ಉಳಿಸಿದ ನಿಮ್ಮ ಹಣಕ್ಕೆ—ಅತ್ಯಗತ್ಯವಿರುವ ಸುರಕ್ಷಿತತೆ ಮತ್ತು ಭದ್ರತೆಗಳೊಂದಿಗೆ—ಅತ್ಯಾಕರ್ಷಕ ದರದಲ್ಲಿ ಬಡ್ಡಿ ಕೊಟ್ಟು, ನಿಮ್ಮನ್ನು ಸಂತುಷ್ಟರಾಗಿ ಮಾಡಲು

ಕೊರ್ಪೊರೇಶನ್ ಬೇಂಕು

ತಾನು ಠೇವಣಾತಿಗಳ ಮೇಲೆ ಕೊಡುವ ಬಡ್ಡಿ ದರಗಳನ್ನು ಇತ್ತೀಚೆಗೆ ಬದಲಾಯಿಸಿದೆ.

ವಿವರಗಳನ್ನು ನಿಮಗೆ ಸಮೀಪವಿರುವ ಇದರ ಶಾಖೆಯಿಂದ ಪಡೆಯಬಹುದು.

ದಿ. ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್

UDIPI MUNICIPALITY

RETENDER NOTICE

Sealed tenders will be received by the Municipal Commissioner Udipi Municipality up to 4—00 P. M. on Tuesday the 17th January, 1961 for the following works.

Name of works.	Estimated cost.	E, M .D.
1. Providing surface dressing with precoated chips along Bhandaravoni Alevoor Road (0/2 & 0/3 only) (Bithuminous carpet only)	Rs. 3,400 - 00	170 - 00
2. Providing surface dressing with precoated chips along Mission Hospital Chitpady Road (Portion of sec. 0/4 & 0/5 one furlong)	2,350 - 00	117 - 50
3. Construction of Kinnimoolky Basic School Building at Ajjarkad-	33,000 - 00	1,650-00

Full particulars as to the conditions of contract etc. may be had from the Municipal Office, Udipi during Office hours on working days.

N. B. Canditional tenders are liable to be rejected.

Municipal Office. Udipi.
Dated 3o—12—1960.

I. JOSHUA,
Commissioner.

ನಮ್ಮ ಚರಿತ್ರೆ ಮನಸ್ಸು ಮತ್ತು ಯಶಸ್ಸುಗಳು ಕೊಳಕಾಗಿರುವಾಗಿ ನಿಮ್ಮದಷ್ಟು ನಿರ್ಮಲಗೊಳಿಸಿರಿ ಎಂದು ಉಪದೇಶಿಸುವುದು ಅಭಾಷತಮವಾಗಿದೆ.

ನವಯುಗ

ಸರುಷ	ಉಡುಪಿ	ವಾರ
೪೦	೧೨-೧-೬೧	೧೯

ರೆಡ್ಡಿಯವರ ವಿಚಾರಧಾರೆ

ಸರದಾರ ನಗರದಲ್ಲಿ (ಭಾವನಗರ) ಸೇರಿದ್ದ ೬೬ನೆಯ ಕಾಂಗ್ರೆಸ್ ಸಮ್ಮೇಳನವು ವಾಡಿಕೆಯ ಮಾತುಗಳಲ್ಲಿ ಹೇಳುವುದಾದರೆ, ಯಶಸ್ವಿಯಾಗಿಯೇ ಕೊನೆಗೊಂಡಿತು. ಅಧಿಕಾರಾರೂಢ ಪಕ್ಷವೆಂಬುದರಿಂದ ಕಾಂಗ್ರೆಸ್‌ಗೆ ಸಮ್ಮೇಳನಕ್ಕೆ ತುಸು ಪ್ರಾಧಾನ್ಯವಿದೆ. ಆದರೂ ಅದರಲ್ಲಿ ಸ್ವಾತಂತ್ರ್ಯಪೂರ್ವದಲ್ಲಿ ಕಾಣುತಿದ್ದ ವೈಶಿಷ್ಟ್ಯಗಳಾದರಿ ಉತ್ಸಾಹವಾಗಲಿ ಇಂದು ಗೋಚರಿಸುತ್ತಿಲ್ಲವೆಂಬುದು ಜಗಜ್ಜಾಹಿರವಿದೆ. ಸರಕಾರದ ನೀತಿಯನ್ನು ದೃಢೀಕರಿಸುವ ಹಾಗೂ ಪೂರ್ವಸಿದ್ಧತೆಯೋಜಿತ ನಿಲುವುಗಳನ್ನು ಅಂಗೀಕರಿಸುವ ಸಾಮಾನ್ಯ ಕಾರ್ಯಕಲಾಪಗಳನ್ನುಳಿದರೆ ಮತ್ತೇನನ್ನೂ ಸದ್ಯ ಸಾಧಿಸಬೇಕಾಗಿಲ್ಲ. ಅದುದರಿಂದಲೇ ಹಿಂದಿನ ಸಮ್ಮೇಳನಗಳಲ್ಲಿ ಸ್ವೀಕರಿಸಲಾದ ಕೆಲವೊಂದು ಗೊತ್ತುವಳಿಗಳಿಗೆ ಬಲವೀಯುವ, ಅವನ್ನು ಮತ್ತೂ ದೃಢೀಕರಿಸುವ ಪ್ರಸ್ತಾಪಗಳು ಈ ಬಾರಿಯೂ ಸ್ವೀಕೃತವಾದುದರಲ್ಲಿ ವಿಶೇಷತೆಯೇನೂ ಕಾಣುವುದಿಲ್ಲ.

ಕಾಂಗ್ರೆಸ್ ಅಧ್ಯಕ್ಷ ಶ್ರೀ ರೆಡ್ಡಿಯವರು ತಮ್ಮ ಹಿಂದಿನವರು ಅಂದಿದ್ದ ಮಾತುಗಳಿಗೇನೇ ಮತ್ತಷ್ಟು ಪುಷ್ಟಿಯಿತ್ತರು. ರಾಷ್ಟ್ರೀಯ ಐಕ್ಯದ ಮಹತ್ವವನ್ನವರು ಒತ್ತಿಹೇಳಿ, ಜಾತೀಯತೆ, ಪ್ರಾಂತೀಯತೆ ಮತ್ತು ಭಾಷೀಯತೆಗಳ ದುಷ್ಪರಿಣಾಮಗಳಿಂದ ರಾಷ್ಟ್ರಕ್ಷೇಮ ಉಳಿಸಬೇಕೆಂದವರು ಭಾರತೀಯರಿಗೆ ಕರೆಕೊಟ್ಟರು. ಹತ್ತು ವರ್ಷಗಳಿಗಿಂತ ಅಧಿಕವಾಗಿ ಹುದ್ದೆದುಳ್ಳಿರುವ ಕಾಂಗ್ರೆಸಿಗರು ತಾವಾಗಿಯೇ ಅಧಿಕಾರದಿಂದ ಹೊರಬಂದು ಹೊಸರಕ್ತಗಳಿಗೆ ಅವಕಾಶ ಕೊಡಬೇಕು ಎಂಬ ಸೂಚನೆಯನ್ನೂ ಅವರಿತ್ತರು. ಕಾಂಗ್ರೆಸ್ ಸದಸ್ಯರು ಮುಂದುಗಡೆ ತಮಗೆ ಸ್ವೀಕಾರವಲ್ಲದ ಗೊತ್ತುವಳಿಗಳಿಗೆ ಮತವಿತ್ತು ಹಿಂದುಗಡೆ ಇದನ್ನು ವಿರೋಧಿಸುವುದನ್ನು ಶ್ರೀ ರೆಡ್ಡಿ ಖಂಡಿಸಿ, ತಮಗೆ ಒಪ್ಪಿಗೆಯಿಲ್ಲದುದಕ್ಕೆ ಮತವೀಯಬಾರದು ಎಂದು ಕಾಂಗ್ರೆಸಿಗರ ಕರ್ತವ್ಯವನ್ನು ಜ್ಞಾಪಿಸಿದರು. ರಾಷ್ಟ್ರೀಯ ಏಕತೆಯ ಮಾತು ಚರ್ವಿತ ಚರ್ವಣವಾದರೂ ಅದು ಇಂದು ಅತ್ಯವಶ್ಯವಿದೆ. ದೇಶದ ನಾಗರಿಕರಲ್ಲಿ 'ನಾನು ಭಾರತೀಯ' ಎಂಬ ಉನ್ನತ ಮನೋಭಾವ ಉತ್ಪನ್ನವಾಗದ ಹೊರತು ದೇಶದ ಸರ್ವಾಂಗೀಣ ಅಭಿವೃದ್ಧಿಯಾಗಲಾರದು. ಒಂದು ಸ್ವತಂತ್ರ ರಾಷ್ಟ್ರದ ನಾಗರಿಕರಲ್ಲಿ ಅವಶ್ಯವಿರಲೇಬೇಕಾದ ಆದರ್ಶ ಗುಣವಿದೆನ್ನಬಹುದು. ಏಕೆಂದರೆ, ಒಗ್ಗಟ್ಟು ಇಲ್ಲದಲ್ಲಿ ಯಾವ ಕೆಲಸವೂ ಸಮರ್ಪಕವಾಗಿ ಮುಂದುವರಿಯದು. ಅದೇ ರೀತಿ ಕಾಂಗ್ರೆಸ್ಸಿಗರಿಗಿತ್ತ ಕಿವಿಮಾತು ಅಥವಾ ಸಲಹೆಯೂ ಆಗಿದೆ ತಾತ್ವಿಕ ದೃಷ್ಟಿಯಿಂದ ಈ ಸೂಚನೆಯನ್ನು ಸ್ವೀಕರಿಸಬಹುದು; ಆದರೆ, ಇದೆಷ್ಟು ವ್ಯಾವಹಾರಿಕವೆನ್ನುವುದು ಹೇಳುವಂತಿಲ್ಲ. ಹೊಸ ಸೀಳಿಗೆಗೆ ಅಧಿಕಾರ ವಹಿಸುವ ಅವಕಾಶವೊದಗಬೇಕೆಂಬುದು ನಿಜವೇ. ಆದರೆ ಇದಕ್ಕಾಗಿ ಹಳೆಯ ಅನುಭವಿಗಳು ಅವನ್ನು ಒದಗಿಸಬೇಕೆನ್ನುವುದಕ್ಕೆ ಯಾರು ಸಿದ್ಧರಿದ್ದಾರೆ! ಕಾಂಗ್ರೆಸ್ ವರಿಷ್ಠರಲ್ಲಿಯಾದರೂ ಈ ರೀತಿ ಅಧಿಕಾರ ತ್ಯಾಗಮಾಡುವ ಇಚ್ಛೆಯಿರುವವರೆಷ್ಟು ಮಂದಿ? ಈ ನಿಟ್ಟಿನಿಂದ ಶ್ರೀ ರೆಡ್ಡಿಯವರ ಮಾತು ಉಪದೇಶದ ಆಡಂಬರ ಮಾತ್ರವೆಂದು ಹೇಳುವುದು ತಪ್ಪಾಗದು. ತಮಗೆ ಸ್ವೀಕೃತವೆನಿಸದ ಗೊತ್ತುವಳಿಗಳನ್ನು ಪರಿಸ್ಥಿತಿಯ ಒತ್ತಡದಿಂದಲೋ ಸಾಕಷ್ಟು ಪರ್ಯಾಲೋಚನೆ ನಡೆಸದುದರಿಂದಲೋ ಒಮ್ಮೆ ಸ್ವೀಕರಿಸಿದವರು ಮುಂದೆ ಅದನ್ನು ವಿರೋಧಿಸುವುದು ನ್ಯಾಯವಲ್ಲವೆಂಬ ಶ್ರೀ ರೆಡ್ಡಿಯರ ಅಂಬೋಣ ವಾಸ್ತವಿಕವೇ; ರಾಜ್ಯಕೀಯ ಸ್ವಾರ್ಥವು ಈ ಕೆಲಸವನ್ನೂ ಮಾಡಿಸಿ ಬಿಡುವುದು ಖಂಡಿತವೇ. ಆದರೂ ಕಾಂಗ್ರೆಸ್ಸಿಗರು ನಿಸ್ವಾರ್ಥ ಪ್ರಿಯರೂ ಆಡಂಬರ ರಹಿತರೂ ಆಗಬೇಕೆಂಬ ಆಶಯವನ್ನು ಹೊರಡಿಸುವುದಾದರೆ, ಅವರು ಮತಾಧಿಕಾರ ಚಲಾಯಿಸುವಾಗ ತುಂಬ ಎಚ್ಚರಿಕೆ ವಹಿಸಬೇಕಾದುದು ಅವಶ್ಯ. ಈ ದೃಷ್ಟಿಯಿಂದ ಕಾಂಗ್ರೆಸ್ ಅಧ್ಯಕ್ಷರ ಅಭಿಪ್ರಾಯ ಸ್ವಾಗತಾರ್ಹವಾಗಿದೆ. ರಾಜಕೀಯ ಪಕ್ಷಗಳ ಮೇಲಾಟಕ್ಕಿಂತಲೂ ಇಂದು ನಮ್ಮಲ್ಲಿ ಒಂದೇ ಪಕ್ಷಕ್ಕೆ ಸೇರಿದ ಜನರಲ್ಲಿಯೇ ಪರಸ್ಪರ ಮೇಲಾಟವಾಗುತ್ತಿರುವುದನ್ನು ನಾವು ಕಡೆಗಣಿಸುವಂತಿಲ್ಲ. ಭಾರತದಲ್ಲಿ ಇತರ ಯಾವ ಪಕ್ಷಕ್ಕೂ ಕಾಂಗ್ರೆಸ್ಸಿನಂತಹ ಭವ್ಯೇತಿಹಾಸವಿಲ್ಲವಾದುದರಿಂದ ಇದೇ ಪ್ರತಿ ಬಾರಿಯೂ ಗೆದ್ದು ಬರುತ್ತಿದೆ. ಅದು ದೊಡ್ಡ ಪ್ರಜಾಪ್ರಭುತ್ವವಾದಿ ಪಕ್ಷವಾದುದರಿಂದ ಸೋಲುಂಡರಿಯದು. ಸ್ವಾತಂತ್ರ್ಯ ಪ್ರಾಪ್ತಿಗೆ ಮೊದಲು ಅದರ ಕರ್ತೃತ್ವಶಕ್ತಿ ಅಪಾರವಿತ್ತು. ಇಂದು ಅದರೊಳಗೇನೇ ಬಿರುಕುಗಳು ಎದ್ದು ತೋರತೊಡಗಿವೆ.

ಕಾಂಗ್ರೆಸ್ ಅಧ್ಯಕ್ಷರೇನೋ ಕಾಂಗ್ರೆಸಿಗರಿಗೆ ಒಂದಷ್ಟು ಉಪದೇಶವಿತ್ತರು. ಪ್ರಾಯಃ ಉಪದೇಶವೆನ್ನುವುದು ಹೇಳುವವನಿಗೂ ಕೇಳುವವನಿಗೂ ಬಿಟ್ಟು ಇತರರಿಗೆಲ್ಲವಿರಬಹುದು. ಉಪದೇಶ ಕೊಡುವಷ್ಟು ಘಾತಾಳವಾಗಿ ನಾವು ಇನ್ನೊಬ್ಬರಿಗೆ ಏನನ್ನೂ ಕೊಡುವಂತಿಲ್ಲ. ನಮ್ಮಲ್ಲಿಲ್ಲದುದನ್ನು ಆತನಿಗೆ ಕೊಡುವುದಾದರೂ ಹೇಗೆ? ಇದೇ ಮಾದರಿಯ ಕೆಲವೊಂದು ಉಪದೇಶಗಳು ಈ ಮೊದಲೇ ಕಾಂಗ್ರೆಸಿಗರಿಗೆ ಕೊಡಲ್ಪಟ್ಟಿದ್ದರೂ ಅವನ್ನು ಆಚರಣೆಯಲ್ಲಿ ತಂದವರೆಷ್ಟು ಜನ? ಮುಂದಿನ ಸಾರ್ವತ್ರಿಕ ಚುನಾವಣೆಗಳ ಬಗ್ಗೆ ಕಾಂಗ್ರೆಸ್ಸಿನ ಘೋಷಣಾ ಪತ್ರವನ್ನೂ ಸ್ವೀಕರಿಸಲಾಯಿತು—ಈ ಅಧಿವೇಶನದಲ್ಲಿ. ದೇಶವನ್ನು ಮುಂದುವರಿಸಿಕೊಂಡೊಯ್ಯಲು ಕಾಂಗ್ರೆಸ್ಸು ಒಂದೇ ಸಮರ್ಥವೆಂದು ಇದಕ್ಕಾಗಿ ಸಮಾಜವಾದ ಮಾದರಿಯ ಸಮಾಜರಚನೆಯೇ ಸರಕಾರದ ಉದ್ದೇಶವೆಂದೂ ಕೇಳಿಬಲ್ಲವರಿಗೆ ಈ ಘೋಷಣಾ ಪತ್ರದಲ್ಲಿಯೂ ಮಹತ್ವವಿದೆಯೆನ್ನುವಂತಿಲ್ಲ. ಇದೇನೂ ಹೊಸ ಸಂಗತಿಯೂ ಅಲ್ಲ. ಅಧಿಕಾರಕ್ಕೆ ಕಾಂಗ್ರೆಸಿಗರು ಬಂದಂತರ ಸೇವಾಭಾವನೆ ದೂರವಾಗುತ್ತಿದೆಯೆಂದೂ ಗ್ರಾಮೀಣ ವಲಯಗಳಲ್ಲಿ ಕಾಂಗ್ರೆಸಿಗರು ಸೇವೆ ಸಲ್ಲಿಸುವುದೇ ಇಲ್ಲವೆಂದೂ ಆಡುವುದರಿಂದ ಅವರು ಹಳ್ಳಿಗಳತ್ತ ಪ್ರಚಾರಕಾರ್ಯವನ್ನು ನೆರವೇರಿಸಬೇಕೆಂದೂ ಇತ್ತ ರೆಡ್ಡಿಯವರ ಕರೆಯ ಫಲಶ್ರುತಿಯೇನೂ ತಿಳಿದುಬರಲಾರದು. ಆದರೂ ಕಾಂಗ್ರೆಸ್ ಶಿಥಿಲವಾಗುವುದನ್ನು ನಿಲ್ಲಿಸಿ, ಸಂಸ್ಥೆಯನ್ನು ಮತ್ತಷ್ಟು ಬಲಪಡಿಸಿದರೆ ಮಾತ್ರ ಕಾಂಗ್ರೆಸ್ಸು ತನ್ನ ಸ್ಥಾನವನ್ನುಳಿಸಿಕೊಳ್ಳಬಹುದು; ಗೌರವವನ್ನು ಕೂಡ ಗ್ರಾಮೀಣ ಪ್ರದೇಶದ ಕಾಂಗ್ರೆಸ್ ಕಾರ್ಯಕರ್ತರು ಕಾಂಗ್ರೆಸ್ ತತ್ವಗಳನ್ನು ಮನೆ ಮನೆಗೆ ಒಯ್ಯುವ ತ್ರಮವನ್ನಿಟ್ಟುಕೊಳ್ಳಬೇಕು; ಅದನ್ನು ಜನಪ್ರಿಯಗೊಳಿಸುವಂತಾಗಬೇಕು. ಜನತೆಯ ಸುಖದುಃಖಗಳನ್ನು ಸರಿಯಾಗಿ ತಿಳಿದುಕೊಂಡು ಅವುಗಳ ಬಗ್ಗೆ ಚಿಂತಿಸದೆ ಯಾವುದೋ ಒಂದು ಬಗೆಯ ಸ್ವಾರ್ಥ ಸಾಧನೆಗಾಗಿ ಕಾರ್ಯನಿಮಗ್ನರಾಗುವುದಾದರೆ ಅವರ ವ್ಯಕ್ತಿಗತ ಹಿತವಾದೀತು; ಸಮಾಜ—ರಾಷ್ಟ್ರಹಿತ ಕನಸಿನ ಮಂಡಿಗೆಯಾದೀತು. ಜನತೆಯಲ್ಲಿ ನವಜಾಗೃತಿಯೇಳುವಂತಹ, ಎಳೆಯರಲ್ಲಿ ಸ್ಫೂರ್ತಿ ಹೊರ ಚಿಮ್ಮುವಂತಹ ರೀತಿಯಲ್ಲಿ ಇಂದು ಕಾರ್ಯವಾಗಬೇಕಾಗಿದೆ; ಇದಕ್ಕಾಗಿ ರಚನಾತ್ಮಕ ಕಾರ್ಯಗಳಲ್ಲಿ ಅಪರಿಮಿತ ಆಸಕ್ತಿ ವಹಿಸಬೇಕಾಗಿದೆ—ಈ ಭಾರವನ್ನು ಕಾಂಗ್ರೆಸಿಗರು ಹೊರಲು ಹಿಂಜರಿದರೆ, ಸಮ್ಮೇಳನ ಆಡಂಬರದಲ್ಲಿಯೇ ಮುಗಿಯಿತು ಎನ್ನಬೇಕಾಗುತ್ತದೆ.

ರಜತೋತ್ಸವ

ಉಡುಪಿ ನಗರ ಸಭೆಯು ಇದೀಗ ತನ್ನ ಬೆಳ್ಳಿಹಬ್ಬವನ್ನು ಆಚರಿಸುತ್ತಿದೆ. ೨೫ ವರ್ಷಗಳಿಗೆ ಮೊದಲು ಇಲ್ಲಿ ನಗರ ಸಭೆಯ ಸ್ಥಾಪನೆಯಾಗುವಾಗ ಬೇಡವೆಂಬ ಪುಸ್ತಿಯೆದ್ದು ತುಂಬ ಗೊಂದಲವಾಗಿತ್ತೆಂದು ಕೇಳುತ್ತೇವೆ ನಗರ ಸಭೆಯೆಂದೊಡನೆ ಕೆಲವೊಂದು ಹೆಚ್ಚಿನ ಅನುಕೂಲತೆಗಳನ್ನು ನಾಗರಿಕರಿಗೆ ಒದಗಿಸಿ ಕೊಡಬೇಕಾಗಿರುವುದರಿಂದ ಈ ಉದ್ದೇಶಗಳಿಗಾಗಿ ಹೆಚ್ಚಿನ ಕರವನ್ನೂ ಈಯಬೇಕಾಗುವುದು. ಅಧಿಕ ಕರ ತೆರಬೇಕಾಗುವ ಯಾವುದೇ ಯೋಜನೆಯನ್ನು ಮುಕ್ತ ಹಸ್ತದಿಂದ ಸ್ವಾಗತಿಸುವಷ್ಟು ಔದಾರ್ಯ ನಮ್ಮಲ್ಲಿ ಇಂದಿಗೂ ಬೆಳೆಯದಿರುವಾಗ ಅಂದಿನ ಸ್ಥಿತಿ ಹೇಗಿರಬಹುದು? ಅದೇನೇ ಇರಲಿ, ನಮ್ಮ ಉಡುಪಿಯಲ್ಲಿ ಕೆಲವರ ವಿರೋಧವಿದ್ದಂತೆಯೇ ನಗರ ಸಭೆ ಸ್ಥಾಪಿತವಾಯಿತು. ಮದ್ರಾಸ್ ಎಂ. ಡಿ. ಎಂ. ಅಕ್ಟಿಗನುಸಾರವಾಗಿ ಇಲ್ಲಿ ಕರ ವಸೂಲಿಯಾಗತೊಡಗಿತು. ನಗರ ಸಭೆಗಳು ಸ್ಥಾನಿಕ ಸರಕಾರಗಳಂತಿದ್ದರೂ ಇವುಗಳ ಅಧಿಕಾರವು ಪರಿಮಿತವಾಗಿರುವುದರಿಂದ ಹೆಚ್ಚಿನ ಕಾರ್ಯಕಲಾಪಗಳನ್ನು ಮಾಡಬೇಕಾದರೆ, ಸರಕಾರದ ಅಥವಾ ಜನತೆಯ ಆರ್ಥಿಕ ಸಹಕಾರ ಅನಿವಾರ್ಯವಾಗುವುದು, ಇಲ್ಲವೇ ಇವುಗಳ ಉತ್ಪನ್ನ ಹೆಚ್ಚಿರಬೇಕಾಗುವುದು. ಉಡುಪಿಯು ವಿದ್ಯಾಕೇಂದ್ರವಾಗಿಯೇ ಬೆಳೆದು ಬಂದುದರಿಂದ, ನಗರಸಭೆಯ ಆದಾಯದಲ್ಲಿ ಗಣನೀಯವಾದ ಏರಿಕೆಯೇನೂ ಆಗಿರುವುದಿಲ್ಲ. ಆದರೂ ಇದ್ದ ಬಿದ್ದ ಹಣದಲ್ಲಿ ಅಧ್ಯಕ್ಷರುಗಳ ಜಾಣ್ಮೆ, ನೌಕರರ ಸಹಕಾರ, ಸಭಾಸದರ ಉದಾರತೆಯಿಂದ ಕೆಲವೊಂದು ಕಾರ್ಯಗಳು ನಡೆಯುವು. ಆದರೆ, ಈ ೨೫ ವರ್ಷಗಳಲ್ಲಿ ನಗರಸಭೆ ಹೊಟ್ಟೆಬಟ್ಟೆ ತೋರಿಸುವ ಯಾವುದೇ ಕೆಲಸವನ್ನು ಮಾಡಿದೆಯೆ? ಎಂಬುದಕ್ಕೆ ಸಮಾಧಾನಕರವಾದ ಉತ್ತರ ತೋರುವುದಿಲ್ಲ. ನಗರಸಭೆಯ ಕಾರ್ಯಾಲಯವಿನ್ನೂ ಬಾಡಿಗೆಯ ಕಟ್ಟಡದಲ್ಲಿದೆ; ವಾಚನಾಲಯ-ಪುಸ್ತಕಾಲಯಗಳನ್ನು ಲೋಕಲ್ ಲೈಬ್ರೆರಿ ಅಥೋರಿಟಿಯವರಿಗೆ ಬಿಟ್ಟುಕೊಟ್ಟಿದೆ. ಪ್ರಾಥಮಿಕ ಶಾಲೆಗಳನ್ನೂ ಸಂಪೂರ್ಣ ಸಜಾಯಧನನೀಡದೆಹೋದರೆ ಸರಕಾರವೇ ವಹಿಸಬೇಕೆಂದುಕೇಳಿಕೊಳ್ಳುತ್ತಿದೆ; ಆಸ್ಪತ್ರೆ ಸರಕಾರದ್ದೇ ಇದೆ. ರಸ್ತೆಗಳಲ್ಲಿ ಮುಖ್ಯವಾದುವು ಪ್ರೈವೇಸ್‌ನ ವಶವಿವೆ. ಶುಚಿತ್ವದ ಒಂದು ದೈನಂದಿನ ಕಾರ್ಯವನ್ನು ಳಿದರೆ, ಅದರ ಮತ್ತಾವುದೇ ಚಟುವಟಿಕೆಗಳು ಕಣ್ಣಿಗೆ ಕಾಣುವಂತಿಲ್ಲ. ನಗರ ಸಭಾಸದರು ಮತ್ತು ನೌಕರರ ನಡುವೆ ಸವಿರಸದ ಪ್ರಕರಣಗಳು ಈಗ್ಗೆ ಕೆಲ ವರ್ಷಗಳಿಂದ ನಡೆದು ಬರುತ್ತಿರುವುದನ್ನು ಕೇಳುತ್ತೇವೆ. ಕರ ವಸೂಲಿಯಲ್ಲಿ, ನಾಗರಿಕರ ಅರ್ಜಿಗಳಿಗೆ ಉತ್ತರವೀಯುವಲ್ಲಿ ಬಹು ನಿಧಾನ—ಅತೀಉದಾಸೀನ ತೋರಿಬರತೊಡಗಿದೆ. ನಾಗರಿಕರ ಸುಖದುಃಖಗಳ ಬಗ್ಗೆ ಇದು ವಹಿಸುವ ಕಾಳಜಿ ಏನೇನೂ ಸಾಲದಾಗಿದೆ. ನಗರಸಭೆಯ ಆಯದಲ್ಲಿ ಅರ್ಧಾಂಶಕ್ಕಿಂತಲೂ ಹೆಚ್ಚು ನೌಕರರ ವೇತನ-ಭತ್ತೆಗಳಿಗೇ ಹೋಗುವಾಗ, ಅಭಿವೃದ್ಧಿ ಯೋಜನೆಗಳು ರೂಪುಗೊಳ್ಳುವುದರಲ್ಲೇ ಉಳಿದ ಹಣ ನೀರಾಗುತ್ತದೆ. ಮತ್ತೆ ರಚನಾತ್ಮಕ ಕಾರ್ಯವೆಲ್ಲಿಂದ? ಈ ಮೊದಲು ನಗರ ಸಭೆ ಏನಾದರೂ ಮಹತ್ವದ ಕಾರ್ಯ ಮಾಡಿದೆಯೊದರೆ, ಅದಕ್ಕೆ ಸಾರ್ವಜನಿಕ ಸಂಘ ಸಂಸ್ಥೆಗಳ; ಹಾಗೂ ವ್ಯಕ್ತಿಗಳ ಉದಾರ ಮನಸ್ಸೇ ಕಾರಣ. ನಗರ ಸಭಾಸದರು ನಾಗರಿಕರ ಸೇವಾಭಾವನೆಯಿಂದ ಕರ್ತವ್ಯಸಿದ್ಧರಾಗಬೇಕು, ನೌಕರರು ತಮಗೆ ಅನ್ನ ನೀಡುವ ನಾಗರಿಕರ ಸುಖದುಃಖಗಳತ್ತ ಹೆಚ್ಚು ನಿಗಾಕೊಟ್ಟು ನಾಗರಿಕರಿಗಾಗುತ್ತಿರುವ ವೃಥಾ ತ್ರಾಸವನ್ನು ಹ್ರಾಸಗೊಳಿಸಬೇಕು. ಸರಕಾರವಾದರೂ ಆರ್ಥಿಕವಾಗಿ ಸಹಾಯವಿತ್ತು ನಗರ ಸಭೆಯ ಅಧಿಕಾರಮಿತಿಯನ್ನು ಸಡಿಲಗೊಳಿಸಬೇಕು; ನಾಗರಿಕರು ಆತ್ಮ ಸಂತೋಷದಿಂದ ಕರತೆರಬೇಕು; ಅದು ಆವಶ್ಯಕ ಯೋಜನೆಗೆ ಪೆಚ್ಚವಾಗಬೇಕು. ಬೆಳ್ಳಿ ಹೆಬ್ಬದ ಸಂದರ್ಭದಲ್ಲಿ ಇದೇ ತಾ. ೮ರಿಂದ ವಸ್ತು ಪ್ರದರ್ಶನ ಮತ್ತು ವಿನೋದಾವಳಿಗಳ ಕಾರ್ಯಕ್ರಮವನ್ನು ರಜತೋತ್ಸವ ಸಮಿತಿ ಕೈಗೊಂಡಿದೆ. ಇದರಿಂದ ಗಳಿಸಿದ ಹಣವು ನಗರ ಸಭೆಯ ಅವಶ್ಯಕ ಕಾರ್ಯಗಳಿಗೆ ವಿನಿಯೋಗವಾಗುವುದೆಂದು ಕೇಳುತ್ತೇವೆ. ರಜತೋತ್ಸವವನ್ನು ಆಚರಿಸುವ ಈ ಸದವಸರದಲ್ಲಿ ಹಿಂದಿನ ಮತ್ತು ಇಂದಿನ ಎಲ್ಲಾ ಅಧ್ಯಕ್ಷರನ್ನೂ ಸಭಾಸದಸ್ಯರನ್ನೂ ಮನಸಾರೆ ಅಭಿನಂದಿಸಿ ಈ ಉ

ದೃಮವು ಯಶಸ್ವಿಯಾಗಲಿ, ಉಡುಪಿ ನಗರಸಭೆಯು ಉಳಿದ ನಗರ ಸಭೆಯವರಿಗೆ ಆದರ್ಶಪ್ರಾಯವಾಗಲಿ ಎಂದು ಹಾರಯಿಸುತ್ತೇವೆ.

ಸಂಕ್ಷಿಪ್ತ ಸುದ್ದಿಗಳು

ನೇತ್ರಾವತಿಗೆ ಸೇತುವೆ

ಕೇಂದ್ರ ವಾಣಿಜ್ಯ ಮತ್ತು ಔದ್ಯಮ ಸಚಿವ ಶ್ರೀ ಲಾಲಬಹದ್ದೂರ ಶಾಸ್ತ್ರಿಗಳು ಕೇಂದ್ರದಲ್ಲಿ ಬಹು ಪ್ರಭಾವಿ ಮಂತ್ರಿಗಳೆಂದು ಹೆಸರುಗಳಿಸಿದ್ದಾರೆ. ಜನತೆಯಿಂದಲೂ ಅವರು ಗೌರವ ಪಡೆಯುತ್ತಾರೆ. ದಕ್ಷಿಣ ಕನ್ನಡ ಜಿಲ್ಲೆಯ ದೊಡ್ಡ ನದಿಗಳಲ್ಲಿ ಒಂದಾದ ನೇತ್ರಾವತಿ ಹೊಳೆಗೆ ಸಂಕಕಟ್ಟುವಲ್ಲಿ ಅಸಕ್ತಿ ವಹಿಸಿ ಅದಕ್ಕಾಗಿ ಪ್ರಯತ್ನಿಸಿದ ಶ್ರೀ ಶಾಸ್ತ್ರಿಯವರು ಈಗ ಅದಕ್ಕೆ ಶಂಕುಸ್ಥಾಪನೆಯನ್ನು ಮಾಡಿದರು. ದಕ್ಷಿಣ ಕನ್ನಡದ ಮುಖ್ಯ ಹೊಳೆಗಳಿಗೆ ಸೇತುವೆಯಾಗಬೇಕೆಂಬ ಅವರ ಮನೋಭಿಲಾಷೆ ಸಾಮಾನ್ಯವಾಗಿ ಇದೀಗ ಪೂರ್ಣಗೊಳ್ಳುವಂತಾಗಿದೆ. ಉಪ್ಪುಂದದ ಸೇತುವೆ ಈಗತಾನೇ ಸಂಪೂರ್ಣಗೊಂಡಿದೆ. ಮೂಬುಕಳ ಮತ್ತು ಕಲ್ಯಾಣಪುರಗಳಲ್ಲಿ ಕೆಲಸ ತರಾತುರಿಯಿಂದ ಸಾಗುತ್ತಿದೆ; ಗಂಗೊಳ್ಳಿಯದೂ ಮುಂದುವರಿಯುತ್ತಿದೆ. ಇವೆಲ್ಲ ಸಂಕಗಳ ವೆಚ್ಚವನ್ನು ಕೇಂದ್ರಸರಕಾರವೇ ವಹಿಸಿಕೊಂಡಿದೆ. ಈದಿಸೆಯಲ್ಲಿ ಎಂ. ಪಿ. ಶ್ರೀನಿವಾಸ ಮಲ್ಯರೂ ಜನತೆಯ ಅಭಿನಂದನೆಗೆ ಪಾತ್ರರಾಗಿದ್ದಾರೆ.

ಉಪವಾಸ ಮುಕ್ತಾಯ

ಪಂಜಾಬಿ ಸುಬಾ—ಪಂಜಾಬಿ ಭಾಷೆಯ ಸ್ಥಾನಮಾನಗಳಿಗಾಗಿ ಆಮರಣ ಉಪವಾಸ ಮಾಡಿದ ಸಂತ ಫತೇಸಿಂಗರು ಅಭಿನವಪೊಟ್ಟಿಲು ಶ್ರೀ ರಾಮುಲು ಆಗಬಯಸಿದ್ದರೋ ಏನೋ! ಆದರೆ, ನೆಹರುರವರ ಪರ್ಯಾಲೋಚನೆಗೆ ಸಿದ್ಧವೆಂಬ ಮಾತುಗಳಿಂದಲೇ ತೃಪ್ತರಾಗಿ ಅವರು ತಮ್ಮ ಪ್ರತಿಜ್ಞೆಯನ್ನು ಹಿಂತೆಗೆದು ಉಪವಾಸ ಮುಗಿಸಿ ಬಿಡುವ ಸೌಜನ್ಯ ತೋರಿಸಿದರು. ಪಂಜಾಬ ರಾಜ್ಯದಲ್ಲಿ ಕೆಲವೆಡೆ ಹಿಂದಿ ಆಡುವ ಜನರಿದ್ದರೂ ಪ್ರಧಾನವಾದ ಭಾಷೆಯು ಪಂಜಾಬಿಯೇ ಆಗಿದೆ ಎಂಬ ನೆಹರೂರ ಉದ್ಗಾರವು ಸತ್ಯವಿರಬೇಕೆಂಬುದರಿಂದಲೇ ಅದು ಶ್ರೀ ಸಿಂಗರಿಗೆ ಪಥ್ಯವಾಗಿ ಕಂಡಿರಬಹುದು.

ಶರಾವತಿಕೊಳ್ಳ ಯೋಜನೆ

ಭಾರತದಲ್ಲಿಯೇ ಅತಿದೊಡ್ಡದೆನ್ನಬಹುದಾದ ಶರಾವತಿ ನದೀ ಯೋಜನೆಯ ಕಾರ್ಯವೀಗ ಪ್ರಗತಿ ಪಥದಲ್ಲಿ ಮುಂದುವರಿಯುತ್ತಿದೆಯೆಂದು ಲೋಕೋಪಯೋಗಿ ಮಂತ್ರಿ ಶ್ರೀ ಚೆನ್ನ ಬಸಪ್ಪನವರು ಅಂಕೆಸಂಖ್ಯೆಗಳ ಆಧಾರದಿಂದ ದೃಢೀಕರಿಸಿದರು. ಪ್ರಾಕೃತಿಕ ಸಂಪತ್ತಿನ ತವರೂರಾದ ಉತ್ತರ ಕನ್ನಡ ಜಿಲ್ಲೆಯಲ್ಲಿ ಸಂಪತ್ತಿನ ಸದುಪಯೋಗವಾಗುವಂತೆ ಸಂಚಾರಾನುಕೂಲತೆಗಳನ್ನೂ ಅಧಿಕಗೊಳಿಸಬೇಕೆನ್ನುವ ಸರಕಾರದ ಇಚ್ಛೆಯನ್ನವರು ತಿಳಿಸಿ ಇದಕ್ಕಾಗಿ ಬೃಹದ್ಯೋಜನೆಯೊಂದು ರೂಪಿತವಾಗುತ್ತಿದೆಯೆಂದು ಹೇಳಿದ್ದಾರೆ. ಶ್ರೀ ಚೆನ್ನ ಬಸಪ್ಪನವರ ಮಾತಿನಲ್ಲಿ ವಿಶ್ವಾಸವಿಡುವುದಾದರೆ, ಮೂರನೆಯ ಯೋಜನೆಯ ಕೊನೆಗಾದರೂ ತುಸು ಪ್ರಗತಿಕಂಡು ಬರಬಹುದೆಂದು ನಿರೀಕ್ಷಿಸಬಹುದು.

ಅಲ್ಲಲ್ಲಿಯ ಸುದ್ದಿಸಾರ

ವಸ್ತು ಪ್ರದರ್ಶನದ ಉದ್ಘಾಟನೆ

ಉಡುಪಿ ನಗರ ಸಭೆಯ ರಜತಮಹೋತ್ಸವದ ಅಂಗವಾಗಿ ಮುನಿಸಿಪಲ್ ಪ್ರವಾಸಿ ಮಂದಿರದಲ್ಲಿ ಏರ್ಪಡಿಸಲಾದ ವಸ್ತು ಪ್ರದರ್ಶನವನ್ನು ತಾ. 8ನೇ ಸಂಜೆ ದ. ಕ. ಜಿಲ್ಲಾ ಕಾಂಗ್ರೆಸ್ ಸಮಿತಿಯ ಪ್ರಧಾನ ಕಾರ್ಯದರ್ಶಿಗಳೂ ಮಂಗಳೂರು ನಗರ ಸಭೆಯ ಮಾಜಿ ಅಧ್ಯಕ್ಷರೂ ಆದ ಎಡ್ವಕೇಟ್ ಶ್ರೀ ಕೆ. ಸೂರ್ಯನಾರಾಯಣ ಆಡಿಗರವರು ಉದ್ಘಾಟಿಸಿದರು. ಮೈಸೂರು ರಾಜ್ಯದ ಆರೋಗ್ಯ ಮಂತ್ರಿ ಡಾ. ಕೆ. ಕೆ. ಹೆಗ್ಡೆಯವರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ನಗರ ಸಭಾಪತಿ ಡಾ. ಕೆ. ಎಲ್ ಐತಾಳರು ಸ್ವಾಗತಿಸುತ್ತ ಉಡುಪಿಗೆ ಅತ್ಯಾವಶ್ಯಕವಾದ ನಳ್ಳಿ ನೀರಿನ ಯೋಜನೆ, ಭೂಗತ ಚರಂಡಿ ಯೋಜನೆ ಮೊದಲಾದುವನ್ನು ಕಾರ್ಯಗತಗೊಳಿಸಬೇಕಾಗಿದೆ ಎಂದೂ ಕೆಲವೊಂದು ಅವಶ್ಯಕತೆಗಳಿಗಾಗಿ ನಾವಿಂತಹ ಕಾರ್ಯಕ್ರಮವನ್ನು ಏರ್ಪಡಿಸಬೇಕಾಯಿತೆಂದೂ ಹೇಳಿ ಎಲ್ಲರ ಸಹಕಾರಸ್ಮರಿಸಿದರು. ಶ್ರೀಯುತ ಜೆ. ಅಲ್ಸೆಯವರು ಸಂದೇಶಗಳನ್ನು ಓದಿದರು.

ಬಳಿಕ ಶ್ರೀ ಆಡಿಗರು ಉದ್ಘಾಟನಾ ಭಾಷಣಮಾಡುತ್ತ ಸರಕಾರವು ಹಣವಿಲ್ಲವೆಂಬ ಕಾರಣದಿಂದ ಅತ್ಯಾವಶ್ಯಕ ಕೆಲಸಗಳನ್ನು ಮಾಡದಿರುವುದು ಯೋಗ್ಯವಲ್ಲವೆಂದೂ, ಉಡುಪಿಗೆ ನಳ್ಳಿ ನೀರಿನ ಯೋಜನೆ, ಭೂಗತ ಚರಂಡಿ ಯೋಜನೆ ಅತ್ಯಾವಶ್ಯಕವೆಂದೂ ಮಂಗಳೂರಲ್ಲಿ ಈ ಯೋಜನೆಗಳು ನೆರವೇರುವಂತೆ ದಿ ಮಂತ್ರಿ ಎ. ಬಿ ಶೆಟ್ಟರು ಪ್ರಯತ್ನಿಸಿದಂತೆ ಉಡುಪಿಗೆ ಮಂತ್ರಿ ಕೆ. ಕೆ. ಹೆಗ್ಡೆಯವರು ಪ್ರಯತ್ನಿಸಬೇಕೆಂದೂ, ಹೇಳಿದರು. ನಗರಸಭೆಯ ಕರ್ತವ್ಯ, ಸಂಕಷ್ಟಗಳೇನೆಂಬುದನ್ನು ಇಂತಹ ಸದ್ದರ್ಶನಗಳನ್ನು ವರ್ಷಕ್ಕೊಮ್ಮೆ ಅಲ್ಲವೇ ಎರಡು ವರ್ಷಕ್ಕೊಮ್ಮೆ ಏರ್ಪಡಿಸುವುದು ಉತ್ತಮವೆಂದೂ ಹೇಳಿದರಲ್ಲದೆ ನಗರ ಸಭೆಯ ಪರಿಮಾನ ಹೆಚ್ಚಿಸುವ ಕುರಿತು ಕೆಲವು ಸೂಚನೆಗಳನ್ನಿತ್ತರು.

ಅಧ್ಯಕ್ಷ ಮಂತ್ರಿ ಶ್ರೀ ಹೆಗ್ಡೆಯವರು ಭಾಷಣಮಾಡುತ್ತ ಸ್ಥಳೀಯ ಸಂಸ್ಥೆಗಳ ಆಚೆಳತೆ ನಿರ್ವಹಣೆಯು ಹಣದ ಅಭಾವದಿಂದಾಗಿ ತುಂಬಾ ಕಷ್ಟಕರವಾದುದೆಂದೂ ನಗರ ಸಭೆಯವರು ಹೊಸ ಕಾಯಿದೆಯಂತೆ ತೆರಿಗೆ ಹೊರಿಸಿದೊಡನೆ ಪ್ರತಿಭಟನೆಯನ್ನು ಇದಿರಿಸುವ ಪರಿಸ್ಥಿತಿ ಒದಗಬಹುದೆಂದೂ ಹೇಳಿದರು. ಮೈಸೂರು ರಾಜ್ಯಕ್ಕೆ ಬಂದೇ ತರದ ಕಾಯಿದೆ ಅನ್ವಯವಾಗುವಾಗ ಉಡುಪಿಯಲ್ಲಿ ಅಕ್ಕಾಯ ತೆರಿಗೆ ಹಾಗೂ ಯಾತ್ರಿಕ ತೆರಿಗೆ ಇವನ್ನು ಶ್ರೀ ಆಡಿಗರ ಸೂಚನೆಯಂತೆ ಕಾರ್ಯಗತಗೊಳಿಸಬಹುದೆಂದರು. ನಮ್ಮ ಜಿಲ್ಲೆಯು ಶಿಕ್ಷಣ ಕ್ಷೇತ್ರದಲ್ಲಿ ಮುಂದುವರಿದಂತೆ ಕೈಗಾರಿಕಾ ರಂಗದಲ್ಲಿಯೂ ಮುನ್ನಡೆಯುವುದು ಅಗತ್ಯವೆಂದರು. ಉಡುಪಿ ನಗರ ಸಭೆಯ ನಳ್ಳಿ ನೀರಿನ ಹಾಗೂ ಭೂಗತ ಚರಂಡಿ ಯೋಜನೆಗಳು ನೆರವೇರುವಂತೆ ತನ್ನ ಸಹಕಾರ ಇದ್ದೇ ಇದೆ ಎಂದರು. ಬಳಿಕ ಶ್ರೀ ಎ. ಜೆ. ಅಲ್ಸೆಯವರು ಧನ್ಯವಾದಗಳನ್ನರ್ಪಿಸಿದರು. ಪ್ರದರ್ಶನವು 15 ದಿನಗಳ ತನಕ ನಡೆಯಲಿದೆ. ರಾತ್ರಿ ವಿವಿಧ ಮನರಂಜನೆಯ ಕಾರ್ಯಕ್ರಮಗಳೂ ಏರ್ಪಟ್ಟಿವೆ. ಮಹಾಜನರು ಇದರ ಸದುಪಯೋಗವನ್ನು ಪಡೆಯುವರೆಂದು ನಿರೀಕ್ಷಿಸಲಾಗಿದೆ.

ಸತ್ಕಾರ—

ಉಡುಪಿ ನಗರ ಸಭೆಯು ಬೆಳ್ಳಿ ಹಬ್ಬವನ್ನು ಆಚರಿಸುವ ಸಂದರ್ಭದಲ್ಲಿ ಹಾಲ್ತಿ ಮತ್ತು ಮಾಜಿ ನಗರ ಸಭಾಪತಿಗಳನ್ನೂ ಸದಸ್ಯರನ್ನೂ ಸತ್ಕರಿಸುವ ಸಲುವಾಗಿ ಇದೇ ತಾ. 7ನೇ ಸಂಜೆ ಮುನಿಸಿಪಲ್ ನೋರ್ಮಲ್ ಶಾಲೆಯಲ್ಲಿ ಉಡುಪಿ ಮುನಿಸಿಪಲ್ ನೌಕರರ ಸಂಘದವರು ನಗರ ಸಭಾಪತಿ ಡಾ. ಕೆ. ಎಲ್. ಐತಾಳರ ಅಧ್ಯಕ್ಷತೆಯಲ್ಲಿ ಸಮಾರಂಭವೊಂದನ್ನು ಏರ್ಪಡಿಸಿದ್ದರು. ಉಪಾಹಾರ, ಪ್ರಾರ್ಥನೆಯೊಡನೆ ಮೇಲೆ ಶ್ರೀ ಸುಬ್ಬಣ್ಣ ಭಟ್ಟರು ಸಂದೇಶಗಳನ್ನು ಓದಿದರು. ಶ್ರೀ ಶಂಕರರಾಯರು ಸ್ವಾಗತ ಭಾಷಣ ಮಾಡಿದರು. ಶ್ರೀ ಅರೂರು ಲಕ್ಷ್ಮೀನಾರಾಯಣ ರಾವ್, ಡಾ। ಕೃಷ್ಣನ್ ನಂಬಿಯಾರ್, ಶ್ರೀಗಳಾದ ಪಿ ವಿ ಆಚಾರ್ಯ, ಕೆ.ಆರ್. ಶೆಟ್ಟಿ, ಮಂಜುನಾಥ ರಾವ್, ಕೇಶವ ಕುಡುವ ಕೆ ಕೆ. ಪೈ ಮೊದಲಾದವರು ಭಾಷಣಗಳನ್ನಿತ್ತರು. ಅಧ್ಯಕ್ಷರಭಾಷಣಾನಂತರ ಸಭಾಂತ್ಯವಾಯಿತು.

ದ. ಕನ್ನಡದ ಮೊಗವೀರರ ದಾಭಾರ್ಗ್ಯ—

ಸರಕಾರವು ಹಿಂದುಳಿದವರಾದ ಮೊಗವೀರರ ಹಾಗೂ ಬಡ ಮೀನುಗಾರರ ಹಿತಕ್ಕಾಗಿ ಲಕ್ಷಗಟ್ಟಿಳ ರೂಪ್ಯಾಯ ಯೋಜನೆಗಳನ್ನು ಕೈಗೆಕೊಂಡರೂ, ದೇವರು ಕೊಟ್ಟರೂ ಪೂಜಾರಿ ಬಿಡ ಎಂಬ ಗಾದೆಯಂತೆ ಫಿಶರೀಸ್ ಡಿಪಾರ್ಟ್‌ಮೆಂಟು ಕೆಲವು "ಕೈ" ಮಾತ್ರ ಮಾಡಿದ ಹಾಗೆ ಕಾಣುತ್ತದೆ. ಉಪ್ಪು ಕೊಡುತ್ತೇವೆ, ಬಲೆಗೆ ಬೇಕಾಗುವ ನೂಲು ಕೊಡುತ್ತೇವೆ. ಮತ್ತೆ ಮನೆ ಇಲ್ಲದವರಿಗೆ ಸ್ಥಳ ಕೊಟ್ಟು ಮನೆಕಟ್ಟಿಕೊಡುತ್ತೇವೆ ಎಂದೆಲ್ಲಾ "ಎಲ್ಲಿಯೇ" "ಉಂಟಿಲ್ಲದೆ ಇದರಲ್ಲಿ ಯಾವುದೂ ಮೊಗವೀರರ ಕೈಸೇರುವುದು ಕಷ್ಟದ ಸಂಗತಿಯಾಗಿದೆ. ಇದನ್ನು ಕಂಡು ಸರಕಾರದ ಇಯಮ ಪ್ರಕಾರ ಸ್ಥಾಪನೆಗೊಂದ ಕೆಲವು ಸೊಸೈಟಿಗಳೂ ದ. ಕ. ಜಿಲ್ಲಾ ಮೊಗವೀರರ ಏಕಮಾತ್ರ ಪ್ರತಿನಿಧಿ ಸಂಸ್ಥೆಯಾದ ಮೊಗವೀರ ಮಹಾಜನ ಸಂಘದೊಂ ಸಂಬಂಧಪಟ್ಟವರೊಡನೆ ಸಮಂತಿ ಮಾಡಿಕೊಂಡರೂ ಈ ವರೆಗೂ ಯಾವ ಪ್ರಯೋಜನವೂ ಆಗದೇ ಹೋಗಲಿಕೆ ಕಾರಣವೇನೊ ತಿಳಿಯದಾಗಿದೆ ಎಂದು ಮಲ್ಪೆಯ ಮೀನುಗಾರರೊಬ್ಬರು ಬರೆಯುತ್ತಾರೆ.

ದ. ಕ ಸ್ವತಂತ್ರ ಹೆಸ್ಪದ ವಾರ್ಷಿಕ ಮಹಾಸಭೆಯು—

ತಾ 31-12-60 ರಂದು ಶ್ರೀ ಟೀಕೆಬೊ ಪ್ರಭುಗಳವರ ಅಧ್ಯಕ್ಷತೆಯಲ್ಲಿ ಅವರ ಬಂಗ್ಲೆಯಲ್ಲಿ ಜರಗಿತು. 1961ನೇ ವರ್ಷದ ಆಡಳಿತ ಮಂಡಲಕ್ಕೆ ಶ್ರೀ ಜಿ. ಎಂ ಟೀಕೆಬೊ ಪ್ರಭು- ಅಧ್ಯಕ್ಷ, ಶ್ರೀ ಉಗ್ಗಪ್ಪ ಶೆಟ್ಟಿ, ಮತ್ತು ಹೆಜಮಾಡಿ ನಾಗಪ್ಪ ಕಾರ್ಯದರ್ಶಿಗಳು ಶ್ರೀ ಸುಂದರ ರಾಮ ಶೆಟ್ಟಿ, ಶ್ರೀ ಎನ್. ಕೃಷ್ಣ ಭಟ್ಟ, ಶ್ರೀಮತಿ ಯೋಗಾ ಪ್ರಭು- ಉಪಾಧ್ಯಕ್ಷರು ಶ್ರೀ ಸಿ. ಯೆಸ್. ತಾರೊ- ಕೋಶಾಧಿಕಾರಿ ಮತ್ತು ಇನ್ನಿತರ 20ಮಂದಿ ಸದಸ್ಯರನ್ನು ನೇಮಿಸಲಾಯಿತು.

ಪ್ರತಿ ಎಸೆಂಬ್ಲಿ ಮತದಾರರ ಕ್ಷೇತ್ರಗಳಲ್ಲೂ ಕಮಿಟಿಯನ್ನು ನೇಮಿಸಲೂ ಅಲ್ಲದೆ ಆಯಾಯ ಕ್ಷೇತ್ರಗಳಿಂದ ಬರುವ 1962 ಜುನಾವಣೆಗೆ ನಿಲ್ಲುವ ಅಭ್ಯರ್ಥಿಗಳು ಜಿಲ್ಲೆಯ ಕಾರ್ಯದರ್ಶಿಗಳಿಗೆ, ಬರುವ ಫೆಬ್ರವರಿ 15 ರೊಳಗೆ ಅರ್ಜಿ ಬರಕೊಳ್ಳಬೇಕೆಂದೂ ನಿರ್ಣಯಿಸಲಾಯಿತು. ಶ್ರೀ ಉಗ್ಗಪ್ಪ ಶೆಟ್ಟರು ಕಳೆದ ತಾಲೂಕು ಬೋರ್ಡ್ ಚುನಾವಣೆಯಲ್ಲಿ ಸ್ವತಂತ್ರರಾಗಿ ನಿಂತ ಅಭ್ಯರ್ಥಿಗಳನ್ನು ಅಭಿನಂದಿಸಿದರು. ಮೈಸೂರು ಪ್ರದೇಶದ ಸ್ವತಂತ್ರ ಪಕ್ಷದ ಅಧ್ಯಕ್ಷ ಶ್ರೀ ಕೆ. ಬಿ. ಜಿನರಾಜ ಹೆಗ್ಡೇರು ಮೈಸೂರು ಪ್ರದೇಶದಲ್ಲಿ ಪಕ್ಷವು ನಾಧಿಸಿದ ಕಾರ್ಯಗಳನ್ನು ವಿವರಿಸಿ, ವ್ಯಕ್ತಿ ಸ್ವಾತಂತ್ರ್ಯವು ಯಾವ ರೀತಿಯಲ್ಲಿ ನಾಶವಾಗುತ್ತಿರುವುದೆಂಬುದನ್ನು ತಿಳಿಸಿದರು.

ಸರಕಾರದ ಧನ ಸಹಾಯ—

ನಾರಾಯಣ ಕವರಚಿತ ಉತ್ತರರಾಮ ಚರಿತೆಯನ್ನು ಮುದ್ರಿಸುವ ಸಲುವಾಗಿ ಸುರತ್ಕಲ್ಲಿನ ಶ್ರೀ ವೆಂಕಟರಾಯಾಚಾರ್ಯರಿಗೆ ಮೈಸೂರು ಸರಕಾರದ ಸಾಹಿತ್ಯ ಮತ್ತು ಅಭಿವೃದ್ಧಿ ಶಾಖೆಯು ರೂ. 300ನ್ನು ಅನುಮತಿಸಿದೆ ಎಂದು ತಿಳಿದು ಬರುತ್ತದೆ.

ಶಂಕುಸ್ಥಾಪನೆ—

ಉದಿಯಾವರ ದಿ. ಫಿಶರ್‌ಪೊಡಕ್ಟ್ಸ್ ಮೆನುಫೆಕ್ಚರಿಂಗ್ ಕೊ-ಓಪರೇಟಿವ್ ಸೊಸೈಟಿ ಲಿ. ಇದರ ಐಸ್ ಫ್ಯಾಕ್ಟರಿ ಮತ್ತು ಕೋಲ್ಡ್ ಸ್ಟೋರೇಜ್ ಕಟ್ಟಡದ ಶಂಕುಸ್ಥಾಪನಾ ಕಾರ್ಯವನ್ನು ವೈಸೂರಿನ ಮುಖ್ಯ ಮಂತ್ರಿ ಶ್ರೀ ಬಿ ಡಿ ಜತ್ತಿಯವರು ಇದೇ ತಾ. 10ನೇ ಸಂಜೆ ಉದಿಯಾವರದಲ್ಲಿ ವಿಜೃಂಭಣೆಯಿಂದ ನೆರವೇರಿಸಿದರು. ರಾಜ್ಯದ ಸಾರ್ವಜನಿಕ ಕಾನೂನಾರಿಕಾ ಸಚಿವ ಶ್ರೀ ಯಜ್. ಎಂ. ಚೆನ್ನಬಸಪ್ಪನವರು ಅಧ್ಯಕ್ಷತೆಯನ್ನು ವಹಿಸಿದ್ದರು. ಸೊಸೈಟಿಯ ಅಧ್ಯಕ್ಷರಿಟಿ ಎ ಪೈಗಳು ಆರಂಭದಲ್ಲಿ ಸ್ವಾಗತ ಭಾಷಣ ಮಾಡಿದರು.

ಮನಿಪಾಲ ಹಾಯರ್ ಸೆಕೆಂಡರಿ ಶಾಲೆಯ ಹೊಸ ಕಟ್ಟೋಣದ ಶಂಕು ಸ್ಥಾಪನೆಯನ್ನು—

ತಾ 10ನೇ ಸಂಜೆ ಮಂತ್ರಿ ಶ್ರೀ ಎಚ್. ಎಸ್. ಚೆನ್ನಬಸಪ್ಪನವರು ಮಣಿಪಾಲ ಹೈಸ್ಕೂಲಿನ ಆವರಣದಲ್ಲಿ ನೆರವೇರಿಸುತ್ತಾ ಹಿಂದಿನ ಕಾಲದಲ್ಲಿ ಋಷಿ ಮುನಿಗಳಿಂದ ಆಗಿರುವ ಸಾಧನೆಗಳಿಗಿಂತಲೂ ಮಣಿಪಾಲದಲ್ಲಿ ಇಂದಿನ ವ್ಯಕ್ತಿಗಳು ಮಾಡಿರುವ ಸಾಧನೆ ಹೆಚ್ಚಿನವುಗಳೆಂದೂ ಇದನ್ನು ನೋಡಲು ತನಗೆ ಅತ್ಯಾನಂದ ವಾಗುತ್ತದೆಂದೂ ಹೇಳಿದರು. ಸಮಾರಂಭದ ಅಧ್ಯಕ್ಷತೆಯನ್ನು ಜಿಲ್ಲಾ ಕಾಂಗ್ರೆಸ್ಸಿನ ಅಧ್ಯಕ್ಷ ಶ್ರೀ ಟಿ ಎ. ಪೈಗಳು ವಹಿಸಿದ್ದರು ಆರಂಭದಲ್ಲಿ ಎ ಕೇ ಡೆ ಮಿ ಯ ರಿಜಿಸ್ಟ್ರಾರ್ ಡಾ. ಟಿ. ಎಂ. ಎ. ಪೈಗಳು ಸ್ವಾಗತ ಭಾಷಣ ಮಾಡಿದರು.

ಜಿಲ್ಲಾ ಬೋರ್ಡು ಹೈಸ್ಕೂಲುಗಳು—

ತಾ. 30ರಲ್ಲಿ ಜರಿಗಿದ ಜಿಲ್ಲಾ ಕಾಂಗ್ರೆಸ್ ಕಮಿಟಿಯ ಕಾರ್ಯಕಾರಿ ಸಮಿತಿಯಲ್ಲಿ ಜಿಲ್ಲಾ ಬೋರ್ಡು ಹೈಸ್ಕೂಲುಗಳನ್ನು ಆಯಾಯ ತಾಲೂಕು ಬೋರ್ಡುಗಳಿಗೇನೇ ಕೊಡಬೇಕೆಂದೂ, ಖಾಸಗಿ ವ್ಯಕ್ತಿ ಸಂಸ್ಥೆಗಳಿಗೆ ಕೊಡಬಾರದೆಂದೂ ಶಂಕಾಯಿಸಿರುವರೆಂದು ತಿಳಿದು ಬರುತ್ತದೆ.

ಸ್ವೀಕಾರ

ಉಡುಪಿ ಹಿಂದುಸ್ಥಾನಿ ಪೇಪರ್ & ಸ್ಟೇಶನರಿ ಮಾರ್ಟನ 1961ನೇ ಇಸವಿಯ ಕೆಲೆಂಡರ್ ಮತ್ತು ಡ್ಯಾರಿಯನ್ನೂ, ಎಸ್. ಆರ್. ಬೀಡಿ ವರ್ಕ್ಸ್, ಕಲ್ಲಂಡಿ ವ್ಯಾಸಾಚಾರ್ಯಾಸ್ ಹೊಟೆಲ್‌ವೇರ್, ಮದ್ರಾಸಿನ ಯೂ. ಎಸ್. ಐ. ಎಸ್. ಇವರ ಹೊಸ ವರ್ಷದ ಕೆಲಂಡರನ್ನೂ ಅತ್ಯಾದರದಿಂದ ಸ್ವೀಕರಿಸಿದ್ದೇವೆ.

ಮೈಸೂರು ರಾಜ್ಯದ ಪಂಚಾಯತಿಗಳ ತೆರಿಗೆಗಳ ಮತ್ತು ಫೀಗಳ ನಿಯಮಗಳು—

ಲೇಖಕರು ಮತ್ತು ಪ್ರಕಾಶಕರು: ಶ್ರೀ ಕೆ. ಎಸ್. ಅಲ್ಲ ಬಿ ಎ., ಬಿ ಎಲ್., ಅಡ್ವಕೇಟ್, ಕೊಡಿಯಾಲಬೈಲು, ಮಂಗಳೂರು-8. ಬೆಲೆ: ರೂ. 2-00

ಇದು 1960ನೇ ಇಸವಿಯ ನಿಯಮಗಳ ಅತಿ ಉಪಯುಕ್ತವಾದ ಕನ್ನಡ ಭಾಷಾಂತರ. ಭಾಷಾಂತರವು ಬಳೇ ಮೈಸೂರಿನ ಮತ್ತು ದಕ್ಷಿಣ ಕನ್ನಡ ಜಿಲ್ಲೆಯವರಿಗೆ ಯೋಗ್ಯವಾಗಿದೆ ಎಲ್ಲರೂ ಸುಲಭವಾಗಿ ಅರ್ಥಮಾಡಿಕೊಂಡು ಗ್ರಹಿಸಬಲ್ಲವಾದ ಈ ಪುಸ್ತಕವು ಪ್ರೋತ್ಸಾಹನೀಯವಾಗಿದೆ. ಭಾಷಾಂತರಗಾರರ ಪ್ರಯತ್ನ ಸ್ತುತ್ಯ.

ವಿನಂತಿ

ತಾ. 26—1—61ರ ಸಂಚಿಕೆಯು ಪ್ರಜಾರಾಜ್ಯ ವಿಶೇಷ ಸಂಚಿಕೆಯಾಗಿ ಹೊರಡುಲಿರುವುದರಿಂದ ಬರುವವಾರದ ತಾ. 19—1—61ರ ಸಂಚಿಕೆ ಪ್ರಕಟವಾಗುವುದಿಲ್ಲ. ವಾಚಕರು ಗಮನಿಸ ಬೇಕಾಗಿ ವಿನಂತಿ.

ಮೆನೇಜರ್, 'ನವಯುಗ'.

ಮಕ್ಕಳ ಮನತೆಯ

'ಬಿಕ್ಕೊ' ರವರ

ಗ್ಲೂಕೋಸ್ ಕೂಡಿದ ಸೆಪ್ಪರ್ ಮಿಠಾಯಿಗಳು ರುಚಿಕರ, ಸೇವನೆಗೆ ಪ್ರಸಿದ್ಧಿಪಟ್ಟಿವೆ.

'ಬಿಕ್ಕೊ' ರವರ

ಹಣ್ಣಿನ ಶರಬತ್ತುಗಳು ಅತಿಥಿಗಳ ಆದರದ ಸತ್ಕಾರಕ್ಕೆ ಅತ್ಯನುಕೂಲ.

ತಯಾರಕರು:

ಭಾರತ್ ಇಂಡಸ್ಟ್ರಿಯಲ್ ಎಂಡ್ ಕ್ಯಾನಿಂಗ್ ಕಂಪೆನಿ ಲಿಮಿಟೆಡ್, ಕಾಪು, ದ. ಕ.

ಹರಟೆ

ಅಂತಿಮ ಅಸ್ತ್ರ-ಸತ್ಯಾಗ್ರಹ

ಸತ್ಯಾಗ್ರಹವು ತನ್ನ ಪ್ರಾಚೀನ ಇತಿಹಾಸೋಪೇತವಾಗಿರುವುದರಿಂದಲೇ ಅದು ಇಂದಿಗೂ ದೇದೀಪ್ಯಮಾನ ಪ್ರಭಾವಶಾಲೀ ಅಸ್ತ್ರವೆನಿಸಿದೆಯಲ್ಲವೆ?

ಶ್ರೀ ಎ. ರವಿಶಂಕರ.

ಸತ್ಯಾಗ್ರಹವೆಂಬ ಶಬ್ದ ಕೇಳಿದೊಡನೆ ನನಗೆ ಎಷ್ಟೋ ಘಟನೆಗಳ ಜ್ಞಾಪಕವಾಗುವುದು ಸಹಜ. ಪ್ರಪಂಚದ ಚರಿತ್ರೆಯ ಹೊಸ ಅಧ್ಯಾಯವನ್ನು ಮಹಾತ್ಮಾ ಗಾಂಧೀಜಿಯವರು "ಸತ್ಯಾಗ್ರಹವೆಂಬ ಮಂತ್ರದಿಂದ ಪ್ರಾರಂಭಿಸದರಲ್ಲವೇ? ಆದರೆ ಈಗಿನ ಜನ ಸತ್ಯಾಗ್ರಹವೆಂಬ ದಿವ್ಯ ಮಂತ್ರದ ದುರುಪಯೋಗಕ್ಕೆ ಪ್ರಾರಂಭಿಸಿರುವರು. ಇದರ ಪ್ರತಿಫಲ ಕಷ್ಟ, ನಷ್ಟ. ಮಹಾತ್ಮಾಜಿಯವರ ಕಾಲಕ್ಕಿಂತಲೂ ಪೂರ್ವದಲ್ಲೇ ಸತ್ಯಾಗ್ರಹವಿತ್ತು. ರಾಮಾಯಣ, ಮಹಾಭಾರತ ಇವುಗಳನ್ನು ಓದುವಾಗ ಅದರ ಅನುಭವವಾಗದಿರದು.

ಅಲ್ಲ. ನಮ್ಮ ದಶರಥನ ಮಡದಿ ಕೈಕೆಯ ಸತ್ಯಾಗ್ರಹದಿಂದಾಗಿ ಶ್ರೀ ರಾಮನು ಹಟ್ಟಿ ಬನವಾಸ ಎಷ್ಟು! ಪೂಜಿಯ ಮೊನೆ ಋಜ್ಜುವನ್ನು ನೆಲವನ್ನು ಕೊಡಲಾರೆನೆಂದು ಹೂಡಿದ ಸತ್ಯಾಗ್ರಹದಿಂದಾಗಿ ದುರ್ಯೋಧನನ ಪಾಡೇನಾಯಿತು? ಕರ್ಣನ ಸಾರಥಿಯಾಗಲಾರೆ ಎಂದು ಮುಷ್ಕರಕ್ಕೆ ಮನಸೋತ ಶಲ್ಯನಿಂದ ಕರ್ಣ ಏನಾದ? ಇತ್ತೀಚೆಗೆ ನಾವು ಆಗಾಗ ಸತ್ಯಾಗ್ರಹದ ಬೆದರಿಕೆಯನ್ನು ಪತ್ರಿಕೆಯಲ್ಲಿ ಓದಿದ್ದೇನೆ. ಆದರೆ ಭಾರತ ಸರಕಾರದ ಭಯಂಕರ ಆಜ್ಞೆಯಿಂದ ಜನರೆಲ್ಲಾ ಕಂಗಾಲಾಗಿ ಹೋದುದರಿಂದಲೋ ಅಥವಾ ಸತ್ಯಾಗ್ರಹದ ಸತ್ಯಾಗ್ರಹದಿಂದಲೋ ಅಂತೂ ಸತ್ಯಾಗ್ರಹವೆಂಬ ಪ್ರಾಣಿಯು ಸ್ವಲ್ಪ ತಲೆತಗ್ಗಿಸಿದೆ.

ಇಷ್ಟಾದರೂ ಸತ್ಯಾಗ್ರಹವೆಂದ ಕೂಡಲೇ ನನ್ನ ಮೈ ಜುಂ ಎನ್ನುವುದು. ಚಿಕ್ಕ ಪ್ರಾಯದಲ್ಲಿದ್ದಾಗ ಗಾಂಧೀಜಿಯಂತೆ ನಾನೂ ಬಹಳ ಸತ್ಯಾಗ್ರಹ ಮಾಡಿದ್ದೆ. ಪ್ರತಿಫಲವಾಗಿ ಪೋಲೀಸಿನವರ ಪೆಟ್ಟನ ಸವಿಯನ್ನೂ ಅನುಭವಿಸಿದ್ದೆ. ಏಕೆಂದರೆ ಪೋಲಿಸರೇ ನಮ್ಮ ಮನೆಯಲ್ಲಿದ್ದರು. ನಮ್ಮಪ್ಪ ಆಗ ಪೋಲಿಸ್ ಖಾತೆಯಲ್ಲಿ ಒಬ್ಬ ಅಧಿಕಾರಿಯಾಗಿದ್ದರು. ಆದುದರಿಂದಾಗಿ ಬಹಳ ಚೀಪ್ ರೇಟಿನಿಂದ ಪೆಟ್ಟುಗಳು ಸಿಗುತ್ತಿದ್ದುವು. ನಮ್ಮಪ್ಪನ ಪೋಲೀಸ್ ಶಿಷ್ಯನಿಂದಾಗಿ ನನ್ನ ಬೆನ್ನ ಮೇಲೆ ಬಾಸುಂಡೆಗಳು ಹುಟ್ಟುತ್ತಿದ್ದುವು. ಈಗಲೂ ಅವುಗಳ ಒಂದೆರಡು ಗುರುತುಗಳು ನಮ್ಮಪ್ಪ ರಿಟೈರ್ ಆದರೂ ನಮ್ಮ ದೇಶಕ್ಕೆ ಸ್ವತಂತ್ರ ಸಿಕ್ಕಿದರೂ ನಮ್ಮಪ್ಪನ 'ಲಾ'ದ ನೆನಪಿಗಾಗಿ ಹಾಗೇ ಉಳಿದಿವೆ ಅನ್ನಿ. ಹೆಚ್ಚೇಕೆ ನಿಮಗೆ ಮದುವೆಯಾಗಿದ್ದರೆ ನಿಮಗೂ ಇದರ ಅನುಭವವಾಗಿರಲೇ ಬೇಕು. ಈ ತನಕ ಆಗಿರದಿದ್ದರೆ ಆದಕ್ಕಾಗಿ ಬೇಸರಿಸದಿರಿ. ಬೇಗನೆ ಆಗಲಿದೆ.

ಒಮ್ಮೆ ಬಸ್ಸು ನಿಲ್ದಾಣದ ಕಡೆಗೆ ಹೋಗಿದ್ದೆ. ಅಲ್ಲಿ ಜನರ ನೂಕು ನುಗ್ಗಾಟದ ನಡುವೆ ನನ್ನ ಸ್ನೇಹಿತ ಸಪತ್ನೀಕನಾಗಿ ಟಿಕೇಟಿಗಾಗಿ ಹೋರಾಡುವುದನ್ನು ಕಂಡೆ... "ಹಲೋ! ಮಿಸ್ಟರ್, ಅತ್ತೇ ಮನೇಗೇಂತ ಕಾಣ್ತಾದೆ ಸವಾರಿ!" ನಾನಂದೆ. "ಇಲ್ಲ, ಶಂಕರ್, ನನ್ನ....ಇವಳ.... ಸತ್ಯಾಗ್ರಹ. ತಾಯಿಮನೆಗೆ ಹೊರಟಿದ್ದಾಳೆ." ಅಂದ. ಅಯ್ಯೋ! ನೀನು ಪುಣ್ಯ ಮಾಡಿದ್ದೀಯ. ಅಂತೂ ಈ ಪುಂಡ್‌ನಲ್ಲಿ ಎಲ್ಲವೂ ಉಳಿತಾಯವೇ (ಅಂದರೆ— ಸ್ನೋ, ಪೌಡರ್, ಆಯಿಲ್, ಸಿನೇಮಾ, ಸೀರೆ ಇತ್ಯಾದಿ) ಅಂದೆ.

ನನ್ನ ಗಡ್ಡದಲ್ಲಿ ಆದೇನು ಕೂದಲವ್ವಾ. ಇದನ್ನು ನಿರ್ನಾಮ ಮಾಡಲು ಪಣತೊಟ್ಟು ಬೋಳಿಸಲು ಪ್ರಾರಂಭಿಸಿದೆ. ಆದರೆ ಗಡ್ಡ ಸತ್ಯಾಗ್ರಹಕ್ಕೆ ಹೊರಟಿರುವುದರಿಂದ ಈಗ ವಾರಕ್ಕೆರಡಾವರ್ತಿ ಹೆಚ್ಚಿಗೆ ಕೆಲಸ. ಗಡ್ಡ ಅಂದ ಕೂಡಲೇ ನನ್ನ ಸ್ನೇಹಿತ (ಗಡ್ಡದಣ್ಣ ಅಂತ ಪ್ರಖ್ಯಾತಿ)ನ ನೆನಪಾಗುತ್ತದೆ. ಯಾವುದೋ ಕಾರಣಕ್ಕಾಗಿ ಗಡ್ಡ ಸತ್ಯಾಗ್ರಹ ಪ್ರಾರಂಭಿಸಿದ್ದಾನಂತೆ.

ಅನ್ನ ಸತ್ಯಾಗ್ರಹ ಅಂದ ಕೂಡಲೇ ಕುತೂಹಲವೂ ಭಯವೂ ಆಗುವುದು ಸ್ವಾಭಾವಿಕ. ಅದು ಸತ್ಯಾಗ್ರಹದಲ್ಲೇ ಹಿರಿದು ಒಮ್ಮೆ ನಮ್ಮಜ್ಜ, ಅಜ್ಜ ಅಂದ ಕೂಡಲೇ ಪ್ರಾಯದ ಅಂದಾಜಾಗಬಹುದು. ಈ ಅಜ್ಜನೂ ಏನೋ ಕಾರಣದಿಂದಾಗಿ ಅನ್ನ ಸತ್ಯಾಗ್ರಹ ಮಾಡಬೇಕೆ? ಅದೇ ಮುದಿ ಭ್ರಾಂತೀಂತ ಹೇಳೋದು. ಮನೆಯವರೆಲ್ಲರೂ ಗಾಬರಿಯಿಂದ ನನಗೊಂದು ತಂತಿಯನ್ನು ಕೊಟ್ಟರು. "ಅಜ್ಜನವರ ಅನ್ನ ಸತ್ಯಾಗ್ರಹ ಅವಸರದಿಂದ ಹೊರಡು." ಮನೆಗೆ ಧಾವಿಸಿದೆ. ಆದರೆ ಮೊದಲು ಕೇಳಿಸಿದ್ದು ರೋಚಗದ ಧ್ವನಿ. ಅಂತೂ ಅಜ್ಜ ಅನ್ನ ಸತ್ಯಾಗ್ರಹದಿಂದ ನಮ್ಮೆಲ್ಲರನ್ನೂ ದುಃಖದ ಕೆರಿನಲ್ಲಿ ಅದ್ದಿ ಮಾಯವಾಗಿಯೇ ಬಿಟ್ಟ.

ನಮ್ಮ ಮನೆಯಲ್ಲಿ ಚೌತಿ ಹಬ್ಬವೆಂದರೆ ವಿಶೇಷ. ಏಕೆಂದರೆ ಗಣಪತಿ ಅನ್ನ ಸತ್ಯಾಗ್ರಹ ಪ್ರಾರಂಭಿಸಿದ್ದಾನೆ ಅಂತ. (ಯಾಕೆಂದರೆ ಆಹಾರ ವಸ್ತುಗಳ ಬೆಲೆ ಏರಿದೆ. ಸರಕಾರಿ ನೌಕರರಿಗೆ ಸಂಬಳ ಸಾಕಷ್ಟು ಸಿಗುವುದಿಲ್ಲ. ಈ ವಿಚಾರಗಳನ್ನು ಪ್ರತ್ಯಕ್ಷ ಪರಿಶೀಲಿಸಿದ್ದಾನೆ.) ಎಲ್ಲಿ ಯಾದರೂ ಈ ಗಣಪ ಅನ್ನ ಸತ್ಯಾಗ್ರಹ ನಿಲ್ಲಿಸಿದೆ. "ಇದೇನೆ ಅಂತ ನೋಟೀಸ್ ಕೊಟ್ಟರೆ ನಮ್ಮ ಮನೆಯಲ್ಲಿ ಚೌತಿ ಹಬ್ಬ ಮಾಡಲಾರೆವು ಅಂತ ಚೌತಿ ಸತ್ಯಾಗ್ರಹ ಮಾಡುವ ಪ್ರಸಂಗವು ಬರುತ್ತಿತ್ತು. ಆ ದಿನ ತಿಂದದ್ದೇ ತಿಂದದ್ದು, ಬಂತಯ್ಯ ಜಕರಕ್ಕೆ ಕೋಸ. ಸತ್ಯಾಗ್ರಹ ನೋಟಿಸು ಜಾರಿಯಾಯಿತೇ, ಆಯಿತು. ಮರುದಿನ ನಾನು ವೈದ್ಯರ ಮನೆಯಲ್ಲಿ ಪ್ರತ್ಯಕ್ಷ ಆಗ ವೈದ್ಯರೂ ಇಂಗ್ಲಿಷ್ ಔಷಧಿ ಉಪಯೋಗಿಸಲಾರೇಂತ ಮುಷ್ಕರ ಹೂಡಿದ್ದಾರೆ ನನ್ನ ಅವಸ್ಥೆ ಏನಾಗಬಹುದಿತ್ತು?

ಸೂಚನೆ ಕೊಡದೆ ಸತ್ಯಾಗ್ರಹ ನಡೆಯುವುದುಂಟು. ಒಂದೇ ಒಂದು ನಿಮಿಷದ ಸೂಚನೆಯನ್ನು ಕೊಡದೆ ನನ್ನ ಕೈಯಲ್ಲಿದ್ದ ಹೊಸ ಕೊಡೆ ಶಿಷ್ಯೆಯವರ ಅಂಗಡಿಯಲ್ಲೇ ಮುಷ್ಕರ ಹೂಡಿದ್ದೇ ಹೂಡಿದ್ದು. ಸೋಪು ತರಲು ಹೋದ ನಾನು ಹಿಂತಿರುಗುವಾಗ ತೇಪೆ ಹಾಕಿದ ಒಯ್ಯೂರದಿಂದ ನರ್ತಿಸುತ್ತಿರುವ ಕೊಡೆ ನನ್ನ ಹೊಸ ಕೊಡೆ ಇದ್ದ ಸ್ಥಳದಲ್ಲಿ! ಇದಕ್ಕೆ ಕಾರಣವೇನೆಂದು ಯೋಚಿಸುವಾಗ ನನ್ನ ಕೊಡೆಯು ನನ್ನ ಕೈಯಲ್ಲಿ ನಿಲ್ಲಲಾರೇಂತ ಹೂಡಿದ ಸತ್ಯಾಗ್ರಹ. ಅದು ನಾನು ನಾಲ್ಕನೇ ಬಾರಿ ಮೋಸಕ್ಕೆ ಒಳಗಾದಾಗ ದೊರೆತ ಕೊಡೆ.

ನನ್ನ ಸ್ನೇಹಿತರಿಗೆಲ್ಲಾ 'ಕತ್ತೆ' ಎಂದರೆ ಬಹಳ ಪ್ರೀತಿ. ಕತ್ತೆ ಅಂದರೆ ನಗಬೇಡಿ. ಇಸ್ಪೇಟಿನ ಒಂದು ಆಟ. ನಾನು ಒತ್ತಾಯಕ್ಕೆ ಬಲಿಬಿದ್ದು ಒಮ್ಮೆ ಆಡಬೇಕಾಯಿತು. ಆದರೆ ನನ್ನ ಗ್ರಹಚಾರವೋ ಎಂಬಂತೆ ಅದಿನ ಹೇಸರ ಕತ್ತೆಯೂದೆ. ಇದರಿಂದಾಗಿ ಈಗ ಇಸ್ಪೇಟ್ ಸತ್ಯಾಗ್ರಹ ಆರಂಭಿಸಿದ್ದೇನೆ. ಎಷ್ಟೋ ಸತ್ಯಾಗ್ರಹದ ಅನುಭವ ನಿಮಗಾಗಿರಬಹುದು. ಅದನ್ನೆಲ್ಲಾ ಬರೆಯ ಹೋದರೆ ದೊಡ್ಡ ಕಾದಂಬರಿಯಂತಾದರೆ ಪತ್ರಿಕೆಯವರು ಎಲ್ಲಿಯಾದರೂ ಲೇಖನ ಉದ್ದವಾಗಿದೆ, ಪ್ರಕಟಿಸಲಾರೆವು ಎಂದು ಮುಷ್ಕರ ಹೂಡಿದರೆ ಈ ಲೇಖನದ ಅವಸ್ಥೆಯೇನಾದೀತು?



ಅಮೆರಿಕೆಯ ವಾಯುಸೇನೆಯ ನಾಲ್ಕಂತಸ್ತಿನ ರಾಕೆಟ್ ಸಹೊಸೀರು ಉಸಗ್ರಹದೊಂದಿಗೆ ಆಕಾಶಕ್ಕೆ ನೆಗೆಯಿತು.

ಹೊಸ ಪುಸ್ತಕ

ಆನೋರಿಕದ ಆರು ಮಂದಿ ಪ್ರಖ್ಯಾತ ಕಥೆಗಾರರ ಆರು ಉತ್ತಮ ಕಥೆಗಳ ಸುಂದರ ಕಥಾಸಂಕಲನ

ಅಮೆರಿಕದ ಆರು ಕತೆಗಳು

ಅಮೆರಿಕವ ಗ್ರಾಮಜೀವನದ ಸುಂದರ, ಸಜೀವ ಮತ್ತು ಮಾರ್ಮಿಕ ಚಿತ್ರಗಳನ್ನು ಒತ್ತಟ್ಟಿಗೆ ಪೋಣಿಸಿರುವುದು ಈ ಕಥಾಸಂಕಲನದ ವೈಶಿಷ್ಟ್ಯ

ಅನುವಾದಿಸಿದವರು:
ಕು. ಶಿ. ಹರಿದಾಸ ಭಟ್ಟ, ಎಂ.ಎ.

ಪ್ರಕಾಶಕರು:
ನವಯುಗ ಎಂಟರ್‌ಪ್ರೈಸ್ ಲಿ.

ಬೆಲೆ: ರೂ. 1=75; ಬಿಳಿ ಕಾಗದ!
ರೂ. 2ನ್ನು M.O. ಮಾಡಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟಾಗಿ ಕಳಿಸಬಹುದು

ವ್ಯಾಪಾರಿಗಳಿಗೆ ಧಾರಾಳ ಕಮಿಷನ್

ಪ್ರತಿಗಳು ಸಿಗುವ ಸ್ಥಳಗಳು:
ನವಯುಗ ಪ್ರೆಸ್ ಉಡುಪಿ.
ನವಭಾರತ ಪುಸ್ತಕ ಭಂಡಾರ, ಉಡುಪಿ.

ದೂರಪ್ರಯಾಣದ ಸಹಜವಾದ ಆನಂದಕ್ಕಾಗಿ
ನೇದಿರಿ
ಎಸ್. ಆರ್
ಬೀಡಿಗಳನ್ನು
SR REGD.
ಎಲ್ಲಾಕಡೆಗಳಲ್ಲಿಯೂ ದೊರಕಲ್ಪಡುತ್ತವೆ
S.R. BEEDI WORKS
UDIPI. S. K.

ಕನ್ನಡ ಪುಸ್ತಕಗಳಿಗೆ—
ನವಭಾರತ ಪುಸ್ತಕ ಭಂಡಾರ,
ಉಡುಪಿ.

ಅಧ್ಯಾತ್ಮ ವಿಚಾರ

ಭಗವದ್ಗೀತೆಯ ಪ್ರಕಾಶ

ಕರ್ಮಸಾಧನೆಯಿಂದ ಆರಂಭವಾದ ಯೋಗವು ತ್ಯಾಗದಲ್ಲಿ ಅಂತ್ಯಗೊಳ್ಳುವುದು. ಅನಂತರದ ಸ್ಥಿತಿಯೇ ಮುಕ್ತಿ. ಇಂದ್ರಿಯಗಳನ್ನು ನಿಗ್ರಹಿಸಿ ನಿಯಮಿತವಾಗಿ ನಡೆದರೆ, ಅತ ಧ್ಯಾನಯೋಗಿಯಾಗುವನು. ಈತನ ಕುಟುಂಬದಲ್ಲಿ ಜನಿಸಿದವನು ಜ್ಞಾನಯೋಗಿ.

ಶ್ರೀ ಎಂ. ಬಿ. ಶಂಕರ ರಾವ್, ಐ. ಎ. ಎಸ್. (ನಿವೃತ್ತ)

ಕಿರಣ :೬ ಧ್ಯಾನಯೋಗ

ಭಗವಾನ್—ಫಲವನ್ನು ಇಚ್ಛಿಸದೆ ಪ್ರತಿಯೊಬ್ಬನೂ ತಾನು ಮಾಡಬೇಕಾದ ಕಾರ್ಯಗಳನ್ನು ಮಾಡಿಯೇ ತೀರಬೇಕು. ಅವನೇ ಸನ್ಯಾಸಿಯು. ಕರ್ಮವನ್ನು ಬಿಡುವುದು ತಪ್ಪು. ತ್ಯಾಗವೆಂದರೆ ಆಶೆಗಳನ್ನು ದಹಿಸುವುದೆಂದು ಅರ್ಥ. ಕರ್ಮಸಾಧನೆಯಿಂದಲೆ ಯೋಗದ ಆರಂಭ. ತ್ಯಾಗದಿಂಲೆ ಅದರ ಅಂತ್ಯ. ತ್ಯಾಗವಾದ ಅನಂತರ ಮುಕ್ತಿ. ದುಷ್ಕರ್ಮಗಳನ್ನು ಮಾಡದೇ ಸತ್ಕರ್ಮಗಳನ್ನೆ ಮಾಡುವುದು ಧರ್ಮವೆನ್ನಿಸುವುದು. ಇಂದ್ರಿಯಗಳನ್ನು ಸ್ವಾಧೀನದಲ್ಲಿರಿಸಿಕೊಳ್ಳದೇ ಸತ್ಕರ್ಮಗಳನ್ನು ಮಾಡಲಿಕ್ಕೆ ಸಾಧ್ಯವಿಲ್ಲ. ಸತ್ಕರ್ಮಿಗಳೆ ಮಾನಾಪಮಾನಗಳು ಅಂಟುವುದಿಲ್ಲ. ಅತನಿಗೆ ಮಾನವೂ ಒಂದೇ, ಅಪಮಾನವೂ ಒಂದೇ. ಅನುಭವದಿಂದಲೂ, ಜ್ಞಾನದಿಂದಲೂ, ಇಂದ್ರಿಯಗಳನ್ನು ನಮ್ಮ ಸ್ವಾಧೀನದಲ್ಲಿ ಇಟ್ಟುಕೊಳ್ಳಬಹುದು. ಆಗ ಅಂತಹ ಜ್ಞಾನಿಗೆ ಕಲ್ಲೂ, ಚಿನ್ನವೂ, ಒಂದೇ ರೀತಿ ತೋರುವುದು. ಸ್ನೇಹಿತರೂ, ಶತ್ರುಗಳೂ, ಅತನಿಗೆ ಸರಿಸಮಾನರಾಗುವರು. ಯೋಗಿಯು ಸಾಧ್ಯವಾದಮಟ್ಟಿಗೆ ಏಕಾಂತದಲ್ಲಿರುವುದು ಉತ್ತಮ. ಏಕಾಂತದಲ್ಲಿದ್ದು ಮೌನಿಯಾಗಿ ಧ್ಯಾನಿಸುವುದು ಶ್ರೇಯಸ್ಕರ. ಏಕಾಂತದಲ್ಲಿದ್ದು ಧ್ಯಾನಮಾಡುವ ಸ್ಥಳವು ಶುಚಿಯಾಗಿರಬೇಕು. ಅದು ಬಹಳ ಎತ್ತರವಾದ ಸ್ಥಳವಾಗಬಾರದು. ಬಹಳ ತಗ್ಗಿನ ಸ್ಥಳವೂ ಆಗಬಾರದು. ಮನಸ್ಸನ್ನು ಪರಮಾತ್ಮನಲ್ಲಿಟ್ಟು ಧೃಢಚಿತ್ತದಿಂದ ಧ್ಯಾನಿಸಬೇಕು. ಇದರಿಂದ ಆತ್ಮಶುದ್ಧಿಗೆ ಪ್ರಾರಂಭವು. ಇದೂ ಒಂದು ಯೋಗವಿಧಾನ. ಧ್ಯಾನಿಯು ತನ್ನ ದೇಹವನ್ನು ಅಲುಗಾಡಿಸದೇ ಮೌನದಿಂದಿರಬೇಕು. ಹಿಂದೂ ಮುಂದೂ ನೋಡಕೂಡದು. ಮನಸ್ಸನ್ನು ಸಂಪೂರ್ಣವಾಗಿ ಪರಮಾತ್ಮನಲ್ಲಿರಿಸಬೇಕು. ಕಾಲಕ್ರಮೇಣ ಇಂತಹ ಧ್ಯಾನಯೋಗದಿಂದ ಪೂರ್ಣ ಶಾಂತಿಯು ಉತ್ಪನ್ನವಾಗಿ ಮಾನವನು ಮುಕ್ತಿ ಮಾರ್ಗವನ್ನು ಸೇರುವನು. ಧ್ಯಾನ ಯೋಗಿಯು ಮಿತವಾದ ಮತ್ತು ಹಿತವಾದ ಆಹಾರವನ್ನು ಭುಂಜಿಸತಕ್ಕದ್ದು. ಉಪವಾಸವು ಅಗತ್ಯವಿಲ್ಲ. ಅತನು ಹೆಚ್ಚು ನಿದ್ರಿಸಕೂಡದು. ಅಂತೆಯೇ, ಬಹಳ ಹೊತ್ತಿನ ತನಕ ಜಾಗರೂಕತೆಯಲ್ಲಿ ಇರಬಾರದು. ಸ್ವಲ್ಪ ನಿದ್ರೆಯು ಅತ್ಯಗತ್ಯ. ಸ್ವಲ್ಪ ವಿಶ್ರಾಮವೂ ಅತ್ಯಗತ್ಯ. ಧ್ಯಾನ ಯೋಗಿಗೆ ದುಃಖಗಳು ಪ್ರಾಪ್ತಿಸವು. ಅತನು ತನ್ನ ಚಿತ್ತವನ್ನು ಶುದ್ಧಭಾವದಿಂದ ಭಗವಂತನಲ್ಲಿ ಇಡುವನು. ಅತನ ಮನಸ್ಸು ಬಾಹ್ಯವಸ್ತುಗಳ ಕಡೆಗೆ ಚಲಿಸದು. ವಿಶೇಷ ವಾಯು ಸಂಚಾರವಿರದ ಎಡೆಯಲ್ಲಿಟ್ಟ ದೀಪವು ನಂದುವುದಿಲ್ಲ. ಏಕಾಗ್ರಚಿತ್ತದಿಂದ ಧ್ಯಾನ ಮಾಡುವವನರಲ್ಲಿ ಚಾಂಚಲ್ಯವು ಉತ್ಪನ್ನವಾಗುವುದಿಲ್ಲ ಅವನು ಸದ್ಧರ್ಮಿಯೂ, ಸತ್ಯವಂತನೂ, ಆಗುವನು. ಶಾಂತಿಯನ್ನು ಹೊಂದುವನು. ಪರಮಾತ್ಮನೇ ತನ್ನ ಗುರಿಯೆಂದು ವಿವೇಚಿಸುವನು. ಅತನಲ್ಲಿ ಆನಂದದ ಉತ್ಕರ್ಷವಾಗುವುದು. ಒದಗಿದ ಆನಂದದ ಶಕ್ತಿಯಿಂದ ಅತನು ಮುಕ್ತಿ ಪಡೆಯುವನು. ಅತನು ಮಾಡಿದ ಪೂರ್ವ ಪಾಪಗಳು ದಹಿಸಿ ಹೋಗುವವು. ಅತನು ಎಲ್ಲರನ್ನೂ ತನ್ನಂತೆಯೇ ಕಾಣುವನು. ಎಲ್ಲರಲ್ಲಿಯೂ ಪರಮಾತ್ಮನನ್ನು ದೃಷ್ಟಿಸುವನು. ಅತನಲ್ಲಿ ನಾನು ಯಾವಾಗಲೂ ವಾಸಿಸ್ವೆನು. ಅತನು ನನ್ನಲ್ಲಿ ನೆಲೆಯಾಗುವನು.

ಅರ್ಜುನ—ಕೃಷ್ಣನೇ, ಸಂಶಯಕ್ಕೊಳಗಾದ ನನಗೆ ಈ ಧ್ಯಾನಯೋಗವು ಅರ್ಥವಾಗದು. ಚಂಚಲ ಮನಸ್ಸಿನವರಿಗೆ ಈ ತರದ ಯೋಗದಿಂದ ಪ್ರಯೋಜನವೇನು? ಇದು ಬಹಳ ಕಷ್ಟದ ದಾರಿ. ವಾಯುವನ್ನು ತಡೆದು ಹಿಡಿಯುವುದೂ, ಈ ದಾರಿಯನ್ನು ಹಿಡಿಯುವುದೂ ಒಂದೇ ರೀತಿ ಎಂದು ಭಾವಿಸುತ್ತೇನೆ.

ಭಗವಾನ್—ಚಂಚಲತೆಯು ಮನಸ್ಸಿನ ಸಾಮಾನ್ಯ ಸ್ವಭಾವವೆಂಬುದನ್ನು ನಾನೂ ಒಪ್ಪುವೆನು. ಆದರೆ ಬಹುಕಾಲದ ತನಕ ಸಾಧಿಸಿದರೆ ಚಂಚಲತೆಯನ್ನು ಸುಟ್ಟುಬಿಡಬಹುದು. ಸಂಶಯಗಳಿಂದ ನಿರ್ಬಲನಾದವನಿಗೆ ಈ ಯೋಗವು ಸಾಧಿಸದು.

ಅರ್ಜುನ—ಕೃಷ್ಣನೇ, ಯೋಗಸಾಧನೆಯು ಅರ್ಹತೆಯು ನನ್ನಲ್ಲಿಲ್ಲದಿದ್ದರೂ, ಪರಮಾತ್ಮನಲ್ಲಿ ಸಂಪೂರ್ಣ ವಿಶ್ವಾಸ ಇಟ್ಟವನ ಗತಿಯೇನು? ಅತನು ದುರ್ಗತಿಯನ್ನು ಹೊಂದುವನೆ. ಇದೂ ನನ್ನ ಸಂಶಯಗಳಲ್ಲಿ ಒಂದಾಗಿದೆ. ಈ ಸಂಶಯವನ್ನು ದಯವಿಟ್ಟು ನಿವೃತ್ತಿಮಾಡುವೆಯೊ?

ಭಗವಾನ್—ನನ್ನಲ್ಲಿ ಸಂಪೂರ್ಣ ವಿಶ್ವಾಸವಿಟ್ಟವನು ಇಹದಲ್ಲೂ, ಪರದಲ್ಲೂ ಹಾಳಾಗನು. ಸರ್ವರಿಗೂ ಒಳ್ಳಿತವನ್ನು ಬಯಸುವವನು ಮಾತ್ರ ನನ್ನಲ್ಲಿ ವಿಶ್ವಾಸವನ್ನಿಡಲು ಶಕ್ತನೆಂದು ತಿಳಿ. ಯೋಗಿಗಳ ಕುಟುಂಬದಲ್ಲಿ ಜನ್ಮವೆತ್ತಿದವನು ಜ್ಞಾನಯೋಗಿಯಾಗುವನು. ಆದರೆ ಆ ರೀತಿಯ ಜನನವು ಒದಗುವುದು ಬಹಳ ಕಡಿಮೆ. ಪೂರ್ವಜನ್ಮದ ಪುಣ್ಯಬಲದಿಂದ ಮಾತ್ರ ಮಾನವನಿಗೆ ಯೋಗಿಗಳ ಕುಟುಂಬದಲ್ಲಿ ಜನನವು ಲಭಿಸುವುದು. ಅತನು ಯೋಗಮಾಡದೇ ಯೋಗಬಲವನ್ನು ಪಡೆಯುವನು. ಪೂರ್ವಜನ್ಮದ ಪುಣ್ಯಭಾಗವು ಅವನನ್ನು ಹೊಂದಿಯೆ ಇರುವುದು. ಹಲವು ಜನ್ಮಗಳ ಪುಣ್ಯರಾಶಿಯಿಂದಲೇ ಅಂತಹ ಜನ್ಮವನ್ನು ಲಭಿಸಬಹುದು. ಧ್ಯಾನ ಯೋಗಿಯು, ಜ್ಞಾನಯೋಗಿ, ಕರ್ಮ ಯೋಗಿಗಳಿಂದಲೂ ಮಿಗಿಲಾದವನು. ಅತನು ನನ್ನನ್ನು ಸೇರಲು ಅರ್ಹನು. ಇದನ್ನು ಶೋಧಿಸಿ ತಿಳಿ.

ಉಡ್ಪಿ ಡಿ. ಮು. ಕೋರ್ಟನಲ್ಲಿ

S C. 587/1960.

K. ಮಹಾಬಲ ಹೆಗ್ಡೆ ಮತ್ತು —ವಾದಿ.

ಗೋವಿಂದ ಶೆಟ್ಟಿ ಕೂಡ —ಪ್ರತಿವಾದಿ

ಇಬರೊಳಗೆ

ಉಡ್ಪಿ ತಾಲ್ಲುಕ ತೆಂಕನಿಡಿಯೂರು ಗ್ರಾಮದ ಬೆಳ್ಳಕೆಯಲ್ಲಿರುವ ಲೇಖಿ ಶೆಟ್ಟರ ಮಗ 7ನೇ ಪ್ರತಿವಾದಿ ಶ್ಯಾಮಂಗಯ ಶೆಟ್ಟಿ, ಅಕ್ಕ ಶೆಟ್ಟೇರ ಮಕ್ಕಳು 9ನೇ ಪ್ರತಿವಾದಿಳು ಜಲಜ ಶೆಟ್ಟಿ, 10ನೇ ಪ್ರತಿವಾದಿಳು ರುಕ್ಮಿಣಿ ಶೆಟ್ಟಿ ಕೂಡಾ ಇವರಿಗೆ

ವಾದಿಯು ಮೂಲಗೇಣಿ ಬಾಕಿ ರೂಪ್ಯಾ 88-22 ಕ್ಕೆ ಮಾಡಿದ ಪ್ರಾರ್ಥನೆವು ತಾರೀಕು 20—1—1961ಕ್ಕೆ ಯಿಟ್ಟೇರುವುದ್ರಿಂದ ಆ ದಿವಸ ನಿಮ್ಮ ಉದಾಸರಣೆ ಇದ್ದರೆ ಹಗ್ಗು ಗಂಟೆ 10ಕ್ಕೆ ಹಾಜ್ರಾಗಿ ಜ್ಞಾಪೇರು ಮಾಡಿಕೊಳ್ಳತಕ್ಕದ್ದು. ತಪ್ಪಿದ್ರೆ ನಿಮ್ಮ ಗೈರುಹಾಜರಿಯಲ್ಲಿ ಮೇಲಿನ ವಾಜ್ಯವು ತೀರ್ಮಾನಿಸಲ್ಪಡುವುದು.

B. S. Hegde.
vakil for plff.

Udipi 6—1—61.

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ, ಪ್ರತಿಯೊಬ್ಬರಿಗೂ ಅತ್ಯುಪಯುಕ್ತವಾದ ಹೊಸ ಪುಸ್ತಕ

LETTER WRITING MADE EASY

ಸುಲಭದಲ್ಲಿ ಪತ್ರಲೇಖನ

ದಿನವು ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.

ಬೆಲೆ ರೂ. 1-4-0 (1=25).

ಮನೆಯೆಂದಾದಲ್ಲಿ ಇರಲೇಬೇಕಾದ ಗೃಹವೈದ್ಯ

ಮನೆ ಮದ್ದು

ಬರೆದವರು: ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್, ಎಲ್. ಐ. ಎಮ್

ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ. ಹೆರಿಗೆ ವಿಧಾನ ಸವಿಸ್ತಾರವಾಗಿ ಕೊಡಲ್ಪಟ್ಟಿದೆ. ಬೆಲೆ ರೂ. ಎರಡು.

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—ವಿ| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

(ENGLISH MADE EASY)

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ. ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು.

ಬೆಲೆ: ರೂ. ಎರಡು. ಉತ್ತಮ ಪ್ರತಿ: ರೂ. ಎರಡೂವರೆ

ವಿ. ಸೂ.—ಅಯಾಯ ಪುಸ್ತಕದ ಬೆಲೆಯೊಂದಿಗೆ ಟಪ್ಪಾಲು ಖರ್ಚಿಗಾಗಿ 0=25 N.P ಸೇರಿಸಿ ಮನಿಯಾರ್ಡರು ಮಾಡಿದರೆ ಪುಸ್ತಕಗಳಿಸಲಾಗುವುದು.

ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ಸಿಗದಿದ್ದರೆ ನಮಗೆ ಬರೆಯಿರಿ.

ನವಭಾರತ ಪುಸ್ತಕ ಭಂಡಾರ, ಉಡುಪಿ

ಪುತ್ತೂರು. ಡಿ. ಮು. ಕೋರ್ಟನಲ್ಲಿ

R. E. P. 461/1960.

O. S. 236/59.

ಸುಬ್ರಾಯ ಅನಂತ ಗೋಖಲೆ—ಅರ್ಜಿದಾರ.

ಮೋಸಪ್ಪ ಕೂಡ —ಎದ್ರಿರು.

2ನೇ ಎದ್ರಿ ಸೇಸು. ಲಿಂಗ ಮತೆಕುಡಿಯನ ಆಳಿಯ. ನ, ಹುಕ್ಕ ಮತೆಕುಡಿಯನ ಮಗ. ಬೆಳ್ಳಂಗಡಿ ತಾಲ್ಲೂ ಮಿತ್ತಬಾಗಿಲು ಗ್ರಾಮದಲ್ಲಿರುವವ.

ಸದ್ರಿ ಎದ್ರಿಗೆ ಈ ಮೂಲ್ಕ ತಿಳಿಯಪಡಿಸುವುದೇನೆಂದ್ರೆ:-

ಮೇಲಿನ ದಾವೆಯಲ್ಲಿ ದಿಕ್ರಿ ಹೊಂದಿದ ಅರ್ಜಿದಾರನು ಪ್ಲಿರಾಸ್ತಿ ಯೇಲಂ ಬಗ್ಯಾ, ಸದ್ರಿ ಯೇಲಮಿನಲ್ಲಿ ಎಲ್ಲರಂತೆ ಪರ್ಕಾಸ್ತಿಗೆ ನಿಲ್ಲುವರೆ ಪರ್ಮಿಶನ್ ಕೊಡಿಸ ಬೇಕೆಂತ ವನ್ಯೆರೆ ಅರ್ಜಿ ಮಾಡಿರುತ್ತಾನೆ ಆದ್ರಿಂದ ವಿಕ್ರಯದ ಇಸ್ತಿಹಾರಿನ ಪತ್ರಗಳನ್ನು ತಾರೀಕು 18-1-1961ಕ್ಕೆ ನಿರ್ಣಯಿಸಲಿಕ್ಕೆ ಇಟ್ಟಿರುತ್ತದೆಂತ ಇದರಿಂದ ತಿಳಿಸೋಕಾಗುತ್ತದೆ.

(ಕೋರ್ಟ ಹುಕುಂ ಪ್ರಕಾರ)

S. Soorappaya
Advocate for Petitioner.

ಪುತ್ತೂರು 23-12-1960.

'NAVAYUGA' WEEKLY is in the list of periodicals and Newspapers approved for use in Secondary School as per proceedings Roc. No. 466 N/50 date 2-12-1950 of the Director of public Instruction Madras.

ವಿಚಾರವರ್ಷ

(೩ನೇ ಪುಟದಿಂದ)

ತ್ತನ ಅಂದಾಜಿನ ಪ್ರಕಾರ, ಒಂದಾನೊಂದು ಕಾಲದಲ್ಲಿ ಈ ರೇಡಿಯೋ ಉಷ್ಣೋಗ್ರತೆಯಿಂದ ಭೂಮಿಯ ಮೇಲಿನ ಪದರುಗಳು, ಅದಕ್ಕೆಂತಲೂ ಹೆಚ್ಚು ಉಷ್ಣವಾಗಿತ್ತು; ಈಗೀಗ ಅದು ಕಣಿಯುತ್ತಾ ಬರುತ್ತಿದೆ. ಆದರೂ ಭೂಗರ್ಭದಲ್ಲಿ ಇನ್ನೂ ಉಷ್ಣವು ಶೇಖರಣೆಯಾಗುತ್ತಲೇ ಇದೆ. ಆದೀಗ ಭೂಮಿಯ ಮೇಲ್ಪರೆಯನ್ನೂ, ಅಲ್ಲಿಯ ಪರಿಸ್ಥಿತಿಗಳನ್ನೂ ಅಷ್ಟಾಗಿ ಬಾಧಿಸುವುದಿಲ್ಲ. ಏಕೆಂದರೆ, ಭೂಮಿಗೆ ಉಷ್ಣವಾಹಕಶಕ್ತಿ ಬಹಳ ಕಡಮೆ. (ಈ ಶಕ್ತಿ ಲೋಹಗಳಿಗೆ ಹೆಚ್ಚಾಗಿರುತ್ತದೆ) ಭೂಮಿಯ ಮೇಲ್ಪರೆಗಳಿಗೆ ಸಂಬಂಧಿಸಿದ ಶೀತೋಷ್ಣಗಳನ್ನು ನಿರ್ಣಯಿಸುವುದು ಮುಖ್ಯವಾಗಿ ಸೂರ್ಯನಿಂದ ಬರುವ ಉಷ್ಣವೇ ಸರಿ. ಭೂಗರ್ಭದೊಳಗಿನ ಭೂಮಿಯ ಮೇಲು ಪದರುಗಳಿಗೆ ಬಂದು ಸೇರುವ ಉಷ್ಣಕ್ಕಿಂತಲೂ ಸೂರ್ಯನಿಂದ ಬರುವ ಉಷ್ಣವು ೫೦೦೦ ಪಾಲು ಹೆಚ್ಚು.

ಸೂರ್ಯನಲ್ಲಿ ಕೂಡಾ ಸ್ವಲ್ಪ ರೇಡಿಯೋ ಪದಾರ್ಥಗಳು ಇಲ್ಲದೆ ಹೋಗಲಿಲ್ಲ. ಆದರೆ ಸೂರ್ಯನ ಚಿಮ್ಮುವ ಉಷ್ಣತೆಯಲ್ಲಿ ಈ ರೇಡಿಯೋ ಪದಾರ್ಥಗಳು ಬೋಡಿಸುವ ಉಷ್ಣ ಅತಿ ಸ್ವಲ್ಪ. ಸೂರ್ಯನ ಗರ್ಭದಲ್ಲಿ ಎಷ್ಟು ಉಷ್ಣವೂ ಒತ್ತಡವೂ ಉಂಟೆಂದರೆ, ಅಲ್ಲಿ ಪರಮಾಣು ಕೇಂದ್ರಗಳು ಸಹಾ ಅಸುಕ್ಷಣವೂ ಬದಲಾವಣೆಯಾಗುತ್ತಾ ಇರುತ್ತವೆ. ಈ ಬದಲಾವಣೆಯಿಂದ ಅನಂತ ಶಕ್ತಿ ಉತ್ಪನ್ನವಾಗುತ್ತಾ. ಸೂರ್ಯನು ಅನೇಕ ನೂರು ಕೋಟಿ ಸಂವತ್ಸರಗಳ ವರೆಗೆ, ಶಕ್ತಿಯನ್ನು ಸ್ವಲ್ಪ ಕೂಡಾ ಕಳೆದುಕೊಳ್ಳದಂತಿರಲು ಸಾಧ್ಯವಾಗುತ್ತದೆ.

ಗಾಳಿ ಮತ್ತು ನೀರು—

ಭೂಮಿಯ ಮೇಲೆ ಗಾಳಿ ನೀರುಗಳು ಇರಲಿಕ್ಕೂ, ಭೂಮಿಗೆ ಬಿಸಿಯೇರಲಿಕ್ಕೂ ಸಂಬಂಧವಿದೆ. ಭೂಮಿಯೊಂದಿಗೆ ಸೇರಿದ ಪದಾರ್ಥದ ಬೆಂಬಡಿದು, ವಾಯುವೂ ನೀರೂ ಇವೆ. ಭೂಮಿ ಇರುವ ಪ್ರಾಂತದಲ್ಲಿ ವಾಯುಗಳು ಘನೀಭವಿಸುವ ಅವಕಾಶವಿಲ್ಲದಿದ್ದರೂ, ಭೂಮಿಯ ಮೇಲೆ ಬಂದು ಬಿದ್ದ ಪದಾರ್ಥದೊಂದಿಗೆ ವಾಯುವಿಗೆ ಸಂಬಂಧಿಸಿದಂತಹ ಅಣುಗಳು ಕೂಡಾ ಇರುತ್ತವೆ; ಅದಲ್ಲದೆ ಘನೀಭವಿಸಿದ ವಾಯುಗಳೊಂದಿಗೆ ಕೂಡಿದ ಪದಾರ್ಥಗಳು, ಸೂರ್ಯನ ಸಮೀಪ ಪ್ರಾಂತಕ್ಕೆ ದೂರ ಪ್ರಾಂತದಿಂದ ಬಂದಿರಬಹುದೆಂದು ಷ್ಮಿತ್ ವಾದಿಸುತ್ತಾನೆ. ಈಗ ಕೂಡಾ ಧೂಮಕೇತುಗಳು ಸೂರ್ಯನಿಗೆ ಸಮೀಪಕ್ಕೆ ಬಂದು ಹೋಗುತ್ತಿರುವುದನ್ನು ನಾವು ನೋಡುತಿದ್ದೇವೆ ತಾನೆ? ಇಂತಹ ಪದಾರ್ಥಗಳು ಭೂಮಿಯ ಮೇಲೆ ಪತನವಾಗಿ, ನೀರು—ಗಾಳಿಗಳನ್ನು ಸಮರ್ಪಣೆ ಮಾಡಿರಬೇಕು.

ಘನಪದಾರ್ಥದಿಂದ ವಾಯುಪದಾರ್ಥವನ್ನು ಬೇರ್ಪಡಿಸಲಿಕ್ಕೆ ಉಷ್ಣವು ಉಪಕರಿಸುತ್ತದೆ. ಭೂಮಿಯಲ್ಲಿರುವ ಶಿಲೆಗಳೊಂದಿಗಿರುವ ಸ್ವಲ್ಪ ವಾಯುಗಳನ್ನೂ, ನೀರಾವಿಯನ್ನೂ ಉಷ್ಣವು ಮೇಲಕ್ಕೆ ಕಳುಹಿಸಿಬಿಡುತ್ತದೆ. ಮೇಲೆ ಬರುತ್ತಲೇ ಈ ನೀರಾವಿ ತಣಿದು ನೀರಾಗಿ ಸಮುದ್ರಗಳನ್ನು ತುಂಬಿಸಿತು. ವಾಯುಗಳು ವಾತಾವರಣವಾಗಿ ಏರ್ಪಟ್ಟುವು. ಭೂಮಿಯ ಮೇಲೆ ಮೊತ್ತಮೊದಲು ಏರ್ಪಟ್ಟ ವಾತಾವರಣವು ಈಗಿರುವಂತಹುದಲ್ಲ. ಇದು ವೃಕ್ಷಜಾತಿಗಳ ಮೂಲವಾಗಿಯೂ ಇಂತು ಜಾತಿಗಳ ಮೂಲವಾಗಿಯೂ ಬಹಳಮಟ್ಟಿಗೆ ಬದಲಾವಣೆ ಹೊಂದಿದೆ.

ಇಂದಿಗೆ ಕೂಡಾ ಭೂಗರ್ಭದಿಂದ ವಿವಿಧ ವಾಯುಗಳೂ, ನೀರಾವಿಯೂ ಮೇಲಕ್ಕೆ ಬರುತ್ತಲೇ ಇವೆ. ಅಗ್ನಿ ಪರ್ವತಗಳು ಸಿಡಿದಾಗ ಅಪಾರವಾದ ನೀರಾವಿಯೂ, ಕರಿಯ ಮಿಲವಾಯುವೂ ಮೇಲೇಳುತ್ತವೆ. ಅನೇಕ ಕಡೆಗಳಲ್ಲಿ ಭೂಮಿಯೊಳಗಿನಿಂದ ಉರಿಯುವ ಗಾಳಿ (ಕೊಳ್ಳಿ ದೆವ್ವಗಳು) ಮೇಲಕ್ಕೆ ಬರುತ್ತದೆ.

ನೀರಿನಲ್ಲಿ ವಿ.ಫೇನ್ ಮೊದಲಾದ ವಾಯುಗಳು ಸಮ್ಮಿಳಿತವಾಗಿ, ಸಂಕೀರ್ಣವಾದ ಅಂಗಾರಕ ಪದಾರ್ಥಗಳೇರ್ಪಟ್ಟು ಭೂಮಿಯ ಮೇಲೆ ಜೀವರಾಶಿಗಳುತ್ಪತ್ತಿಯಾಗಲು ಅನುಕೂಲಗೊಳಿಸಿದುವೆಂದು ಶಾಸ್ತ್ರವೇತ್ತರು ಊಹಿಸುತ್ತಾರೆ. ಇಂದು ಕೂಡಾ ಅನೇಕಮಂದಿ ಶಾಸ್ತ್ರವೇತ್ತರು ಭಾವಿಸುವಂತೆ, ಭೂಮಿ ಒಂದಾನೊಂದು ಕಾಲದಲ್ಲಿ ಉರಿಯುತ್ತಾ ಇದ್ದು ಕಾಲಕ್ರಮದಲ್ಲಿ ತಣ್ಣಗಾದ ಗೋಳವೇ ಆದರೆ, ಮಿಥೇನ್ ವಾಯು ಉಷ್ಣವಾಯುಗಳೊಂದಿಗೆ ಸಮ್ಮಿಳಿತವಾಗಿರಲು ಅವಕಾಶವಿಲ್ಲ. ಉಷ್ಣಪರಿಸ್ಥಿತಿಯಲ್ಲಿ ಅದು ಏರ್ಪಡಬೇಕಾದರೆ ನೀರಾವಿಗೂ, ಲೋಹಕರ್ಬನಗಳಿಗೂ ನಡುವೆ ರಾಸಾಯನಿಕ ಸಂಯೋಗವಾಗಿರಬೇಕು. ಆ ವಿಧವಾಗಿ ಏರ್ಪಟ್ಟ ಮಿಥೇನ್ ವಾಯು ಭೂಮಿಯ ಮೇಲು ಪದರುಗಳಿಂದ ಒಡೆಕುಗಳ ಮೂಲಕವಾಗಿ ಮೇಲಕ್ಕೆ ಬಂದು ನೀರಿನೊಂದಿಗೆ ಸಮ್ಮಿಳಿತವಾಗಬೇಕು. ಆದರೆ ಆ ಕಾಲಕ್ಕೇ ನೀರು ಆವಿಯ ರೂಪವನ್ನು ಬಿಟ್ಟು ದ್ರವರೂಪವನ್ನು ಹೊಂದುವಂತಹ ಉಷ್ಣಸ್ಥಿತಿ ಭೂಮಿಯ ಮೇಲೆ ಇದ್ದಿರಬೇಕು.

ಷ್ಮೀತ್ ಸಿದ್ಧಾಂತದ ಪ್ರಕಾರ ಇಂತಹ ಅಸಂದರ್ಭಗಳೊಂದೂ ನಡೆಯಲಿಲ್ಲ. ಭೂಮಿ ಏರ್ಪಟ್ಟ ಕ್ಷಣದಿಂದಲೂ ಭೂಮಿಯ ಮೇಲೆ ನೀರಿದೆ. ಅದರಲ್ಲಿ ಅನೇಕ ಕರ್ಬನ್ ರಸಾಯನಗಳು ಸಮ್ಮಿಳಿತವಾಗಿವೆ. ಜೀವರಾಶಿಗಳ ಉತ್ಪತ್ತಿಗೆ ಅನುಕೂಲ ವಾತಾವರಣವು ಪ್ರಾರಂಭದಿಂದಲೂ ಇರುವಂತೆ ಈ ಹೊಸ ಸಿದ್ಧಾಂತವು ಹೇಳುತ್ತದೆ.

ಭೂಕಂಪನವೆಂತು?

ಭೂಕಂಪ ಪ್ರಸರಣವನ್ನು ಹಿಡಿದು ಶಾಸ್ತ್ರವೇತ್ತರು ಕಳೆದ ಶತಾಬ್ದಾಂತದಲ್ಲಿ ಭೂಗರ್ಭವನ್ನು ಕುರಿತು ಒಂದು ವಿಷಯವನ್ನು ಕಂಡು ಹಿಡಿದರು. ಅದೇನಂದರೆ, ಭೂಮಿಯ ಸಾಂದ್ರತೆ ಸ್ವಲ್ಪ ಮಟ್ಟಿಗೆ ಕ್ರಮವಾಗಿ ಏರಿ ಆ ತರುವಾಯ ಅಕಸ್ಮಾತ್ತಾಗಿ ಹೆಚ್ಚಿ ಬಿಡುತ್ತದೆ. ಇದು ೨ ಸಾವಿರ ಮೈಲಿನಾಳದಲ್ಲಿ ನಡೆಯುವಂತಾದ್ದು ಇಲ್ಲಿಯೇ ಶಿಲಾ ಪದಾರ್ಥವು ಅಂತ್ಯವಾಗಿ, ಕಬ್ಬಿಣವು ಪ್ರಾರಂಭವಾಗುವುದೆಂದು ಆಗಿನ ಶಾಸ್ತ್ರವೇತ್ತರು ಊಹಿಸಿದರು. ಈ ಹೆಚ್ಚಿನ ಸಾಂದ್ರತೆಯುಳ್ಳ ಅಂತರ್ಭಾಗದ ವ್ಯಾಸವು ಭೂಮಿಯ ವ್ಯಾಸಕ್ಕೆ ಅರ್ಧಕ್ಕೂ ಹೆಚ್ಚಾಗಿದೆ. ಈ ಅಂತರ್ಭಾಗದ ಭಾರ ಭೂಮಿಯ ಮೊತ್ತ ಭಾರದಲ್ಲಿ ಮೂರನೇ ಒಂದಂಶ. ಇದೆಲ್ಲಿರುವುದು ಕೇವಲ ಕಬ್ಬಿಣವಲ್ಲವೆಂದೂ, ಉಲ್ಕೆಗಳಲ್ಲಿರುವ ಕಬ್ಬಿಣ ಮತ್ತು ನಿಕ್ಕೆಲ್ ಮಿಶ್ರವಾದ ಲೋಹವೆಂದೂ ಸ್ವಲ್ಪ ಕಾಲದ ಮೇಲೆ ಶಾಸ್ತ್ರಜ್ಞರು ಭಾವಿಸಿದರು.

ಆದರೆ ಲೋದೊಚ್ಚಿಕೊವ್ ಎಂಬ ನೋವಿಯೆಟ್ ಶಾಸ್ತ್ರವೇತ್ತನು ೧೯೩೯ರಲ್ಲಿ ಇನ್ನೊಂದು ವಿಷಯವನ್ನು ಪ್ರತಿಪಾದಿಸಿದನು. ಭೂಗರ್ಭದಲ್ಲಿರುವ ಪದಾರ್ಥವು ಮೇಲೆ ಹೇಳಿದ ಪದಾರ್ಥಕ್ಕೆ ಭಿನ್ನವಾಗಿರಬೇಕಾದ ಅಗತ್ಯವಿಲ್ಲದೆಯೇ, ಒತ್ತಡವು ಒಂದು ಮಿತಿಯನ್ನು ಮೀರುತ್ತಲೇ, ಪದಾರ್ಥವು ಅಕಸ್ಮಿಕವಾದ ಬದಲಾವಣೆಗೆ ಗುರಿಯಾಗುವುದೆಂದೂ ಅತ ಹೇಳಿದ. ಭೂಮಿಯ ಅಂತರ್ಭಾಗವು ಪ್ರಾರಂಭವಾಗುವ ಆಳದಲ್ಲಿರುವ ಒತ್ತಡವು, ಭೂಮಿಯ ಮೇಲಿರುವ ಗಾಳಿಯ ಒತ್ತಡಕ್ಕಿಗಿಂತ ಲಕ್ಷ ಪಾಲು ಹೆಚ್ಚಾಗಿದೆ. ಈ ಒತ್ತಡಕ್ಕೆ ಶಿಲಾ ಪದಾರ್ಥದ ಸಾಂದ್ರತೆ ಅಕಸ್ಮಿಕವಾಗಿ ಹೆಚ್ಚುವ ಅವಕಾಶವುಂಟು.

ಲೆಕ್ಕಗಳಿಂದ ಗೊತ್ತಾಗುವುದೇನಂದರೆ, ಭೂಮಿಯೊಳಗೆ ೧೬೦ ಮೈಲಿನಾಳದಲ್ಲಿ, ಗಾಳಿಯ ಒತ್ತಡಕ್ಕಿಂತ ಲಕ್ಷ ಮಡಿ ಹೆಚ್ಚು ಒತ್ತಡವಿದೆ; ಭೂಮಿಯ ನಟ್ಟನಡುವಿನಾಳದಲ್ಲಿ ೩೦ ಲಕ್ಷ ಪಾಲು ಹೆಚ್ಚಾಗಿದೆ. ಇಷ್ಟು ಒತ್ತಡಕ್ಕೆ ಗುರಿಯಾಗುವ ಪದಾರ್ಥವನ್ನು ಘನಪದಾರ್ಥವೆನ್ನಲಿಕ್ಕಾಗಲೀ, ದ್ರವಪದಾರ್ಥವೆನ್ನಲಿಕ್ಕಾಗಲೀ ಅವಕಾಶವಿಲ್ಲ. ಅದು ಘನದ್ರವ ಲಕ್ಷಣಗಳೆರಡನ್ನೂ ಪಡೆದುಕೊಂಡಿರುತ್ತದೆ. ಭೂ ಭ್ರಮಣದ ಮೂಲಕವಾಗಿ ಇದು ದ್ರವ ಪದಾರ್ಥದಂತೆ ಸ್ವಲ್ಪವಾಗಿ ಅರಚುತ್ತದೆ. ಆದರೆ ಇದರ ಮೂಲಕವಾಗಿ ಪ್ರಸಾರವಾಗುವ ಭೂಕಂಪನ ತರಂಗಗಳು ಘನ ಪದಾರ್ಥದಲ್ಲಿಯಂತೆ ಪ್ರಸಾರವಾಗುತ್ತವೆ.

ಅದೂ ಅಲ್ಲದೆ ಈ ಅಂತರ್ಭಾಗದಲ್ಲಿ ಪದಾರ್ಥವು ಜಿಗಟು ಪದಾರ್ಥದಂತೆ ಗುರುತ್ವಾಕರ್ಷಣೆಗೆ ಗುರಿಯಾಗಿ ಚಲನೆಗೊಳಗಾಗುತ್ತದೆ. ಹೆಚ್ಚು ಭಾರವಿರುವ ಭಾಗಗಳು ತಳಕ್ಕಿಳಿಯುವುದೂ, ಹಗುರು ಪದಾರ್ಥಗಳು ಮೆಲ್ಲಗೆ ಮೇಲಕ್ಕೆ ತೇಲುವುದೂ ನಡೆಯುತ್ತದೆ ಇದನ್ನು 'ಪದುರುಗಳೇಳುವುದು' ಅನ್ನುತ್ತಾರೆ. ಇದು ಶತಕೋಟಿ ವರ್ಷಗಳಿಂದ ನಡೆಯುತ್ತದೆ. ಆದರೂ ಭಾರವಾದ ಪದಾರ್ಥವು ಭೂಮಿಯ ಪಡುಹೊಕ್ಕುಳನ್ನು ಸೇರುವ ಕಾರ್ಯ, ಈಗೀಗಷ್ಟೇ ಪ್ರಾರಂಭವಾಗಿದೆಯೆನ್ನಬೇಕು.

ಭೂಗರ್ಭದಲ್ಲಿ ಈ ಪದುರುಗಳೇಳುವ ಪ್ರತಿಕ್ರಿಯೆ ಸಾಗುತ್ತಾ ಇರುವುದೆನ್ನಲು, ಬಾಹ್ಯ ನಿದರ್ಶನವೇನೆಂದರೆ, ಭೂಮಿಯ ಮೇಲ್ಪದುರು ಕೆಲವು ಕಡೆಗಳಲ್ಲಿ ಮೇಲಕ್ಕೆದ್ದು, ಕೆಲವು ಕಡೆಗಳಲ್ಲಿ ಒಳಕ್ಕಿಳಿದು ಕೊಳ್ಳುವುದನ್ನು ಕಾಣಬಹುದು. ಭೂಕಂಪಗಳು ಕೂಡಾ ಇದರ ಮೂಲಕವಾಗಿಯೇ ನಡೆಯುತ್ತದೆ.

ಭೂಮಿ ಕ್ರಮವಾಗಿ ತಣ್ಣಗಾಗುವದರಿಂದ ಅದರ ಪ್ರಮಾಣವು ಕುಗ್ಗಿ ಹೋಗುತ್ತಾ ಇದೆಯೆಂದೂ, ಒಳಗಿನ ಪರೆಗಳು ಮುದುಡಿಕೊಳ್ಳುವುದರಿಂದ ಪರ್ವತ ಪಂಕ್ತಿಗಳುಂಟಾಗುತ್ತವೆಂದೂ ೧೨೦ ವರ್ಷಗಳ ಕೆಳಗೆ ಹೊರಟ ಸಿದ್ಧಾಂತವು ಇನ್ನೂ ಅಮಲಿನಲ್ಲಿದೆ. ಆದರೆ ಒಂದು ಕಡೆಯಲ್ಲಿ ಭೂಮಿಯ ಪರೆ ಮೇಲಕ್ಕೆದ್ದರೆ, ಇನ್ನೊಂದು ಕಡೆಯಲ್ಲಿ ಮುದುಡಿಕೊಳ್ಳುವುದರಿಂದ ಭೂಮಿ ಚಿಕ್ಕದಾಗಿ ಹೋಗುವುದೆನ್ನಲು ಆಧಾರವಿಲ್ಲ.

ಈ ಹೊಸ ಸಿದ್ಧಾಂತದ ಪ್ರಕಾರವಾದರೆ ಭೂಮಿ ತಣ್ಣಗಾಗುವುದಕ್ಕೆ ಬದಲು ಉಷ್ಣವಾಗುತ್ತದೆ. ಇದರ ಪ್ರಕಾರ ಭೂಮಿಯ ಮೇಲ್ಪದುರು ಏಳುವ ವಿಧಾನವು ಬೇರೆ. ನಾವೀಗ ನೋಡುವ ಮೇಲಿನ ಪರೆ, ತೆಳುವಾದ ಶಿಲೆಗಳು ಮೇಲಕ್ಕೆ ದೂಡಿಕೊಂಡು ಬಂದುದುದಿಂದ ಏರ್ಪಟ್ಟುದು. ಇದು ಬಹಳ ಕಾಲವಾಗಿ ಅನೇಕ ಕಡೆಗಳಲ್ಲಿ ಅನೇಕ ಬಗೆಗಳಾಗಿ ಇಗಿರಬಹುದು.

ಷ್ಮಿತ್ ಸಿದ್ಧಾಂತದ ಗೊಡವೆಯೇ ಇಲ್ಲದೆ ಈ ಕಾಲದ ಶಾಸ್ತ್ರವೇತ್ತರು ಭೂಗರ್ಭದೊಳಗಿನ ಉಷ್ಣತೆಗೆ ರೇಡಿಯೋ ಪದಾರ್ಥಗಳು ಸಹಕಾರಿಗಳಾಗಿವೆ ಎಂಬುದನ್ನು ಗುರುತಿಸುತ್ತಿದ್ದಾರೆ.

(ಮುಂದಿನ ವಾರ: ಭೂಮಿಯ ವಯಸ್ಸು)

The Moolky Bank, Ltd.
MULKI.

ಡಿಪೋಸಿಟು ಮೇಲಣ ಆಕರ್ಷಕ ಬಡ್ಡಿ ದರಗಳು—

1ರಿಂದ 1 ತಿಂಗಳ ವರೆಗೆ		4%
5 ,, 12	,,	4½%
13 ,, 24	,,	4¾%

ರೂ. 8,000/- ಮತ್ತು ಮೇಲಣ ಡಿಪೋಸಿಟಿಗೆ ¼% ಹೆಚ್ಚು

ಸೇವಿಂಗ್ಸ್ ಬೇಂಕ್ ಲೆಕ್ಕಕ್ಕೆ 2½%

ಚಾಲ್ತಿ ಶೇವಣಾತಿಗೆ ½%

ಸುಲಭ ಬಡ್ಡಿ ದರದಲ್ಲಿ ಚಿನ್ನಾಭರಣಗಳ ಮೇಲೆ ಮತ್ತು ಇತರ ರೀತಿಯಲ್ಲಿ ಸಾಲಕೊಡಲಾಗುವುದು.

ಯಂ. ಆರ್. ಯಚ್. ಪೂಂಜ.
ಮೆನೇಜರ್,

ಮೂಲ್ಕಿ ಬೇಂಕ್ ಲಿ. ಮುಲ್ಕಿ.



ಕುಮಾರಿ ಬಿಲ್ಲೆಗಳು

(Registered)

ಈ ದೇಶೀಯ ತಯಾರಿಕೆಯ ಗುಣಾಂಶವು ವರ್ಷಗಟ್ಟಲೆಯಿಂದ ವಿಖ್ಯಾತವಾಗಿದೆ ಮತ್ತು ಪ್ರಮುಖ ಕೆಮಿಸ್ಟರಿಂದ ಈ ಕೆಳಗಿನ ದರಗಳಲ್ಲಿ ವಿಕ್ರಯಿಸಲ್ಪಡುತ್ತದೆ. ಟ್ಯೂಬಿಗೆ ರೂ. 3=00 (ಸಾದಾ), ರೂ. 5=00(ಸ್ಪೆಶ್ಯಲ್), ರೂ. 8=00 (ಎಕ್ಸ್ಟ್ರಾ ಸ್ಪೆಶ್ಯಲ್).

P. DEVEE & Co. (M. I.) CALCUTTA—40

ಸ್ಟಾಕಿಸ್ಟರು: ಪಾ ಕಂಪೆನಿ, ಮಂಗಳೂರು—1.

ಸೂಚನೆ

"ನವಯುಗ"ದಲ್ಲಿ ಪ್ರಕಟಿಸೆಗಾಗಿ ಲೇಖನಗಳನ್ನು ಆಮಂತ್ರಿಸಲಾಗಿದೆ. ಇವು ಚಿಕ್ಕದಿರ ಬೇಕಲ್ಲದೆ ಕಾಗದದ ಒಂದೇ ಮಗ್ಗುಲಿನಲ್ಲಿರಬೇಕು. ಲೇಖಕಬಂಧುಗಳು ಸಹಕರಿಸಬೇಕಾಗಿ ವಿನಂತಿ. —ಸಂ.ನ.

ಕಥಾವಿಹಾರ

(೨ನೇ ಪುಟದಿಂದ)

"ಇಲ್ಲಲ್ಲ. ಇದಕ್ಕೆ ಮೊದಲು ಎಲ್ಲೋ ನೋಡಿದಂತಿದೆ."

ಕೆಲವರಿಗೆ ಹಿಂದಿನ ಜನ್ಮದ ಸ್ಮರಣೆ ಈ ಜನ್ಮದಲ್ಲೂ ಉಂಟಾಗುತ್ತದೆ ಎಂಬುದನ್ನು ವೃತ್ತ ಪತ್ರಿಕೆಗಳಲ್ಲಿ ಓದಿ ತಿಳಿದಿದ್ದೆ. ಅಂತೆಯೇ ನನ್ನ ಬಳಿ ಕುಳಿತಿದ್ದ ಮಹನೀಯರಿಗೂ ಹಿಂದಿನ ಜನ್ಮದಲ್ಲಿ ನನ್ನನ್ನು ನೋಡಿದ್ದ ಜ್ಞಾಪಕವೇನಾದರೂ ಬಂದಿರಬಹುದೇ ಎಂದು ಕೊಂಡೆ.

"ಹೌದು, ಕಳೆದ ಜನ್ಮದಲ್ಲಿ ನೋಡಿರಬಹುದು" ಎಂದೆ.

ದುರದೃಷ್ಟವಶಾತ್ ಆ 'ಕಳೆದ ಜನ್ಮ'ವು 'ಕಳೆದ ಜನವಂ'ಯಾಗಿ ಅವರ ಕಿವಿಗೆ ಕೇಳಿಸಿ.

"ಹೌದು, ಕಳೆದ ಜನವರಿಯಲ್ಲೇ ನಿಮ್ಮನ್ನು ನೋಡಿರಬೇಕು. ನಿಮ್ಮ ಜತೆಯಲ್ಲಿ ನಿಮ್ಮ ಸತ್ನಿ ಹಾಗೂ ಎರಡು ಮಕ್ಕಳಿದ್ದುವಲ್ಲವೇ?" ಎಂದರು. ಆದರೆ ನನಗೆ ಈ ಜನ್ಮದಲ್ಲಿ ಮದುವೆಯಾಗಿ, ಹೆಂಡತಿಯ ಗಂಡನಾಗುವ, ಮಕ್ಕಳ ತಂದೆಯಾಗುವ ದುರ್ಭಾಗ್ಯ ಇನ್ನೂ ಬಂದೊದಗಲಿಲ್ಲ ಎಂದು ಅವರಿಗೆ ಹೇಗೆ ಹೇಳಲಿ, ಅವರ ಮಾತನ್ನು ಹೇಗೆ ಸುಳ್ಳಾಗಿಸಲಿ? ಎಂದು ಯೋಚಿಸಿದೆ. ಅವರ ಅಸೆಯನ್ನು ನಿರಾಶೆಪಡಿಸಲು ಆಶಿಸದೆ.

"ಇರಬಹುದು, ಕಳೆದ ಜನವರಿಯಲ್ಲಿ ಆಕೆಯನ್ನು ಆಜ್ಜಿಯ ಮನೆಗೆ ಕರೆದೊಯ್ಯುತ್ತಿದ್ದಾಗ ನೋಡಿರಬಹುದು" ಎಂದೆ, ಸತ್ಯಸಂಧನಿಗಿಂತಲೂ ನಾನೇ ಒಂದು ಅಡಿ ಹೆಚ್ಚು ಎಂಬಂತೆ.

"ನಿಮ್ಮ ಊರು ಯಾವುದೂಂತ ಕೇಳಬಹುದೇ?"

"ಓಹೋ, ಧಾರಾಳವಾಗಿ ಕೇಳಬಹುದು. ಆದರೆ ನಾನು ಇದುವರೆಗೆ ಯಾವ ಊರನ್ನೂ ಮರೀದಿಗೆ ಕೊಂಡಿಲ್ಲ—ನನ್ನ ಊರೆಂದು ಹೇಳಿಕೊಳ್ಳಲು"

"ಹಾಗಲ್ಲ. ನಿಮ್ಮ ಹುಟ್ಟಿನ ಊರಾವುದು ಅಂತ ಕೇಳಿದೆ" ಅಂದರು.

'ಅದನ್ನು ಕಟ್ಟಿಕೊಂಡು ನಿಮಗೇನಾಗಬೇಕಾಗಿದೆ?' ಎಂಬ ಉತ್ತರವನ್ನು ನನ್ನ ಸ್ಥಾನದಲ್ಲಿ ಬೇರೆಯಾರಾದರೂ ಇದ್ದಿದ್ದರೆ ಕೇಳುತ್ತಿದ್ದರೋ ಏನೋ? ನಾನು ನನ್ನ ನಾಲಿಗೆಯನ್ನು ಅಷ್ಟರವರೆಗೆ ಸಡಲಿಸದೆ.

"ಮನೆಯಲ್ಲಿ ಹುಟ್ಟಿ ಭೂತಕಾಲದಲ್ಲಿ ದಕ್ಷಿಣ ಕನ್ನಡದಲ್ಲಿದ್ದೆ. ವರ್ತಮಾನದಲ್ಲಿ ಮೈಸೂರಿನಲ್ಲಿದ್ದೇನೆ. ಭವಿಷ್ಯಕಾಲದಲ್ಲಿ ಉತ್ತರ ಕನ್ನಡಕ್ಕೆ ತೆರಳಬೇಕೆಂದಿದ್ದೇನೆ" ಎಂದೆ.

ಆತ ಏನೂ ಮಾತನಾಡಲಿಲ್ಲ. ನನ್ನ ಮಾತುಗಳು ಖಾರವಾಗಿ ಕಂಡುಬಂದುವೋ ಏನೋ!

ನನಗೂ ಸುಮ್ಮನಿರುವ ಮನಸ್ಸಾಗದೆ ಅವರಿಗೆ ಪ್ರಶ್ನೆಗಳನ್ನು ಹಾಕತೊಡಗಿದೆ.

"ನೀವು ಯಾವೂರಿಂದ ಬಂದವರು, ಎಲ್ಲಿಗೆ ಹೋಗುವವರು?"

"ನಾನೇ?"

"ಹೌದು ನೀವೇ?"

"ನಾನು ಬೊಂಬಾಯಿಯಿಂದ ಇದೇ ತಾನೇ ಹಡಗಿನಲ್ಲಿ ಬಂದೆ. ಮದರಾಸಿಗೆ ಹೋಗಿ, ಹೈದರಾಬಾದಿನಲ್ಲಿ ಒಂದು ದಿನ ನಿದ್ದು ಮಂಗಳೂರಿಗೆ ಹೋಗಬೇಕು" ಎಂದರು.

ಕಾಲೇಜಿಗೆ ಸೇರಿ ವಿಜ್ಞಾನವನ್ನು ಐಚ್ಛಿಕವಾಗಿ ಪಡೆದು ಅಭ್ಯಸಿಸಿದ್ದರೂ ಹೈಸ್ಕೂಲಿನ ಭೂಗೋಳ ನನಗೆ ಅಷ್ಟೇನೂ ಮರೆತಿರಲಿಲ್ಲ. ಮೈಸೂರಿನಲ್ಲಿ ಸಮುದ್ರ ಇದೆ, ಬೊಂಬಾಯಿಯ ಹಡಗು ಮೈಸೂರಿಗೆ ಬರುತ್ತದೆ, ಇತ್ಯಾದಿ ವಿಚಾರಗಳನ್ನು ನನಗೆ ಆಗಿನ ಉಪಾಧ್ಯಾಯ ತಿಳಿಸಿರಲಿಲ್ಲ. ಆ ವಿಚಾರವನ್ನು ಚರ್ಚಿಸಲು ಅವಕಾಶ ದೊರೆಯದೆ ನನ್ನ ಊಹೆಯೇ ತಪ್ಪಾಗಿರಬಹುದೆಂಬ ಸಾವಧಾನವನ್ನು ಹೊಂದಿ

"ನಿಮಗೆ ಮೈಸೂರಿನಲ್ಲಿ ಯಾರಾದರೂ ...." ಎಂದು ಕೇಳಿದೆ.

ತಡವಿಲ್ಲದೇ ಬಂತು ಉತ್ತರ

"ಓಹೋ ಬೇಕಾದಷ್ಟಿದ್ದಾರೆ. ಕಂತೇ ಪೇಟೆಯ whole sale Merchant ಶಾಮಣ್ಣನವರೂ, ಇರ್ವಿನ್ ರಸ್ತೆಯ ಈರಣ್ಣನವರು, ಶ್ರೀರಾಂ ಪೇಟೆಯ ಶೀನಪ್ಪನವರು, ಭೀಮಣ್ಣನವರು, ತಿಮ್ಮಯ್ಯನವರು—ಇವರೆಲ್ಲ ನಮ್ಮ ಹತ್ತಿರದ ಬಂಧುಗಳೇ. ಅಶೋಕ ರಸ್ತೆಯ ಬಿಂದುನಾರ ಹೋಟೆಲು ನಮ್ಮ ಸೋದರ ಮಾವಂದು ಮಂಡಿಯ ಹಿಂಡಿ ಮಿಲ್ಲು ನಮ್ಮ ಭಾವಂದು. ಅವರಲ್ಲಿಗೆ ನಾನು ವಿಶೇಷವಾಗಿ ಹೋಗುವುದಿಲ್ಲ ಅನ್ನಿ. ನನ್ನ ಐ.ಎ.ಎಸ್. ಆದ ಗೆಳೆಯರೊಬ್ಬರನ್ನು ಸಂಧಿಸಲು ಇಲ್ಲಿಗೆ ಬಂದೆ." ಎಂದು ಆತ ಹೇಳಿ ಮುಗಿಸಿದಾಗ ನನ್ನ ಮೈ ಬೆವತಿತ್ತು. ನಾನು ಏಳು ಕೆರೆಗಳ ನೀರು ಕುಡಿದಿದ್ದರೆ ಅವರು ಏಳು ಚರಂಡಿಗಳ ನೀರು ಕುಡಿದಿದ್ದವರಂತೆ ಕಂಡುಬಂದರು.

"ಬೊಂಬಾಯಿಯಲ್ಲಿ ಯಾರಿದ್ದಾರೆ? ಯಾರಾದ ರೂ ಸ್ನೇಹಿತರಿದ್ದಾರೆಯೇ?" ಎಂದು ಕೇಳಿದೆ.

"ಬೊಂಬಾಯಿ ಸುವಾರಿ ಕಂಪೆನಿಯೊಂದರ ಮ್ಯಾನೇಜರೇ ನನ್ನ ಅಣ್ಣ. ನನ್ನ ತಮ್ಮ ಅಲ್ಲಿ ಫೇಮಸ್ ಆರ್ಟಿಸ್ಟ್ ಆಗಿದ್ದಾನೆ. ಅಲ್ಲಿಯ ವೈಸ್ ಛಾನ್ಸಲರ್ ನನ್ನ ಭಾವನ ಅಣ್ಣನ ಬಂಧುಗಳು. ನನ್ನ ಚಿಕ್ಕ ಭಾವ ಅಲ್ಲೇ ಇದ್ದಾರೆ. ಕೆಲವೇ ಸಮಯದಲ್ಲಿ ಉಚ್ಚ ಶಿಕ್ಷಣಕ್ಕಾಗಿ ಅಮೆರಿಕಕ್ಕೆ ತೆರಳಿದ್ದಾರೆ."

"ಹೌದೇನು? ಹೈದರಾಬಾದಿನಲ್ಲಿ ಯಾರಿದ್ದಾರೆ?"

"ಹೈದರಾಬಾದಿನಲ್ಲಿ ನಿಜಾಮರಿದ್ದಾರೆ. sorry ನನ್ನ ಪರಿಚಿತರು ಯಾರಾದರೂ ಇದ್ದಾರೆಯೇ ಎಂದು ತಾನೇ ನೀವು ಕೇಳಿದ್ದು? ಅಲ್ಲಿ ಸುಲ್ತಾನ್ ಬಜಾರಿನಲ್ಲಿ ನನ್ನ ಚಿಕ್ಕಪ್ಪ ಇದ್ದಾರೆ ದೊಡ್ಡ ಜಮೀನ್ದಾರ್ ಆಗಿದ್ದಾರೆ. ಅವರ ಮಗ ಡಾಕ್ಟರ್ ಆಗಿದ್ದಾರೆ."

ನನ್ನ ಆಶ್ಚರ್ಯಕ್ಕೆ ರೆಕ್ಕೆ ಮೂಡಿತು. ದೊಡ್ಡ ದೊಡ್ಡ ವ್ಯಾಪಾರಿಗಳ, ಸರ್ಕಾರದ ಉನ್ನತ ಅಧಿಕಾರಿಗಳ, ಅತುಲೈಶ್ವರ್ಯವಂತರ ಬಂಧುವೊಬ್ಬನ, ಪರಿಚಿತನೊಬ್ಬನ ಪಕ್ಕದಲ್ಲಿ ಕುಳಿತುಕೊಳ್ಳಲು ಕೊಂಚ ಹೆಮ್ಮೆಯೂ ಆಯಿತು. ಆದರೆ ಅಂಥ ವ್ಯಕ್ತಿ ರೈಲ್ವೆ ಸ್ಟೇಷನ್ನಿನಲ್ಲಿ ಮೂರನೇ ತರಗತಿಯ ಮನುಷ್ಯನಾಗಿ ಕುಳಿತುಕೊಳ್ಳಲು ಕಾರಣವೇನೆಂದು ತಿಳಿಯಲಿಲ್ಲ. ಅಹಂಕಾರವಿಲ್ಲದೆ ಅವರು ನನ್ನೊಡನೆ ಮಾತನಾಡಿದ್ದಕ್ಕೆ ಹೆಮ್ಮೆಪಟ್ಟುಕೊಂಡು ಕೊನೆಯದಾಗಿ ಒಂದು ಪ್ರಶ್ನೆ ಕೇಳಿದೆ.

"ತಾವು ಯಾವ ಹುದ್ದೆಯಲ್ಲಿದ್ದೀರಿ?"

ತಡವಿಲ್ಲದೆಯೇ ಉತ್ತರ ಬಂತು. "ಚಿತ್ತರಂಜನ ಮಹಲಿನಲ್ಲಿ ಸ್ಟೋರ್ ಕೀಪರ್ ಆಗಿದ್ದೇನೆ, ತಿಂಗಳಿಗೆ ಮೂವತ್ತು ರೂಪ್ಯಾ ಸಂಬಳ" ಎಂದು.

ನನಗೆ ಆ ಉತ್ತರ ಕೇಳಿ ಅಳಲೇ, ನಗಲೇ, ಕುಣಿಯಲೇ, ರೈಲು ಹತ್ತಲೇ ಅಥವಾ ಮನೆಗೆ ಹಿಂದಿರುಗಲೇ ಎಂಬುದು ತಿಳಿಯದೆ ಪೆಚ್ಚಾದ ಕಣ್ಣನ್ನು ಪಕ್ಕಕ್ಕೆ ತಿರುಗಿಸಿದಾಗ ಆ (ಅ)ಪರಿಚಿತ ವ್ಯಕ್ತಿ ಆಗಲೇ ಕಾಲಿಗೆ ಬುದ್ಧಿ ಹೇಳಿದ್ದರು—ತಮ್ಮ ಗುಟ್ಟು ಬಹಿರಂಗಕ್ಕೆ ಇಳಿಯಿತೆಂದು ತಿಳಿದೋ ಏನೋ?

ನವೆಂಬರ ತಿಂಗಳ ಕೊನೆಯ ವಾರದಲ್ಲಿ ಭಾರತಕ್ಕೆ ಸಂದರ್ಶನವಿತ್ತ ಜಪಾನದ ಯುವರಾಜ ಅಹಿಹಿಟೊ ಮತ್ತು ಯುವರಾಣಿ ಮಿಚಿಕೊರವರು ದೆಹಲಿಯ ಮಕ್ಕಳ ಪೇರೇಡನ್ನು ವೀಕ್ಷಿಸಿದರು.

ನಾವು ಬೆಳೆದು ಬರಬೇಕಾದರೆ—

- ನಮ್ಮ ಜೀವನ ಉದಾತ್ತವಾಗಿರಬೇಕು,
- ನಮ್ಮ ವಿಚಾರಧಾರೆ ನಿರ್ಮಲವಾಗಿರಬೇಕು.
- ನಮ್ಮ ಬದುಕು ಸರಳವಾಗಿರಬೇಕು.

ಈ ವಿಷಯದಲ್ಲಿ ನಾವು ನಮ್ಮ ಪೂರ್ವಜರ ಚರಿತ್ರೆಯನ್ನು ತಿಳಿದು ಅವರು ಮಾಡಿದ ಮಾರ್ಗದರ್ಶನವನ್ನು ಅನುಸರಿಸಬೇಕು.

ಇದೀಗ ಸಿದ್ಧವಾಗಿದೆ.

ಭಾರತೀಯ ಮಹಾಪುರುಷರು

ಬರೆದವರು: ಎಸ್. ಗೋಪೀಚಂದ ರಾವ್, ವಿದ್ವಾನ್, ವಿಶಾರದ.

(೧೨ ಮಹಾ ವ್ಯಕ್ತಿಗಳ ಜೀವನ ಚಿತ್ರಗಳು)

ಪುಟಗಳು: ೧೨೪. ಬೆಲೆರೂ. ೧-೫೦.

ನಿಮ್ಮ ಪ್ರತಿಗಳನ್ನು ಇಂದೇ ಕಾಯ್ದಿರಿಸಿರಿ.

ಪ್ರಕಾಶಕರು: ನವಯುಗ ಎಂಟರ್‌ಪ್ರೈಸ್ ಲಿಮಿಟೆಡ್, ಉಡುಪಿ, ದ.ಭಾ. ನವಭಾರತ ಪುಸ್ತಕ ಭಂಡಾರ, ಉಡುಪಿ ಇಲ್ಲಿಯೂ ಪ್ರತಿಗಳು ದೊರೆಯುತ್ತವೆ.

NAVAYUGA
REGD. NO. B. G. 176

UDIPI, THURSDAY
12-1-1961

LICENSE NO. 31
Licensed to Post without Prepayment

ಕಾಂಗ್ರೆಸಿಗರಿಗೆ ಕಿವಿಮಾತು

(೧ನೇ ಪುಟದಿಂದ)

ಆಳವಾದ ಅನುಭವವು ನಮಗೆ ಸದಾಕಾಲ ಅವಶ್ಯವಿರುತ್ತದೆ. ಕಷ್ಟಕಾಲವನ್ನು ಎದುರಿಸುತ್ತಿರುವ ಈ ನಮ್ಮ ದೇಶಕ್ಕೆ ಅವರ ಮಾರ್ಗದರ್ಶನ ಲಭಿಸುತ್ತಿರುವುದು ನಮ್ಮ ಪುರಾಕೃತಪುಣ್ಯ. ಆದರೆ, ಇದೇ ಮಾತನ್ನು ಅಧಿಕಾರ ಸ್ಥಾನದಲ್ಲಿರುವ ಇತರರ ಬಗ್ಗೆಯೂ ಆಡುವಂತಿಲ್ಲ.

ಆದುದರಿಂದ ಒಂದು ಸಲಹೆಯನ್ನೂ-ಅಥವಾ ಸೂಚನೆಯನ್ನು ಕೊಡಬಹುದು. ಹತ್ತು ವರ್ಷಗಳ ವರೆಗೆ ಅಧಿಕಾರ ಸ್ಥಾನದಲ್ಲಿರುವವರು ತಾವಾಗಿಯೇ ಸ್ವಯಂ ಪ್ರೇರಣೆಯಿಂದ ತಮ್ಮ ಸ್ಥಾನವನ್ನು ಬಿಟ್ಟುಕೊಟ್ಟು ಕಾಂಗ್ರೆಸ್ ಸಂಸ್ಥೆಯಲ್ಲಿ ದುಡಿಯಲು ಮುಂದೆ ಬರಬೇಕು. ಅವರ ಬುದ್ಧಿವಂತಿಕೆ ಮತ್ತು ಪ್ರಶಾಸನಾತ್ಮಕ ಅನುಭವಗಳು ಕಾಂಗ್ರೆಸ್ಸಿಗೆ ದೊರೆತು ಅವರಿಂದಾಗಿ ಕಾಂಗ್ರೆಸ್ಸು ಬಲಶಾಲಿಯಾಗುವುದು. ಆಗ, ಕಾಂಗ್ರೆಸ್ ಸರಕಾರ ಮತ್ತು ಪಕ್ಷಗಳೆರಡರಲ್ಲೂ ದಕ್ಷ ಜನರು ದೊರೆಯುವರು. ಹೀಗೆ ಆಗ ಬೇಕಾದರೆ, ಇಂತಹ ಸೂಚನೆಯನ್ನು ಕಾರ್ಯಗತಗೊಳಿಸಬೇಕಾಗುತ್ತದೆ. ಇದಕ್ಕೆ ಸಂಬಂಧಿಸಿದ ಮತ್ತೊಂದು ಪ್ರಶ್ನೆಯಿದೆ. ಕಾಂಗ್ರೆಸ್ ಸಂಸ್ಥೆಯಲ್ಲಿ ಶಿಕ್ಷಣನ್ನು ಪ್ರಭಾವಿ ರೀತಿಯಿಂದ ಕಾಯ್ದುಕೊಳ್ಳುವುದು ಸಂಸ್ಥೆಯ ಅಧಿಪತಿ ಮತ್ತು ರಾಷ್ಟ್ರದ ಅಧಿಪತಿ ಒಬ್ಬನೇ ಇರುವಂತಾಗಲು ನಮ್ಮ ದೇಶದಲ್ಲಿ ಕಾಲವಾದಕ್ಕವಾಗಿಲ್ಲ. ಕಾಂಗ್ರೆಸ್ಸು ಸರಕಾರದಲ್ಲಿರುವವರು ಮಾತ್ರವಲ್ಲ, ಇತರ ಹೊಣೆಗಾರಿಕೆಗಳನ್ನೂ ನಿರ್ವಹಿಸಬೇಕಾಗಿದೆ. ಕಾಂಗ್ರೆಸ್ಸಿನ ಆದರ್ಶ ಪ್ರಚಾರ ಕಾರ್ಯದೊಂದಿಗೆ ವಿಧಾನಸಭೆ ಹಾಗೂ ರಾಷ್ಟ್ರ ನಿರ್ಮಾಣದ ಕಾರ್ಯಗಳ ಕಡೆಗೂ ಕಾಂಗ್ರೆಸ್ಸಿಗರು ಇಂತ ಗಮನ ಹರಿಸಬೇಕಾಗಿದೆ. ಕಾಂಗ್ರೆಸ್ಸಿನಲ್ಲಿ ನಾವು ಶಿಕ್ಷಣನ್ನು ಚೆನ್ನಾಗಿ ಪಾಲಿಸಿಕೊಳ್ಳಬೇಕಾದರೆ, ಕಾಂಗ್ರೆಸ್ಸಿಗರಿಗೆ ರಾಷ್ಟ್ರಸೇವೆಯಲ್ಲಿ ತಮಗಿರುವ ಅಮೂಲ್ಯ ಪಾತ್ರವನ್ನು ತಿಳಿಸಿ ಹೇಳಬೇಕಾಗಿದೆ. ಹೀಗಾದರೆ ಪೂರ್ತಿ ತಮ್ಮದುರಿರುವ ಕಾರ್ಯಗಳನ್ನು ಅವರು ಉತ್ಸಾಹದಿಂದ ನಿರ್ವಹಿಸಲು ಸಶಕ್ತರಾಗುವರು. ಕಾಂಗ್ರೆಸಿಗರಾದರೂ ತಮ್ಮೊಳಗಿನ ಭಿನ್ನಾಭಿಪ್ರಾಯಗಳನ್ನು ಮರೆತು, ಜನತೆಗೆ ಧ್ಯೇಯಗಳತ್ತ ಮನಸ್ಸನ್ನು ಕೇಂದ್ರೀಕರಿಸುವುದಕ್ಕೆ ಅವಕಾಶ ನೀಡಬೇಕು.

ಗೊತ್ತುವಳಿಗಳ ಪಾವಿತ್ರ್ಯ

ಕಾಂಗ್ರೆಸ್ಸಿನಲ್ಲಿ ಲಂಜಂಗೊಳಿತನಕ್ಕೆಂತಲೂ ಅಶಿಸ್ತಿನ ಪ್ರಶ್ನೆ ಅಧಿಕ ಗಂಭೀರವಾಗಿದೆ. ಅತೀವ ಬಹುಮತದಿಂದ ಮಂಜೂರಾದ ಗೊತ್ತುವಳಿಗೆ ಮತಗಳ ಸ್ಥಿತ್ತಪರು ಈ ಗೊತ್ತುವಳಿಯ ಬಗ್ಗೆ ನಿಷ್ಠೆಯಿಂದ ವರ್ತಿಸುವುದಿಲ್ಲ. ತಮಗೆ ಸ್ವೀಕೃತವಲ್ಲದ ಪ್ರಸ್ತಾವಗಳಿಗೆ ಮತವಿತ್ತು ಅವುಗಳ ಬಗ್ಗೆ ಅನಾಸ್ಥೆ ಪ್ರದರ್ಶಿಸುವುದಕ್ಕಿಂತಲೂ ತಂತಮ್ಮ ಮನೋಗತವನ್ನು ನಿರ್ಭಯತೆಯಿಂದ ವ್ಯಕ್ತಪಡಿಸಿ ತಮ್ಮ ಮನಸ್ಸು ಹೇಳಿದ ರೀತಿಯಲ್ಲಿ ಮತದೀಯುವುದು ಮೇಲಾಗಿದೆ. ಆದುದರಿಂದ, ಇಂತಹರು ತಮ್ಮ ವಿಚಾರ ಸರಣಿಯನ್ನು ಸದಸ್ಯರಲ್ಲಿ ಪ್ರಚಾರಮಾಡಿ ಅವರನ್ನು ಗೆದ್ದುಕೊಳ್ಳಬೇಕು; ಮತ್ತು ಪ್ರಸ್ತಾಪಗಳ ಅಂತಿಮ ಸ್ವರೂಪವನ್ನು ಸಿದ್ಧಪಡಿಸುವಲ್ಲಿ ನೆರವೀಯಬೇಕು. ಈ ರೀತಿ ಗೊತ್ತುವಳಿಗಳು ಸ್ವೀಕೃತವಾದರೆ ಮಾತ್ರ ಅವು ಕಾರ್ಯಕಲಾಪಗಳಲ್ಲಿ ಭಾಗವಹಿಸಿದವರ ಅಭಿಪ್ರಾಯಗಳನ್ನು ಪ್ರತಿಬಿಂಬಿಸಬಲ್ಲುವು; ಮತ್ತು ಆಗ ಮಾತ್ರ ಅವುಗಳ ಪಾವಿತ್ರ್ಯವು ಕೂಡ ಉಳಿಯಬಲ್ಲುದು.

ಪಂಚವಾರ್ಷಿಕ ಯೋಜನೆ

ಮೊದಲಿನ ಎರಡು ಪಂಚವಾರ್ಷಿಕ ಯೋಜನೆಗಳು ಗಣನೀಯ ಪ್ರಗತಿಯನ್ನು ಸಾಧಿಸಿರುತ್ತವೆ. ಇದನ್ನು ನೋಡಿದರೆ, ಪಂಡಿತ ನೆಹರುರವರು ವ್ಯವಹೃತಗೊಳಿಸಿದ ಯೋಜನಾ ಪದ್ಧತಿಯು ಸರಿಯಾಗಿ ಕೆಲಸ ಮಾಡುತ್ತಿದೆಯೆಂದು ವ್ಯಕ್ತವಾಗುವುದು. ಭಾರತವು ಕೃಷಿ ಪ್ರಧಾನ ದೇಶವಾಗಿರುವುದರಿಂದ ಯಾವುದೇ ಯೋಜನೆಯ ಯಶಸ್ಸು ಬೆಳೆಯ ಮಟ್ಟವನ್ನು ಹಿಡಿತದಲ್ಲಿಡುವುದರ ಮೇಲೆ ಮತ್ತು ಆಹಾರ ಸಮಸ್ಯೆಯ ಪರಿಹಾರದ ಮೇಲೆ ಅವಲಂಬಿಸಿರುತ್ತದೆ. ಆಹಾರ ಸಮಸ್ಯೆಯನ್ನು ಬಿಡಿಸುವಲ್ಲಿ ನಾವು ಬಹುಮಟ್ಟಿಗೆ ಯಶಸ್ವಿಯಾಗಿರುವೆವು. ತೃತೀಯ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿಯೂ ಈ ಸಮಸ್ಯೆಯು ನಮಗೆ ತೊಂದರೆಕೊಡುವುದಿಲ್ಲವೆಂದು ನಂಬಬಹುದು. ಅನೇಕ ರಾಜ್ಯಗಳು ಭೂ ವಿಧೇಯಕವನ್ನು ಸ್ವೀಕರಿಸಿರುವುದು ಸಮಾಧಾನಕರ ಸಂಗತಿಯಾಗಿದೆ.

ಚುನಾವಣೆಯು ಸರಳವಾಗಬೇಕು

ದೇಶದ ಭವಿತವ್ಯವು ಹೆಚ್ಚಿನವುಟ್ಟಿಗೆ ಚುನಾವಣೆ ಗಳ ಮೇಲೆ ಅವಲಂಬಿಸಿಕೊಂಡಿರುತ್ತದೆ. ಈಗ ಮತದಾರಕ್ಷೇತ್ರಗಳು ದೊಡ್ಡವಾಗಿರುವುದರಿಂದ ಚುನಾವಣೆಗಳ ವೆಚ್ಚವು ಅಧಿಕವಾಗಿರುತ್ತದೆ. ಪ್ರಾಮಾಣಿಕ ಮತ್ತು ನಿಸ್ವಾರ್ಥ ಮನುಷ್ಯನಿಗೆ ಯಾವುದೇ ಪಕ್ಷದ ಇಲ್ಲವೇ ಇತರರ ಸಹಾಯವಿಲ್ಲದಿದ್ದರೆ, ತಾನಾಗಿಯೇ ಚುನಾವಣೆಗಳಲ್ಲಿ ಸ್ಪರ್ಧಿಸುವ ಸಾಮರ್ಥ್ಯವಿರುವುದಿಲ್ಲ. ಕಾರಣ, ಈ ಪದ್ಧತಿಯನ್ನು ತೆಗೆದು ಹಾಕಿ, ತತ್ಪರಿತದಲ್ಲಿ ಅಲ್ಲದಿದ್ದರೂ ಮುಂದೆ ಯಾವಾಗಾದರೂ ಒಂದು ಕಾಲದಲ್ಲಿ ಒಂದು ಬಗೆಯ ಅಪ್ರತ್ಯಕ್ಷ ಚುನಾವಣೆಗಳನ್ನು ಜಾರಿಗೆ ತರುವುದು ವಿಹಿತವಲ್ಲವೆ ಎಂಬುದನ್ನು ವಿವೇಚಿಸಬೇಕಾಗಿದೆ. ಒಂದು ಹಳ್ಳಿಯನ್ನು ಘಟಕವಾಗಿ ಗ್ರಹಿಸಬಹುದು. ಈ ಹಳ್ಳಿಯು ತನ್ನ ಪ್ರತಿನಿಧಿಗಳನ್ನು ಪ್ರಾತಿನಿಧಿಕ ಮತದಾರ ಸಂಘಕ್ಕೆ ಆರಿಸಿ ಕಳಿಸಬೇಕು. ಮುಂದೆ ಈ ಸಂಘಗಳೇ ಸಂಸತ್ತು ಹಾಗೂ ವಿಧಾನ ಸಭೆಗಳಿಗೆ ಪ್ರತಿನಿಧಿಗಳನ್ನು ಆರಿಸುವುವು. ನಾವು ಇತ್ತಕಡೆಗೆ ಗಮನಕೊಡುವುದು ಅವಶ್ಯ.

ಒಮ್ಮೆ ಜನತೆಗೆ ಯಾವುದೇ ಕರಾರು ಹಾಕದೆ ಪೂರ್ಣ ಹೊಣೆಗಾರಿಕೆಯನ್ನು ವಹಿಸಿಕೊಟ್ಟರೆ ಸಾಮಾನ್ಯವಾಗಿ ಅವರು ಅದಕ್ಕೆ ಹೊಂದಿಕೊಂಡು ನಡೆದುಕೊಳ್ಳುವರು. ಎಲ್ಲ ರಾಜ್ಯಗಳೂ ಇದೇ ಮಾದರಿಯನ್ನು ಅನುಸರಿಸುವುದು ಒಳಿತು. ರಾಜ್ಯ ಸರಕಾರದಿಂದ ಜಿಲ್ಲೆ ಇಲ್ಲವೇ ಗ್ರಾಮದ ಮಟ್ಟಕ್ಕೆ ಅಧಿಕಾರದ ವಿಕೇಂದ್ರೀಕರಣವಾಗುವುದರೊಡನೆ ಕೇಂದ್ರದಿಂದ ರಾಜ್ಯ ಸರಕಾರಗಳಿಗೆ ಕೂಡ ಅಧಿಕಾರದ ವಿಕೇಂದ್ರೀಕರಣವಾಗಬೇಕು.

ವಿದೇಶನೀತಿ

ಭಾರತ ಸರಕಾರದ ವಿದೇಶ ನೀತಿಗೆ ಎಲ್ಲೆಡೆಯೂ ಬೆಂಬಲದೊರೆತಿದೆ. ರಾಜಾಜಿ ಹಾಗೂ ಕಮ್ಯುನಿಸ್ಟರು ಕೂಡ ಈ ನೀತಿಯನ್ನು ಮೆಚ್ಚಿಕೊಂಡಿರುವುದನ್ನು ನೋಡಿದರೆ, ಭಾರತದ ಧ್ರುವತಾರೆಯಂತಿರುವ ನೆಹರುರವರ ದೂರದೃಷ್ಟಿಯ ಪರಿಚಯವಾಗುವುದು. ಇಂದು ಅಂತಾರಾಷ್ಟ್ರೀಯ ಪರಿಸ್ಥಿತಿ ಕ್ಲಿಷ್ಟವಾಗಿರುವುದರಿಂದಲೇ ಗೋವೆಯು ಇದುವರೆಗೂ ವಿದೇಶೀಯರ ಕೈಯೊಳಗಿನಲಿದೆ. ಗೋವೆಯ ಸಮಸ್ಯೆಯು ಶೀಘ್ರದಲ್ಲಿ ಬಗೆಹರಿಯುವುದರಲ್ಲಿ ಸಂದೇಹವಿಲ್ಲ. ಈ ವಿಷಯದಲ್ಲಿ ನಮ್ಮ ಕರ್ತವ್ಯದ ಬಗ್ಗೆ ಸರಕಾರದವರಾಗಲಿ, ಜನತೆಯೊಗಲಿ ಜಾಗರೂಕವಾಗಿರುತ್ತದೆ. ಇಂದು ಗೋವೆಯ ನೆಲೆಮನೆಯಲ್ಲಿ ಕೊಳೆಯುತ್ತಿರುವ ಸ್ವಾತಂತ್ರ್ಯಯೋಧರು ವಂದನಾರ್ಹರು.

ಭೂಮಿಯಿಂದ ೧೬೫ ಮೈಲುಗಳೆತ್ತರದಲ್ಲಿ ತಾಸಿಗೆ ೪೦೦೦ ಮೈಲುವೇಗದಲ್ಲಿ ಭ್ರಮಿಸಬಲ್ಲ X-15 ಎಂಬ ಅಮೆರಿಕನ್ ಉಪಗ್ರಹವಿದು.

ಎಲ್ಲರಿಗೂ ಬೇಕಾಗಿದೆ

ಬಡವರು ದೊಡ್ಡವರು ಎಂಬ ಭೇದವಿಲ್ಲದೆ ಪ್ರತಿಯೊಬ್ಬರ ಆರ್ಥಿಕ ಅನುಕೂಲತೆ ಮತ್ತು ಅವಶ್ಯಕತೆಗಳಿಗೆ ಒಪ್ಪುವ ಫಲದಾಯಕ ಯೋಜನೆಗಳು ನಮ್ಮಲ್ಲಿವೆ.

ಸಿಗ್ನಿ — ಠೇವಣಾತಿ ಯೋಜನೆ. ಪ್ರತಿದಿನವೂ ಉಳಿಸಬೇಕೆಂಬ ಅಪೇಕ್ಷೆಯುಳ್ಳವರಿಗೆ ಅಗತ್ಯ. ನಾಲ್ಕಾಣೆಯನ್ನು ಅಲ್ಪ ಮೊತ್ತದಿಂದಲೂ ಆರಂಭಿಸಬಹುದು. ಸಿಗ್ನಿಯು ಬೇಂಕಿನ ಸೇವೆಯನ್ನು ಮನೆಬಾಗಿಲಿಗೆ ತರುವುದು.

ಕ್ಯುಮ್ಯುಲೆಟಿವ್ — ಠೇವಣಾತಿಗಳು ರೂಪಾಯಿ ಐದು ಅಥವಾ ಅದರ ಗುಣಕಗಳಲ್ಲಿ ಸಂಗ್ರಹಿಸಿಡಲು ಉತ್ತಮ ಸಾಧನ. ಮಾಸಿಕ ಠೇವಣಿಯಿಟ್ಟವರ ಮುಂದಿನ ಅನುಕೂಲ ಹಾಗೂ ಆಕರ್ಷಕವಾಗಿದೆ.

ಲಕ್ಷ್ಮಿ — ಕೇಶ್ ಸರ್ಟಿಫಿಕೇಟ್ ನಿಮ್ಮಲ್ಲಿರುವ ಬಂಡವಾಳಕ್ಕೆ ಲಾಭದಾಯಕ ಪ್ರತಿಫಲ ದೊರೆಯುವುದು. ಸುಪ್ತ ಧನದ ಸದ್ವಿನಿಯೋಗಕ್ಕೆ ಲಕ್ಷ್ಮಿಯ ಆಹ್ವಾನ ಮನೋಹರವಾಗಿದೆ.

ವಿದ್ಯಾರ್ಥಿಗಳಿಗೆ — ವಿಶೇಷ ಸೌಲಭ್ಯ. ವಿದ್ಯಾರ್ಥಿಗಳ ಸೇವಿಂಗ್ಸ್ ಖಾತೆಯಲ್ಲಿ ಉಳಿತಾಯದ ಖಾತೆವಿದೆ. ಮಾತ್ರವಲ್ಲದೆ ನಮ್ಮ ಶಾಖೆಯಿಂದ ಧರ್ಮಾರ್ಥವಾಗಿ ಹಣ ಪಾವತಿ ಮಾಡುವ ಅವಕಾಶ ಕಲ್ಪಿಸಿಕೊಡಲಾಗಿದೆ.

ಆದರ್ಶ ಆರ್ಥಿಕ ವ್ಯವಹಾರಕ್ಕೆ ಸಿಂಡಿಕೇಟ್ ಬೇಂಕ್

ದಿಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್ ಲಿಮಿಟೆಡ್

ಕಾವು ವಿಜ್ಞಾನದ ಮಾಹಿತಿಗಾಗಿ
ಡಾ| ಎಂ. ಗೋಪಾಲಕೃಷ್ಣ ರಾಯರಿಂದ ಸಂಪಾದಿತವಾದ

ಕಲಿಯುಗ

ಸಂಪುಟವನ್ನು ಅವಶ್ಯ ಓದಿರಿ.
ಉತ್ತಮವಾಗಿ ಬೈಂಡು ಮಾಡಿದ
ವರ್ಷ, ವರ್ಷಗಳ ಸಂಚಿಕೆಗಳು.
ನೂತನ ದಂಪತಿಗಳಿಗಂತೂ ಬೇಕಾದ
ಅಪೂರ್ವ ಸಂಗ್ರಹ.
ಪ್ರತಿ ಸಂಪುಟದ ಬೆಲೆ ರೂ. 4=50
ಅಂಚೆ ವೆಚ್ಚ ರೂ. 1=50.
ಕೆಲವೇ ಪ್ರತಿಗಳಿವೆ. ತ್ವರೆ ಮಾಡಿರಿ
ನವಭಾರತ ಪುಸ್ತಕ ಭಂಡಾರ,
ಉಡುಪಿ.

Edited, Printed & Published by K. H. Shetty, at the Navayuga Press, Udipi, S. India.

ಪ್ರಜಾರಾಜ್ಯ ವಿಶೇಷಾಂಕ ೧೯೬೧

NAVAYUGA REPUBLIC DAY SPECIAL, 1961.

ಬೆಲೆ: ೨೦ ನಯೇಪೈಸೆ

- ಅತ್ಯುತ್ತಮ ಬೇಂಕಿಂಗ್ ಸೇವೆ -

ಪ್ರಜಾರಾಜ್ಯ ದಿನಾಚರಣೆಯ ಈ ಶುಭದಿನದಲ್ಲಿ ನಮ್ಮ ಗ್ರಾಹಕರಿಗೂ ಹಿತಚಿಂತಕರಿಗೂ ಅತ್ಯುತ್ತಮ ಬೇಂಕಿಂಗ್ ಸೇವೆಯ ಭರವಸೆಯೊಂದಿಗೆ ಹಾರ್ದಿಕ ಶುಭಾಶಯಗಳನ್ನರ್ಪಿಸುವೆವು.

ಟಿ. ಎ. ಪೈ,
ಜನರಲ್ ಮೆನೇಜರ್.

ಡಾ। ಟಿ. ಯಂ. ಎ. ಪೈ,
ಮೆನೇಜಿಂಗ್ ಡೈರೆಕ್ಟರ್.

ಸಿಂಡಿಕೇಟ್ ಬೇಂಕ್

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್ ಲಿಮಿಟೆಡ್,

ಸ್ಥಾಪನೆ: ೧೯೩೬.

ಪ್ರಧಾನ ಕಚೇರಿ: ಉಡುಪಿ.

ಪ್ರಜಾಪ್ರಭುತ್ವದಿನದ ಶುಭಾಶಯಗಳು!

ದಿ ಪಾಂಗಾಳ ನಾಯಕ್ ಬೇಂಕ್, ಲಿ.,

ಪ್ರಧಾನ ಕಚೇರಿ: ಉಡುಪಿ, ದ. ಕನ್ನಡ.

• • •

ನಮ್ಮ 3 ವರ್ಷ ವ್ಯಾದೆಯ ಕೇಶ್ ಸರ್ಟಿಫಿಕೇಟುಗಳಲ್ಲಿ ಠೇವಣಿ ಮಾಡಿರಿ. ಬಡ್ಡಿ ಸೇಕಡಾ 5ರಂತೆ.

ರೂ. **87-00** ಮೂರು ವರ್ಷಗಳ ಅಂತ್ಯದಲ್ಲಿ, ಬಡ್ಡಿ ಕೂಡಿ
ರೂ. **100-00** ಒದಗಿಸುವುದು.

ಕರೆ, ಚಿಕ್ಕ ವ್ಯಾದೆ, ನಿರಖು ಠೇವಣಾತಿಗಳ ಮೇಲೆ ಬಡ್ಡಿ ಸೇಕಡಾ 4¾ ವರೆಗೆ.
ದೊಡ್ಡ ಠೇವಣಿಗಳ ಮೇಲೆ ಹೆಚ್ಚಿನ ಬಡ್ಡಿ.

ರೂ. 1 ಕೋಟಿಗೂ ಮಿಕ್ಕಿದ ಠೇವಣಾತಿಗಳು.

ಸ್ಥಾಪನೆ: 1920

ಸ್ಪ್ರಿಂಗುಗಳು ಮುರಿದು ಬೀಳುವುದನ್ನು ತಪ್ಪಿಸಿರಿ.

ಕೆನರಾ ಸ್ಪ್ರಿಂಗುಗಳು ನಿಶ್ಚಿಂತೆಯಿಂದ ನಿಮ್ಮನ್ನೊಯ್ಯುವುವು.

ಬಾಳಿಕೆ ಮತ್ತು ಭರವಸೆ ಬೇಕಾದಲ್ಲಿ ಅವೆರಡೂ ಈ ಸ್ಪ್ರಿಂಗಿನಲ್ಲಿವೆ. ತಯಾರಿಕೆಯ ಪ್ರತಿ ಮಟ್ಟದಲ್ಲೂ ಗುಣ ಪರೀಕ್ಷಿಸಲಾಗುವ ಅಮೇರಿಕದ ಅತ್ಯುತ್ತಮ ಮಟ್ಟದಂತೆ ಸ್ಪ್ರಿಂಗಿನ ಪ್ರತಿ ಹಾಳೆಗಳನ್ನು ದೀರ್ಘ ಕಾಲ ಬಾಳುವಿಕೆಯ ಬಗ್ಗೆ ಆಧುನಿಕ ವಿಜ್ಞಾನ ರೀತ್ಯಾ ಉಷ್ಣಶಕ್ತಿ ಪ್ರಯೋಗಿಸಲ್ಪಟ್ಟಿವೆ.

ತಯಾರಕರು:

ದಿ ಕೆನರಾ ವರ್ಕ್‌ಶೋಪ್ಸ್ ಲಿಮಿಟೆಡ್

ಮಂಗಳೂರು-3.

THIS PAGE IS WORTH FIFTY RUPEES:

Tear up this page and fill in the form given below and save your precious fifty rupees. For we are offering you this wonderful opportunity, so that every one of you can become our esteemed Life Member by IMMEDIATELY remitting by M. O., or by crossed cheque or in person, Rs. 150/- (one hundred and fifty rupees) to us to get.

ALL THE FOUR VEDAS (i. e. Rg Veda, Yajur Veda, Sama Veda, and Atharva Veda) AND COMPLETE UNABRIDGED MAHABHARATA, with Sanskrit Text and the most authentic Kannada translation ever attempted in the history of Kannada Literature, to be regularly and systematically published by us in EIGHTY (80) SUPER-FINE, GIGANTIC, ILLUSTRATED AND BEAUTIFUL VOLUMES IN EXCELLENT CALICO BINDING AND WITH ARTISTIC PAPER—JACKETS. Our usual Life Membership amount is Rs. 200/- (two hundred rupees).

But, TO YOU the Life Membership amount is reduced to Rs 150/- (one hundred and fifty rupees) only if you send this amount of Rs. 150/- (one hundred and fifty rupees) IMMEDIATELY and ACCOMPANIED BY THIS FORM GIVEN BELOW:—

cut along this line

To

LAXMAN BABANI PAI MEMORIAL PUBLICATIONS,
SYNDICATE BANK QUARTERS, NO. 2, MANIPAL, S. K.

Dear Sirs,

Kindly enrol me as a Life Member for the Sanskrit—Kannada Vedas & Mahabharata to be published by you in 80 (eighty) volumes. Herewith, I am enclosing a CROSSED CHEQUE / MONEY ORDER RECEIPT for Rs. 150/- (One hundred and fifty rupees). Full details are:—

*1. MY NAME _____

*2. MY FULL ADDRESS _____

_____

_____

_____

*3. DATE _____ *4. SIGNATURE _____

(NAVAYUGA — Kannada Weekly — 26—1—1961)

cut along this line

cut along this line

cut along this line

Out of these eighty volumes, the following volumes are ready to be distributed to our Life Members only (for, these immortal volumes are not for sale):—

1. RG VEDA vol I (printed by the Sharada Press, Mangalore.)
2. MAHABHARATA vol. I (printed by Samyukta Karnatak Press, Hubli.)
3. ATHARVA VEDA vol. I (printed by Adarsha Printery, Hubli)
4. MAHABHARATA vol. II (printed by Amar Printers, Hubli.)
5. MAHABHARATA vol. III (printed by Amar Printers, Hubli.)
6. RG VEDA vol. II (printed by the Manipal Power Press, Manipal.)
7. MAHABHARATA vol. IV (printed by the National Printers, Udipi.)
8. MAHABHARATA vol. V (printed by Amar Printers, Hubli.)

Therefore, hurry up and send Rs. 150/- (one hundred and fifty rupees) and become our esteemed Life Member to get all these volumes and many more.

LAXMAN BABANI PAI MEMORIAL PUBLICATIONS

MANIPAL, SOUTH KANARA.

ಮಂಗಳೂರಲ್ಲಿ ಈಗಾಗಲೇ ತೆರೆಯಲ್ಪಟ್ಟು—
ಪ್ರಗತಿಯಿಂದ ಮುಂದೆ ಸಾಗುತ್ತಿರುವ—
ಇನ್ನೊಂದು ಪ್ರಸಿದ್ಧ ಜವುಳಿ ಮಳಿಗೆ!!

ಸಾರೀ ಎಂಪೋರಿಯಮ್

ಕೆಥೋಲಿಕ್ ಕ್ಲಬ್ಬಿನ ಎದುರು, ಹಂಪನಕಟ್ಟಾ

- ನೀವು ಅಪೇಕ್ಷಿಸುತ್ತಿರುವ ಯಾವತ್ತೂ ಮಿಲ್ ವಸ್ತ್ರಗಳ ಮೇಲೆ ಮಿಲ್ ಛಾಪಿತ ದರಗಳಿರುವುದನ್ನು ನೀವು ಕಾಣುವಿರಿ.
- ಹತ್ತಿಯ ಹಾಗೂ ಸಿಲ್ಕಿನ ಸೀರೆಗಳು— ಎಲ್ಲವೂ ವಿವಿಧ ಮಾದರಿಗಳಲ್ಲಿ ಮತ್ತು ಮನೋಹರ ಬಣ್ಣಗಳಲ್ಲಿ— ನಿಶ್ಚಿತ ಬೆಲೆಯಲ್ಲಿ ಸಿಗುವುವು.
- ನಿಮ್ಮ ಉತ್ತಮ ಆಯ್ಕೆಗೆ ಯೋಗ್ಯವೆಂದೆನಿಸಿದ— ಬನಾರಸ್— ಕಾಶ್ಮೀರ್, ಬೆಂಗಳೂರು, ಬಂಗಾಳ, ಧರ್ಮಾವರಂ, ಕಾಂಜೀವರಂ ರೇಶ್ಮೆ ಸೀರೆಗಳು— ಮತ್ತು

ಕೊಯಮುತ್ತೂರು, ಮಧುರಾ, ಸೇಲಂ, ಮುಂಬಾಯಿ, ಬೆಳಗಾಂ ಮತ್ತು ಉತ್ತರ ಪ್ರದೇಶದ ಹತ್ತಿನೂಲಿನ ಸೀರೆಗಳು ಸರ್ವೋತ್ಕೃಷ್ಟವಾಗಿವೆ.

ಯಾಸತ್ತೂ ತರದ ಶರ್ಟಿಂಗ್, ಕೋಟಿಂಗ್, ಚಿಂಟ್ಸ್, ಸಿಲ್ಕ್ ಸೈಲಾನ್ ಇತ್ಯಾದಿ ಬಟ್ಟೆಬರೆಗಳು ಸದಾ ದೊರೆಯುತ್ತವೆ.

ಇಂದೇ ಸಂದರ್ಶಿಸಿರಿ

SAREE EMPORIUM

Opp. Catholic Club, Hampankatta, Mangalore

ಎಲ್ಲಾ ತರದ ಕೈಮಗ್ಗದ ಉತ್ತಮ ತರಗತಿಯ
ಖಾತ್ರಿ ರಂಗಿನ ಸೀರೆಗಳಿಗೆ
ಒಮ್ಮೆ ಸಂದರ್ಶಿಸಿರಿ.

ಪೂರ್ಣಿಮಾ ಸ್ಟೋರ್ಸ್

— ರಬಿಂ ಮತ್ತು ಬಿಲ್ಲರೆ ಕೈಮಗ್ಗದ ಜವುಳಿ ಮಳಿಗೆ —
ಪೊಪ್ಯುಲರ್ ಇನ್‌ಶೂರೆನ್ಸ್ ಕಟ್ಟಡ,

ಮಂಗಳೂರು - ೧

ಅಖಿಲ ಭಾರತ ಕೈಮಗ್ಗ ಸಪ್ತಾಹದ ಪ್ರದರ್ಶನದಲ್ಲಿ
ಪದಕ ಮತ್ತು ಪ್ರಶಸ್ತಿ ಪಡೆದ
ನಮ್ಮ ಸೀರೆಗಳನ್ನು ಉಪಯೋಗಿಸಿರಿ.

ಗಣರಾಜ್ಯ ದಿನದ
ಹಾರ್ದಿಕ ಶುಭಾಶಯಗಳು !

ನವಯುಗ ಎಂಟರ್‌ಪ್ರೈಸ್ ಲಿ., ಉಡುಪಿ.

(ನವಯುಗ ಪ್ರೆಸ್, ಉಡುಪಿ. ಇದರ ಮ್ಹಾಲಿಕರು.)

NAVAYUGA ENTERPRISE LIMITED, UDIPI.

(Props. for Navayuga Press, Udipi.)

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ,
ಪ್ರತಿಯೊಬ್ಬರಿಗೂ ಅತ್ಯುಪಯುಕ್ತವಾದ ಹೊಸ ಪುಸ್ತಕ

LETTER WRITING MADE EASY

ಸುಲಭದಲ್ಲಿ ಪತ್ರಲೇಖನ

ದಿನದ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು
ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.
ಬೆಲೆ ರೂ. 1-4-0 (1=25).

ಮನೆಯೆಂದಾದಲ್ಲಿ ಇರಲೇಬೇಕಾದ ಗೃಹವೈದ್ಯ

ಮನೆ ಮದ್ದು

ಬರೆದವರು: ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್, ಎಲ್. ಎ. ಎಮ್
ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆ
ಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ.
ಹೆರಿಗೆ ವಿಧಾನ ಸವಿಸ್ತಾರವಾಗಿ ಕೊಡಲ್ಪಟ್ಟಿದೆ. ಬೆಲೆ ರೂ. ಎರಡು.

ನಿಮ್ಮಿಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
ದಿ| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

(ENGLISH MADE EASY)

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ.
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು.
ಬೆಲೆ: ರೂ. ಎರಡು. ಉತ್ತಮ ಪ್ರತಿ: ರೂ. ಎರಡೂವರೆ

ವಿ. ಸೂ.—ಅಯಾಯ ಪುಸ್ತಕದ ಬೆಲೆಯೊಂದಿಗೆ ಟಪ್ಪಾಲು ಖರ್ಚಿಗಾಗಿ 0=25 N.P ಸೇರಿಸಿ ಮನಿಯಾರ್ಡರು ಮಾಡಿದರೆ ಪುಸ್ತಕಗಳಿಸಲಾಗುವುದು.

ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ಸಿಗದಿದ್ದರೆ ನಮಗೆ ಬರೆಯಿರಿ.

ನವಭಾರತ ಪುಸ್ತಕ ಭಂಡಾರ, ಉಡುಪಿ

For your requirements in:

School and College Books
Books on Current Day Politics and fiction etc.
Stationery and office requisites
Paper and Printer's Sundries

The Reputed Firm in South Kanara

SCHOOL BOOK COMPANY

Book Sellers — Publishers — Stationers

PRINCIPAL PAPER DEALERS

Head Office:
CAR STREET
MANGALORE
Phone No. 229

Branch Office:
K. S. R. ROAD
HAMPANKATTA
MANGALORE
Phone No. 229 A

Distributors for:

The Mysore Paper Mills, Ltd.
BHADRAVATHI
(For S. Kanara & N. Malabar)

Agents of:

Ganges Printing Ink Factory, Ltd.
HOWRAH

ESTD. 1921

NAVAYUGA
KANNADA WEEKLY,
UDIPI.

Founder:
Late Sri A. B. Shetty,
Former Minister for Public Health, Govt. of Madras & Govt. of Mysore.

ನವಯುಗ

ಪ್ರತಿ ಗುರುವಾರ
ಉಡುಪಿಯಿಂದ ಹೊರಡುವ
ರಾಷ್ಟ್ರೀಯ ವಾರಪತ್ರಿಕೆ

ಸ್ಥಾಪನೆ: ೧೯೨೧.

ಗೌರವ ಸಂಪಾದಕರು:
ಎಸ್. ಗೋಪೀಚಂದ ರಾವ್, ವಿದ್ವಾನ್.
ಬಿ. ಶಾಮರಾಯ ಶೆಟ್ಟಿ, ಬಿ. ಎ., ಎಲ್. ಟಿ.

ಸಂಚಾಲಕ ಸಂಪಾದಕರು:
ಕೆ. ಹೊನ್ನಯ್ಯ ಶೆಟ್ಟಿ.

ಜಾಹೀರಾತು ದರಗಳು:
ನಿಯಮಿತ (ಕಂಟ್ರಾಕ್ಟ್)
ಕಲಂ ಇಂಚಿಗೆ ರೂ. 2-50
ಅನಿಯಮಿತ (ಕೆಜುವಲ್)
ಕಲಂ ಇಂಚಿಗೆ ರೂ. 3 50
ಹೆಚ್ಚಿನ ವಿವರಗಳಿಗೆ ವ್ಯವಹರಿಸಿರಿ.

ಚಂದಾ:
ವಾರ್ಷಿಕ ಚಂದಾ (ಅಂಚೆವೆಚ್ಚ ಸೇರಿ) ರೂ. 6-75
ಬಿಡಿಪ್ರತಿ ರೂ. 0-13

ಚಂದಾಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬೇಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ'ದ ಖಾತೆಗೆ ಜಮೆ ಮಾಡುವಸಾಕಾರ್ಯವಿರುವುದು.

ನವಯುಗ

ಪ್ರಜಾರಾಜ್ಯ ವಿಶೇಷಾಂಕ 1961

VOL. 40 No. 20
ಸಂಪುಟ ೪೦ ಸಂಚಿಕೆ ೨೦

ಕರ್ತವ್ಯವನ್ನು ಸ್ಮರಿಸಿ ನಡೆಯೋಣ

ಸರ್ವಾಧಿಕಾರದ ಸೀಮೆಯೊಳಗೆ ನವಯುತ್ತಿರುವ ಮತ್ತು ನವೆದು ಇದೀಗ ತಾನೇ ಮುರಳಿ ಪ್ರಜಾಸತ್ತೆಯ ತತ್ವಗಳನ್ನಯ ಸಾಗತೊಡಗಿರುವ, ರಾಜಕೀಯದುರಂತಗಳಿಂದ ನೊಂದು ಕಷ್ಟವನ್ನನುಭವಿಸುತ್ತಿರುವ ವಿವಿಧ ರಾಷ್ಟ್ರಗಳ ಮಧ್ಯೆ ಭಾರತೀಯ ಗಣತಂತ್ರವೊಂದು ತಲೆಯೆತ್ತಿ ಸುತ್ತಮುತ್ತ ಪ್ರತೀಕ್ಷಿಸುತ್ತಿದೆ. ಪ್ರಜಾಸತ್ತೆಯೊದ ಭಾರತದ ಮೇಲೆಯೂ ಇದರ ಅನುಪಾಸಿನ ರಾಜಕಾರಣದ ಪ್ರಭಾವವು ಬೀಳದಿಲ್ಲ. ಆದರೂ ತಾನು ನಂಬಿ ವಿಶ್ವಾಸವಿಟ್ಟು ಅನುಸರಿಸಿಕೊಂಡು ಬಂದ ತತ್ವಗಳನ್ನು ಮರೆಯದೆ, ಅವನ್ನು ನೆಮ್ಮಿಕೊಂಡು ಮುನ್ನಡೆಯುತ್ತಿದೆ. ಆರ್ಥಿಕವಾಗಿ ಹಿಂದುಳಿದಿರುವ ಜಗತ್ತಿನ ಅತಿ ವಿಸ್ತೃತ ಪ್ರಜಾರಾಜ್ಯ ಭಾರತವು ದೇಶದ ಆರ್ಥಿಕ ಪುನಾರಚನೆಯತ್ತ ತೀವ್ರಗಮನವನ್ನು ಹರಿಸುತ್ತ ದೇಶನಿವಾಸಿಗಳಿಗೆ ಪ್ರಜಾಸತ್ತೆಯ ತತ್ವಗಳಲ್ಲಿ ವಿಶ್ವಾಸ ಮೂಡುವಂತೆ ಮಾಡುವ ಪ್ರಯತ್ನ ಮಾಡುತ್ತಿದೆ; ಈ ದಿಸೆಯಲ್ಲಿ ವಿದೇಶೀಯರೂ ಭಾರತಕ್ಕೆ ಬಹಳ ಸಹಾಯ ನೀಡುತ್ತ ಬಂದಿದ್ದಾರೆ.

ಭಾವನಗರದ ಕಾಂಗ್ರೆಸ್ ಅಧಿವೇಶನದ ಸಂದರ್ಭದಲ್ಲಿ ಪ್ರಧಾನಿ ನೆಹರು "ಪ್ರಜಾಸತ್ತೆಯು ನಿಷ್ಫಲಂಕವೆಂದಾಗಲಿ, ದೇಶವಿದೂರವೆಂದಾಗಲೀ ಹೇಳುವುದಕ್ಕೆ ಬಾರನು; ಆದರೆ, ಉಳಿದ ಪ್ರಶಾಸನ ಪದ್ಧತಿಗಳಿಗಿಂತ ಇದು ಒಳ್ಳೆಯದು;ಆದುದರಿಂದಲೇ ಭಾರತವು ಈ ತತ್ವಗಳನ್ನು ಒಪ್ಪಿಕೊಂಡಿದೆ" ಎಂದು ಹೇಳಿರುವುದನ್ನು ನಾವು ಅವಶ್ಯ ಗಮನಿಸಬೇಕು. ಕಾರ್ಯವನ್ನು ಪ್ರಾರಂಭಿಸುವಾಗ, ಮುಂದುವರಿಸುವಾಗ ಎಡವಿಮುಗ್ಗರಿಸುವುದು ಸ್ವಾಭಾವಿಕವೇ; ನಿಷ್ಕಾರ್ಯನಾಗಿ ಕೈಕಟ್ಟಿ ಕುಳಿತಿರುವುದು ನಿರ್ವೀರ್ಯತೆಯ ದ್ಯೋತಕ. ಇದರಿಂದಾಗಿಯೇ ನಾವು ಸದಾ ಕಾರ್ಯಮಗ್ನರಾಗಬೇಕು; ಎದುರು ಬಂದ ವಿಘ್ನೆ ವಿಡ್ಡೂರಗಳನ್ನು ಸಹಿಸಿ, ಅವುಗಳಿಂದ ಪಾಠ ಕಲಿಯಬೇಕು. ಕಾರ್ಯಶೀಲನನ್ನು ಎಡತಾಕಿದ ವಿಘ್ನಗಳು ಆತನ ದೃಢ ಸಂಕಲ್ಪವನ್ನು ಕರಗಿಸಿ ಹೆತವೀರ್ಯನನ್ನಾಗಿ ಮಾಡಿಲಾರವು; ಬದಲಿಗೆ ಆವನ ಉತ್ಸಾಹವನ್ನೂ ಶಕ್ತಿಯನ್ನೂ ದೃಢತೆಯನ್ನೂ ಹೆಚ್ಚಿಸುವುವು. ಕಷ್ಟಕರ ಸನ್ನಿವೇಶಗಳಿಂದ ಸಂಕಲ್ಪಕ್ಕೆ ಚ್ಯುತಿ ತಂದು ಕೊಂಡರೆ ಅದು ಜಾಣ್ಮೆಯೆನಿಸಲಾರದು; ಅಕರ್ಮಣ್ಯತೆಯೆನಿಸುವುದು.

ಆದರೆ, ಒಂದು ಮಾತು ಮಾತ್ರ ನಿತ್ಯಸತ್ಯ. ಮಾನವನು ಮೊತ್ತಮೊದಲು ತನ್ನ ಜೀವನದ ಮುಖ್ಯ ಗುರಿಯನ್ನು ನಿರ್ಧಾರಿತಗೊಳಿಸಿ, ಮುಂದೆ ಅದನ್ನು ಸಾಧಿಸುವ ದಾರಿಯರಸ ಬೇಕು. ಗಾಳಿ ಬಂದಂತೆ ತೂರಿಕೊಳ್ಳುವುದರಿಂದ ನಮ್ಮ ಜೀವನ ಸಾರ್ಥಕತೆ ಪಡೆಯದು, ಲಕ್ಷ್ಯಸಾಧ್ಯವೆನಿಸದು. ಹಂತೆಯೇ ಒಂದು ರಾಷ್ಟ್ರವಾದರೂ ತನ್ನ ಗುರಿಯನ್ನು—ಉದ್ದೇಶವನ್ನು ಮೊದಲಿಗೆ ಸಂಕಲ್ಪಿಸಿ, ಹಿಂದಿನಿಂದ ಅವನ್ನು ಪೂರೈಸುವ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕು. ಭಾರತದ ಅಗ್ರಧುರೀಣರಾದರೂ ದೇಶವನ್ನು ಸ್ವತಂತ್ರ ಪ್ರಜಾಪ್ರಭುತ್ವವೆಂದು ಘೋಷಿಸುವುದರೊಡನೆಯೇ ದೇಶದ ಜನತೆಯ ಜೀವನವನ್ನು, ಅದಕ್ಕೆ ಸಹಕಾರಿಯಾಗುತ್ತಿರುವ ಪ್ರಕೃತಿಯನ್ನು ಸೂಕ್ಷ್ಮವಾಗಿ ವೀಕ್ಷಿಸಿ, ಜಾಗತಿಕ ಸ್ಥಿತಿಗತಿಗಳೊಡನೆ ನಮ್ಮ ದೇಶದ ನಿಲುವನ್ನು ತುಲನಿಸಿ, 'ಸಮಾಜವಾದಿ ಮಾದರಿಯ ಸಮಾಜರಚನೆಯುಳ್ಳ ಕಲ್ಯಾಣರಾಷ್ಟ್ರ'ವನ್ನಾಗಿ ಕಟ್ಟಲು ನಿರ್ಧರಿಸಿದರು. ದೇಶದ ಆಂತರಿಕ ಮತ್ತು ಬಾಹ್ಯ ಸಂಪತ್ತಿನಿಂದ, ವಿದೇಶೀಯರ ಸಹಾಯದಿಂದ ದೇಶಾಭಿವೃದ್ಧಿಗೆ, ದೇಶದ ಆರ್ಥಿಕ ಪುನಾರಚನೆಗೆ ಪಾಂಚವಾರ್ಷಿಕ ಯೋಜನೆಗಳನ್ನು ಕೈಗೊಂಡು ಅದನ್ನು ಕೃತಕಾರ್ಯಗೊಳಿಸುತ್ತಿರುವರು. ಈ ಯೋಜನೆಯ ಫಲ ಬೀಳದ ಹಳ್ಳಿ ಇಂದು ಭಾರತದಲ್ಲಿ ಇಲ್ಲವೇ ಇಲ್ಲವೆನ್ನಬಹುದು. ಯೋಜನೆಯ ಯಶಸ್ವಿತೆಗಾಗಿ ಜನತೆ ಅಧಿಕ ಕರ ತೆರಬೇಕಾಗಿ ಬರುತ್ತದೆಂಬುದು ಸತ್ಯವೇ. ಆದರೆ, ಒಂದು ರಾಷ್ಟ್ರದ ಉಜ್ವಲ ಭವಿಷ್ಯ ರಚನೆಯನ್ನು ವ್ಯಕ್ತಿಯ ಮಟ್ಟದಲ್ಲಿ ಅಳೆಯುವುದು ಸಮಂಜಸವೆನಿಸದು; ಹಾಗೆಂದು ಪ್ರಚಲಿತ ಜೀವನವನ್ನು ಸಂಪೂರ್ಣ ನಿರ್ಲಕ್ಷಿಸುವುದೂ ಅಪರಾಧ. ಕೂಡಿಸಿದ ಹಣವನ್ನು ಯೋಜನೆಗಳ ಹೆಸರಿನಲ್ಲಿ ಬಹಳಷ್ಟು ಸ್ವಮಾಣದಲ್ಲಿ ವ್ಯಯಿಸಲಾಗುತ್ತಿದೆ. ಈ ಹಣವಾದರೂ ಸಮುಚಿತವಾಗಿ ವೆಚ್ಚವಾಗುವುದೆ ಎಂದು ಜನತೆಯ ಅಸಮೂಧಾನ. ಇದುವರೆಗೆ ಕೈಗೊಂಡ ಯೋಜನೆಗಳಿಂದ ಅದೆಷ್ಟು ಪ್ರತಿಫಲ ದೊರೆತಿದೆ. ಯೋಜನೆಗಳು ಅರ್ಥದಲ್ಲಿಯೇ ಕೆಟ್ಟ ಉದಾಹರಣೆಗಳೆಷ್ಟು, ಇದೇಕೆ ಹೀಗಾಗುವುದು ಎಂದು ಮೊದಲಾಗಿ ಪ್ರಶ್ನೆಗಳು ಎಳುವುದು ಸ್ವಾಭಾವಿಕ.

"ನಡೆವರೆಡಹೆದೆ ಕುಳಿತರೆಡಕಲಾರರು". ಒಂದು ಬೃಹತ್ ಯೋಜನೆಯನ್ನು ಕಾರ್ಯಗತ ಮಾಡುವಾಗ ಕಾರ್ಯಾಂಗದ ಹಲವಾರು ವಿಭಾಗಗಳನ್ನು ಹಾದು ಬರಬೇಕಾದುದರಿಂದ ಎಲ್ಲಾದರೊಂದೆಡೆ ಜಾಣಿ ಬೀಳುವುದು ಅಸಾಧ್ಯವೇನಲ್ಲ. ಆದರೂ ಜನತೆಯ ಬೆವರಿನ ಬೆಲೆಯರಿತು ಇಂತಹ ಕಾರ್ಯಗಳು ಸಂಪೂರ್ಣ ಉಪಯುಕ್ತ ವಿಧಾನದಲ್ಲಿ ನಡೆಯುವಂತೆಗಾಗುವುದು ಕಾರ್ಯಾಂಗದ ಕರ್ತವ್ಯ. ಪ್ರಜಾತಂತ್ರದ ಆಧಾರಸ್ತಂಭಗಳಾದ ಜನ ಪ್ರತಿನಿಧಿಗಳು ತಾವು ಯಾರೆಂಬುದನ್ನು ಮರೆತು ಬಿಟ್ಟುದರಿಂದಾಗಿಯೇ ಇಂದು ಸಾಮಾನ್ಯನಿಗೆ ಪ್ರಜಾಸತ್ತೆಯಲ್ಲಿ ಸಂದೇಹ ಬರುವುದಕ್ಕೆ ಕಾರಣವಾಯಿತು. ಜನ ಪ್ರತಿನಿಧಿಗಳು ತಮ್ಮ ಕ್ಷೇತ್ರದ ಜನತೆಯ ಸುಖ ದುಃಖಗಳನ್ನು ತಿಳಿದುಕೊಂಡು ಅವುಗಳ ನಿವಾರಣೆಗೆ ಯತ್ನಿಸುವುದು ನ್ಯಾಯ. ಆದರೆ, ಈ ನ್ಯಾಯ ಪದ್ಧತಿ ಈ ಪ್ರತಿನಿಧಿಗಳಿಗೆ ಸಾಮಾನ್ಯವಾಗಿ ಪಥ್ಯವಾಗುವುದಿಲ್ಲ; ಎಂತಲೇ ಪ್ರಜಾಸತ್ತೆಯಲ್ಲಿ 'ಪ್ರಜೆಸತ್ತ' ಎಂಬಂತಾಗುವ ದುರ್ಲಕ್ಷಣಗಳು ಗೋಚರಿಸುತ್ತಿವೆ.

ಇಂದು ನಮ್ಮಲ್ಲಿ ಕಾಣತೊಡಗಿರುವ ಒಂದು ಮಹಾದೋಷದತ್ತ ಈ ದಿನ ದೃಷ್ಟಿ ಹರಿಸುವುದು ಅಗತ್ಯ. ಅಧಿಕಾರ ಮತ್ತು ಕರ್ತವ್ಯಗಳು ಪರಸ್ಪರ ಹೋರಾಡತೊಡಗಿ ನಮ್ಮ ಮನಸ್ಸನ್ನು ಕಲುಷಿತಗೊಳಿಸುತ್ತಿವೆ. ಎಲ್ಲೆಲ್ಲಿಯೂ 'ಅಧಿಕಾರ'ದ ದಬ್ಬಾಳಿಕೆಯು ಮನೆ ಮಾಡುತ್ತ ಬಂದುದರಿಂದ 'ಕರ್ತವ್ಯ'ವು ಮಾಯವಾಗುತ್ತ ಬಂದಿದೆ. ಇದೇ ಮಾದರಿಯು ಇನ್ನೂ ಮುಂದುವರಿದರೆ, ರಾಷ್ಟ್ರೀಯತೆ, ರಾಷ್ಟ್ರೀಯರ ಕರ್ತವ್ಯಗಳೆಲ್ಲವೂ ಮೂಲೆಪಾಲಾಗಿ, ಅಧಿಕಾರಕ್ಕಾಗಿ ಹೋರಾಡುವ ಕಾಂಗೊವಿನ ದುರಂತ ನಮ್ಮಲ್ಲಿಯೂ ಪುನರಾವೃತ್ತಿಗೊಳ್ಳಬಹುದು. ಇದಕ್ಕೆ ಇನ್ನೂ ತುಸು ಕಾಲ ಹಿಡಿಯಬಹುದು. ಅಧಿಕಾರಿಗಳು ಜನತೆಯ ಸೇವಕರು ಎಂಬ ಜನತೆಯು ಅವರನ್ನು ತಮ್ಮ ರಕ್ಷಕರು ಎಂಬ ಭಾವನೆಯನ್ನು ಬೆಳೆಸದ ಹೊರತು—ಸ್ವಾಮಿ—ಸೇವಕ ಭಾವ ಅಳಿಯದ ಹೊರತು ಪ್ರಜಾಸತ್ತೆ ಯಶಸ್ವಿಯಾಗಲಾರದು. ನಾವು ಭಾರತೀಯರು ನಮ್ಮ ನಮ್ಮ ಅಧಿಕಾರದ ಬಗ್ಗೆ ಹೆಚ್ಚು ಚಿಂತಿಸದೆ, ಕರ್ತವ್ಯವೇನೆಂಬುದನ್ನು ಮೊದಲಾಗಿ ತಿಳಿದುಕೊಂಡು ಅದನ್ನು ನಿರ್ವಹಿಸುವತ್ತ ಆಸಕ್ತಿವಹಿಸಿ, ಕೃತಕರ್ತವ್ಯರೆನಿಸಿ ನಮ್ಮ 'ಪ್ರಜಾಪ್ರಭುತ್ವ'ವನ್ನು ಬೆಳೆಸಿಬರಲು ಒಮ್ಮತದಿಂದ ದುಡಿಯೋಣ; ಸನ್ಮಾರ್ಗ ಭಾರತಧ್ವಜವನ್ನು ಗೌರೀಶಂಕರದಲ್ಲಿ ಹಾರಿಸೋಣ.

ಅಮೃತ ಘಟಿಯ ಸ್ಮಾರಕ

ರಾಷ್ಟ್ರೀಯ ಪರ್ವದಿನವಾದ ಇಂದಿನ ದಿನ ನಾವು ಸಂಕಲ್ಪಿಸಿದಂತೆ ಒಂದು ವಿಶೇಷ ಸಂಚಿಕೆಯನ್ನು ವಾಚಕರ ಕೈಗಳಲ್ಲಿ ಇಟ್ಟಿದ್ದೇವೆ. ಇದನ್ನು ಸಂಪಾದಿಸುವಲ್ಲಿ ನಮಗೆ ಕರ್ನಾಟಕದ ಮೂಲೆ ಮೂಲೆಯ ಅನೇಕ ಪ್ರಖ್ಯಾತ ಲೇಖಕರು ನೆರವಾಗಿದ್ದಾರೆ. ಇನ್ನು ಕೆಲವರು ಕೃಪೆಯಿಟ್ಟು ಕಳಿಸಿದ ಅಮೂಲ್ಯ ಲೇಖನಗಳು ತೀರ ತಡವಾಗಿ ನಮ್ಮ ಕೈಸೇರಿದುದರಿಂದಾಗಿ ಅವನ್ನು ಸೇರಿಸುವುದು ಸಾಧ್ಯವಾಗಲಿಲ್ಲ ಇದಕ್ಕಾಗಿ ಕ್ಷಮಾಯಾಚನೆ ಮಾಡುತ್ತೇವೆ. ಲೇಖಕ ವೃಂದದ ಸಹಕಾರ ಹಸ್ತವನ್ನು ನೆನೆಯುತ್ತೇವೆ. ಜಾಹೀರಾತುದಾರರ ಉದಾರತೆ, ಮುದ್ರಣಾಲಯ ನೌಕರರ ಕರ್ತವ್ಯ ನಿಷ್ಠುರತೆಗಳನ್ನೂ ತುಂಬು ಮನಸ್ಸಿನಿಂದ ಸ್ಮರಿಸಿ, ಮುಂದಕ್ಕೂ ಇದೇ ರೀತಿಯ ನೆರವು ನಮಗೆ ದೊರೆಯಲೆಂದು ಹಾರೈಸಿ ಎಲ್ಲರಿಗೂ ವಂದನೆಗಳನ್ನರ್ಪಿಸುತ್ತೇವೆ. 'ಪ್ರಜಾಪ್ರಭುತ್ವ'ದ ಅಮೃತ ಘಟಿಯಲ್ಲಿ ನಮ್ಮೆಲ್ಲ ಚಂದಾದಾರರನ್ನೂ ವಾಚಕರನ್ನೂ ಹಿತೈಷಿಗಳನ್ನೂ ಅಭಿನಂದಿಸುತ್ತೇವೆ.

ಜೈ ಹಿಂದ್.

ನೀಡೊಡೆಯ ತಾಯ್ನೆಲದಿ ಮರುಹುಟ್ಟೆನು.

[ಕವಿ: ಶ್ರೀ ಕಯ್ಯಾರ ಕಿಞ್ಞಣ್ಣ ರೈ, ಎಂ. ಎ.]

* * *

—ಉಡುಪಿಯ ಸಾಹಿತ್ಯ ಸಮ್ಮೇಳನದ ಆಂಗವಾಗಿ ಜರಗಿದ ಕವಿ ಗೋಷ್ಠಿಯಲ್ಲಿ ಓದಿದ ಕವನ—

— ೧ —

ಎನಿತೊ ಜಡಜನ್ಮಗಳ ವಾಪಲೇಪವ ಹೊತ್ತು
ಜೀವಧಾವಿಸುತಿತ್ತು, ಬಿದಿಯು ಬೆಂಬಿಡದೆ;
ಪೂತೆ ಭಾರತಿ! ನಿನ್ನ ಪುಣ್ಯಗರ್ಭದೊಳೆನಗೆ
ಮಂಗಳಾಶ್ರಯವಿತ್ತು ಸೊಗದ ಸೊದೆಯೆರೆದೆ!

— ೨ —

ಪಡೆದೆನು ಪುನರ್ಜನವ; ನಿನ್ನ ಪಾವನದೊಡಲಿ
ನೀಂಬಿಳಿದ ಒಳಿಕೆನಗೆ ನಿರ್ಭಯಂ ತಾಯೆ!
ಮೃತ್ಪಿಂಡದಲಿ ದಿವ್ಯ ಮಾನವ್ಯತೆಯ ನವ್ಯ
ಗಂಧಗುಣವನ್ನೆರೆದೆ! ವರದೆ ನೀಕಾಯೆ!

— ೩ —

ಕಣ್ಣುಕುರುಡನು ಕಳೆದೆ ಬೆಳಕಿನಂಜನವಿತ್ತು
ಮೂಡಣದಿಗಂತದೊಳುದಯ ಕಿರಣ ಕಂಡೆ;
ಪ್ರಥಮ ಸೂರ್ಯೋದಯದ ಸ್ವರ್ಣ ದರ್ಶನವಾಯ್ತು
ಹೇದಯೂಮಯಿ! ಕರುಣೆ ಧಾರಾಳವುಂಡೆ!

— ೪ —

ಎಲ್ಲ ದೇವರ ಹರಕೆಯಿಳಿದು ಬಂದಿತು ಶಿರಕೆ
ತಾಯ್ನೆಲದ ಹೊಸ ಬೆಳಕ ಕಂಡ ದಿನಕೆ;
ಬಲ್ಲ ಹಿರಿಯರ ಬಯಕೆ ಫಲಿಸಿ ಭಾಗ್ಯಂಬೆಳಗೆ
ಧನ್ಯವಾಯಿತು ಬದುಕೆ—ಮೈಗೆ ಮನಕೆ!

— ೫ —

ಮೈಮರೆತೆನಾ ನಿನ್ನ ಮಧುರ ಕಂಠ ಧ್ವನಿಗೆ
ಗಾನವಾಣಿಗೆ ಲೋಕ ಸಂಗೀತಕೆ;
ಎನ್ನ ಹೃದಯದ ವೀಣೆ ಮಿಡಿದು ನುಡಿಸಿತುನಾದ
ನಿನ್ನ ಹಾಡಿಗೆ ಹಿಗ್ಗಿ ಸಂಮೇಳಕೆ.

— ೬ —

ಅರಿತೆನು ಮೊದಲ್ನುಡಿಯನೊರೆದೆನು ತೊದಲ್ನುಡಿಯ
ನಿನ್ನಿಂದ—ನಿನ್ನ ಸುಖ ಸಂದೇಶದಿಂದ;
ಕಡಲ ಭೋರ್ಗರೆಯಿಂದ, ಪೊಡವಿಮಿಗ
ಮೊರೆಯಿಂದ,
ಖಗಕೂ ಜನಗಳಿಂದ—ಜಗಜೀವದಿಂದ !

— ೭ —

ಸರ್ವಸುಖ ಸಂಮೋದದಲಿ ಜೀವಭಾವದಲಿ
ಏಕನಾದವೆ ನಿನ್ನ ಕೊರಳ ದನಿಯು;
ಎನ್ನ ಬದುಕಿನ ಬರಡು ಬಿದಿರಿನೀ ತುಂಡಿನಲಿ
ಹೊಸ್ನ ಹಾಡನು ಸುರಿದೆ! ಸ್ಪರ್ಶಮುಣಿಯು!

— ೮ —

ಇಂದ್ರಾಗ್ನಿ ವರುಣ ಪೂಷಣರೆಲ್ಲರನುಬರಿಸಿ
ಸೋಮರಸವೆರೆದ ವೇದರ್ಷಿಗಳ ಜನನಿ!
ರಾಮಾಯಣದ ಮಹಾಭಾರತದ ಭವ್ಯೇತಿ
ಹಾಸ ಪುಳಕಿತಗಾತ್ರೆ—ಧೀರ ಧರಣಿ!

— ೯ —

ಹಂಚಾಗ್ನಿ ಮಧ್ಯದಲಿ ಇಷವ ಸಾಧಿಸಿದವರು,
ಶರಕ್ಷಯಂ ಧೀಂಕಿಟ್ಟ ಶೂರರುತರು;
ಸುಡುವ ಪತಿಯ ಚಿತಾಗ್ನಿಗೊಡಲನೊಪ್ಪಿಸಿದವರು
ನಿನ್ನ ಮಕ್ಕಳು—ಸತ್ತು ಸಾಯದವರು!

— ೧೦ —

ಶ್ರೀರಾಮ ಶ್ರೀಕೃಷ್ಣ ಬುದ್ಧ ಮಧ್ವಂ ಬಸವ
ಜಿನಶಂಕರಂ ಗಾಂಧಿ ಘೋಷಪಂಕ್ತಿ;
ಆ ಹಿರಿಮೆ ಆ ಗರಿಮೆ ಆ ಮೈಮೆ ಆ ಗೈಮೆ
ಹಿಡಿಮಣ್ಣ ಹುಡಿಯಲ್ಲಿ ಸ್ವರ್ಣಕಾಂತಿ!

— ೧೧ —

ಇದು ಪಾವನಂ: ಧರಣಿ ಜನನಿ ಚರಣ ಸ್ಪರ್ಶ
ಧೂಳಿ ಗಂಧ ಪ್ರಸಾದ ಮುಕ್ತಿ ಮಾರ್ಗಂ;
ತಾಯ್ನೆಲದ ಕೆಸರನೀರ್ ಮಂದಾಕಿನೀ ತೀರ್ಥ,
ಹುಲ್ಲೆ ರೋಮಾಂಚ—ಬದುಕೆಲ್ಲ ಬಂಗಾರಂ.

— ೧೨ —

ಎನ್ನೊಡಲ ಕರುಳ ಕುಂಕುಮವ ತೆಗೆದೊಪ್ಪಿಸುವೆ
ಹೆರೆ ಹಣೆಗೆ ಬೊಟ್ಟಿಟ್ಟು ಮೆರೆಯೆ ತಾಯೆ!
ನಿನ್ನ ಸಿರಿಮೊಗದ ಮಂಗಲ್ಯದಂಸಿನ ಮಿರುಗೆ
ಸವೆಯಲೆನ್ನೀ ದೇಹ—ಸಾವನರಿಯೆ!

— ೧೩ —

ಕೈಲಾಸವೇರುವುದು; ವೈಕುಂಠ ಸೇರುವುದು,
ಎನ್ನ ತಾಯ್ಮಣ್ಣಿನಿಂ ಬೇರೆಯೇನು?
ನಾನೊಲ್ಲೆ ಮೋಕ್ಷವಂ, ನಾ ಬಲ್ಲೆ ದೀಕ್ಷೆಯಂ:
ನೀಡೊಡೆಯ ತಾಯ್ನೆಲದಿ ಮರುಹುಟ್ಟೆನು!

28—12—1960

ಸ್ಥಾಪನೆ: 1924

ದಿ ಕರ್ನಾಟಕ ಬೇಂಕ್ ಲಿಮಿಟೆಡ್

(ಶೆಡ್ಯೂಲ್ಡ್ ಬೇಂಕ್)

ಪ್ರಧಾನ ಆಫೀಸು: ಮಂಗಳೂರು—3.

ಶಾಖೆಗಳು:

ಮಂಗಳೂರು	ಚಿಕ್ಕಪೇಟೆ—ಬೆಂಗಳೂರು	ಹೊಳೆನರಸೀಪುರ
ಪಟ—ಮಂಗಳೂರು	ಕೊಪ್ಪ	ರಾಮನಗರಂ
ಮದ್ರಾಸು	ಹುಣ್ಸೂರು	ಶ್ರಿಂಗೇರಿ
ಉಡುಪಿ	ಬಾಳೆಹೊನ್ನೂರು	ಜಯಪುರ
ಕುಂದಾಪುರ	ತುಮ್ಕೂರು	ಕಳಸ
ಪುತ್ತೂರು	ಶುಂಠಿಕೊಪ್ಪ	ತರಿಕೆರೆ
ಕಾರ್ಕಳ	ಹೊಸನಗರ	ಹೊಸದುರ್ಗ
ಶಿವಮೊಗ್ಗ	ಶಿಖಾರಿಪುರ	ಕಮ್ಮಾರ್ಡಿ
ಬೆಂಗಳೂರು	ಹೊನ್ನಾಳಿ	ಹಾಸನ

● ● ●

"ಹಸಿ ಡಿಪೋಸಿಟ್ಸ್"ನಲ್ಲಿ ನಿಮ್ಮ ದೈನಂದಿನ ಉಳಿತಾಯವನ್ನು ವಿನಿಯೋಗಿಸಿರಿ.

ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳನ್ನು ನಡೆಸಲಾಗುತ್ತದೆ.

THE KARNATAKA BANK LIMITED

ಯಜ್ಞಾನಾಂ ಜಪ ಯಜ್ಞೋಽಸ್ಮಿ' ॥ಗೀತೆ॥

ಪ್ರಜಾರಾಜ್ಯದ ಈ ಸುಮುಹೂರ್ತದಲ್ಲಿ ಅಮೃತ ವಿಚಾರದ ಕುರಿತು ಸಮಾಲೋಚಿಸುವುದು ಲೇಖಕ ಮತ್ತು ವಾಚಕರಿಬ್ಬರಿಗೂ ಹಿತವೆಂದೇ ಭಾವಿಸುತ್ತೇನೆ. ಇಂದು ಭಾರತದಲ್ಲಿ ಸಂಪತ್ತಿಗೆ ಮೊತ್ರ ದಾರಿದ್ರ್ಯ ಕವಿದಂತೆ ಹೊರನೋಟಕ್ಕೆ ಕಂಡರೂ, ಅದಕ್ಕಿಂತ ಅತಿಶಯವಾಗಿ ನೀತಿಯ ದಿವಾಳಿಯಾಗಿದೆಯೆಂಬುದನ್ನು ಶ್ರೀ ರಾಜೇಂದ್ರ ಪ್ರಸಾದರಂತಹ ಹಿರಿಯ ಮುತ್ಸದ್ದಿಗಳೂ, ಶ್ರೀ ವಿಶ್ವೇಶ್ವರಯ್ಯನಂತಹ ಹಿರಿಯ ಮೇಧಾವಿಗಳೂ ಸಾರುತ್ತಿದ್ದಾರೆ. ಈ ನೈತಿಕ—ಧಾರ್ಮಿಕ ವಿಚಾರಗಳನ್ನು ಭಾರತೀಯರ ಮನಸ್ಸಿನಲ್ಲಿ ನೆಲೆ ನಿಲ್ಲಿಸಬೇಕಾದರೆ ಈ ಕುರಿತಂದ ಪರಿಣಾಮಕಾರೀ ಅನುಭಾವಿಕ ಲೇಖನಗಳನ್ನು ಆಗಾಗ ಪ್ರಕಟಿಸುತ್ತಿರುವುದುತ್ತಮ. ಇದರಿಂದ ನೀತಿಯಲ್ಲಿ ದಿವಾಳಿಯಾದ ಭಾರತೀಯನು ಕ್ರಮೇಣ ನೀತಿಯಲ್ಲಿ ನವಕೋಟಿ ನಾರಾಯಣನಾಗುವನು! ಅದರಲ್ಲೂ ಭಾರತದ ಪಂಚಪ್ರಾಣವು ಅನಾದಿ ಕಾಲದಿಂದಲೂ ಧರ್ಮನೀತಿಗಳೇ ಆಗಿದ್ದುವು. ಸೂರ್ಯನ ಸಹಸ್ರ ಕಿರಣಗಳಲ್ಲಿ ಒಂದನೆಯದು ಭೌತಿಕ ಕಿರಣವಂತೆ. ಎಳನೆಯದು ಧಾರ್ಮಿಕ ಕಿರಣವಂತೆ. ಈ ಕಿರಣವು ಭಾರತದ ಮೇಲೆ ವಿಶೇಷವಾಗಿ ಬೀಳುವುದೇ ಇದರ ಧರ್ಮನಿಷ್ಠೆಯ ಕಾರಣ. ಇದಂದಿಂದಲೇ ಇದು ವಿಶ್ವವಿಖ್ಯಾತವಾದ ಯಶಸ್ಸನ್ನು ಪಡೆದಿತ್ತು ಧರ್ಮನೀತಿಗಳನ್ನು ಬಿಟ್ಟರೆ. ಭಾರತಕ್ಕೆ ವರ್ತಮಾನ ಭಾವೀ ಕಾಲದಲ್ಲಿ ಏನೇನೂ ಹಿತವಾಗಲಾರದೆಂಬುದು ಹೆದಿನಾರಾಣೆ ಸತ್ಯದ ಮಾತು. ಭಾರತೀಯರಲ್ಲಿ ಮೊನ್ನೆ ಮೊನ್ನೆ ಆಗಿಹೋದ ಕೈ| ವಾ| ಮೂಲವೀಯರು ಮತ್ತು ಗಾಂಧೀಜಿಯವರಂತಹ ಪುಣ್ಯಪುರುಷರೂ ತಮ್ಮ ಬಯಕೆಯನ್ನು ಆಧ್ಯಾತ್ಮಿಕ ಮಾರ್ಗದಲ್ಲಿಯೇ ಪೂರೈಸಿಕೊಂಡರು. ಮೂಲವೀಯರು ತಮ್ಮ ಜೀವನದಲ್ಲಿ ಒಂದೂವರೆ ಕೋಟಿ ಗಾಯತ್ರಿಯ ಪುನಶ್ಚರಣವನ್ನು ಪೂರೈಸಿದ್ದರಂತೆ! ಗಾಂಧೀಜಿಯು ಹೆಲವು ಕೋಟಿ ರಾಮ ಮಂತ್ರದ ಪುನಶ್ಚರಣವನ್ನೋ ಪುರಶ್ಚರಣವನ್ನೋ ಮುಗಿಸಿದ್ದರು!

'ನಾಮಕ್ಕೂ ನಾಮಿಗೂ ವ್ಯತ್ಯಾಸವಿಲ್ಲ' ಇದು ಭಗವಾನ್ ರಾಮಕೃಷ್ಣ ಪರಮಹಂಸರ ಮಾತು. ಇದರಲ್ಲಿ ದೇವರ ನಾಮದ ಅರ್ಥವನ್ನು ಭಾವಿಸುತ್ತಾ (ಪುನಶ್ಚರಣ), ಅವನ ನಾಮದ ಜಪವನ್ನು ಭಕ್ತಿಯಿಂದ ಕೋಟಿಗಟ್ಟಲೆ ಮಾಡುವುದೂ ಒಂದೇ; ಭಗವಂತನ ಆಕಾರವೊಂದನ್ನು ಹೃದಯದಲ್ಲಿಟ್ಟುಕೊಂಡು ಅವನ ನಾಮ

ಜಪದ ಗುಟ್ಟು

ನಾಮ ಜಪದಿಂದ ಆತ್ಮಬಲ ವೃದ್ಧಿಯಾಗುತ್ತದೆ; ಇದರಿಂದ, ನಾವು ಶಕ್ತಿಸಾಹಸ ಸಂಪನ್ನರಾಗಿ ನಮ್ಮ ಸದಿಚ್ಛೆಗಳನ್ನು ಪೂರಯಿಸಿಕೊಳ್ಳಬಹುದು. ಇತ್ತೀಚೆಗೆ ನಿಳ ಪ್ರಕಾಸನಕ್ಕೆ ಒಳಪಟ್ಟ ಕನ್ನಡಿಗರಿಗೂ ಭಾರತೀಯರಿಗೂ ಜಪದ ಗುಟ್ಟು ಅವಶ್ಯ ತಿಳಿದಿರಬೇಕು.

ತಿಳಿಸಿದವರು: ಶ್ರೀ ಯೆ. ನಾ. ಉಡುಪ, ವಿದ್ವಾನ್.

ವನ್ನು ಕೋಟಿ ಸಂಖ್ಯೆಯಲ್ಲಿ ನೆನೆಯುವುದೂ (ಪುರಶ್ಚರಣ) ಒಂದೇ. ಇದಕ್ಕಾಗಿಯೇ ದಾಸರೆಲ್ಲಾ ನಾಮಸ್ಮರಣೆಗೆ ಪ್ರಾಶಸ್ತ್ಯ ಕೊಟ್ಟಿದ್ದಾರೆ. ಪುನಶ್ಚರಣ ಕಾರ್ಯವನ್ನು ಕೈಗೊಂಡ ಮಾನವನಲ್ಲಿ ದೈವಿಕ ಶಕ್ತಿಯು ಮೆಲ್ಲಮೆಲ್ಲನೆ ಹರಿಯ ತೊಡಗಿ ಅವನ ಬಾಳುವೆಯನ್ನು ಸಾರ್ಥಕಗೊಳಿಸುವುದು. ಇಂತಹ ಪುಣ್ಯ ಪುರುಷನು ನಡೆದಾಡಿದ ಭೂಭಾಗವೇ ಕಾಶೀಕ್ಷೇತ್ರ; ಅವನು ವಾಸ ಮಾಡಿದ ಹಳ್ಳಿಕೊಂಪೆಯೇ ದಿವ್ಯ ಸ್ವರ್ಗ.

ಪುಣ್ಯ ಪುರುಷರಾದ ಚಿದಂಬರ ದೀಕ್ಷಿತರ ಜನ್ಮ ಭೂಮಿಯಾದ ಬೆಳಗಾವಿ ಜಿಲ್ಲೆಯ ಮುರಗೋಡಿಗೆ ಕರ್ನಾಟಕದ ಸುಪ್ರಸಿದ್ಧ ಸಂತರೆನ್ನಿಸಿಕೊಂಡ ಟೆಂಬೆ ಮಹಾರಾಜರು (ಶ್ರೀ ಮದ್ವಾಸುದೇವಾನಂದ ಸರಸ್ವತಿ) ಬಂದಿದ್ದರು. ಆಗ ಆ ಕ್ಷೇತ್ರದ ಸತ್ಪುರುಷರಲ್ಲೊಬ್ಬರಾದ ಶ್ರೀ ರಾಮಚಂದ್ರ ಬಾಲಕೃಷ್ಣ ಕಾಮತರು ಮಹಾ ರಾಜರ ದರ್ಶನ ತೆಗೆದುಕೊಂಡು ನಾಮಜಪದ ಮಹಿಮೆಯ ಕುರಿತು ಪ್ರಶ್ನೆ ಹಾಕಿದರು. ಅವರು ಕಾಮತರಿಗೆ ಸಗುಣ ನಿರ್ಗುಣ ಭಕ್ತಿಯ ಕುರಿತಾಗಿ ವಿವರಿಸುವಾಗ ಗೂಢವಾಗಿದ್ದ ಜಪದ ಪುನಶ್ಚರಣದ ಹುರುಳನ್ನೆಲ್ಲಾ ಬಯಲಿಗೆಳೆದರು. ಇನೇ ಈ ಬರಹದ ತಿರುಳು.

ಸಗುಣ ನಿರ್ಗುಣ ಭಕ್ತಿಗಳಲ್ಲಿ ನಿರ್ಗುಣ ಭಕ್ತಿಯು ಹುಲುಮಾನವನಿಗೆ ಸುಲಭ ಸಾಧ್ಯವಲ್ಲ. ಅವನು ಕಾಮಿನಿಯೊಬ್ಬಳ ಮುಗುಳು ನಗೆಗಾಗಿ ಪ್ರಾಣಮಾನಗಳನ್ನು ಒತ್ತೆಯಿಡಬಲ್ಲ. ಅಂಥವನ ಮುಂದೆ ಪಾರಮಾರ್ಥಿಕ ವಿಚಾರವನ್ನೆತ್ತಿದೊಡನೆ ಆಕಾಶ ಪಾತಾಳಗಳನ್ನೊಂದು ಮಾಡುವ ಆಕಳಿಕೆಗಳ ಸರಮಾಲೆಯಿಂದ 'ಇದೆಲ್ಲಾ ಕೃತ ಯುಗದವರಿಗೆ ಸಾಧ್ಯ' ಎನ್ನುವ. ಇಂತಹ ಲಾಲಸೆಯ ದಾಸರೂ ನಾಮಸ್ಮರಣ ಅಥವಾ ಸಗುಣ ಭಕ್ತಿಯನ್ನು ಹಿಂಬಾಲಿಸುವುದು ಸುಲಭ. ಇಂತಹ ಮನುಷ್ಯರ ಹಿತಕ್ಕಾಗಿಯೇ ಭಗವಂತನು ತನ್ನನ್ನು ಈ ಯುಗದಲ್ಲಿ ಎಷ್ಟೋ ಎಷ್ಟೋ ಅಗ್ಗಮಾಡಿ ಕೊಂಡಿರುವನು. ಈಗಲೂ ಮಾನವನು ಮಾಂಸಪಿಂಡಗಳ ಕೊಳೆಕೆಸರೇ ಕ್ಷೀರಸಾಗರವೆಂದು ಅವುಗಳಲ್ಲಿ ಈಜಾಡುತ್ತಿದ್ದರೆ?

ಜಪದಲ್ಲಾಸಕ್ತನಾದವನು ಮೊದಲು ತನಗಿಷ್ಟವಾದ ಪರಮಾತ್ಮನ ನಾಮಗಳಲ್ಲೊಂದನ್ನು ಆರಿಸಬೇಕು. ಓಂ, ರಾಮ, ಕೃಷ್ಣ, ಸೂರ್ಯ, ಅಂಬಾ, ಗಣಪತಿ, ಕಾರ್ತಿಕೇಯ, ಅಲ್ಲಾ, ಯೇಸು—ಇವುಗಳಲ್ಲಿ ಯಾವುದಾದರೂ ಒಂದೇ. 'ಅಮಂತ್ರಮಕ್ಷರಂ ನಾಸ್ತಿ' ಎಂದಿರುವುದರಿಂದ ತಾನು ಮೆಚ್ಚಿದ ನಾಮದಲ್ಲಿ ತನಗೆ ಸಂಪೂರ್ಣ ವಿಶ್ವಾಸವಿದ್ದರಾಯಿತು. ಇದಕ್ಕೆ ಜಾತಿ, ಕುಲ, ಮಡಿಮೈಲಿಗೆಗಳ ಭೀತಿಯಿಲ್ಲ. ಇದರಲ್ಲಿ ಸಕಾಮ ಮತ್ತು ನಿಷ್ಕಾಮ ಜಪಗಳೆಂದು ಎರಡು ವಿಧಗಳಿವೆ. ಇವುಗಳಲ್ಲಿ ಸಕಾಮ ಜಪಕ್ಕೆ ಕೆಲವು ನಿಯಮಗಳನ್ನು ಪಾಲಿಸಬೇಕಾಗುವುದು.

ಮನುಷ್ಯನು ತನ್ನ ಸದಿಚ್ಛೆಯ ಸಂಪೂರ್ಣತೆಗಾಗಿ ಜಪಾಸಕ್ತನಾಗಿದ್ದರೆ ಅವನು ಮೊದಲು ತನ್ನ ಪ್ರೀತಿಯ ಭಗವನ್ನಾಮವೊಂದನ್ನು ಆರಿಸಿಕೊಳ್ಳಬೇಕು. ಉ :— ಓಂಕಾರವೆಂದಿಟ್ಟುಕೊಳ್ಳುವಾ. ಇದು ಒಂದಕ್ಷರದ ಮಹಾಮಂತ್ರ. ಇದರಲ್ಲಿರುವ ಅಕ್ಷರದಷ್ಟು ಅಂದರೆ ಒಂದು ಲಕ್ಷ ಜಪವನ್ನು ಕ್ರಮವಾಗಿ ನಿತ್ಯವೂ ಸ್ವಲ್ಪ ಸ್ವಲ್ಪ ಭೋಜನದ ಮೊದಲೇ ಸ್ನಾನಮಾಡಿ ಮಡಿಯುಟ್ಟು ನಿರ್ಮಲ ಮನಸ್ಸಿನಿಂದ ಜಪಿಸಬೇಕು. ರಾಮಜಪವಾಗಿದ್ದರೆ,—ಇದರಲ್ಲಿ ಎರಡಕ್ಷರ ಇರುವುದರಿಂದ ಎರಡು ಲಕ್ಷ ಜಪಿಸಬೇಕು. ಹೀಗೆ ಮಾಡಿದರೆ ಪುನಶ್ಚರಣದ ಒಂದಾವೃತ್ತಿ ಮುಗಿಯಿತು. ಓಂಕಾರವೇ ಸಾಧಕನ ಇಷ್ಟನಾಮವಾಗಿದ್ದರೆ ಒಂದು ಲಕ್ಷ ಜಪ ಸಂಪೂರ್ಣವಾದೊಡನೆ ಅವರ ಹತ್ತನೆಯ ಒಂದಂಶ (10,000) ದಿಂದ ಮಾರ್ಜನ ಮಾಡಬೇಕು. ನೂರನೆಯ ಒಂದಂಶ (1,000) ದಿಂದ ಹೋಮ ಮಾಡಬೇಕು. ನಾವಿರದ ಒಂದಂಶ (100) ದಿಂದ ತರ್ಪಣ ಬಿಡಬೇಕು. ಹತ್ತು ನಾವಿರದ ಒಂದಂಶ (10) ಸಾತ್ವಿಕ ಬ್ರಾಹ್ಮಣರಿಗೆ ಭೋಜನ ಮಾಡಿಸಿ, ಯಥಾನುಶಕ್ತಿ ದಕ್ಷಿಣೆ ಕೊಟ್ಟು ಅವರನ್ನು ಸಂತೋಷಪಡಿಸಬೇಕು. ಇದು ಬಡವರಿಗೆ ಅನುಕೂಲವಾದ ಕ್ರಮ ಅಥವಾ ಓಂಕಾರದ ಒಂದು ಲಕ್ಷ ಜಪ ಮಾಡಿ ಒಂದು ನಾವಿರ ಸತ್ಪುರುಷರಾದ ಬ್ರಾಹ್ಮಣರಿಗೆ ಭೋಜನ ಮಾಡಿಸಬೇಕು. ಇದು ಶ್ರೀಮಂತರಿಗೆ ಅನುಕೂಲವಾದ ಮಾರ್ಗ ಎರಡನೆಯ ಪದ್ಧತಿಯನ್ನು ಒಂದನೆಯಕ್ಕಮಕ್ಕಿಂತ ಉತ್ತಮವೆಂದು ಹೇಳುತ್ತಾರೆ. ಪ್ರತಿಯೊಂ

(೨ನೇ ಪುಟ ನೋಡಿರಿ)

Wish
Season's Best Wishes
From
Sri M. Madhva Raj
Proprietor
KARNATAKA FISHERIES CORPORATION
&
CORONET CANNING COMPANY
RAJAMANDIR,
MALPE, S. INDIA.

ನೋವುಗಳ ಅತ್ಯುತ್ತಮ ಸಂಹಾರಿಣಿ

ಅಮೃತಾಂಜನ

ಪ್ರಜಾಸತ್ತೆಯ ಸಮಸ್ಯೆ

ಪ್ರಜಾಪ್ರಭುತ್ವ ಸಂಪೂರ್ಣ ನಿರ್ದೋಷಿಯೆನ್ನುವಂತಿಲ್ಲವಾದರೂ ಅದು ಒಳ್ಳೆಯದೆಂದು ನಾವು ಸ್ವೀಕರಿಸಿದ್ದೇವೆ ಎನ್ನುವ ಪ್ರಧಾನ ನೆಹರೂರವರ ವರ್ತನೆಯು ಇತ್ತೀಚೆಗೆ ಸಂದೇಹಕ್ಕೆ ಕಾರಣವಾಗಿದೆ. ಆಳುವವರು ಮತ್ತು ಆಳಲ್ಪಡುವವರಲ್ಲಿ ಭೇದವುಳಿಯುವಂತೆ ಮಾಡುವುದು ಹೇಗೆಂಬುದೇ ಪ್ರಜಾಸತ್ತೆಯ ಸಮಸ್ಯೆ.

ಲೇಖಕರು: ಶ್ರೀ ಸೇವನಮಿರಾಜ ಮಲ್ಲ, ಎಂ. ಎ, ಬಿ. ಎಲ್.

ಮೊನ್ನೆ ಸರ್ದಾರ್ ನಗರ್ ಕಾಂಗ್ರೆಸ್ ಅಧಿವೇಶನದಲ್ಲಿ ನೆಹರು ಹೀಗೆಂದರೆಂದು ವರದಿಯಾಗಿದೆ: ಪ್ರಜಾಸತ್ತೆಯು ಇತರ ಸರ್ಕಾರೀ ವಿಧಾನಗಳಿಗಿಂತ ಹೆಚ್ಚು ಒಳ್ಳೆಯದಾಗಿದ್ದರೂ, ಅದು ಕೆಲವುಸಲ "ಹೆಡ್ಡು" ಆಗಬಲ್ಲುದು. ಪ್ರಜಾಸತ್ತೆಯನ್ನು ಕುರಿಗಳನ್ನು ಲೆಕ್ಕಹಾಕುವಂತೆ ತಲೆಗಳನ್ನು ಎಣಿಸುವುದರೊಡನೆ ಸರಿತೂಗಬಾರದು. ಪ್ರಜಾಸತ್ತೆ ಒಳ್ಳೆಯದು. ಇತರ ವಿಧಾನಗಳು ಕೆಟ್ಟುದಾದುದರಿಂದ ಇದನ್ನು ನಾನು ಹೇಳುತ್ತೇನೆ. ಆದ್ದರಿಂದ ನಮಗೆ ಪ್ರಜಾಸತ್ತೆಯನ್ನು ಸ್ವೀಕರಿಸಲೇಬೇಕಾಗಿದೆ. ಅದರಲ್ಲಿ ಒಳ್ಳೆಯ ಅಂಶಗಳೂ ಇವೆ, ಕೆಟ್ಟವೂ ಇವೆ. ಆದರೆ ಅದು ಎಲ್ಲಾ ಸಮಸ್ಯೆಗಳನ್ನೂ ಪರಿಹರಿಸಬಲ್ಲುದೆಂಬುದು ತಪ್ಪು. ಬುದ್ಧಿ ಚಾತುರ್ಯ ಮತ್ತು ಶ್ರಮಗಳು ಮಾತ್ರವೇ ಸಮಸ್ಯೆಗಳನ್ನು ಪರಿಹರಿಸಬಲ್ಲುವು. ಒಂದು ಜನಜಂಗುಳಿ, ಅಥವಾ ಜನ ಸಮುದಾಯವು ಆವೇಶಯುಕ್ತವಾಗಿ ಅಥವಾ ಕೋಪದಿಂದ ಅಪೇಕ್ಷಿಸಿದ್ದನ್ನೆಲ್ಲ ಸ್ವೀಕರಿಸಲಾಗದು.

ಅದೇ ದಿನ (ಜನವರಿ ೧೫) ನೇಪಾಳದ ಅರಸು ಮಹೇಂದ್ರರು ತಮ್ಮ ದೇಶದ ಹದಿನಾಲ್ಕು ರಾಜ್ಯಕೀಯ ಪಕ್ಷಗಳನ್ನು ಬಹಿಷ್ಕರಿಸುವ ಘೋಷಣೆಯಲ್ಲಿ ಇಂತೆಂದರು: ಜನರಲ್ಲಿ ನೂತನ ಜಾಗೃತಿಯನ್ನುಂಟುಮಾಡಲು ಪಂಚಾಯತ ಪ್ರಜಾಸತ್ತೆಯನ್ನು ದೇಶದಲ್ಲಿ ಬೆಳೆಸಲಾಗುವುದು. ತುದಿಯಿಂದ ಪ್ರಜಾಸತ್ತೆಯನ್ನು ಕಟ್ಟುವ ಯತ್ನ ವಿಫಲವಾದ್ದರಿಂದ ತಾನು ಅದನ್ನು ಬುಡದಿಂದ ಬೆಳೆಸುತ್ತೇನೆ. ದೇಶವು ಪ್ರಚಲಿತ ಸಮಸ್ಯೆಗಳನ್ನೆದುರಿಸುವಲ್ಲಿ ರಾಜ್ಯಕೀಯ ಪಕ್ಷಗಳು ತೊಡಕನ್ನುಂಟುಮಾಡಬಹುದಾದ್ದರಿಂದ ತಾನವುಗಳಿಗೆ ಮುಟ್ಟುಗೋಲು ಹಾಕಿದುದು ಸರಿ. ಪ್ರಜಾಸತ್ತಾತ್ಮಕ ರೀತಿಯಲ್ಲಿ ತಾನು ಎಲ್ಲಾ ಪಕ್ಷದ ನಾಯಕರುಗಳಿಗೂ ಈ ಎಂಟು ವರ್ಷಗಳಲ್ಲಿ ಅಧಿಕಾರ ಕೊಟ್ಟರೂ, ಏನೂ ಪ್ರಗತಿಯು ಆಗಲಿಲ್ಲ. ಪ್ರಜಾಸತ್ತೆಗೆ ಅನುಕೂಲವಾದ ವಾತಾವರಣವೂ ಉಂಟಾಗಲಿಲ್ಲ.

ನೇಪಾಳದ ಅರಸರು ಪ್ರಜಾಸತ್ತಾತ್ಮಕ ಸರ್ಕಾರವನ್ನು ಅಂತ್ಯಗೊಳಿಸಿ ಮಂತ್ರಿಗಳನ್ನು ಸೆರೆಯಲ್ಲಿಟ್ಟುದರ ವಿರುದ್ಧ ಪ್ರಧಾನಿ ನೆಹರೂ ತಮ್ಮ ಅಕ್ರೋಶವನ್ನು ಬಹಿರಂಗವಾಗಿ ವ್ಯಕ್ತಪಡಿಸಿದ್ದಾರೆ. ಅದನ್ನು ಪ್ರಜಾಸತ್ತೆಯ ಕೊಲೆಯೆಂದೂ ಅದು ಅಭಿಪ್ರಾಯಪಟ್ಟಿದ್ದಾರೆ. ಆದರೆ ನೇಪಾಳದ ಅರಸರ ಕೃತ್ಯಕ್ಕೆ ಸಮರ್ಥನೆ ಕೊಡುವುದಾಗ ಅವರೆಷ್ಟು ಪ್ರಜಾಸತ್ತೆಯಲ್ಲಿ ನಂಬಿಕೆಯುಳ್ಳವರೆಂದು ಸ್ಪಷ್ಟವಾಗದಿರದು. ಚುನಾವಣೆಯ ಸಮಯ "ಕುರಿಗಳಂತೆ ತಲೆ ಎಣಿಕೆ ಮಾಡುವ" ಪ್ರಜಾಸತ್ತೆ ಬೇಕು ಅವರಿಗೆ. ಅಧಿಕಾರಕ್ಕೇರಬೇಕು. ಅವರ ಪಕ್ಷಕ್ಕೆ ಅಧಿಕಾರ ಸಿಗಬೇಕು. ಉಳಿದ ಪಕ್ಷಗಳೆಲ್ಲ "ಅಲ್ಪ" ಪಕ್ಷಗಳು. 'ಆವೇಶಯುಕ್ತವಾಗಿ ಅಥವಾ ಕ್ರೋಧದಿಂದ' ಏನೆನ್ನುವುದೇ ಅಪೇಕ್ಷಿಸುವವುಗಳು.

ಕಾಂಗ್ರೆಸ್ ಪಕ್ಷದೊಳಗಾದರೂ ನೆಹರೂ ಘೋಷಣೆ ಪ್ರಜಾಸತ್ತಾತ್ಮಕವಾಗಿದೆಯೆ? ರಾಜಕೀಯ ಬಿಕ್ಕಟ್ಟಿನ ತಾಯ್ನಾಡಾದ ಉತ್ತರ ಪ್ರದೇಶದಲ್ಲಿ ಪಕ್ಷದೊಳಗೆ ಬಿಕ್ಕಟ್ಟುಂಟಾಯಿತು. ಚುನಾವಣೆಗಳಲ್ಲಿ ಎರಡು ಬಾರಿ ಸೋತ ಚಂದ್ರಭಾನುಗುಪ್ತ ನೆಹರೂರಿಗೆ ಅಪ್ರಿಯ ವ್ಯಕ್ತಿಯೂ ಗಿದ್ದರು. ಆದರೆ ಇತ್ತೀಚೆಗೆ ಗುಪ್ತಾ ರಾಜ್ಯ ಕಾಂಗ್ರೆಸ್ ಗದ್ದುಗೆಗೇರಿದರು. ಈ ಹೋರಾಟದಲ್ಲಿ ನೆಹ್ರೂ ಬಲಗೈ ಲಾಲ್ ಬಹದ್ದೂರ್ ಶಾಸ್ತ್ರಿಯಂಥವರು ಸೋತರು. ಇದೇ ಕಾಂಗ್ರೆಸ್ ಮೂಲಕ ನೆಹರೂರಿಗೆ ಮುಂದಿನ ಚುನಾವಣೆಗೆ ಬಲಸಿಗಬೇಕಷ್ಟೆ, ಸರಿ. ಗುಪ್ತರು ಶಾಸನಸಭಾ ಸದಸ್ಯರಲ್ಲದಿದ್ದರೂ ಮುಖ್ಯಮಂತ್ರಿ ಪದವಿ ಸಿಕ್ಕಿತು. ಸಂಪೂರ್ಣಾನಂದರ ಮಂತ್ರಿ ಮಂಡಲ ಹೋಗಬೇಕೆಂಬ ಗುಪ್ತರ ಅಪೇಕ್ಷೆ "ಆವೇಶಯುಕ್ತ ಅಥವಾ ಕ್ರೋಧಮಯಿ" ವಾದುದಲ್ಲ! ಅದನ್ನು ನೆಹರೂ ನಡೆಸಿಕೊಟ್ಟರು.

ಆದರೆ ನಮ್ಮ ಮೈಸೂರಲ್ಲಿ ಸರ್ಕಾರದ ಬುಡಗಟ್ಟು ರಾಜ್ಯ ಸುನಾವಣೆಯ ಕಾಲದಿಂದಲೇ ಅಭದ್ರವಾಗಿ ಉಳಿದಿದೆ. ಇತ್ತೀಚೆಗಂತೂ ಪಕ್ಷದೊಳಗೆ ಭಿನ್ನಮತೀಯರು ಹೆಚ್ಚುತಿದ್ದರಲ್ಲದೆ, ಅವರ ಚಟುವಟಿಕೆಯೂ ತೀವ್ರವಾಗತೊಡಗಿದೆ. ಸ್ವತಃ ನೆಹರೂರಿಗೇ ಮನವಿಗಳನ್ನು ಅರ್ಪಿಸಿಯಾಗಿದೆ. ಅವರೇ ಬಂದು ಶಾಸನಸಭಾ ಸದಸ್ಯರನ್ನು ಕಂಡು ಮಾತಾಡಿ ಕೊನೆಗೆ "ಸುಮ್ಮನಿರಿ!" ಎಂದು ಗದರಿಸಿಯೂ ಆಗಿದೆ. ಈಗಲಾದರೂ ಮಂತ್ರಿ ಮಂಡಲದ ವಿರುದ್ಧ ಬಹಿರಂಗವಾಗಿ ಅವಿಶ್ವಾಸ ಸೂಚಿಸುವ ಕೆಲಸದಲ್ಲೇ ಭಿನ್ನಮತೀಯರು ಮಗ್ನರಾಗಿದ್ದರಲ್ಲದೆ, ಅದನ್ನು ಪದಚ್ಯುತಗೊಳಿಸುವ ದಾರಿ ಯಾವುದೆಂದು ಅವರಿಗೆ ತಿಳಿದಿಲ್ಲ.

ಸಂಜಾಬಿ ಸುಬಾ ಘೋರಣೆಗೂ ದ್ವಿಭಾಷಾ ಮುಂಬೈ ರಾಜ್ಯದ ಘೋರಣೆಗೂ ಸಾಮ್ಯವಿದೆ. ನಾಗಾಜನರಿಗೆ ಪ್ರತ್ಯೇಕ ರಾಜ್ಯ ನಿರ್ಮಾಣಮಾಡಿದ್ದು ಈಗ ಅಸಾಮದಲ್ಲಿ ಗುಡ್ಡಗಾಡು ಪ್ರದೇಶದ ಜನರಿಗೆ ಪ್ರತ್ಯೇಕ ರಾಜ್ಯ ಬೇಕೆಂದು ಮುಂದೆ ಬಂದಿರುವ ಅಪೇಕ್ಷೆಯೂ ಇಲ್ಲಿ ಸ್ಮರಣೀಯ. ದ್ವಿಭಾಷಾ ಮುಂಬೈ ರಾಜ್ಯವನ್ನೊಡೆಯಲು ನೂರಾರು ಜನರು ಆತ್ಮಾರ್ಪಣೆ ಮಾಡಿ ಲಕ್ಷಾಂತರ ರೂಪಾಯಿ ಸರ್ಕಾರಕ್ಕೆ ನಷ್ಟವಾಗಬೇಕಾಯಿತು. ಈಗ ಸುಬಾ ಚಳವಳವೂ ಯಾವ ರೀತಿಯಲ್ಲಿ ನಡೆದು ಹೋಗಬಹುದೆಂಬುದನ್ನು ಯಾರೂ ಹೇಳುವಂತಿಲ್ಲ. ಅನ್ಯಾಯವಾಗಿ ಕೇರಳಕ್ಕೆ ದಾನವಾಗಿ ಹೋಗಿರುವ ಕಾಸರಗೋಡಿನಲ್ಲಿ ಚುನಾವಣೆಯ ಫಲಿತಾಂಶದಿಂದ ಅದು ಕನ್ನಡ ನಾಡಿನದ್ದೆಂದು ವಿದಿತವಾಗಿದ್ದರೂ ನೆಹರು ಸರ್ಕಾರ ಅದರ ಬಗ್ಗೆ ಮಾತಾಡುತ್ತಿಲ್ಲ. ಅದರ ಬದಲು ಕನ್ನಡ ನಾಡಿನಿಂದ ಮಹಾ ರಾಷ್ಟ್ರಕ್ಕೆ ಮಧ್ಯಪ್ರದೇಶ ಹೋಗಬೇಕೆಂಬುದನ್ನು ಪರಿಶೀಲಿಸಲು ಸಮಿತಿಯನ್ನು ನಿಯಮಿಸಿದೆ.

ಇವನ್ನೆಲ್ಲ ನೋಡುವಾಗ ನಮ್ಮ ನಾಯಕರಿಗೆ ಪ್ರಜಾಸತ್ತೆಯಲ್ಲಿ ಎಷ್ಟು ಅಚಲವಾದ ವಿಶ್ವಾಸವಿದೆಯೆಂದು ತಿಳಿಯಬಾರದು. ಮತ್ತೆ ದೇಶದ ಆರ್ಥಿಕ ಮತ್ತು ವಿದೇಶಿ ಘೋರಣೆಗಳ ಮಟ್ಟಿಗೆ ಪ್ರಜಾಭಿಪ್ರಾಯಕ್ಕೆ ಎಷ್ಟು ಮನ್ನಣೆಯನ್ನು ಸರ್ಕಾರ ಅಂದರೆ ಆಳುತ್ತಿರುವ ಪಕ್ಷ ಬೆಲೆ ಕೊಡುತ್ತದೆಂಬುದನ್ನು ಇಲ್ಲಿ ವಿವರಿಸಿ ಹೇಳಬೇಕಾದ್ದಿಲ್ಲ.

ಈ ಸಂದರ್ಭದಲ್ಲಿ ಭಾರತದ ಅಧ್ಯಕ್ಷ ಡಾ|| ಪ್ರಸಾದರು ತಮ್ಮ ಪದವಿಯ ಅಧಿಕಾರ ಸೀಮೆಗಳ ಕುರಿತು ಇತ್ತೀಚೆಗೆ ಪ್ರಸ್ತಾಪಿಸಿ ಚಿಕ್ಕ ಬಿರುಗಾಳಿಯನ್ನೆಬ್ಬಿಸಿರುವುದು ಕೌತುಕದ ವಿಷಯ. ಇದು ಗರ್ಭಾಲಯಲ್ಲೇ ಒಮ್ಮೆ ಚರ್ಚೆಗೆ ಎಡೆಗೊಟ್ಟಿತ್ತು; ಭೂಸುಧಾರಣೆಯ ಕ್ಷೇತ್ರದಲ್ಲಿ ಸರ್ಕಾರವು ತೀವ್ರ ಕ್ರಮಗಳನ್ನು ಕೈಕೊಳ್ಳಬಾರದೆಂದು ಡಾ|| ಪ್ರಸಾದರು ನೆಹರೂರವರಿಗೆ ಪತ್ರ ಬರೆದಿದ್ದರೆಂದು ಆಗ ಪ್ರಕಟವಾಗಿತ್ತು. ಆ ಸೋಲೆ ಒಂದು ಪ್ರಕಾರ ಸರಿಯತ್ತಿನಲ್ಲಿ ನೆಹರೂರವರು ಈ ಬಗ್ಗೆ ಉತ್ತರಿಸುತ್ತ ಭಾರತದಲ್ಲಿ ಅಮೆರಿಕದ ಅಧ್ಯಕ್ಷ ಪದವಿಯ ಪದ್ಧತಿ ಇರದೆ ಬ್ರಿಟಿಷಿನಲ್ಲಿರುವಂತೆ ಕ್ಯಾಬಿನೆಟ್ ಮೂಡರಿಯ ಸರ್ಕಾರವಿದೆಯೆಂದು ಹೇಳಿ, ಅಧ್ಯಕ್ಷರು ಮಂತ್ರಿ ಮಂಡಲದ ಸಲಹೆಯಂತೆ ಆಳಬೇಕೆಂದು ಹೇಳಿದ್ದರು. ಈಗಲೂ ನೆಹ್ರೂರವರು ಭಾರತದ ಅಧ್ಯಕ್ಷ ಪದವಿಯನ್ನು ಬ್ರಿಟಿಷಿನ ಅರಸು ಪಟ್ಟದ ಅಧಿಕಾರಕ್ಕೆ ಸಮಾನವಾದುದೆಂದು ಸಾರಿದ್ದಾರೆ.

ಕಾಂಗ್ರೆಸಿನೊಳಗೂ ಅಷ್ಟೆ. ಪುರುಷೋತ್ತಮದಾಸ್ ಟಂಡನ್, ಕೃಪಲಾನಿ, ಥೇಬರ್ ಮುಂತಾದ ಸ್ವಾತಂತ್ರ್ಯ ಸಂತರದ ಕಾಂಗ್ರೆಸ್ ಅಧ್ಯಕ್ಷರುಗಳು ನೆಹ್ರೂರೊಡನೆ ಭಿನ್ನಾಭಿಪ್ರಾಯ ತಾಳಿ ತಮ್ಮ ಪದವಿಯನ್ನು ಬಿಟ್ಟುಕೊಡಬೇಕಾಗಿ ಬಂತು. ಈಗ ಅಧ್ಯಕ್ಷರಾಗಿರುವ ಸಂಜೀವ ರೆಡ್ಡಿಯವರಷ್ಟು ನೆಹ್ರೂರವರು ಉಗ್ರರಾಗಿರುವಂತೆ ತೋರುವುದಿಲ್ಲ.

ಹೀಗಾಗಿ ನೆಹ್ರೂರವರಿಗೆ ಪ್ರಜಾಸತ್ತೆಯ ಮೇಲಿನ ಶ್ರದ್ಧೆ ಕಡಿಮೆಯಾಗಿದೆಯೇ ಎಂದು ಭಾಸವಾಗುವಂತಹ ನಿದರ್ಶನಗಳು ಹೆಚ್ಚೆಚ್ಚಾಗಿ ನಮ್ಮ ಮುಂದೆ ಬರುತ್ತಿರುವುದು ತುಸು ಕಳವಳಕಾರಿ ಸಂಗತಿ. ನಮ್ಮ ದೇಶದ ಎಡಬಲಗಳಲ್ಲಿ ಪ್ರಜಾಸತ್ತೆ ನಶಿಸಿ ಸರ್ವಾಧಿಕಾರ ಅಧಿಕಾರಕ್ಕೆ ಬಂದಿರುವ ಈ ಕಾಲದಲ್ಲಿ ನಮ್ಮ ದೇಶ ಪ್ರಜಾಸತ್ತೆಯ ಬಗ್ಗೆ ಇತರ ಎಲ್ಲಾ ದೇಶಗಳಿಗೂ ಮಾರ್ಗದರ್ಶಕವಾಗಿರಬೇಕೆಂದು ನಾವು ಬಯಸುವುದು ಸ್ವಾಭಾವಿಕ. ನಾವೇ ಪ್ರಜಾಸತ್ತೆಯ ತತ್ವವನ್ನು ಗಾಳಿಗೆ

(೨೩ನೇ ಪುಟ ನೋಡಿರಿ)

ಉತ್ತಮ ಹಾಗೂ ಸುಖಕರ ಪ್ರಯಾಣಕ್ಕಾಗಿ

ವೆಸ್ಟ್ ಕೋಸ್ಟ್ ಟ್ರಾನ್ಸ್‌ಪೋರ್ಟ್

ಸರ್ವಿಸು ಬಸ್ಸುಗಳಲ್ಲಿಯೇ ಪ್ರಯಾಣಿಸಿರಿ.

ನೇರಾದ ಬಸ್ಸು ಪ್ರಯಾಣ ವೆಸ್ಟ್ ಕೋಸ್ಟ್ ಬಸ್ ಸರ್ವಿಸಿನ ಒಂದು ವೈಶಿಷ್ಟ್ಯ!

ಡೈರೆಕ್ಟ್ ಪೆಸೆಂಜರರಿಗೆ ಯೋಗ್ಯ ಪ್ರಯಾಣ ಸೌಕರ್ಯ.

ಮಂಗಳೂರಿನಿಂದ ಮೂಲ್ಕಿ ಉಡುಪಿ ಮಾರ್ಗವಾಗಿ ಸೋಮೇಶ್ವರಕ್ಕೂ, ಕುಂದಾಪುರ ಸೋಮೇಶ್ವರ ಮಾರ್ಗವಾಗಿ ಮಂಗಳೂರಿಗೂ, ಕುಂದಾಪುರದಿಂದ ಸೋಮೇಶ್ವರ ಮಾರ್ಗವಾಗಿ ಧರ್ಮಸ್ಥಳಕ್ಕೂ, ಕಾರ್ಕಳ ಪದುಬಿದ್ರಿ ಮಾರ್ಗವಾಗಿ ಉಡುಪಿಗೂ ಹೋಗಿ ಬರುವ ನೇರಾದ ಸರ್ವಿಸಿನ ವ್ಯವಸ್ಥೆಗಳು.

ಕ್ಲಿಪ್ತ ಸಮಯ! ಯೋಗ್ಯ ಸೌಕರ್ಯ!! ನೇರಾದ ಸಂಪರ್ಕ!!!

ವೆಸ್ಟ್ ಕೋಸ್ಟ್ ಸರ್ವಿಸಿನ ಪ್ರಾಮುಖ್ಯ ವೈಶಿಷ್ಟ್ಯ!

ಎ. ನಾರಾಯಣ ಹೆಗ್ಡೆ, ಪೆಡೂರು, ಮೆನೇಜಿಂಗ್ ಡೈರೆಕ್ಟರ್.

ಡಾ|| ಪಿ. ವಿ. ವ್ಯಾಸ ರಾವ್, ಚೆಯರ್‌ಮ್ಯಾನ್.

ನಾಟಕಕಾರರು:
ಶ್ರೀ ಯಸ್. ವೆಂಕಟರಾಜ.

ಮಹಿಳಾ ಮಣಿ

ಪಾತ್ರವರ್ಗ:-

ಲೀಲಾ, ವಿಶಾಲಾ, ಕುಶಾಲಾ } ಮಹಿಳಾ ಸಮಾಜದ ಕಾರ್ಯಕರ್ತರು.

ಸಾಕಮ್ಮ— ಮನೆಯೊಕೆ.

ಅಶ್ವತ್ಥ—ದ್ರೋಣ—ಹನುಮಂತ—ಅಪ್ಪಚ್ಚಿ—ಅಮ್ಮಚ್ಚಿ— } ಮಕ್ಕಳು.

× + × ×

ಸ್ಥಳ— ಮನೆಯ ವಸಾರ.
ಸಮಯ— ಮುಂಜಾನೆ.

—ಮಹಿಳಾ ಸಂಘದ ಕಾರ್ಯಕರ್ತರಾದ ಸರ್ವ ಶ್ರೀಮತಿ ಲೀಲಾಬಾಯಿ, ವಿಶಾಲಾ ಬಾಯಿ, ಕುಶಾಲಾಬಾಯಿ ಇವರು ಮೂವರು ಒಂದು ಮನೆಯ ಮುಂದೆ ನಿಂತು—

ವಿಶಾಲಾಬಾಯಿ-- ನೋಡಿ ಲೀಲಾ ಬಾಯಿಯವರೆ! ನಾವು ಈ ಹೊತ್ತು ಹೊರಟ ಗಳಿಗೆಯೇ ಒಳ್ಳೆಯದಲ್ಲ. ಹೋದಲ್ಲೆಲ್ಲಾ ನಾಸ್ತಿಯೇ! ಆ ಶ್ರೀಮತಿ ವಸಂತ ಸೆಟ್ಟರಲ್ಲಿಗೆ ಹೋದರೆ ಅವರು ಈ ಬೆಳಿಗ್ಗೆ ಮುಂಜಾನೆ ಎಲ್ಲೋ ಒಂದು ಮದುವೆಗೆ ಹೋಗಿದ್ದಾರಂತೆ. ಇನ್ನು ರಾಜೀವೀ ನಾಯಕರನ್ನು ಕಾದು ಕಾದು ಸಾಕಾಯ್ತು. ಈಗ ಯಾವುದೋ ಇದೊಂದು ಗ್ರಹಜಾರದ ಮನೆಯ ಮುಂದೆ ಬಂದು ನಿಂತಿದ್ದೇವೆ!

ಕುಶಾಲಾಬಾಯಿ — ಅದೇ! ನಾನು ಹೊರಡುವಾಗಲೇ ಹೇಳಿದ್ದೆ ನೋಡಿ— ರಾಹುಕಾಲ ಬಿಟ್ಟು ಹೊರಡಬೇಕೂಂತ. ಆದರೆ ನೀವು ಕೇಳಲಿಲ್ಲ.

ಲೀಲಾಬಾಯಿ—ಹೌದು ಕುಶಾಲಾ ಬಾಯಿಯವರೆ! ನೀವು ಹೇಳಿದ್ದು ಸರಿ. ಆದರೆ ಹಾಗೆಲ್ಲಾ ಗಳಿಗೆ ನೋಡಿ ಹೊರಡುವುದೆಂದರೆ ನಾವೆಲ್ಲ ಹೊರಡುವ ಹಾಗೆಯೇ ಇಲ್ಲ. ಅದರಲ್ಲೂ ಇವತ್ತು ಆದಿತ್ಯವಾರ. ಸಂಜೆ "ಸಟ್ಟಾ ಬಜಾರ್" ಸಿನೇಮಕ್ಕೆ ಹೋಗಬೇಕೂಂತ ಮೊನ್ನೆಯೆ. ಪ್ರೋಗ್ರೇಮ್ ಹಾಕಿದ್ದೇವೆ. ಮತ್ತೇನು ಮಾಡುವುದು?

ವಿಶಾಲಾ—ಹೋಗಲಿ ಬಿಡಿ. ಈಗ ಚರ್ಚೆಮಾಡಿ ಏನೂ ಉಪಯೋಗವಿಲ್ಲ. ಹೇಗೂ ಬೀದಿ ತಿರುಗಲಿಕ್ಕೆ ಹೊರಟಾಯಿತು. ಈ ಮನೆಯೊಂದನ್ನು ನೋಡಿ ಬಿಡೋಣ.

ಕುಶಾಲು— ಎಂದರೆ ಈ ಮನೆಯವರ ಪರಿಚಯವಿದೆ ತಾನೆ?

ವಿಶಾಲಾ—ಪರಿಚಯ ನೋಡಿದ ಮೇಲೇನೇ ಆಗಬೇಕು. ಬೇಡುವ ಕರ್ಮಕ್ಕೆ ಪರಿಚಯವಿಲ್ಲದ ಮನೇನೇ ಉತ್ತಮ.

ಕುಶಾಲು — ಹಾಗಾದರೆ ಇಲ್ಲಿ ಯಾರೂ ಕಾಣುವುದಿಲ್ಲವಲ್ಲ. ಇವರನ್ನ ಏನೂಂತ ಕರೆಯಬೇಕು?

ಲೀಲಾ— ಓಯ್—ಎಂತ ಕೂಗಿದರೆ ಹೊರಗೆ ಬಂದಾರು.

ಕುಶಾಲು— ಛೆ! ಓಯ್ ಎಂತ ಕರೆದರೆ ಬಹಳ insult ಅಲ್ಲವೆ?

ಲೀಲಾ—ಅದೇ ತಾಪತ್ರಯ, ಇವರು ಮನೆಯಮುಂದೆ ಒಂದು sign board ಸಹ ಹಾಕಿಸಲಿಲ್ಲ.

ವಿಶಾಲ— ಎಂದರೆ ಇವರ ಯಜಮಾನರು ಏನೂ ಅಲ್ಲವೋ ಏನೋ!

ಕುಶಾಲಾ—ಏನೂ ಅಲ್ಲದವರ ಮನೆಗೆ ನಾವು ಹೋದರೆ ಏನು ಪ್ರಯೋಜನ?

ಲೀಲಾ—ಏನೂ ಅಲ್ಲದೆ ಹೋದರೂ ಮನೆ ದೊಡ್ಡದಿದೆ. ಚೆನ್ನಾಗಿದೆ. ಏನೂ ಇಲ್ಲದೆ ಹೋದರೆ ಮನೆ ಇಷ್ಟು ನಾಜೂಕಾಗಿ ಇರುತ್ತಿರಲಿಲ್ಲ. ಅಲ್ಲದೆ ನಮ್ಮಂತವರ ಮಿಂಚಿನದಾಳಿಗೆ ಹೆದರಿಯೇ Sign board ಹಾಕಿಸದಿರಬಹುದು.

ವಿಶಾಲಾ—ಏನು ಲೀಲಾ ಬಾಯಿಯವರೆ! ನಾವೇನೋ ದರೋಡೆಗೆ ಹೊರಟವರ ಹಾಗೆ ಮನೆ ವಿಚಾರ ಮಾಡುತ್ತಾ ನಿಂತಿದ್ದೇವಲ್ಲ!

ಕುಶಾಲು—ದರೋಡೆಯಲ್ಲದೆ ಮತ್ತೆ ನು? ನಮ್ಮ ಕಾಲ ಬುಡಕ್ಕೆ ಯಾರೂ ಬಾರದೆ ಹೋದರೆ ನಾವೇ ಅವರ ಮನೆ ನೋಡಿ ಹೊಕ್ಕಬೇಕು!

ಲೀಲಾ—ಹೌದು. ಇದು ಬಹಳ ಕೆಟ್ಟ ಊರು. ನಮ್ಮ ಸೇವೆಯ ಸುಖಕಷ್ಟ ಯಾರಿಗೂ ಅರ್ಥವೇ ಆಗೋದಿಲ್ಲ!

ವಿಶಾಲಾ—ಅದರೂ ಚಿಂತಿಲ್ಲ ಮೆಲ್ಲ ಮೆಲ್ಲನೆ ಅರ್ಥವಾಗದೆ ಹೋಗುತ್ತದೆಯೆ? (ಮುಂದೆ ನೋಡಿ) ಇವರು ಯಾರಾದರೂ ವಕೀಲರೋ ಗುಮಾಸ್ತರೊ ಮನೆಯವರಾಗಿದ್ದರೆ ಚೆನ್ನಾಗಿತ್ತು. ನಿಮ್ಮನ್ನು ಮುನ್ಸೀಫರ ಹೆಂಡತೀಂತ ಗೊತ್ತು ಹೆಚ್ಚು ಖಂಡಿತ ನೆಂಬರಿಗಾಗುತ್ತಿದ್ದರು.

ಲೀಲಾ—ಏಕೆ? ಏನಾದರೂ ವ್ಯಾಪಾರಗೀಪಾರ ಕಸುಬಿನವರಾದರೂ ಚಿಂತಿಲ್ಲ. ನೀವು ಶ್ರೀಮತೀ ಸೇಲ್ಸ್‌ಟೇಕ್ಸ್ ಆಫೀಸರರು ಇದ್ದೀರಲ್ಲ?

ಕುಶಾಲು— (ನಗುತ್ತಾ) ಬಹಳ ಚೆನ್ನಾಯಿತು. ಹಾಗಾದರೆ ನಾನಂತೂ ಬಂದುದು ನಿರರ್ಥಕ!

ವಿಶಾಲ— ಛೇ-ಹಾಗುಂಟೆ? ನೀವು ಈ ವಾರ್ಡಿನ ಮೆಂಬರರು. ನಿಮ್ಮನ್ನು ಬಿಟ್ಟರೆ ನಮಗೆ ಗತಿಯೇ ಇಲ್ಲ. ನಮ್ಮನ್ನು ಯಾರು ಕೇಳುತ್ತಾರೆ?

ಕುಶಾಲು— ಹೋಗಲಿ ಬಿಡಿ. ಈಗ ಇವರನ್ನು ಹೊರಗೆ ಕರೆಯೋಣ, ಒಳಗಡೆ ತುಂಬಾ ಮಕ್ಕಳ ಗಲಾಟೆ ಕೇಳುತ್ತದೆ. ಏನೋ ದೊಡ್ಡ ಸಂಸಾರವಿರಬೇಕು.

ಲೀಲಾ—ಎಂದರೆ ಅವರಿಗೂ ತಾಪತ್ರಯ-ನಮಗೂ ತಾಪತ್ರಯ, ಹೇಗೂ ಆಗಲಿ—ಓಯ್— ಅಮ್ಮಾವ್ರೆ! ಎಂತ ಕೂಗಿ ಕರೆದು ಬಿಡಿರಿ.

ಕುಶಾಲು—(ಒಮ್ಮೆ ಕೆಮ್ಮಿಕೊಂಡು ಗಟ್ಟಿಯಾಗಿ) ಓಯ್—ಅಮ್ಮಾವ್ರೆ—

(ಒಳಗಿನಿಂದ ಸ್ವಲ್ಪ ಸದ್ದುಕೇಳಿ ಕೂನೆಗೆ ಮಕ್ಕಳ ಗಲಭೆ ನಿಲ್ಲುತ್ತದೆ. ಒಬ್ಬಳು ಹೆಂಗಸು ಒಳಗಿನಿಂದ ಹೊರಗೆ ಬಂದು)

ಮನೆಯವರು— ಓಹ್—ನೀವಾ ಕರೆದವರು— (ಪಕ್ಕದಲ್ಲಿದ್ದ ಕುರ್ಚಿಗಳನ್ನು ಸರಿಗೊಳಿಸಿ) ಬನ್ನಿ ಕೂತುಕೊಳ್ಳಿರಿ.

ಲೀಲಾ— ಆಯ್ತು, ಪರವಾಯಿಲ್ಲ. ಬನ್ನಿ ವಿಶಾಲಾಬಾಯಿಯವರೆ ಕೂತುಕೊಳ್ಳಿ. (ಎಂದು ಎಲ್ಲರೂ ಕುರ್ಚಿಯೆಳೆದು ಕುಳಿತುಕೊಳ್ಳುವರು)

ಮನೆಯವರು — (ತಾನೂ ಕುಳಿತು) ಆಯ್ತು. ಇವರು ವಿಶಾಲಾ ಬಾಯಿಯವರಾಯಿತು. ಇನ್ನು ನೀವು—ಇವರು?

ಕುಶಾಲು—ಹೌದು ನೋಡಿ. ಇವರು ಶ್ರೀಮತಿ ಸೇಲ್ಸ್ ಟೇಕ್ಸ್ ಆಫೀಸರರು ವಿಶಾಲಾ ಬಾಯಿಯವರು. ನಿಮಗೆ ಇವರ ಪರಿಚಯವಿದೆಯೋ ಏನೋ—

ಹೆಂಗಸು—ಇಲ್ಲಪ್ಪ. ನಾವೇನೂ ಯಾರಿಗೂ ಸೇಲ್ಸ್ ಟೇಕ್ಸ್‌ಕೊಡೋದಿಲ್ಲ.

ಲೀಲಾ—ಹಾಗಾದರೆ ನಿಮಗೆ ವ್ಯಾಪಾರ ವಹಿವಾಟು ಏನೂ ಇಲ್ಲ—

ಹೆಂಗಸು— (ತಲೆದೂಗಿ) ಊಹೂಂ.

ಕುಶಾಲು— (ಲೀಲಾ ಬಾಯಿಯವರನ್ನು ತೋರಿಸಿ) ಇವರು ನೋಡಿ— ನಮ್ಮೂರಿನ ಶ್ರೀಮತಿ ಮುನ್ಸಿಫ್ ದೊರೆ ಸಾನಿಯವರು— ಲೀಲಾ ಬಾಯಿಯವರು. ಇವರದಾವ್ತರೆ ನಿಮಗೆ ಗೊತ್ತಿರಬಹುದು.

(ಮುಂದೆ ಸುಟ ನೋಡಿರಿ)

Regd.

BICCO

Trade Mark.

ಮಕ್ಕಳ ಮಮತೆಯ "ಬಿಕ್ಕೊ"ರವರ

ಗ್ಲುಕೋಸ್ ಕೂಡಿದ
ಪೆಪ್ಪರ್ ಮಿಠಾಯಿಗಳು—ರುಚಿಕರ
ಸೇವನೆಗೆ ಪ್ರಸಿದ್ಧಿಪಟ್ಟಿವೆ.



"ಬಿಕ್ಕೊ"ರವರ
ಹಣ್ಣಿನ ಶರಬತ್ತುಗಳು
ಅತಿಥಿಗಳ ಆದರದ ಸತ್ಕಾರಕ್ಕೆ ಅತ್ಯನುಕೂಲ.

ನಮ್ಮ ಎಲ್ಲಾ ತಯಾರಿಕೆಗಳು, ಮಂಗಳೂರು ಭವಂತಿ ರಸ್ತೆಯಲ್ಲಿರುವ ನಮ್ಮ ಡಿಪೊದಲ್ಲಿ ಸದಾ ದೊರಕುತ್ತವೆ.

ತಯಾರಕರು:

ಭಾರತ್ ಇಂಡಸ್ಟ್ರಿಯಲ್ ಎಂಡ್ ಕ್ಯಾನಿಂಗ್ ಕಂಪೆನಿ ಲಿಮಿಟೆಡ್,
ಕಾಪು, ದ. ಕ.

ಅಭಿಸಾರ

ಇರುಳ ಮುನ್ನ
ಮೆಂತು ನಿನ್ನ
ಸಾರೆ ಮನೆಯಿನಿಳಿಯುವೆ?
ಎಂದು ಮನೆಯ
ಕೆಲಸದಿನೆಯಂ
ಬಳಸಿ ಹೊತ್ತು ಕಳೆಯುವೆ. ೬

ಎದೆಯ ಹಿಳ್ಳ
ನಿರಿವ ಸಿಳ್ಳ
ಕೇಳಿ ಗಿಳಿಯ ದೂರುವೆ—
'ತಾಳನಲ್ಲ!'೨
ಎಂದು ಚಲ್ಲಿ
ಕಣ್ಣು ನಿನಗೆ ಬೀರುವೆ. ೧೨

ಕೆಲಸದಿ ತೆರಳಿ
ಸಿಲ್ಲದೆ, ತೆರ
ಳಲ್ಲದೆ ರವಿ, ಹೇಸುವೆ;
ಎನ್ನನಳಕಟ
ಇಂತು ನಿಕಟ
ಕಾಣ ನಿನ್ನ ಕಾಸುವೆ೫. ೧೮

ಇನಿಯ, ಕಾದ
ಡನಿತೆ ಕಳಾದ
ಲಿನಿದಹುದೆನೆ ತಡೆವೆನೆಂ
ದೇಣಿಸ ಬೇಡ—
ಸುಳಿವ ಬೇಡ
ಕರಂಬಿಗಿಂಬುಗೊಡುವೆನೆ? ೨೪

ಳಬಿಡುವು ದೊರೆಯ
ದೆಂತುಟೆರೆಯಂ
ನಿನ್ನಡಿಗಭಿಸರಿಸುವೆಲ?
ತಡಕೆ ಕೆರಳಿ
ನಡೆಯೆ, ಮರಳಿ
ನಿನ್ನ ನೆಂತು ಬರಿಸುವೆ? ೩೦

ಎಂದು ಹಗಲೆ
ಮನೆಯಿನಗಲೆ
ಸೇರಲಿನೆಯ ನಿನ್ನನು,
ಮನೆಯ ಮಂದಿ
ಮರಳಿ ಹೊಂದಿ
ಕೊಳುವುದುಂಟೆ ನನ್ನನು? ೩೬

ಬಲ್ಲೆ ನೆರೆಯ
ಳಹೇವ ತೊರೆಯ
ದೆಸಗೆ ನಿನ್ನ ನೆನ್ನವಂ,
ಅಕಟ ಜೀವ
ದನಿತೆ ಹೇವ—
ಕರೆದು ಕೊಳಲೆ ೧೦ಚುನ್ನವಂ? ೪೨

ತೊರೆಯಲಂಜ
ದೇನುಮಂ, ಜ
ನಾಪವಾದ ಗಾಸಿಯಂ
ನಳುಕಿ ತೊನೆಯಂ೧೧
ಲಿಂತುಟನೆಯ
ಶಂಕಿಸದಿರು ದಾಸಿಯಂ. ೪೮

ಇನೆಯನಡಿಗೆ
ಮನೆಯ ಕಡೆಗೆ
ಪ್ರಣಯ ವಿನಯ ೧೨ತುಯ್ಯಲು,
ಪ್ರಣಯಮೂಡೆ,
ವಿನಯ ಮೇಡೆ,
೧೩ತಿದಿಯೊ ಎದೆಯ ೧೪ಸುಯ್ಯಲು!೧೫

ಅಡಡೆರೆಯ
ಕಣ್ಣ ಮರೆಯ
ದೃಷ್ಟಿ ಎಂತೊ ಲಕ್ಷದಿ,೧೫
ಅಂತೆ ಮನೆಯ
ಸೆರೆಯೊಳಿನೆಯ
ನಿನ್ನ ತಳೆವೆ ವಕ್ಷದಿ. ೬೦

ಇದುಗೊ ಬೇಸ
ರಿಸಿದ ನೇಸ
ರಾರಿ ಬಾನ ಸಜ್ಜೆಯಂ೬
ಇರುಳು ತೆರೆಯ
ಬಿಚ್ಚಿ ತೆರೆಯ
ನೀಗಿ ಹೊವೆದ ಲಜ್ಜೆಯ. ೬೬

ಇನಿಸೆ ತಾಳು,
ಸೊಡರ ಬಾಳು
ಬೇಗನೆ ಕೊನೆವರಿವುದೆ,
ಕದವ ತೆರೆವೆ,
ಹೊರಟು ಬರುವೆ—
ಇರುಳು ಬೇರೆ ೧೭ಹರೆವುದೆ? ೭೨

—ಗೋವಿಂದ ಪೈ.

(ಒಲಿದು ಬಳಸಾರುತ್ತಿರುವ ದೇವರನ್ನು ಉದ್ದೇಶಿಸಿ ನುಡಿದ ಮಾತಿದು)

---

೧ ಇನೆಯ, ಎರೆಯ = ಪ್ರಿಯ. ೨. ತಾಳ ನಲ್ಲ = (೧) ತಾಳನು + ಅಲ್ಲ (ಗಿಳಿಯನ್ನು ಉದ್ದೇಶಿಸಿ), ತಾಳ + ನಲ್ಲ = ನಲ್ಲ (= ಪ್ರಿಯ) ನನ್ನು ಉದ್ದೇಶಿಸಿ. ೩. ಚಲ್ಲ = ಉಲ್ಲಾಸ. ೪. ತೆರಪು, ಬಿಡುವು = ಅವಕಾಶ. ೫. ಕಾಸು (ಕಾಯಿಸು) = ಕಾಯುವಂತೆ ಮಾಡುವಂ. ೬. ಕಾದಲ್ = ಪ್ರೇಮ. ೭ ಅಂಬಿಗೆ = ಬಾಣಕ್ಕೆ. ೮. ಅಭಿಸರಿಸು = ಪ್ರಿಯನನ್ನು ಸೇರಲಿಕ್ಕೆ ಹೋಗು. ಅಭಿಸಾರಿ = ಪ್ರಿಯನನ್ನು ಸೇರಲಿಕ್ಕೆ ಹೋಗೋಣ. ೯. ಹೇಸ = ನಾಚಿಕೆ. ೧೦. ಚುನ್ನ = ನಿಂದೆ. ೧೧. ತೊನೆ = ಹೀಗೊ ಹಾಗೊ ಎಂದು ಮನಸ್ಸಿನಲ್ಲಿ ಅಂದೋಲಿಸು. ೧೨. ತುಯ್ಯಲು = ನೆಳೆ. ೧೩. ತಿದಿ = dellows. ೧೪. ಸುಯ್ಯಲು = ನಿಟ್ಟುಸುರು. ೧೫. ಲಕ್ಷ = ಗುರಿ. ೧೬. ಬಾನ (= ಬಾನನ) = ಆಕಾಶದ, ಸಜ್ಜೆ = ಶಯ್ಯಾಗೃಹ. ೧೭. ಹರೆ = ಬೆಳಗಾಗು, ಮುಂಜಾನೆಯಾಗು (to dawn). ಬೇರೆ = ಅನ್ಯಥಾ (otherwise).

ವೈದ್ಯರತ್ನಂ ಪಿ. ಎಸ್. ವಾರಿಯರ್‌ರ

ಆರ್ಯ ವೈದ್ಯ ಶಾಲಾ,

ಕೋಟ್ಟಕಲ್ (ಕೇರಳ ರಾಜ್ಯ)

ಸ್ಥಾಪನೆ: 1902

ಹೆಡ್ ಆಫೀಸು: ಕೋಟ್ಟಕಲ್ ಫೋನ್ ನಂ. 44 (ತಿರೂರು)

ಶಾಖೆಗಳು:

1. ಕೋಝಿಕೋಡ್ (ಫೋನ್ ನಂ. 2155) ಕಲ್ಲಾಯಿ ರೋಡ್.
2. ತಿರೂರು (ಫೋನ್ ನಂ 31) ಸ್ಟೇಶನ್ ರೋಡ್.
3. ಪಾಲ್ಘಾಟ್ (ಫೋನ್. ನಂ 104) ವಡಕ್ಕಂತರ.
4. ಸೇಲ್ಸ್ ಡಿಪೋ, ಜಿ. ಬಿ. ರೋಡ್.
5. ಎರ್ನಾಕುಳಂ (ಫೋನ್ ನಂ 674) ಮಹಾತ್ಮಾ ಗಾಂಧೀ ರೋಡ್.
6. ತ್ರಿವೆಂಡ್ರಮ್ (ಫೋನ್ ನಂ. 3924) ಸ್ಟೇಚು ರೋಡ್.
7. ಈರೋಡು (ಫೋನ್ ನಂ. 172) ಮುನ್ಸಿಪಾಲ್ ಬಸ್ ಸ್ಟ್ಯಾಂಡಿನ ಎದುರು.

ಕೋಟ್ಟಕಲ್‌ನಲ್ಲಿರುವ ನಮ್ಮ ಹೆಡ್ ಆಫೀಸು ಮತ್ತು ಶಾಖೆಗಳಲ್ಲಿ ಶುದ್ಧ ಸ್ಟಾಂಡಾರ್ಡ್ ಆಯುರ್ವೇದಿಕ್ ಔಷಧಿಗಳು ಮತ್ತು ತಜ್ಞ ವೈದ್ಯಕೀಯ ಸಲಹೆ ದೊರೆಯುತ್ತವೆ. ಕೋಟ್ಟಕಲ್‌ನ ನಮ್ಮ ಪ್ರಧಾನ ವೈದ್ಯಾಧಿಕಾರಿಯವರು ಪತ್ರವ್ಯವಹಾರದ ಮೂಲಕ ವೈದ್ಯಕೀಯ ಸಲಹೆ ನೀಡುವರು. ಪಿಝಿಚಿಲ್, ನವರಕಿಝಿ ಮೊದಲಾದ ವಿಶಿಷ್ಟ ಚಿಕಿತ್ಸೆಗಳನ್ನು ನಮ್ಮ ಪ್ರಧಾನ ವೈದ್ಯಾಧಿಕಾರಿಗಳ ಮೇಲ್ವಿಚಾರಣೆಯಲ್ಲಿ

ಗೋಲ್ಡನ್ ಜುಬಿಲಿ ನರ್ಸಿಂಗ್ ಹೋಮ್

ಇಲ್ಲಿ ನಡೆಸಲಾಗುತ್ತದೆ.

ಮೆನೇಜಿಂಗ್ ಟ್ರಸ್ಟಿ.

ಇಂದಿನ ಪ್ರಜಾಪ್ರಭುತ್ವದಲ್ಲಿ ಮಾಧ್ಯಮಿಕೋತ್ತರ ಶಿಕ್ಷಣದ ಯೋಜನೆ

ಮಾಧ್ಯಮಿಕೋತ್ತರ ಶಿಕ್ಷಣವಿಂದು ಸಾಮೂಹಿಕವಾಗಿ ಶೀಲಯುಕ್ತ ಜ್ಞಾನವಂತಿಕೆಗೆ ಅಪವಾದವೆನಿಸಗುತ್ತಿದೆ. ಇದನ್ನು ದೂರೀಕರಿಸಲು ಅಧಿಕಾರಿ ವರ್ಗ ಮುಂದಾಗದಿದ್ದರೆ, ಜನತೆಯೇ ಅಣಿಯಾಗಬೇಕಾಗುವ ಅವಕಾಶ ಬಾರದೆಯೆಯದು.

ಎಚ್ಚರಿಸಿದವರು: ಶ್ರೀ ಬಿ. ಎಚ್. ಶ್ರೀಧರ.

ಇತ್ತೀಚೆಗೆ ದಕ್ಷಿಣ ಭಾರತದ ವಿಶ್ವವಿದ್ಯಾನಿಲಯಗಳ ವೈಸ್ ಛಾನ್ಸಲರುಗಳು ಆಂಗ್ಲಮಾಧ್ಯಮವನ್ನೇ ಉಚ್ಚ ಶಿಕ್ಷಣದಲ್ಲಿ ಕಾಯ್ದುಕೊಂಡು ಹೋಗುವ ನಿರ್ಣಯಕ್ಕೆ ಬಂದರಂತೆ ಏಕೆ? ಶಿಕ್ಷಿತನ ಮುಖ್ಯ ಗುರಿ ನೌಕರಿ—ಎಂಬುದರಿಂದ. ಇಂಥ ವಿದ್ಯಾವಂತರ ಏರುವ ಸಂಖ್ಯೆ ರಾಷ್ಟ್ರಕ್ಕೆ ಎಂಥ ಸವಾಲೆನಿಸುತ್ತಾರೆ? ಎಂಬುದನ್ನು ಸಮೂಹದ ಹಿರಿಯರು ಅರಿತಂತೆ ತೋರುವುದಿಲ್ಲ. ವಿಶ್ವವಿದ್ಯಾನಿಲಯಗಳ ನಾಯಕ ಸ್ಥಾನದಲ್ಲಿರುವವರು ದೇಶಭಾಷೆಯನ್ನು ಮಾಧ್ಯಮವನ್ನಾಗಿ ಮಾಡಲು ಯಾವ ಯೋಜನೆಯನ್ನೂ ಮಾಡದೆ ಪಠ್ಯ ಪುಸ್ತಕದ ಅಭಾವ ಮುಂತಾದ ಕಾರಣಗಳನ್ನೊಡ್ಡುತ್ತ ಬಂದುದು ಅಭಾರತೀಯ ಅಭಿಮಾನಕ್ಕೆ ಮಹಾ ನಿದರ್ಶನ. ಇಂಥ ಅಭಾರತೀಯ ಭಾರತ ವಾಸಿಗಳಿಗೆ ಬಹಳ ಕಾಲ(ಅಧುನಾ ಎಂದೆಂದಿಗೂ) ಭಾರತೀಯರ ಸಂತಾನವು ಕಿಮ್ಮಂತೆಯೇ ತ್ರಿಶಂಕುಗಳಾಗಿರುವುದೇ ಬಯಕೆ ಎಂದು ಕಾಣುತ್ತದೆ!

ಭಾರತೀಯನ ಸರಾಸರಿಯ ಆಯುರ್ಮಾನ ಇಷ್ಟುಮೇಲಿಲ್ಲ ಎಂಬುದನ್ನು ನೆನೆದುಕೊಂಡರೆ ವಿಶ್ವವಿದ್ಯಾನಿಲಯದ ಕೊನೆಯ ಹಂತದ ವಿದ್ಯಾಭ್ಯಾಸವನ್ನು ಮುಗಿಸಲು ಪ್ರತಿ ವರ್ಷವೂ ಪಾಸಾಗುತ್ತ ಹೋಗುವ ವಿದ್ಯಾರ್ಥಿಗೆ ೨೪ ವರ್ಷ ವರ್ಷ ವಯಸ್ಸಾಗಬೇಕಾಗುವುದೂ ಅಷ್ಟರ ಮೇಲೂ ಆತನಿಗೆ ತನ್ನ ವಿಷಯದಲ್ಲಿ ಆಳವಾದ ಜ್ಞಾನ ಸಾಕಷ್ಟಿಲ್ಲದಂತಾಗಿರುವುದು ನಮ್ಮ ಪದವೀಧರರ ಸರ್ವರೋಗ ಬೀಜ. ಸಮಾಜದಲ್ಲಿಯ ಸ್ಥಿತಿಗತಿಗಳ ಎಲ್ಲ ಪ್ರತಿಬಿಂಬಗಳನ್ನೂ ಶಿಕ್ಷಣ ನೇತೃಗಳಲ್ಲಿ ನಾವಿಂದು ಕಾಣುವಂತಾದುದರಿಂದ ಅವರಿಗೆ ಶಿಕ್ಷಣದ ಭಾರತೀಯ ಪೂರ್ಣ ಪ್ರಜ್ಞೆ ಹೊಳೆಯುವುದೇ ಇಲ್ಲ. ಶಿಕ್ಷಣದ ಆಡಳಿತವೂ ಹಿಂದು ಆಡಳಿತ; ವಿಕ್ಕಿ ಆಡಳಿತ ಕ್ಷೇತ್ರಗಳಲ್ಲಿಯಂತೇ ಇಲ್ಲೂ ಯಥೇಷ್ಟ 'ಅನ್ಯಾಯಾರೇಸು ವ್ಯಾಪಾರಃ' ನಡೆಯುತ್ತಿದೆ.

Pre-Univesity Course ಮಾಧ್ಯಮಿಕೋತ್ತರ ಶಿಕ್ಷಣದ ಒಂದು ವರ್ಷದ ಕತೆ ಕೇವಲ ವ್ಯರ್ಥೆಯಾಗಿ ಪರಿಣಮಿಸಿದೆ. ಆದರಿಂದ ವಿದ್ಯಾರ್ಥಿಗಳು ಪಡೆಯುವ ಪ್ರಯೋಜನವನ್ನು ಶೈಕ್ಷಣಿಕ ಮನಃಶಾಸ್ತ್ರಿಜ್ಞನು ಪ್ರಾಯೋಗಿಕವಾಗಿ ಪರೀಕ್ಷಿಸಿ ನೋಡಿದರೆ ಬಂಡವಾಳವೆಷ್ಟು ಬಡಾಯಿಯೆಷ್ಟು ಎಂಬುದು ಸತ್ಯವಾಗಿ ಹೊರಬೀಳುತ್ತದೆ. ಆ ತ್ರಿಶಂಕು ರೂಪದ ಸಂಕವನ್ನು ಕೆತ್ತೊಗೆಯುವುದು ಸರ್ವೋತ್ತಮ. ಮಧ್ಯಮಿಕದ ಕೊನೆಯ ವರ್ಗಗಳಲ್ಲಿ ತಾಂತ್ರಿಕ ಅಥವಾ ಇತರ ಶಿಕ್ಷಣಗಳನ್ನು ಬೇರೆ ಸಂಸ್ಥೆಗಳಲ್ಲಿ ಪಡೆಯಲು ವಿದ್ಯಾರ್ಥಿಗಳಿಗೆ ಅರ್ಹತೆ ಬರುವಂತೆ ವಿದ್ಯಾಖಾತೆಯವರು ಯೋಚಿಸಬಹುದು. ಆದಾಗದಿದ್ದರೆ ಈ ಮಾಧ್ಯಮಿಕೋತ್ತರ ವರ್ಷದಲ್ಲಿ ವಿಜ್ಞಾನ—ಕಲೆ—ವಾಣಿಜ್ಯಗಳ ಕಾಲೇಜುಗಳು (General Education) ಸಾಮಾನ್ಯ ಶಿಕ್ಷಣದ ಸ್ವರೂಪವನ್ನು ದೃಢಪಡಿಸುವಂಥ ಒತ್ತಾಯದ ತರಬೇತನ್ನು ವಿದ್ಯಾರ್ಥಿಗಳಿಗೆ ಕೊಡಲು ಹವಣಿಸಬೇಕು. ವಿಶೇಷಜ್ಞತೆಯು ಅಭ್ಯಾಸಕ್ರಮವು ಮೂರು ವರ್ಷಗಳ ಡಿಗ್ರಿಕೋರ್ಸುಗಳಿಂದ ಆರಂಭವಾಗುವುದರಿಂದ ಅದಕ್ಕೆ ಅರ್ಹರನ್ನಾಗಿ ಮಾಡುವಂಥ ತರ್ಕ, ಭಾರತೀಯ ಪ್ರಾಚೀನೇತಿಹಾಸ, ಸಂಸ್ಕೃತ, ಜಗತ್ತಿನ ಭೂಗೋಲಶಾಸ್ತ್ರ, ಇಂಗ್ಲೀಷು ಎಂಬಿಷ್ಟನ್ನು ಒತ್ತಾಯವಾಗಿಯೂ ಮೇಲ್ಮಟ್ಟದ ಸೂಕ್ಷ್ಮತರ ವಿಷಯ ವಿವರಗಳೊಡನೆಯೂ ಕಲಿಸಲು ಏರ್ಪಾಡು ಮಾಡಿ, ಒಂದು ಐಚ್ಛಿಕವನ್ನು ಆನೆಯ ವಿಷಯವನ್ನಾಗಿ ಇಡಬಹುದು. ವಿಜ್ಞಾನ ಹಾಗೂ ವಾಣಿಜ್ಯಗಳ ವಿದ್ಯಾರ್ಥಿಗಳಿಗೆ ತರ್ಕದ ಬದಲು ಹೆಚ್ಚಿನ ಗಣಿತವನ್ನು ಓದಿಸಬಹುದು. ಐಚ್ಛಿಕವಾಗಿ ಪ್ರಜಾಧರ್ಮ (Civics), ಸಮಾಜನೀತಿ (Sociology), ಆಡಳಿತ (Admini Stration) ವಿಜ್ಞಾನದ ತಾತ್ವಿಕ ಇತಿಹಾಸ ಎಂಬಿಷ್ಟರಲ್ಲಿ ಒಂದನ್ನು ಕಲಿಯಬೇಕೆಂದು ವಿಧಿಸಬಹುದು. ಈ ಅರು ವಿಷಯಗಳಿಗೆ ಆರುನೂರು ಗುಣಗಳನ್ನಿಟ್ಟರೆ ಸಾಕು.

ಹೀಗೆ ಮಾಡದೆ ಹೋದರೆ ಹಿಂದಿಯನ್ನು ಕಾಲೇಜಿನಲ್ಲೂ ಒತ್ತಾಯದಿಂದ ಓದುವುದು, ಸಂಸ್ಕೃತವನ್ನು ಮಾಧ್ಯಮಿಕೋತ್ತರ ವರ್ಷದಲ್ಲೂ ಖುಶಿ ಬಂದಂತೆ ಬಿಡುವುದು, ಕೆಲಸಕ್ಕೆ ಬಾರದ ಗಣಿತ ಹಾಗೂ ವಿಜ್ಞಾನಾಂಶಗಳನ್ನು ಕಲಾ ವಿದ್ಯಾರ್ಥಿಯೂ ಕೆಲಸಕ್ಕೆ ಬಾರದ ಸಮಾಜ ಶಾಸ್ತ್ರವನ್ನು ವಿಜ್ಞಾನ ವಿದ್ಯಾರ್ಥಿಯೂ ಒತ್ತಾಯದಿಂದ ಓದುತ್ತ ಹೋಗುವುದು—ಕೂಳಿಗೆ ಕೇಡು ಭೂಮಿಗೆ ಭಾರ—ಎಂಬಂಥ ನೌಕರರನ್ನೂ ಪ್ರಜೆಗಳನ್ನೂ ತಯಾರಿಸಿ ಬಗೆಯುವ ದುರ್ಯೋಜನೆಯಾಗಿರುವುದು ಧೃತರಾಷ್ಟ್ರರಿಗಲ್ಲದೆ ವಿಕ್ಕವರಿಗೆ ಎದ್ದು ಕಾಣುತ್ತದೆ.

ಜೊತೆಗೆ ಕೇಂದ್ರ ಸರಕಾರವನ್ನು ನೈತಿಕ ಶಿಕ್ಷಣಕ್ಕೂ ವ್ಯವಸ್ಥೆಮಾಡುವುದರಲ್ಲಿ ದಯಂತೆ. ಸದ್ಯದಲ್ಲಿ ಶಿಕ್ಷಕರನ್ನು ಆಯ್ದು ನಿಯಮಿಸಿಕೊಳ್ಳುವ ಶೀಲ ನಿರಪೇಕ್ಷ ಕ್ರಮವನ್ನು ಗಮನಿಸಿದರೆ ಅದೂ ಒಂದು ಅತಿದೊಡ್ಡ ಪ್ರಹಸನವಾದೀತೆಂಬುದರಲ್ಲಿ ಯಾರೂ ಸಂದೇಹಪಡಬೇಕಾಗಿಲ್ಲ. ಬೆಕ್ಕು, ಬಕ, ರಾವಣ ಮುಂತಾದ ಸನ್ಯಾಸಿಗಳಂತೆ ಕೆಲ ಅಪಶಿಕ್ಷಕರು ನೀತಿ ಪಾಠವನ್ನು ಹರಿಃ ಓಂ ಎಂದು ಆರಂಭಿಸಿದರೆ ಚೆಂದಕ್ಕೆ ಗಂಧವನ್ನು ಕೂಡಿಸಿದಂತಾದೀತು! ಆಗಲೇ ಸಾದಪ್ರತಿಬಂಧದ ಆಚರಣೆಯನ್ನು ನಾವು ಉತ್ತರ—ದಕ್ಷಿಣ ಕನ್ನಡ ಮುಂತಾದ ಎಲ್ಲ ಜಿಲ್ಲೆಗಳಲ್ಲೂ ಸಾಕಷ್ಟು ಚೆನ್ನಾಗಿ ಕಂಡಾಗಿದೆ. ಸುಳ್ಳು ಹೇಳುವುದು, ಬಾಯಿ ಹಾರಿಸುವುದು ಇಂದು ಭಾರತ ವೈರಿಗಳಾಗಿ ಪರಿಣಮಿಸುವ ರಾಜಕೀಯ ವಕ್ತಾರರ ನಿತ್ಯ ಧರ್ಮವಾಗಿಬಿಟ್ಟಿದೆ. ಅಧಿಕಾರವಾಸರೂ ಧನದಾಸರೂ ಉಚ್ಚಾಧಿಕಾರಿಗಳಾಗಿ ಜನಶೋಷಕ ಚಟುವಟಿಕೆಯಲ್ಲಿ ತೊಡಗಿದ ಅಂಶಗಳನ್ನು 'ಸಂಯುಕ್ತ ಕರ್ನಾಟಕ'ದಲ್ಲಿ ಶ್ರೀ ಸಿದ್ದಪ್ಪನ ಹಳ್ಳಿ ಕೃಷ್ಣಶರ್ಮರು ಬರೆದ ವಿವಿಧ ಲೇಖನಗಳಿಂದ ತಿಳಿದುಕೊಂಡ ಯಾವನ್ನೂ ಸರಕಾರಿ ನೀತಿಶಿಕ್ಷಣ ಕ್ರಮಗಳಿಂದ ವಿದ್ಯಾರ್ಥಿಗಳ ಶೀಲ ಒಳ್ಳೆಯದಾದೀತು—ಎಂದು ನಂಬುವುದು ಅತಿ ಕಷ್ಟ.

ಎಲ್ಲ ಮಟ್ಟಗಳಲ್ಲೂ ಆಕ್ರಮವನ್ನೇ ಕ್ರಮ ಎಂಬ ನಮೂನೆಯ "ಸುಧಾರಣೆಗಳ"ನ್ನು ಮಾಡುವ ಉಮೇದಿನಿಂದ ಹೊರಟ ಶಿಕ್ಷಣ ನಾಯಕರು ಜ್ಞಾನದ ಆಳ-ಅಗಲಗಳೆರಡರಲ್ಲೂ ಅತಿ ಹೀನ—ನ್ಯೂನ ಎನಿಸುವಂಥ ಶಿಕ್ಷಿತಂಮನ್ಯ ದಂಭದ ಗೊಂಬೆಗಳನ್ನು ನಿರ್ಮಿಸಿ ರಾಷ್ಟ್ರಕ್ಕೆ ಸಲ್ಲಿಸುತ್ತ ಬಂದುದನ್ನು ಸುನಃ ಸ್ಮರಣೆಗೆ ತರಲೋ ಎಂಬಂತೆ ಈಗ ವಿಶ್ವವಿದ್ಯಾಲಯವೊಂದು ಮಾಧ್ಯಮಿಕೋತ್ತರ ಶಿಕ್ಷಣದಲ್ಲಿ ಯಾವ ಮಾರ್ಪಾಟುಗಳನ್ನು ಮಾಡಬಹುದು? ಎಂಬ ಪ್ರಶ್ನೆ ಮೂಲೆಯೊಂದನ್ನು ಪ್ರಿನ್ಸಿಪಾಲ-ಪ್ರೊಫೆಸರರ ಅವಗಾಹನೆಗೆಂದು ತಿಳಿಸಿಕೊಟ್ಟಿರುತ್ತದೆ.

ಶೀಲಲೋಪ ಸಂಧಿಯು ಪರೀಕ್ಷಕ ವರ್ಗ, ನಿರೀಕ್ಷಕ ವರ್ಗ (Supervisers), ಪಠ್ಯ ವಿಧಾಯಕ ವರ್ಗ, ಆಡಳಿತದ ಉಚ್ಚ ಅಧಿಕಾರವರ್ಗ ಸೀನೇಟು—ಸಿಂಡಿಕೇಟು ಸದಸ್ಯವರ್ಗ ಮುಂತಾದ ಎಲ್ಲ ವರ್ಗಗಳಲ್ಲೂ ಅಗಿಗ, ಅಲ್ಲಿ ಇಲ್ಲಿ, ವಿರಳವಾಗಿ ಎನ್ನಲು ಬಾರದಂತೆ, ಅವುಲಿನಲ್ಲಿ ಬಂದಿರುವಾಗ System ಪದ್ಧತಿಯನ್ನು ಬದಲಾಯಿಸುವುದರಿಂದ ನಲಂದ-ಕಾಶೀ ವಿಶ್ವವಿದ್ಯಾನಿಲಯಗಳ ಕೀರ್ತಿಯನ್ನು ನಾವಿಲ್ಲಿ ಸಂಪಾದಿಸಬಲ್ಲೆವು ಎಂದು ತಿಳಿದುಕೊಳ್ಳುವುದು ಶ್ರೀ ಮುಗಳಿಯವರು ಬರೆದ "ನಾಮಧಾರಿ" ಎಂಬ ನಾಟಕದ ನಾಯಕ ಕೆಂಜನ ಗೌಡನು ರಾವ್ ಸಾಹೇಬನಾದುದಕ್ಕಿಂತ ಬೇರೆಯಲ್ಲ. ಅಹಂಕಾರವನ್ನೇ ಪಾಂಡಿತ್ಯ + ಸದ್ಗುಣ ಎಂದು ಭಾವಿಸುವ ನಿಯಾಮಕ ವರ್ಗವಿರುವವರೆಗೆ ಹಿಂದು ಸಾತ್ವಿಕ ಶಿಕ್ಷಣಕ್ಕೆ ಉದ್ಧಾರದ ಸಂಭವವಿಲ್ಲ!

ಪ್ರೀ ಯೂನಿವರ್ಸಿಟಿ ಕೋರ್ಸಿನಲ್ಲಾದರೂ ವಿದ್ಯಾರ್ಥಿಗಳಲ್ಲಿ ಒಂದು ಸಾಮಾನ್ಯವಾದ ಸಾಂಸ್ಕೃತಿಕ ಮಟ್ಟವನ್ನು ರೂಪಿಸಲು ಹೆಣಗಾದಿದ್ದರೆ ಈಗ ಇರುವಂತೆಯೇ ಯಾವ ಸಮಿತಿಯು, ಸಭೆಯು, ಸಂಘದ, ಸಮಾಜದ ಸದಸ್ಯರ ಸಭೆಯಲ್ಲೂ ನಿಜವಾದ ತತ್ವಾರ್ಥನಿರ್ಣಾಯಕ ಜರ್ಜರಿಯನ್ನು ಮಾಡುವ ಶಕ್ತಿಯಿಲ್ಲದೆ ಅಧಿಕಾರದರ್ಪವುಳ್ಳವರು ಹೇಳಿದ್ದಕ್ಕೆ ಒಪ್ಪಿ ಅಶ್ರದ್ಧರಾಗಿ ಕೆಲಸಮಾಡುತ್ತ ಹೋಗುವ ಪ್ರಜಾಪ್ರಭುತ್ವನೇ ನಮ್ಮಲ್ಲಿ ಹೆಜೆಯ ಬರಹವಿದ್ದಷ್ಟು ಕಾಲ ಬದುಕಿಕೊಂಡಿರುವ ಸ್ಥಿತಿಯು ಉಂಟಾದೀತು. ಇಂದಿನ ನಾಲ್ಕು ಜನ ಪದವೀಧರರಿಗೆ ಯಾವುದೇ ಸಾರ್ವಹಿತ ವಿಷಯದ ಬಗ್ಗೆ ಪರಸ್ಪರ ತಿಳಿವಳಿಕೆಯಿಂದ ಚರ್ಚಿಸಿ ನಿರ್ಧಾರಕ್ಕೆ ಬರುವ ಯೋಗ್ಯತೆ ಇಲ್ಲವಾದುದಕ್ಕೆ (System) ಪದ್ಧತಿ ಎಷ್ಟು ಕಾರಣವೋ ಅಷ್ಟೇ ನಿಯಮನ ಕರ್ತೃಗಳ ಅಪದಕ್ಷತೆಯೂ ಕಾರಣ. ಶಾಸನ ಸಭೆ, ವ್ಯಾಪಾರಿಕ ವಿಂಟಿಂಗುಗಳು, ಚರ್ಚಾಕೂಟ, ಪಂಚಾಯಿತಿ ಮುಂತಾದ ಯಾವ ಕ್ಷೇತ್ರದಲ್ಲೂ ತರ್ಕಶುದ್ಧ ವಿಚಾರ ಸರಣಿಯಿಂದ ಕೆಲಸಕ್ಕೆ ಬರುವಂತೆ ಕಾರ್ಯಯೋಜನೆಯನ್ನು ನಿರ್ಧರಿಸಿ ಪ್ರಾಮಾಣಿಕತೆಯಿಂದ ನಡೆಸಿಕೊಂಡು ಹೋಗುವ ಕಲೆ ತೀರ ವಿರಳವಾಗುತ್ತ ಹೋದುದನ್ನು ಇಲ್ಲವೆಂದು ಬಾಯಿ ಹಾರಿಸುವವರನ್ನು ಇದಿರಿಸಿ ಜವಾಬುದಾರಿಯಿಂದ ಇವೆಲ್ಲವಕ್ಕೂ ತಳಪಾಯವೆನಿಸಿದ ಶಿಕ್ಷಣಕ್ಷೇತ್ರದಲ್ಲಿ ಪಾವಿತ್ರ್ಯವನ್ನೂ ಜ್ಞಾನದ ಆಳವನ್ನೂ ಸಂವರ್ಧಿಸುವತ್ತ ನಾವು ಗಮನ ಹರಿಸಬೇಕಾಗಿದೆ.

ಮಧ್ಯಪ್ರದೇಶದ ಒಂದೆಡೆ ಅಶ್ಲೀಲ ಸಿನೆಮ ಭಿತ್ತಿಪತ್ರ ಪ್ರದರ್ಶನದ ವಿರುದ್ಧವಾಗಿ ಸರ್ವೋದಯವಾದಿಗಳು ಸತ್ಯಾಗ್ರಹ ವನ್ನಾರಂಭಿಸಿದಂತೆ ಕಾಂಗ್ರೆಸ್ಸಿನಲ್ಲಿಯ ಕೊಳೆಯನ್ನು ತೊಳೆಯಲೆಂದು ಒಂದು ದಿನ ೭೫ ವರ್ಷ ಉಪವಾಸ ಹೂಡಿದಂತೆ ನಾವಾದರೂ ಇಂದು ಸಾಮೂಹಿಕವಾಗಿ ಶೀಲಯುಕ್ತ ಜ್ಞಾನವಂತಿಕೆಗೆ ಅಪಮಾನವಾಗುವಂತೆ ನಡೆಯುವ ಶಿಕ್ಷಣಕಾರ್ಯ-ಮರಸ್ಕಾರ ಪ್ರಸಂಗಗಳೆಲ್ಲವನ್ನೂ ಪ್ರತಿಭಟಿಸಲು ಅಣಿಯಾಗಬೇಕಾಗಿದೆ. ಭಾರತದ ಜನರಲ್ಲಿ ಐಕ್ಯ ಸಂವರ್ಧನೆಯಾಗಬೇಕಾದರೆ ಮಾಧ್ಯಮಿಕ ಮಟ್ಟದ ಹಿಂದಿಯೆಂದು ಎಲ್ಲರಿಗೂ ಬರಬೇಕು; ಆದರೆ ಅಷ್ಟೇ ಸಾಲದು. ಪ್ರಜೆಗಳ ಮಾನಸಿಕ ವ್ಯವಹಾರಗಳಿಗೆ ಅಗತ್ಯವಾದ ನಾಣ್ಯಗಳನ್ನೂ ನಾವು ಮೂಲ ಬಂಡವಾಳವನ್ನಾಗಿ ಪ್ರೀ ಯೂನಿವರ್ಸಿಟಿ ಕೋರ್ಸಿನಲ್ಲಿಯೇ ಕೊಡುವ ವ್ಯವಸ್ಥೆಯನ್ನು ಮೇಲೆ ಹೇಳಿದ

(ರಂಗನೇ ಪುಟ ನೋಡಿರಿ)

The Moolky Bank, Ltd.

MULKI.

ಡಿಪೋಸಿಟು ಮೇಲಣ ಆಕರ್ಷಕ ಬಡ್ಡಿ ದರಗಳು—

10ರಿಂದ 4 ತಿಂಗಳ ವರೆಗೆ		4%
5 ,, 12	,,	4½%
13 ,, 24	,,	4¾%

ರೂ. 8,000/- ಮತ್ತು ಮೇಲಣ ಡಿಪೋಸಿಟಿಗೆ ¼% ಹೆಚ್ಚು

ಸೇವಿಂಗ್ಸ್ ಬೇಂಕ್ ಲೆಕ್ಕಕ್ಕೆ 2½%

ಚಾಲ್ತಿ ಠೇವಣಾತಿಗೆ ¼%

ಸುಲಭ ಬಡ್ಡಿ ದರದಲ್ಲಿ ಚಿನ್ನಾಭರಣಗಳ ಮೇಲೆ ಮತ್ತು ಇತರ ರೀತಿಯಲ್ಲಿ ಸಾಲಕೊಡಲಾಗುವುದು.

ಯಂ. ಆರ್. ಯಚ್. ಪೂಂಜ.
ಮೆನೇಜರ್,

ಮೂಲ್ಕಿ ಬೇಂಕ್ ಲಿ. ಮುಲ್ಕಿ.

ನಾವು ಸ್ವತಂತ್ರರೇ?

ನಮ್ಮನ್ನು ನಾವು ಸಂಪೂರ್ಣ ಸ್ವತಂತ್ರರು ಎಂದು ಉದ್ಘೋಷಿಸಲು ತೊಡಗಿ ಕೆಲವು ವರ್ಷಗಳು ಸಂದುವು. ಆದರೆ, ನಿಜವಾಗಿಯೂ ನಾವು ಸ್ವತಂತ್ರರೇ ಅಥವಾ ಬಾಯ ಬಡಾಯಿ ನೂತ್ರವೇ? ಎಂದು ಆವಶ್ಯ ವಿವೇಚಿಸುವುದು ಸಂದರ್ಭೋಚಿತವಾದುದು.

ವಿವೇಚಕರು: ಡಾ| ಎಂ. ಗೋಪಾಲಕೃಷ್ಣ ರಾವ್.
(ಪ್ರಿನ್ಸಿಪಾಲ್, ಬೆಂಗಳೂರು ಆಯುರ್ವೇದಿಕ್ ಕಾಲೇಜು)

ಮನುಷ್ಯನ ಸ್ವಾತಂತ್ರ್ಯವು, ಕೇವಲ ಅವನ ಅಂಗಾಂಗಗಳ ಸ್ವಾಧೀನತೆಯನ್ನು ಅವಲಂಬಿಸಿಲ್ಲ. ಶಾರೀರಿಕ ಸ್ವಾತಂತ್ರ್ಯವನ್ನು ಹೊಂದಿರುವ ಗುಲಾಮರು ಬೇಕಾದಷ್ಟಿದ್ದಾರೆ. ಸೆರೆಮನೆಯಲ್ಲಿ ಬಂಧಿತರಾಗಿದ್ದರೂ ಸ್ವತಂತ್ರಾತ್ಮರಾಗಿರುವವರೂ ಇದ್ದಾರೆ. ಆದ್ದರಿಂದ ನಾವು ಸ್ವತಂತ್ರರೇ ಎಂಬ ಪ್ರಶ್ನೆಗೆ ಉತ್ತರವನ್ನು ಕೊಡುವ ಮುಂಚೆ ನಮ್ಮ ಮನಸ್ಸು, ಬುದ್ಧಿ, ಆತ್ಮಗಳು ಸ್ವತಂತ್ರವಾಗಿವೆಯೇ? ಅವುಗಳು ಕ್ಷಣ ಕ್ಷಣಕ್ಕೂ ಸ್ವಾತಂತ್ರ್ಯದ ಆನಂದಾನುಭವವನ್ನು ಹೊಂದುತ್ತಿರುವವೇ? ಎಂಬ ಪ್ರಶ್ನೆಗಳಿಗೆ ಉತ್ತರವನ್ನು ಕೊಡಬೇಕಾಗುತ್ತದೆ. ಮತ್ತೆ ಆ ಪ್ರಶ್ನೆಗಳಿಗೆ 'ಹೌದು' ಎಂದು ಉತ್ತರಕೊಡುವ ಪರಿಸ್ಥಿತಿಯುಂಟಾಗುವವರೆಗೆ ಭಾರತವಾಗಲಿ ಭಾರತೀಯರಾಗಲಿ ಸ್ವತಂತ್ರರು ಎಂದು ಹೇಳಿಕೊಂಡರೆ ಅದೊಂದು ಹುಚ್ಚರ ತಲೆಹರಟೆಯಾದೀತು.

ಹಾಗಾದರೆ ಈಗ್ಗವರ್ಷ ವರ್ಷವೂ ಸ್ವಾತಂತ್ರ್ಯೋತ್ಸವಗಳನ್ನು ನೆರವೇರಿಸುವ ಮತ್ತು ದಿನ ದಿನವೂ ನಮ್ಮ ಸ್ವಾತಂತ್ರ್ಯದ ಹೆಗ್ಗಳಿಕೆಯನ್ನು ಹೊಗಳಿಕೊಳ್ಳುವ ಮುಂದಾಳುಗಳು "ಭಾರತೀಯರ ಮನಸ್ಸು ಸ್ವತಂತ್ರವಾಗಿದೆ; ಬುದ್ಧಿಯು ಸ್ವತಂತ್ರವಾಗಿದೆ; ಆತ್ಮವು ಸ್ವತಂತ್ರವಾಗಿದೆ." ಎಂಬುದನ್ನು ಸಾಧಾರವಾಗಿ ಮನವರಿಕೆಯಾಗುವಂತೆ ಸಿದ್ಧಪಡಿಸಿ ತೋರಿಸುವುದು ಕರ್ತವ್ಯವಾಗಿದೆ. ಅವರು ಬರಿ ಬಾಯಿಬುರುಡೆಯ ಸ್ವಾತಂತ್ರ್ಯವನ್ನೇ ರಾಷ್ಟ್ರೀಯ ಸ್ವಾತಂತ್ರ್ಯವೆಂದು ಹೇಳಿಕೊಂಡರೆ ಅವರ ಹಿಂಬಾಲಿಗರು ಕಾಲೆತ್ತಿನಂತೆ ಕಲೆದೂಗಬಹುದೇ ಹೊರತು ರಾಷ್ಟ್ರಕ್ಕೆ ಸ್ವಾತಂತ್ರ್ಯ ಬಂದಂತಾಗಲಿಲ್ಲ. ರಾಷ್ಟ್ರೀಯರ ಮನಸ್ಸು ಪರಾನುಕರಣಶೀಲವಾಗಿರುವಾಗ, ಬುದ್ಧಿಯು ಗಾಢನಿದ್ರೆಯಲ್ಲಿರುವಾಗ, ಆತ್ಮವು ಅವರತ್ವ (Inferiority) ಭಾವನೆಯಲ್ಲಿ ನರಳುತ್ತಿರುವಾಗ ಅವರು ಸ್ವತಂತ್ರರಾಗಿದ್ದಾರೆ ಎಂದು ಹೇಳಿಕೊಳ್ಳುವುದು ಒಂದು ಕುರುಡು ಕನವರಿಕೆಯಾದೀತು.

ಈಗ ದೇಶವು ಸ್ವತಂತ್ರವಾದಾಗಿನಿಂದ ದೇಶೀಯರ ಮನಸ್ಸು ಎಷ್ಟರ ಮಟ್ಟಿಗೆ ಸ್ವತಂತ್ರವಾಗಿದೆಯೆಂಬುದನ್ನಿಷ್ಟು ಪರಿಶೀಲಿಸೋಣವೆ? ಮನಸ್ಸು ಇಚ್ಛಾ-ದ್ವೇಷ, ಪ್ರೇಮ-ತಿರಸ್ಕಾರ, ಉತ್ಸಾಹ-ನಿರಾಶೆ ಮುಂತಾದ ಭಾವಗಳ ಪ್ರಕ್ಷುಬ್ಧ ಅಲೆಗಳಿಂದ ಚಂಚಲವಾಗಿರುವ ಒಂದು ಅದ್ಭುತ ಸರೋವರವಾಗಿದೆ. ಮತ್ತೆ ಆ ಭಾವಗಳು ಪರಸ್ಪರ ವೈರಸ್ಯದಿಂದ ಪ್ರಕ್ಷುಬ್ಧವಾಗಿರುವ ವರೆಗೆ ಅಂತಹ ಮನಸ್ಸುಳ್ಳ ಮನುಷ್ಯನು ಸ್ವತಂತ್ರನೆನ್ನಲಾಗದು. ಅರ್ಥಾತ್ ಅವನಿಗೆ ತನ್ನ ಮನಸ್ಸನ್ನಾಳುವ ಸ್ವಾತಂತ್ರ್ಯವಿರಲಾರದು. ಕ್ಷಣ ಕ್ಷಣಕ್ಕೆ ದಾಳಿಯಿಡುವ ಅವನ ಮಾನಸಿಕ ಭಾವಾವೇಶಗಳೇ ಅವನನ್ನಾಳುವವು. ಅವನು ಅವುಗಳ ದಾಸನಾಗುವನು. ಅವನು ಸ್ವತಂತ್ರನಲ್ಲ.

ಭೌಗೋಲಿಕ ಸ್ವಾತಂತ್ರ್ಯವನ್ನು ಪಡೆದು ಹದಿಮೂರು ವರ್ಷಗಳು ದಾಟಿದರೂ ನಾವು ಮಾನಸಿಕ ಸ್ವಾತಂತ್ರ್ಯವನ್ನು ಪಡೆದಿರುವೆವೆ? ಜಾತಿ ಜಾತಿಗಳಲ್ಲಿ ಕಚ್ಚಾಟ, ಅಧಿಕಾರ ಸ್ಥಾನಗಳಿಗಾಗಿ ಪರದಾಟ, ದುಡಿಮೆಯಿಲ್ಲದೆ ದೊಡ್ಡವರೆನಿಸಬೇಕೆನ್ನುವವರ ದುಡುಕಾಟ, ರಾಷ್ಟ್ರಾಭಿವೃದ್ಧಿಗಾಗಿ ನಡೆಸುವ ನಾಟಕದಲ್ಲಿ ರಾಷ್ಟ್ರೀಯರ ಸುಲಿಗೆಯಾಟ ಇವೆಲ್ಲವೂ ಸ್ವಾತಂತ್ರ್ಯದ ಲಕ್ಷಣಗಳೇ? ಹೀಗೆ ಮನಸ್ಸು ಕೀಳು ಪ್ರವೃತ್ತಿಗಳಿಂದ ಜರ್ಜರಿತವಾಗಿರುವಾಗ ನಾವು ಸ್ವಾತಂತ್ರರೆಂದು ಯಾವ ಬಾಯಿಯಿಂದ ಹೇಳಿಕೊಳ್ಳುವುದು?

ಬುದ್ಧಿಯು ಮನುಷ್ಯನಿಗೆ ವಿಶಿಷ್ಟವಾಗಿ ದೊರೆತ ವರದಾನವಾಗಿದೆ. ಅರ್ಥಾತ್ ಬುದ್ಧಿಯಿಲ್ಲದವನು ತನ್ನನ್ನು ಮನುಷ್ಯನೆಂದುಕೊಳ್ಳಲಾಗದು. ಬುದ್ಧಿಯು ನ್ಯಾಯ ಅನ್ಯಾಯ, ಯೋಗ್ಯ-ಅಯೋಗ್ಯ, ಸರಿ-ತಪ್ಪುಗಳನ್ನು ಪ್ರಕಾಶಿಸುವ ಒಂದು ಮಾನವೀಯ ಶಕ್ತಿಯಾಗಿದೆ. ಸ್ವಾತಂತ್ರ್ಯಾನಂತರ ಭಾರತೀಯರಲ್ಲಿ ಆ ಬುದ್ಧಿಶಕ್ತಿಯು ಎಂದರೆ ನ್ಯಾಯಾನ್ಯಾಯ ವಿಮರ್ಶಕ ಶಕ್ತಿಯು ಬೆಳೆದಿದೆಯೇ? ಅಥವಾ ಸ್ವಾತಂತ್ರ್ಯಪೂರ್ವದಲ್ಲಿ ಇದ್ದಷ್ಟಾದರೂ ಬುದ್ಧಿಯು ಉಳಿದಿದೆಯೇ? ಅಥವಾ ಅದು ಕೂಡ ಅಳಿದಿದೆಯೇ? ನಮ್ಮ ನಿತ್ಯದ ಸಾಮಾಜಿಕ ವ್ಯವಹಾರಗಳಲ್ಲಿ ನ್ಯಾಯಕ್ಕೆ ಬೆಂಬಲ ಸಿಗುತ್ತಿದೆಯೇ? ರಾಜ್ಯಾಡಳಿತದಲ್ಲಿ ಯೋಗ್ಯಕ್ಕೇ ಮರ್ಯಾದೆ ಸಿಗುತ್ತಿದೆಯೇ? ಜುನಾವಣೆಗಳಲ್ಲಿ ನ್ಯಾಯಶೀಲರೂ ಸಮರ್ಥರೂ ಆದವರಿಗೇ ಗೆಲುವು ಸಿಗುತ್ತಿದೆಯೇ? ಗೆಲುವಿಲ್ಲದಿದ್ದರೆ ಹೋಗಲಿ, ಅವರಿಗೆ ಸ್ಪರ್ಧಿಸುವ ಅಧಿಕಾರ (Ticket) ವನ್ನಾದರೂ ಕೊಡಲಾಗುತ್ತಿದೆಯೇ? ಈ ಎಲ್ಲ ಪ್ರಶ್ನೆಗಳಿಗೆ ನಕಾರಾತ್ಮಕವಾದ, ನಿರಾಶೆಯ ಉತ್ತರವೇ ಸಿಗುವುದೆಂಬುದರಲ್ಲಿ ಸಂದೇಹವಿಲ್ಲ. ಮಾನಸಿಕ ಭಾವಾವೇಶಗಳ ಭೂತಗಳೇ ಬುದ್ಧಿಕ್ಷೇತ್ರದಲ್ಲಿಯೂ ಕೀಳು ಕುಣಿತವನ್ನು ನಡೆಸುತ್ತಿರುವುದು ವ್ಯಕ್ತವಾಗುತ್ತಿದೆ.

ಆತ್ಮವು ದೇಹ ಬುದ್ಧಿ ಮನಸ್ಸುಗಳ ಸುಸಂಗತವಾದ ಪೋಣಿಕೆಗೆ ಅನಿವಾರ್ಯವಾದ ಒಂದು ಶಕ್ತಿಯಾಗಿದೆ. ಅದು ಸ್ವತಂತ್ರವಾಗಿದ್ದರೆ ಬುದ್ಧಿ, ಮನಸ್ಸುಗಳೆರಡನ್ನೂ ತನ್ನ ಅಧೀನದಲ್ಲಿಟ್ಟುಕೊಳ್ಳಬಲ್ಲದು. ಆತ್ಮವು ಸ್ವತಂತ್ರವಾಗಬೇಕಾದರೆ ಅದಕ್ಕೆ ಸತ್-ಶಿಕ್ಷಣ, ಸತ್—ಸಂಗಗಳ ಸಂಸ್ಕಾರವುಂಟಾಗಿ ಅದರಲ್ಲಿ ಸತ್ಯದ ಹಂಬಲವಿರಬೇಕಾಗುವುದು. ಆತ್ಮವು ಬುದ್ಧಿ, ಮನಸ್ಸುಗಳಿಗಿಂತ ವಿಶಾಲವಾಗಿದ್ದು ಅವುಗಳ ಹಿನ್ನೆಲೆಯಲ್ಲಿದ್ದು ಅವುಗಳನ್ನು ನಿಶ್ರೇಯಸ್ಸಿಗೆ ಸಾಧನಗಳನ್ನಾಗಿಉಪಯೋಗಿಸುವುದೆಂದು ಭಗವದ್ಗೀತೆಯು ಹೇಳುತ್ತದೆ.

ಇಂದ್ರಿಯಾಣಿ ಪರಾಣ್ಯಾಹುಃ ಇಂದ್ರಿಯೇಭ್ಯಃ ಪರಂಮನಃ |
ಮನಸಸ್ತು ಪರೋಬುದ್ಧಿಃ
ಬುದ್ಧೇಸ್ತು ಪರತಃ ಸಃ ||

ಆದ್ದರಿಂದ ಆತ್ಮವು ಸ್ವತಂತ್ರವಾಗುವವರೆಗೆ ಎಂದರೆ ದೇಹ, ಮನೋ, ಬುದ್ಧಿಗಳು ಆತ್ಮದ ವಿಶಾಲ ಸೂತ್ರಗಳಿಂದ ಸಂಚಾಲಿಸಲ್ಪಡುವ ಪರಿಸ್ಥಿತಿಯು ವ್ಯಕ್ತಿಯಲ್ಲಿಯೂ ಸಮಾಜದಲ್ಲಿಯೂ ರಾಷ್ಟ್ರದಲ್ಲಿಯೂ ಉಂಟಾಗುವ ವರೆಗೆ ನಮ್ಮ ಸ್ವಾತಂತ್ರ್ಯವು ಒಂದು ಆತ್ಮ ಘಾತಕವಾದ ಭ್ರಮೆಯಾಗಿದೆ. ಮತ್ತೆ ಆ ಭ್ರಮೆಯೇ ಸಮಾಜ ಘಾತಕವೂ ರಾಷ್ಟ್ರ ಘಾತಕವೂ ಆಗುತ್ತಿದೆಯೆಂಬುದು ವಿವೇಕಿಗಳಾದ, ಮನುಷ್ಯತ್ವವುಳ್ಳ ಎಲ್ಲರ ಅನುಭವವಾಗಿದೆ.

ಇಂತಹ ಆತ್ಮಹೀನ, ಮೂಢ ಬುದ್ಧಿಯ, ಪ್ರಕ್ಷುಬ್ಧ ಮಾನಸಿಕ ಪರಿಸ್ಥಿತಿಯಲ್ಲಿ ಅರ್ಹತೆಯು ಅಪರಾಧವೆನಿಸುತ್ತದೆ; ಬುದ್ಧಿಯು ಹುಚ್ಚುತನವೆನಿಸುತ್ತದೆ. ಜ್ಞಾ

(೧೯ನೇ ಪುಟ ನೋಡಿರಿ)

(೧೯ನೇ ಪುಟದಿಂದ)

ಒತ್ತಾಯದ ವಿಷಯಗಳ ಅಭ್ಯಾಸಕ್ರಮದ ಪ್ರಕಾರ ಮಾಡಬೇಕು. ಭಾರತದ ಪ್ರಜೆಗೆ ಮೂಲಭೂತ ಕನಿಷ್ಠ ನುಟ್ಟದ ಭಾಷೈಕ್ಯ, ವೇಷೈಕ್ಯಗಳಂತೆಯೇ ಸಾಂಸ್ಕೃತಿಕ ಜ್ಞಾನರೂಪದ ಮಾನಸಿಕ ಬಂಧವಾಳದ ಐಕ್ಯವೂ ಅಗತ್ಯ. ವಿಭಿನ್ನತೆಗಳನ್ನು ಕ್ರಮವಾಗಿ ಜೋಡಿಸುವ ಸೂತ್ರರೂಪದ ಸಾಮಾನ್ಯ ಜ್ಞಾನದ ಮೊತ್ತವನ್ನು ಸ್ನಾತಕರಾಗಲು ತೆರಳುವ ಹಿಂದಿನ ಘಟ್ಟದಲ್ಲೇ ವಿದ್ಯಾರ್ಥಿಗಳು ಪಡೆಯುವಂತೆ ಯೋಜಿಸಲು ಮಾಧ್ಯಮಿಕೋತ್ತರ ವರ್ಷದ ವಿದ್ಯಾಭ್ಯಾಸವು ಅತ್ಯುಪಯುಕ್ತವಾದ ಸಂಧಿ ಎಂಬುದನ್ನರಿಯದೆ ಅದರ ವಿಷಯ ವಿಧಾನವನ್ನು ಏರ್ಪಡಿಸುವದಕ್ಕಿಂತ ಆ ಕೋರ್ಸನ್ನು ಕಿತ್ತುಹಾಕುವುದೇ ಉತ್ತಮ. ಇಲ್ಲವಾದರೆ ದೈಹಿಕ ಶಿಕ್ಷಣದಂತೆಯೇ ಮಾನಸಿಕ ಶಿಕ್ಷಣವೂ ವಿಶ್ವವಿದ್ಯಾನಿಲಯದ ಅಂಗೆಯಷ್ಟೆ ಉಳಿಯಂತೆಯೇ 'ನಾನು ಹೂಡೆದಂತೆ ಮಾಡುತ್ತೇನೆ, ನೀನು ಅತ್ತಂತೆ ಮಾಡು" ಎಂಬ ನ್ಯಾಯದಂತೆಯೇ ಸಾಗೀತು. ಈ ಕಪಟನಾಟಕದ ಪಂಚಾಂಗವು ನಮ್ಮ ಭಾವಿ ಪ್ರಜಾಪ್ರಭುತ್ವದ ನಾಗರಿಕತೆಯ ಕಟ್ಟಡದ ವಿವಿಧ ಕೋಣೆಗಳ ಗೋಡೆಗಳಿಗೆ ಗೆದ್ದಲನ್ನು ಹಬ್ಬಿಸುವ ಕೇಂದ್ರಸ್ಥಲವಾಗದೆ ಉಳಿಯಬೇಕು. ಲಾಯರರು, ಡಾಕ್ಟರರು, ಶಿಕ್ಷಕರು, ಆಡಳಿತದ ನೌಕರರು ಎಂಬ ಚತುರ್ವರ್ಗವು ಉನ್ನತತರವಾದ ಶೀಲಯುಕ್ತ ಜ್ಞಾನವಂತಿಕೆಗೆ ಏರುವಂಥ ಶಿಕ್ಷಣ ಪದ್ಧತಿ ಮತ್ತು ಅದರ ಆಚರಣೆಗಳನ್ನು ರೂಪಿಸಿದಿದ್ದರೆ "ಸಂಕರೋ ನರಕಾಯೈವ" ಎಂಬ ಸಂಸ್ಥಿತಿ ಕ್ವರಿತವಾಗಿ ಸಂಭವಿಸದಿರಂದು!

ಫೋನ್ ನಂಬ್ರ
ಮೆನೆಜಿಂಗ್ ಡೈರೆಕ್ಟರ್:-19
ವರ್ಕ್ಸ್ ಮೆನೇಜರ್:— 19A

ಟೆಲಿಗ್ರಾಮ್
"HANUMANCO"
ಪೋಸ್ಟ ಬಾಕ್ಸ ನಂಬ್ರ 27

ಜನತಾ ಸೇವೆಗೆ ಸದಾ ಸಿದ್ಧವಾಗಿದೆ.

ಸರಮಾತ್ಮಶ್ರೀ ಕೃಷ್ಣನು ತನ್ನ ಭಜಕ ವೃಂದಕ್ಕೊಲಿದು ಬಂದು ನೆಲೆಸಿಂತು ಪಾವನಗೊಳಿಸಿದ ಪುಣ್ಯಭೂಮಿ ಉಡುಪಿಯಲ್ಲಿ 1930ನೆ ಇಸವಿಯಲ್ಲಿ ಸಾರಿಗೆ ಸೌಕರ್ಯಕ್ಕೋಸ್ಕರ ಸ್ಥಾಪನೆಗೊಂಡು ತನ್ನ 30 ವರ್ಷಗಳ ದೀರ್ಘ ಸೇವೆಯಲ್ಲಿ ಶ್ರೀ ಕೃಷ್ಣನನ್ನು ಸಂದರ್ಶಿಸಲು ಬರುವಂಥಾ ಸಾವಿರಾರು ಜನ ಯಾತ್ರಿಕರಿಗೆ ಪ ಪ್ರಯಾಣಿಕರಿಗೆ ಸಾರಿಗೆ ಸೌಕರ್ಯದ ಸೌಲಭ್ಯವನ್ನು ನೀಡಿ ಶ್ರೀ ಪರಮಾತ್ಮನ ಅನುಗ್ರಹದಿಂದ ಊರ್ಜಿತ ಸ್ಥಿತಿಯಲ್ಲಿ ಜನತಾ ಸೇವೆಯನ್ನು ಮಾಡಿ ಹೆಸರುಗಳಿಸಿದ ಕಂಪೆನಿ ಮಾತ್ರವಲ್ಲದೆ ಮಹಾಮೈಸೂರಿನಲ್ಲಿ ಪ್ರೇಕ್ಷಣೀಯ ಸ್ಥಳಗಳಿಗೂ ಪವಿತ್ರ ಕ್ಷೇತ್ರಗಳಿಗೂ ವಿದ್ಯಾರ್ಥಿ ವೃಂದದವರನ್ನು ಹಾಗೂ ಪ್ರೇಕ್ಷಕರನ್ನು ಒಯ್ಯಲು Tourist ಬಸ್ಸನ್ನು ಒದಗಿಸಿಕೊಟ್ಟು ಹೆಸರು ಗಳಿಸಿದ ಉಡುಪಿಯ ಅತಿ ದೊಡ್ಡ ಕಂಪೆನಿ.

ದಿ ಹನುಮಾನ್ ಟ್ರಾನ್ಸ್‌ಪೋರ್ಟ್
ಕಂಪೆನಿ ಪ್ರೈವೇಟ್ ಲಿಮಿಟೆಡ್
ಉಡುಪಿ
ಮೈಸೂರು ಸ್ಟೇಟ್

ಅಂತರಿಕ್ಷದಲ್ಲಿ ಮೋಜು

ಅಂತರಿಕ್ಷ ವಿಜ್ಞಾನವೆಂದು ಜನರ ನಿತ್ಯದ ವಿಚಾರ ವಿಮರ್ಶೆಯ ವಿಷಯವಾಗಿ ಪರಿಣಮಿಸಿದೆ. ಕೃತಕ ಚಂದ್ರನನ್ನು ಬಾಂದಳಕ್ಕೆ ಹಾರಿಸುವುದರಿಂದ ಪ್ರಾರಂಭವಾದ ಈ ವೈಜ್ಞಾನಿಕ ಸಂಶೋಧನೆಯು ಅಂತರ್ಗ್ರಹ ಸಂಚಾರದತ್ತ ತೀವ್ರವಾಗಿ ಮುಂದುವರಿಯುತ್ತಿದೆ. ಈ ಮೋಜಿನ ಪ್ರಸಂಗವನ್ನು ನೀವು ಅವಶ್ಯ ತಿಳಿದಿರಬೇಕು.

ಲೇಖಕರು: ಪ್ರೊ| ಕೇ ಎಸ್. ಸವಣೂರು, ಎಂ. ಎಸ್‌ಸಿ.,
ಕರ್ನಾಟಕ ಸಾಯನ್ಸ ಕಾಲೇಜ, ಧಾರವಾಡ.

ಪ್ರಾಸ್ತಾವಿಕ

ಭೂಭೌತಿಕ ವರುಷದಿಂದ ಪ್ರಾರಂಭವಾದ ಅನೇಕ ಸಂಶೋಧನೆಗಳಲ್ಲಿ, ಪೃಥ್ವಿಯನ್ನು ಸುತ್ತುವರಿಯುವಂತೆ ಕೃತಕ ಚಂದ್ರರನ್ನು ಕಳುಹಿಸುವುದು ಸಾಧ್ಯವಾದಂದಿನಿಂದ ಗ್ರಹಾಂತರ ಪ್ರವಾಸ ಮುಂತಾದವುಗಳು ಇಂದು ಎಲ್ಲರಲ್ಲಿಯೂ ಒಂದು ತೆರದ ಕುತೂಹಲವನ್ನು ಕೆರಳಿಸಲು ಕಾರಣವಾಗಿವೆ. ನಮ್ಮ ಪೃಥ್ವಿಗೆ ಅತ್ಯಂತ ಸಮೀಪದವನಾದ ಚಂದ್ರನ ಸಂಬಂಧದಲ್ಲಿ ಅನೇಕ ಸಂಶೋಧನೆಗಳು ಅವ್ಯಾಹತವಾಗಿ ಸಾಗಿವೆ. ಹಲವು ರಾಷ್ಟ್ರದವರು ಚಂದ್ರಗೋಲದ ಮೇಲಿನ ಸ್ಥಳವನ್ನು ಕೊಳ್ಳುವ ವಿಚಾರದಲ್ಲಿರುವರು, ಬೇರೆ ಹಲವರು ಚಂದ್ರಗೋಲವನ್ನು ಸೈನಿಕ ಶಾಣೆಯನ್ನಾಗಿ ಉಪಯೋಗಿಸುವುದರ ಸಾಧ್ಯಾಸಾಧ್ಯತೆಯನ್ನು ಪರಿಶೀಲಿಸುತ್ತಿರುವರು, ಇನ್ನೂ ಹಲವರು ಜಗತ್ತಿನ ಜನಸಂಖ್ಯೆಯು ಅಂಕಿಮೀರಿ ಹೆಚ್ಚಿದರೆ ಈ ಹೆಚ್ಚಿದ ಜನತೆಯನ್ನು ಬೇರೆ ಗ್ರಹಗಳಿಗೆ ಅಥವಾ ಮೊದಲನೆಯದಾಗಿ ಚಂದ್ರಗೋಲಕ್ಕೆ ಕಳುಹಿಸಿ ಈ ಸಮಸ್ಯೆಯನ್ನು ಬಿಡಿಸಬಹುದು ಎಂದು ಬಗೆಯುತ್ತಿರುವರು. ತನ್ನಿಂದ ತಾನೇ ಬರೆದಿಡಲು ಹಾಗು ಹಲವು ಸಂದರ್ಭಗಳಲ್ಲಿ ಇಂತಹ ವಿವರಗಳನ್ನು ರೇಡಿಯೋ ಮುಖಾಂತರವಾಗಿ ನಮಗೆ ಕಳುಹಿಸಲು ಸಾಧ್ಯವಿದ್ದ ಉಪಕರಣಗಳಿಂದ ಸುಸಜ್ಜಿತವಾದ ಈ ಆಕಾಶನೌಕೆಗಳ ಮುಖ್ಯವಾದ ಕಾರ್ಯವೇನು ಎಂಬುದನ್ನು ವಿವರಿಸುವುದೇ ಈ ಲೇಖನದ ಮುಖ್ಯ ಉದ್ದೇಶವು. ಪ್ರಪಂಚದ ಪ್ರಾರಂಭದಿಂದಲೂ ವಿರಹಿಗಳ ಮತ್ತು ಪ್ರೇಮಿಗಳ ಪರಮಮಿತ್ರನೆಂದು ಖ್ಯಾತಿವೆತ್ತ ಚಂದ್ರನು — ತಗ್ಗು ಉಬ್ಬುಗಳಿಂದ ಕೂಡಿದ ಮೋರೆಯವನು, ಅತ್ಯುಷ್ಣ–ಅತಿಶೀತ ಪ್ರದೇಶಗಳಿಂದ ಆವೃತನು ಇತ್ಯಾದಿ ವಿಜ್ಞಾನಿಗಳ ವಿವರಣೆಯ ಕಾರಣದಿಂದಾಗಿ ಎಲ್ಲಿ ತನ್ನ ಮಹತ್ವವನ್ನು ಕಳೆದುಕೊಳ್ಳುವನೋ ಎಂಬ ಭೀತಿಯೂ ಉಂಟಾಗಿದೆ.

ಅಂತರಿಕ್ಷ ವಿಜ್ಞಾನದ ಅಲ್ಪ ಪರಿಚಯ

ಅಂತರಿಕ್ಷ ವಿಜ್ಞಾನದ ಹಿನ್ನೆಲೆಯನ್ನು ಮತ್ತು ಇಲ್ಲಿಯ ನಿಯಮಗಳನ್ನು ತಿಳಿಯಲು ಹಿಂದಿನ ಶತಮಾನದಲ್ಲಿ ಬೆಳೆದ ಕ್ಲಿಷ್ಟವಾದ ಭೌತವಿಜ್ಞಾನದ ಪ್ರಗತಿಯನ್ನು ಗಮನಿಸುವ ಅಗತ್ಯವಿಲ್ಲ. ಇಂದು ಹಳೆಯದೆಂದು ತಿಳಿಯಲ್ಪಟ್ಟ ನೂಟನ್ನರವರ ಗತಿವಿಷಯಕ ನಿಯಮಗಳು ಮತ್ತು ಅವರ ಹೆಸರಿನಿಂದಲೇ ಪ್ರಸಿದ್ಧವಿರುವ ಗುರುತ್ವಾಕರ್ಷಣ ನಿಯಮ ಇವುಗಳನ್ನು ತಿಳಿದರೆ ಸಾಕು. ಯಾವುದೊಂದು ವಸ್ತುವನ್ನು ಹಲವು ನೂರು ಮೈಲುಗಳಷ್ಟು ಮೇಲೆ ಎಸೆದು ಅದಕ್ಕೆ ಸಮಾನಾಂತರವಾಗುವಂತೆ ಕಂದಿಗೆ ೫ ಅಥವಾ ೧೦ ಮೈಲುಗಳ ವೇಗವನ್ನು ಕೊಡಮಾಡಿದರೆ ಅದಕ್ಕೆ ಏನಾಗಬಹುದು ಇತ್ಯಾದಿ ವಿವರಗಳನ್ನು ಕೇವಲ ನ್ಯೂಟನ್ನರವರ ನಿಯಮಗಳನ್ನು ಅನ್ವಯಿಸಿ ಸ್ಥೂಲವಾಗಿ ಹೇಳಬಹುದು. ಪೃಥ್ವಿಯಿಂದ ಮೇಲೆ ಮೇಲೆ ಹೋದಂತೆ ಪ್ರಮಾಣದಲ್ಲಿ ಕಡಿಮೆಯಾಗಲಿರುವ ವಸ್ತುವಿನ ಮೇಲಿನ ಗುರುತ್ವಾಕರ್ಷಣವು ಕೇಂದ್ರೋತ್ಸಾರಿ (Centrifugal) ಶಕ್ತಿಗೆ ಸಮವಾದಾಗ ಈ ವಸ್ತುವು ಪೃಥ್ವಿಯನ್ನು ಸುತ್ತುವ ಕೃತಕಚಂದ್ರನಾಗುವುದು. ಈಗ ಇದು ಪೃಥ್ವಿಯನ್ನು ಸುತ್ತಲು ಎಷ್ಟು ವೇಗೆಯು ಬೇಕಾಗುವುದೆಂಬುದನ್ನು ತಿಳಿಯಬಹುದು.

ಅಂತರಿಕ್ಷದಲ್ಲಿ ಮೋಜು

ಸಾಧಾರಣವಾಗಿ ೪೦೦ ಮೈಲುಗಳಷ್ಟು ಎತ್ತರದ ಮೇಲೆ ೧೦೦ ಯೂರ್ಡುಗಳಷ್ಟು ಅಂತರವನ್ನಿರಿಸಿಕೊಂಡು ಎರಡು ಬಾಹ್ಯಾಕಾಶ ನೌಕೆಗಳು ಪೃಥ್ವಿಯನ್ನು ವರ್ತುಲಾಕಾರವಾದ ಪಥದಲ್ಲಿ ಸುತ್ತುತ್ತಿವೆ ಎಂದು ತಿಳಿಯುವಾ. ಹಿಂದಿನ ನೌಕೆಯಲ್ಲಿ ಇದ್ದವನಿಗೆ ಮುಂದಿನ ನೌಕೆಯಲ್ಲಿ ಕುಳಿತವನಿಗೆ ಒಂದು ಚಂಡನ್ನು ಕಳುಹಿಸುವುದಾದಲ್ಲಿ ಮೊದಲಿಗನು ಇದನ್ನು ಹೇಗೆ ಕಳುಹಿಸಬಹುದು ಎಂಬುದನ್ನು ವಿಚಾರಿಸೋಣ.

ಇದು ಬಹಳೇ ಸುಲಭವಾದ ಕಾರ್ಯವೆಂದು ಎನಿಸಬಹುದು. ಏಕಂದರೆ ಈ ನೌಕೆಗಳು ಅದೇ ಪಥದಲ್ಲಿ ತಿರುಗುತ್ತಿರುವವಾದ್ದರಿಂದ ಅವುಗಳು ಅದೇ ವೇಗದಿಂದ ಕ್ರಮಿಸುತ್ತಿರುವವು ಮತ್ತು ಹಿಂದಿನ ನೌಕೆಯಲ್ಲಿದ್ದವನು ಚಂಡನ್ನು ವೇಗದಿಂದ ಎಸೆದರಾಯಿತು. ಆದರೆ ಇಲ್ಲಿಯ ಗತಿನಿಯಮಗಳಿಂದಾಗಿ ಇದು ಸಾಧ್ಯವಾಗದು. ಯಾವುದೊಂದು ವಸ್ತುವು ಒಂದು ವಿಶಿಷ್ಟ ತ್ರಿಜ್ಯದ ವರ್ತುಲವನ್ನು ಸುತ್ತುವಾಗ ಅದರ ಸ್ಪರ್ಶರೇಖೆ (tangent) ಯನ್ನು ಅನುಸರಿಸಿದ ಅದರ ವೇಗವು ಒಂದು ಮೊತ್ತದ್ದು ಇದ್ದರೆ ಮತ್ತು ಈ ವೇಗವು ಹೆಚ್ಚಿದರೆ ಇದು ಮೇಲಿನ ಕಕ್ಷೆಯಲ್ಲಿ ಹೆಚ್ಚು ಸಾವಕಾಶವಾಗಿ ತಿರುಗುವುದು. ಈ ನಿಯಮದ ಪ್ರಕಾರ ಹಿಂದಿನ ನೌಕೆಯಲ್ಲಿದ್ದವನು ತನ್ನ ಚಂಡನ್ನು ವೇಗದಿಂದ ಒಗೆದಲ್ಲಿ ಇದರ ವೇಗವು ಹೆಚ್ಚುವುದ

(೧೩ನೇ ಪುಟ ನೋಡಿರಿ)

ಯಾವಾಗಲೂ ಸುಪ್ರಸಿದ್ಧ "ಜ್ಯೋತಿ" ಮಾರ್ಕಿನ

ಉ
ಉ ದ ಯಾ
ಯಾ







ಹಂಚುಗಳನ್ನೇ
ಉಪಯೋಗಿಸಿರಿ.

UDAYA INDUSTRIES, GULVADY

Manufacturers of

Famous "JYOTHI" Brand Tiles, Ridges, etc. etc.

and

SAW MILL OWNERS,

P. O. BASRUR, S. K.

ಭಾರತ ಪ್ರಜಾಪ್ರಭುತ್ವದಲ್ಲಿ

ವಿರೋಧಿ ಪಕ್ಷಗಳ ಅಸ್ತಿತ್ವ

ವಿಶ್ವದಲ್ಲಿಯೇ ಸುವಿಸ್ತೃತ ಪ್ರಜಾಪ್ರಭುತ್ವವೆನಿಸಿದ ಭಾರತವು ಸಮರ್ಥ ವಿರೋಧಿ ದಳವೊಂದರ ಆಭಾವದಿಂದಿದ್ದರೂ ಆಳುವ ಪಕ್ಷ ಕಾಂಗ್ರೆಸ್‌ನ ಉದಾರ ಸ್ವಾತಂತ್ರ್ಯ ನೀತಿಯಿಂದಾಗಿ ಅದು ಆಜೇಯ ಗಣರಾಜ್ಯವೆನಿಸಿದೆ. ಆದರೆ, ಇಂತಹ ಪಥ ಭ್ರಮಣವೆಷ್ಟು ಕಾಲ ನಡೆದೀತು?

ಬರೆದವರು: ಶ್ರೀ ಎಸ್. ನಾರಾಯಣ ಬಲ್ಲಾಳ್.

ಪ್ರಜಾಪ್ರಭುತ್ವವು ಆರೋಗ್ಯಕರವಾಗಿ ಪ್ರಗತಿ ಹೊಂದಬೇಕಾದರೆ ರಾಜಕೀಯ ಪಕ್ಷಗಳು ಸುಸಂಸ್ಕೃತವೂ, ಸುಸಂಘಟಿತವೂ, ಜನಪ್ರಭಾವಿಯೂ ಆಗಿರಬೇಕು. ಈ ದಿಸೆಯಲ್ಲಿ ಭಾರತದ ಶೈಶವಾವಸ್ಥೆಯ ಪ್ರಜಾಪ್ರಭುತ್ವವನ್ನು ನಿರೀಕ್ಷಿಸಿದರೆ ಭಾರತದ ಪಕ್ಷಗಳು ಹೇಳಿಕೊಳ್ಳುವಷ್ಟು ಸುಸಂಬದ್ಧವಾಗಿಲ್ಲ.

ಭಾರತದ ಪ್ರಧಾನ ಪಕ್ಷವಾದ ಕಾಂಗ್ರೆಸ್ ಸರಕಾರದ ಸೂತ್ರಧಾರತ್ವವಹಿಸಿದೆ. ಸ್ವಾತಂತ್ರ್ಯ ಪೂರ್ವದಿಂದಲೂ ಹಲವು ದಶಕಗಳ ಜಾಯಮಾನವುಳ್ಳ ಈ ಪಕ್ಷವು ಒಂದು ಸುಸಂಬದ್ಧ ತತ್ವ ಪ್ರಣಾಳಿಯಿಂದ ಘಟನಾಬದ್ಧವಾಗಿ ಮುಂದರಿಯುತ್ತಿದೆ. ಅದಕ್ಕೊಂದು ತನ್ನದೇ ಆದ ಹಿನ್ನೆಲೆಯಿದೆ. ಇದು ಪ್ರಭಾವಪೂರ್ಣವೂ, ಜನಾಕರ್ಷಕವೂ ಆಗಿದೆ. ಈ ಮಹಾಸಂಸ್ಥೆ ಸ್ವಾತಂತ್ರ್ಯ ಸಮರದಂತಹ ಸಂದಿಗ್ಧ ಸನುಯದಿಂದಲೂ ಜನತೆಯ ನಿಕಟ ಸಂಪರ್ಕ ಪಡೆದಿದ್ದುದರಿಂದ ಜನರೂ ಆ ಕೀರ್ತಿಧ್ವಜದ ಅಡಿಯಲ್ಲಿ ಸ್ಫೂರ್ತಿ, ಉತ್ಸಾಹಸ್ಫೋರಿತರಾಗುತ್ತಿದ್ದುದರಿಂದ ಕಾಂಗ್ರೆಸ್ ಭಾರತದ ಜನಜೀವನದಲ್ಲೊಂದು ಉನ್ನತ ಸ್ಥಾನ ಪಡೆಯಲು ಶಕ್ತವಾಗಿದೆ.

ಕಾಂಗ್ರೆಸ್ ಸ್ವಾತಂತ್ರ್ಯಾನಂತರದ ಕಾಲದಲ್ಲಿ ಅಧಿಕಾರ ಸೂತ್ರ ಹಿಡಿಯಿತು. ಅಧಿಕಾರ ಗದ್ದುಗೆಗೇರಿದವರು ಟೀಕೆ, ವಿರೋಧವನ್ನು ಎದುರಿಸಲೇಬೇಕು. ಸ್ವಾತಂತ್ರ್ಯ ಸಂಗ್ರಾಮ ಕಾಲದಲ್ಲಿ ಸರ್ವತ್ರವಾಗಿ, ವಿಶೇಷವಾಗಿ ಮೆರೆದ ಈ ಪಕ್ಷ ಆ ಮೇಲಿನ ದಿನಗಳಲ್ಲಿ ಭಾರತದ ಪ್ರಜಾಪ್ರಭುತ್ವದಲ್ಲಿ ಒಂದು ಪಕ್ಷವಾಗಿ ವಿಭಾಗಿಸಲ್ಪಟ್ಟಿತು. ಈ ಮಹಾ ಪಕ್ಷವನ್ನು ಎದುರಿಸುವುದು ಸುಲಭದ ವಿಚಾರವಲ್ಲ. ಏಕೆಂದರೆ ಭಾರತದ ಸಾಂಸ್ಕೃತಿಕ, ಐತಿಹಾಸಿಕ ಜಾಗೂ ಜನಜೀವನದ ನಿಕಟ ಸಂಪರ್ಕವಿರುವ ಏಕಮೇವ ಪಕ್ಷವೇ ಕಾಂಗ್ರೆಸ್.

ಭಾರತೀಯರ ರೂಪ ಮೂರ್ತವಾದ ತತ್ವಗಳೇ ಜೀವಾಳವಾಗಿರುವ ಭಾರತದ ಕಲ್ಯಾಣ ಸಾಧನೆಯ ಮಾರ್ಗಗಳನ್ನೆಲ್ಲ ಕ್ರಮಬದ್ಧವಾಗಿ ನಿರೂಪಿಸುವ ಈ ಪಕ್ಷವನ್ನು ವಿರೋಧಿಸುವುದು ಯಾವ ಪಕ್ಷಕ್ಕೆ ಸಾಧ್ಯವಿದೆ? ಭಾರತೀಯರೆಲ್ಲರ ಕಲ್ಯಾಣ ಮಾರ್ಗಕ್ಕೆ ಈ ಪಕ್ಷವು ಪರಿಹಾರ ಸೂಚಿಸಿದೆ. ಭಾರತೀಯರ ಭಾವಿ ಯೋಜನೆಯ ಸಿದ್ಧಿಮಾರ್ಗವೇ ಕಾಂಗ್ರೆಸಿನ ಗುರಿಯಾಗಿದೆ. ಹೀಗಿರುವಾಗ ಭಾರತದಲ್ಲಿ ವಿರೋಧ ಪಕ್ಷಗಳು ಅಸ್ತಿತ್ವ ಪಡೆಯುವ ಮಾರ್ಗವು ಯಾವುದು?

ಕಾಂಗ್ರೆಸಿನ ತತ್ವಗಳನ್ನು ವಿರೋಧಿಸಿ, ಯಾವುದೇ ಪಕ್ಷ ಪ್ರಗತಿಗಾಮಿಯಾಗುವಂತಿಲ್ಲ. ಪುರಾತನ ಸಂಸ್ಕೃತಿಯ ನೆಲೆಗಟ್ಟಿನಲ್ಲಿ, ಸನಾತನ ಧರ್ಮದ ಬೆಂಗಾವಲಲ್ಲಿ ಅರ್ವಾಚೀನ ಪದ್ಧತಿಯನ್ನು ಅನುಷ್ಠಾನಕ್ಕೆ ತರುವ ತತ್ವಪ್ರಣಾಳಿ ಕಾಂಗ್ರೆಸಿನದು. ಭಾರತದಂತಹ ಸಂಸ್ಕೃತ ಪ್ರಧಾನ ರಾಷ್ಟ್ರಕ್ಕೆ ಇದಲ್ಲದೆ ಅನ್ಯ ಮಾರ್ಗವಿಲ್ಲ. ಕಾಂಗ್ರೆಸನ್ನು ವಿರೋಧಿಸಲು ವಿರೋಧಿ ಪಕ್ಷಕ್ಕೆ ತತ್ವ ಭಿನ್ನತೆಯು ನೆವ ಮುಂದೊಡ್ಡುವುದು ಅಸಾಧ್ಯವಾಗುತ್ತದೆ. ತತ್ವ ಸಾಮ್ಯತೆಯಲ್ಲಿ ಮುಂದರಿದರೆ ವಿರೋಧದ ಅವಶ್ಯಕತೆ ನಿರ್ವೀರ್ಯವೆನಿಸುತ್ತದೆ. ಹೀಗಾಗಿಯೇ ಸ್ವಾತಂತ್ರ್ಯೋತ್ಸವದ ದಿನಗಳಲ್ಲಿ ವಿರೋಧಿ ಪಕ್ಷಗಳ ಅಸ್ತಿತ್ವವೇ ಸತ್ವಹೀನವಾಯಿತು.

ಆದರೆ ಅಧಿಕಾರಕ್ಕೊಂದು ವಿರೋಧ ಪಕ್ಷವಿಲ್ಲದಿದ್ದರೆ, ಪ್ರಜಾಪ್ರಭುತ್ವ ಯಶಸ್ವಿಯಾಗಲಾರದೆಂದು ಕೆಲವೊಂದು ವಿರೋಧಿ ಪಕ್ಷಗಳ ಪ್ರಭೃತಿಗಳು ರಾಜಕಾರಣ ಪರಿಸ್ಥಿತಿಯನ್ನು ಕೂಲಂಕಷವಾಗಿ ಏಮರ್ಶಿಸುತ್ತಾ ಸಂದರ್ಭ ಕಾಯಲು ತೊಡಗಿದರು.

ತತ್ವದ ಸ್ಪರ್ಶೆಯಲ್ಲಿ ಪಕ್ಷ ಕಟ್ಟುವ ಪರಿಸ್ಥಿತಿ ಹೋಗಿ ಧೋರಣೆಯ ವಿಭಿನ್ನತೆಯಿಂದ ಸರಕಾರವನ್ನು ವಿರೋಧಿಸುವ ಪಕ್ಷಗಳು ಹುಟ್ಟಿಕೊಂಡುವು. ಅಧಿಕಾರ ವಹಿಸಿ ಕಾಂಗ್ರೆಸ್ ಸರ್ವಾಧಿಕಾರಿ ಧೋರಣೆ ತಾಳಿತು; ಅದರ ಆಡಳಿತೆ ಆಂಬಂದ್ವಾಗಿದೆ, ಕಾಂಗ್ರೆಸ್ ತತ್ವ ಗಾಳಿಗೆ ತೂರಿಲ್ಪಟ್ಟಿದೆ—ಎಂದು ಮುಂತಾಗಿ ಪ್ರಚಾರ ನಡೆಸಿ ಆ ಮೂಲಕ ಹೊಸ ಪಕ್ಷಗಳ ಜನ್ಮಕ್ಕೆ ಕಾರಣರಾದರು. ಪರಿಣಾಮವಾಗಿ ಪ್ರಜಾಪಕ್ಷ, ಸೋಶಿಯಲಿಸ್ಟ್ ಪಕ್ಷ, ಜನಸಂಘ—ಈ ರೀತಿ ಹಲವಾರು ವಿರೋಧಿ ಪಕ್ಷಗಳು ಹುಟ್ಟಿಕೊಂಡುವು.

ಕಮ್ಯುನಿಸ್ಟ್ ಪಕ್ಷ ನಮ್ಮ ರಾಷ್ಟ್ರದ ಪ್ರಮುಖ ವಿರೋಧ ಪಕ್ಷವೆನಿಸಬಹುದಾದ ಪ್ರತ್ಯೇಕ ತತ್ವಪ್ರಣಾಳಿ, ಧ್ಯೇಯ ಧೋರಣೆಗಳನ್ನು ಪಡೆದಿದ್ದರೂ ಅದೇ ನಮ್ಮ ದೇಶದ ಸಂಸ್ಕೃತಿ, ಪರಂಪರಾಗತ ಹಿನ್ನೆಲೆಗೆ ವಿರುದ್ಧವಾದ ಧೋರಣೆಗಳಿಂದಾಗಿ ಒಂದು ಹೊರ ರಾಷ್ಟ್ರದ ಆದೇಶವನ್ನು ತನ್ನ ಆದರ್ಶವಾಗಿ ಪರಿಗಣಿಸಿದ್ದರಿಂದ ಅದೊಂದು ಭಾರತದ ಪ್ರಜಾಪ್ರಭುತ್ವದ ನೆಲೆಯಲ್ಲಿ ವಿರೋಧಿ ಪಕ್ಷವೆಂದು ಹೇಳುವಂತಿಲ್ಲ. ಅದರ ವ್ಯಾಪಕತೆ, ಅದರ ಧೋರಣೆಗಳು ಎಷ್ಟು ಪ್ರಗತಿಗಾಮಿಯೂಗಿ ಕಂಡರೂ, ಅದು ಅತ್ಯಂತ ಸಂಸ್ಥೆಯಾಗಿರುವುದರಿಂದ ಪ್ರಜಾಪ್ರಭುತ್ವ ನಿಷ್ಠರೆಲ್ಲ ಆ ಪಕ್ಷವನ್ನು ವಿರೋಧಿಸದೆ ಗತಿಯಿಲ್ಲ.

ಸ್ವಾತಂತ್ರ್ಯ ಪೂರ್ವದಲ್ಲಿ ಪ್ರಮುಖ ರಾಜಕೀಯ ಪಕ್ಷವೆಂದು ಅಳರಸದಿಂದ ಪರಿಗಣಿತವಾದ ಹಿಂದೂ ಮಹಾಸಭೆಯು ಸ್ವಾತಂತ್ರ್ಯ ನಂತರದಲ್ಲಿ ಸಂಪೂರ್ಣವಾಗಿ ಸತ್ವಹೀನವಾದುದು ಬಹು ಕಾತುರದ ವಿಚಾರವೇ ಆಗಿದೆ. ಹಿಂದೂ ಸಂಸ್ಕೃತಿ, ಹಿಂದೂ ರಾಜ್ಯ, ಹಿಂದೂ ಮತದ ಬಗ್ಗೆ ಪ್ರತ್ಯೇಕತಾ ಭಾವನೆ ಕಟ್ಟಿಕೊಂಡ ಈ ಸಂಸ್ಥೆಯು ತೇಜೋಹೀನತೆಯಿಂದ ಭಾರತೀಯ ಪ್ರಜಾಪ್ರಭುತ್ವವು ಒಪ್ಪಿದ ಜಾತ್ಯಾತೀತ ಧೋರಣೆಗೆ ಜನರ ಬೆಂಬಲ ಸುದೃಢವಾಗಿದೆ ಎಂದು ಸಾರಿ ಹೇಳಿದಂತಾಯಿತು.

ಆದರೆ ಈಗ ಜನಸಂಘವು ವಿಶಾಲತಳಹದಿಯ ತನ್ನ ತತ್ವದ ಪ್ರಸ್ತಾಪನೆ ಮಾಡಿದರೂ, ಜಾತೀಯ ಸಂಕುಚಿತ ಧೋರಣೆಗಳಿಗೆ ಬಲವಾಗಿ ಅಂಟಿಕೊಂಡಿದೆ. ಜಾತೀಯ ಸ್ವಯಂಸೇವಕ ದಳವಾದ ಆರ್. ಎಸ್. ಎಸ್. ನವರ ರಾಜಕೀಯ ಮುಖವಾಡವಾಗಿ ಈ ಜನಸಂಘವು ಬಲಿಯುತ್ತಿದೆಯೂದರೂ ಭಾರತದ ಕೋಟ್ಯಂತರ ಜನರ ದೃಷ್ಟಿಕೋನದಿಂದ ಈ ಸಂಘದ ಅಸ್ತಿತ್ವವು ಶೂನ್ಯಮಟ್ಟದಲ್ಲೇ ಇದೆ ಎನ್ನಬಹುದು.

ಸ್ವಾತಂತ್ರ್ಯಾನಂತರ ನಡೆದ ಪ್ರಥಮ ಚುನಾವಣೆಯಲ್ಲಿ ಕಾಂಗ್ರೆಸನ್ನು ಬಲವಾಗಿ ಇದಿರಿಸಿದ ಪಕ್ಷವೆಂದರೆ ಪ್ರಜಾಪಕ್ಷ. ಕಾಂಗ್ರೆಸಿನೊಳಗೆ ಇದ್ದವರೇ ಮತಬೇಧದಿಂದ ಹೊರಬಂದು ಈ ಪಕ್ಷವನ್ನು ಕಟ್ಟಿದರು. ಚುನಾವಣೆಯ ಸ್ವಾರ್ಥ ಸಾಧನೆಯ ಹಿನ್ನೆಲೆಯಲ್ಲೇ ಈ ಪಕ್ಷ ಅಸ್ತಿತ್ವಕ್ಕೆ ಬಂತು. ಕಾಂಗ್ರೆಸಿನ ಅಶಕ್ತ ಜನರು ಈ ಪಕ್ಷದ ಅಧ್ವರ್ಯುಗಳಾದರು. ಆದರೆ ಈ ಪಕ್ಷ ಎಷ್ಟು ಶೀಘ್ರವಾಗಿ ಅಸ್ತಿತ್ವಕ್ಕೆ ಬಂದಿತೋ, ಅಷ್ಟೇ ಬೇಗ ಅವಸಾನವನ್ನೂ ಕಾಣುವಂತಾಯಿತು. ಕಾರಣ ಆ ಪಕ್ಷಕ್ಕೊಂದು ತಾತ್ವಿಕ ತಳಹದಿ ಇರಲಿಲ್ಲ. ಕಾಂಗ್ರೆಸಿನಿಂದ ಅಧಿಕಾರ ಕಿತ್ತುಕೊಳ್ಳುವುದೇ ಅವರ ತತ್ವ, ಧೋರಣೆ, ಅಂತಿಮ ನಿರ್ಧಾರಗಳಾಗಿದ್ದುವೆನ್ನಬಹುದು. ಚುನಾವಣೆಯ ಹುಮ್ಮಸ್ಸಿನಲ್ಲಿ ಕೆಲವು ಕಡೆ ಜನರು ಪ್ರಜಾಪಕ್ಷದ ನೆಲೆಯಲ್ಲಿ ಸ್ಪರ್ಧಿಸಿದ ವ್ಯಕ್ತಿಗಳ ವೈಯಕ್ತಿಕವಾದ ಪ್ರಭಾವ, ಪ್ರತಿಷ್ಠೆಗಳಿಗೆ ಮನ್ನಣೆನೀಡಿದರೂ, ಪ್ರಜಾಪಕ್ಷದ ನಿರಂತರ ಮುನ್ನಡೆಯು ಅರ್ಥಹೀನವೆಂದೇ ಭಾವಿಸಿದರು. ಹೀಗಾಗಿ ಪ್ರಜಾಪಕ್ಷವು ಸಮಾಜವಾದಿ ಪಕ್ಷದೊಡನೆ ಸೇರಿಕೊಂಡು ಆ ಪಕ್ಷದ ಅಧಃಪತನಕ್ಕೂ ಕಾರಣವಾಯಿತು.

ಸೋಶಿಯಲಿಸ್ಟ್ ಪಕ್ಷದ ತಾತ್ವಿಕ ಧೋರಣೆ ಕಾಂಗ್ರೆಸಿನದೇ ಆಗಿದ್ದರೂ, ಅವರು ಕಾಂಗ್ರೆಸ್ ತತ್ವಗಳ ತೀವ್ರಗಾಮಿ ಪ್ರತಿಪಾದಕರಾಗಿದ್ದರು. ಆ ಪಕ್ಷದ ಪ್ರಭಾವಿ ಮುಖಂಡರಾದ ಜಯಪ್ರಕಾಶ ನಾರಾಯಣ, ಅಶೋಕ ಮೆಹತ್ಹ, ನರೇಂದ್ರದೇವ್, ಪಟವರ್ಧನ್, ಲೋಹಿಯಾ ಮುಂತಾದವರು ಭಾರತೀಯ ಮುಮುಂಡರ ಪರಂಪರೆಗೆ ಸೇರಿದವರು. ಹಾಗಾಗಿ ಆ ಪಕ್ಷ ಉತ್ಸಾಹಿ ಪ್ರಗತಿ ಶೀಲರ ಆಕರ್ಷಣೆಗೆ ಪಾತ್ರವಾಯಿತು. ಆದರೆ ಸೋಶಿಯಲಿಸ್ಟರದು ಭಾವುಕ ಮನೋಧರ್ಮ ಅವರು ಭಾವನೆಯ ಆಕಾಶದಲ್ಲೇ ವಿಹರಿಸುತ್ತಾ ವಾಸ್ತವಿಕ ಪರಿಸ್ಥಿತಿಯ ಸರಿತೀಲನೆ

(೧೭ನೇ ಪುಟ ನೋಡಿರಿ)

For the Latest and Best Selections in all kind of Sarees and Textiles

REPUTED FIRM SINCE 1938

Jayantilal Brothers

Our Friendly Suggestions
Homely Atmosphere
and Hearty co-operation at every Step

Makes your Shopping Pleasant and Worth Paying

JAYANTILAL BROTHERS

WHOLESALE & RETAIL

CLOTH MERCHANTS

Wholesale Dept: MISSIONSTREET Telephone: 263

Retail Dept: HAMPANKATTA Telephone: 538

MANGALORE-1.

ರಿಂದ ಅದು ಮೇಲಿನ ಕಕ್ಷೆಯಲ್ಲಿ ತಿರುಗ ತೊಡಗುವುದು. ಅದೇ ವೇಳೆಗೆ ನ್ಯೂಟನ್‌ರವರ ಗತಿವಿಷಯಕ ಮೂರನೆಯ ನಿಯಮದ ಪ್ರಕಾರ ಹಿಂದಿನ ಆಕಾಶನೌಕೆಯ ವೇಗವು ಕಡಮೆಯಾಗುವುದಲ್ಲದೆ ಇದು ಕೆಳಗಿನ ಕಕ್ಷೆಯಲ್ಲಿ ಹೆಚ್ಚು ವೇಗದಿಂದ ತಿರುಗತೊಡಗುವುದು. ಹೀಗಾಗಿ ಈ ಕಾರ್ಯವನ್ನು ನೇರವಾಗಿ ಸಾಧಿಸಲು ಆಗದು.

ಎರಡನೆಯದಾಗಿ ಇಂತಹ ಆಕಾಶ ನೌಕೆಗಳಲ್ಲಿ ಪ್ರಯಾಣವನ್ನು ಕೈಕೊಂಡಾಗ ತೂಕವನ್ನು ಕಳೆದುಕೊಂಡಂತಹ ಅನುಭವವು ಆಗುವುದೆಂಬ.ದಾಗಿ ಇಲ್ಲಿಯ ವಿಜ್ಞಾನದ ಸಿದ್ಧಾಂತಗಳು ನಮಗೆ ಹೇಳುವುವು. ಇದರ ನಿಜವಾದ ಅರ್ಥವನ್ನು ಗ್ರಹಿಸುವುದು ಸುಲಭದ್ದಲ್ಲ. ಭೂಮಿಯ ಮೇಲಿದ್ದಾಗ ಸ್ಥೂಲಕಾಯದವರಿಗೆ ಇದ್ದ ಸಮಸ್ಯೆಯು ಇಲ್ಲಿ ಸಮಸ್ಯೆಯಾಗಿ ಉಳಿಯದೇ ಎಂದು ಯಾರಾದರೂ ಓದುಗರು ಕೇಳಬಹುದು. ಇಂತಹ ಪ್ರಶ್ನೆಗಳನ್ನು ಉತ್ತರಿಸುವ ಗೋಜಿಗೆ ಹೋಗದೆ ಆಕಾಶ ವಿಜ್ಞಾನದಲ್ಲಿಯ ನೋಜುಗಳೆಂದು ಮೇಲಿನ ಎರಡು ಉದಾಹರಣೆಗಳನ್ನು ವಿವರಿಸಿದ್ದೆವೆ.

ಚಂದ್ರಗೋಲವನ್ನು ಸೈನಿತ ತಾಣೆಯನ್ನಾಗಿ ಉಪಯೋಗಿಸಬಹುದೇ?

ಇಂತಹ ವಿಚಾರವು ಊರ್ಜಿತವಾಗಲು ಸೈನಿಕ ತಾಣೆಗಳು ಎತ್ತರ ಪ್ರದೇಶಗಳಲ್ಲಿರುವುದು ಲಾಭದಾಯಕವೆಂಬುದೇ ಕಾರಣವು. ಗುಡ್ಡಗಳು, ಬಲೂನುಗಳು, ವಿಮಾನಗಳು ಈ ಪ್ರಕಾರವಾಗಿ ಕ್ರಮೇಣ

ಅಂತರಿಕ್ಷದಲ್ಲಿ ಮೋಜು

(೧೧ನೇ ಪುಟದಿಂದ)

ಹೆಚ್ಚೆಚ್ಚು ಎತ್ತರ ಪ್ರದೇಶಗಳನ್ನು ಉಪಯೋಗಿಸುವುದಕ್ಕೆ ಬದಲಾಗಿ ಈಗ ಚಂದ್ರಗೋಲವನ್ನು ಈ ಕಾರ್ಯಕ್ಕೆ ಉಪಯೋಗಿಸುವ ಮಾತುಗಳು ಕೇಳಿ ಬರುತ್ತಿವೆ. ಉಳಿದ ವೈಜ್ಞಾನಿಕ ವಿವರಗಳನ್ನು ಬದಿಗಿಟ್ಟು ಹೇಳುವುದಾದಲ್ಲಿ—ನಮ್ಮ ಆಕಾಶ ನೌಕೆಯು ಪೃಥ್ವಿಯ ಗುರುತ್ವಾಕರ್ಷಣೆಯನ್ನು ಎದುರಿಸಿ ಮೇಲೆ ಹೋಗಲು ಸೆಕುಂದಿಗೆ ೫ ಮೈಲುಗಳ ವೇಗವಿದ್ದರೆ ಚಂದ್ರಗೋಲವನ್ನು ಬಿಡಲು ಸೆಕಂದಿಗೆ ಕೇವಲ ೧—೫ ಮೈಲುಗಳ ವೇಗವಿದ್ದರೆ ಸಾಕು. ಈ ವಿಚಾರವು ಮುಖ್ಯವಾಗಿ ಈ ಸೈನಿಕ—ತಾಣೆಯ ಹಿನ್ನೆಲೆಯಲ್ಲಿದೆ. ಇಂತಹ ವೇಳೆಯಲ್ಲಿ ಯಾವುದೇ ವಿಸ್ತಾರಕಾರಿ ಆಸ್ತ್ರದ ವೇಗವೂ ಮುಖ್ಯವಾದದ್ದು. ಇಲ್ಲಿ ಯಾವುದೊಂದು ನಿರ್ದಿಷ್ಟ ಗುರಿಯನ್ನು ಮುಟ್ಟುವುದು ಹೆಚ್ಚು ಕಠಿಣದ್ದಿದೆ. ಇಂತಹ ಕಾರ್ಯವನ್ನು ಸಾಧಿಸುವುದೆಂದರೆ ನಿಶ್ಚಿತ ಗುರಿಯು ಮುಟ್ಟುವ ಛಲವನೆಯಿಲ್ಲದೆ ಹಣದ ಹೊಳೆಯನ್ನು ಹರಿಯಿಸುವಂತಹದು. ಮೇಲಾಗಿ ನಮ್ಮ ಸೈನಿಕ ತಾಣೆಯು (ಚಂದ್ರಗೋಲವು) ತನ್ನ ಸ್ಥಳವನ್ನೇ ಬದಲಿಸುವಂತಹದು. ಇಂತಹ ವಿಚಾರವನ್ನು ಸಹ ಅಂತರಿಕ್ಷ ವಿಜ್ಞಾನದಲ್ಲಿಯ ಒಂದು ಮೋಜೆಂದು ಗಣಿಸಬಹುದು.

ಚಂದ್ರಗೋಲವನ್ನು ವಸತಿಗೆಂದು ಉಪಯೋಗಿಸಬಹುದೇ?

ಭೂಮಿಯ ಮೇಲೆ ಜನಸಂಖ್ಯೆಯ ಹೆಚ್ಚಳವಾದಲ್ಲಿ ಪರಿಹಾರವನ್ನು ಯಾವ ರೀತಿಯಲ್ಲಿ ದೊರಕಿಸಬಹುದು ಅಥವಾ ಈ ವೇಳೆಯಲ್ಲಿ ಯಾವ ಕ್ರಮವನ್ನು ಅನುಸರಿಸಬಹುದು ಎಂಬ ವಿಷಯವನ್ನು ಕುರಿತು ಒಂದು ಟೆಲಿವ್ಹಿಜನ್ ಕಾರ್ಯಕ್ರಮವನ್ನು ಇತ್ತೀಚೆಗೆ ಪ್ರದರ್ಶಿಸಲಾಗಿತ್ತು. ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಒಬ್ಬ ಹಣಕಾಸಿನ ತಜ್ಞರು ಇದು ಸಮಸ್ಯೆಯೇ ಅಲ್ಲವೆಂದೂ ಮತ್ತು ಹೆಚ್ಚಿನ ಜನತೆಯನ್ನು ಅಂತರಿಕ್ಷ ಪ್ರದೇಶಕ್ಕೆ ಸಾಗಿಸಬಹುದೆಂದೂ ಮುಂತಾಗಿ ಶಾಂತ ರೀತಿಯಲ್ಲಿ ಉತ್ತರಿಸಿದರು. ಈ ವಿಚಾರವು ಮಾತ್ರ ನಮ್ಮ ಅಂತರಿಕ್ಷದಲ್ಲಿಯ ಮೋಜಿನ ಮಟ್ಟಕ್ಕೆ ಕಳಸವನ್ನಿಡುವಂತಹದು. ಈಗ ಇಲ್ಲಿಯ ವಿಚಾರವನ್ನು ಪೃಥಕ್ಕರಿಸೋಣ.

ಜಗತ್ತಿನ ಜನಸಂಖ್ಯೆಯು ಪ್ರತಿ ವರುಷ ೪ ಕೋಟಿ ೫೦ ಲಕ್ಷದಷ್ಟು ಎಂದರೆ ಪ್ರತಿನಿತ್ಯ ೧ ಲಕ್ಷ ೨೩ ಸಾವಿರದಷ್ಟು ಹೆಚ್ಚುತ್ತಿದೆಯೆಂದು ತಿಳಿದಿದೆ. ಇಷ್ಟು ಜನರು ನಿತ್ಯವೂ ಅಂತರಿಕ್ಷ ಪ್ರವಾಸವನ್ನು ಕೈಕೊಂಡಲ್ಲಿ ಎಂತಹ ಅದ್ಭುತವಾದ ಉದ್ಯಮವು ಪ್ರಾರಂಭವಾಗಬಹುದು ಎಂಬುದೇನೋ ನಿಜ ಮೊದಲನೆಯದಾಗಿ ಈ ಜನರು ವಸತಿಗೆಂದು ಚಂದ್ರಗೋಲವನ್ನೇ ಆರಿಸಬಹುದು. ಇವರಿಗೆ ನೀರಿನ ಮತ್ತು ಪ್ರಾಣವಾಯುವಿನ ಸರಬರಾಜು ಮಾಡಲು ಭೂಮಿಯಿಂದ ಚಂದ್ರಗೋಲದ ವರೆಗೆ ಎಂದರೆ ೨ ಲಕ್ಷ ೪೦ ಸಾವಿರ ಮೈಲುಗಳಷ್ಟು ಉದ್ದದ ಪೈಪುಗಳನ್ನು ಯಾರು ಮತ್ತು ಹೇಗೆ ಜೋಡಿಸುವರು? ಇವರ ಆಹಾರದ ವ್ಯವಸ್ಥೆಯೇನು? ಇವರು ಅಂತರಿಕ್ಷದ ಇಂಬಿನಲ್ಲಿ ಉಪಯೋಗಿಸುವ ಕವಚಗಳ (Space suits) ವ್ಯವಸ್ಥೆಯೇನು? ಇವುಗಳಿಗೆ ತೂತುಗಳು ಬಿದ್ದರೆ ಹೇಗೆ?

ಇಲ್ಲಿಯ ದಿನವು ನಮ್ಮ ಭೂಮಿಯ ೨೮ ದಿನಗಳಷ್ಟು ಅವಧಿಯದು. ೩೩೬ ತಾಸುಗಳವರೆಗೆ ಸೂರ್ಯಪ್ರಕಾಶ ಮತ್ತು ಅಷ್ಟೇ ತಾಸುಗಳ ಕತ್ತಲು. ಹಗಲಿನಲ್ಲಿ ೨೨೦° ಫಾರನ್ ಹೀಟ್ ಉಷ್ಣತೆ ಮತ್ತು ರಾತ್ರಿಯಲ್ಲಿ ಉಣಾ ೨೨೦° ಚಳಿ. ಪರಿಸ್ಥಿತಿಯು ಹೀಗಿರುವಾಗ ವಿಸ್ತಾರದಲ್ಲಿ ಚಂದ್ರನ ಕ್ಷೇತ್ರದಷ್ಟೇ ಇರುವ ಪ್ಯಾಸಿಫಿಕ ಮಹಾಸಾಗರದ ಮೇಲೆ ತೇಲುವ ಪ್ಲ್ಯಾಟಫಾರ್ಮನ್ನು ಕಟ್ಟಿದಲ್ಲಿ ಹೆಚ್ಚಿನ ಜನತೆಯನ್ನು ಅಲ್ಲಿ ಇರಿಸಬಹುದು. ಜನತೆಯ ಸಂಖ್ಯೆಯು ಇನ್ನೂ ಹೆಚ್ಚಿದಲ್ಲಿ ಇಂತಹವೇ ಬೇರೆ ಮಹಾಸಾಗರಗಳ ಕ್ಷೇತ್ರವನ್ನೂ ಉಪಯೋಗಿಸಬಹುದು. ಇಂತಹ ಯೋಜನೆಯು ಮೊದಲೇ ವಿವರಿಸಲ್ಪಟ್ಟ ನಮ್ಮ ಕಣಕಾಸಿನ ತಜ್ಞನ ಯೋಜನೆಗಿಂತಲೂ ಕಡಿಮೆ ವೆಚ್ಚದ್ದಾಗುವುದಲ್ಲದೆ ಈ ಹೆಚ್ಚಿನ ಜನತೆ

(೧೬ನೇ ಪುಟ ನೋಡಿರಿ)

B. M. SHETTY TILE WORKS & RICE MILLS
BRAHMAVAR.
Estd: 1908.

SHRI SHAKTHI TILE WORKS, KAVRADY,
COONDAPOOR.
Estd: 1957.

The concern is Mahabaleshwara Shetty Sons
Manufacturers of Roofing Tiles and Ridges

Partners:
Sri. B. Jagajivandas Shetty, *M. L. A.*,
Sri B. M. Raghunatha Shetty
and
Dr. B. Balakrishna Shetty, *M.B.,B.S.*

SWASTIK BRAND TILES and
53 year's reputation

NANDI BRAND TILES
the result of the experience gained by the Swastik Brand in 53 years.

MHABALESHWAR SHETTY SONS—BRAHMAVAR.

ರಾಮಾಯಣದಲ್ಲಿ ಮಂಥರೆ

ಆದಿಕವಿ ವಾಲ್ಮೀಕಿಯಿಂದ ವರಕವಿ ಕು. ವೆಂ. ಪುರಿವರೆವರೆಗೆ ಅನೇಕಾನೇಕ ಮಹಾಕವಿಗಳು ರಾಮಾಯಣದ ಕಥೆಯನ್ನು ಆಳವಡಿಸಿ ಕೃತಿ ರಚನೆ ಮಾಡಿದ್ದಾರೆ. ಈ ಬೃಹತ್ ಕಾವ್ಯದಲ್ಲಿ ಬರುವ ಮಂಥರೆಯ ಪಾತ್ರವು ಪ್ರಮಾಣದಲ್ಲಿ ಕಿರಿದಾದರೂ ಪರಿಣಾಮದಲ್ಲಿ ಹಿರಿದು. ಈಕೆಯ ಪಾತ್ರವನ್ನು ವಿವಿಧ ಕವಿಗಳು ಕಂಡ ದೃಷ್ಟಿಯ ಹಕ್ಕಿನೋಟವನ್ನಿಲ್ಲಿ ಕೊಡಲಾಗಿದೆ.

ನೋಡಿದವರು: ಶ್ರೀ ಕೆ. ಎ. ದೇವದಾಸ, ಶಿರೋಮಣಿ.

ಅಯೋಧ್ಯೆಯ ರಾಜನಾಗಬೇಕಾದ ಶ್ರೀ ರಾಮಚಂದ್ರನನ್ನು ಹದಿನಾಲ್ಕು ವರ್ಷ ವನವಾಸಕ್ಕೆ ಕಳುಹಿಸಿದ ಕೈಕೇಯಿಗೆ ಆ ದುರ್ಯೋಧನನೆ ಕೊಟ್ಟವಳು ದಾಸಿ ಮಂಥರೆ. ಆಕೆ ಅಷ್ಟೂ ಕೆಟ್ಟವಳೇ? ಯಾಕೆ ಅವಳು ಅಸಾಧ್ವಿಯಾದ ಕೈಕೇಯಿಯ ಹೃದಯದಲ್ಲಿ ಈ ವಿಷ ತುಂಬಿದಳು? ಎಂಬುದು ಆಲೋಚಿಸ ತಕ್ಕ ವಿಷಯವಾಗಿದೆ. ಶ್ರೀರಾಮನು ಧರೆಯನ್ನು ಆಳುತ್ತಿದ್ದ ಕಾಲದಲ್ಲಿದ್ದ ವಾಲ್ಮೀಕಿ ಶ್ರೀರಾಮನ ಕಥೆ ಸರಿಯಾಗಿ ತಿಳಿದಿರಲಿಲ್ಲ. ನಾರದ ಮುನಿಯು ಹೇಳಬೇಕಾಯ್ತು. ಆ ಕಥೆಯಲ್ಲಿ ನಾರದನು ಮಂಥರೆಯ ಹೆಸರನ್ನೇ ಹೇಳಲಿಲ್ಲ. ಆದ್ದರಿಂದ ವಾಲ್ಮೀಕಿಯು ಸ್ವತಃ ವಾ ಶಿಷ್ಯರ ಮೂಲಕ ಗವೇಷಣೆ ನಡೆಸಿ, "ಕೈಕೇಯಿಗೆ ಮಂಥರೆಯೆಂಬ ಪ್ರಧಾನ ಸೇವಕಿಯಿದ್ದಾಳೆ"ದು ತಿಳಿದಿರಬಹುದು; ಅಥವಾ ಆದಿ ಕವಿಯ ಕುಶಲ ಸೃಷ್ಟಿಯಾಗಿರಲೂ ಬಹುದು—ಈ ಮಂಥರೆ. ರಾಮಾಯಣ ಕಥಾದ್ವಾರದ ಕುಂಚಿತ (ಬೀಗದ ಕೈ) ಇವಳೇ.

ಅನೇಕ ರಾಮಾಯಣಕಾರರೂ ಮಂಥರೆಯ ಕಡೆಗೆ ಗಮನವಿಟ್ಟಿದ್ದಾರೆ. ರಾಮಾಯಣದ ಕಥೆಗೆ ಅವಳೇ ಸೂತ್ರಧಾರಿಣಿಯೆಂದೂ ಹೇಳುವ ರಾಮಾಯಣ ಕವಿಗಳ ಪ್ರತಿಭೆಗೆ ಮಂಥರೆಯ ಪ್ರಕರಣವು ಒಂದು ಮುಖ್ಯ ಸನ್ನಿವೇಶವಾಗಿದೆ.

"ಜ್ಞಾತಿ ದಾಸೀಯಮೇಷಾ ಜಾತಾ" ಎಂದಿಷ್ಟೇ ವಾಲ್ಮೀಕಿಯು ಹೇಳಿದ್ದಲ್ಲದೆ ಈ ಮಂಥರೆಯ ವಿಶೇಷ ಪರಿಚಯವನ್ನು ಎಲ್ಲಿಯೂ ಹೇಳಲಿಲ್ಲ. ಅವಳನ್ನು ಕಡೆಗೆ ಶತ್ರುಘ್ನನು ಹಿಡಿದು, ಬಡಿದು, ರಾಜಸಭೆಗೆ ತಂದನೆಂದೂ, ಭರತನು ಬಿಡಿಸಿದನೆಂದೂ, ಕೌಸಲ್ಯೆಯು ಅಭಯ ನೀಡಿದಳೆಂದೂ ವಾಲ್ಮೀಕಿಯು ಹೇಳಿದ್ದರಿಂದ ಅಂದಿನ ಚರಿತ್ರೆಯನ್ನು ಕಾವ್ಯರಸದಲ್ಲಿ ಹರಿಯಿಸಿದ ವಾಲ್ಮೀಕಿಯ ಸ್ವಂತ ಸೃಷ್ಟಿಯೇ ಈ ಮಂಥರೆಯೆಂದು ಹೇಳಿದರೂ ತಪ್ಪಾಗದು.

ಶ್ರೀರಾಮನಂತಹ ದೇವತಾ ಮನುಷ್ಯನ ಮನೆಯ ದಾಸಿಯು ಆ ಪುಣ್ಯಾತ್ಮನಿಗೆ ವಿರುದ್ಧವಾದ ಭಾವನೆ ತಾಳಿದ್ದು ಹೇಗೆ? ಯಾಕೆ? ಎಂದು ಕವಿಗಳು ವಿಚಾರಿಸ ತೊಡಗಿದರು. ಅಗ್ನಿ ಪುರಾಣಕಾರನು ಹೇಳಿದ್ದುದೇನೆಂದರೆ—ಶ್ರೀರಾಮನು ಚಿಕ್ಕವನಾಗಿದ್ದಾಗ ಒಮ್ಮೆ ಮಂಥರೆಯ ಕಾಲನ್ನು ಹಿಡಿದು ಎಳೆದು ಬಿಟ್ಟನು. ಆದರಿಂದ ರೊಚ್ಚಿಗೆದ್ದ ಆ ದಾಸಿಯು ಈ ರೀತಿ ಪ್ರತೀಕಾರಕ್ಕಾಗಿ ಮುಂದೆ ಬಂದಳು ಎಂದು. ಅಗ್ನಿ ಪುರಾಣದ ಈ ಕಥೆವನ್ನು ಗೌರವಿಸುವ ಸಹೃದಯರಾಗಲಿ ಯುಕ್ತಿವಾದಿಗಳಾಗಲಿ ವಿರಳವೆನ್ನಬಹುದು.

ಗೋಸ್ವಾಮಿ ತುಳಸೀದಾಸರು ಕೂಡಾ ಮಂಥರೆಯ ತಪ್ಪನ್ನು ತಪ್ಪೆಂದು ಒಪ್ಪಿಕೊಳ್ಳುವುದಿಲ್ಲ. ದೇವೇಂದ್ರನ ಕೇಳಿಕೆಯಂತೆ ಸರಸ್ವತೀ ದೆವಿಯು ಮಂಥರೆಯ ದೇಹಕ್ಕೆ ಆವೇಶ ಬಂದು ಅವಳಿಂದ ಈ ರೀತಿ ಹೇಳಿಸಿದಳೆಂದಿದ್ದಾಳೆ. ರಾಕ್ಷಸ ಕುಲಸಂಹಾರಕ್ಕಾಗಿ ಶ್ರೀರಾಮನನ್ನು ವನಕ್ಕೆ ತೆರಳಿಸಬೇಕೆಂದು ದೇವತೆಗಳ ಸಂಕಲ್ಪವಾಗಿತ್ತು. ಹೀಗೆ ತುಳಸೀದಾಸರು ವಾಲ್ಮೀಕಿಯು ಮಂಥರೆಯಲ್ಲಿದ್ದ ದೋಷವನ್ನು ತೊಡೆದುಹಾಕಿ, "ಇದು ಒಂದು ರಾಜಕೀಯ ಉದ್ದೇಶಕ್ಕಾಗಿ ದೇವತೆಗಳು ಹೂಡಿದ ತಂತ್ರ' ವೆಂದೂ ಆಕೆಯ ದೇಹದಲ್ಲಿ ಶ್ರೀ ಶಾರದೆಯು ಮಾಯಾ ಪ್ರವೇಶವಾಗಿ ಶಾರದೆಯೇ ಹೀಗೆ ನುಡಿಸಿದಳೆಂದೂ ಹೇಳಿದ್ದಾರೆ.

ಕೈಕೇಯಿಯನ್ನೂ ಮಂಥರೆಯನ್ನೂ ನಿರಪರಾಧಿಗಳೆಂದು ಸ್ಥಾಪಿಸಿದ ಮತ್ತೊಬ್ಬ ಕವಿ ಭವಭೂತಿ. ಮಾಲ್ಯವಂತನ ಸಲಹೆಯ ಮೇರೆಗೆ ಶೂರ್ಪಣಖೆಯು ಮಾಯೆಯಿಂದ ಮಂಥರೆಯ ದೇಹವನ್ನು ಪ್ರವೇಶಿಸಿದಳೆಂದು ಭವಭೂತಿಯವಾದ. ದಶರಥ ವಸಿಷ್ಠ ಮೊದಲಾದವರು ಮಿಥಿಲೆಗೆ ಶ್ರೀರಾಮನ ಸ್ವಯಂವರಕ್ಕಾಗಿ ಹೋಗಿದ್ದರು. ಅಯೋಧ್ಯೆಯಿಂದ ಕೈಕೇಯಿಯು ಏನೋ ರಾಜಕೀಯ ಪತ್ರವೊಂದನ್ನು ವಿಶ್ವಸ್ಥದಾಸಿ ಮಂಥರೆಯ ವಶಕೊಟ್ಟು ಕಳುಹಿಸಿದಳು. ಶೂರ್ಪಣಖೆಯು ದಾರಿಯಲ್ಲಿ ಬರುತ್ತಿದ್ದ ಮಂಥರೆಯ ದೇಹಕ್ಕೆ ಮಾಯೆಯಿಂದ ಆವಿಷ್ಟಳಾದಳು. ತೋರಿಕೆಗೆ ಮಂಥರೆಯಾದ ಆ ಶೂರ್ಪಣಖೆಯು ಕೈಕೇಯಿಕೊಟ್ಟಿದ್ದ ಕಾಗದವನ್ನು ಹರಿದು ಬಿಸುಟು ಆಕೆಯ ಅಕ್ಷರವನ್ನು ಹೋಲುವ ಕೃತಕ ಪತ್ರವನ್ನು ಬರೆದು ದಶರಥನಿಗೆ ಕೊಟ್ಟು ಮರೆಯದಳು. ದಾರಿಯಲ್ಲಿ ಶೂರ್ಪಣಖೆಯು ಮಂಥರೆಯ ದೇಹವನ್ನು ಬಿಟ್ಟುಹೋದಳು. ಮಂಥರೆಗೆ ಇದೊಂದೂ ತಿಳಿಯದು. ತಾನು ಕೈಕೇಯಿಯ ಪತ್ರವನ್ನು ಕೊಟ್ಟಿದ್ದೇನೆಂದೇ ಆಕೆಯ ಎಣಿಕೆ. ಆದರೆ ಆ ಕೃತಕ ಪತ್ರದಲ್ಲಿ ತನಗೆ ವಾಗ್ದಾನ ಮಾಡಿದ್ದ ಎರಡು ವರಗಳಂತೆ ರಾಮನು ಸೀತಾಲಕ್ಷ್ಮಣರೊಡಗೂಡಿ ಈಗ ಮಿಥಿಲೆಯಿಂದಲೇ ಹದಿನಾಲ್ಕು ವರ್ಷ ವನವಾಸಕ್ಕೆ ತೆರಳಬೇಕು, ಅಯೋಧ್ಯೆಯ ಪಟ್ಟವನ್ನು ಭರತನಿಗೆ ಕಟ್ಟಬೇಕು." ಎಂದು ಬರೆದಿತ್ತು. ಯಥಾರ್ಥವಾಗಿ ಇದು ಕೈಕೇಯಿಗಾಗಲೀ ಮಂಥರೆಗಾಗಲಿ ತಿಳಿದ ಸಂಗತಿಯೇ ಅಲ್ಲವೆಂದೂ ರಾಕ್ಷಸಂತಂತ್ರ ಪ್ರಕಾರ ಶೂರ್ಪಣಖೆಯ ಕೆಲಸವೆಂದೂ ಭವಭೂತಿಯ ಹೇಳಿಕೆ.

ತೊರೆವೆಯ ನರಹರಿ ಮಹಾಕವಿಯು ಮಂಥರೆಯ ನಿರಪರಾಧಿತ್ವವನ್ನು ಸಾರಿದ

ಉಷಾ

ಹೊಲಿಗೆ ಯಂತ್ರಗಳು

ಮತ್ತು

ಫೇನುಗಳು

ಗಟ್ಟಿಮುಟ್ಟಾದ ರಚನೆ! ಸರ್ವರ ಅಭಿರುಚಿ ಗೆಲ್ಲುವ ವಿವಿಧ ಮಾದರಿಯ ತಯಾರಿಕೆ!

ಪ್ರತಿಯೊಂದು ಶೋಧನೆಯಲ್ಲೂ ಶ್ರೇಷ್ಠತೆಯನ್ನು ಗಳಿಸಿ, ನಮ್ಮ ದೇಶದಲ್ಲಿ ವಿಶೇಷವಾಗಿ ವಿಕ್ರಯವಾಗುತ್ತಿರುವ ತೃಪ್ತಿದಾಯಕವೂ ವಿಶ್ವಾಸಾರ್ಹವೂ ಆದ ಹೊಲಿಗೆ ಯಂತ್ರಗಳು ಮತ್ತು ಫೇನುಗಳು

ದಯಮಾಡಿ ನಮ್ಮ ಶೋ ರೂಮನ್ನು ಸಂದರ್ಶಿಸಿ ಯಂತ್ರಗಳನ್ನು ಪರಿತೀಲಿಸಿರಿ!

ಇಂಡಿಯನ್ ಒಟೊಮೊಬೈಲ್ಸ್

ಕಾರ್ನಾಡ್‌ಕರ್ ಬಿಲ್ಡಿಂಗ್ಸ್,
ಉಡುಪಿ, ದ. ಕನ್ನಡ.

ಫೋನ್: 65 ತಂತಿ: ಕಾರ್ನಾಡ್

Estd. 1931. TELE { grams. TILES / phone: No. 6.

PRABHAKARA TILE WORKS

POST BOX NO. 3

Head Office: COONDAPOOR Branch: GULVADI

SOUTH KANARA

Rly Station: MANGALORE

REPUBLIC DAY GREETINGS



"LIGHT HOUSE" Brand Tiles
makes excellent roofing

Symbol of
STRENGTH, DURABILITY & RELIABILITY

built with
SOUND TRADITIONS, HIGH PRINCIPLES
& EXPERIENCE OF 30 YEARS

ಬಗೆ ಹೀಗೆ: ಮಂಥರೆಯು ಮಹಾವಿಷ್ಣುವಿನ ಮೂಯೆಯ ಅವತಾರ ಮಹಾ ವಿಷ್ಣುವಿನ ಶ್ರೀರಾಮಾವತಾರ ಕಾಲದಲ್ಲಿ ಆಕೆಯ ಬೋಧನೆಯಿಂದಲೇ ಕೈಕೇಯಿಯು ಪ್ರೇರಿತಳಾಗಿ ವನವಾಸ ಪ್ರಕರಣ ಮುಂದೆ ಬಂತೆಂದೂ ಶ್ರೀರಾಮನ ಅವತಾರ ಕಾರ್ಯಕ್ಕೆ ಆದು ಅನುಕೂಲವಾಯ್ತೆಂದೂ ಹೇಳಿದ್ದರಿಂದ ಆಕೆಯು ಶ್ರೀರಾಮನ ಕಾರ್ಯ ಸಾಧನೆಗೆ ಸಹಾಯಕಳಾಗಿ ಜನಿಸಿದ ವಿಷ್ಣುಮೂಯೆಯೆಂದು ನಿರ್ಹರಿಯ ವಾದ.

"ಸಾರ್ಥಕ ಜೀವನ"ದಲ್ಲಿ ಶ್ರೀಮತಿ ಸರಸ್ವತಿಬಾಯಿ ರಾಜವಾಡೆಯವರು ಮತ್ತೊಂದು ರೀತಿಯಲ್ಲಿ ಕೈಕೇಯಿ ಮಂಥರೆಯರ ನಿರಪರಾಧಿತ್ವವನ್ನು ಹೊರಗೆಡಹಿದ್ದಾರೆ. ಶ್ರೀರಾಮನಲ್ಲಿ ಅತ್ಯಂತ ವಾತ್ಸಲ್ಯ ಅಭಿಮಾನ ತಾಳಿರುವ ಕೈಕೇಯಿಯು ಆತನ ಶಕ್ತಿಯ ಅಳವನ್ನೂ ಬಲ್ಲಳು. ವಿಶ್ವಾಮಿತ್ರನೊಂದಿಗೆ ವನಾಂತರಕ್ಕೆ ಹೋಗಿ ಮಂತ್ರಾಸ್ತ್ರ ಉಪದೇಶವನ್ನೂ ಪಡೆದು ರಾಕ್ಷಸ ಸಂಹಾರಮಾಡಿದ ಮಹಿಮೆಯನ್ನು ಆಕೆ ಮರೆಯಲಿಲ್ಲ. ಅತ್ತ ಲಂಕೆಯ ರಾಕ್ಷಸರು ದಂಡಕಾರಣ್ಯದಲ್ಲಿದ್ದಾರೆ. ಇನ್ನು ಉತ್ತರ ಭಾರತವನ್ನೇ ಕಬಳಿಸಲ. ತಡವಿಲ್ಲವೆಂದು ಆಕೆಗೆ ಗೊತ್ತಿದೆ. ಶ್ರೀರಾಮನಂಥ ಸರ್ವ ಸಮರ್ಥನು ಅರಮನೆಯೊಡೆಯನಾಗಿ, ಋಷಿಲೋಲುಪನಾಗಿರುವುದಕ್ಕಿಂತಲೂ ದೈತ್ಯಕುಲ ಸಂಹಾರಕನಾಗಿ ಬರುವ ಸನ್ನಿವೇಶವನ್ನೇ ಕಲ್ಪಿಸಿಕೊಡಬೇಕೆಂದು ಯೋಚಿಸಿ ಮಂಥರೆಗೆ ತನ್ನ ಇಂಗಿತವನ್ನು ಹೇಳಿದರು. ನಯನಾಭಿರಾಮನಾದ ರಾಮನನ್ನು ಕಾಡಿಗಟ್ಟುವ ತಂತ್ರವು ಮಂಥರೆಯನ್ನೂ ದಿಗ್ಭ್ರಮೆಗೊಳಿಸಿತು. ಕೊನೆಗೆ ಮಂಥರೆಯು "ಜನಾಪವಾದ ಬಂದಲ್ಲಿ ರಾಣಿಗೆ ತಟ್ಟಬಾರದೆಂದೂ, ಪವಿತ್ರ ಕಾರ್ಯದ ಸಲುವಾಗಿ ಎದ್ದು ಬರುವ ಅಪವಾದಕ್ಕೆ ನಾನೇ ಗುರಿಯಾಗುತ್ತೇನೆಂದೂ" ಹೇಳಿ ಶ್ರೀರಾಮನ ಕೀರ್ತಿ ರಾಮಳಾಗಿ ಇತರ ಸಖಿಯರಿದುರು ಕೈಕೇಯಿಗೆ ಬೋಧನೆ ಕೊಡುವ ನಟನೆ ತಾನೇ ಮಾಡಿದೆಳೆಂದು ಅವರ ಹೇಳಿಕೆ.

ಆದಿಕವಿ ವಾಲ್ಮೀಕಿಯು ಮಂಥರೆಯು ನಿಜವಾಗಿಯೂ ಕೈಕೇಯಿಯ ಮನಸ್ಸನ್ನು ಕೆಡಿಸಿದವಳೂ ರಾಮನ ವನವಾಸಕ್ಕೆ ಆಕೆಯೇ ಮೂಲ ಕಾರಣಳಾದರೂ ಅವಳ ವ್ಯಕ್ತಿತ್ವವು ಗಣನೀಯವಲ್ಲವೆಂದೇ ವಾಲ್ಮೀಕಿಯು ಆಕೆಯು ಒಬ್ಬ ದಾಸಿ ಎಂದಿಷ್ಟೇ ಹೇಳಿರುವನು ಕೊನೆಗೆ ಶತ್ರುಘ್ನನಿಂದ ಬಂದಿತಳಾಗಿ ಭರತನ ರಾಜ ಸಭೆಗೆ ಎಳೆಯಲ್ಪಟ್ಟಾಗ ಭಯ, ಲಜ್ಜೆ ಪಶ್ಚಾತ್ತಾಪಗಳಿಂದ ಜರ್ಜರಿತಳಾದಳು. ಕೌಸಲ್ಯೆಯು ಎಲ್ಲವನ್ನೂ ಮರೆತು ಮಂಥರೆಗೆ ಅಭಯ ಕೊಟ್ಟಳು. ಮುಂದೇನಾದಳೆಂದು ಮಾತ್ರ ವಾಲ್ಮೀಕಿಯು ಹೇಳಲಿಲ್ಲ.

ದೇವಕಾರ್ಯಕ್ಕಾಗಿ ಬ್ರಹ್ಮನಾಜ್ಞೆಯಿಂದ ಅವತರಿಸಿದ ಅಲಕ್ಷ್ಮಿಯೇ ಈ ಮಂಥರೆಯೆಂದು ಶ್ರೀಮದಾಚಾರ್ಯರು ಹೇಳಿರುತ್ತಾರೆ.

ಆದರೆ ಮಹಾಕವಿ ಕೆ. ವಿ. ಪುಟ್ಟಪ್ಪನವರು ವಾಲ್ಮೀಕಿಯ ಪಥದಲ್ಲೇ ಮುನ್ನಡೆದು ಹೋದಾಗ ಅವರ ಕವಿದೃಷ್ಟಿಗೆ ಗೋಚರಿಸಿದ ದೃಶ್ಯವು ರೋಮಾಂಚಕಾರಿಯಾದುದು. ಮಂಥರೆಯು ಯಾವ ಮುಖದಿಂದ—ಯಾವ ಶಾಂತಿಯಿಂದ—ಕೌಸಲ್ಯೆಯ ಆಶ್ರಯದಲ್ಲಿ ಕುಳಿತುಕೊಳ್ಳುವಳು? ಲೋಕಾಭಿರಾಮನಾದ ರಾಮನ ವಿಯೋಗ, ರಾಜನ ಮರಣ—ಇವುಗಳಿಗೆಲ್ಲಾ ತಾನೇ ಕಾರಣಳಾಗಿದ್ದೂ ಕೌಸಲ್ಯೆಯು ತನ್ನನ್ನು ಪ್ರೇಮಲ ಹೃದಯದಿಂದ ಆದರಿಸುವಾಗ ಆ ಹೆಣ್ಣು ಹೃದಯವು ಸೀಳಿದಂತಾಯಿತು. 'ಅಯ್ಯೋ', ನಾನೇಕೆ ಹೀಗೆ ಮಾಡಿದೆ! 'ಓ ರಾಮಾ ಬಾ ಬಾ' ಎನ್ನುತಾ ಎತ್ತಲೋ ಓಡಿಬಿಟ್ಟಳು. ಜನರೆಲ್ಲರೂ ದಶರಥನ ದೇಹ ಸಂಸ್ಕಾರ ಕಾರ್ಯದಲ್ಲಿ ನಿರತರಾಗಿದ್ದರು.

ಓಡುತ್ತಾ ಓಡುತಾ ಮಂಥರೆ ಕಾಡನ್ನು ಸೇರಿದಳು. ಹಾಗೇ ಅಳುತ್ತಾ ಹೋಗುವಾಗಲೆ ಆಕೆಗೆ ಮುಂದೆ ಕಂಡ ಕಾಡಿಚ್ಚು ಜಗಜ್ಜ್ಯೋತಿಯಾದ ರಾಮನ ಮೂರ್ತಿಯೆಂದೇ ತೋರಿ 'ರಾಮಾ ಒನ್ಮೆ ಬಾ' ಎಂದು ತಬ್ಬಿಕೊಂಡಳು ಕಾಡ್ಗಿಚ್ಚನ್ನು—ಆಗ? ಮಂಥರೆಯ ಕಥೆ—ಮುಗಿಯಿತು.

ಮಧು ಸಂಚಯ

ಮೂತುಗಳಲ್ಲಿ ಒಂದಲ್ಪಾಂಶ ಸತ್ಯವು ಪ್ರಕಟಗೊಳ್ಳಬಹುದು; ಆದರೆ, ಸಂಪೂರ್ಣ ಸತ್ಯವು ಅಡಗಿರುವುದು ಮೌನದಲ್ಲಿ ಮಾತ್ರ.

ಬಂಡವಳ ಮತ್ತು ಪರಿಶ್ರಮಗಳು ಅನ್ಯೋನ್ಯಾಶ್ರಿತವಾಗಿರುತ್ತವೆ. ಬಂಡವಳ ವಿಲ್ಲದೆ ಹೋದರೆ ಪರಿಶ್ರಮದ ಬೆಲೆಯೆಲ್ಲಿ? ಪರಿಶ್ರಮವಿಲ್ಲವೆಂದಾದರೆ, ಬಂಡವಳ ಹುಟ್ಟುವುದಾದರೂ ಹೇಗೆ?

ಪ್ರಪಂಚದಲ್ಲಿ ನಾನಾ ಬಗೆಯ ಪಾಪಗಳಿವೆ. ತನ್ನ ಅಥವಾ ಬೇರೆಯವರ ಮನಸ್ಸಿನಲ್ಲಿ ಮಿಥ್ಯಾ ಮಹತ್ವಾಕಾಂಕ್ಷೆಯನ್ನು ಕೆರಳಿಸಿ ಜೀವನದ ಶಾಂತಿಯನ್ನು ಕದಡುವುದಕ್ಕಿಂತ ಮಹಾಪಾಪ ಬೇರಾವುದೂ ಇಲ್ಲ.

ನಮ್ಮ ಗ್ರಾಹಕರಿಗೂ ಹಿತೈಷಿಗಳಿಗೂ
ಪ್ರಜಾರಾಜ್ಯ ದಿನದ ಶುಭಾಶಯಗಳು
ಗೋವಾ ಸ್ಟೋರ್ಸ್ ಮತ್ತು ಬೇಕರಿ
ಕೆಥೋಲಿಕ್ ಬ್ಯಾಂಕಿನ ಎದುರು
ಉಡುಪಿ, ದ. ಕ.

ನಮ್ಮ ಗ್ರಾಹಕರಿಗೂ, ಹಿತಚಿಂತಕರಿಗೂ
ಪ್ರಜಾರಾಜ್ಯ ದಿನದ ಹಾರ್ದಿಕ ಅಭಿನಂದನೆಗಳು
ಶ್ರೀ ಗಜಾನನ ಕ್ಲೋತ್ ಸ್ಟೋರ್ಸ್
ತೆಂಕಪೇಟೆ - - - ಉಡುಪಿ
SRI GAJANANA CLOTH STORES
TENKAPET, UDIPI.
THE FASHION CREATORS IN THE TOWN & WHERE ALWAYS SOME THING IS NEW!

SPECTACLES TO SUIT
ALL SIGHTS
AND TASTES
at moderate rates
Enquire at:
M/S. Y. RAMA RAO & CO.,
OPHTHALMIC OPTICIANS,
MANGALORE - 1.

ಮೈಸೂರು ಟೈಪ್ ಫೌಂಡ್ರಿ,
ಸುಬೇದಾರ್ ಛತ್ರಂ ರೋಡು, ಬೆಂಗಳೂರು-2.
ಆಧುನಿಕ ಯಂತ್ರ ಸಾಧನಗಳಿಂದ ಸುಸಜ್ಜಿತವಾದ "ಮೈಸೂರು ಟೈಪ್ ಫೌಂಡ್ರಿ"ಯಲ್ಲಿ ಪ್ರಿಂಟಿಂಗ್ ಟೈಪುಗಳನ್ನು (ಕನ್ನಡ) ರೀಕಾಸ್ಟ್ ಮಾಡಿಸುವುದರಿಂದ ವಿಶೇಷ ಉಳಿತಾಯವಾಗುತ್ತದೆ.
ದಕ್ಷಿಣ ಕನ್ನಡದ ಪಲವು ಮುದ್ರಣಾಲಯಗಳಿಗೆ ನಾವು ಟೈಪು ರೀಕಾಸ್ಟು ಮಾಡಿಕೊಡುತ್ತಿದ್ದೇವೆ
ಇಂದೇ ವಿವರಗಳಿಗೆ ಬರೆಯಿರಿ:-
THE MYSORE TYPE FOUNDRY
Subedar Chatram Road, BANGALORE-2.

ತೇವಣಾತಿಗಳು.....ಆಕರ್ಷಕ ಬಡ್ಡಿ ದರಗಳು
ಜೀವನದ ವೆಚ್ಚವು ದಿನೇ ದಿನೇ ಹೆಚ್ಚುತ್ತಲಿದ್ದರೂ, ಕಷ್ಟಪಟ್ಟು ಉಳಿಸಿದ ನಿಮ್ಮ ಹಣಕ್ಕೆ—ಅತ್ಯಗತ್ಯವಿರುವ ಸುರಕ್ಷಿತತೆ ಮತ್ತು ಭದ್ರತೆಗಳೊಂದಿಗೆ---ಅತ್ಯಾಕರ್ಷಕ ದರದಲ್ಲಿ ಬಡ್ಡಿ ಕೊಟ್ಟು, ನಿಮ್ಮನ್ನು ಸಂತುಷ್ಟರಾಗಿ ಮಾಡಲು
ಕೊರ್ಪೊರೇಶನ್ ಬೇಂಕು
ತಾನು ತೇವಣಾತಿಗಳ ಮೇಲೆ ಕೊಡುವ ಬಡ್ಡಿ ದರಗಳನ್ನು ಇತ್ತೀಚೆಗೆ ಬದಲಾಯಿಸಿದೆ.
ವಿವರಗಳನ್ನು
ನಿಮಗೆ ಸಮೀಪವಿರುವ ಇದರ ಶಾಖೆಯಿಂದ ಪಡೆಯಬಹುದು.
ದಿ. ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್

ಅಂತರಿಕ್ಷದಲ್ಲಿ ಮೋಜು

(೧೩ನೇ ಪುಟದಿಂದ)

ಗೆ ಕೊರತೆಯೂಗದಷ್ಟು ಹವೆಯೊದರೂ ಉಸುರಾಡಿಸಲು ದೊರೆಯುವುದು.

ಅಂತರಿಕ್ಷ ವಿಜ್ಞಾನದ ನಿಜವಾದ ಉಪಯೋಗ

ಅಂತರಿಕ್ಷ—ಅಸ್ತ್ರಗಳ ಸೈನಿಕ ಮೌಲ್ಯವಾಗಲಿ ಅಥವಾ ಯಾವ ರಾಷ್ಟ್ರವು ಎಷ್ಟು ದೊಡ್ಡದಾದ ಬಾಹ್ಯಾಕಾಶ ನೌಕೆಯನ್ನು ಜಯಪ್ರದವಾದ ರೀತಿಯಲ್ಲಿ ಹಾರಿಸಬಲ್ಲದೆಂಬುದಾಗಲಿ ಮುಂತಾದ ವಿಷಯಗಳು ಅಕಾರವಿಜ್ಞಾನದಲ್ಲಿ ಗೌಣವಿಷಯಗಳು. ಪೃಥ್ವಿಗೆ ಸಂಬಂಧಿಸಿದ ಗುರುತ್ವಾಕರ್ಷಣದ, ಲೋಹಚುಂಬುಕೀಯ, ವಿದ್ಯುತ್‌ಕ್ಷೇತ್ರಗಳ, ಬಿರುಗಾಳಿಗಳಿಗೆ ಸಂಬಂಧಿಸಿದ, ಪೃಥ್ವಿಯು ತನ್ನ ಕಕ್ಷದಲ್ಲಿ ತಿರುಗುವಲ್ಲಿಯ ಅತಿವಿರಳ ವಸ್ತುವಿನ ಪ್ರದೇಶದ ಗುಣಧರ್ಮಗಳ, ವಿಶ್ವಕಿರಣಗಳ ಇತ್ಯಾದಿ ವಿಷಯಗಳನ್ನು, ಪ್ರಯೋಗಗಳಿಂದ ಅಭ್ಯಸಿಸಲು ಅನುಕೂಲವಾದುದು ಈ ಅಂತರಿಕ್ಷ ವಿಜ್ಞಾನದ ವೈಶಿಷ್ಟ್ಯವೆಂದು ಹೇಳಬಹುದು. ವಾಯುಮಂಡಲದಲ್ಲಿ ತೇಲಾಡುವ ಮೋಡಗಳಾಗಲಿ ಇಲ್ಲವೆ ಪೃಥ್ವಿಯನ್ನು ಆವರಿಸಿದ ನೀಲಲೋಹಿತಾತೀತ (ultraviolet) ಪರದೆಯಾಗಲಿ, ಅಡೆತಡೆಗಳಾಗದೆ ಸೂರ್ಯನನ್ನು, ಗ್ರಹಗಳನ್ನು, ನಕ್ಷತ್ರಗಳನ್ನು ನೇರವಾಗಿ ಪರೀಕ್ಷಿಸುವುದು ಸಾಧ್ಯವಿದ್ದು ಇದು ಖಗೋಲ ವಿಜ್ಞಾನದಲ್ಲಿ ಒಂದು ಹೊಸ ಅಧ್ಯಾಯವನ್ನೇ ಪ್ರಾರಂಭಿಸಬಹುದಾಗಿದೆ. ಇಂದು ಚಂದ್ರಗೋಲವನ್ನು ಅಲ್ಲಿಯೇ ಇರಿಸಿದ ಉಪಕರಣಗಳ ಸಹಾಯದಿಂದ ಪರೀಕ್ಷಿಸಿ ಸೂರ್ಯಮಾಲೆಗೆ ಸಂಬಂಧಿಸಿದ ಅನೇಕ ಗೌಪ್ಯಗಳನ್ನು ಶುಭ್ರಗೊಳಿಸಲು ಸಾಧ್ಯವಾಗುವ ಮಾರ್ಗದಲ್ಲಿ ನಾವು ಇದ್ದೇವೆ. ಇದೇ ಪ್ರಕಾರವಾಗಿ ಮಂಗಳ, ಬುಧ, ಶುಕ್ರ ಮುಂತಾದ ಗ್ರಹಗಳನ್ನು ಪರೀಕ್ಷಿಸುವ ಅವಕಾಶವೂ ಒದಗಬಹುದು.

ಅಮೇರಿಕೆಯು ಹಾರಿಸಿದ ಪಯೋನಿಯರ್—೫ ಆಕಾಶನೌಕೆಯು ರೇಡಿಯೋ ಅಲೆಗಳ ಪ್ರೇಕ್ಷಣೆಯ ವಿಷಯದಲ್ಲಿ ಅನೇಕ ವಿಷಯಗಳನ್ನು ಹೊರಗೆಡವಿದೆ. ಸೌರಕೋಶಗಳ ಸಹಾಯದಿಂದ ಕಾರ್ಯಮಾಡುವ ಅದರಲ್ಲಿಯ ೫ ವಾಟ್ ಶಕ್ತಿಯ ಪ್ರೇಕ್ಷಕದಿಂದ ಹೆಂಟೆ ಸಂಕೇತಗಳು ೧೨ ಲಕ್ಷ ಮೈಲುಗಳ ಅಚೆಯಿಂದಲೂ ಕೇಳಿಬರುತ್ತಿವೆ. ನಮ್ಮ ಗ್ರಾಹಕಗಳು (receivers) ಸುಧಾರಿಸಿದಲ್ಲಿ ಇದಕ್ಕೂ ದೂರದ ಸಂಕೇತಗಳು ಸಹ ಕೇಳಿಬರಬಹುದು. ಅದರಲ್ಲಿಯ ೧೫೦ ವಾಟ್ ಶಕ್ತಿಯ ಪ್ರೇಕ್ಷಕವು ಕಾರ್ಯಾಚರಣೆಯಲ್ಲಿ ಬಂದಾಗ ೫ ಕೋಟಿ ಮೈಲುಗಳ ದೂರದಿಂದ ಬರುವ ಸಂಕೇತಗಳನ್ನೂ ಕೇಳಬಹುದು.

ಆಕಾಶ ವಿಜ್ಞಾನದಲ್ಲಿಯ ಶೋಧಗಳಿಗೆ ಮಿತಿಯೇ ಇಲ್ಲವೆಂದು ಸ್ಥೂಲವಾಗಿ ಹೇಳಬಹುದು. ನಿಜವಾಗಿಯೂ ಗ್ರಹಾಂತರ ಪ್ರವಾಸಕ್ಕೆ ಯೋಗ್ಯರಾದ ಜನರೆಂದರೆ—ಭೌತವಿಜ್ಞಾನಿಗಳು, ರಸಾಯನ ಶಾಸ್ತ್ರಜ್ಞರು, ಪ್ರಾಣಿ ವಿಜ್ಞಾನಿಗಳು, ಭೂಗರ್ಭ ವಿಜ್ಞಾನಿಗಳು, ಖಗೋಲ ವಿಜ್ಞಾನಿಗಳು ಮುಂತಾದವರು ಇರುವರೇ ಹೊರತು ಬೇರೆಯವರಲ್ಲ. ಇವರೇ ನಮ್ಮ ಅಂತರಿಕ್ಷ ವಿಜ್ಞಾನವನ್ನು ರೂಪಿಸಿ ಮತ್ತು ಪೋಷಿಸಿ ಬೆಳೆಯಿಸುವವರು.

ಇಲ್ಲಿಯ ಸಂಶೋಧನೆಗಳು ಮುಂದಗತಿಯಿಂದ ಸಾಗುವಂತಹಗಳೂ ಮತ್ತು ಹೆಚ್ಚು ಖರ್ಚಿನವೂ ಇರುವುವಾದ್ದರಿಂದ ಇಲ್ಲಿಯ ಕಾರ್ಯಕ್ರಮಗಳು ಕೇವಲ ಮನರಂಜನೆಗಾಗಿ ಎಂದು ಎಣಿಸುವಂತಹಗಳಲ್ಲ. ಯಾವುದೊಂದು ರಾಷ್ಟ್ರದ ಪ್ರತಿಷ್ಠೆಯು ಏರುವಲ್ಲಿ ಅವುಗಳು ಹಾರಿಸುವ ಬಾಹ್ಯಾಕಾಶ ನೌಕೆಗಳ ಭಾರ ಮತ್ತು ಗಾತ್ರಗಳು ಕಾರಣವಾಗದೆ ಅವುಗಳು ದೊರಕಿಸಬಹುದಾದ ವೈಜ್ಞಾನಿಕ ಜ್ಞಾನ ಭಾಂಡಾರವೇ ಕಾರಣವಾಗುವುದೆಂದು ಎತ್ತಿ ಹೇಳುವ ಅಗತ್ಯವೇ ಇಲ್ಲ.

ಕೊನೆಯದಾಗಿ

ಈ ಲೇಖದ ಪ್ರಾರಂಭವು ಮೋಜಿನಿಂದ ಸುರುವಾದರೂ ಕೊನೆಯು ಮಾತ್ರ ಆಕಾಶವಿಜ್ಞಾನದ ಸಾರವನ್ನು ರೂಪಿಸುವಂತಹದು. ಮೋಜಿನ ವಿಚಾರವನ್ನು ಎತ್ತುವುದರಲ್ಲಿ ಒಂದು ಉದ್ದೇಶವೂ ಇದೆ. ಅನೇಕ ವೇಳೆ ಮನುಷ್ಯನು ತನ್ನ ವಿಚಾರಗಳನ್ನು ಕೇವಲ ಹರಿಬಿಟ್ಟಾಗ ಅವನು ನಿಜವಾದ ಉದ್ದೇಶದಿಂದ ಹೇಗೆ ಹಿಮ್ಮೆಟ್ಟುವನು ಎಂಬುದನ್ನು ಎತ್ತಿ ತೋರಿಸುವುದು, ನಿಜವಾದ ಪ್ರಗತಿಗೆ ಕಾರಣವಾಗುವುದು. ಮುಖ್ಯವಾಗಿ ಸಮಸ್ಯೆಯು ಎಂತಹದೇ ಇರಲಿ ಅದನ್ನು ನೈಜವಾದ ಸುತ್ತು ನ್ಯಾಯಬದ್ಧವಾದ ರೀತಿಯಲ್ಲಿ ಕಾಣುವುದು ಅದರ ಪರಿಹಾರಕ್ಕೆ ಕಾರಣವಾಗುವುದು ಅದರ ಪರಿಹಾರಕ್ಕೆ ಕಾರಣವಾಗುವುದು.

* Lee. A. Du Bridge ರವರ American Journal of Physics ದಲ್ಲಿ ಪ್ರಕಟವಾದ 'Fun in Space' ಎಂಬ ಲೇಖದಲ್ಲಿಯ ಅನೇಕ ವಿಚಾರಗಳನ್ನು ಆಧರಿಸಿ ಬರೆದುದು. ಈ ಲೇಖದ ಶ್ರೇಯಸ್ಸೆಲ್ಲವೂ ಅವರಿಗೇ ಸೇರಿದ್ದು. —ಲೇ.

ಉಡುಪಿ ಡಿ. ಮುನ್. ಕೋರ್ಟ್‌ನಲ್ಲಿ

O. P. No. 5/1961

ಚೀಂಕು ಶೆಟ್ಟಿ—ಕೊರಗ ಶೆಟ್ಟಿ ವಿಧವೆ, ಪಳಕಾಡು ವಾರ್ಡು—ಉಡ್ಪಿ ಕಸ್ಬಾ.

—ಅರ್ಜಿದಾರಳು.

ಈ ಮೂಲಕ ಸಮಸ್ತ ಜನರಿಗೆ ತಿಳಿಯಪಡಿಸುವುದೇನೆಂದರೆ:—

ಅರ್ಜಿದಾರಳು ತನ್ನ ಮಗ ಹಾಲಿ ಮೃತ ಪಟ್ಟ ಪೆಂಕಪ್ಪ ಶೆಟ್ಟಿ ಎಂಬವನಿಗೆ ಹೊರಗಿನಿಂದ ಬಹಾ ಸಾಲಗಳನ್ನು ವಸೂಲುಮಾಡುವ ಬಗ್ಗೆ ಜಾರೀಸು ಸರ್ಟಿಫಿಕೇಟು ಕೇಳಿ ದಾಕ್ಲು ಮಾಡಿದ ಮೇಲ್ಕಂಡ ಅರ್ಜಿಯು ತಾರೀಕು 1—2—61 ಕ್ಕೆ ತಂಪ್ಪಿಗೆ ಯಿಟ್ಟಿದೆ. ಆ ಬಗ್ಗೆ ಅಕ್ಷೇಪ ಉಳ್ಳವರು ಮೇಲ್ಕಂಡ ಕೋರ್ಟ್ ಮುಂದೆ ಆ ದಿನ ಬೆಳಿಗ್ಗೆ 11 ಗಂಟೆಗೆ ಹಾಜ್ರಾಗಿ ಬರಹಮೂಲಕದ ಉದಾಹರಣೆ ದಾಕ್ಲು ಮಾಡುವರೆ ತಪ್ಪಿದಲ್ಲಿ ಸದ್ರಿ ಅರ್ಜಿಯನ್ನು ಕೋರ್ಟ್‌ನವರಿಗೆ ಯುಕ್ತಕಂಡಂತೆ ತೀರ್ಮಾನಿಸಲಾಗುವುದು.

Sd. V. G. Kedlaya,
Advocate for Petitioner.

ಉಡ್ಪಿ ತಾ. 18—1—61.

ಕನ್ನಡ ಪುಸ್ತಕಗಳಿಗೆ—
ನವಭಾರತ ಪುಸ್ತಕ ಭಂಡಾರ,
ಉಡುಪಿ.

Estd: 1934 Telephone: 581.

The Pie-Money Bank Private Limited.

Maidan Road, MANGALORE.

Savings Bank A/c 4% per annum.
Current A/c 1% per annum.

FIXED DEPOSITS.

For 2 years 5% For 6 months 4%
For 1 year 4½% For 3 months 3½%

Auction Chit Funds ranging from Rs. 100 to Rs. 5,000 run regularly on systematic lines.

Undertakes all kinds of Banking business.

Unique Banking facilities to businessmen and interested public.

Apply for further particulars:

M. Rammohan Guru, *B. A., LL. B.,*
MANAGER.

ಪರಿಶುದ್ಧ ಮತ್ತು ತಾಜಾ

ತೆಂಗಿನೆಣ್ಣೆ ಮತ್ತು **ಎಳ್ಳೆಣ್ಣೆ**

ಅತ್ಯುತ್ತಮ

ಕೆಲಗೂರ್ ಚಾ

ಜೈಭಾರತ್ ಮಿಲ್ಸ್ (ಪ್ರೈವೇಟ್) ಲಿಮಿಟೆಡ್
ಚಿತ್ತರಂಜನ ಬಿಲ್ಡಿಂಗ್ಸ್, ಉಡುಪಿ.
ಫೋನ್: 11A

ವಿರೋಧಿಪಕ್ಷಗಳ ಅಸ್ತಿತ್ವ

(೧೩ನೇ ಪುಟದಿಂದ)

ನಡೆಸಲಿಲ್ಲ. ಅಧಿಕಾರ ವ್ಯಾಮೋಹದ ಭರದಲ್ಲಿ ಅವರು ವಿರೋಧಿ ಪಕ್ಷಗಳಲ್ಲಿದ್ದುಗ ಕೊಡನೆ ಸ್ನೇಹ ಹಸ್ತ ಚಾಚಿದರು. ಪರಿಣಾಮವಾಗಿ ಈ ಪ್ರಾಮೂಣಿಕ ಸಲ್ಲಕ್ಕೂ ಅಪನಂಬುಗೆಯ ಗ್ರಹಣ ಹಿಡಿಯಿತು. ಸೋಶಿಯಲಿಸ್ಟ್ ಪಕ್ಷದ ಸಾತ್ವಿಕ ಬಲ ಕುಗ್ಗ ತೊಡಗಿತು. ಸಾಲದ್ದಕ್ಕೆ ಲೋಕಿಯಾ ಬೇರೆ ಹೋದರು. ಜಯಪ್ರಕಾಶ್ ರಾಜಕೀಯ ಶಸ್ತ್ರ ಸಂನ್ಯಾಸ ಮಾಡಿದರು. ಆಚಾರ್ಯ ನರೇಂದ್ರದೇವರು ಅಕಾಲ ನಿಧನ ಹೊಂದಿದರು. ಹೀಗಾಗಿ ಸೋಶಿಯಲಿಸ್ಟ್ ಬಡವೂ ಅನಾಥವೂ ಆಯಿತು. ಅಗಲೇ ದಿಕ್ಕೆಟ್ಟಿದ್ದ ಪ್ರಜಾಪಕ್ಷಕ್ಕೆ ಆಶ್ರಯವನ್ನಿತ್ತು ಮತ್ತೊಂದು ಮಹಾ ಸ್ರವಾವವನ್ನೆಸಗಿತು. ಪ್ರಜಾಪಕ್ಷದ ಹೆಸರಲ್ಲಿ ಸಮಾಜ ವಾದವನ್ನು ಎದುರಿಸುತ್ತಿದ್ದವರು ಸೋಶಿಯಲಿಸ್ಟ್ ಪಕ್ಷದೊಡನೆ ಸೇರಿದಾಗ ಸೋಶಿಯಲಿಸ್ಟ್ ಪಕ್ಷದ ಮೇಲೆ ಜನರಿಟ್ಟ ಭರವಸೆಯು ಸಂಪೂರ್ಣ ನಶಿಸುವಂತಾಯಿತು. ಪ್ರಜಾ ಸೋಶಿಯಲಿಸ್ಟ್ ಪಕ್ಷವು ಐಕ್ಯಗೊಂಡುದರಿಂದ ಜನರಿಗೆ ಸಮಾಜವಾದಿ ಧೋರಣೆ ಆಚರಣೆಯಲ್ಲಿ ಆ ಪಕ್ಷದ ವರ್ತನೆಯ ಬಗ್ಗೆ ಅಪನಂಬುಗೆ ಬರುವಂತಾಯಿತು. ಹೀಗಾಗಿ ಈ ಐಕ್ಯ ಸಂಘಟನೆಯಿಂದ ಈ ಹೊಸ ಪಕ್ಷವು ಅಧಃಪತನವನ್ನೇ ಕಾಣುವಂತಾಗಿದೆ. ಆದರೂ ಅಲ್ಲಲ್ಲಿ ಪ್ರಜಾಸೋಶಿಯಲಿಸ್ಟ್ ಪಕ್ಷ ಚಿಗುರಿದ್ದರೆ, ಉಳಿದಿದ್ದರೆ ಆ ಪಕ್ಷದ ಕೆಲವೊಂದು ಮುಖಂಡರ ವೈಯಕ್ತಿಕ ಘನತೆಯಿಂದ ಎನ್ನದೆ ವಿಧಿಯಿಲ್ಲ. ಆದರಲ್ಲೂ ಈಗ ಆ ಪಕ್ಷದ ಒಂದು ಶೋಭನೀಯ ವ್ಯಕ್ತಿತ್ವವುಳ್ಳ ಆಚಾರ್ಯ ಕೃಪಲಾನಿ ತನ್ನ ರಾಜೀನಾಮೆ ಸಲ್ಲಿಸಿ ಪಕ್ಷದ ಅಸ್ತಿತ್ವಕ್ಕೊಂದು ಪ್ರಬಲ ಆಘಾತ ಕೊಟ್ಟಿದ್ದಾರೆ.

ಕೊನೆಯದಾಗಿ ಈಗ ಬಹುದೊಡ್ಡ ಪ್ರಚಾರದ ಅಬ್ಬರದಿಂದ ಭಾರತದ ರಾಜಕೀಯ ರಂಗದಲ್ಲೇ ಒಂದು ದೊಡ್ಡ ಕೋಲಾಹಲವನ್ನೆಬ್ಬಿಸುತ್ತಿರುವ 'ಸ್ವತಂತ್ರ ಪಕ್ಷ' ಸ್ವತಂತ್ರ ಪಕ್ಷದ ಅಸ್ತಿತ್ವವೂ, ಹಿಂದಿನ ಪ್ರಜಾಪಕ್ಷದ ಅಸ್ತಿತ್ವವೂ ಒಂದೇ ಮಾದರಿಯದು. ಪ್ರಜಾಪಕ್ಷವು ಉದಾರವಾದ ತತ್ವಪ್ರಣಾಲಿಕೆಯನ್ನು ಜನತೆಯ ಮನಸ್ಸನ್ನು ಆಕರ್ಷಿಸಲು ಇಟ್ಟುಕೊಂಡಿದ್ದರೆ ಈ ಸ್ವತಂತ್ರ ಪಕ್ಷವು ವಾಮನೀತಿಯ ಪ್ರತಿಪಾದನೆಯನ್ನೇ ಮಾಡುತ್ತಿದೆ. ಸ್ವತಂತ್ರ ಪಕ್ಷವು ಕಾಂಗ್ರೆಸಿನ ಸಮಾಜವಾದಿ ನೀತಿಯನ್ನು ಬಹಿರಂಗವಾಗಿ ವಿರೋಧಿಸುವ ಸಾಹಸ ಮಾಡಿದೆ. ಆ ಪಕ್ಷವು ಜನರಲ್ಲಿ ಕುತೂಹಲ ಕೆರಳಿಸಿದೆಯೇ ಹೊರತು ಆಸಕ್ತಿ ಪ್ರಚೋದಿಸಲು ಶಕ್ತವಾಗಿಲ್ಲ. ಅದರ ಪ್ರತಿಗಾಮಿ ನೀತಿಗೆ ಯಾರೂ ಬೆಂಬಲ ಕೊಡಲಾರರು. ಶ್ರೀ ರಾಜಗೋಪಾಲಾಚಾರಿ, ಪ್ರೊ. ರಂಗಾ, ಮುನ್ಶಿ, ಮಸಾನಿಯಂತಹವರು ಈ ಪಕ್ಷದ ನೇತಾರರಿರಬಹುದು. ಅವರ ವೈಯಕ್ತಿಕವಾದ ಗೌರವಕ್ಕೆ ಜನ ಮನಸ್ಸೆ ಕೊಡಬಲ್ಲರೇ ಹೊರತು ಈ ಪ್ರಜಾಪ್ರಭುತ್ವ ಯುಗದಲ್ಲಿ ಆ ಒಬಿರಾಯನ ಗೊಡ್ಡು ತತ್ವದ ಅಸ್ತಿತ್ವಕ್ಕೆ ಯಾರೂ ಬೆಂಬಲ ಕೊಡುವುದಿಲ್ಲವೆಂಬುದು ಶತಸಿದ್ಧ.

ಕಾಂಗ್ರೆಸನ್ನು ವಿರೋಧಿಸಲು ಒಂದು ಪ್ರತಿಪಕ್ಷದ ಅವಶ್ಯವಿದೆ ಎಂದು ವಿರೋಧಿ ಪಕ್ಷದ ರಚನೆಯಾದರೆ ಅದಕ್ಕೆ ಆಯುಸ್ಸು ಅಲ್ಪ. ಹಾಗೆಂದು ವಿಧಾಯಕವಾದ ಪ್ರಗತಿಪರ ವಿಚಾರಗಳ ಪ್ರಚೋದನೆಯಿಂದ ವಾಸ್ತವಿಕ ದೃಷ್ಟಿಕೋನದಲ್ಲಿ ಒಂದು ಪಕ್ಷ ಉದಯಿಸಿ ಬಂದರೆ ಅದಕ್ಕೆ ಜನತೆಯಲ್ಲಿ ಒಳ್ಳೆಯಸ್ಥಾನ ದೊರೆಯಬಹುದು.

ಆದರೆ ಕಾಂಗ್ರೆಸ್ ಸಂಸ್ಥೆಯು ಇಂದಿಗೂ ಸಚೇತನ ಸಂಸ್ಥೆಯಾಗಿದೆ. ವ್ಯಾಪಕವಾದ ಅದರ ಕಾರ್ಯಕ್ಷೇತ್ರದ ವೈಶಾಲ್ಯದಿಂದ ಹಲವಾರು ಕುಂದು ಕೊರತೆಗಳು ತೋರಿ ಬರುತ್ತಲಿವೆ. ಅದು ಪ್ರಾದೇಶಿಕವಾದ ಕೆಲವೊಂದು ಪಂಗಡಗಳ ಈರ್ಷ್ಯಾಸೂಯೆಯ ನೀತಿಯಿಂದ. ಅದು ಸ್ವಾಭಾವಿಕವಾಗಿ ಕೆಲವೊಂದುಷ್ಟಿಕಾಲ ಜನಜೀವನವನ್ನು ಹಾಳುಗೆಡಹಲೆತ್ನಿಸಿದರೂ, ಕಾಂಗ್ರೆಸಿನ ಪ್ರಜಾಪ್ರಭುತ್ವ ನೀತಿಯಲ್ಲಿ ಆ ಗುಂಪು ನಿರ್ನಾಮವಾಗುತ್ತಲಿದೆ.

ಕಾಂಗ್ರೆಸಿನ ಅಧಿನಾಯಕರು ತಮ್ಮ ಸಂಸ್ಥೆಯ ತತ್ವಪ್ರಣಾಲಿಯನ್ನು ಅದಷ್ಟು ಪ್ರಗತಿಗಾಮಿಯೂ, ಜನಪ್ರಿಯವೂ ಆಗಿ ಮಾಡುತ್ತಲಿದ್ದಾರೆ; ಸುಸಂಬದ್ಧ ಯೋಜನೆಗಳೊಂದಿಗೆ ಮುಂದರಿಯುತ್ತಿದ್ದಾರೆ. ಎಷ್ಟೇ ಲೋಕ—ದೋಷಗಳಿರಲಿ, ಕಾಂಗ್ರೆಸ್ ಸಾರಿದ ಗುರಿಯ ಕಡೆಗೆ ಕ್ರಮಬದ್ಧವಾಗಿ ಮುಂದರಿಯುತ್ತಲಿದೆ. ಕಾಂಗ್ರೆಸಿನ ಪಥವು ಒಳ್ಳೆಯದೇ ಎಂದು, ಅದರ ಗುರಿ ಜನಪ್ರಿಯವೆಂದು ವಿರೋಧಿ ಪಕ್ಷಗಳೂ ಒಪ್ಪುತ್ತವೆ. ಅದರೆ ಅವರ ಮನಸ್ಸಿನ್ನಡೆ ತೀವ್ರವಾಗಿಲ್ಲ. ಕುಂಟುತ್ತಿದೆ; ಕೂರುತ್ತಿದೆ—ಇದೇ ವಿರೋಧಿ ಪಕ್ಷಗಳು ಎತ್ತುತ್ತಿರುವ ಆಕ್ಷೇಪ. ಈ ಆಕ್ಷೇಪಕ್ಕೆ ಕಾಂಗ್ರೆಸಿಗರು ವಾಸ್ತವಿಕ ಪರಿಸ್ಥಿತಿಯ ವಿವೇಚನೆಯನ್ನು ಮಾಡುತ್ತಿದ್ದಾರೆ. ವಿರೋಧ ಪಕ್ಷಗಳಿಗೆ ವಾಸ್ತವಿಕ ದೃಷ್ಟಿಕೋನ ಬರಲಿ ಎಂಬುದೇ ಅವರ ಪ್ರತ್ಯಾರೋಪ.

ಹೀಗಾಗಿ ವಿರೋಧ ಪಕ್ಷಗಳು ತಮ್ಮ ಮುಂದಿನ ದಾರಿ ಕಾಣದೆ ತೊಳಲಾಡುವ ಪರಿಸ್ಥಿತಿ ಭಾರತದಲ್ಲುಂಟಾಗಿದೆ. ಎಲ್ಲಿ ದುರ್ಬಲತೆ ಇದೆಯೋ, ಎಲ್ಲಿ ಚಿತ್ತ ಚಾಂಚಲ್ಯವಿದೆಯೋ ಅಲ್ಲಿ ಕಮ್ಯುನಿಸ್ಟರು ತಮ್ಮ ಮೀಸೆ ಹೊರಿಸುತ್ತಾರೆ. ಹೀಗಾಗಿ ಕಮ್ಯುನಿಸ್ಟರು ಪ್ರಜಾಪ್ರಭುತ್ವವಾದಿಗಳ ಸಂಶಯ ಮನೋಭಾವದಿಂದ ಮೇರೆ ಮೀರಿ ಬಲಿಷ್ಟರಾದರೂ ಪ್ರಜಾಪ್ರಭುತ್ವ ಪ್ರಿಯರು ಕಮ್ಯುನಿಸ್ಟರ ಈ ಸಂದರ್ಭ ಸಾಧಕತೆಯನ್ನು ಬಹುಬೇಗನೇ ತಿಳಿದರಾದ್ದರಿಂದ ಅವರು ಎಷ್ಟು ತೀಕ್ಷ್ಣವಾಗಿ ಮೇಲೇರಿದರೋ ಅಷ್ಟೇ ತೀವ್ರವಾಗಿ ಇಳುವಲ್ಪಟ್ಟರು. ಪರಿಣಾಮವಾಗಿ ಐಕ್ಯವಲ್ಲಿ, ಸಂಘಟನೆಯಲ್ಲಿ ಅತಿ ಪ್ರಬಲ ಸಂಸ್ಥೆಯಾದ ಕಮ್ಯುನಿಸ್ಟ್ ಪಕ್ಷದೊಳಗೇ ಹಿಂದೆಂದೂ ಕಾಣದಂತಹ ಭಿನ್ನಾಭಿಪ್ರಾಯ ತಲೆದೋರಿದೆ. ಕಮ್ಯುನಿಸ್ಟ್ ಕೋಟೆಯಲ್ಲಿ ಮೂಡಿ ಬಂದ ಈ ಬಿರುಕು ಪ್ರಜಾಪ್ರಭುತ್ವವಾದಿಗಳ ಆಶೋದಯ ಎನ್ನಬಹುದು.

ಭಾರತದ ಪ್ರಜಾಪ್ರಭುತ್ವದ ಯಶಸ್ವಿತೆಗೆ ಇರಲೇಬೇಕಾಗಿದ್ದ ಒಂದು ಪ್ರಬಲವಾ ಪ್ರತಿಪಕ್ಷ ಇಲ್ಲದಿದ್ದರೂ, ಕಾಂಗ್ರೆಸ್ ಪಕ್ಷದೊಳಗಿನ ಅನುದಾರ ಸ್ವಾತಂತ್ರ್ಯ ಘೋರಣೆಯಿಂದಾಗಿ ಭಾರತದ ಪ್ರಜಾಪ್ರಭುತ್ವ ಇಡೀ ಲೋಕದಲ್ಲೇ ಒಂದು ಆಶೋಯ ಶಕ್ತಿಯಾಗಿದೆ.

ಇದು ಭಾರತದ ಭಾಗ್ಯವಲ್ಲದೆ ಮತ್ತೇನು?

ಸರ್ವರಿಗೂ ಪ್ರಜಾರಾಜ್ಯ ದಿನದ ಶುಭಾಶಯಗಳು!

ಯಾತ್ರಾಸ್ಥಳವೆಂದೂ ವಿದ್ಯಾಕ್ಷೇತ್ರವೆಂದೂ
ಪ್ರಖ್ಯಾತವಾಗಿದೆ ಉಡುಪಿ!
ಉಡುಪಿಯಲ್ಲಿ ಅತ್ಯಾಧುನಿಕ ಸೌಕರ್ಯಗಳಿಂದೊಡಗೂಡಿರುವ
ಅತ್ಯುತ್ಕೃಷ್ಟ ವಸತಿ ಗೃಹವೆಂದು ಪ್ರಸಿದ್ಧವಾಗಿದೆ—

ರೋಯಲ್ ಮಹಾಲ್!
ಶುಚಿ ರುಚಿಗಳಿಗೆ ಹೆಸರಾಗಿರುವ
ಪ್ರವಾಸಿಕರ ಆದರ್ಶ ನಿವಾಸ.

ಉಡುಪಿ ನಗರದ ಕೇಂದ್ರ ಸ್ಥಳದಲ್ಲಿ
ಪ್ರಶಾಂತ ವಾತಾವರಣದಲ್ಲಿರುವ
ಪ್ರಥಮ ಶ್ರೇಣಿಯ ಭೋಜನ ಮತ್ತು ವಸತಿ ಗೃಹ.

ರೋಯಲ್ ಮಹಾಲ್
ಉಡುಪಿ.

ಮ್ಹಾಲಕರು:— ಕೆ. ವೆಂಕಟ್ರಮಣ ಭಟ್.

ನಿಮ್ಮ ಮನೆಯ ನಿತ್ಯದ ಉಪಯೋಗಕ್ಕೆ—
ವಿಶೇಷ ಸಮಾರಂಭಗಳಿಗೆ ಅತ್ಯಗತ್ಯವುಳ್ಳ
ಎಲ್ಲ ಪಾತ್ರೆಗಳಿಗೆ—

ಬೆಳ್ಳಿ, ತಾಮ್ರ, ಕಂಚು, ಸ್ಟೈನ್‌ಲೆಸ್ ಸ್ಟೀಲ್,
ಎಲ್ಲ ಪಾತ್ರೆಗಳಿಗೆ— ನಮ್ಮಲ್ಲಿಗೆ ಬನ್ನಿ.

ಐರೋಡಿ ರಾಧಾಕೃಷ್ಣ ಪೈ
ಪಾತ್ರೆ ವ್ಯಾಪಾರಿಗಳು
ರಥಬೀದಿ - - ಉಡುಪಿ

ಗ್ರಾಹಕರೆಲ್ಲರಿಗೆ ಪ್ರಜಾರಾಜ್ಯದಿನದ ಶುಭಾಶಯಗಳು.

ಕಬ್ಬಿಣ, ಕಟ್ಟೋಣ ಸಾಮಗ್ರಿ, ಸೈಂಟ್ಸ್, ಪೈಪ್ಸ್, ಫಿಟ್ಟಿಂಗ್ಸ್, ಮೆಶಿನರಿ ಮತ್ತು ಅಕ್ಕಿ ಮಿಲ್ಲಿನ ಸಾಮಗ್ರಿ ಮೊದಲಾದುವುಗಳಿಗೆ ನಮ್ಮಲ್ಲಿ ವಿಚಾರಿಸಿರಿ.

ಇದೀಗ ಹೊಸ ಸ್ಟಾಕು ಬಂದಿರುತ್ತದೆ.

ಡಾಲ್ಡಾ ಡಿಪಾರ್ಟ್‌ಮೆಂಟ್ (ಹಿಂದುಸ್ಥಾನ ಲೀವರ ಲಿಮಿಟೆಡ್)
ಆಹಾರ ಸಾಮಗ್ರಿಗಳ ವಿಭಾಗವನ್ನೂ ಪ್ರಾರಂಭಿಸಿದ್ದೇವೆ.

ಗ್ರಾಹಕರು ಎಂದಿನಂತೆ ಮುಂದಕ್ಕೂ ಪ್ರೋತ್ಸಾಹ, ಸಹಕಾರ ನೀಡಬೇಕಾಗಿ ಕೋರುತ್ತೇವೆ.

ಸ್ಥಾಪನೆ: 1939, ಫೋನ್ ನಂಬ್ರ: 95.

ದಿ ಜನರಲ್ ಸ್ಟೋರ್ಸ್
ಪೋಸ್ಟಾಫೀಸು ರಸ್ತೆ - - ಉಡುಪಿ

PERFUMERY SPECIALITIES

(KERCHIEF SCENTS)

MYSORE MALLIK

This excellent compound reproduces to an astonishing degree, the fine aroma of natural jasmine Blossoms.

NAG – CHAMPAK

An elegant preparation which recalls, with surprising fidelity, the delicate fragrance of the champak flowers, (Magnolia champak) in bloom.

GULAB KUSUM

An ideal and very popular perfume much valued for its highly attractive, Sweet Rose-like odour.

THE SADVAIDYASALA (PRIVATE) LTD.,

NANJANGUD.

Manufacturers of:

NANJANGUD TOOTH-POWDER,
INDIGENOUS MEDICINES & PERFUMERY.

BRANCHES:–
MYSORE, BANGALORE
AND MANGALORE.

ಜ್ಯೋತಿ-- ಪ್ರಚಂಡ **5**ನೇ ವಾರ

ಮೊಗಲೇ ಆಜಂ (ಹಿಂದಿ)

- ಪೃಥ್ವಿರಾಜ್
- ದಿಲೀಪ್ ಕುಮಾರ್
- ಮಧುಬಾಲಾ

GEMINI PICTURE CIRCUIT RELEASE

ಬರುತ್ತದೆ—

ಪಾವೈ ವಿಳಕ್ಕು (ತಮಿಳು)

ಜ್ಯೋತಿ ಟಾಕೀಸ್,

ಮಂಗಳೂರು.

ಸುಪ್ರಸಿದ್ಧ ಹಂಚುಗಳು

- ದೀರ್ಘಕಾಲ ಬಾಳ್ವಿಕೆ
- ಅತೀ ಕಡಿಮೆ ತೂಕ
- ಎಷ್ಟು ಭಾರವನ್ನಾದರೂ ತಡೆಯುವ ಶಕ್ತಿ
- ಹೀರನ್ನು ಹೀರದೇ ತಡೆಯುವ ಸಾಮರ್ಥ್ಯ
- ಕಂಚಿನಂತಹ ಸ್ವರ
- ಅಂದವಾದ ಬಣ್ಣ
- ನುಣುಪಾದ ಆಕೃತಿ
- ಇವೆಲ್ಲಕ್ಕೂ ಆದರ್ಶ

ಓಂ ಗುರುತಿನ ಸರ್ವ ಶ್ರೇಷ್ಠ ಹಂಚುಗಳು ಜನತೆಯ ಮೆಚ್ಚುಗೆಯನ್ನು ಪಡೆದ ಹಂಚುಗಳು

ನಮ್ಮ ಹಂಚು, ಡೊಂಬೆ, ಮ ಕೈಗಾರಿಕೆಯ ಸಾಮಾನುಗಳ ಬಗ್ಗೆ ಒಮ್ಮೆ ವಿಚಾರಿಸಿ ಪರೀಕ್ಷಿಸಿರಿ

• • •

ಮಂಗಳೂರು ಟೈಲ್ಸ್ ಲಿಮಿಟೆಡ್, ಕುಂದಾಪುರ, ದ. ಕ.

ಅತ್ಯುತ್ತಮ ಹಂಚುಗಳು

ಪೀಠಿಕೆ

ವಿಶ್ವದಲ್ಲಿ ಇಂದು ಹಲವಾರು ದೇಶಗಳು ಉನ್ನತಿಯ ತುಟ್ಟತುದಿಯಲ್ಲಿ ನಿಂತಿವೆ. ಉದಾಹರಣೆಗೆ ಇಂಗ್ಲೇಂಡ್ ತೆಗೆದುಕೊಳ್ಳೋಣ. ಅವರೆಷ್ಟು ಧನ್ಯಾಢ್ಯರು ಬಲಿಷ್ಠರು. ಎಂಬುದಕ್ಕೆ ಆ ದೇಶ ಮುಂದುವರೆದಿರುವುದೇ ಸಾಕ್ಷಿ, ಒಂದಾನೊಂದು ಕಾಲದಲ್ಲಿ ನಮ್ಮ ಭಾರತ ದೇಶವೂ ಹಾಗೆ ಇತ್ತು. ಪ್ರಾಚೀನ ಭಾರತವನ್ನು ವೀಕ್ಷಿಸಿದ್ದ ಒಬ್ಬ ಪ್ರಾನ್ಸೀಸೀ ಯಾತ್ರಿಕನು "ಹಿಂದೂಸ್ಥಾನ ಒಂದು ಅಕ್ಷಯದ ಗಡ್ಡೆಯಂತೆ. ಪ್ರಪಂಚಾದ್ಯಾಂತದ ಚಿನ್ನ-ಬೆಳ್ಳಿಯು ಅನೇಕಾನೇಕ ಮಾರ್ಗಗಳಿಂದ ಬಂದು ಹಿಂದೂಸ್ಥಾನದಲ್ಲಿ ಜಮಾವಣೆಯಾಗಿದೆಯಾದರೂ ಅದನ್ನು ಹೊರತೆಗೆಯುವ ಮಾರ್ಗ ಮಾತ್ರ ಅವರಿಗೆ ಗೊತ್ತಿಲ್ಲ"ವೆಂದು ಬರೆದಿದ್ದಾನೆ. ಈ ಮಾತಿನ ಒಳಾರ್ಥ ಎಷ್ಟು ಸೂಕ್ಷ್ಮವಾಗಿದೆಯೋ ಅಷ್ಟೇ ಅಕ್ಷರವು ಸತ್ಯವಾದುದೂ ಕೂಡ.

ಮೊದಲಿಂದ ಸಮೃದ್ಧಿಯಾಗಿದ್ದ ನಮ್ಮ ನಾಡಿನ ಸಂಪತ್ತು ಬರಡೇಕಾಯಿತೆಂದು ನೋಡೋಣ.

ಯಾವುದೇ ನಾಡಾಗಲಿ ಅದರ ಉನ್ನತಿ ಹಾಗೂ ಅವನತಿಗಳು ಆ ನಾಡಿನ ಆರ್ಥಿಕ, ಧಾರ್ಮಿಕ ಸಾಮಾಜಿಕ, ಹಾಗೂ ರಾಜಕೀಯ ಪರಿಸ್ಥಿತಿಗಳ ಮೇಲೆ ಅವಲಂಬಿತವಾಗಿರುತ್ತದೆ. ನಮ್ಮ ದೇಶವೂ ಈ ಸತ್ಯ ಸಂಗತಿಯಿಂದ ದೂರ ಉಳಿದಿಲ್ಲ. ಸ್ವಾತಂತ್ರ್ಯ ಬಂದ ತರುಣದಲ್ಲಿ ಭಾರತದ ಸ್ಥಿತಿ

ಅನೇಕ ಶತಮಾನಗಳ ವರೆಗೆ ಪರಾಧೀನತೆಯ ಸಂಬರದಲ್ಲಿ ಬಂಧಿತವಾಗಿದ್ದ ಭರತನಾಡು ಕೆಲವಾರು ವರುಷಗಳಂದೀಚೆಗೆ ಮಾತ್ರ ಸ್ವಾತಂತ್ರ್ಯ ಪಡೆದು ಪ್ರಜಾರಾಜ್ಯವೆನ್ನಿಸಿಕೊಂಡಿದೆ. ಈ ಪ್ರಜಾರಾಜ್ಯವು ಹಿಂದಿನಂತೆ ಸಂಪದ್ಯುಕ್ತ ರಾಷ್ಟ್ರವಾಗಬೇಕೆಂಬುದೆ ಭಾರತೀಯರ ಈಗಿನ ಕನಸು. ಆ ಕನಸು ನೆನಸಾಗಲು ಅನೇಕ ಎಡರು ತೊಡರುಗಳನ್ನು ದಾಟಿ ಬರಬೇಕಾಗಿದೆ. ಇಂದು ನಮ್ಮ ರಾಷ್ಟ್ರ ಎಷ್ಟೋ ಸಮಸ್ಯೆಗಳನ್ನು ಎದುರಿಸುತ್ತಿದೆ.

ಭಾರತವು ಪ್ರಜಾರಾಜ್ಯವೆಂದು ಘೋಷಿಸಲ್ಪಟ್ಟಾಗ ಬರಡು ರಾಜ್ಯವಾಗಿತ್ತೆಂಬುದನ್ನು ಮರೆಯುವಂತಿಲ್ಲ. ಇಂಗ್ಲೀಷರು ಭಾರತವನ್ನು ಬಿಟ್ಟುಕೊಡುವ ಮುನ್ನ ದೇಶವನ್ನು ಸಾಕಷ್ಟು ತೊಡರಿನಲ್ಲಿ ಸಿಲುಕಿಸಿಯೇ ಹೋಗಿದ್ದರು. ದೇಶವು ಇಂಗ್ಲೀಷರ ಆಳ್ವಿಕೆಯಲ್ಲಿದ್ದಾಗ ರಾಷ್ಟ್ರದ ವಾಣಿಜ್ಯದ ಉನ್ನತಿ ಹಾಗೂ ದೇಶರಕ್ಷಣೆಯ ಕಾರ್ಯಗಳಿಗೆಂದು ಗತ ಮಹಾಯುದ್ಧದ ಮುಂಚೆಯೇ ಭಾರತದ ತಲೆಯ ಮೇಲೆ ಸಾಲ ಹೇರಿದ್ದರು. ಹೆಸರಿಗೆ ರಾಷ್ಟ್ರದುನ್ನತಿಗೆಂದು ಮಾಡಿದ್ದ ಆ ಸಾಲ ಇಂಗ್ಲೀಷರ ಸುರಕ್ಷತೆಗೇ ಹೆಚ್ಚು. ಖರ್ಚು ಮಾಡಲ್ಪಟ್ಟಿತೆಂಬುದು ರಹಸ್ಯವಾಗಿ ಉಳಿದಿದೆ ಆ ಮಾತಿರಲಿ ಇನ್ನು ಮಹಾಯುದ್ಧ ನಡೆದ ದೆಸೆಯಿಂದಾಗಿ ದೇಶಕ್ಕಾದ ಅಪಾರ ನಷ್ಟವನ್ನು ಸರಿತೂಗಿಸಲು ವ್ಯಯವಾದ ಧನ, ಜೊತೆಗೆ ಇಂಗ್ಲೀಷರು ದೇಶ ಬಿಟ್ಟು ಹೋಗುವಾಗ ತಾವು ಕೊಟ್ಟ ಸಾಲದ ಹಣವೆಂದು ಬಡ್ಡಿ ಸಮೇತವಾಗಿ ವಸೂಲ್ಮಾಡಿಕೊಂಡು ಹೋದದ್ದೂ ಅಲ್ಲದೆ ಕಂಡಹಾಗಷ್ಟು ಕಾಣದ ಹಾಗಷ್ಟು ದೇಶದ ಸಂಪತ್ತನ್ನು ದೋಚಿಕೊಂಡು ಹೋದ ಕಾರಣ ದೇಶದ ಖಜಾನೆ ಬರಿದಾಯಿತು. ಹೀಗೆಂದು ಮುನ್ನ ಸೋದರ ಭಾವದಿಂದಿದ್ದ ಹಿಂದೂ-ಮುಸಲ್ಮಾನರಲ್ಲಿ ಭೇದಭಾವತುಂಬಿ ಇಡಿಯಾಗಿದ್ದ ಭರತ ಖಂಡವನ್ನು 'ಭಾರತ-ಪಾಕಿಸ್ತಾನ"ವೆಂದು ಎರಡಾಗಿ, ಒಡೆದು ವಿದ್ವೇಷದ ವಿಷ ಬೀಜ ಬಿತ್ತಿಯೇ ಹೋದರು.

ಪರಿಣಾಮವಾಗಿ ಜನರಲ್ಲಿ ಪರಸ್ಪರ ಅಂತಃಕಲಹ ಹೆಚ್ಚಿ ದಂಗೆ ಎಬ್ಬಿಸಿ ಲೂಟಿ ಹೊಡೆದು, ರಕ್ತಪಾತ ಹರಿಸಿ, ಆಸ್ತಿಪಾಸ್ತಿಗಳಿಗೆ ನಷ್ಟವನ್ನುಂಟುಮಾಡಿ ನಿರುದ್ಯೋಗಿಗಳಾಗಿ ನಿರಾಶ್ರಿತರಾದರು.

ಪಾಕಿಸ್ಥಾನಿಗಳ ಕ್ರೌರ್ಯದ ದೆಸೆಯಿಂದಾಗಿ ಅನೇಕ ವರ್ಷಗಳಿಂದ ಪಾಕಿಸ್ಥಾನದಲ್ಲೇ ನೆಲೆಸಿದ್ದ ಲಕ್ಷಾಂತರ ಹಿಂದುಗಳು ಸರ್ವಸ್ವವನ್ನೂ ಕಳೆದುಕೊಂಡು ನಿರಾಶ್ರಿತರಾಗಿ ಭಾರತಕ್ಕೆ ಮರಳಿದರು. ಹಾಗೆ ಮರಳಿದ ನಿರಾಶ್ರಿತರಿಗೆ ಅನ್ನ—ವಸ್ತ್ರ—ವಸತಿ ಸೌಕರ್ಯ ಒದಗಿಸುವುದೇನು ಬಾಯಿಮಾತಾಗಲಿಲ್ಲ. ಇದರಿಂದಾಗಿ ನಿರುದ್ಯೋಗ ಸಮಸ್ಯೆ ಭೂತಾಕಾರವಾಗಿ ನಿಂತಿತು. ಆಹಾರ ಸಾಮಗ್ರಿಗಳ ಅಭಾವದಿಂದಾಗಿ ದೇಶಾದ್ಯಾಂತ ಕಂಟ್ರೋಲ್ ಉಂಟಾಯಿತು. "ಬೇಲಿಯೇ ಎದ್ದು ಹೊಲವೆ ಯಿತೆಂಬಂತೆ" ಇದೇ ಸಮಯವೆಂದು ಹೊರಗಿನವರಷ್ಟೇ ಅಲ್ಲದೆ ಒಳಗಿನ ಹಿತ ಶತ್ರುಗಳೂ ಸ್ವಾರ್ಥ ಹಾಗೂ ದುರಾಶಾಪೀಡಿತರಾಗಿ ಕಾಳಸಂತೆ ವ್ಯಾಪಾರಕ್ಕೆಳೆದರು. ಲಂಚಕೋರರಾದರು. ಇದರ ಜೊತೆಗೆ ಖಾದ್ಯವಸ್ತುಗಳ ಅಭಾವ ಕಚ್ಚಾಮಾಲಿನ ಅಭಾವದಿಂದಾಗಿ ಅವುಗಳನ್ನು ಪರದೇಶಗಳಿಂದ ಆಮದು ಮಾಡಿಕೊಳ್ಳುವ ಖರ್ಚೂ ಜೊತೆಗೂಡಿ ದೇಶದ ಆರ್ಥಿಕ ಸಮಸ್ಯೆ ಮತ್ತಷ್ಟು ಬಿಗಡಾಯಿಸಿತು.

ಈ ಕಡೆ ದೇಶದ ವಿಭಜನೆಯಿಂದುಂಟಾದ ಆಂಥೋಳನ ಒಂದಾದರೆ ದೇಶದ ಒಳಪ್ರಾಂತ್ಯಗಳ ಆಂಥೋಳನ ಒಂದು ಎದ್ದು ನಿಂತಿತು. ಈ ಸಮಸ್ಯೆಯು ದೇಶವು ಸ್ವಾತಂತ್ರ್ಯ ಪಡೆದಷ್ಟೇ ಕಷ್ಟದಾಯಕವಾಗಿತ್ತು. ಅಂತಹ ಕ್ಲಿಷ್ಟ ಸಮಸ್ಯೆಯನ್ನು ಸುಲಭಸಾಧ್ಯವಾಗುವಂತೆ ಮಾಡಿದ ಕೀರ್ತಿ ಸರ್ದಾರ್ ಪಟೇಲರಿಗೆ ಸೇರಬೇಕು. ಸ್ವಲ್ಪ ಸಮಯದಲ್ಲೇ ಅವರು ಎಲ್ಲಾ ಪ್ರಾಂತ್ಯಗಳ ಶಾಸನವನ್ನೂ ಪ್ರಜಾತಂತ್ರಾತ್ಮಕ ಆಡಳಿತವಾಗುವಂತೆ ಭಾಷಾವಾರು ಪ್ರಾಂತ್ಯಗಳನ್ನು ವಿಂಗಡಿಸಿ ಆ ಜಟಿಲ ಸಮಸ್ಯೆಯನ್ನು ಸುಗಮಗೊಳಿಸಿದರು. ಈಗ ಸದ್ಯಕ್ಕೆ ಕಾಶ್ಮೀರ ಸಮಸ್ಯೆ ಒಂದು ಮಾತ್ರ ಹಾಗೇ ಉಳಿದಿದೆ. ಇದಿಷ್ಟು ಭಾರತವು ಸ್ವಾತಂತ್ರ್ಯ ಪಡೆದು ಪ್ರಜಾರಾಜ್ಯವೆನ್ನಿಸಿಕೊಂಡ ತರುಣದ ಇದ್ದ ಸ್ಥಿತಿಯ ಒಂದು ಚಿತ್ರ.

ಪಂಚವಾರ್ಷಿಕ ಯೋಜನೆ ಮತ್ತು ಆರ್ಥಿಕ ಪರಿಸ್ಥಿತಿ

ಮೇಲೆ ವಿಶದಪಡಿಸಿದ ಅನೇಕ ಸಮಸ್ಯೆಗಳು ಎದುರು ನಿಂತಿದ್ದರೂ ನಮ್ಮ ಕಲಿ ನಾಡು ಹೆದರದೆ ಮೊದಲಿನಂತೆ ಸುನಃ ನಮ್ಮ ದೇಶವು ಸಂಪದ್ಯುಕ್ತವಾಗಿರುವಂತೆ ಮಾಡಲು ಕೆಲವು ಪಂಚವಾರ್ಷಿಕ ಯೋಜನೆಗಳನ್ನು ಹಾಕಿದೆ. ಈಗಾಗಲೇ ಒಂದು ಪಂಚವಾರ್ಷಿಕ ಯೋಜನೆ ಮುಗಿದು, ಎರಡನೆಯ ಪಂಚವಾರ್ಷಿಕ ಯೋಜನೆಯು ಮುಗಿಯುವುದರಲ್ಲಿದೆ. ಮೂರನೆಯದಕ್ಕೇಗಾಗಲೇ ಅಂದಾಜು ಸೂಚನೆಗಳು ಪರಿಶೀಲನೆಯಲ್ಲಿದೆ. ಈ ಯೋಜನೆಗಳು ಮುಖ್ಯವಾಗಿ ಕೆಳಗೆ ಕಾಣಿಸಿರುವ ಉದ್ಯಮಗಳಲ್ಲಿ ಉತ್ಪಾದನಾಶಕ್ತಿಯನ್ನು ಹೆಚ್ಚಿಸುವುದೇ ಆಗಿದೆ.

(1) ನೀರಾವರಿಯ ಅಭಿವೃದ್ಧಿ.

(2) ವಿದ್ಯುತ್ ಭಾಗದ ಅಭಿವೃದ್ಧಿ.

(3) ಹೊಲ ಗದ್ದೆಗಳು ಬಂಜರು ಬೀಳದಂತೆ ವ್ಯವಸ್ಥೆಮಾಡಿ ಕೃಷಿಕಾರ್ಯ ಹೆಚ್ಚಿಸುವುದು.

(4) ಪಶು ಸಂಪತ್ತು, ಕೋಳಿ, ಕುರಿ, ಮೀನು, ಇತ್ಯಾದಿ ಪ್ರಾಣಿಗಳ ಸಾಕಾಣಿಕೆಯ ಅಭಿವೃದ್ಧಿ.

(5) ಜನರಿಗಾಗಿ ವಸತಿ ಸೌಕರ್ಯ ಏರ್ಪಡಿಸುವುದು, ಜನರ ದೃಢಕಾಯಕ್ಕಾಗಿ ಪೌಷ್ಟಿಕ ಪದಾರ್ಥಗಳ ಅಭಿವೃದ್ಧಿ, ದುಷ್ಟ ರೋಗಗಳು ಹರಡದಂತೆ ನಿಯಂತ್ರಣ ವ್ಯವಸ್ಥೆ ಹಾಗೂ ಆಧುನಿಕ ಔಷಧೋಪಕರಣಗಳ ಅಭಿವೃದ್ಧಿ.

(6) ಹಿಂದುಳಿದ ಜನಾಂಗದವರ ಏಳಿಗೆ.

(7) ದೇಶ ರಕ್ಷಣೆಗಾಗಿ ಸೈನ್ಯ ಹಾಗೂ ಯುದ್ಧ ಸಾಮಗ್ರಿಗಳ ಶೇಖರಣೆಯ ಅಭಿವೃದ್ಧಿ.

(8) ವಾಣಿಜ್ಯ ವಿಭಾಗದ ಉನ್ನತಿ.

(9) ವಂಶಪಾರಂಪರ್ಯವಾಗಿ ಬಂದಿರುವ ಗೃಹ ಕೈಗಾರಿಕೆ ಹಾಗೂ ಕುಶಲ ಕೈಗಾರಿಕೆಗಳ ಏಳಿಗೆ.

(10) ಜನರ ಶಿಕ್ಷಣಾಭಿವೃದ್ಧಿ. ಲಲಿತ ಕಲೆಗಳ ಉದ್ಧಾರ.

(11) ಸಮಾಜ ಸೇವೆಮಾಡಲು ಅರ್ಹರಾಗುವಂತೆ ನಾಡಿನ ಯುವಕರಿಗೆ ತರಬೇತು ನೀಡುವುದು.

(12) ಮಿಲ್ಲು, ಗಿರಣಿ, ಕಾರ್ಖಾನೆ ಇತ್ಯಾದಿಗಳ ಅಭಿವೃದ್ಧಿ.

(13) ಕಡೆಯವಾಗಿ ವೈವಿಧ್ಯಪೂರ್ಣ ಸಾಮೂಹಿಕ ಯೋಜನೆಯ ಅಭಿವೃದ್ಧಿ ಅರ್ಥಾತ್ ಕೊಸ ವಿಧಾನದಲ್ಲಿ ಗೃಹ ಗ್ರಾಮ, ಬೀದಿ, ಕೆರೆ, ಕಟ್ಟೆ, ನಾಲೆಗಳ ನಿರ್ಮಾಣ ಹೊಸ ವಿಧಾನದ ಕೃಷಿ ಹಾಗೂ ಸಶುಪಾಲನೆ ಮಾಡುವುದು, ಹೊಸ ಸಂಶೋಧನೆಯ ಪ್ರಕಾರ ಮಿಲ್ಲು—ಕಾರ್ಖಾನೆಗಳ ಸ್ಥಾಪನೆ ವಿಜ್ಞಾನದ ಸಂಶೋಧನೆಗೆ ನೆರವು ನೀಡುವುದು ಇತ್ಯಾದಿ ಸೇರಿರುತ್ತವೆ.

(೨೦ನೇ ಪುಟ ನೋಡಿರಿ)

ನಮ್ಮ ಪ್ರಜಾಸತ್ತೆಯ ಪಥವೆತ್ತ ಸಾಗಿದೆ?

ವಿಶ್ವವಿಶಾಲ ಭಾರತ ಪ್ರಜಾಸತ್ತೆಯು ತನ್ನ ತಾರುಣ್ಯದಿಂದಲೂ ಹಲವಾರು ವಿಘ್ನವಿಘಾತಗಳನ್ನು ಎದುರಿಸಿ ಮುಂದುವರಿದಿದೆ ಅದರ ಗಮನವನ್ನು ಸಶ್ರದ್ಧತೆಯಿಂದ ವೀಕ್ಷಿಸುವಾಗ ಪ್ರಗತಿಯತ್ತವೇ ಸಾಗುತ್ತಿದೆ ಎಂದು ಹೇಳಬಹುದು.

ಹೇಳಿದವರು: ಶ್ರೀಮತಿ ಬಿ. ಎಸ್. ಶಶಿಕಲಾ, ಬೆಂಗಳೂರು.

ನಾವು ಸ್ವತಂತ್ರರೇ?

(೧೦ನೇ ಪುಟದಿಂದ)

ನಾವು ಅನರ್ಹತೆಯೆನಿಸುತ್ತದೆ; ಜಾತಿದ್ವೇಷವು ಸಮಾಜ ಪ್ರೇಮವೆನಿಸುತ್ತದೆ. ಸತ್ಯವು ಅನಾಗರಿಕವೆನಿಸುತ್ತದೆ; ಸುಲಿಗೆಯು ವ್ಯವಹಾರ ಜ್ಞಾನವೆನಿಸುತ್ತದೆ; ಲಂಚಗುಳಿತನವು ಬುದ್ಧಿವಂತಿಕೆಯೆನಿಸುತ್ತದೆ. ಮತ್ತೆ ಇವುಗಳಿಗೇ ಸ್ವಾತಂತ್ರ್ಯವೆಂಬ ಶುಭನಾಮವನ್ನು ಕೊಡುತ್ತಿರುವ ಈ ಕಾಲದಲ್ಲಿ ನಾವು ಸ್ವತಂತ್ರರು ಎಂದು ಹೇಳಿಕೊಳ್ಳುವುದು ನಮ್ಮ ಹೊಗಳಿಕೆಯೇ ಅಥವಾ ತೆಗಳಿಕೆಯೇ, ಎಂಬುದನ್ನು ಕನಿಷ್ಠ ಪಕ್ಷ ಈ ಗಣರಾಜ್ಯದಿನದಲ್ಲಾದರೂ ನಾವು ಯೋಚಿಸಬೇಡವೇ?

ನಮ್ಮ ಭಾರತೀಯ ಸಂಸ್ಕೃತಿಯಲ್ಲಿ ಒಂದು ಪ್ರತ್ಯೇಕತೆ ಇರುವುದೇನೋ ನಿಜ. ಆ ಸಂಸ್ಕೃತಿ ಅನೇಕ ಶತಮಾನಗಳ ವರೆಗೆ ಮಂದ ಗಮನದಿಂದ ಮುಂದುವರಿಯುತ್ತಾ ಒಂದು ಸ್ಥಾಯಿಯಲ್ಲಿ ನಿಂತುಹೋಯಿತು. ಅನಂತರ ಮೌಢ್ಯವು ಕವಿದು ಕಟ್ಟಿಕಟ್ಟಿದ ಹಾಗೆ ತಡೆಗೊಂಡು ಅಲ್ಲಿಯೇ ಮುಡುಡಿಕೊಂಡಿತು. ಮುಂದೆ ದೇಶದಲ್ಲಿ ಸ್ವಾತಂತ್ರ್ಯದಾಸೆದಿಂದ ಕ್ರಾಂತಿ—ಆಂದೋಳನೆಗಳೆದ್ದಾಗ, ಸಂಸ್ಕೃತಿ ಕೂಡಾ ಎಚ್ಚರಗೊಂಡಿತು. ಮುಡುಡಿಯೋದ ಬಳ್ಳಿ ಚಿಗುರಲಾರಂಭಿಸಿತು. ಆದರೆ ಅದು ಯಾವ ರೀತಿಯನುಟ್ಟದಲ್ಲಿ ನಿಂತುಹೋಗಿತ್ತೋ ಅದೇ ಮಟ್ಟದಿಂದ ಅದೇ ರೀತಿಯನ್ನೇ ಹಿಡಿದು ಮುಂದುವರಿಯಲು, ಸುತ್ತು ಮುತ್ತಿನ ಪರಿಸ್ಥಿತಿಗಳಿಂದ ಸಾಧ್ಯವೆನಿಸುವ ಮಾತಲ್ಲ. ಏಕೆಂದರೆ ಚರಿತ್ರೆಯ ಪ್ರಭಾವದಿಂದ ದೇಶವು ಅನೇಕ ಬಗೆಯಾಗಿ, ಆರ್ಥಿಕ ಸಾಮಾಜಿಕ ಪರಿಣಾಮಗಳಿಗೆ ಒಳಗಾಗಿದೆ. ಈಗ ನಾವು ಹಿಂದಿನವರ ಸಂಸ್ಕೃತಿಯನ್ನೇ ಹಿಡಿದುಕೊಂಡಿದ್ದರೆ ಮುಂದುವರಿಯಲು ಸಾಧ್ಯವೇ ಇಲ್ಲ. ನಮ್ಮ ಭಾರತ ದೇಶವೊಂದಕ್ಕೇ ನಾವು ಸೀಮಿತರಾಗಿದ್ದರೆ ಈಗ ಸಾಲದು. ಪ್ರಯಾಣ ಸೌಕರ್ಯ, ವಾರ್ತಾ ಪ್ರಸಾರಗಳ ವೇಗ ಮುಂತಾಗಿ ಅಭಿವೃದ್ಧಿಗೊಂಡ ಈ ಕಾಲದಲ್ಲಿ, ಅತಿ ವೇಗವಾಗಿ ಮುಂದುವರಿಯುವ ಯಾವುದೊಂದು ದೊಡ್ಡ ದೇಶದ ಪ್ರಭಾವವು ಎಲ್ಲಾ ದೇಶಗಳ ಮೇಲೆಯೂ ಬೀಳುತ್ತದೆ. ಹಿಂದುಳಿದ ಯಾವ ದೇಶವಾದರೂ ಆ ಪ್ರಭಾವಕ್ಕೆ ಒಳಗಾಗಲೇ ಬೇಕು. ಬೇರೆ ಬೇರೆ ದೇಶದ ಸಮಾಚಾರಗಳನ್ನು ತಿಳಿಯಲು ಈಗ ಪ್ರತಿ ದೇಶದ ಜನರಿಗೂ ಆಸಕ್ತಿವಿದೆ. ಇದು ಸಹಜವಾದುದು. ಮೂಲತಃ ಅನುಕರಣಶೀಲವಾದ ಜನತೆ ಅವರವ್ಯಕ್ತಿಕ್ಕೆ ಅವರು ಗಮ್ಯಸಿಲು ಸಾಧ್ಯವೇ ಇಲ್ಲ. "ನಮಗೇಕೆ ಇನ್ನೊಂದು ದೇಶದ ಗೊಡವೆ? ನಮ್ಮ ನಡವಳಿಕೆಯ ದಾರಿ ಋಷಿಗಳ ಕಾಲದಲ್ಲೇ ನಿರ್ಣಯವಾಗಿದೆ" ಎಂದು ಅಂದುಕೊಳ್ಳುವವರನ್ನು ಕೂಪಮಂಡೂಕವೆನ್ನಬೇಕಾದ ಕಾಲವಿದು.

ಭಾರತ ದೇಶಕ್ಕೆ ಇತ್ತೀಚೆಗೆ ತಾನೇ ಸ್ವಾತಂತ್ರ್ಯವು ಬಂತು. ಆಗ ದೇಶವು ಬಹಳ ಕಷ್ಟ ನಷ್ಟಗಳೀಗಡಾಯಿತು. ಅದ ಮಾತ್ರಕ್ಕೆ ಇದೇನೂ ಮುಂದುವರಿಯಲು ಸಾಧ್ಯವಿಲ್ಲದ ನಾಡೆಂದು ತಿಳಿಯಬೇಕಾಗಿಲ್ಲ. ಇತರ ದೇಶಗಳ ಸರಿಸಮತೆಗೆ ಈ ದೇಶವು ಬರಲಾರದೆಂದು ಬೆದರಬೇಕಾಗಿಲ್ಲ. ಆರ್ಥಿಕದಲ್ಲಿಯಾಗಲೀ, ಪಾರಿಶ್ರಾಮಿಕಗಳಲ್ಲಾಗಲೀ, ಸಾಂಸ್ಕೃತಿಕದಲ್ಲಾಗಲೀ ಇತರ ದೇಶಗಳ ಮುಂದೆ ನಮ್ಮ ದೇಶವು ಹಿಂದೆ ನಿಲ್ಲಬೇಕಾದುದೇನೂ ಇಲ್ಲವೇ ಇಲ್ಲ. ಕಾರಣ, ನಮ್ಮ ದೇಶವನ್ನು ಪರಕೀಯರು ಉಪಾಯಾಂತರಗಳಿಂದಲೇ ವಶಪಡಿಸಿಕೊಂಡರೆಂಬುದು ಗಮನಾರ್ಹವಾಗಿದೆ. (ಸಾಮಾಜಿಕವಾಗಿ ಸಾಂಘಿಕ ಶಕ್ತಿಯಿಲ್ಲದೆ, ದೇಶವು ಹಿಂದುಳಿದು ಹೋದುದರಿಂದಲೇ ಯಾಂತ್ರಿಕ ನಾಗರಿಕತೆ ಈ ದೇಶವನ್ನು ಜಯಿಸಿಕೊಂಡಿತು. "ಕತ್ತಿ ಹಿಡಿದ ವೀರಾಧಿವೀರನನ್ನು ತುಪಾಕಿ ಹಿಡಿದ ಹೇಡಿಯೊಬ್ಬ ಜಯಿಸಿಬಿಟ್ಟ!"

ನಮಗೆ ಬೇಕಾದ ಸಂಸ್ಕೃತಿ

ಪ್ರಸ್ತಾಪದ ಸೀರಿನಂತೆ ಸಂಸ್ಕೃತಿ ಸದಾ ಗತಿಶೀಲವಾಗಿರಬೇಕು. ಪ್ರಾಚೀನ ಸಂಸ್ಕೃತಿಯು ಆ ಕಾಲಕ್ಕೆ ಭವ್ಯವೆನಿಸಿದ್ದರೂ ಇಂದಿಗದು ಪರಿಪೂರ್ಣವೆನಿಸದು. ಪ್ರತಿ ವ್ಯಕ್ತಿ, ಸಮಾಜ, ದೇಶದಲ್ಲಿ ತಲೆದೋರುವ ಸಮಸ್ಯೆಗಳಿಗೆ ಉತ್ತರವೀಯುವ ಶಕ್ತಿ ಸಂಪನ್ನ ಸಂಸ್ಕಾರ ನಮಗಿಂದು ಬೇಕು; ನಮ್ಮ ಸಂಸ್ಕೃತಿ ಇದಕ್ಕೆ ಮಾರ್ಗದರ್ಶನ ಮಾಡಬೇಕು.

ತಿಳಿಸಿದವರು: ಶ್ರೀ ಎಂ. ರಂಗ ರಾವು.

ಹೀಗೆ ಯಾಂತ್ರಿಕ ವಿಜಯವೇನೋ ಆಯಿತು. ಇನ್ನದನ್ನು ಅಲ್ಲಗಳೆಯಲು ಸಾಧ್ಯವಿಲ್ಲದಂತೆ ಪ್ರಜೆಗಳ ಹೊಲಬು ಅವರ ಮೇಲೆ ಬಿದ್ದು ಹೋಗಿದೆ. ಅಂತೆಯೇ ಸ್ವಾತಂತ್ರ್ಯ ಬಂದನಂತರ ವಿಕಸನವಾಗತೊಡಗಿದ ನಮ್ಮ ಸಂಸ್ಕೃತಿಯಲ್ಲಿ ಅಂತಾರಾಷ್ಟ್ರೀಯ ಲಕ್ಷಣಗಳಿರಲೇ ಬೇಕಾಯಿತು. ಇದನ್ನರಿತೇ ನಮ್ಮ ದೇಶನಾಯಕರು ಆರ್ಥಕ, ಪಾರಿಶ್ರಾಮಿಕ, ರಾಜಕೀಯ ಕಾರ್ಯಗಳಲ್ಲಿ ವಿದೇಶಗಳನ್ನು ತಕ್ಕಷ್ಟು ಪರಿಮಿತವಾಗಿ ಅನುಸರಿಸುತ್ತಾರೆ. ಇದೇ ವಿಧಾನವನ್ನು ಕವಿಗಳೂ ಕಲಾಕಾರರೂ ಸಾಹಿತಿಗಳೂ, ಸಾಂಸ್ಕೃತಿಕ ಕಾರ್ಯಗಳಲ್ಲಿ ಕೂಡಾ ಅನುಸರಿಸಬೇಕಾದುದು ಅಗತ್ಯವೆನಿಸುತ್ತದೆ.

ಹೀಗೆಂದ ಮಾತ್ರಕ್ಕೆ ನಮ್ಮ ಸಾಂಪ್ರದಾಯಗಳ ತಳಪಾಯವನ್ನೇ ಕಿತ್ತು ಪರಕೀಯರನ್ನು ಅನುಸರಿಸುವುದು ಉಚಿತವೆಂದು ಅರ್ಥವಲ್ಲ. ಹಾಗೆ ಪರಕೀಯರನ್ನು ಅನುಸರಿಸಿದರೆ ಅದು ಸಂಪೂರ್ಣದಾಸ್ಯವೇ ಸರಿ. ಆ ಬಗೆಯದು ಕೇವಲ ಕೃತಕ ಸಂಸ್ಕೃತಿಯೇ ಸರಿ.

ಹಳೆಯದರೊಂದಿಗೆ ಹೊಸತನ್ನು ಬೆರೆಸಿಕೊಡುವಂತಹ ಕಾರ್ಯ ನಿನಾದಗಳು ಈಗ ತುಂಬಾ ಕೇಳಿಬರುತ್ತಿರುವುದಾದರೂ, ಇದು ಹೇಳುವಷ್ಟು ಸುಲಭವಾದ ಕಾರ್ಯವೇನಲ್ಲ. ಸಂಸ್ಕೃತಿಯ ಅಭಿವೃದ್ಧಿಯೆಂಬುದು ಪ್ರತಿ ಪರಂಪರೆಗೂ ಒಂದು ಸ್ವಾತಂತ್ರ್ಯವಿರುವ ಪ್ರತ್ಯೇಕ ಕಾರ್ಯವಾಗಿದೆ. ನಾವೇನೋ ಒಂದು ಬಗೆಯ ಸುಸ್ತಕಗಳನ್ನೋದಿದ್ದೇವೆ; ಒಂದು ಬಗೆಯ ವಾತಾವರಣದಲ್ಲಿ ಬಳೆದಿದ್ದೇವೆ; ಒಂದು ಬಗೆಯ ಸಂಸ್ಕಾರವನ್ನು ಕೂಡಾ ರೂಢಿಸಿಕೊಂಡಿದ್ದೇವೆ. ಆ ಮಟ್ಟಿಗೆ ಸರಿಯೇ. ಆದರೆ ಅಂತಹುದನ್ನೇ ಓದಿ, ಅಂತಹ ಬಾವನೆಗಳನ್ನೇ ಅರಳಿಸಿಕೊಂಡು ಅಂತಹ ಸಂಸ್ಕಾರವನ್ನೆ ಸಾಧಿಸಬೇಕೆಂದು ನಮ್ಮ ಮಕ್ಕಳನ್ನೂ ಬಲವಂತ ಪಡಿಸುವುದು ಸರಿಯೆನಿಸದು.

ಸಂಸ್ಕೃತಿಗಿರುವ ಸ್ವಾತಂತ್ರ್ಯವನ್ನು ಅರಿಯದೇ ಇರುವವರು ಸ್ವತಃ ಯಾವ ಸಂಸ್ಕಾರಕ್ಕೂ ಯೋಗ್ಯರಾಗುವುದಿಲ್ಲ. ಅಂತಹರು ಒಂದೋ ಬದಲಾವಣೆಯಿಲ್ಲದ ತಮ್ಮ ಪ್ರಾಚೀನ ಸಾಂಪ್ರದಾಯದಲ್ಲೇ ಇರುತ್ತಾರೆ; ಇಲ್ಲವೇ ಕುರುಡುತನದಿಂದ ಪರಕೀಯರ ಸಂಸ್ಕಾರಕ್ಕೇ ಶರಣುಹೋಗುತ್ತಾರೆ. ಇವೆರಡೂ ಶುಭಕಾರಿಯೆನಿಸವು.

ಸಂಸ್ಕೃತಿಯೆಂಬುದು ಗಾಳಿಯಿದ್ದ ಹಾಗೆ. ಆ ನಾವು ಅನುಕ್ಷಣವೂ ಶ್ವಾಸಿಸುವ ಗಾಳಿ ಇಂತಿಂತಹ ಮರದೆಲೆಗಳಿಂದಲೇ ಹೊರಟುಬಂತೆಂದು ಹೇಳಲು ಸಾಧ್ಯವುಂಟೆ? ಹಾಗೆಯೇ ಸಂಸ್ಕೃತಿ ಕೂಡಾ ಆಯಾ ವಾತಾವರಣಕ್ಕೆ ಹೊಂದಿಕೊಂಡಿರುವವರಲ್ಲಿ ಅದದಕ್ಕೆ ತಕ್ಕಹಾಗೆ ಮಾನವರ ಹೊಲಬನ್ನು ಆಕರ್ಷಿಸಿಕೊಳ್ಳುತ್ತದೆ. ಕೀಳ್ತರಗತಿಯ ಸಂಸ್ಕಾರವುಳ್ಳವರ ಮಧ್ಯದಲ್ಲಿ ಬಳೆಯುವ ಮೇಲ್ತರಗತಿಯ ಕುಟುಂಬದ ಮಕ್ಕಳು ಕೀಳ್ತರದ ಸಂಸ್ಕಾರಕ್ಕೇ ಹೊಲಬುಳ್ಳವರಾದರೆ ಆಶ್ಚರ್ಯವಿಲ್ಲ. ಹೀಗೆ ತನ್ನಂತಾನೇ ಬರುವಂತಾದ್ದು ನಿಜವಾದ ಸಂಸ್ಕೃತಿಯೆನಿಸುವುದಿಲ್ಲ. ಅದರಲ್ಲಿ ಅಹಂಕಾರ, ಅಸೂಯೆ, ಆತ್ಮಸಂಯಮ, ಗಾಂಭೀರ್ಯ, ಧೈರ್ಯ, ಕೇಡಿತನ, ಲೋಭ, ಔದಾರ್ಯ—ಎಲ್ಲವೂ ಕಲೆತಿರುತ್ತದೆ. ಇವುಗಳಲ್ಲಿ ಯಾವುದು ಒಳಿತು, ಯಾವುದು ಕೆಡುಕು ಎಂಬುದು ಮಕ್ಕಳಿಗೆ ತಿಳಿಯುವುದಿಲ್ಲ. ಅವುಗಳಲ್ಲಿ ಒಳ್ಳೆಯದನ್ನು ಬಲಪಡಿಸಿ, ಕೆಟ್ಟದನ್ನು ವಿಸರ್ಜಿಸುವಂತೆ ಮಾಡುವುದೇ ನಿಜವಾದ ಸಂಸ್ಕೃತಿ. ವ್ಯಕ್ತಿಗಳ ಚೈತನ್ಯದಲ್ಲಿರುವ ವೈವಿಧ್ಯ ಚಾಂಚಲ್ಯಗಳನ್ನು ತೊಲಗಿಸಿ, ಸ್ಥಿರವಾದ ಏಕ ಮುಖಗೊಳಿಸುವುದೇ ಸಂಸ್ಕೃತಿಯ ಧ್ಯೇಯವಾಗಿದೆ.

ಸಂಸ್ಕೃತಿಯ ಪ್ರಭಾವದಿಂದ ವ್ಯಕ್ತಿಗಳು ಸಮಾಜವಾಗಿ, ಸಮಾಜವು ದೇಶೀಯ ಜಾತಿಯಾಗಿ 'ನಾವೆಲ್ಲಾ ಒಂದೇ ಭಾರತೀಯರು' ಎಂಬ ಭಾವನೆ ಬೇರೂರಬೇಕು. ಈ ಬಗೆಯಿಂದ ಭಾರತೀಯರೆಲ್ಲ ಏಕದೇಶೀಯ ಜಾತಿಯವರಾಗಿ ಭೀಮ ಬಲಿಗಳಾಗಿರುತ್ತಿದ್ದರೆ ನಮ್ಮ ದೇಶಕ್ಕೆ ಅಷ್ಟು ಸುಲಭವಾಗಿ ಆ ಬಗೆಯ ಪಾರತಂತ್ರ್ಯವು ಬಂದಿರುತ್ತಿದ್ದಿಲ್ಲ. ಖುಡುಗಗಳೇ ತುಪಾಕಿಗಳನ್ನು ಜಯಿಸಿಬಿಡುತ್ತಿದ್ದುವು. ಮಹಾತ್ಮಾಗಾಂಧಿ ಪ್ರಜಾಸಮುದಾಯದಲ್ಲಿ ಏಕದೇಶಿಯ ಭಾವನೆಯನ್ನು ಬಲಗೊಳಿಸಿದುದರಿಂದಲೇ ಕಡೆಗಾದರೂ ಸ್ವಾತಂತ್ರ್ಯ ಬಂತು.

ನಮ್ಮ ಜೀವನಕ್ಕೆ ಹಣವೂ ಆರೋಗ್ಯವೂ ಎಷ್ಟು ಅಗತ್ಯವೋ ಸಂಸ್ಕೃತಿ ಕೂಡಾ ಅಷ್ಟೇ ಅಗತ್ಯವಾದುದು. ಈ ಸಂಸ್ಕೃತಿ ಕಾಲಕ್ಕೆ ತಕ್ಕಹಾಗೆ ಮಾರ್ಪಡುತ್ತಾ ಹೋಗುತ್ತದೆ. ಒಂದು ಕಾಲದಲ್ಲಿ ಸಂಸ್ಕೃತಿಯೆಂದರೆ ಉತ್ತಮ ಕುಲೀನರಿಗೂ, ಶ್ರೀಮಂತರಿಗೂ ಮಾತ್ರವೇ ಮೀಸಲಾದುದೆಂಬ ನಂಬುಗೆಯಿತ್ತು. ಆ ಕಾಲದಲ್ಲಿ ಕಾಯಕಸ್ವಾಮೂಡುವ ಬಡಜನರಿಂದರೆ, ಪಶು ತುಲ್ಯರಂತಿದ್ದರು. ಆದರೆ ಅದು ಯಾರ ತಪ್ಪೂ ಅಲ್ಲ. ಆಗಿನ ಸಾಮಾಜಿಕ ವ್ಯವಸ್ಥೆಯೇ ಹಾಗಿತ್ತು. ಹಾಗಿದ್ದ ಮಾತ್ರಕ್ಕೆ ಆ ಜನ ಸಾಮಾನ್ಯರಿಗೆ ಯಾವುದೊಂದು ಸಂಸ್ಕೃತಿಯೂ ಇರಲಿಲ್ಲವೆಂದು ಅರ್ಥವಲ್ಲ; ಇತ್ತು. ಆ ಸಂಸ್ಕೃತಿ ಜಡ ಸ್ವರೂಪದ್ದು; ಹಳೆಯ ಸಾಂಪ್ರದಾಯದ್ದು. ದೇಶಕ್ಕೆ ಆಪತ್ತು ಸಂಭವಿಸಿದಾಗ ಅಂತಹ ಸಂಸ್ಕೃತಿ ಯಾವ ಉಪಯೋಗಕ್ಕೂ ಬರಲಿಲ್ಲ. ಏನೋ ಮಣ್ಣಾದಿಂದ ವೈಯಕ್ತಿಕ ಪ್ರಭಾವಕ್ಕೊಳಗಾಗಿ ಕೆಲವೊಂದು ಕ್ಲಿಷ್ಟಪರಿಸ್ಥಿತಿಯಲ್ಲಿ ಕೆಲವೊಬ್ಬರು ಸಾಮಾನ್ಯರು ಉತ್ತಮ ಸಂಸ್ಕೃತಿಯನ್ನು ಪ್ರದರ್ಶನಮಾಡಿದ ಘಟನೆಗಳು ಚರಿತ್ರೆಯಲ್ಲಿ ಕಾಣಿಸುವುದೇನೋ ನಿಜ. ಅಂತಹವನ್ನು ಭಾರತೀಯ ಪ್ರಜಾ ಸಾಮುದಾಯಿಕ ದೃಷ್ಟಿಯಿಂದ ಲೆಕ್ಕಿಸಲಾಗುವುದಿಲ್ಲ.

ಇದಂತೂ ಪ್ರಜಾಯುಗ; ಪ್ರಜಾರಾಜ್ಯ. ಸಂಸ್ಕೃತಿಯೆಂಬುದು ದೇಶದ ಪ್ರತಿಯೊಬ್ಬರ ಸೊತ್ತಾಗಿ ಬರಬೇಕಾಗಿದೆ. ಹಾಗೆ ಬರಬೇಕಾದರೆ ಸಾಹಿತಿಗಳೂ ಕಲಾಕಾರರೂ ಪ್ರಯತ್ನಪಡಬೇಕು. ವಿಶಾಲ ದೃಷ್ಟಿಯಿಂದ ತಮ್ಮ ರಚನೆಗಳನ್ನು ನಿರ್ವಹಿಸಬೇಕು.

ಭಾರತವು ಸ್ವಾತಂತ್ರ್ಯವನ್ನು ಸಂಪಾದಿಸಿಕೊಂಡ ಮೇಲೆ ಅದಕ್ಕೊಂದು ಪ್ರತ್ಯೇಕ ಭವಿಷ್ಯತ್ತೇ ನಿರ್ಮಾಣವಾದಂತಾಗಿದೆ. ದೇಶದಲ್ಲಿ ಶಾಂತಿಯೂ ಕ್ಷೇಮವೂ ಭದ್ರವಾಗಿರಬೇಕಾದರೆ ಪ್ರಜೆಗಳು ಮಾಡುವ ಕಾರ್ಯಗಳು, ಅವರಿಗೆ ಧನವನ್ನೂ ಕೀರ್ತಿಯನ್ನೂ ತರುವುದಾಗಿದ್ದು, ದೇಶಕ್ಷೇಮಕ್ಕೂ ಸಹಕರಿಸುವಂತಹುದಾಗಿರಬೇಕು. ತನ್ನ ಹಕ್ಕುಗಳನ್ನೂ ಪಾಲಿಸುವ ಸ್ವಾರ್ಥದೊಂದಿಗೆ, ಇತರರ ಹಕ್ಕುಗಳನ್ನು ಪಾಲಿಸಬೇಕೆಂಬ ದೊಡ್ಡ ಸ್ವಾರ್ಥವೂ ಜನತೆಗುಂಟಾಗಬೇಕು. ಈ ಬಗೆಯ ದ್ವಂದ್ವ ಸಮಸ್ಯೆಗಳಿಂದಲೇ ಜೀವನವು ತುಂಬಿಕೊಳ್ಳುವುದರಿಂದ, ಅವುಗಳನ್ನು ಇರಿಸಿ ದಾಟಿ ಸಾಗುವುದೇ ಮಾನವನ ಬಾಳು ಎನ್ನಬಹುದು.

ಮಕ್ಕಳಿಗೆ ತೀರಾ ಒಳ್ಳೆಯ ಬುದ್ಧಿ ಮಾತ್ರವೇ ಕಲಿಸಿ ಅವರನ್ನು ಯಾವುದಕ್ಕೂ ಆಗದವರನ್ನಾಗಿ ಮಾಡಬಹುದು. ತೀರಾ ಅಹಿಂಸೆಯನ್ನೇ ಹಿಡಿದುಬಿಟ್ಟರೆ ಅವನೊಬ್ಬ ಹೆಂಬೇಡಿಯಾಗುವನು. ಮಹಾತ್ಮಾ ಗಾಂಧಿ ತುಂಬಿದ ಸತ್ವಶಾಲಿಗಳಾದುದರಿಂದಲೇ ಅವರು ಅಹಿಂಸೆಯಿಂದ ದೌರ್ಜನ್ಯವನ್ನು ಗೆಲ್ಲಲು ಶಕ್ತರಾದರು. ಅವರ ಹಾಗೆ ಎಲ್ಲರೂ 'ಮಹಾತ್ಮ'ರಾಗಲು ಸಾಧ್ಯವಿಲ್ಲ. ಎಲ್ಲರೂ ಒಳಿತನ್ನು ಮಾತ್ರವೇ ಕಲಿಯುವುದೂ ಇಲ್ಲ. ಆದರೆ 'ಮಹಾತ್ಮ'ರಾಗಬೇಕೆಂಬ ಪ್ರಯತ್ನದಲ್ಲಿ ಮಹಾತ್ಮರ ದಾರಿಯನ್ನು ಹಿಡಿಯುವುದೇ ಪ್ರಜಾಸಾಮಾನ್ಯರಿಗೆ ವಾಂಛನೀಯವಾದುದು.

ಮಾನವರು ತೀರಾ ಒಳ್ಳೆಯವರೂ ಅಲ್ಲ; ತೀರಾ ಕೆಟ್ಟವರೂ ಅಲ್ಲ. ಆದರೆ ಕೆಟ್ಟದನ್ನು ಯಾರೂ ಕಲಿಸಿಕೊಡಬೇಕಾಗಿಲ್ಲ. ಅಂತೆಯೇ ನಾವಿರಾರು ನೀತಿ ವಾಕ್ಯಗಳು ಹುಟ್ಟಿವೆ. ಹೀಗೆ ಒಟ್ಟು ತಾನಾಗಿ ಕಲಿತುಕೊಂಡ ಕೆಡುಕುಗಳೆಷ್ಟುವೆ? ಅವುಗಳನ್ನು ಎಷ್ಟರಮಟ್ಟಿಗೆ ಬಿಡಬಹುದು? ಎಷ್ಟರಮಟ್ಟಿಗೆ ಜೀವನ ಪಾತ್ರೆಯಲ್ಲಿ ವಿಷೌಷಧಿಯಂತೆ ಕೆಡುಕುಗಳನ್ನು ಬಳಸಿಕೊಳ್ಳಬಹುದು? ಎಂಬ ಪರಿಜ್ಞಾನವೇ ನಮಗೆ ಅಗತ್ಯವಾದುದು. ಹೀಗೆ ತಾವು ಶೇಖರಿಸಿಕೊಂಡ ಒಳಿತು ಕೆಡುಕುಗಳನ್ನು ಜೀವನದಲ್ಲಿ ಬಳಸಿಕೊಳ್ಳಲು ಒಳ್ಳೆಯ ಸಂಸ್ಕಾರವು ನಮಗೆ ಯಾವಾಗಲೂ ಬೇಕಾಗುತ್ತದೆ. ಆ ಸಂಸ್ಕಾರವು ವರ್ತಮಾನ ಕಾಲದ ಪ್ರತಿ ವ್ಯಕ್ತಿಗೂ, ಪ್ರತಿ ಸಮಾಜಕ್ಕೂ, ದೇಶಕ್ಕೂ ಉಂಟಾಗುವ ಸಮಸ್ಯೆಗಳನ್ನು ಬಗೆಹರಿಸುವಂತಹುದಾಗಿರಬೇಕು. ಪರಿಸ್ಥಿತಿಗೆ ತಕ್ಕಹಾಗೆ ರೀತಿ ನೀತಿಗಳು ವ್ಯತ್ಯಾಸವಾದಂತೆ ಸಂಸ್ಕೃತಿಯೂ ಮಾರ್ಪಡಬೇಕಾದುದು ಅನಿವಾರ್ಯ.

ನಮ್ಮ ಪ್ರಜಾಸತ್ತೆಯ ಪಥವೆತ್ತ ಸಾಗಿದೆ?

(೧೯ನೇ ಪುಟದಿಂದ)

ಮೇಲೆ ಕಾಣಿಸಿರುವ ಭಾಗಗಳ ಅಭಿವೃದ್ಧಿ ಸರಿಯಾಗಿ ಆಗಲು, ಭಾರತವು ವಿದೇಶಗಳ ವಿಶೇಷ ತಜ್ಞರುಗಳನ್ನು ಕರೆಸಿಕೊಂಡಿರುವುದಷ್ಟೇ ಅಲ್ಲದೆ, ಆಯಾಯ ವಿಷಯಗಳಲ್ಲಿ ತರಬೇತು ಹೊಂದಿ ಬರಲು ನಾಡಿನ ಬುದ್ಧಿವಂತರನ್ನು ವಿದೇಶಗಳಿಗೆ ಸರ್ಕಾರದ ಖರ್ಚಿನಿಂದಲೇ ಕಳುಹಿಸುತ್ತಿದೆ.

ಇದಿಷ್ಟು ಪ್ರಜಾಪ್ರಭುತ್ವದಲ್ಲಿ ಅಡಳಿತವಾಗಿರುವ ಪಂಚ ವಾರ್ಷಿಕ ಯೋಜನೆಗಳು ಇದನ್ನು ಅನುಸರಿಸಿ ನಮ್ಮ ರಾಷ್ಟ್ರದ ಉತ್ಪಾದನಾ ಶಕ್ತಿಯನ್ನು ಉನ್ನತಿ ಪಡಿಸುವುದರಲ್ಲಿ ನಮ್ಮ ಸರ್ಕಾರ ನಿರತವಾಗಿರುವುದರಿಂದ ದೇಶದ ಆರ್ಥಿಕ ಪರಿಸ್ಥಿತಿ ಉತ್ತಮಗೊಂಡು ಇತರ ದೇಶಗಳಂತೆ ನಮ್ಮ ದೇಶವೂ ಸಮೃದ್ಧ ನಾಡಾಗುವುದರಲ್ಲಿ ಸಂದೇಹವಿಲ್ಲ. ಅಂತೆಯೇ ಈ ಯೋಜನೆಗಳು ಪೂರ್ಣವಾಗುವಷ್ಟರಲ್ಲಿ ನಮ್ಮ ದೇಶದಲ್ಲಿರುವ ನಿರುದ್ಯೋಗ ಸಮಸ್ಯೆಯೂ ಪರಿಹಾರವಾಗಬಹುದೆಂದು ಆಶಿಸಬಹುದಾಗಿದೆ.

ಭಾರತದಲ್ಲಿ ರಾಜನೀತಿ ಕ್ಷೇತ್ರ

ನಮ್ಮ ಪ್ರಜಾಪ್ರಭುತ್ವದ ಪಥ ಪ್ರಗತಿಯ ಗುರಿಯತ್ತ ಸಾಗಲು ಕೇವಲ ಪಂಚ ವಾರ್ಷಿಕ ಯೋಜನೆಗಳು ಮಾತ್ರ ಮುಖ್ಯವಲ್ಲ. ಸುವ್ಯವಸ್ಥಿತ ಅಡಳಿತ ಕ್ರಮವೂ ಇರಬೇಕು. ಆದ್ದರಿಂದ ಸರ್ವಮಾನವರಲ್ಲಿನ ಭಾರತದ ಪ್ರಜಾತಂತ್ರಾತ್ಮಕ ಅಡಳಿತದ ಸ್ಥೂಲ ಪರಿಚಯವನ್ನು ನಾವು ಮಾಡಿಕೊಳ್ಳುವುದು ಒಳ್ಳೆಯದು.

ಈಗ ಮಹಾತ್ಮಾ ಗಾಂಧಿಜಿಯವರು ಸ್ಥಾಪಿಸಿದ ಕಾಂಗ್ರೆಸ್ ಸಂಸ್ಥೆಯ ತತ್ವಗಳ ಆಧಾರದ ಮೇಲೆ ನಮ್ಮ ಪ್ರಜಾಸತ್ತೆಯ ಪಥ ಸಾಗುತ್ತಿದೆ. ಇದರಲ್ಲಿ ಪ್ರಜೆಗಳಿಂದ ಚುನಾಯಿತರಾದ ಮೆಂಬರುಗಳಿಂದ ಸ್ಥಾಪಿಸಲ್ಪಟ್ಟ ಕೇಂದ್ರ ಸರ್ಕಾರದ ವಿಧಾನ ಸಭೆಯು ಭಾರತದ ಶಾಸನದ ವಿಧಾನವನ್ನು ರೂಪಿಸುತ್ತಿದೆ.

ಭಾರತವು ಬಹು ದೊಡ್ಡ ದೇಶ. ಯೂರೋಪಿನಲ್ಲಿರುವ ಅನೇಕ ರಾಷ್ಟ್ರಗಳ ಸಮಾನ ನಮ್ಮ ನಾಡಿನ ಒಂದೊಂದು ಪ್ರಾಂತ್ಯಗಳಿವೆ. ಆದ್ದರಿಂದ ಕೇಂದ್ರ ಸರ್ಕಾರ ಒಂದರಿಂದಲೇ ಇಡಿ ಭಾರತದ ಅಡಳಿತವನ್ನು ನಿಭಾಯಿಸುವುದು ಸಾಧ್ಯವಿಲ್ಲದ ಮಾತು. ಆದ್ದರಿಂದ ಅಡಳಿತ ನಡೆಸಲು ಸುಲಭವಾಗುವಂತೆ ಭಾರತವನ್ನು ಭಾಷಾವಾರು ಪ್ರಾಂತ್ಯಗಳಲ್ಲಿ ವಿಭಜಿಸಿದೆ. ಈ ರೀತಿ ವಿಭಜಿಸಿದ ಒಂದೊಂದು ಪ್ರಾಂತ್ಯದಲ್ಲೂ ಒಬ್ಬೊಬ್ಬ ರಾಜ್ಯಪಾಲರನ್ನು ನೇಮಿಸಿ ಅವರ ಹಾಗೂ ಅವರ ಮಂತ್ರಿಮಂಡಲದ ಮೂಲಕ ಆಯಾ ಪ್ರಾಂತ್ಯಗಳ ಅಡಳಿತ ಸುವ್ಯವಸ್ಥಿತ ರೀತಿಯಲ್ಲಿ ನಡೆಯಲು ಏರ್ಪಾಡಾಗಿದೆ. ಪ್ರಾಂತ್ಯದ ಪುರೋಭಿವೃದ್ಧಿ, ಪ್ರಾಂತ್ಯದ ರಕ್ಷಣೆ, ಸೈನ್ಯವ್ಯವಸ್ಥೆ ಎಲ್ಲವೂ ಪ್ರಾಂತ್ಯಸರ್ಕಾರಕ್ಕೆ ಸೇರಿದ ಹೊಣೆಯೇ ಆದರೂ ಪ್ರಾಂತ್ಯಸರ್ಕಾರದ ಕೈ ಸೋತಾಗ ಕೇಂದ್ರ ಸರ್ಕಾರ ಸಹಾಯಕ್ಕೆ ಬರುತ್ತದೆ. ಅಷ್ಟೇ ಅಲ್ಲದೆ ಎಷ್ಟೇ ಪ್ರಾಂತ್ಯ ಸರ್ಕಾರಕ್ಕೆ ಸ್ವಾತಂತ್ರ್ಯವಿದ್ದರೂ ಕೊನೆಯ ಅಂಗೀಕಾರ ಮುದ್ರೆ, ಕೇಂದ್ರ ಸರ್ಕಾರದ ಕೈಯಲ್ಲಿರುವಂತೆ ಏರ್ಪಾಡಾಗಿದೆ. ಅರ್ಥಾತ್ ಕೇಂದ್ರ ಸರ್ಕಾರವೇ ಪ್ರಧಾನವಾಗಿದ್ದು ಕೇಂದ್ರಿಯ ಸಭೆಗಳು ಹಾಗೂ ಮಂತ್ರಿಮಂಡಲದ ಸಹಾಯದಿಂದ ಇಡಿ ಭಾರತದ ಶಾಸನ ನಡೆಯುವಂತೆ ವ್ಯವಸ್ಥಿತಗೊಂಡಿದೆ. ಅಂದರೆ ಪ್ರಾಂತ್ಯ ಹಾಗೂ ರಿಯಾಸತ್ತುಗಳು ಕೇಂದ್ರಸರ್ಕಾರದ ಆಡಳಿತದ ನಿಯಂತ್ರಣಕ್ಕೊಳಪಟ್ಟಿದೆ ಎಂದರ್ಥವಾಯಿತು.

ಒಟ್ಟಿನಲ್ಲಿ ಅಡಳಿತದ ವ್ಯವಸ್ಥೆ ಈ ರೀತಿ ಇದೆ. (1) ಕೇಂದ್ರ ಶಾಸನವ್ಯವಸ್ಥೆಯು ಪ್ರಾಂತ್ಯಗಳಲ್ಲಿ ವಿಭಾಜಿತವಾಗಿಯೂ, (2) ಪ್ರಾಂತ್ಯಗಳ ಶಾಸನವ್ಯವಸ್ಥೆ ಪ್ರಾಂತ್ಯಗಳ ಕಮೀಷನರುಗಳ ಅಡಳಿತಕ್ಕೊಳಪಟ್ಟೂ (3) ಕಮೀಷನರುಗಳ ಶಾಸನ ವ್ಯವಸ್ಥೆ ಅವರ ಜಿಲ್ಲೆಗಳಲ್ಲಿ ವಿಭಾಜಿತವಾಗಿಯೂ (4) ಜಿಲ್ಲೆಗಳ ಶಾಸನ ವ್ಯವಸ್ಥೆಯು ತಹಶೀಲ್‌ದಾರರುಗಳಲ್ಲಿ ಹಂಚಿಯೂ (5) ತಹಶೀಲ್‌ದಾರರ ಶಾಸನವ್ಯವಸ್ಥೆಯು ಹೋಬಳಿಗಳಲ್ಲಿ. ವಿಭಾಜಿತವಾಗಿಯೂ (6) ಹೋಬಳಿಗಳ ಶಾಸನವ್ಯವಸ್ಥೆಯು ಗ್ರಾಮಪಂಚಾಯಿತಿದಾರರುಗಳಲ್ಲೂ ಹಂಚಲ್ಪಟ್ಟು ಇಡೀ ಭಾರತವು ಪ್ರಜಾತಂತ್ರಾತ್ಮಕ ಅಡಳಿತಕ್ಕೊಳಪಟ್ಟಿದೆ. ಇದು ಭಾರತದ ರಾಜನೈತಿಕ ಕ್ಷೇತ್ರದ ಒಂದು ವಿಹಂಗಮ ನೋಟ.

ಧಾರ್ಮಿಕ ಹಾಗೂ ಸಾಮಾಜಿಕ ಸ್ಥಿತಿ

ಹಿಂದೆ ನಮ್ಮ ಸಾಮಾಜಿಕ ಪರಿಸ್ಥಿತಿ ಅಷ್ಟು ಉತ್ತಮವಾಗಿರಲಿಲ್ಲ. ಅನೇಕ ಅಂಧವಿಶ್ವಾಸಗಳೂ, ಮೂಢನಂಬಿಕೆಗಳೂ, ರೂಢಿವಾದಗಳೂ, ಜಾತಿಮತ ಭೇಧಭಾವನೆಯೂ ಸಂಕುಚಿತ ಧಾರ್ಮಿಕ ಭಾವನೆಗಳೂ ಬೇರುಬಿಟ್ಟಿದ್ದು ಭಾರತದ ಪ್ರಗತಿಗೆ ಮುಳ್ಳುಗಳಾಗಿದ್ದವು ಆದರೆ ಈಗಿನ ಜನರಲ್ಲಿ ಅಜ್ಞಾನ ಹರಿದು ಸಾಮಾಜಿಕ ಹಾಗೂ ಧಾರ್ಮಿಕ ಕ್ಷೇತ್ರವೂ ಸುಧಾರಿಸುತ್ತಿದೆ. ಅದರಲ್ಲೂ "ಹಿಂದೂ ಕೋಡ್ ಬಿಲ್ಲ್"ನಿಂದಾಗಿ ಸಾಮಾಜಿಕ ಪರಿಸ್ಥಿತಿ ಹೆಚ್ಚು ಎಚ್ಚೆತ್ತುಕೊಳ್ಳುತ್ತಿದೆ. ಪ್ರಜಾಸರ್ಕಾರವು ಪ್ರತಿ ಭಾರತೀಯ ನಾಗರಿಕನಿಗೂ ಸಮಾಜದಲ್ಲಿ ಸಮಾನ ಅಧಿಕಾರ ನೀಡಿದೆ.

ಅಸ್ಪೃಶ್ಯತೆಯ ಸಮಸ್ಯೆಯನ್ನು ಸರಕಾರ ನೇರವಾಗಿ ತನ್ನ ಕೈಯಲ್ಲೇ ತೆಗೆದುಕೊಂಡಿದೆ. ಹಿಂದುಳಿದ ಜನಾಂಗದವರನ್ನು ಮುಂದಕ್ಕೆ ತರಲು ಸರ್ವವಿಧದಿಂದಲೂ ಪ್ರಯತ್ನಿಸುತ್ತಿದೆ. ಈಗಲೂ ಜಾತಿ, ಮತ, ಧಾರ್ಮಿಕ ಭಾವನೆಗಳು ಭಾರತೀಯರಲ್ಲಿದ್ದರೂ ಅದು ಮನೆಯ ಮಟ್ಟಗೆ ಅಸ್ಪೃಶ್ಯವಾಗಬೇಕೇ ಹೊರತು ಅದು ರಾಜನೈತಿಕ ಕ್ಷೇತ್ರಕ್ಕೆ ನುಸುಳುವಂತಿಲ್ಲ. ಆದ್ದರಿಂದಲೇ ಹಿಂದಿನಂತೆ ಧರ್ಮದ ಹೆಸರಿನಲ್ಲಿ ಅಗುತ್ತಿದ್ದ ಎಷ್ಟೋ ಅನಾಹುತಗಳು ಕಡಿಮೆಯಾಗಿವೆ.

ಭಾರತದ ಮೂಲ ಮಂತ್ರ

ಭಾರತಕ್ಕೆಲ್ಲಾ ಒಂದೇ ಭಾಷೆ ಇರುವಂತೆ ಹಿಂದಿಯನ್ನು ರಾಷ್ಟ್ರ ಭಾಷೆಯನ್ನಾಗಿ ಅಂಗೀಕರಿಸಿದೆ. ಭಾರತೀಯರೆಲ್ಲಾ ಒಂದೇ—ಒಂದೇ ಭಾಷೆ—ಒಂದೇ ಹೃದಯ, ಒಂದೇ ಶಾಸನ, ಒಂದೇ ರೀತಿ ನಡವಳಿಕೆ, ಒಂದೇ ತತ್ವವಿರಬೇಕೆಂಬುದೇ ಪ್ರಜಾಸತ್ತೆಯ ಮೂಲ ಮಂತ್ರವಾಗಿದೆ.

ಸರ್ಕಾರದ ಜಮಾ ಖರ್ಚು

ಇನ್ನು ಸರ್ಕಾರದ ಖರ್ಚಿಗೆ ಹಣ ವಸೂಲಾಗುವ ಬಗೆಯನ್ನು ಸೂಕ್ಷ್ಮವಾಗಿ ತಿಳಿಯೋಣ.

(1) ಧಾನ್ಯದ ಜಲಾವಣೆಯಿಂದ, (2) ಆಮದು—ರಫ್ತಿನ ಬಾಬತ್ತು, (3) ಉಪ್ಪಿನ ಉತ್ಪತ್ತಿ (4) ವಿದೇಶ ಹಾಗೂ ಸ್ವದೇಶ ವ್ಯಾಪಾರದುತ್ಪತ್ತಿ (5) ಇನ್‌ಕಮ್ ಟ್ಯಾಕ್ಸ್ (6) ಸಂಕದ ಬಾಬತ್ತು (7) ಪೋಸ್ಟ್ ಆಫೀಸಿನಿಂದ ಆಗುವ ಉತ್ಪತ್ತಿ, ಟೆಲಿಫೋನ್, ರೇಡಿಯೋಗಳಿಂದ ಬರುವ ಆದಾಯ ಇತ್ಯಾದಿಗಳಿಂದ ಕೇಂದ್ರ ಸರ್ಕಾರಕ್ಕೆ ಹಣ ಜಮಾವಣೆಯಾದರೂ ಅಷ್ಟನ್ನೂ ದೇಶದ ಪುರೋಭಿವೃದ್ಧಿಗೆ ಖರ್ಚು ಮಾಡಲಾಗುತ್ತಿದೆ.

ಭಾರತವು ವಿದೇಶಗಳ ಜೊತೆ ನಾನಾ ರೀತಿಯಲ್ಲಿ ಸಂಪರ್ಕವಿಟ್ಟುಕೊಂಡಿದ್ದರೂ ಆಯಾ ದೇಶಗಳ ಸಂಘರ್ಷಣೆಯಿಂದ ಮಾತ್ರ ದೂರ ಉಳಿದಿದೆ. ಘರ್ಷಣೆಯ ಸಮಯದಲ್ಲಿ ಭಾರತವು ತಟಸ್ಥ ನೀತಿಯನ್ನು ಅನುಸರಿಸುತ್ತೆ. ಅಂದರೆ ಭಾರತೀಯರು ಕ್ರಾಂತಿಪ್ರಿಯರಲ್ಲಿ ಶಾಂತಿಪ್ರಿಯರು. ಆದ್ದರಿಂದಲೇ ಭಾರತೀಯ ನೀತಿ ನಿಲುವುಗಳನ್ನು ವಿದೇಶಗಳು ಗೌರವಿಸುತ್ತಿರುವುದು.

ಕೊನೆಯದಾಗಿ

ಇದಿಷ್ಟು ನಮ್ಮ ಪ್ರಜಾರಾಜ್ಯವು ತುಳಿದಿರುವ ಪಥದ ಕತೆಯಾಯಿತು. ನಡೆಯುವವರು ಎಡವುದು ಸಹಜವೆಂಬಂತೆ ಹಲವಾರು ವೇಳೆ ನಮ್ಮ ಕಾಂಗ್ರೆಸ್ ಸರ್ಕಾರ ತಪ್ಪು ಮಾಡಿರಬಹುದು. ಅಂದ ಮಾತ್ರಕ್ಕೆ ಕೆಲವು "ಗತವೈಭವದೋಣಿ"ಗಳು ಹೇಳೋ ಹಾಗೆ ಇಂಗ್ಲೀಷರ ಆಳ್ವಿಕೆಯಲ್ಲಿ ಶಿಸ್ತಿತ್ತು—ಬಿಗಿ ಇತ್ತು. ಈ ಸರ್ಕಾರದಲ್ಲಿ ಸಾರವಿಲ್ಲ ಎನ್ನುವುದು ಎಷ್ಟು ಮಾತ್ರಕ್ಕೂ ಸರಿಯಲ್ಲ. ಮೇಲೆ ವಿವರಿಸಿರುವ ಸಮಸ್ಯೆಗಳು ಎದಿರು ಬಿದ್ದಿರುವಾಗ ಯಾವ ಸಂಸ್ಥೆಯ ಸರ್ಕಾರ ಬಂದಿದ್ದರೂ ಈಗ ಹಾಲಿ ಇರುವ ಸರ್ಕಾರ ಸಾಧಿಸಿರುವುದಕ್ಕಿಂತಾ ಹೆಚ್ಚಾಗಿ ಸಾಧಿಸಲು ಸಾಧ್ಯವಾಗುತ್ತಿರಲಿಲ್ಲ. ಆದರೆ ತಪ್ಪಿದಾಗ ಬುದ್ಧಿ ಹೇಳಲು ಅಡ್ಡದಾರಿ ಹಿಡಿದಾಗ ರಾಜಮಾರ್ಗ ದರ್ಶನ ಮಾಡಲು ಒಬ್ಬರಿರಬೇಕು. ಈಗ ಭಾರತದಲ್ಲಿ ಕಾಂಗ್ರೆಸ್ ಸಂಸ್ಥೆಯ ಜೊತೆಗೆ, ಅನೇಕ ವಿರೋಧ ಸಂಸ್ಥೆಗಳಿವೆ. ಯಾದರೂ ಅವರಲ್ಲಿ ಪರಸ್ಪರ ಒಗ್ಗಟ್ಟಿರದೆ ಭಿನ್ನಾಭಿಪ್ರಾಯವಿದ್ದು ವಿರೋಧ ಶಕ್ತಿ ಹಂಚಿ ಹೋಗಿದೆ. ಆದ್ದರಿಂದಲೇ ವಿರೋಧ ಶಕ್ತಿಯಲ್ಲಿ ಬಲಕಮ್ಮಿಯಾಗಿ ಕೆಲವಾರು ವೇಳೆ ಕಾಂಗ್ರೆಸ್ ಸರ್ಕಾರ "ಬಿಳಿಯಾನೆ"ಯ ನೀತಿಯನ್ನು ಅನುಸರಿಸಿರಬಹುದು. ಆದ್ದರಿಂದ ಅನ್ಯ ದೇಶಗಳಲ್ಲಿರುವಂತೆ ನಮ್ಮ ದೇಶದಲ್ಲೂ ಆಳುವ ಸರ್ಕಾರಕ್ಕೆ ವಿರೋಧವಾದ ಏಕೈಕ ಬಲವಾದ ಪಕ್ಷವೊಂದೇ ಸಿಟ್ಟರೆ ಆನೆಗೆ ಅಂಕುಶವಿದ್ದಂತೆ ಸರ್ಕಾರ ಎಚ್ಚೆತ್ತು ನಡೆಯಲು ಸಾಧ್ಯವಾಗುತ್ತೆ. ಇದಿಷ್ಟು ನಮ್ಮ ಭಾರತವು ತುಳಿದಿರುವ ಮೈಲಿಗಲ್ಲುಗಳುತ್ತ ಹಿಂತಿರುಗಿ ನೋಡಿದಾಗ ಕಾಣುವ ನೋಟ. ಆ ನೋಟದ ಅಂದಾಜಿನ ಮೇಲೆ ಭಾರತದ ಭವಿಷ್ಯವನ್ನು ಹೇಳುವುದಾದರೆ ನಮ್ಮ ಪ್ರಜಾಸತ್ತೆಯ ಪಥ ಪ್ರಗತಿಯತ್ತ ಸಾಗಿದೆ ಎಂದು ನಿಸ್ಸಂಕೋಚವಾಗಿ ಹೇಳಿಬಹುದು.

ಮೂವತ್ತೈದು ವರ್ಷಕ್ಕೂ ಮಿಕ್ಕಿದ ಅನುಭವದಿಂದ ದಕ್ಷಿಣ ಕನ್ನಡ ಜಿಲ್ಲೆಯಲ್ಲೆಲ್ಲಾ ಪ್ರಸಿದ್ಧಿ ಪಡೆದಿರುವ

CITY BAKERY

ಸಿಟಿ ಬೇಕರಿ

ಇವರ

ಉಡುಪಿ ಶಾಖೆಯನ್ನು ಸಂದರ್ಶಿಸಿರಿ.

ಪ್ರಧಾನ ಕಚೇರಿ:
ಹೂ ಮಾರ್ಕೆಟ ರಸ್ತೆ
Phone: 897

ಶಾಖೆ:
ಸಿಂಡಿಕೇಟ್ ಬಿಲ್ಡಿಂಗ್ಸ್
Phone: 941

ಮಂಗಳೂರು

ಮಹಿಳಾ ಮಣಿ

(೭ನೇ ಪುಟದಿಂದ)

ಹೆಂಗಸು— (ಅಬೋಧವಾಗಿ) ಊಹೂಂ. ನಮಗೇನು ಕೋರ್ಟು ಕಚೇರಿಯಲ್ಲಿ ಕೆಲಸ?

ಲೀಲಾ—(ನಿರಾಶೆಯಿಂದ) ಹೋ—! ಹಾಗಾದರೆ ನಿಮ್ಮವರು ಲಾಯರಿ ನೋಡುವುದೂ ಇಲ್ಲ?

ಕುಶಾಲು—ನನ್ನ ಪರಿಚಯ ನಿಮಗಿರಬಹುದು. ನಾನು ಈ ವಾರ್ಡಿನ ಮೆಂಬರಳು.

ಹೆಂಗಸು—(ಉಸಿರು ಬಿಟ್ಟು) ನೋಡಿ—ನಾವು ಇಲ್ಲಿಗೆ ಹೊಸತಾಗಿ ಬಂದವರು. ಏನೋ ಸ್ವಲ್ಪ ಜಮೀನು—ಆಳುಕಾಳು—

ವಿಶಾಲ—(ಸಂತೋಷದಿಂದ) ಹೋ ಹಾಗೋ! ಹಾಗಾದರೆ ನೀವು ಜಮೀನ್ದಾರರ ಮನೆಯವರು. ಬಹಳ ಚಲೋದಾಯಿತು!

ಹೆಂಗಸು—ಏನು ಅಂತಹ ಚಲೋ ಸಂಗತಿ?

ಲೀಲಾ—ಏನಿಲ್ಲ—ನೋಡಿ! ಈಗ ನಿಮ್ಮ ಹೆಸರು?

ಹೆಂಗಸು—ಸಾಕಮ್ಮಾಂತ—

ಕುಶಾಲು—ಸಾಕಮ್ಮಾಂತ? ಚಲೋ ಹೆಸರು. ಏನೋ ಮಡಿಕೇರಿ ಕಡೆಯವರಾಗಿ ಕಾಣುತ್ತದೆ. ಪ್ರಾಯಶಃ ತುಂಬಾ ಜಮೀನು ಪ್ಲಾಂಟೇಶನು ಎಲ್ಲ ಇರಬೇಕು.

ಲೀಲಾ—ನಮಗೂ ಅದೇ ಬೇಕಿತ್ತು!

ಸಾಕಮ್ಮ— (ಆಶ್ಚರ್ಯದಿಂದ) ಏಕೆ ಬೇಕಿತ್ತು?

ಲೀಲಾ—ಮತ್ತೇನಿಲ್ಲ. ಈಗ ನೋಡಿ ನಮ್ಮ ಕಾಂಗ್ರೆಸ್ಸು ಸರಕಾರದವರು—

ಸಾಕಮ್ಮ—(ಬೇಸರದಿಂದ) ಹೋಗಲಿ ಬಿಡಿ. ಆ ಸರಕಾರದ ಸುದ್ದಿಯೇಕೆ?

ವಿಶಾಲಾ—ಹೋ—ನಿಮಗೆ ಪ್ಲಾಂಟರ್ಸಿಗೆಲ್ಲ ಕಾಂಗ್ರೆಸ್ಸು ಎಂದರೆ ಸ್ವಲ್ಪ ಬೇಸರವಿರಬಹುದು. ಹೋಗಲಿ — ಅದಕ್ಕೆ ನಾನು ಸ್ವತಂತ್ರ ಪಾರ್ಟಿ!

ಸಾಕಮ್ಮ—ಯಾವ ಪಾರ್ಟಿಯಾದರೇನು? ನಮ್ಮ ಮಾತು ಕೆಲಸ ನಾನೇ ಮಾಡಬೇಕಲ್ಲ?

ಕುಶಾಲಮ್ಮ—ಹಾಗೇನಿಲ್ಲ ಸಾಕಮ್ಮನವರೆ! ಕೆಲಸ ನಾವೇ ಮಾಡಬೇಕು ಸತ್ಯ. ಅದಕ್ಕೇ ನಾನು ಇತ್ತೀಚೆಗೆ ಕಾಂಗ್ರೆಸ್ಸು ಬಿಟ್ಟು ಪಿ. ಎಸ್. ಪಿ ಗೆ ಬಂದಿದ್ದೇನೆ. ಎಲ್ಲರೂ ಕೆಲಸಗಾರರು—ಎರಡೇ ವರ್ಗ!

ಸಾಕಮ್ಮ—ಯಾವ ವರ್ಗವೇ ಇರಲಿ. ಈಗ ಈ ನೀವು ಕಾಂಗ್ರೆಸ್ಸು—ಸ್ವತಂತ್ರ—ಪಿ. ಎಸ್. ಪಿ—ಕ್ರಿಮಿನಲ್ಸಿಗಳು ಒಂದಾಗಿ ಹೀಗೆ ಭೂಲೋಕ ಸಂಚಾರಕ್ಕೆ ಈ ಬೆಳಗ್ಗೆ ಮುಂಚೆ ಬರಲು ಕಾರಣ ಹೇಳಿದ್ದರೆ ಒಳ್ಳೇದಿತ್ತು!

ಲೀಲಾ—ಏನು ಮಾಡುವುದು ನೋಡಿ? ನಾನು ಹೊರಲು ಚಿಕ್ಕಮಗಳೂರು ಕಡೆಯಿದ್ದೆ. ಅಲ್ಲಿಯೂ ಈ ಗ್ರಹಚಾರ ತಪ್ಪಲಿಲ್ಲ. ಇಲ್ಲಿಯೂ ತಪ್ಪಿದ್ದಲ್ಲ!

ವಿಶಾಲ—ಇವರು ನೋಡಿ—ದೊಡ್ಡ ಸಮಾಜ ಕಾರ್ಯಕರ್ತರು. ಇವರು ಬಂದ ಮೇಲೆ ನಮ್ಮೂರಿಗೊಂದು ಮಹಿಳಾ ಸಮಾಜ ಬೇಕೂಂತ ಹಂಬಲ ಮಾಡಿ ಮಾಡಿ ಈಗ ಒಂದು ಸಂಘ ತೊಡಗಿದ್ದೇನೆ. ಅದಕ್ಕೆಲ್ಲಾ ನಿಮ್ಮಂತವರ ಸಹಾನುಭೂತಿ— ಸಹಾಯ ಬೇಕುತಾನೆ?

ಸಾಕಮ್ಮ— ನೀವು ಮಾಡುವುದೇನೋ ಚಲೋದೆ!

ವಿಶಾಲ – (ಸಂತೋಷದಿಂದ) ಅದೇ ನೋಡಿ —ನೀವು ತಿಳುವಳಿಕೆಯಿದ್ದವರಾದ್ದರಿಂದ ಒಪ್ಪಿಬಿಟ್ಟೆರಿ. ಬೇರೆಯವರಿಗೆ ತಿಳಿಯ ಹೇಳಲಿಕ್ಕೆ ಮೂರು ದಿನ ಬೇಕಾಗುತ್ತದೆ. ಆದರೂ ಅವರಿಗೆ ಅರ್ಥವಾಗೋದಿಲ್ಲ!

ಸಾಕಮ್ಮ— (ತಲೆದೂಗಿ) ಹೌದು ಅಮ್ಮನವರೆ! ಪಾಪ—ಹೇಗೆ ಅರ್ಥವಾಗಬೇಕು? ಅವರವರ ಮನೆ ಬಾಗಿಲು ಸಂಸಾರ ಇದರ ಕೆಲಸದಲ್ಲೆ ಅವರವರು ಮುಳುಗಿ ಹೋಗಿರುವಾಗ ನಿಮ್ಮ ಸಮಾಜ—ಸೇವೆ ಎಲ್ಲಾ ಸುಟ್ಟು ಹೋಗಲಿ ಎಂತ ಕಾಣುವುದು ಸಹಜವೇ. ಇದೆಲ್ಲಾ ಯಾರಿಗೆ ಬೇಕಾಗಿದೆ?

ಲೀಲಾ—ಹಾಗೆಂದರೇನಮ್ಮ?

ಸಾಕಮ್ಮ— ನೀವೆಲ್ಲಾ ಆಫೀಸರರ ಹೆಂಡಂದಿರು. ದುಡಿಯಲಿಕ್ಕೆ ಜವಾನ ಇದ್ದರೆ ನಿಮಗೇನು ತಾಪತ್ರಯ? ಅಡ್ಡಾಡಲಿಕ್ಕೆ ಬೇಕಾದಷ್ಟು ಸಮಯವಿರುತ್ತದೆ. ಗಂಡಂದಿರು ಆಫೀಸಿಗೆ ಹೋಗುವುದೇ ನಿರೀಕ್ಷೆ!

ವಿಶಾಲ—ಅಯ್ಯೊ—ಹಾಗಲ್ಲ! ನಾವೇನೂ ನಮ್ಮ ಸುಖಕ್ಕಾಗಿ ಅಡ್ಡಾಡೋದಿಲ್ಲ. ನಮ್ಮ ಬಂಧು ಭಗಿನಿಯರ ಉದ್ಧಾರಕ್ಕಾಗಿ ಹೀಗೆಲ್ಲಾ ಕಷ್ಟಪಡುತ್ತೇವೆ,

ಲೀಲಾ—ಅಲ್ಲದೆ ತುಂಬಾ ತಾಪತ್ರಯದ ನಮ್ಮ ಭಗಿನಿಯರೆಲ್ಲ ಒಂದು ಕ್ಷಣವಾದರೂ ನಮ್ಮ ಸಮಾಜಕ್ಕೆ ಬಂದು ಆರಾಮವಾಗಿ ಕೂತು ರೇಡಿಯೋ—(ಸುತ್ತಲೂ ನೋಡಿ) ನಿಮ್ಮಲ್ಲಿ ರೇಡಿಯೋ ಇಲ್ಲವೇನು? ನೋಡಿ—ನಿಮಗೂ ಇದು ಒಳ್ಳೇ ಸಂದರ್ಭ! —

ಸಾಕಮ್ಮ—ನಮ್ಮ ರೇಡಿಯೋ? ನೀವು ಈ ತನಕ ಕೇಳಲಿಲ್ಲವೇನು? ಒಮ್ಮೆ ಕಂಡೆ ಜೀವಿಟದರೆ ನಿಲ್ಲಬೇಕಾದರೆ ಕಿವಿ ಹಿಂಡುವ ತನಕ ಅದೇ ದೊಡ್ಡ ಪ್ರೋಗ್ರೇಮ್! ನೀವೇ ನೋಡಿ (ಒಳಗಡೆ ತಿರುಗಿ ಕರೆಯುವಳು) ಮೂಣೇ—ಅಶ್ವತ್ಥ!

(ಲೀಲಾ—ವಿಶಾಲ – ಕುಶಾಲ ಮೂವರು ಮುಖ ಮುಖ ನೋಡುವರು. ಆಗ ಹತ್ತು ವರ್ಷದ ಅಶ್ವತ್ಥ ಬರುವನು)

ಸಾಕಮ್ಮ—ನೋಡು ಅಶ್ವತ್ಥ—ನಮ್ಮ ರೇಡಿಯೋ ಪ್ರೋಗ್ರೇಮ್ ಇವರಿಗೆ ಸ್ವಲ್ಪ ತೋರಿಸಿ ಬಿಡು.

(ಹುಡುಗ ಅಲ್ಲಿ ಮೇಜಿನ ಮೇಲೆ ಕೂತು ಕಿವಿ ಹಿಂಡಿಕೊಂಡು ತೊಡಗುವನು)

ಇದು ಆಕಾಶವಾಣಿ ಧಾರವಾಡ—ಕ್ಷಮಿಸಬೇಕು ಬೆಂಗಳೂರು, ಈ ಶಾಲಾ ಹುಡುಗರಿಗಾಗಿ—ಅಲ್ಲ ಕ್ಷಮಿಸಬೇಕು ಚಿಕ್ಕ ಮಕ್ಕಳಿಗಾಗಿ ಕನ್ನಡ ಗೀತೆಗಳು. ಹಾಡುತ್ತಿರುವವರು ಮಾಸ್ಟರ್ ಅಶ್ವತ್ಥ—

ನಾಗರಹಾವೇ ಹಾವೊಳು ಹೂವೇ
ಬಾಗಲ ಬಳಿಯಲಿ ನಿನ್ನಯ ತಾವೇ
ಕೈಗಳ ಮುಗಿವೆ ಹಾಲನ್ನಿವೆ
ಬಾ—ಬಾ—ಬಾಬಾಬಾ!

(ಇನ್ನು ಗಟ್ಟಿಯಾಗಿ ಮತ್ತೊಮ್ಮೆ ಬಲ ಕಿವಿ ಹಿಂಡಿ)

ಎಲೆ ನಾಗಣ್ಣ ಹೇಳೆಲೊ ನಿನ್ನ
ತಲೆಯಲಿ ರತ್ನ ವಿಹುದು ನಿಜವಣ್ಣ

ಲೀಲಾ—ಸಾಕಮ್ಮ—ಸಾಕಮ್ಮ! ನಿಮ್ಮದು ಬಹಳ ಚಲೋ ರೇಡಿಯೊ! ನಮ್ಮ ರೇಡಿಯೋ ಇಷ್ಟು ಒಳ್ಳೇದಿಲ್ಲ!

ವಿಶಾಲ— (ಹುರುಪಿನಿಂದ) ಆದರೆ ನೋಡಿ—ನಮ್ಮ ಸಂಘದಲ್ಲಿ ಹೆಣ್ಣು ಹುಡುಗಿಯರಿಗಾಗಿ ಸಂಗೀತ ಸಾಕ ತೊಡಗಿದ್ದೇವೆ. ಆದರ ಉಪಯೋಗ ನೀವೂ ಪಡೆಯಬಹುದು.

ಸಾಕಮ್ಮ— ಛೆ! ಸಂಗೀತವೆಂದರೆ ನಮ್ಮದೇ ಮಠ! ನಮ್ಮ ಅಪ್ಪಚ್ಚಿ—ಅಮ್ಮಚ್ಚಿ ಹಾರ್ಮನಿ ಪಿಟೀಲು ಕೇಳಿದರೆ ನೀವು ಮತ್ತೆ (ಒಳಗೆ ನೋಡಿ) ಅಪ್ಪಚ್ಚಿ—ಅಮ್ಮಚ್ಚಿ—(ಒಬ್ಬ ಹುಡುಗ ಒಬ್ಬಳು ಹುಡುಗಿ ಜೊರ ಬರುವರು) ನೋಡಿ ಮಕ್ಕಳೆ—ನಿಮ್ಮ ಹಾರ್ಮೊನಿಪಿಟೀಲು:—ವ್ಯವದಂಗ ಸ್ವಲ್ಪ ತೇಗೀರಿ. (ಮಕ್ಕಳು ಉತ್ಸಾಹದಿಂದ ನೆಲದ ಮೇಲೆ ಕೂತು—ಹುಡುಗ ಹೊಟ್ಟೆಯನ್ನು ತಿದಿ ಒತ್ತಿಕೊಂಡು ಬೇ ಎನ್ನುವನು. ಹುಡುಗಿ ಆ ಕಡೆ ಈ ಕಡೆ ಕಿವಿ ಹಿಂಡಿಕೊಂಡು ಟುಯ್ ಟುಯ್ ಎನ್ನುವಳು. ಅಶ್ವತ್ಥ ಕುಂಡಿ ಗುದ್ದಿಕೊಳ್ಳುವನು.)

ಲೀಲಾ—(ಗಾಬರಿಯಿಂದ) ಹೋ—ಇದರಲ್ಲೂ ನಾವೇ ಸೋತೆ ಹೋದೆವು. ನಮ್ಮ ಸಂಗೀತ ಇದರ ಮುಂದೆ ಕೇಳಿಸಲಿಕ್ಕೇಯಿಲ್ಲ. ಸಾಕು ಬಿಡಿ.

ಕುಶಾಲಾ—(ಉತ್ಸಾಹದಿಂದ) ಈಗ ನೋಡಿ. ಮತ್ತೊಂದು ಸಂಗತಿ ಸಾಕಮ್ಮನವರೆ! ನಮ್ಮಲ್ಲಿ ಕಸೂತಿ ಹೊಲಿಗೆ ಇವೆಲ್ಲ ಬಹಳ ಚಲೋದಿವೆ. ನೀವು ಬಂದರೆ ಸಾಕು—ಮತ್ತೆ ಅಲ್ಲಿಂದ ಏಳುವ ಹಾಗಿಲ್ಲ.

ಸಾಕಮ್ಮ — ನಮ್ಮದೇನು ಕಸೂತಿ ಕಡಿಮೆ ಎಂತ ತಿಳಿದಿದ್ದೀರಿ? (ಒಳಗೆ ನೋಡಿ) ದ್ರೋಣಾ—ನಮ್ಮ ಕಸೂತಿ ಎಲ್ಲ ಹೊರಗೆ ತಾರಪ್ಪ.

(ದ್ರೋಣ ಒಳಗಡೆಯಿಂದ ಅರ್ಧ ಹೊಲಿದ ಹೊಲಿಯದಿರುವ ಹರಕು ಲಂಗ ಚಡ್ಡಿ ವಗೈರೆಗಳನ್ನು ತಂದು ರಾಶಿ ಹಾಕುವನು.)

ಈಗ ನೋಡಿ ಅಮ್ಮನವರೆ! ಇದೆಲ್ಲ ನಮ್ಮದೇ ಕಸೂತಿ! ಇದರ ಮುಂದೆ ಯಾರ ಕಸೂತಿ ನಿಂತೀತು ಹೇಳಿರಿ!

ಲೀಲಾ—ಇಲ್ಲ ಇಲ್ಲ— ಯಾರದ್ದೂ ನಿಲ್ಲಲಾರದು! ಇಂತಹ ಹರಕು ವಿಲವಾರಿ ನಮ್ಮಲ್ಲಿ ಇಲ್ಲವೇ ಇಲ್ಲ!

ವಿಶಾಲ—(ಸ್ವಲ್ಪ ಯೋಚಿಸಿ ಮತ್ತೆ ಸಂತೋಷದಿಂದ) ಅದೆಲ್ಲ ಸಾಯಲಿ. ಮತ್ತೊಂದು ವಿಚಾರ ಕೇಳಿ. ನಮ್ಮಲ್ಲಿ ವಾರಕ್ಕೊಮ್ಮೆ ಭಜನೆ ವಾಚನ—ಇವುಗಳಾದರೂ ನಿಮ್ಮ ಮನಸ್ಸಿಗೆ ಬಂದೀತು!

ಸಾಕಮ್ಮ—ಅಯ್ಯೊ ದೇವರೆ! ಭಜನೆಗೇನು ನಮ್ಮಲ್ಲಿ ಕಡಿಮೆ ನಮ್ಮಲ್ಲಿ ನಿತ್ಯವೂ ಮಹಾ ಭಾರತ ರಾಮಾಯಣ ನಡೀತಾಯಿದೆ. ಏಕೆ? ನೀವೇನೋಡಿ! (ಒಳಗೆ ಮುಖವಾಡಿ) ಓ ಹನುಮಂತ!

(ಹನುಮಂತ—ಒಳಗಿನಿಂದ ಭಜನೆ ಮಾಡುತ್ತಲೇ ಬರುವನು)

ರಘುಪತಿ ರಾಘವ ರಾಜಾರಾಂ
ಪತಿತ ಪಾವನ ಸೀತಾರಾಂ—

(೨೩ನೇ ಪುಟ ನೋಡಿರಿ)

HELP TO BUILD
INDIA'S ECONOMY
BY BUYING
HANDLOOM GOODS.
INSERTED BY:
CHANDARANA BROTHERS,
(ESTD: 1935)
MANGALORE.

ಈಶ್ವರ ಅಲ್ಲಾ ತೇರೇನಾಂ
ರಘುಪತಿ ರಾಘವ ರಾಜಾ ರಾಂ—

ಲೀಲಾ— ವಿಶಾಲಾ - (ತಿವಿಗೆ ಕೈ ಹಿಡಿದು) ಓಹೋ ಇದಕ್ಕೆ ಯಾವ ದೇವರೂ ದಮ್ಮಯ್ಯಾಂತ ಪ್ರತ್ಯಕ್ಷವಾಗಲೇಬೇಕು!

(ಎಲ್ಲರೂ ಒಬ್ಬೊಬ್ಬರ ಮುಖ ನೋಡುವರು)

ಕುಶಾಲಾ—(ಏನೋ ನೆನಪು ಬಂದವಳಂತೆ) ಈಗ ನೆನಪಾಯಿತು. ಸಾಕಮ್ಮ ನವರೆ!— ಇವರೆಲ್ಲಾ ನಿಮ್ಮದೇ ಪರಿವಾರ?

ಸಾಕಮ್ಮ—(ಗಂಭೀರವಾಗಿ) ಹೌದು ಕೆಲವು ನನ್ನದು—

ಕುಶಾಲಾ—(ಆಶ್ಚರ್ಯದಿಂದ) ಮತ್ತೆ ಉಳಿದದ್ದು?

ಸಾಕಮ್ಮ—ನಮ್ಮಯಜಮಾನರದ್ದು!

ಕುಶಾಲಾ—ಬಹಳ ದೊಡ್ಡ ಸಂಸಾರವಪ್ಪ. ಇನ್ನೂ ನೀವು ಹೆರುವ ಚಿಹ್ನೆಯೇ ಕಂಡುಬರುತ್ತದೆ—ಪಾಪ!

ಸಾಕಮ್ಮ— ಇದೇನೂ ಪಾಪದ್ದಲ್ಲ. ನನಗೆ ಮದುವೆಯಾಗಿದೆ!

ಕುಶಾಲಾ— ಹಾಗಲ್ಲಮ್ಮ ಹಾಗಲ್ಲ! ಸುಮ್ಮನೆ ಕನಿಕರವಾಗಿ ಹೇಳಿದೆ. ನಮ್ಮ ಸಮಾಜದಲ್ಲಿಯಾದರೆ ಇದರ ವಿಚಾರವಾಗಿಯೇ ತುಂಬಾ ಸಲಹೆ ಕೊಡುತ್ತೇವೆ. ಮಿತಸಂತತಿ ಸಂತಾನ ನಿರೋಧ—ಇದೆಲ್ಲಾ ನಮ್ಮ ದೇಶಕ್ಕೆ ಈಗ ಬಹಳ ಅಗತ್ಯ ನೋಡಿ. ನಮ್ಮ ನೆಹ್ರೂರವರೂ ಹಾಗೆಯೇ ಹೇಳುತ್ತಾರೆ!

ಸಾಕಮ್ಮ ಅದೆಲ್ಲಾ ಹೋಗಲಿ. ನಿಮ್ಮ ನೆಹ್ರೂ ನಂತರ ನಿಮಗೆ ಯಾರು ಹೇಳಿ.

ವಿಶಾಲ—(ಗಾಬರಿಯಿಂದ) ಯಾರಿಂತ ಹೇಳಲಿ? ಯಾರೂ ಇಲ್ಲ!

ಸಾಕಮ್ಮ—ಅದೇ ನಿಮ್ಮ ಗ್ರಹಚಾರ.

ಲೀಲಾ — ಅದೇನು ಬಾತು ಗ್ರಹಚಾರ?

ಸಾಕಮ್ಮ—ಅಲ್ಲವೆ ಮತ್ತೆ? ನಿಮಗೆಲ್ಲಾ ಈ ಯೋಚನೆಯೇ ಒಂದಿಷ್ಟೂ ಇಲ್ಲ. ನಾನಾದರೆ ನೋಡಿ—ನನ್ನ ಈ ಹೊಟ್ಟೆಯ ಮಗುವೇ ನೆಹ್ರೂನೆ ವಾರೀಸ್ದಾರ!

(ಎಲ್ಲರೂ ದಿಗಿಲಿನಿಂದ ಎದ್ದು ನಿಲ್ಲುವರು).

ಸಾಕಮ್ಮ— (ಸಮಾಧಾನವಾಗಿ) ಏನೂ ಗಾಬರಿ ಬೇಡ. ಈ ನೆಹ್ರೂನ ನಂತರ ಸರೋಜಿನಿ ನಾಯ್ಡು—ವಲ್ಲಭ ಬಾಯಿ ಪಟೇಲ— ಹಾಗೆಯೇ ಮುಂದೆ ಪಂಚ ವಾರ್ಷಿಕ ಯೋಜನೆ—ಡಬ್ಬಲ್ ಪಾಂಚ ವಾರ್ಷಿಕ ಯೋಜನೆ—

ಎಲ್ಲರೂ— ಇಷ್ಟಮ್ಮ ನಾವೇ ನೋತು ಹೋದೆವು.

ಲೀಲಾ— ನಮ್ಮ ಸಂಘಕ್ಕೆ ನೀವು ಮೆಂಬರರು ಮಾತ್ರವಲ್ಲ ದಯವಿಟ್ಟು ನೀವೇ ಅಧ್ಯಕ್ಷರಾಗಬೇಕು! ಇದಕ್ಕಾದರೂ ಏನು ಹೇಳುತ್ತೀರಿ?

ಸಾಕಮ್ಮ— ಆಗಬಹುದಿತ್ತು— ಸಂತೋಷ. ಪ್ರಕೃತ ಏನು ತಲುಬು ಕೊಡುತ್ತೀರಿ ಹೇಳಿ? ಯಾವುದಕ್ಕೂ ನೀವೆಲ್ಲ ಬಂದು ಬಹಳ ಹೊತ್ತಾಯಿತು. ಸ್ವಲ್ಪ ಬಾಯಾರಿಕೆಯೂವರೂ ತರುತ್ತೇನೆ.

ಎಲ್ಲರೂ— ಬೆಡ ಬೇಡ— ಸದ್ಯಕ್ಕೆ ನೀವು ನಮ್ಮನ್ನೆಲ್ಲಾ ಇಷ್ಟಕ್ಕೇ ಬಿಟ್ಟರೆ ಸಾಕು!

ಸಾಕಮ್ಮ— ಹಾಗೇನಿಲ್ಲ. ಸ್ವಲ್ಪ ಕೂತಿರಿ. ಮತ್ತೆ ಅಧ್ಯಕ್ಷರ ತಲುಬಿನ ವಿಚಾರ ನಿರ್ಧಾರ ಮಾಡೋಣ. (ಒಳಕ್ಕೆ ಹೋಗುವಳು)

(ಮೂವರೂ ಪರಸ್ಪರ ಮುಖ ಮುಖ ನೋಡುತ್ತ)

ಲೀಲಾ—ಬಹಳ ಒಳ್ಳೇ ಗಿರಾಕಿ ಸಿಕ್ಕಿ ಹೋಯಿತು!

ಕುಶಾಲಾ—ಅದೇ! ನಾನು ಮೊದಲೇ ಹೇಳಿದ್ದೆ ರಾಹುಕಾಲಾಂತ!

ವಿಶಾಲ—ಸತ್ಯ. ಇದೊಂದು ದೊಡ್ಡ ಶನಿಯೇ ಗಂಟುಬಿದ್ದಂತಾಯಿತು. ಇನ್ನು ಇದಕ್ಕೆ ತಲುಬು ನಿರ್ಣಯಿಸುವುದು ಬೇರೆ ಗ್ರಹಚಾರ ಗಂಟುಬಿದ್ದಿದೆ!

ಲೀಲಾ—ಅದಕ್ಕಾಗಿಯೇ ನಮಗೆಲ್ಲಾ ಕಾಫಿ ತರಲಿಕ್ಕೇಂತ ಒಳಗೆ ಹೋಗಿದೆ! ಇನ್ನು ಆ ಕಾಫೀನ ಕುಡಿದರೆ ಮತ್ತೆ ನಾವು ಇಲ್ಲಿಂದ ಪಾರಾಗುವಂತೆಯೇ ಇಲ್ಲ!

ಕುಶಾಲಾ—ಹೌದು. ಈಗಲೇ ನಾವು ಜಾಗ್ರತೆಯಾಗಿ ಕಂಬಿ ಕೀಳುವುದು ಒಳ್ಳೇದು! ನಾವೇ ಮಹಿಳಾ ಸಮಾಜದ ಒಳ್ಳೆ ಬುದ್ಧಿವಂತ ಮಹಿಳೆಯರೂಂತ ಭಾವಿಸಿಕೊಂಡಿದ್ದೆವು. ಈಗ ನೋಡಿದರೆ ಇದು ನಮಗಿಂತಲೂ ಚಲೋ ಮಹಿಳೆ—

ಲೀಲಾ— ಸಾಧಾರಣ ಮಹಿಳೆಯಲ್ಲಪ್ಪ—ಮಹಾಮಾಯಿ!

ವಿಶಾಲ— ಸಾಕೋ ಸಾಕಮ್ಮ— ಸಾಕು! ಹೋಗೋಣ ಹೋಗೋಣ! ಬೇಗ ತೆಂಕೋಣ!

(ಎಲ್ಲರೂ ಬೇಗಬೇಗನೆ ಹೊರಟು ಹೋಗುವರು)

ಸಾಕಮ್ಮ— (ಹೆರಿವಾಣದಲ್ಲಿ ನಾಲ್ಕು ಲೋಟ ಕಾಫಿ ತಂದು ಸುತ್ತಲೂ ನೋಡಿ) ಅಯ್ಯೋ ದೇವರೆ! ಎಲ್ಲಿ ನಮ್ಮ ಗಿರಾಕಿಗಳು? ಹೊಂಟೇ ಹೋದರೆ? ಹಾಗಾದರೆ ನನ್ನ ಸಂಬಳ ಸೊನ್ನೆ! (ಉಸಿರು ಬಿಟ್ಟು) ಬನ್ನಿ ಮಕ್ಕಳೆ! ನಾವೇ ಕಾಫಿ ಕುಡಿಯೋಣ. ಸಂಬಳಕ್ಕೆ ಬೆಂಕಿ ಹಾಕಲಿ! ನಾವು ಈ ಮಹಾರಾಣಿಯವರಿಗೆ ಏನೂ ಕಪ್ಪ ಕಾಣಿಕೆ ಕೊಡದೆ ಪಾರಾದೆವಲ್ಲ— ಸಾಕು—ಇಷ್ಟೇ ಸಾಕು. ನಮ್ಮ ನಸೀಬು!

(ಎಲ್ಲರೂ ಕುಳಿತು ಕಾಫಿ ಕುಡಿಯುವರು)

— ಸರದೆ ಬೀಳುವುದು —

೨—೮—೧೯೬೦.

(೬ನೇ ಪುಟದಿಂದ)

ಪ್ರಜಾಸತ್ತೆಯ ಸಮಸ್ಯೆ

ತೂರಿ ಬಿಟ್ಟರೆ ಮತ್ತೆ ಅಯೂಬಖಾನರನ್ನಾಗಲೀ, ನೇಪಾಳದ ಮಹೇಂದ್ರರನ್ನಾಗಲೀ ಪ್ರಜಾಸತ್ತೆಯ ವಿರೋಧಿಗಳೆಂದು ದೂರಿ ಫಲವಿಲ್ಲ.

ತೋರಿಕೆಗೆ ಏನೋ ಪಂಚಾಯತ್ ರಾಜ್ಯ ಸ್ಥಾಪನೆಯಾಗಿದೆ. ಸರ್ಕಾರಿ ಆಡಳಿತೆ ವಿಕೇಂದ್ರೀಕೃತವಾಗುತ್ತಿದೆ. ಆದರೆ ಮೂಲ ಭೂತವಾಗಿ ಅಧಿಕಾರವು ಸಮಾನವಾಗಿ ಎಲ್ಲೆಡೆಯೂ ಪಸರಿ ಆಳುವವರಿಗೂ ಆಳಲ್ಪಡುವವರಿಗೂ ಭೇದವಿಲ್ಲವೆಂಬುದು ಸ್ಪಷ್ಟವಾಗುವ ವರೆಗೆ ನಮ್ಮ ಪ್ರಜಾರಾಜ್ಯದ ತಳಹದಿ ಭದ್ರವಾಗಿ ನಿಲ್ಲುವುದು ಕಷ್ಟ ಸಾಧ್ಯವೆಂದು ಹೇಳಬೇಕಾಗುತ್ತದೆ.

Greetings from

SRINIVAS BROTHERS

CAR STREET, MANGALORE-1.

***

J. B. A. PRINTING INKS PRIVATE LTD.,

AGRA ROAD, BHANDUP, BOMBAY 78.

Manufacturers of

Finest Qualities of Printing Inks

&

All types of Varnishes.

•

FOR YOUR REQUIREMENTS PLEASE CONTACT

SRINIVAS BROTHERS

POST BOX NO. 130, MANGALORE-1.

Phone: 449 Grams: ACTIVE

ಜಪದ ಗುಟ್ಟು

(೫ನೇ ಪುಟದಿಂದ)

ದು ಸದಿಚ್ಛೆಯ ಪೂರ್ತಿಗಾಗಿ ಹೀಗೆಯೇ ಪ್ರತ್ಯೇಕ ಪುನಶ್ಚರಣ ಮತ್ತು ಅದಕ್ಕೆ ಸಾಧಕವಾದ ಅನ್ನದಾನ ಮೊದಲಾದವುಗಳನ್ನು ಮಾಡಿದರೆ ಖಂಡಿತವಾಗಿಯೂ ಮಾನವನ ಇಚ್ಛೆಗಳು ಕೈಗೂಡಿ ಬರುವುವು.

ನಿಷ್ಕಾಮ ಮಂತ್ರ ಜಪದಲ್ಲಿ ಎರಡು ವಿಧಗಳಿವೆಯೆಂದು ಮಹಾರಾಜರು ಹೇಳುತ್ತಾರೆ. ಒಂದನೆಯ ಕ್ರಮದಲ್ಲಿ ಸಾಧಕನು ಮಂತ್ರದಲ್ಲಿದ್ದ ಅಕ್ಷರಗಳಷ್ಟು ಕೋಟಿ ಜಪ ಮಾಡಬೇಕು. ಆಗ ಮಂತ್ರ ಸಿದ್ಧಿಯಾಗಿ ಸಾಧಕನಿಗೆ ಮಂತ್ರ ದೇವತೆಯು ಪ್ರಸನ್ನವಾಗುವುದು. ಎರಡನೆಯ ಕ್ರಮದಲ್ಲಿ ಮಂತ್ರದಲ್ಲಿ ಎಷ್ಟೇ ಅಕ್ಷರಗಳಿರಲಿ, ಇಷ್ಟೇ ಕೋಟಿ ಜಪವೆಂದು ನಿರ್ಧರಿಸದೆ ಜಪ ಮಾಡುತ್ತಾ ಹೋಗಬೇಕು. ಇದರಿಂದ ಪ್ರತಿಯೊಂದು ಕೋಟಿಗೂ ಜನ್ಮಕುಂಡಲಿಯ ಒಂದೊಂದು ಸ್ಥಾನವು ನಿರ್ಮಲವಾಗುತ್ತಾ ಹೋಗುವುದು. ಒಂಬತ್ತು ಕೋಟಿ ಜಪ ಮುಗಿದೊಡನೆ ಇಷ್ಟ ದೇವತೆಯ ದರ್ಶನವಾಗುವುದು. ಹನ್ನೆರಡು ಕೋಟಿ ಜಪದಿಂದ ಸಾಧಕನು ಗುರುವಿನ ಅನುಗ್ರಹ ಪಡೆದು ಮಹಾಪುರುಷನಾಗುವನು. ಈ ನಿಷ್ಕಾಮ ಜಪಕ್ಕೆ ಮಣಿವೈಲಿಗೆಗಳ ತಂಟೆತಕರಾರುಗಳಿಲ್ಲ. ಶ್ರೀ ಸಮರ್ಥರಾಮದಾಸರು ತ್ರಯೋದಶಾಕ್ಷರಿ ಮಂತ್ರವನ್ನು ಹದಿಮೂರು ಕೋಟಿವಾರಿ ಜಪಿಸಿದುದರಿಂದಲೇ ಮಹಾಪುರುಷರಾಗಿದರು.

ಪ್ರತಿಯೊಂದು ಕೋಟಿ ಜಪದಿಂದ ಕುಂಡಲಿಯೊಳಗಿನ ಒಂದೊಂದು ಸ್ಥಾನವು ಶುದ್ಧವಾಗುತ್ತಾ ಬಂದು ಹನ್ನೆರಡು ಕೋಟಿ ಜಪದಿಂದ ಹನ್ನೆರಡು ಸ್ಥಾನಗಳು ಶುದ್ಧವಾಗುತ್ತವೆಂದು ಹಿಂದೆಯೇ ಹೇಳಿದೆ. ೧ ತನು, ೨ ಧನ, ೩ ಸಂಕ್ರಮ, ೪ ಸುಹೃತ್, ೫ ಪುತ್ರ, ೬ ಶತ್ರು, ೭ ಜಾಯಾ, ೮ ಮೃತ್ಯು, ೯ ಧರ್ಮ, ೧೦ ಕರ್ಮ, ೧೧ ಲಾಭ, ೧೨ ವ್ಯಯ:—ಈ ಹನ್ನೆರಡು ಸ್ಥಾನಗಳ ಪಾವಿತ್ರ್ಯವೇ ದೇವ ಮಾನಸ್ಪ ಸಂಪಾದನೆಯ ಹೆದ್ದಾರಿಯೆಂದು ಮಹಾರಾಜರು ಹೇಳಿದ್ದಾರೆ.

೧ ತನುಸ್ಥಾನ— ಇದು ಒಂದು ಕೋಟಿ ಜಪದಿಂದ ಶುದ್ಧವಾಗಿ ದೇಹ ಮನಸ್ಸಿನಲ್ಲಿ ಸತ್ವಗುಣ ವೃದ್ಧಿಯಾಗುವುದು. ಸುಂದರ ಆರೋಗ್ಯ, ವಿಪುಲ ತೇಜಸ್ಸು ಪ್ರಾಪ್ತವಾಗುವುದು. ಹಗಲು ಕನಸುಗಳೆಲ್ಲಾ ನಾಶವಾಗುವುವು. ಸ್ವಪ್ನ ಶೀರಾ ಕಡಿಮೆ ಬಿದ್ದು, ಕಾಣಿಸಿದರೂ ಅವರಲ್ಲಿ ದೇವತೆಗಳ ಮತ್ತು ಸಾಧುಸಂತರ ದರ್ಶನವಾಗುವುದು.

೨ ಧನಸ್ಥಾನ—ಇದನ್ನು ಕುಟುಂಬ ಸ್ಥಾನವೆನ್ನುತ್ತಾರೆ. ಇದು ಎರಡು ಕೋಟಿ ಜಪದಿಂದ ಶುದ್ಧವಾಗಿ, ಧನ ದೊರೆತು ಸಾಲವಿದ್ದರೆ ಪರಿಹಾರವಾಗುವುದು. ಆಗ ಕುಟುಂಬದವರು ದೇಶಾಂತರಗತರಾಗಿದ್ದರೆ ಅವರ ಆಗಮನವಾಗಿ ಸುಖಿಯಾಗುವನು.

೩ ಪರಾಕ್ರಮ ಸ್ಥಾನ — ಇದಕ್ಕೆ ಭ್ರಾತೃ ಸ್ಥಾನ ಅಥವಾ ಸಹಜ ಸ್ಥಾನ ಎನ್ನುತ್ತಾರೆ. ಇದು ಮೂರನೆಯ ಕೋಟಿ ಜಪದಿಂದ ಶುದ್ಧವಾಗಿ ಆಂದಿನ ವರೆಗೆ ಅಸಾಧ್ಯವಾಗಿದ್ದ ಕಾರ್ಯಗಳೆಲ್ಲಾ ಆಗಸಾಧ್ಯವಾಗಿ ಸಲಕೊಡುತ್ತಾ ಹೋಗುವುವು. ದಾಯಾದ್ಯ ಕಲಹವು ಮುಗಿದು ಸಹೋದರರು ಪರಸ್ಪರ ಪ್ರೇಮದಿಂದ ನಡೆದುಕೊಳ್ಳುವರು.

೪ ಸುಹೃದ ಸ್ಥಾನ—ಇದಕ್ಕೆ ಮಾತೃಸ್ಥಾನ ಅಥವಾ ಸುಖ ಸ್ಥಾನ ಎನ್ನುತ್ತಾರೆ. ಇದು ನಾಲ್ಕನೆಯ ಕೋಟಿ ಜಪದಿಂದ ಶುದ್ಧವಾಗಿ ಮನಸ್ಸಿಗೆ ಏಕಾಗ್ರತೆ ಮತ್ತು ಸ್ಥೈರ್ಯ ಉಂಟಾಗುವುದು. ಇದರಿಂದ ಶರೀರ ಮತ್ತು ಮನಸ್ಸಿಗೆ ಆರೋಗ್ಯವೆಂದರೇನೆಂದು ಗೊತ್ತಾಗುವುದು.

೫ ಪುತ್ರಸ್ಥಾನ—ಇದನ್ನು ವಿದ್ಯಾಸ್ಥಾನ ಎನ್ನುತ್ತಾರೆ. ಇದು ಐದನೆಯ ಕೋಟಿ ಜಪದಿಂದ ಪರಿಶುದ್ಧವಾಗಿ, ಆಂದಿನ ವರೆಗೆ ನಸುಂಸಕನೆನ್ನಿಸಿದ್ದರೆ ಕಾಂತಿಮಂತನಾದ ಸುಪುತ್ರ ವಂತನಾಗುವನು. ಮಗನು ತಂದೆಯೊಡನೆ ವೈರ ಕಟ್ಟಿದ್ದರೆ ಈಗ ಅನುಕೂಲನಾಗುವನು. ನಿದುಳಿಗೆಯೂವ ಕಠಿಣ ವಿಷಯವನ್ನೂ ಗ್ರಹಿಸುವಷ್ಟು ಶಕ್ತಿ ಬರುವುದು.

೬ ಶತ್ರುಸ್ಥಾನ— ಇದಕ್ಕೆ ರೋಗ ಸ್ಥಾನವೆಂಬ ಹೆಸರಿದೆ. ಇದು ಆರನೆಯ ಕೋಟಿ ಜಪದಿಂದ ನಿರ್ಮಲವಾಗಿ, ಮಾನಸಿಕ ಶತ್ರುಗಳಾದ ಕಾಮ ಕ್ರೋಧಾದಿಗಳೂ, ಸದಾ ದ್ವೇಷಿಸುತ್ತಿರುವ ವೈರಿಗಳೂ ಇವನ ಹಿತಚಿಂತಕರಾಗಿ ಪರಿವರ್ತನೆ ಹೊಂದುವರು. ಮೊದಲನೆಯ ಕೋಟಿ ಜಪದಿಂದ ಎಲ್ಲಾ ರೋಗಗಳೂ ಹಿಮ್ಮೊಗವಾಗಿದ್ದರೆ, ಆರನೆಯ ಕೋಟಿ ಜಪದಿಂದ ಅವು ಇಲ್ಲದಂತಾಗುವುವು. ಮಹಾರೋಗಗಳಾದ ಕುಷ್ಠ ಮೊದಲಾದುವುಗಳೂ ಶರೀರವನ್ನು ಬಿಟ್ಟು ಪರಾರಿಯಾಗುವುವು.

೭ ಜಾಯಾ ಸ್ಥಾನ—ಇದು ಏಳನೆಯ ಕೋಟಿ ಜಪದಿಂದ ಶುದ್ಧವಾಗಿ ಅವಿವಾಹಿತರಿಗೆ ಅನುಕೂಲಳಾದ ಪತ್ನಿ ದೊರೆಯುವಳು. ಇಲ್ಲಿಂದ ಚಂಡಿತನದ ಪತ್ನಿಯೂ ಸತೀ ಸಾವಿತ್ರಿಯಾಗುವಳು.

೮ ಮೃತ್ಯುಸ್ಥಾನ— ಇದು ಎಂಟನೆಯ ಕೋಟಿ ಜಪದಿಂದಶುದ್ಧವಾಗಿ ಅಕಾಲ ಮೃತ್ಯುಹೀನನಾಗಿ ಪ್ರಚಂಡನಾಗುತ್ತಾನೆ.

೯ ಧರ್ಮಸ್ಥಾನ—ಇದು ಒಂಬತ್ತನೆಯ ಕೋಟಿ ಜಪದಿಂದ ಶುದ್ಧವಾಗಿ ಸಾಧಕನಿಗೆ ಮಂತ್ರದೇವತೆಯ ಸಾಕ್ಷಾತ್ಕಾರ ವಾಗುವುದು. ಆಗಲೇ ಬ್ರಹ್ಮಾನಂದವೆಂದರೇನೆಂದು ತಿಳಿಯುವುದು.

೧೦ ಕರ್ಮಸ್ಥಾನ — ಇದಕ್ಕೆ ಪಿತೃಸ್ಥಾನವೆನ್ನುತ್ತಾರೆ. ಇದು ಹತ್ತನೆಯ ಕೋಟಿ ಜಪದಿಂದ ಶುದ್ಧಗೊಂಡಿ, ಮುಂದೆ ಅವನಿಂದ ಸ್ವಪ್ನದಲ್ಲೂ ದುಷ್ಕರ್ಮಗಳು ನಡೆಯಲಾರವು. ಸತ್ಕರ್ಮಾಚರಣೆಗಳು ಅವನಿಂದ ತನ್ನಿಂದ ತಾನೇ ಆಗತೊಡಗುವುವು.

೧೨. ಲಾಭಸ್ಥಾನ—ಇದು ಹನ್ನೊಂದನೆಯ ಕೋಟಿ ಜಪದಿಂದ ಶುದ್ಧವಾಗಿ ಮನೆ, ಸಂಪತ್ತು, ಭೂಮಿ ಮೊದಲಾದ ಪ್ರಾಪಂಚಿಕ ವಸ್ತುಗಳ ಲಾಭವಾಗುವುದು ಅಲ್ಲದೆ ಸಂಪೂರ್ಣ ಸಾತ್ವಿಕ ಗುಣಮಂಡಿತನಾಗುವನು.

೧೨ ವ್ಯಯಸ್ಥಾನ--ಇದು ಹನ್ನೆರಡನೆಯ ಕೋಟಿ ಜಪದಿಂದ ಪವಿತ್ರವಾಗಿ ರಾಜಸ, ತಾಮಸ ಗುಣಗಳೆಲ್ಲಾ ಹರಿದು ಹೋಗಿ, ಸ್ವಪ್ನ ಅಥವಾ ಎಚ್ಚರದಲ್ಲಿ ಗುರುವಿನ ಅನುಗ್ರಹವಾಗುವುದು.

ಈ ಪರಿವರ್ತನೆಗಳೆಲ್ಲಾ ಸಾಧಕನಿಗೇ ತಿಳಿಯುತ್ತವೆಂದು ಮಹಾರಾಜರು ಹೇಳುತ್ತಾರೆ.

ಇಂದು ಭಾರತದ ಅಧಿಕ ಜನ ಸಂಖ್ಯೆ ನೀಚಸ್ವಾರ್ಥದಿಂದ ನಾರುತ್ತಿದೆ. ಈ ಜನರ ಮನಸ್ಸಿನ ಕೊಳೆಯ ಬೆಳೆಯನ್ನು ಕಿತ್ತೊಗೆಯಬೇಕಾದರೆ ಅಲ್ಲಲ್ಲಿ ಜಪಾನುಷ್ಠಾನದ ಕುರಿತು ಉಪನ್ಯಾಸವೋ—ಸಂಭಾಷಣೆಯೋ—ನಡೆದು ಎಲ್ಲರ ಮನಸ್ಸನ್ನೂ ಆ ಕಡೆಗೆ ದಿನಕ್ಕೊಂದು ತಾಸಾದರೂ ಹರಿಯುವಂತೆ ಪ್ರಯತ್ನಪಡಬೇಕು. ನಾಮಸ್ಮರಣೆಯ ಸರಳ ಮಾರ್ಗವನ್ನು ಬಿಟ್ಟರೆ ನವವಿಧ ಭಕ್ತಿಗಳಲ್ಲೂ ಇದಕ್ಕಿಂತ ಸೇರಾದ ಹೆದ್ದಾರಿ ಸಿಗಲಾರದು. ರಾಮ, ಕೃಷ್ಣ, ಶಿವ, ಅಲ್ಲಾ, ಕ್ರಿಸ್ತ--ಇವುಗಳ

For your requirements

in

Paper of all kinds & Printers requisits

WEST COAST PAPER & STATIONERS

9, SYNDICATE BANK BUILDINGS,

MANGALORE-1.

ಕುಮಾರಿ ಬಿಲ್ಲೆಗಳು

(Registered)

ಈ ದೇಶೀಯ ತಯಾರಿಕೆಯ ಗುಣಾಂಶವು ವರ್ಷಗಟ್ಟಲೆಯಿಂದ ವಿಖ್ಯಾತವಾಗಿದೆ ಮತ್ತು ಪ್ರಮುಖ ಕೆಮಿಸ್ಟರಿಂದ ಈ ಕೆಳಗಿನ ದರಗಳಲ್ಲಿ ವಿಕ್ರಯಿಸಲ್ಪಡುತ್ತದೆ. ಟ್ಯೂಬಿಗೆ ರೂ. 3=00 (ಸಾದಾ), ರೂ. 5=00(ಸ್ಪೆಶ್ಶಲ್), ರೂ. 8=00 (ಎಕ್ಸ್ಟ್ರಾ ಸ್ಪೆಶ್ಶಲ್).

P. DEVEE & Co. (M. I.) CALCUTTA—40

ಸ್ವಾತಿಸ್ವರು: ಷಾ ಕಂಪೆನಿ, ಮಂಗಳೂರು—1.

ESTD: 1919 VISIT PHONE NO. 374

K.R.K. SHET DIAMOND MART

JEWELLERS & DIAMOND MERCHANTS

Fresh arrivals of latest sports presentation articles

HAMPANKATTA, **MANGALORE, S.K.**

Prop: K. K. R. SHET, [Service of 41 years] Tel. Ad. BLUEYAGAR

ಲ್ಲಿ ಯಾವ ಮಂತ್ರವೇ — ಆಗರಲಿ— ಮನುಷ್ಯನು ಹನ್ನೆರಡು ಕೋಟಿಯಷ್ಟು ಪುನಶ್ಚರಣ ನಡೆಸಿದರೆ ಅವನ ಚಿಂತೆ ದೈವ್ಯಗಳು ತಮ್ಮಿಂದ ತಾವೇ ಮೂಲವಾಗುವುವೆಂದು ಮಹಾರಾಜರು ಹೇಳಿದ್ದಾರೆ. ಇಂಥಾ ಮಹಾಪುರುಷರ ಮಾತನ್ನೂ ತಿರಸ್ಕರಿಸುವ ದಾನವರು ಈ ಪ್ರಪಂಚದಲ್ಲಿರಬಹುದೆ?

ಮಹಾರಾಜರೊಡನೆ ನಿಷ್ಠಾವಂತ ಜಪದ ಮಹತ್ವದ ಕುರಿತು ಬಾಲಕೃಷ್ಣ ರಾಮತರು ಪುನಃ ಪ್ರಸ್ತಾಪಿಸಿತ್ತಿದರು. ಮಹಾರಾಜರು ಪ್ರಾಸಂಚಿಕರ ಹಿತಕ್ಕಾಗಿ ಅಮೃತ ಸಮ ಸುಮಧುರ ವಾಣಿಯಿಂದ ಹೇಳ ತೊಡಗಿದರು.—'ಮನಸ್ಸು ತುಂಟದನ ಅಥವಾ ಹುಚ್ಚು ಹಿಡಿದ ಮಂಗನಂತಿದೆ. ಇದರ ಹಾರಾಟವನ್ನು ನಿಲ್ಲಿಸಬೇಕಾದರೆ ಇದಕ್ಕೆ ಶಿಕ್ಷಾರೂಪದ ಸಂಖ್ಯಾಯುಕ್ತ ಜಪಾನುಷ್ಠಾನದ ಗುದಿಗೆಯನ್ನು ಕೊರಳಿಗೆ ಬಿಗಿಯಬೇಕು. ಆಗ ಮನಸ್ಸು ನೆಲೆನಿಂತು ಸುಪ್ರಸನ್ನವಾಗುವುದು. ಮೊದಮೊದಲು ಸಂಖ್ಯೆಯ ಕಡೆಗೇ ಗಮನ ಕೊಡಬೇಕಾದರೂ ಕೊನೆಕೊನೆಗೆ ನಾಮಜಪದಲ್ಲೇ ವ್ಯಕ್ತಿಯು ತನ್ಮಯನಾಗುವನು. ಇದರಿಂದ ಏಕಾಗ್ರತೆ ಬೆಳೆದು ಸ್ಮರಣ ಶಕ್ತಿಯು ಹೆಚ್ಚುವುದು. ವೇದಾಂತದಲ್ಲಿ ಹೇಳಿದ ಏಳು ಭೂಮಿಕೆಗಳಲ್ಲಿ ಶುಭೇಚ್ಛಾ, ವಿಚಾರಣಾ, ತನುಮಾನಸ, ಸತ್ವಾಪತ್ತಿ, ಅಸಂಸಕ್ತಿಗಳೆಂಬ ಐದು ಭೂಮಿಕೆಗಳನ್ನು ನಾಮ ಜಪದಿಂದಲೇ ಏರಿ ಹೋಗಬಹುದು.

ರಾಮತರು ಗುರುವಿನ ಉಪದೇಶದಿಂದ ಜಪಾನುಷ್ಠಾನದಲ್ಲಿ ತತ್ಪರರಾದರು. ಅವರು ವಿಶ್ರಾಂತಿಯ ವೇಳೆಯಲ್ಲೂ ತಮ್ಮ ಸ್ನೇಹಿತರು ಹರಟೆ ಕೊಚ್ಚುತ್ತಿದ್ದರೆ ಅದನ್ನು ಒಡನೆ ನಿಷೇಧಿಸಿ 'ನಿರರ್ಥಕ ಹರಟೆ ಕೊಚ್ಚಿ ಸಮಯ ಹಾಳುಮಾಡಬೇಡಿ. ಜೀವನವನ್ನು ಸೋಲಿಸ್ತುವ ನಾಮಜಪದಲ್ಲಿ ತತ್ಪರರಾಗಿರಿ' ಎನ್ನುತ್ತಿದ್ದರು. ಇವರ ಉಪದೇಶವನ್ನು ಕೇಳಿ ವಾಮನ ಭೀಮ ರಾವ್ ಎಂಬವರೂ ಅಂದಿನಿಂದ ನಾಮಜಪದಲ್ಲಿ ಆಸಕ್ತರಾದರು. ಇವರು ತಮ್ಮ ಜೀವನದಲ್ಲಿ ಇಪ್ಪತ್ತನಾಲ್ಕು ಕೋಟಿಗಿಂತ ಹೆಚ್ಚು ಜಪಮಾಡಿದ್ದರಂತೆ! ಹನ್ನೆರಡು ಕೋಟಿ ಜಪವಾದೊಡನೆ ಅವರಿಗೆ ನಾಮಜಪದ ಪ್ರಚಾರಮಾಡಬೇಕೆಂದು ಸದ್ಗುರುವಿನ ಆಜ್ಞೆಯಾಯಿತಂತೆ! ವಾಮನರಾಯರ ಉಪದೇಶವನ್ನು ಕೇಳಿದವರಲ್ಲಿ ಎಷ್ಟೋ ಮಂದಿ ತಮ್ಮ ಬದುಕಿನ ಮಾರ್ಗವನ್ನು ತಿದ್ದಿ ಶುದ್ಧಮಾಡಿಕೊಂಡರು. ಇದೂ ಜಪದ ಮಹಿಮೆಯೇ ಸರಿ! ಇಂದು ಹೊಟ್ಟೆಪಾಡಿಗಾಗಿ ಹರಿಕಥಾ ಶ್ರವಣ ಮಾಡಿಸುವ ಎಷ್ಟೋ ಮಂದಿಯ ಮಾತುಗಳನ್ನು ಕೇಳಿದ ಜನರು ಅವಕ್ಕೆಷ್ಟು ಬೆಲೆ ಕೊಡುತ್ತಾರೆ? ವಾಮನರಾಯರ ಉಪದೇಶವನ್ನು ಕೇಳಿದವರೆಲ್ಲಾ—'ನಮಗೆ ನಿಮ್ಮ ಮಾತಿನಂತೆ ನಡೆಯಲು ಯಾವುದೋ ಒಂದು ಅದೃಶ್ಯ ಶಕ್ತಿಯು ಒತ್ತಾಯಿಸುತ್ತಿದೆ!' ಎನ್ನುತ್ತಿದ್ದರು. ರಾಯರು ಕೇವಲ ರಿಜಿಸ್ಟ್ರಿ ಆಫೀಸಿನ ದಸ್ತಾವೇಜುಗಳನ್ನು ಬರೆಯುವ ಒಬ್ಬ ನಿಷ್ಠಾವಂತ ಬ್ರಾಹ್ಮಣರಾಗಿದ್ದರು ಮಾತ್ರ. ಇವರು ವಿದ್ವಾಂಸರಲ್ಲ; ವಾಗ್ಮಿಗಳಲ್ಲ. ಹಾಗಾದರೆ ಅವರಿಗೆ ಜನತೆಯ ಮೇಲೆ ತೀವ್ರ ಪರಿಣಾಮವನ್ನುಂಟುಮಾಡುವಶಕ್ತಿ ಎಲ್ಲಿಂದ ಬಂತು? ನಾಮಜಪದಿಂದ; ನಾಮಜಪದಿಂದ; ನಾಮಜಪದಿಂದ.

ವಾಮನರಾಯರು ಜಪದ ಕಾಲದಲ್ಲಿ ತಮಗಾದ ಅನುಭವಗಳನ್ನೆಲ್ಲಾ ಬರೆದಿಟ್ಟಿದ್ದಾರೆ. ಇದೂ ಮಹಾರಾಜರ ಸೂಚನೆಗೆ ಹೊಂದಿಕೆಯಾಗಿರುವುದರಿಂದ ಪ್ರತ್ಯೇಕಕೊಡಲಿಲ್ಲ. ಇವರಿಗೆಒಂಬತ್ತನೆಯಕೋಟಿ ಜಪ ಮುಗಿದಾಗ ಇಷ್ಟದೇವತೆಯ ಸಾಕ್ಷಾತ್ಕಾರವಾಯಿತು. ಅದನ್ನು ಅವರೇ ಹೀಗೆ ಹೇಳುತ್ತಿದ್ದರು. 'ಒಂದು ದಿನ ನಮ್ಮ ಮನೆಯ ಆಕಳು ಸಂಜೆಯಾದರೂ ಮನೆಗೆ ಬಾರದುದರಿಂದ ನಾನು ಆ ದಿನವನ್ನು ಹುಡುಕುತ್ತಾ ಹೋಗುವಾಗ ಮೂರುತಿಯ ಗುಡಿಯೊಂದು ಸಿಕ್ಕಿತು. ನಾನು ಆ ದೇಗುಲದಲ್ಲಿ ವಜ್ರಾಂಗಬಲಿಯ ಸಂದರ್ಶನ ಮಾಡಿದೊಡನೆ ಮನೆಯ ಆಕಳ ಮರವೆಯಾಗಿ ಮನಸ್ಸೆಲ್ಲಾ ಮಾರುತಿಯಲ್ಲಿ ತನ್ಮಯವಾಯಿತು. ಭಕ್ತಿಯಿಂದ ನನ್ನ ದೇಹವು ರೋಮಾಂಚಗೊಂಡಿತು. ನಾನು ಬಲಭೀಮನ ಮುಂದೆ ಕೈ ಜೋಡಿಸಿಕೊಂಡು ಕಣ್ಣೀರು ಸುರಿಸುತ್ತಾ—'ಅಂಜನೇಯಾ, ನೀನು ರಾಮಭಕ್ತ; ಆ ಪ್ರಭುವಿನ ದರ್ಶನವನ್ನು ಅನವರತವೂ ಮಾಡುತ್ತಿರುವೆ. ನಿನ್ನ ದಾಸಾನುದಾಸನಾದ ನನಗೆ ಇದು ಹೇಗೆ ಸಾಧ್ಯವಾದೀತು?....' ಎನ್ನುವಾಗಲೇ ಕಣ್ಣೀರಿನಿಂದ ಕಣ್ಣುಗಳು ಕುರುಡಾಗಿದ್ದುವು. ಕೊರಳಿನ ನೆರೆಗಳು ಬಿಗಿದು ಬಂದಿದ್ದುವು. ಹೃದಯವು ಭಕ್ತಿಯ ಆವೇಶದಿಂದ ಬಿರಿಯುವಂತಾಯಿತು. ನಾನು ಅಲ್ಲಿಯೇ ಎಚ್ಚರತಪ್ಪಿ ಗೋಡೆಯೊಂದಕ್ಕೆ ಒರಗಿದಾಗ ಕತ್ತಲು ದಟ್ಟಯಿಸಿದ ಆ ಕೋಣೆಯು ಬೆಳಕಾಯಿತು. ಅಲ್ಲಿ ಮೇಘಶ್ಯಾಮನೂ, ಹಸನ್ಮುಖಿಯೂ, ಕಮಲನೇತ್ರನೂ ಆದ ಜಾನಕೀ ಜೀವಿತೇಶನು ನಿಂತಿದ್ದನು. ಅವನನ್ನು ಈ ಎರಡೂ ಕಣ್ಣುಗಳಿಂದಲೂ ಕಂಡೆ. ವಾಮನ ಭೀಮರಾಯರ ಧರ್ಮಾನುಷ್ಠಾನದ ಶುದ್ಧಿಯ ಫಲವಿದು!

ಕರ್ಣಾಟಕದ ಉತ್ತರ ಗಡಿಯಲ್ಲೂ ಮಹಾರಾಷ್ಟ್ರದಲ್ಲೂ ಜಪಾನುಷ್ಠಾನದಲ್ಲಿ ತತ್ಪರರಾದ ಪುಣ್ಯ ಪುರುಷರು ಅಲ್ಲಲ್ಲಿ ಕಾಣಸಿಗುವರು. ಅಲ್ಲಿ ಒಬ್ಬ ಮುಸಲ್ಮಾನ ಸಾಹುಕಾರನು ನಿತ್ಯವೂ ಒಂದು ಲಕ್ಷ ನಾಮಜಪವನ್ನು ಮಾಡುತ್ತಾ ತನ್ನ ಹೋಕೆಯನ್ನು ಕ್ರಮವಾಗಿ ಮಾಡುತಿದ್ದನಂತೆ! ಅದರೆ ಮದ್ರಾಸು ಕರ್ಣಾಟಕದ ಭಾಗಗಳಲ್ಲಿ ಇಂಥ ಮಹಾಸಾಧನೆಯಲ್ಲಿ ತತ್ಪರರಾದವರ ಸಂಖ್ಯೆ ತೀರಾ ವಿರಳವೆಂದರೆ ತಪ್ಪಾಗದು. ಕನ್ನಡಿಗರೇ! ಖಿಲವಾಗುತ್ತಿದ್ದ ಕರ್ಣಾಟಕವನ್ನು ಎತ್ತಿನಿಲ್ಲಿಸಿದ್ದ ವಿದ್ಯಾರಣ್ಯರು ಯಾವ ಶಕ್ತಿಗೆ ಮರೆಹೋಗಿದ್ದರೆಂದು ಒಮ್ಮೆ ಯೋಚನೆ ಮಾಡಿರಿ. ಮಹಾರಾಷ್ಟ್ರರ ಎದೆಯಮೇಲೆಯೇ ಏರಿ ಕುಳಿತು ಮಜಾ ಮಾಡುತ್ತಿದ್ದವ್ಲೋಂಧರನ್ನು ಕುತ್ತಿಗೆ ಹಿಡಿದು ನೂಕಿ ಮಹಾರಾಷ್ಟ್ರವನ್ನು ಸ್ಥಾಪಿಸಲು ಸಮರ್ಥರು ಕೈಗೊಂಡ ಯುಕ್ತಿಯನ್ನೊಮ್ಮೆ ಸ್ಮರಿಸಿಕೊಳ್ಳಿರಿ! ಈ ಕರ್ಣಾಟಕವು—ಏಕೀಕರಣವನ್ನು ಹೊಂದಿದ ಕರ್ಣಾಟಕವು—ಕ್ರಿ. ಶ. ೧೩೦೬ರಲ್ಲಿದ್ದದಕ್ಕಿಂತ ಬಹಳ ಉತ್ತಮ ಸ್ಥಿತಿಯನ್ನು ಹೊಂದಿದೆ ಎನ್ನಲು ಸಾಧ್ಯವೆಂಟೆ? ದೊಡ್ಡ ನಾಡಾಗುವುದು ದೊಡ್ಡ ಹೃದಯದ ಮಾನವರಿಂದ. ಇಂದು ಅದಕ್ಕಾಗಿ ಬಿಸಿರಕ್ತ ತಣಿಯದ ತರುಣರೆಲ್ಲಾ ಜಪಾನುಷ್ಠಾನದಲ್ಲಾ ಸಕ್ತರಾದರೆ, ಅವರ ಬಯಕೆಯೇ ಭಗವದಿಚ್ಛೆಯಾಗಿ, ಇತರ ಪ್ರಾಂತೀಯರೆಲ್ಲಾ 'ಹಾ! ಹಾ!' ಎನ್ನುವುದರೊಳಗೆ ಕರ್ಣಾಟಕದ ಲೈಬಿಟ್ಟು ಸೋದ ಭಾಗಗಳೆಲ್ಲಾ ಅವರ ಬಯಕೆಯಂತೆ ನಾಡಿನೊಂದಿಗೆ ಸೇರಿ ವಿಶಾಲ ಕರ್ಣಾಟಕವು ನಿರ್ಮಾಣವಾಗುವುದು. ಅಂದು ನಮ್ಮ ನಾಡು ಪಂಪನ ಬನವಾಸಿಯೋ ಅಂದಯ್ಯನ ಕನ್ನಡನಾಡೋ ಆಗಿ ರೂಪಗೊಂಡೇ ಗೊಳ್ಳುವುದು. ಮುಖ್ಯವಾಗಿ ವಿಶಾಲ ಕರ್ಣಾಟಕದ ನಿರ್ಮಾಣವು ಇಂದಿನ ನಿಸ್ವಾರ್ಥಿ ತರುಣ ತರುಣಿಯರನ್ನು ಹೊಂದಿಕೊಂಡಿದೆ. ನನ್ನ ಸೋದರ ತರುಣ ಕನ್ನಡಿಗರೇ, ಇಂದಿನವರೆಗೆ ತಿಖಂಡಿಯೊಬ್ಬನೂ ನಮ್ಮಲ್ಲಿ ಅವತರಿಸಿಲ್ಲ. ತಿಖಂಡಿಯ ಜನ್ಮಭೂಮಿ ಆರ್ಯಾವರ್ತವೆಂಬುದನ್ನು ಮರೆತಿರಾ?

ಜಯ ಕರ್ಣಾಟಕ!

ಉಡ್ಪಿ ಡಿ. ಮು. ಕೋರ್ಟನಲ್ಲಿ

O. S. No. 494/1960.

K. ಮಹಾಬಲ ಹೆಗ್ಡೆ —ವಾದಿ.

ಮತ್ತು

ಗೋವಿಂದ ಶೆಟ್ಟಿ ಕೂಡಾ —ಪ್ರತಿವಾದಿ.

ಇನದೊಳಗೆ

—ಉಡ್ಪಿ ತಾಲ್ಲೂ ತೆಂಕನಿಡಿಯೂರು ಗ್ರಾಮ, ಬೆಳ್ಳಂಪಳ್ಳಿಯಲ್ಲಿರುವ ಶೇಷಿ ಶೆಟ್ಟರ ಮಗ 7ನೇ ಪ್ರತಿವಾದಿ ಶ್ಯಾಮರಾಯ ಶೆಟ್ಟಿ ಮತ್ತು ದೊಡ್ಡ ಮನೆ ಅಂಣು ಶೆಟ್ರ ಮಗ 14ನೇ ಪ್ರತಿವಾದಿ ಜಟ್ಟ ಯೂನೆ ಕೊರಗ ಶೆಟ್ರಿಗೆ ಸಹಾ —

ವಾದಿಯು ಮೂಲಗೇಣಿ ಬಾಕಿ ಬಗ್ಗೆ ರೂಸ್ಯಾ 593/62 ಕೇಳಿ ಮಾಡಿದ ವ್ಯಾಜ್ಯವು ತಾ 4-2-61ಕ್ಕೆ ಇಟ್ಟಿರುವುದ್ರಿಂದ ಆದಿನ, ನಿಮ್ಮ ಉದಾಪರಣೆ ಇದ್ದರೆ, ಹಗ್ಲು ಗಂಟೆ 10ಕ್ಕೆ ಈ ಕೋರ್ಟರ ಮುಂದೆ ಹಾಜ್ರಾಗಿ ಜ್ಞಾಪೀರು ಮಾಡಿಕೊಳ್ಳತಕ್ಕದ್ದು. ತಪ್ಪಿದ್ರೆ ನಿಮ್ಮ ಗೈರು ಹಾಜರಿಯಲ್ಲಿ ಸದ್ರಿ ವ್ಯಾಜ್ಯವು ತೀರ್ಮಾನಿಸಲ್ಪಡುವುದು.

B. S. Hegde,
Vakil for Plaintiff.

ಉಡುಪಿ, 10-1-61.

ಕರ್ನಾಟಕ ಸಂಘ(ಉಡುಪಿ)ದ ಮೂರು ಪ್ರಕಟಣೆಗಳು

ಓದಲೇ ಬೇಕಾಗಿರುವ ನವೀನ ಪುಸ್ತಕಗಳು!

೧. ಚಂದ್ರಲೋಕಕ್ಕೆ ಪ್ರಯಾಣ

ಲೇಖಕರು: ಯು. ರಾಘವೇಂದ್ರ ಆಚಾರ್ಯ, ಎಂ. ಎ.

ಆಧುನಿಕ ಪ್ರಪಂಚದ ಮುನ್ನತ್ತರವಾದ ಆಂದೋಲನಗಳು, ಪ್ರಪಂಚವನ್ನೆಲ್ಲಾ ಅಲುಗಾಡಿಸುತ್ತಿರುವ ಆರ್ಥಿಕ, ರಾಜಕೀಯ ಚಳುವಳಿಗಳು, ಅವುಗಳ ಹಿಂದಿರುವ ತತ್ವಗಳು, ಅವುಗಳಿಗೆ ಮಾನವನ ಪ್ರತಿಕ್ರಿಯೆ ಇವನ್ನೆಲ್ಲಾ ಗಮನಿಸಿ ರಚಿಸಿರುವ, ನಮ್ಮಲ್ಲಿ ವಿಚಾರಶಕ್ತಿ ಬೆಳೆಯಲು ನೆರವಾಗುವ ವೈಜ್ಞಾನಿಕ ಗ್ರಂಥ.

೨. ಸಾಮಾನ್ಯ ರೋಗಗಳು

ಲೇಖಕರು: ಡಾ| ಕೆ. ಎಲ್. ಪಾತಾಳ, ಎಂ. ಬಿ. ಬಿ. ಎಸ್.
ಉಡುಪಿ ನಗರ ಸಭಾಧ್ಯಕ್ಷರು.

ಜನರಿಗೆ ತಗಲುವ ಹಲವಾರು ಸಾಮಾನ್ಯ ರೋಗಗಳ ಹುಟ್ಟು, ಕಾರಣ ಮತ್ತು ನಿವಾರಣೋಪಾಯಗಳನ್ನು ಸೂಚಿಸುವ ಅತ್ಯುಪಯುಕ್ತ ಪುಸ್ತಕ.

೩. ಭೌತಿಕ ದರ್ಶನ

ಲೇಖಕರು: ಬಡೆಕ್ಕಿಲ ಕೃಷ್ಣ ಭಟ್ಟ, ಎಲ್‌ಎಲ್.ಬಿ.

ಸಜ್ಜನರ, ವಿದ್ವಜ್ಜನರ, ವಿಜ್ಞಾನಿಗಳ ಅಭಿಮತವನ್ನು ಸಂಗ್ರಹಿಸಿ ಬರೆದ ಭೌತಿಕ ದರ್ಶನದ ಸ್ಥೂಲ ಪರಿಚಯ.

ಪ್ರತಿಯೊಂದು ಪುಸ್ತಕದ ಬೆಲೆ ಬರೇ ಒಂದು ರೂಪಾಯಿ.

ರೂ. ೩=೫೫ನ್ನು ಮನಿಯಾರ್ಡರು ಮಾಡಿದರೆ ಮೂರೂ ಪುಸ್ತಕಗಳನ್ನು ಬುಕ್ ಪೋಸ್ಟ್‌ನಿಂದ ಕಳಿಸಬಹುದು.

ಪುಸ್ತಕ ವ್ಯಾಪಾರಿಗಳಿಗೆ ವಿಶೇಷ ಸವಲತ್ತುಗಳಿವೆ.

ವಿಚಾರಿಸಿರಿ:

ನವಭಾರತ ಪುಸ್ತಕ ಭಂಡಾರ, ಉಡುಪಿ.

ಆಯಿತೇನು?

೧

ಎಲ್ಲಿಯೋ ಮಳೆ ಸುರಿದು
ಸೋತು ಸೊರಗಿದ ಮುಗಿಲು
ಇಲ್ಲಿ ಬಂದೇರಿಹುದು ಬಾನ ತೊಡೆಯ.
ಮೆಲ್ಲನೆಯೆ ಕಾಲಿರಿಸಿ
ಚಳಕುಳಿವ ಕಾಲದಲಿ
ಬಿರು ಬಿಸಿಲು ತಂದಿಹುದು ಬೆವರ
ಮಳೆಯ.

೨

ಏನು ಸೀದೆರೆದರೂ
ಎಷ್ಟೆಂದಿನ ತಾಳಿದರು
ಬೆಳೆಯದಿದೆ ಮರವು ಕಳೆ ತಾಳಿದಿಹುದು.
ಒಂದು ಕಾಲದಿ ತಾನೆ
ತಂದೀವ ಹೊ ಹಣ್ಣು—
ರಾಸಿಯನು ಇಂದೇಕೊ ನೀಡದಿಹುದು.

೩

ಕರೆ ಕರೆವ ದಾರಿಯಲಿ
ನಡೆ ನಡೆದು ದಣಿದಿರುವ
ಪಥಿಕನಿಗೆ ತೋರದಿದೆ ಮುನ್ನಡೆಯು.
ಬಳಗೆ ಬಂದಿಹ ಗುರಿಯು
ಬಹುದೂರ ಸಾರಿದೊಲು
ಮುಂದೆ ಸಾಗಿಯು ಇಹುದು ಹಿನ್ನಡೆಯು.

೪

ಕಾಲ ತಿರುಗಿತೊ ಏನೊ?
ಜೀವ ಜಡವಾಯಿತೇ?
ಪತನವೇ ಜೀವನದಿ ಪ್ರಗತಿಯೇನು?
ಪುಳಯಯೇಷವ ಧರಿಸಿ
ಬರುತಿಹುದೆ ನವಜನನ?
ಯಾರು ಬಲ್ಲರು ಇದನು? ಆಯಿತೇನು?

—ರಸಿಕರಂಗ.

ಬಾಷ್ಪಾಂಜಲಿ

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ "ಪಾಂಗಾಳ ನಾಯಕರ್" ಮನೆತನವು ತನ್ನ ವಿಶಿಷ್ಟ ಕಾರ್ಯಗಳಿಗಾಗಿ ಹೆಸರು ಪಡೆದಿದೆ. ಈ ಮನೆತನಕ್ಕೆ ಸೇರಿದ ಶ್ರೀ ಪಾಂಗಾಳ ಲಕ್ಷ್ಮೀನಾರಾಯಣ ನಾಯಕರು ಇದೇ ತಾ. ೨೦ರ ಮುಂಜಾನೆ ಹೃದಯ ಕ್ರಿಯೆ ಸ್ಥಬ್ದಗೊಂಡುದರಿಂದ ದಿವಂಗತರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತ್ಯು ಮುಖರಾಗುವಾಗ ಇವರ ಪ್ರಾಯ ೫೫.

ದಿವಂಗತ ನಾಯಕರು ಜಿಲ್ಲೆಯ ನಿಷ್ಠಾವಂತ ಕಾಂಗ್ರೆಸ್ ಕಾರ್ಯಕರ್ತರಲ್ಲೊಬ್ಬರು. ರಾಷ್ಟ್ರದ ಸ್ವಾತಂತ್ರ್ಯ ಸಂಗ್ರಾಮಕ್ಕಾಗಿ ನಡೆದ ಚಳವಳಿಯಲ್ಲಿ ಇವರು ಸಕ್ರಿಯವಾಗಿ ಭಾಗವಹಿಸಿದ್ದರು. 'ಭಾರತದಿಂದ ತೊಲಗಿರಿ' ಆಂದೋಲನದ ಸಮಯ ಇವರು ಕಾರಾವಾಸವನ್ನೂ ಅನುಭವಿಸಿದ್ದರು. ದ. ಕ. ಜಿಲ್ಲೆಯ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾಗಿ ಇವರು ದುಡಿದಿದ್ದರು.

ಆಯುರ್ವೇದದಲ್ಲಿ ಆಸಕ್ತಿಯಿದ್ದ ಇವರು ಕಟಪಾಡಿಯ 'ಭುವನೇಂದ್ರ ಸ್ರೋಡಕ್ಟ್ಸ್'ನಲ್ಲಿ ಕೆಲಸಮಾಡಿಕೊಂಡಿದ್ದರು. ಮುಂದೆ ಸ್ವತಂತ್ರವಾಗಿ ಇವರು ಆಯುರ್ವೇದ ವೈದ್ಯವನ್ನೂ ಔಷಧ ತಯಾರಿಯನ್ನೂ ಪ್ರಾರಂಭಿಸಿದರು. ಆಯುರ್ವೇದ ಕ್ಷೇತ್ರದಲ್ಲಿ ಬಹಳಷ್ಟು ದುಡಿದು ಇವರು ಇದರ ಪ್ರಚಾರದಲ್ಲಿಯೂ ತೊಡಗಿದರು. ಉಡುಪಿಯ ಆಯುರ್ವೇದ ಕಾಲೇಜಿನ ಸ್ಥಾಪನೆಯಲ್ಲಿ ಇವರ ಕೈ ನಾಳಷ್ಟು ಪ್ರಭಾವಶಾಲಿಯಾಗಿತ್ತು.

ಸ್ವಯಂ ಕಾರ್ಯಪಟುವೂ ಉದಾರಿಯೂ ಪರೋಪಕಾರಿಯೂ ಆದ ನಾಯಕರು ಜನಪ್ರೀತರಾಗಿದ್ದರು. ದಿವಂಗತರ ಕುಟುಂಬಿಕರ ಹಾಗೂ ಹಿತೈಷಿಗಳ ದುಃಖದೊಡನೆ ನಾವೂ ಸಹಭಾಗಿಗಳಾಗಿ ಮೃತರ ಆತ್ಮಕ್ಕೆ ಶಾಂತಿ ಲಭಿಸುವುದೆಂದು ಹಾರೈಸುತ್ತೇವೆ.

ಉಡುಪಿ ಡಿ. ಮು. ಕೋರ್ಟಿನಲ್ಲಿ
S C. 580/1960

ದೇವರಾಜ ಬಲ್ಲಾಳ —ವಾದಿ.

ಮತ್ತು

ಮುಂಡು ಪೂಜಾರಿ, ಪೆಟ್ಟಿ ಪೂಜಾರ್ತಿಳ ಮಗ, ಪೆರ್ದೂರು ಗ್ರಾಮ್ದ ನಾಯರ್‌ತೋಟು —ಪ್ರತಿವಾದಿ.

ಇವರೊಳಗೆ —

ವಾದಿಗೆ ಪ್ರತಿವಾದಿಯು ತಾ. 8-7-59 ರಲ್ಲು ಬರಕೊಟ್ಟ ದಿನೊಂದು ನೋಟಿನ ಅಲು, ಬಡ್ಡಿ ವಗೈರೆ ರುಪ್ಯಾ 108/50ನ್ನು ಕೇಳಿ ವಾದಿಯು ಮಾಡಿದ ಮೇಲಿನ ವ್ಯಾಜ್ಯವು ತಾ. 8—2—1961ಕ್ಕೆ ಇಟ್ಟಿರುವುದ್ರಿಂದ ಆ ದಿವ್ಸ ಹಗಲು ಗಂಟೆ 10ಕ್ಕೆ ಪ್ರತಿವಾದಿಯು ಈ ಕೋರ್ಟುಮುಂದೆ ಹಾಜ್ರಾಗಿ ತನ್ನ ಉದಾಸೀನತೆಯನ್ನು ದಾಖಲುಮಾಡತಕ್ಕದ್ದು, ತಪ್ಪುದ್ರೆ ಆತನ ಗೈರುಹಾಜ್ರಿಯಲ್ಲಿ ಈ ವ್ಯಾಜ್ಯವು ತೀರ್ಮಾನಿಸಲ್ಪಡುವುದು.

B. S Hegde,
Vakil for Plff.

ಉಡ್ಪಿ 21—1—1961

CANARA BANK LIMITED

ONE MORE YEAR OF PROGRESS

The working of the Canara Bank Ltd. for the year 1960 has resulted in a net profit of Rs. 20 · 30 lakhs, subject to audit, as against Rs. 18 · 30 lakhs in 1959. With the carry forward of Rs. 0 · 42 lakhs the total amount available for distribution is Rs. 20 · 72 lakhs.

The Directors have transferred a sum of Rs. 3 · 50 lakhs to inner reserves and allocated Rs 3 · 10 lakhs for payment of bonus to staff. After making a provision of Rs 7 · 65 lakhs for taxation, a taxable dividend of 15% on Equity Shares and of 5 · 56% on Preference Shares (as against 5% of last year) absorbing in all Rs 6 · 02 lakhs has been recommended, leaving a balance of Rs 0 · 45 lakhs.

The Deposits of the Bank at Rs 30 · 82 crores show an increase of Rs. 189 lakhs over the last year.

ಇಂದಿನ ಎಚ್ಚರ

ಕಳೆದ ನಿನ್ನೆಯ ಮರೆತು
ಬರುವ ನಾಳೆಯ ಕುರಿತು
ಇಂದು ಎಚ್ಚರ ವಹಿಸುವುದೇ ಜಾಣತನ.
ಹೌದು; ಇಂದಿನಿಂದಲೇ
ಉಳಿತಾಯಕ್ಕೆ ತೊಡಗುವುದು ಒಳಿತು.

ಸಿಂಡಿಕೇಟ್ ಬೇಂಕ್

ಉಳಿತಾಯಗಾರರ ಸನ್ಮಿತ್ರ

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್ ಲಿಮಿಟೆಡ್

ಶಾಸ್ತ್ರೀಯ ಆಯುರ್ವೇದ ಔಷಧಗಳಿಗೆ—ಮತ್ತು ಅನುಭವಪೂರ್ಣ ಚಿಕಿತ್ಸೆಗಳಿಗೆ
ಶ್ರೀ. ಟಿ. ಎನ್. ಕೇಳು ನಂಬಿಯಾರರ

ನಂಬಿಯಾರ್ಸ್ ಆರ್ಯ ವೈದ್ಯ ಶಾಲಾ

ಪೋಸ್ಟ್ ಆಫೀಸಿನ ಎದುರು, ಉಡುಪಿ, ದ. ಕ.

ಧಾತುಪುಷ್ಟಿ ಲೇಹ:

(ಸುವರ್ಣ, ಸಾಲಾಮಿಶ್ರಿ, ಕಲ್ಮದ ಮಿಶ್ರಿತ)
ಇದು ಬಲಹೀನರಿಗೆ ಶಕ್ತಿವರ್ಧಕ ರಸಾಯನ.
ಪೌಂಡಿಗೆ ರೂ. 7—0-0. ಪೌ. ½ ರೂ. 4—0—0.

ಕಸ್ತೂರಿ ಮಿಶ್ರಣ ದಶಮೂಲ—ಪ್ರಸವಾನಂತರ ಬಾಣಂತಿಯರಿಗೆ ಶಕ್ತಿವರ್ಧಕ ರಸಾಯನ. 24 ಔನ್ಸ್ ರೂ. 6-0-0. 12 ಔ. ರೂ. 3 - 0—0. 8 ಔ. ರೂ. 2—0—0.

ಚ್ಯವನಪ್ರಾಶ ಲೇಹ—(ಬಂಗಾರ ಮಿಶ್ರಿತ) ಶಾರೀರಿಕ ಮತ್ತು ಮೆದುಳು ಶಕ್ತಿವರ್ಧಕ. ಪೌಂಡಿಗೆ ರೂ.6 0 0. ½ ಪೌ.ರೂ 3-4-0

ಅಶೋಕಾರಿಷ್ಟ ಮಾತ್ರೆ— ಸೊಂಟ ನೋವು, ಋತು ಶೂಲೆ, ಕೆಟ್ಟಿಗಡ್ಡೆ ಮುಂತಾದುವುಗಳಿಗೆ ದಿವ್ಯ. ಬಾಟ್ಲಿ 1ರ ರೂ. 4—0—0

ಗರ್ಭಾ ರಕ್ಷಕ— ಗರ್ಭಕ್ಕೆ ಶಕ್ತಿದಾಯಕ, ಗರ್ಭಿಣಿಯರ ರೋಗ ನಿವಾರಕ ಬಾಟ್ಲಿ 1ರ ರೂ. 4—0 · 0.

ಜಿ. ಗಣಪಯ್ಯ ಎಂಡ್ ಸನ್ಸ್

ಆಯುರ್ವೇದಿಕ್ ಫಿಜಿಶಿಯನ್ಸ್
ರಥಬೀದಿ, ಮಂಗಳೂರು—1.

ಇದಲ್ಲದೆ ಇನ್ನೂ ಅನೇಕ ತರದ ಔಷಧಿಗಳು ನಮ್ಮಲ್ಲಿ ದೊರೆಯುತ್ತವೆ. ಕೆಟಲಾಗಿಗೆ ಬರೆಯಿರಿ. ಕಾಯಿಲೆ ಸಂಗತಿ ವಿವರವಾಗಿ ಬರೆದಲ್ಲಿ ರೋಗಕ್ಕೆ ತಕ್ಕ ಔಷಧಿಯನ್ನು ರವಾನಿಸಬಹುದು. ಪೋಸ್ಟ ಮುಖಾಂತರ ಔಷಧಿ ಬೇಕಾದವರು ಔಷಧಿ ಕ್ರಯದ ಅರ್ಧಾಂಶ ಹಣವನ್ನು ಮನಿಯಾರ್ಡರ್ ಮೂಲಕ ರವಾನಿಸಬೇಕು.

ಔಷಧಿ ಸಿಗುವ ಸ್ಥಳಗಳು:- 1) ನ್ಯೂ ಕೆನರಾ ಜನರಲ್ ಸ್ಟೋರ್ಸ್, ವಿಕ್ಟೋರಿಯಾ ಗಾರ್ಡನ್ ರೋಡ್ ಬ್ಯಾಕಲ್ಲಾ, ಬೊಂಬ್ಯಾ 27. 2) ಮಂಗಳೂರು ಜನರಲ್ ಸ್ಟೋರ್ಸ್, 76—A, ಲೇಡಿ ಜಮಶೆಡ್ಜಿ ರೋಡ್, ಮಹೀಮ್, ಬೊಂಬ್ಯಾ.

ಸಮಯದ ಉಳಿತಾಯ | ಹಣದ ಉಳಿತಾಯ

ಅಧುನಿಕ ಮಾದರಿಯ ಹೊಲಿದಿಟ್ಟ ಉಡುಗೆ ತೊಡುಗೆಗಳು

ಶಾಂಸನ್ಸ್ | ಶರ್ಟ್, ಬಶ್ ಶರ್ಟ್, ಹಾಫ್ ಪೇಂಟ್

G. & B. | ಸೊಗಸಿನ ಸಿಲ್ಕ್ ಪ್ಯಾಕ್, ಬಾಬಾ ಸೂಟ್, ಆಕರ್ಷಣೀಯ ನೈಲೋನ್ ಪ್ಯಾಕ್.

C. T. L. | ಬನಿಯನ್, ನಿಕ್ಕರ್, ಟಿ ಶರ್ಟ್

ದೊರೆಯುವ ಸ್ಥಳ:—

ವಾಸುದೇವ ಸ್ಟೋರ್ಸ್,

ಹಂಪನ್‌ಕಟ್ಟೆ, ಮಂಗಳೂರು-1.

Dealers in Harvest tones
and Milton's Shirts and Bush Shirts.

Visit—

VASUDEVA STORES.

HAMPANKATTA, MANGALORE—1.

Branch:

DRESS LAND,

PADUPET, UDIPI.

ಕೆಲವು ಪ್ರಾಣಿಗಳು ಋತು ಧರ್ಮಕ್ಕನುಸಾರವಾಗಿ ತಮ್ಮ ಮೈ ಮನಸ್ಸುಗಳ ಬಣ್ಣ ಬದಲಾಯಿಸುವುದುಂಟು. ಅಂದರೆ ಆ ಕಾಲದ ಹವೆಯೋ, ಬೆಳಕೋ ಇವುಗಳಿಂದಾಗಿ ಯಾವುದೇ ಸಂಸ್ಕಾರ ಅವಕ್ಕೆ ದೊರೆಯುತ್ತಿರಬೇಕು. ಅದರಿಂದ ಅವು ತಮ್ಮ ಮೂಲ ಸಂಸ್ಕೃತಿಯಿಂದ ವಿಭಿನ್ನವಾಗುತ್ತಿವೆಯೆಂದು ಕೆಲವು ಪಜ್ಞರು ಹೇಳುವುದುಂಟು.

ಇದು ಪ್ರಾಣಿಗಳಿಗೆ ಸಂಬಂಧಿಸಿದ್ದೆಂದು ತಿಳಿಯಲಾಗುತ್ತಿದ್ದರೂ ಇಂದಿನ ಪ್ರಜಾಪ್ರಭುತ್ವದಲ್ಲಿ ಮನುಷ್ಯನ ಮೇಲೆಯೂ ಇಂಥ ಪರಿಣಾಮಗಳಾಗುತ್ತಿರುವುದು ಕಂಡುಬರುತ್ತಿದೆ. ಪ್ರಜಾಪ್ರಭುತ್ವದಲ್ಲಿ ಪ್ರಭುದ್ಧನೆನಿಸಿಕೊಳ್ಳುವ ಹಕ್ಕು ಪ್ರಾಪ್ತವಾಗುತ್ತದೆ. ಆಗ ಈ ಓಟಿನ ಗೀಟಿನ ಮೂಲಕವಾಗಿ ಅಥವಾ ಚೀಟಿಯ ಮೂಲಕ ತನ್ನ ಪ್ರತಿನಿಧಿಯನ್ನು ಆರಿಸಬೇಕಾಗುತ್ತದೆ. ಇದು ಪ್ರತಿನಿಧಿಗಾಗಿ ಪ್ರಜೆಯು ಮಾಡಲೇಬೇಕಾದ ಒಂದು ಸಂಸ್ಕಾರ ವಿಧಿ.

ಈ ವಿಧಿಯು ಮುಗಿದನಂತರ, ಹಲವು ಪ್ರತಿನಿಧಿಗಳ ಬಣ್ಣವೂ ಬದಲಾಗಿ ಹೋಗುತ್ತದೆ. ಅಷ್ಟರವರೆಗೆ ನಮ್ಮ ಪ್ರತಿನಿಧಿಗಳಾಗಿ ಪ್ರತಿಯೊಂದು ವಿಷಯದಲ್ಲಿಯೂ ಪ್ರತಿಜ್ಞಾಪೂರ್ವಕ ಆಶ್ವಾಸನಕೊಟ್ಟ ಅವರು ಯಾವ ಕಾರಣದಿಂದಲೋ ಏನೋ ಪ್ರತಿನಿಧಿಗಳಾಗಿಯೇ ಉಳಿಯುವಬದಲು ನಿಧಿ ಪ್ರತಿಗಳಾಗಿಬಿಡುತ್ತಾರೆ. ತಮ್ಮ ಹಿಂದಿನ ಪ್ರತಿಜ್ಞೆಗಳೆಲ್ಲ ಮರೆತುಹೋಗಿಬಿಡುತ್ತವೆ. ಇದರಿಂದ ಪ್ರಜೆಗೆ ಸಿಗುವುದು ಪ್ರತಿ ಮಾತ್ರ. ನಿಧಿ ಅವರಿಗೇ!

ಇಂಥ ನಿಧಿ ಪ್ರತಿಗಳೇ ಪ್ರತಿಸಾರಿಯೂ ಆರಿಸಿ ಹೋಗುವುದರಿಂದ ನಾಡಿಗೆ ಯಾವ ಹಿತ ಪ್ರಾಪ್ತವಾಗುತ್ತದೆ? ಪ್ರಜಾಪ್ರಭುತ್ವವೆಂದು ಹೇಳಿಕೊಳ್ಳುವುದಕ್ಕೆ ಹೆಮ್ಮೆಯೇ ಹೊರತು ಕೇಳುವುದಕ್ಕೂ—ನೋಡುವುದಕ್ಕೂ ಯಾವ ಸಮಾಧಾನವುಂಟು?

"ಭೂಮಿಗೆ ಸ್ವರ್ಗವನ್ನೇ ಇಳಿಸಬಲ್ಲೆ" ಎಂದು ಹೇಳಿದ ಈ ಮಹಾನುಭಾವರಿಗೆ "ಏನು—ಸ್ವಾಮೀ—ಇನ್ನೂ ಸ್ವರ್ಗವೇಕೆ ಇಳಿಯಲಿಲ್ಲ?" ಎಂದು ಕೇಳಿದರೆ "ನಿಧಾನಿಸಿ, ಇಳಿಯುತ್ತಲೇ ಇದೆ. ನಮ್ಮದೇ ರಾಜ್ಯ. ನಮ್ಮದೇ ಸರಕಾರ. ಎನ್ನುವ ಕೆಡಿಮೋಡ ಉತ್ತರದ ಪ್ರತಿ ನಮಗೆ ಯಾವ ತೊಂದರೆಯೂ ಇಲ್ಲದೇ ದೊರೆಯುತ್ತದೆ.

ಬೇರೆ ಬೇರೆ ದೇಶಗಳಲ್ಲಿ ಮಾತ್ರ ಈ ಪ್ರತಿನಿಧಿಗಳು ಪ್ರತಿನಿಧಿಗಳಾಗಿಯೇ ಇರುತ್ತಾರೆ. ಅಲ್ಲೂ ಪ್ರಜಾಪ್ರಭುತ್ವವುಂಟು. ಅದರೆ ಅಲ್ಲಿಯ ಪ್ರಜಾಪ್ರಭುತ್ವದಲ್ಲಿ ಅರ್ಹತೆ ಇದ್ದವರು ಮಾತ್ರ ಪ್ರಭುಗಳಾಗುತ್ತಾರೆ. ನಮ್ಮಲ್ಲಿಯದುಮಾತ್ರ ಹಾಗಲ್ಲ, ಯಾರು ಹೆಚ್ಚು ಆಶ್ವಾಸನ ಕೊಡಬಲ್ಲರೋ ಅವರೇ ಪ್ರತಿನಿಧಿಗಳೆನಿಸುತ್ತಾರೆ. ಹಾಗಾಗಿ ಶಿಕ್ಷಣವಿಲ್ಲದಿದ್ದವನೂ ಶಿಕ್ಷಣ ಮಂತ್ರಿಯಾಗಬಹುದು.

ಇನ್ನೊಂದು ಸ್ವಾರಸ್ಯದ ಸಂಗತಿಯೆಂದರೆ ಪ್ರತಿನಿಧಿಗಳಾಗಿ ಆರಿಸಿ ಹೋದನಂತರ ಮುನಃ ಪ್ರಜೆಯನ್ನು ಕಾಣುವುದಕ್ಕೆ ಮತ್ತೊಂದು ಚುನಾವಣೆಯೇ ಬರಬೇಕು. ಅಲ್ಲಿಯವರೆಗೂ ಈ ಪ್ರತಿನಿಧಿಗಳಿಗೂ ಪ್ರಜೆಗೂ ಯಾವ ಸಂಪರ್ಕ ಸಂಬಂಧವೂ ಇರುವುದಿಲ್ಲ. ಅಂದಾಗ ಪ್ರಜೆಯು ವಿಚಾರ—ಸಮಸ್ಯೆ ಅವರಿಗೆ ಹೇಗೆ ತಿಳಿಯಬಲ್ಲದು? ಮೇಲೆ ತಿಳಿಯುವ ಆವಶ್ಯಕತೆಯೂ ದರೂ ಅವರಿಗೇಕೆ ಇರುವುದು?

ಆರಿಸಿ ಬರುವವರೆಗೆ ಆಶ್ವಾಸನಕೊಡುವುದಕ್ಕೆ ಅವರ ಸಾಮರ್ಥ್ಯ ವಿಭಿನ್ನವಾಗಿರಬೇಕಾಗುತ್ತದೆ. ನಂತರ ಅಧಿಕಾರ ಸಂಪಾದನೆಗಾಗಿರುತ್ತದೆ. ಅಧಿಕಾರದನಂತರ ಅದನ್ನು ಸ್ಥಿರಗೊಳಿಸುವುದಕ್ಕೆ ಪ್ರಯತ್ನಿಸಬೇಕಾಗುತ್ತದೆ. ಹೀಗಾಗಿ ಈ ಕಾರ್ಯಗಳ ನಿಮಿತ್ತ ಬಡ ಬೋರೇಗೌಡನಿಗೆ ಕೊಟ್ಟ ಆಶ್ವಾಸನ ಹೇಗೆ ನೆನಪಿನಲ್ಲಿ—ಬರುತ್ತದೆ?

ನಮ್ಮಲ್ಲಿಯೂ ಹಾಗೆಯೇ ಈ ವಿಚಾರಗಳನ್ನು ಪರಿಶೀಲಿಸುವ ಸಂಪ್ರದಾಯವೂ ಇರುವುದಿಲ್ಲ. ಸ್ವಾತಂತ್ರ್ಯ, ಬಂದರೂ ದಾಸ್ಯ ಮನೋವೃತ್ತಿ ತೊಲಗಲಿಲ್ಲ. ನಮ್ಮ ಪ್ರತಿನಿಧಿಗೆ— 'ತಾವು ಹೇಳಿದ್ದೇನು? — ಮಾಡಿದ್ದೇನು?" ಎಂದು ಕೇಳುವ ಧೈರ್ಯವೇ ನಮಗಿರುವುದಿಲ್ಲ. ಅವರು ಏನೂ ಮಾಡದೇ ಇದ್ದರೂ ಮತ್ತೊಂದು ಚುನಾವಣೆಯಲ್ಲಿಯೂ ಆರಿಸಿಬರುವವರಿದ್ದಾರೆ. ಇದಕ್ಕೆ ನಮ್ಮಲ್ಲಿಯ ವೈಜಾತಿಕ ಮನೋಧರ್ಮದ ಪ್ರಭಾವವೇ ಕಾರಣ. ಪ್ರಜಾಪ್ರಭುತ್ವಬರಲಿ, ಸ್ವಾತಂತ್ರ್ಯಬರಲಿ, ಪ್ರಜೆಯ ಮನೋಧರ್ಮ ಪರಿಶುದ್ಧವಾಗಿ ವಿವೇಕ ವಿಚಾರ—ಸಂಪನ್ನತೆ ಪಡೆದ ವಿನಹ ದೇಶದ ಸಮೃದ್ಧಿ ಆಗಲಾರದು.

ಪ್ರತಿ ವರುಷವೂ ದೇಶದ ತುಂಬಾ ಈ ಪ್ರಜಾರಾಜ್ಯೋದಯದ ಉತ್ಸವ ಆಚರಿಸಲಾಗುತ್ತಿದೆ. ಆದರೆ ಉತ್ಸವ ತಾತ್ಪರ್ಯವಾಗಿ ನಡೆಯದೇ ಆಡಂಬರಕ್ಕಾಗಿ ನಡೆದರೆ ದೇಶದಲ್ಲಿ ಯಾವ ಜಾಗ್ರತಿ ಹುಟ್ಟಿಸಲು ಸಾಧ್ಯವಾಗುತ್ತದೆ. ಪ್ರಜಾಪ್ರಭುತ್ವದ ಕಲ್ಪನೆ ಸರಿಯಾಗಿ ಬಂದ ವಿನಃ ಪ್ರಜೆಯ ಯಾವ ಅಶೋತ್ತರಗಳೂ ಸಾಧ್ಯವಾಗುವದಿಲ್ಲ.

ಚುನಾವಣೆಯೊಂದು ಪ್ರಜಾಪ್ರಭುತ್ವದಲ್ಲಿ ಪರ್ವಕಾಲವಾಗಿದೆ. ಆಗ ಪ್ರಜೆಯು ತನ್ನ ಮತದಾನ ಮಾಡಬೇಕಾಗುತ್ತದೆ. ಈ ದಾನವು ಅಪಾತ್ರದಾನವಾದರೆ ಅದರಿಂದ ದೇಶಕ್ಕೂ ದ್ರೋಹಮಾಡಿದ ಹಾಗೆಯೇ! ಆಗ ಪ್ರತಿನಿಧಿಗಳೆನ್ನುವವರು ಪ್ರಜಾರದ ಮೂಲಕ ವಿಚಾರವನ್ನೇ ಕಾಂಗಡಿಸಿ ಬಿಡುತ್ತಾರೆ. ಹಾಗಿದ್ದರೂ ಸ್ಥಿತಪ್ರಜ್ಞರಾಗಿ—ಯಾರು ಪ್ರತಿನಿಧಿಗಳು, ಯಾರು ನಿಧಿ ಪ್ರತಿಗಳು ಎಂಬುದನ್ನು ವಿಚಾರಿಸಿ ಮತದಾನ ನಡಿಸಿದರೆ ಅದರಿಂದ ಪ್ರಜಾಪ್ರಭುತ್ವ ಸಾರ್ಥಕವಾದೀತು. ದೇಶಕ್ಕೆ

ನಮ್ಮ ರಾಜಕೀಯದಲ್ಲಿ

ಈ ಜನಕ್ಕೆ ಎರಡು ಮುಖ!

ಪ್ರಜಾಸತ್ತೆಯಲ್ಲಿ ಪ್ರಜಾಪ್ರತಿನಿಧಿಗಳು ಬಣ್ಣ ಬದಲಿಸುವ ಓತಿಗಳಂತೆ ವರ್ತಿಸಿದರೆ, ಪ್ರಜೆಯು ಸತ್ತಂತೆಯೇ ಸರಿ. ಆತನ ಅಶೋತ್ತರಗಳು ಮಣ್ಣುಗೂಡಿದಂತೆಯೇ. ಆದುದರಿಂದ ಮತದಾರರು ಈ ಇನ್ನೊಗದ 'ನಿಧಿಪ್ರತಿ'ಗಳನ್ನು ಬಹಿಷ್ಕರಿಸಿ ನಿಜವಾದ ಪ್ರತಿನಿಧಿಯನ್ನು ಆರಿಸುವ ಬಗ್ಗೆ ವಿಚಾರಶೀಲರಾಗಬೇಕು.

ತಿಳಿಸಿದವರು: ಶ್ರೀ ತದ್ದಲಸೆ ವಿಶ್ವೇಶ್ವರ ಶರ್ಮಾ.

ಅಭಿವೃದ್ಧಿ ಬಂದೀತು. ಆಗಾಗ ಮುಖವಾಡವನ್ನು ಬದಲಾಯಿಸುವ ಸಂಪ್ರದಾಯ ಅಳಿಸಿ ಹೋದೀತು. ಇಲ್ಲದಿದ್ದರೆ ಬೇಕಾದಾಗ ಬಣ್ಣ ಬದಲಾಯಿಸುವ ಈ ನಿಧಿ ಪ್ರತಿಗಳ ಪ್ರಜಾಸತ್ತೆಯಲ್ಲಿ ಪ್ರಜೆ ಸತ್ತಂತೆಯೇ ಸರಿ!

— —

ನಮ್ಮವರ ಸುಖಕಾಗಿ ನಾವು ದುಡಿಯುವ

ಕವಿ: ಶ್ರೀ ಎಸ್. ತಿರುಮಲೇಶ್ವರ ಭಟ್, ಶಿರೋಮಣಿ, ವಿದ್ವಾನ್.

— ೧ —

ರಾಜ್ಯಾಭಿವೃದ್ಧಿ ಮುಖವನು ಮೂಲ್ಯ ಯತ್ನಿಜರು
ರಾಜ್ಯದಲ್ಲಿಹ ಕೃತ ಶ್ರಮಿಕ ಜನರು
ಪೂಜ್ಯ ಭಾವನೆಯಿಂದ ಪುಡಿದು ಸುರಿಸುವ
ಸ್ವೇದ
ವಾಜ್ಯ ತನುಮನಧನಗಳೆಲ್ಲವು ಚರು.

— ೨ —

ದೀನದಲಿತರ ಮಗುವ ದಾರಿಯ ತಪ್ಪಿ
ಸಲ್ಕೆದೆಯ
ಬಾನಿಂದ ಕರುಣಾಂಬು ಸುರಿಯಬೇಕು.
ಜೇನಿನಂತಹ ಸವಿಯನುದಿಯಿಂದ ನುಡಿಸುತಲಿ
ನಾನಾ ವಿಧದ ಸೇವೆಗೆಯ್ಯಬೇಕು.

— ೩ —

ಒಂದೆ ತಾಯಿಯ ಮಕ್ಕಳಾಗಿಹೆವು ನಾವೆಲ್ಲ
ರೊಂದೆ ದೇವನ ಸೃಷ್ಟಿಯಾಗಿಹೆವು ಜಗದಿ
ಹಿಂದುಳಿದ ಜನರನುದ್ಧರಿಸ ಕಾರ್ಯವೆ ನಮ್ಮ
ಮುಂದಿರುವ ಧ್ಯೇಯವದ ಮೊಳ್ಳೆ ದಿನ
ದಿನದಿ.

— ೪ —

ಗಣರಾಜ್ಯವೊಡೊಡಂ ಗುಣಮೂಡಿ ಬಂದಿಲ್ಲ
ಜನರ ಹೃದಯದ ಸುಧಾರಣೆಯಾಗಬೇಕು
ಸೌಹಾರ್ದ ಕೀರ್ತಿಯೆಂಬ ರೆಜನೆಯಿಂ ಮಾನವರ
ಹೃದಯ ಹೃದಯಗಳೊಂದುಗೂಡಬೇಕು

— ೫ —

ನಮ್ಮವರ ಸುಖಕಾಗಿ ನಾವು ದುಡಿಯುವ,
ನಾವು
ಬದುಕುವುದರೊಡನೆ ಪರರನ್ನು ಬದುಕಿಸುವ
ಇದುವೆ ನಮ್ಮಯ ಹಕ್ಕು ಬಂಗಾರ ಬದುಕಕ್ಕು
ಭಾರತ ಮಾತಾಕಿ ಜೈ ಎಂದು
ಘೋಷಿಸುವ!

ಉಡುಪಿ ಡಿ. ಮು. ಕೋರ್ಟಿನಲ್ಲಿ

S. C. S. No. 598/1960

ಪುಟ್ಟ ಪೂಜಾರಿ —ವಾದಿ.

ಮತ್ತು

ರಾಮು ಮರಕಾಲ—ತೆಂಕರಕೊಟ್ಟು, ಅಂಗರ ಮರಕಾಲನ ಅಳಿಯ, ಉಡುಪಿ ತಾಲ್ಕು ತೆಂಕನಿಡಿಯೂರು ಗ್ರಾಮದಲ್ಲಿರುವುದು

—ಪ್ರತಿವಾದಿ.

ಇದರೊಳಗೆ,

ಮೇಲಿನ ಪ್ರತಿವಾದಿಗೆ ಈ ಮೂಲಕ ತಿಳಿಯಪಡಿಸುವುದೇನೆಂದ್ರೆ.

ವಾದಿರು ಪ್ರತಿವಾದಿರಿಂದ ನೋಟಿನ ಬಾಬ್ತು ಬರಬೇ ರೂ. 100 ಕ್ಕೆ ದಾಕ್ಲು ಮಾಡಿದ ದಾವೆಯು ತಾ. 7-2-1961ಕ್ಕೆ ತನ್ನಿಗೆ ಇಟ್ಟಿರುತ್ತದೆ. ಆ ದಿನ್ನ ಸದ್ರಿ ಪ್ರತಿವಾದಿಯು ಬೆಳಿಗ್ಗೆ 10 ಗಂಟೆಗೆ ಈ ಕೋರ್ಟು ಮುಂದೆ ಸ್ವತಹಾ ವ ವಕೀಲ ಮುಖಾಂತರ ಹಾಜರು ಆಗತಕ್ಕದ್ದು. ಇದಕ್ಕೆ ತಪ್ಪಿದಲ್ಲಿ, ಸದ್ರಿ ದಾವೆಯು ಏಕಪಕ್ಷವಾಗಿ ತೀರ್ಮಾನಿಸಲ್ಪಡುವುದು.

(By order of the Court)

Perody Vittal Shetty,
B.A.,LL.B.
Advocate for Plaintiff.

Udipi Dated 16—1—1961

ಉಡುಪಿ ಡಿ. ಮು. ಕೋರ್ಟಿನಲ್ಲಿ

S. E A ನಂ. 215/60;
S. C. ನಂಬ್ರ 464/46.

S. ಹರಿಹರಂ ಪೋತಿ—ಅರ್ಜಿದಾರರು

(ವಾದಿ)

ಮತ್ತು

ಮುತ್ತ ಪೂಜಾರಿ—ಎದ್ರಿಯ(ಪ್ರತಿವಾದಿರು)

ಇದರೊಳಗೆ

ಉಡ್ಪಿ ತಾಲ್ಕು ಮುಟ್ಟು ಗ್ರಾಮದ ಅಂಬಾಡಿಯಲ್ಲಿರುವ ಮೀನ ಪೂಜಾರಿ ಮಗ ಎದ್ರಿ ಮುತ್ತ ಪೂಜಾರಿಗೆ ಈ ಮೂಲಕ ತಿಳಿಸುವದೇನಂದರೆ .

ಅರ್ಜಿದಾರ ದಿಕ್ಕಿದಾರರುನ ಮ್ಮ ಮೇಲೆ ಮಾಡಿರುವ ಮೇಲ್ಕಂಡ ಅಮಲ್ಜಾರಿಯು ನಿಮಗೆ ನೋಟೀಸು ಬಗ್ಗೆ ತಾ. 30-1-61ಕ್ಕೆ ಇಡೋಣಾಗಿದೆ-ಅಕ್ಕೇಸವಿದ್ದಲ್ಲಿ ನೀವು ಆ ದಿನ ಬೆಳಿಗ್ಗೆ 10 ಗಂಟೆಗೆ ಕೋರ್ಟು ಮುಂದೆ ಹಾಜರಾಗಿ ಜ್ಞಾಪೀರುಮಾಡಿಕೊಳ್ಳಬೇಕು. ಇಲ್ಲವಾದರೆ ನಿಮ್ಮನ್ನು ಎಕ್ಪಾರ್ಟಿ ಮಾಡಿ ತೀರ್ಮಾನಿಸಲಾಗುವದು.

(By order of the Court)

Narayana Rao, K.
Advocate for Petitioner.

Camp Udipi, 18—1—61.

ಪ್ರಜಾಪ್ರಭುತ್ವ ದಿನದ ಶುಭಾಶಯಗಳು!

ಸುಂದರ ಕ್ಲೋತ್ ಸ್ಟೋರ್ಸ್

ಕೆಥೋಲಿಕ್ ಬೇಂಕಿನ ಎದುರು, ಉಡುಪಿ, ದ. ಕ.

ಯಾವತ್ತೂ ತರದ ಕೈಮಗ್ಗ ಮತ್ತು ಗಿರಣಿ ಬಟ್ಟೆಗಳು,
ಸಿಲ್ಕ್ ಬಟ್ಟೆಗಳು ಸದಾ ಸಿದ್ಧವಿವೆ.

ಮಿತದರದಲ್ಲಿ- ಮನಮೆಚ್ಚುವ ವೈವಿಧ್ಯಪೂರ್ಣ ಬಟ್ಟೆಗಳಿಗೆ ಸಂದರ್ಶಿಸಿರಿ.

SUNDARA CLOTH STORES

Opp: Catholic Bank, UDIPI, S. Kanara.

Prop: K. G. Sunder Rao.

ಜನಜಾಗೃತಿಯೇ ಪ್ರಗತಿಯ ಮೂಲ

ಭಾರತಕ್ಕೆ ಸ್ವಾತಂತ್ರ್ಯ ಬಂದಿದೆ; ಆದರೂ ನಾವು ನಿಜವಾದ ಸ್ವತಂತ್ರರಾಗಿಲ್ಲ. ಇದಕ್ಕೆ ರುವ ಕಾರಣಗಳು ಹತ್ತು ಹಲವು. ಆದರೆ, ಸರ್ವ ಕಾರಣಗಳಿಗೆ ಮೂಲ ನಮ್ಮ ಜನತೆಯಲ್ಲಿ ಜಾಗೃತಿ ತೋರದಿರುವುದು. ಏಕೆಂದರೆ, ಜನಜಾಗೃತಿಯೇ ಪ್ರಗತಿಯ ಮೂಲ.

ತಿಳಿಸಿದವರು: ಶ್ರೀ ಕೆ. ವೆಂಕಟರಾಯಾಚಾರ್ಯ, ವಿದ್ವಾನ್.

ಯಾವುದೇ ಒಂದು ದೇಶವಾಗಲೀ ಅಲ್ಲಿಯ ಜನರ ಮಟ್ಟಕ್ಕೆ ತಕ್ಕ ಪ್ರಗತಿ ಹೊಂದುತ್ತದೆಯೆಂದ ಮೇಲೆ ಪ್ರಥಮತಃ ಜನಜಾಗೃತಿಯೇ ಮೂಲವೆಂದು ಹೇಳಿದಂತಾಯಿತು. ಹಾಗಾದರೆ ಸ್ವಾತಂತ್ರ್ಯದ ಪಥದಲ್ಲಿ ಮುಂದಡಿಯಿಡುವ ನಾವು ಪ್ರಾರಂಭದಿಂದಲೇ ಜಾಗ್ರತಾದೃಷ್ಟಿಯಿಂದ ನಾಗಬೇಕು. ಇದೀ ಗಣ ಲೌಕಿಕ ವಾತಾವರಣವು ಅದೆಂತಹ ಜಾಗೃತಿಯನ್ನು ಪಡೆದಿದೆಯೆಂದು ಮೊದಲು ನೋಡಿ ಇನ್ನಾದರೂ ಹೇಗಿರಬೇಕೆಂದು ಪರಿಶೀಲಿಸಬೇಕಾಗಿದೆ.

ಇದೀಗ ದೇಶದ ಆಡಳಿತೆ ಪರರ ಕೈಯಿಂದ ನಮ್ಮ ಕೈಗೆ ಬಂದಿದೆ, ಇದೇ ತಾನೇ ಸ್ವಾತಂತ್ರ್ಯ ದೇಶವೆಂಬ ಅರ್ಥವಾಗಿದೆ. ಆಹಾರಕ್ಕಾಗಲೀ, ಇತರ ದಿನವಹಿ ಬಳಸುವ ಹಲವು ಬಗೆಯ ಸಾಮಗ್ರಿಗಳಿಗಾಗಲೀ ನಾವು ಸ್ವತಂತ್ರರಾಗಿ ಇದ್ದೇವೆಯೋ ಎಂಬುದೇ ಈ ಸ್ವಾತಂತ್ರ್ಯದ ಪ್ರಥಮ ಪ್ರಶ್ನೆಯಾಗಿದೆ. 'ಆಳುವ ಪ್ರಧಾನಮಂತ್ರಿಯಿದ್ದಾನೆ, ಅವನೇ ನಮ್ಮೆಲ್ಲಾ ಹೊಣೆ ಹೊರುವನೆಂಬುದು ಸಿದ್ಧ' ವೆಂದೇ ಆಬಾಲವೃದ್ಧರೂ ಆಡುವಲ್ಲಿ ಈ ನಮ್ಮ ತನದ ಅರ್ಥವೇನಾದುದು? ಹಾಗೂ ವಿದ್ಯಾಭ್ಯಾಸದಿಂದಾದರೂ ನಮ್ಮ ಬಾಲ—ತರುಣ ಜನಾಂಗವು ಸುಸ್ಥಿತಿಯಲ್ಲಿರುವಂತೆಗಲು ಹಳ್ಳಿಗರು ಮುಂದುವರಿದಂತಿಲ್ಲ. ಪ್ರತಿಯೊಂದು ಹಳ್ಳಿಯಲ್ಲೂ ಕಡ್ಡಾಯ ಶಿಕ್ಷಣ ಜಾರಿಗೆ ಬಂದರೆ ಈ ಸಂಕಷ್ಟ ಪರಿಹಾರ್ಯವೆಂದು ನಿರ್ಲಿಪ್ತರಾದವರು ಹೇಳಿಬರುವುದಾದರೂ, ಅದಾವನೂ ಈ ಸಾಹಸವು ಅದೆಷ್ಟು ಶತಮಾನಾಂತರದಲ್ಲಿ ಸಾರ್ಥಕ್ಯವಾದೀತೆಂದು ಎದೆತಟ್ಟಿ ಹೇಳಲಾರನು. ವಿದ್ಯಾರ್ಥಿಯನ್ನು ಸಾಲೆಗೆ ಸೇರಿಸುವ—ಕಲಿಸುವ ಭಾರವೆಲ್ಲಾ ನಿರ್ಬಲ ಅಧ್ಯಾಪಕರೇ ಹೊರಬೇಕಾದರೆ ಅದೆಂತು—ಅದೆಂದು ಸಕ್ರಮ ವಿದ್ಯಾಭ್ಯಾಸ ನೆರವೇರೀತು? ವಿದ್ಯಾಲಯವೆಂದರೆ ಅಧ್ಯಾಪಕರು ಹೊಟ್ಟೆಹೊರಲು ಕಟ್ಟಿದ ಗುಡಿಗಳೆಂಬ ಭಾವನೆಯು ಅಧಾವ ಹಳ್ಳಿಗ—ಪಟ್ಟಣಿಗರ ಹೃದಯದಲ್ಲೂ ಅಳಿನಲ್ಲವಾಗಿ ಈ ತರದ ಪತ್ರಲಿಖಿತ ಶಾಸನಗಳೇನು ಮಾಡಿಯಾವು? ಬಡವನ ಮಕ್ಕಳು ಸಾಲೆಗೆ ಬರುವಲ್ಲಿ ಆ ಮಗುವಿನ ಹೊಟ್ಟೆಪಾಡು ಮಾತ್ರವಲ್ಲ, ಅದರ ಹಿರಿಯರತ್ತಲೂ ಸರ್ಕಾರ ಗಮನಿಸಲು ಸಾಧ್ಯವೇ? ಅಂದಮೇಲೆ, ಕೇವಲ ಅಕ್ಷರಾಭ್ಯಾಸದೊಂದಿಗೆ ಕೈಕಸಬಿನತ್ತ ಗಮನಿಸುವುದು ಸಾಹಜಿಕವದೆ. ಆದರೆ ಆ ಗುಡಿ ಕೈಗಾರಿಕೆಗಳನ್ನು ಕಲಿಸಲು ಇದೀಗ ನಿಯಮಿತ ವಿದ್ಯಾಮಂದಿರಗಳಲ್ಲಿ ಅದೇನೆಲ್ಲಾ ಉಪಕರಣಗಳಿವೆಯೆಂದು ಪ್ರತ್ಯಕ್ಷ ಪರೀಕ್ಷಿಸಿದರೇನೇ ತಿಳಿಯಬಂದೀತು. 'ಲಾಯವಿಲ್ಲದೆ ಕೊಂಡ ಕುದುರೆಯಂತೆ' ನಾಮಮಾತ್ರ ಶಿಕ್ಷಣದಿಂದೇನೂ ಪ್ರಯೋಜನವಾಗದು.

ಇನ್ನು ವಯಸ್ಕರತ್ತ ಕೊಂಚ ದಿಟ್ಟಿಸಿದರೆ, ಅವರು ಕಲಿಯದ ದುರ್ಗುಣಗಳಿಲ್ಲ. ಸಹಕಾರಕ್ಕಮದ ಬೇಸಾಯವನ್ನು ಸರ್ಕಾರವು ಪ್ರಚುರಿಸಿದರೆ, ಪ್ರತಿಯೊಂದು ಹಳ್ಳಿಯಲ್ಲೂ ವೈಯಕ್ತಿಕ ವಿದ್ವೇಷವುಳ್ಳ ಹಲವು ಸಂಗಡಗಳು ಹುಟ್ಟಿಬರುತ್ತಿವೆ. ಯಾವೊಬ್ಬ ವ್ಯಕ್ತಿಯೂ ಕಾನೂನಿನ ಮೇರೆಗೆ ಜಾಗೃತಿ—ಪ್ರಗತಿಗಳನ್ನು ಪಡೆಯಲಾರನೆಂದು ಸ್ಪಷ್ಟವಾಗಿದೆ. ಕಾನೂನಿಗೆ ತಲೆಬಾಗಿ ನಡೆಯುವುದು ಲೇಸೆಂದಿದ್ದರೆ, ದಿನದಿನಕ್ಕೆ ಕಳವು ಕೊಲೆ ಕುಡಿತಗಳ ಸಂಖ್ಯೆ ಹೆಚ್ಚುಗುತ್ತಿತ್ತೇ? ಇದಕ್ಕೆಲ್ಲಾ ಜನರ ಮನದಲ್ಲಿ ಜಾಗೃತಿಯುದಿಸಬೇಕು. ಆಗಲೇ ಜನವಾಸವಾದ ದೇಶದ ಪ್ರಗತಿ ಸಾಧ್ಯವಾಗುತ್ತದೆ. ಇದಕ್ಕೇನು ಪರಿಹಾರ್ಯಗಳೆಂದು ಪರಿಶೀಲಿಸಬೇಕು.

ಪ್ರತಿಯೊಬ್ಬ ಪ್ರಜೆಯೂ ಪ್ರಾಯಕ್ಕೆ ಬಂದೊಡನೆ ಮತದಾನದ ಹಕ್ಕುಪಡೆವ ನೆಂಬ ಮೂಲ ಸೂತ್ರದೊಂದಿಗೆ ಅವನು ಕನಿಷ್ಠ ಮಿತಿಯ ವಿದ್ಯಾವಂತನಿರಬೇಕೆಂಬ ನಿಯಮವಿದ್ದರೆ, ಮುಂದಿನ ಜನರಲ್ಲಾದರೂ ಹೆಚ್ಚು ಮಂದಿ ಕಲಿಯ ಬಯಸುತ್ತಾರೆ. ಹಾಗೂ ವಯಸ್ಕನಾದವನು ಕಳವು ಕೊಲೆ ಕುಡಿತಗಳ ತಪ್ಪುಗಳನ್ನು ಅನೇಕಶಃ ಮಾಡಿದರೆ, ವಿನಾಯಿತಿಯಿಲ್ಲದೆ ಕಠಿನ ಶಿಕ್ಷೆಗೆ ಒಳಗಾಗುವ ಕಟ್ಟಳೆಯಿರಬೇಕು. ಆ ತಪ್ಪುಗಾರನನ್ನು ಕೇವಲ ಇಲಾಖೆಯವರೇ ಪತ್ತೆಗೊಳುವಷ್ಟು ಜನವಾಗಲೀ ಸರ್ಕಾರವಾಗಲೀ ಮೌನವನ್ನು ತಾಳಬಾರದು. ಪ್ರತಿಯೊಬ್ಬ ಮತದಾರನು ಈ ತಪ್ಪುಗಾರನನ್ನು ಸಾಧಾರವಾಗಿ ತೋರಿಸಿದರೆ ತಕ್ಕ ಕಟ್ಟುವಾಡುಗಳಿರುವುದು ಚೆನ್ನು. 'ಹಣವಿದ್ದರೆ ಎಂತಹ ದೊಡ್ಡ ತಪ್ಪೂ ಮಾಯವಾಗುತ್ತದೆ'ಯೆಂಬ ಮನೋಭಾವ ಇದರಿಂದ ತೊಲಗುತ್ತದೆ. ಬಡವ—ಹಣವಂತನೆಂಬ ತರತಮವು ಆಗಲಾರದೂ ಕಳಚಿ ಹೋಗುತ್ತದೆ. ದೇಶದ ಎಲ್ಲೆಡೆ ಪ್ರಗತಿ-ಶಾಂತಿ-ಸೌಜನ್ಯಗಳು ನೆಲೆಗೊಳ್ಳುತ್ತವೆ.

ಇನ್ನು ಪ್ರತಿಯೊಬ್ಬ ವ್ಯಕ್ತಿಯೂ ತನ್ನ ಅಭಿರುಚಿಯ ವೃತ್ತಿ-ವ್ಯವಹಾರಗಳನ್ನು ದಿನವಹಿ ನಾಲ್ಕಾರು ಗಂಟೆಯಾದರೂ ಮಾಡುತ್ತಿರುವಂತೆ ಕಟ್ಟುವಿಧಿ ಆಗಬೇಕು. ಮನೆಯೊಕೆ—ಮನೆಮಕ್ಕಳು ಗೇಯುವುದನ್ನು ತಿನ್ನುವುದೇ ಯಜಮಾನಗಿರಿಯ ಲಕ್ಷಣವೆಂಬುದು ಆಗ ದೂರವಾದೀತು. ಈ ಬಗೆಗೆ ಗ್ರಾಮಕ್ಕೊಂದು ವಿಚಾರ ನಿಲಯವಿದ್ದರೆ ಸಾಲದು, ಒಬ್ಬೊಬ್ಬನು ದೂರಿಟ್ಟರೂ ವಿಚಾರಿಸುವ ತಾಳ್ಮೆಯುಳ್ಳ ಮುಖಂಡರು ಹಲವರಿರಬೇಕು. ಇಂತಹ ಪ್ರಾಮುಖ್ಯ ಹಾಗೂ ಪ್ರಪ್ರಾಥಮಿಕ ವಿಚಾರ—ಆಚರಣೆಗಳಿಲ್ಲದೆ ಯಾವ ನಿಯಮವೂ ಫಲಿಸದು! ಜನಜಾಗೃತಿಯಿಂದಲೇ ದೇಶದ ಪ್ರಗತಿ ಸಫಲವೀತೆಂದು ಹೇಳಿದರೆ ತಪ್ಪಾಗಲಾರದಷ್ಟೆ?

A. B. SHETTY MEMORIAL FUND

Give your help small or big.
A token of love and respect to him.

Sir,

As decided by the Memorial Committee, one of the items of work is to put up a Marble Statue of late Sri A. B. Shetty in front of S. R. S. Home Mangalore which owes its inception and development to his labour of love for student population.

The work of preparing the Statue was entrusted to a famous sculptor in Bombay through the cooperation and supervision of Dr. N. V. Adyanthaya.

A good deal of spade work had to be done in supplying suitable photographs and other materials to the Sculptor from time to time. It took nearly 8 to 9 months to have the clay model which has been approved by our people at Bombay.

A life Size bust 2 feet in Italian marble on a pedestal 4½ feet high in Indian marble will be completed in 2 or 3 months more. The total expenditure (Cost of the Statue, conveyance from Bombay erecting and unveiling) is estimated to cost Rs 6000/-

The Memorial Committee is anxious to take up other items of work when funds are forthcoming.

On behalf of the Committee, I send you this special appeal for cooperation and support. Please send your donation to Sri P. M. Hegde, Treasurer of the Committee, Kodialbail Post, Mangalore-3

Yours Sincerely,

Bejai Post,
Mangalore-4.
5—12—1960.

K. T. Alva
President of the Committee.

ಪುತ್ತೂರು ಡಿ. ಮು. ಕೋರ್ಟಿನಲ್ಲಿ

S. C. 352/1960

ಮಂಜುನಾಥ ಬಾಳಿಗ —ವಾದಿ.

B. ಪದ್ಮರಾಯ ಬಾಳಿಗ ಕೂಡಾ —ಪ್ರತಿವಾದಿರು.

1ನೇ ಪ್ರತಿವಾದಿ B. ಪದ್ಮರಾಯ ಬಾಳಿಗ, B. ಸದ್ರಿಂಜ ಬಾಳಿಗರ ಮಗ, ಬೆಳ್ತಂಗಡಿ ತಾಲ್ಲೂ ಕುಕ್ಕಳ ಗ್ರಾಮದ ಪುಂಜಾಲ್ ಕಟ್ಟೆಯಲ್ಲಿರುವವ. 2ನೇ ಪ್ರತಿವಾದಿ ಸುಸಂದಾ ಬಾಯಿ, B. ಸದ್ರಿಂಜ ಬಾಳಿಗರ ಮಗಳು. ಪ. ಪಾಪಾಳ್ಕರ ಕಂಪ್ಟಿ, C/o V. H. Mallan. A M Cross Road Vaikkagm Mahan Cherry Post Cochin 3ನೇ ಪ್ರತಿವಾದಿ ವಾಣಿ ಬಾಯಿ, ಪ. ಸೀತಾರಾಮ ಭಟ್ಟರ ಹೆಂಡ್ತಿ, ವ, B. ಸದ್ರಿಂಜ ಬಾಳಿಗರ ಮಗಳು. ಪೈಸಾರಿ ಸಂಸ್ಥಾನದ ಕುಳ್ಳಕ್ಕ ತಾಲ್ಲೂ ಲಕ್ಷ್ಮಿಪುರ ಅಂಚೆ. ಗ್ರಾ O. ಕುಳ್ಳಕ್ಕ.

ಸದ್ರಿ ಪ್ರತಿವಾದಿರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ:—

ವಾದಿ ಪ್ರೊ. ಕೋರ್ಟಿನ ಅನ್ನು ಮತ್ತು ಬಡ್ಡಿ ಅಳವು ಬರಪೂಡಿಕೊಳ್ಳುವರೆ, ವಾದಿಯು ದಾಖಲುಪಡಿಸಿದ ಮೇಲ್ಕಂಡ ದಾವೆಯನ್ನು ತಾ. 31—1—1961 ಕ್ಕೆ ಕೋರ್ಟೀಸು ಬಗ್ಗೆ ಇಟ್ಟಿರುವುದರಿಂದ, ಆ ದಿವಸ ಸೂರ್ಯಾಸ್ತ ಗಂಟೆ 11 ಕ್ಕೆ ಮೇಲ್ಕಂಡ ಕೋರ್ಟು ಮುಂದೆ ಹಾಜ್ರಾಗಿ ಉದಪರಿಸಿಕೊಳ್ಳತಕ್ಕದ್ದು. ತಪ್ಪಿದರೆ ನಿಮ್ಮ ಗೈರುಹಾಜರಿಯಿಂದ ಸದ್ರಿ ದಾವೆಯನ್ನು ಏಕಪಕ್ಷವಾಗಿ ತೀರ್ಮಾನಗೊಳ್ಳಬಹುದು.

(ಕೋರ್ಟು ಹುಕುಂ ಪ್ರಕಾರ)

S. Soorappaya,
Vakil for Plaintiff.

ಪೊಕ್ಕಾಂ: ಪುತ್ತೂರು, ತಾ. 10—1—1961

ಪುತ್ತೂರು ಡಿ ಮು. ಕೋರ್ಟಿನಲ್ಲಿ

S. E. P. 299/1960 in
S. C. 135/1955.

ಮೂಡಿ ಗೋಪಾಲ ಶೈ —ಅರ್ಜಿದಾರ.

ಮತ್ತು

ಸದು ಬ್ಯಾರಿ— ಎದ್ರಿ.

ಎದ್ರಿ—ಸದು ಬ್ಯಾರಿ, ಪಟ್ಟ ಹೆಂಡ್ರಮ ಬ್ಯಾರಿಗಳ ಮಗ ಬಂಟ್ವಾಳ ತಾಲೂಕು ಕಡೆಶ್ವಲ್ಕ ಗ್ರಾಮದಲ್ಲಿ ಇವರಿಗೆ—

ಮೇಲ್ಕಂಡ ಡಿಕ್ರಿ ಅಮಲ್ಜಾರಿಯಲ್ಲಿ ನೀವು ಹಣ ತೆರದ್ರಿಂದ ನಿಮ್ಮನ್ನು ವಾರಂಟಿನಲ್ಲಿ ಹಿಡಿದು ಸಿವಿಲ್ ಜೈಲಿಗೆ ರವಾನಿಸಬೇಕೆಂದು ಮೂಡಿಪ ಮೇಲಿನ ಅರ್ಜಿಯು ತಾ. 28—1—61 ಕ್ಕೆ ವ್ಯಾದೆಯಿರುತ್ತದೆ. ಆದ್ರಿಂದ ನಿಮಗೇನಾದರೂ ಅಕ್ಷೇಪಣೆ ಇದ್ದಲ್ಲಿ ಆ ದಿನ ಬೆಳಿಗ್ಗೆ 11 ಗಂಟೆಗೆ ಮೇಲ್ಕಂಡ ಕೋರ್ಟು ಮುಂದೆ ಹಾಜ್ರಾಗಿ ಉದಾಹರಿಸಿಕೊಳ್ಳತಕ್ಕದ್ದೆಂತಲೂ ತಪ್ಪಿದರೆ ನಿಮ್ಮನ್ನು ಶಿವ್ವಾ ಮಾಡಿ ಮುಂದುರಿಸಲಾಗುವುದೆಂತಲೂ ಕೋರ್ಟು ಹುಕುಂ ಪ್ರಕಾರ ನಿಮಗೆ ಈ ಮೂಲಕ ತಿಳಿಸೋಣಾಗುತ್ತದೆ.

(Sd.) P. Krishna Bhat,
Vakil for Petitioner.

ಪೊಕ್ಕಾಂ: ಪುತ್ತೂರು, 7—1—61.

ನವಯುಗಕ್ಕೆ
ಚಂದಾದಾರರಾಗಿ
ಪ್ರೋತ್ಸಾಹಿಸಿರಿ

ಇಂಡಿಯಾ ಇಂಡೆಕ್ಸ್ ಫಾರ್ ಸ್ಟಾರ್

ಇದು ನಿಮ್ಮ ದೇಶ;
ನೀವೇ ಇದರ ರಕ್ಷಕರು!

ನಿಮ್ಮ ಉಳಿತಾಯಗಳನ್ನು ಬೇಂಕುಗಳಲ್ಲಿ ಶೇಖರಿಸುತ್ತಲಿದ್ದು, ನಿಮ್ಮ ದೇಶದ ಎಲ್ಲಾ ಅಭ್ಯುದಯದ ಯೋಜನೆಗಳಿಗೂ ಆರ್ಥಿಕ ನೆರವು ನೀಡಿರಿ. ಬೇಂಕುಗಳು ನಿಮ್ಮ ಪರವಾಗಿ ನಿಮ್ಮ ದೇಶದ ಪ್ರತಿಯೊಂದು ಅಭಿವೃದ್ಧಿ ಯೋಜನೆಯಲ್ಲೂ ಸಹಕರಿಸುವುವಲ್ಲದೆ, ನಿಮ್ಮ ಹಣವು ನಿಮಗೆ ಬೇಕಾದಾಗ ಕೂಡಲೇ ನಿಮ್ಮ ಕೈಸೇರುವಂತೆ ನೋಡಿಕೊಳ್ಳುವುವು!

ನಿಮ್ಮ ಅಭ್ಯುದಯ; ನಿಮ್ಮ ದೇಶದ ಅಭ್ಯುದಯ— ಇವೆರಡನ್ನೂ
ಒಂದೇ ಪ್ರಯತ್ನದಿಂದ ಸಾಧಿಸಿರಿ!!

ನಿಮ್ಮ ಪ್ರಯತ್ನವು ಫಲಿಸುವಂತೆ ನಮ್ಮ ಪ್ರಜಾರಾಜ್ಯದ **12**ನೇ ಉತ್ಸವದ ಈ ಶುಭ ದಿನದಂದು
ನಾವು ಹಾರ್ದಿಕವಾಗಿ ಹಾರೈಸುತ್ತೇವೆ!!

ದಿ ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್

ಸ್ಥಾಪನೆ: 1906

ರಿಜಿಸ್ಟರ್ಡ್ ಆಫೀಸು : ಉಡುಪಿ, ಮೈಸೂರು ರಾಜ್ಯ

INDIA'S MOST DURABLE & ECONOMICAL

DIESEL TRUCK & BUS CHASSIS....

TATA - MERCEDES - BENZ

DIESEL TRUCKS & BUS CHASSIS

The Arvind Motors (Private) Ltd.,

BALMATTA ROAD :: MANGALORE.

LICENCE No. 31
Licensed to Post without Prepayment

ನಿಮ್ಮ ಮನೆ, ಆಫೀಸು, ಆಸ್ಪತ್ರೆಗಳ ಅಲಂಕಾರಕ್ಕಾಗಿ

"Khira"ರವರ ಉಕ್ಕಿನ "ಮಿಡ್ಜಟ್", "ಪೊಪ್ಯುಲರ್", "ಯುಟಿಲಿಟಿ"

ಎಂಬ ಮೂರು ನಮೂನೆಯ ಕಪಾಟುಗಳಲ್ಲದೆ ಇನ್ನು ದೊಡ್ಡದಾದ "ವಾರ್ಡ್ರೋಬ್" ಬರೆಯುವ ಮೇಜು, ಕುರ್ಚಿ, ಸೊಫಾ ಸೆಟ್ಟುಗಳು, ಮಂಚಗಳು – ಇತ್ಯಾದಿಗಳನ್ನು ಯಾವಾಗಲೂ ನೆನಸಿಕೊಳ್ಳಿರಿ—

ಭಾರತದ ಅದ್ಯಂತ ಸೊಫಾ ಹಾಸಿಗೆಯಲ್ಲಿ
ಒಂದು ಕ್ರಾಂತಿಯನ್ನೆ ಉಂಟುಮಾಡಿದೆ

ಅಲ್ಲದೆ

"ಖೀರಾ"ರವರ "ಕೆಪ್ಲೇಸ್"

ಮರದ ಫರ್ನಿಚರುಗಳು

ಅತ್ಯಂತ ಪ್ರಸಿದ್ಧಿ ಹೊಂದಿವೆ.

●

ಸೆಕೆಕಾಲಕ್ಕೆ ತಕ್ಕುದಾದ
"ಉಷಾ" ಟೇಬಲ್ ಮತ್ತು
ಸೀಲಿಂಗ್ ಫೇನುಗಳು

●

ಕಟ್ಟಡಗಳ ಭದ್ರತೆಗಾಗಿ ಮತ್ತು ಬಾಳ್ವಿಕೆಗಾಗಿ
"ಸ್ವಸ್ತಿಕ್"ರೋಲಿಂಗ್ "ಶಟರುಗಳು"

ಇತ್ಯಾದಿ.... ಇತ್ಯಾದಿ.... ಇತ್ಯಾದಿ....



Phone: 788

ಹೆಚ್ಚಿನ ವಿವರಗಳಿಗೆ:—

ಶಾಸ್ತ್ರಿ ಎಂಡ್ ಕಂಪೆನಿ

ಹಂಪನಕಟ್ಟೆ, ಮಂಗಳೂರು-1.

SHASTRY & COMPANY, MANGALORE—1.

Edited, Printed & Published by K. H. Shetty at the Navayuga Press, Udipi, S. India.

40th year of publication. 2-2-1961 ೪೦ನೇ ವರ್ಷ

ಸಂಪುಟ ೪೦ Vol. 40

ನವಯುಗ

ಸಂಚಿಕೆ ೨೧ No. 21

ಬೆಲೆ 0=13

NAVAYUGA KANNADA WEEKLY UDIPI

ಸ್ವಚಲಿತ ಪ್ರಸಂಗ

ರಾಣಿ ಎಲಿಜಬೆಥರಿಗೆ ಆದರದ ಸತ್ಕಾರ

ಬ್ರಿಟಿಷ್ ರಾಣಿ ಎರಡನೆ ಎಲಿಜಬೆಥರನ್ನು ಭಾರತೀಯರು ತುಂಬು ಹೃದಯದಿಂದ ಸ್ವಾಗತಿಸಿ ಗೌರವಿಸಿದರು, ಅವರ ಭಾರತ ಸಂದರ್ಶನವು ಈ ಎರಡು ರಾಷ್ಟ್ರಗಳ ಪೂರ್ವ ಮೈತ್ರಿಯನ್ನು ಚಿರಂತನಗೊಳಿಸಲು ನೆರವಾಗುವುದು.

ಬ್ರಿಟನ್ನಿನ ಮಹಾರಾಣಿ ಎಲಿಜಬೆಥರು ತಮ್ಮ ಪತಿ ಹಾಗೂ ಪರಿವಾರಗಳೊಡನೆ ಭಾರತವನ್ನು ಸಂದರ್ಶಿಸುತ್ತಿರುವುದು ಭಾರತ—ಬ್ರಿಟನ್‌ಗಳ ಇತಿಹಾಸದಲ್ಲಿ ಮಹತ್ವಪೂರ್ಣ ಘಟನೆ. ಹಾಗೆಯೇ ಈ ಭೆಟ್ಟಿಯಿಂದ ಉಭಯ ರಾಷ್ಟ್ರಗಳ ಮೇಲೆ ಬೀಳುವ ಪರಿಣಾಮವಾದರೂ ಅತ್ಯಧಿಕ: ಬ್ರಿಟನ್ ಒಂದು ಕಾಲದಲ್ಲಿ ಭಾರತದ ಒಡತಿಯೆನ್ನಿಸಿ ಮೆರೆದಾಡಿದ ದೇಶ. ಗಾತ್ರದಲ್ಲಿ ಕಿರಿದಾದರೂ ತನ್ನ ಶಕ್ತಿ ಯುಕ್ತಿಗಳ ಬಲದಿಂದ ವಿಶ್ವದಲ್ಲಿಯೇ ಸುವಿಸ್ತೃತ ಸಾಮ್ರಾಜ್ಯವನ್ನು ಕಟ್ಟಿದ ರಾಷ್ಟ್ರವದು. ಕಾಲಕ್ರಮದಲ್ಲಿ ವಸಾಹತುವಾದಕ್ಕೆ ಜನಬೆಂಬಲ ದೊರೆಯದಿರುವುದನ್ನೂ ಅದು ಕಡಿಮೆಯಾಗುತ್ತಿರುವುದನ್ನೂ ಗಮನಿಸಿ ತನ್ನ ವಸಾಹತುಗಳನ್ನು ಸ್ವತಂತ್ರ ರಾಷ್ಟ್ರಗಳೆಂದು ಮನ್ನಿಸಿ ತಾನು ಹೊರಗೆ ನಡೆದ ಉದಾತ್ತ ಭೂಮಿಯದು. ತನ್ನ ವಸಾಹತುಗಳು ಕೈಬಿಟ್ಟು ಹೋದರೂ ಅವುಗಳ ಉನ್ನತಿಗಾಗಿ ಅವುಗಳ ಒಲುಮೆಗಾಗಿ ಶಕ್ತ್ಯನುಸಾರ ಸೇವೆ ಸಲ್ಲಿಸುವ ಪಣತೊಟ್ಟ ದೊಡ್ಡ ರಾಷ್ಟ್ರವೆಂದರೆ ಬ್ರಿಟನ್. ಇಂದಿನ ಯುಗವಾಣಿಯನ್ನು ಆಲಿಸಿ, ಅದನ್ನು ಮನ್ನಿಸುವ ಉದಾರತೆ ಪ್ರದರ್ಶಿಸುವುದರಿಂದಲೇ ಅದರ ಹಿಂದಿನ ವಸಾಹತುಗಳು ಇಂದು ಸ್ವತಂತ್ರವಾದರೂ ಬ್ರಿಟನ್ನಿನ ಸಂಬಂಧವನ್ನು ಕಡಿದುಕೊಳ್ಳಲು ಬಯಸುವುದಿಲ್ಲ.

ನಮ್ಮ ಭಾರತವಾದರೂ ಕಂಪೆನಿ ಸರಕಾರದ ಕಪಿಮುಷ್ಟಿಯಿಂದ ಬ್ರಿಟಿಷ ರಾಜ—ರಾಣಿಯರ ಪ್ರಶಾಸನಕ್ಕೆ ಹಸ್ತಾಂತರಗೊಂಡರೂ ೧೯೦ ವರ್ಷಗಳ ಕಾಲ ಬ್ರಿಟಿಷರ ಕೃಪೆಯಿಂದಲೇ ಬೆಳೆದುಬಂದ ದೇಶ. ತನ್ನ ವಸಾಹತುಗಳಲ್ಲಿ ಅತಿ ವಿಸ್ತೃತವಾದ ಮತ್ತು ಅತ್ಯಧಿಕ ಜನಬಲವುಳ್ಳ ಭಾರತವನ್ನು ಬಿಟ್ಟುಕೊಡಲು ಮನಸ್ಸಿಲ್ಲವಾದರೂ ಆ ಸಂದರ್ಭದಲ್ಲಿ ಅತಿ ಉದಾರ ನೀತಿಯನ್ನು ಪ್ರದರ್ಶಿಸಿದುದರಿಂದಲೇ ಭಾರತವೀಗ ಸರ್ವತಂತ್ರ ಸ್ವತಂತ್ರವಾಗಿದೆ. ವಿಶ್ವದ ಉತ್ತಮ ರಾಷ್ಟ್ರಪಂಕ್ತಿಯಲ್ಲಿ ಗಣನೀಯ ಸ್ಥಾನವನ್ನು ಗಳಿಸಿದೆ. ಬ್ರಿಟನ್ ತನ್ನ ಪ್ರಶಾಸನ ಮುಷ್ಟಿಯಿಂದ ಹೊರಜಾರಿದ ಹಿಂದಿನ ವಸಾಹತುಗಳೊಡನಿರುವ ಮಧುರಸಂಬಂಧವನ್ನು ಕಡಿದುಕೊಳ್ಳುವುದಕ್ಕೆ ಸಿದ್ಧವಾಗದೆ, ಮೈತ್ರಿಯುತವಾಗಿಯೇ ನಡೆದುಕೊಳ್ಳುತ್ತಿದೆ. ಇದಕ್ಕಾಗಿಯೇ ಅದು 'ಬ್ರಿಟಿಷ್ ಕೋಮನ್‌ವೆಲ್ತ್' ಒಂದನ್ನು ಸ್ಥಾಪಿಸಿಕೊಂಡಿದೆ; ಇದರಡಿಯಲ್ಲಿ ಕಾಮನ್‌ವೆಲ್ತ್ ರಾಷ್ಟ್ರ ಸಂಕ್ತಿಗೆ ಸೇರಿದ ಎಲ್ಲ ರಾಷ್ಟ್ರ ನಾಯಕರೂ ತಂತಮ್ಮ ರಾಷ್ಟ್ರಗಳ ಸಮಸ್ಯೆಗಳನ್ನು ಚರ್ಚಿಸಿಕೊಂಡು ಪ್ರಗತಿಯ ಬಗ್ಗೆ ವಿಮರ್ಶಿಸುತ್ತಾರೆ. ಇದರಿಂದ ಈ ಕಾಮನ್‌ವೆಲ್ತ್ ರಾಷ್ಟ್ರಗಳಿಗೆ ಪರಸ್ಪರ ಲಾಭವಾಗುತ್ತಿದೆ.

'ಕಾಮನ್‌ವೆಲ್ತ್'ನ ರಾಣಿ ಬ್ರಿಟನ್ ಎಂದು ಹೇಳಿದರೆ ಅದು ಅತಿಶಯೋಕ್ತಿಯಾಗಲಾರದು. ಅದರ ಪ್ರತಿನಿಧಿಯಾಗಿ ಕಾಮನ್‌ವೆಲ್ತ್ ರಾಷ್ಟ್ರ ಭಾರತಕ್ಕೆ ಸೌಹಾರ್ದಮಯ ಸಂದರ್ಶನವಿತ್ತ ರಾಣಿ ಎಲಿಜಬೆಥರಿಗೆ ಸಲ್ಲಬೇಕಾದ ನ್ಯಾಯ ಸಮ್ಮತ ಗೌರವವನ್ನು ಉಚಿತ ರೀತಿಯಲ್ಲಿ ಭಾರತೀಯ ನಾಗರಿಕರು ಇತ್ತಿದ್ದಾರೆ! ರಾಣಿ ಎಲಿಜಬೆಥರು ರಾಜಕಾರಣ ನಿಮಿತ್ತದಿಂದ ಇಲ್ಲಿ ಬಂದವರಲ್ಲ. ತಮ್ಮ ಹಳೆಯ ಸಹಚರ ಇಂದು ಸ್ವತಂತ್ರರಾಗಿ ಜೀವಿಸುತ್ತಿರುವುದನ್ನು ಕಣ್ಣಾರೆಕಂಡು ಸಂತೋಷವನ್ನು ಪಡಲು ಆಗಮಿಸಿದವರಿವರು. ಸ್ವಾತಂತ್ರ್ಯ ಪ್ರಾಪ್ತಿಯಾದ ಈ ೧೪ ವರ್ಷಗಳಲ್ಲಿ ಭಾರತವು ಪಡೆದಷ್ಟು ಮಾಡಿದಷ್ಟು ಉನ್ನತಿ — ಪ್ರಗತಿಯನ್ನು ಜಪಾನ್ ಒಂದನ್ನುಳಿದರೆ ಮತ್ತಾವ ಏಶ್ಯನ್ ರಾಷ್ಟ್ರವೂ ಮಾಡಿಲ್ಲವೆಂಬ ಉಕ್ತಿಯನ್ನು ನಾವು ಸ್ಮರಿಸುವುದಾದರೆ, ಈ ಅದ್ಭುತ ಸವಾಡವನ್ನು ಕಣ್ಣಾರೆ ಕಂಡು ಆನಂದಿಸಲು ಮತ್ತು ಭಾರತೀಯರ ಸಾಧನೆಯಲ್ಲಿ ಅವರಿಗೆ ಯಶಸ್ಸು ದೊರೆಯಲೆಂದು ಹಾರೈಸಲು ಸಮಾಗಮಿಸಿದ್ದಾರೆ.

ಭಾರತ—ಬ್ರಿಟನ್‌ಗಳ ನಡುವೆ ಹಿಂದಿದ್ದ ಸೇವಕ—ಸ್ವಾಮಿ ಸಂಬಂಧವಿಂದು ಪೂರ್ವಾಗಿದೆ. ಉತ್ತಮ ಮಿತ್ರರಲ್ಲಿರಬಹುದಾದುದು ಮಾತ್ರವೇ ಈಗ ಬೆಳೆದು ಬರುತ್ತಿದೆ. ಬ್ರಿಟನ್ನಿನ ಮೇಲೆ ತಮಗಿರುವ ಮೈತ್ರಿಯುತ ಭಾವನೆಗೆ ಸರಿಯಾಗಿಯೇ ಭಾರತೀಯರು ರಾಣಿಗೆ ಸ್ವಾಗತ

(೧೨ನೇ ಪುಟ ನೋಡಿರಿ)

ಬ್ರಿಟಿಷ್ ರಾಣಿ ಎಲಿಜಬೆತ್ ಮತ್ತು ಅವಳ ಪತಿ ಡ್ಯೂಕ್ ಆಫ್ ಎಡಿನ್‌ಬರೋ.

ಮಂಗಳೂರಲ್ಲಿ ಈಗಾಗಲೇ ತೆರೆಯಲ್ಪಟ್ಟು ಪ್ರಗತಿಯಿಂದ ಮುಂದೆ ಸಾಗುತ್ತಿರುವ ಇನ್ನೊಂದು ಪ್ರಸಿದ್ಧ ಜವುಳಿ ಮಳಿಗೆ—

ಸಾರೀ ಎಂಪೋರಿಯಮ್

ಕೆಥೊಲಿಕ್ ಕ್ಲಬ್ಬಿನ ಎದುರು, ಹಂಪನಕಟ್ಟಾ, ಮಂಗಳೂರು-1

ನಿಮ್ಮ ಉತ್ತಮ ಆಯ್ಕೆಗೆ ಯೋಗ್ಯವೆಂದೆನಿಸಿದ ರೇಶ್ಮೆ ಸೀರೆಗಳೂ, ಹತ್ತಿ ನೂಲಿನ ಸೀರೆಗಳೂ ಸರ್ವೋತ್ಕೃಷ್ಟವಾಗಿವೆ, ಯಾವತ್ತೂ ತರದ ಶರ್ಟಿಂಗ್, ಕೋಟಿಂಗ್, ಚಿಂಟ್ಸ್, ಸಿಲ್ಕ್. ನೈಲಾನ್ ಇತ್ಯಾದಿ ಬಟ್ಟೆಬರೆಗಳಿಗೂ ಸಂದರ್ಶಿಸಿರಿ —

SAREE EMPORIUM

Opposit Catholic Club,
HAMPANKATTA, MANGALORE—1.

ESTD. 1921

NAVAYUGA
KANNADA WEEKLY,
UDIPI.

Founder:
Late Sri A. B. Shetty,
Former Minister for Public Health, Govt. of Madras & Govt. of Mysore.

ನವಯುಗ

ಪ್ರತಿ ಗುರುವಾರ
ಉಡುಪಿಯಿಂದ ಹೊರಡುವ
ರಾಷ್ಟ್ರೀಯ ವಾರಪತ್ರಿಕೆ

ಸ್ಥಾಪನೆ: ೧೯೩೧.

ಗೌರವ ಸಂಪಾದಕರು:
ಎಸ್. ಗೋಪೀಚಂದ ರಾವ್, ವಿದ್ವಾನ್.
ಬಿ. ರಾಮರಾಯ ಶೆಟ್ಟಿ, ಬಿ. ಎ., ಎಲ್. ಟಿ.

ಸಂಚಾಲಕ ಸಂಪಾದಕರು:
ಕೆ. ಹೊನ್ನಯ್ಯ ಶೆಟ್ಟಿ.

ಚಾಹೀರಾತು ದರಗಳು:
ಸಿಮುಹಿತ (ಕಂಟ್ರಾಕ್ಟ್)
ಕಲಂ ಇಂಚಿಗೆ ರೂ. 2-50
ಆಕಸ್ಮಿಕ (ಕೆಜುವಲ್)
ಕಲಂ ಇಂಚಿಗೆ ರೂ. 3-50
ಹೆಚ್ಚಿನ ವಿವರಗಳಿಗೆ ವ್ಯವಹರಿಸಿರಿ.

ಚಂದಾ:
ವಾರ್ಷಿಕ ಚಂದಾ (ಅಂಚೆವೆಚ್ಚ ಸೇರಿ) ರೂ. 6-75
ಪ್ರತಿ ಪ್ರತಿ ರೂ. 0-13

ಚಂದಾಹಣವನ್ನಾಗಲೀ ಚಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬೇಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ'ದ ಖಾತೆಗೆ ಜಮೆ ಮಾಡುವಸೌಕರ್ಯವಿರುವುದು.

ಕಥಾವಿಹಾರ

ಕಣ್ಣೀರ ಕೋಡಿ ಯಾರಿಗಾಗಿ?

ಮೆಚ್ಚಿದುದನ್ನು ಕೈಬಿಟ್ಟು ಮೆಚ್ಚದುದರ ಕೈಹಿಡಿಯಬಯಸಿದರೆ, ಇಬ್ಬರೂ ಲೋಕದಿಂದ ದೂರಹೋದರು. ಆತನೇನೋ ಸುರಿಸಿದ ಕಣ್ಣೀರ ಕಾಲುವೆ ಯಾರಿಗಾಗಿ? ಜನಕ್ಕಾಗಿಯೆ? ಅಥವಾ ಹಣಕ್ಕಾಗಿಯೆ?

ಶ್ರೀ ಚಂದ್ರಶೇಖರ ಪುರುಳಿ.

ನನ್ನ ಆಪ್ತರು, ಮಿತ್ರರು ಕೂಡಿ, ಮನೋಹರ ಸಾಹುಕಾರರ ಮಗಳಾದ ವಿಜಯಾಳ ಸಂಗಡ ಮದುವೆ ಮಾಡುವದಾಗಿ ನಿಶ್ಚಯಿಸಿದರು. ನನಗೆ ವಿಜಯಾಳ ಸಂಗಡ ಮದುವೆಯಾಗುವದು ಇಷ್ಟವಿರಲಿಲ್ಲ. ಅವಳ ಸಂಗಡ ಮದುವೆಯಾಗದೆ ಗತ್ಯಂತರವೇಯಿಲ್ಲ! ಅದು ಯಾಕೆ ಗೊತ್ತೇ?

ಎಲ್‌ಎಲ್. ಬಿ. ಕಲಿಯಲು ನನಗೆ ದುಡ್ಡು ಬೇಕಾಗಿತ್ತು. ಅಷ್ಟು ದುಡ್ಡು ಕೊಟ್ಟು ಓದಿಸುವಷ್ಟು ಸಾಮರ್ಥ್ಯ, ನನ್ನ ಆಪ್ತರಿಗಿರಲಿಲ್ಲ. ಅವರ ಹತ್ತಿರ ಒಂದೆರಡು ಸಲ ಹಣ ಕೇಳಿದಾಗ—"ಮನೋಹರರ ಮಗಳನ್ನು ವಿವಾಹವಾದಲ್ಲಿ, ನಿನಗವರು ಕಲಿಯಲು ದುಡ್ಡು ಕೊಡುವರು" ಎಂದಿದ್ದರು. ನನಗೂ ಎಲ್‌ಎಲ್. ಬಿ. ಮುಗಿಸಲೇಬೇಕೆಂದು ಆತುರತೆ!

ಆ ಆತುರತೆಗಾಗಿ ಹಿಂದೆ, ಮುಂದೆ, ವಿಚಾರಿಸದೇ, ಅವರ ವಿಚಾರಕ್ಕೆ ಒಪ್ಪಿಗೆ ಕೊಟ್ಟೆ. ಹುಡುಗಿ ಎಂಥವಳು? ಅವಳ ನಡುವಳಿಕೆ ಹೇಗೆ? ಎಂದು ವಿಚಾರಿಸಲೇ ಇಲ್ಲ ನಾನು. ನನಗೆ ಬೇಕಾದದ್ದು ಅವರು ಎಲ್‌ಎಲ್.ಬಿ. ವರೆಗೆ ಓದಿಸುವದು.

ಮದುವೆಯ ದಿನವನ್ನು ನಿರ್ಧರಿಸಿ, ಮದುವೆಯ ಕಾಗದವನ್ನು ಹಂಚಿಬಿಟ್ಟರು.

ಅಂದು ನನ್ನ ಮಿತ್ರರಿಗೆ ಮದುವೆಯ ಪತ್ರ ಕಳುಹಿಸಬೇಕೆಂದು, ಅದರ ಮೇಲೆ ವಿಳಾಸ ಬರೆಯಲು ಪ್ರಾರಂಭ ಮಾಡಿದೆ. ಇನ್ನು ಹಲಕೆಲ ಮಿತ್ರರ ವಿಳಾಸ ಗಡುಜಾಗಿರುವದರಿಂದ, ಡಾಯರಿಯಲ್ಲಿ ಹುಡುಕುವಾಗ ಒಂದು ಭಾವ ಚಿತ್ರ ನನ್ನ ಕೈಗೆ ತಗಲಿತು!

ಹೌದು!

ಅದೇ ಭಾವಚಿತ್ರ!!

ನನ್ನ ಮುದ್ದು ಇಂದುಮತಿಯದು!!!

ಆ ಚಿತ್ರ ಕಂಡೊಡನೆ ನನ್ನ ಕಣ್ಣುಗಳಲ್ಲಿ ನೀರೂರಿದವು. ಇಂದುಮತಿಗೆ ನಾನಾವ ಮುಖ ತೋರಿಸಲಿ? ವಚನ ಭ್ರಷ್ಟನ ಮುಖ ಹೇಗೆ ನೋಡಬಹುದು ಆ ವಳು? ನನ್ನ ಮದುವೆಯ ಕಾಗದ ತಲುಪಿದಾಗ ಅವಳಿಗೆಷ್ಟು ದುಃಖವಾಗಿರಬಾರದು? ಖಂಡಿತ ಆಗುತ್ತದೆ ಅವಳಿಗೆ.

ಚಿಕ್ಕಂದಿನಿಂದಲೂ ಅವಳು ನನ್ನ ಹಿತಬಯಸುತ್ತ ಬಂದವಳು. ಚಿಕ್ಕವನಿರುವಾಗ ಮರದ ಮೇಲಿಂದ ಬಿದ್ದು, ಕೈ ಮುರಿದಾಗ, ತುತ್ತುಮಾಡಿ ಉಣ್ಣಿಸಿದ್ದಳು ಅವಳು. ನನ್ನ ತಂದೆ—ತಾಯಿಯ ನೆನಪು ಬಂದು, ದುಃಖಿಸುತ್ತಿರುವಾಗ ಉಪದೇಶ ಹೇಳಿ ಮರೆಸಿದ್ದಳು ಅವಳು. ಕಣ್ಣೀರು ಸುರಿಸುವಾಗ ಮೃದುವಾದ ಕೈಯಿಂದ ವರೆಸಿದ್ದಳು ಅವಳು. "ನಿನ್ನ ಹೊರತಾಗಿ ಮದುವೆ ಮಾಡಿಕೊಳ್ಳಲಾರೆ" ಎಂದು ವಚನವಿತ್ತಿದ್ದೆ ನಾನು. "I may live without air and water; But not without you" ಎಂದು ಹೇಳಿದ್ದೆ ನಾನು!

ಈಗ?

ಕಲಿಯುವದಕ್ಕೋಸ್ಕರ ಮದುವೆ ಮಾಡಿಕೊಳ್ಳಬೇಕು!

ಈ ವಿಷಯವನ್ನರಿತಾದರೂ ಕೂಡ ಕ್ಷಮಿಸಬಹುದೇ?....?....? ಅವಳು! ಎಂದು ವಿಚಾರ ತರಂಗದಲ್ಲಿ ಮುಳುಗಿ ದಂಡೆ ಸಿಕ್ಕದೇ, ಕೈಯೂರಿ ಕುಳಿತಾಗ—

"ಟಪಾಲಕಽಽ..."

—ಎಂದು ಅಂಚೆಯವ ತನ್ನ ಕರ್ತವ್ಯದಂತೆ ಓಲೆ ಬೀಸಿದ.

ಆ ಕಾಗದ ನನ್ನ ಮೇಜನ ಮೇಲೆ ಬಿದ್ದಿತು. ಅದು ಇಂದೂಳ ಪತ್ರ! ಅವಳು



ಕತೆಗಾರರು.

* * *

ಈ ಪತ್ರದಲ್ಲಿ ನನ್ನನ್ನು ಕ್ಷಮಿಸಿಬಹುದೇ? ಹಾಗಾದರೆ ಏನು?? ಎಂದು ಅಸಮಾಧಾನದಿಂದ ಕಾಗದ ಹರಿಯಲಿಕ್ಕೆ ತಾನೇ ಕೈ ಮುಂದಾಯಿತು.

—ನನ್ನ ಪ್ರೀತಿಯ ಶೇಖರ

ನೂರು ಸಲ ನಮಸ್ಕಾರ

ನಿನ್ನ ಮದುವೆಯ ಕಾಗದ ಕಂಡೆ! ಎಲ್ಲರೂ ಮದುವೆಯ ದಿನ ಶುಭಾಶಯ ಕಳುಹಿಸುತ್ತಾರೆ. ಆದರೆ, ನಾನು ಮಾತ್ರ ಎರಡು ದಿನ ಮುಂಚೆತವಾಗಿ ಶುಭಾಶಯ ಕಳಿಸಿದ್ದೇನೆ.

ನಾನು ದೇವರಲ್ಲಿ ಏನು ಪ್ರಾರ್ಥಿಸುತ್ತೇನೆ ಗೊತ್ತೇ?

ನಿಮ್ಮ ಮದುವೆ ವೈಭವದಿಂದಾಗಲಿ! ನಿಮ್ಮ ಪತಿ-ಪತ್ನಿಯರ ಬಾಳು ಬಾಳ ಕಡಲಲ್ಲಿ ಸುಗಾಗವಾಗಿ ಸಾಗಲಿ! ನೂತನ ವಧೂವರರಿಗೆ ದೇವರು ಆಶೀರ್ವಾದವನ್ನಿತ್ತು ಸುಖಮಾರ್ಗದಲ್ಲಿ ನಡೆಸಲಿ! ಎಂದು.

ನಾನು ಹೀಗೆ ಹೊಟ್ಟೆಕಿಚ್ಚಿನಿಂದ ಬರೆದಿರುವೆ ಎಂದು ಮಾತ್ರ ಭಾವಿಸಿಕೊಳ್ಳಬೇಡಿ; ವಿಜಯಾಳೂ ನನ್ನ ಸೋದರಿ ಎಂದು ಭಾವಿಸಿದ್ದೇನೆ. ಆ ಸೋದರಿಗೆ ಎರಡು ಬಗೆದರೆ, ಆ ದೇವರು ಮೆಚ್ಚುವನೇ? ಇಲ್ಲ. ನಾನು ತುಂಬಾ ಹೃದಯದಿಂದ ಬರೆದಿದ್ದೇನೆ ಅಷ್ಟೇ!

ಇನ್ನೊಂದು ವಿಷಯ ನಿಮಗಾಗಿ ಬರೆಯುತ್ತಿದ್ದೇನೆ. ನಿಮ್ಮ ಹಾಗೆ ನನ್ನ ದೇಹ ಮತ್ತೊಬ್ಬರಿಗೆ ಅರ್ಪಿಸಲಾರೆ. ಆದೇಹ ನಿಮಗಾಗಿ ಮುಡುಪಾಗಿರಿಸಿದ್ದು. ಪರರಿಗೆ ಒಪ್ಪಿಸಲು ಸಿದ್ಧಳಲ್ಲ. ಪರರಿಗೆ ಒಪ್ಪಿಸಿದರೆ, ನಿಜವಾದ ಪತಿವ್ರತೆಯಾಗಲಿಲ್ಲ. ನಾನು ಮಾತ್ರ ಪತಿವ್ರತೆಯಾಗಬೇಕೆಂದಿದ್ದೇನೆ! ಹೀಗೆಂದ ಮಾತ್ರಕ್ಕೆ, ನಾನು ನಿಮ್ಮ ಮದುವೆಗೆ ಆತಂಕ ಬರಬಹುದೆಂದು ಭಾವಿಸಬಹುದು! ಹಾಗೆ ನೀವು ಭಾವಿಸಿದ್ದರೆ, ಅದು ಶುದ್ಧ ತಪ್ಪು! ನೀವು ಅವಳ ಜೊತೆ ಮದುವೆ ಆಗಲೇಬೇಕು.

ಪುರುಷ ಒಂದು ಮುಟ್ಟಿ, ಇನ್ನೊಂದು ಮುಟ್ಟಿದರೂ ನಡೆಯುತ್ತದೆ. ಯಾಕೆಂದರೆ, ಆತ ಪುರುಷ! ಅದೇ ಹೆಂಗಸು

(೧೧ನೇ ಪುಟ ನೋಡಿರಿ)

ಸ್ಥಾಪನೆ: 1924

ದಿ ಕರ್ನಾಟಕಬೇಂಕ್ ಲಿಮಿಟೆಡ್

(ಶೆಡ್ಯೂಲ್ಡ್ ಬೇಂಕ್)

ಪ್ರಧಾನ ಆಫೀಸು: ಮಂಗಳೂರು—3.

ಈ ಕೆಳಗಿನ ಬಡ್ಡಿದರಗಳಲ್ಲಿ ಶೇವಣಾತಿಗಳನ್ನು ಸ್ವೀಕರಿಸಲಾಗುವುದು.

ಒಂದು ತಿಂಗಳಿಗೆ	.... ಸಾ||	ಸೇಕಡಾ 3-75	ನ.ಪೈಸೆ
ಮೂರು ತಿಂಗಳುಗಳಿಗೆ	....	,,	4-00	,,
ಆರು ತಿಂಗಳುಗಳಿಗೆ	....	,,	4 25	,,
12 ತಿಂಗಳುಗಳಿಂದ23 ತಿಂಗಳುಗಳ ವರೆಗೆ	....	,,	4-50	,,
24 ತಿಂಗಳುಗಳಿಂದ 48 ತಿಂಗಳುಗಳ ವರೆಗೆ	....	,,	4-75	,,

"ಹನಿ ಡಿಪೋಸಿಟ್ಸ್" ನಲ್ಲಿ
ನಿಮ್ಮ ದೈನಂದಿನ ಉಳಿತಾಯವನ್ನು ವಿನಿಯೋಗಿಸಿರಿ.

THE KARNATAKA BANK LIMITED.



ವಿಚಾರವರ್ಷ

ಗ್ರಹಗಳ ಹುಟ್ಟನ್ನು ಕುರಿತು ಹೊಸ ಸಿದ್ಧಾಂತ

ನಾವು ವಾಸವಾಗಿರುವ ಭೂಮಿಯು ಹುಟ್ಟಿಕೊಂಡು ಎಷ್ಟು ವರ್ಷವಾಯಿತು, ಅದಿನ್ನು ಈಗಿನ ರೂಪದಲ್ಲಿ ಇನ್ನೆಷ್ಟು ಸಮಯವಿದ್ದೀತು ಎಂಬುದರ ಬಗ್ಗೆಯೂ ರಶ್ಯನ್ ಶಾಸ್ತ್ರವೇತ್ತರು ಗಮನ ಹರಿಸಿದ್ದಾರೆ. ಸೋವಿಯತ್ ಶಾಸ್ತ್ರಜ್ಞ ಶ್ರೀ ಬೋರಿಸ್ ಲೆವೆನ್ಸರ ಪುಸ್ತಕದ ಸಾರಾಂಶವನ್ನು ನೀಡಿದ ಶ್ರೀ ಎಂ ರಂಗ ರಾವ್‌ರವರ ಲೇಖದ ಅಂತಿಮ ಭಾಗವಿದು.

ಲೇಖಾಂಕ ೯: ಭೂಮಿಯ ವಯಸ್ಸು

ರೇಡಿಯೋ ಪದಾರ್ಥ

೧೮ನೇ ಶತಮಾನದಲ್ಲಿ ಒಬ್ಬ ಫ್ರೆಂಚ್ ಶಾಸ್ತ್ರವೇತ್ತನು ಕಬ್ಬಿಣದ ಗುಂಡುಗಳು ತಣ್ಣಗಾಗುವ ವಿಧಾನವನ್ನು ಪರಿಶೀಲಿಸಿ, ಭೂಮಿಯ ವಯಸ್ಸು ೭೦,೦೦೦ ವರ್ಷಗಳೆಂದು ಅಂದಾಜು ಮಾಡಿದನು.

೧೯ನೆಯ ಶತಾಬ್ದದಲ್ಲಿ ಶಾಸ್ತ್ರವೇತ್ತರು ಶಿಲೆಯ ಪದರುಗಳ ದಪ್ಪವನ್ನು ಅಳೆದೂ, ಸಮುದ್ರದಲ್ಲಿ ಬೆರೆತ ಉಪ್ಪಿನ ಭಾಗಗಳನ್ನು ಲೆಕ್ಕ ಹಾಕಿಯೂ ಭೂಮಿಯ ವಯಸ್ಸು ಅನೇಕ ಕೋಟಿ ವರ್ಷಗಳೆಂದು ನಿರ್ಣಯ ಮಾಡಿದರು. ೨೦ನೆಯ ಶತಮಾನದಲ್ಲಿ ಭೂಮಿಯ ವಯಸ್ಸನ್ನು ನಿರ್ಧರಿಸಲಿಕ್ಕೆ ಶಾಸ್ತ್ರವೇತ್ತರಿಗೆ ರೇಡಿಯೋ ಪದಾರ್ಥಗಳು ಆಧಾರಭೂತವಾದುವು.

ರೇಡಿಯೋ ಪದಾರ್ಥಗಳ ವಿಚ್ಛಿನ್ನತೆ, ಉಷ್ಣತೆ ಮತ್ತು ಒತ್ತಡಗಳ ಪ್ರಮೇಯವೇ ಇಲ್ಲದೆ, ಸರ್ವಕಾಲ ಸರ್ವಾವಸ್ಥೆಗಳಲ್ಲಿಯೂ ಒಂದೇ ವೇಗದಿಂದ ಸಾಗುತ್ತದೆ. ಅಲ್ಲದೆ ಈ ವಿಚ್ಛಿನ್ನತಾ ಕಾರ್ಯ ಕೋಟಿಗಟ್ಟಲೆ ವರ್ಷಗಳಲ್ಲಿ ಹೊರತು ನಡೆಯುವುದಿಲ್ಲ. ಆದುದರಿಂದಲೇ ಭೂಮಿ ಹುಟ್ಟಿದ ಅನಂತರ ಇನ್ನೂ ಈ ಪದಾರ್ಥಗಳು ಲಭ್ಯವಾಗುತ್ತಾ ಇವೆ.

ಒಂದು ಶಿಲೆಯನ್ನು ತೆಗೆದುಕೊಂಡು ಅದರಲ್ಲಿ ರೇಡಿಯೋ ಪದಾರ್ಥವು ಎಷ್ಟಿದೆ? ಅದು ವಿಚ್ಛಿತ್ತಿ ಹೊಂದಲಾಗಿ ಉಳಿದುಕೊಂಡಿರುವ ಪದಾರ್ಥವು ಎಷ್ಟಿದೆ? ಇವುಗಳನ್ನು ಅಳೆದು ಹಿಡಿದುಕೊಂಡುದಾದರೆ, ಆ ಶಿಲೆ ಎಷ್ಟು ಕಾಲದಿಂದ ಇದೆ ಎಂಬುದು ಗೊತ್ತಾಗುತ್ತದೆ. ಆದರೆ ಈ ವಿಧಾನದ ಲೆಕ್ಕದಲ್ಲಿ ಕೂಡಾ ಸಿಕ್ಕುಗಳುಂಟು. ಒಂದು ಸಿಕ್ಕು ಏನೆಂದರೆ, ರೇಡಿಯೋ ಪದಾರ್ಥದ ಅಣುಗಳನ್ನು ಎಣಿಸಬೇಕಾಗಿ ಬರುತ್ತದೆ. ಇನ್ನೊಂದು ಸಿಕ್ಕು ಏನಂದರೆ, ನಾವು ಪರಿಶೀಲಿಸುವ ಮಾದರಿಗೆ ಸೇರಿದ ಪದಾರ್ಥಗಳು ಪರಿಸರ ಪದಾರ್ಥಗಳ ಪ್ರಭಾವಗಳಿಗೆ ಗುರಿಯಾಗಿರಿಬಹುದು. ಅದರಲ್ಲಿ ಉಳಿದು ಹೋಗಿರುವ ಸೀಸವು—ಅಥವಾ ಇತರ ಪದಾರ್ಥವು—ಕೇವಲ ರೇಡಿಯೋ ಪದಾರ್ಥ ವಿಚ್ಛಿತ್ತಿಯಿಂದಲೇ ಏರ್ಪಟ್ಟದಾಗಿರಬೇಕು. ಉ ತೊಂದರೆಗಳೆಲ್ಲವನ್ನೂ ಅಧಿಗಮಿಸಿಕೊಂಡು, ಶಾಸ್ತ್ರವೇತ್ತರು ತಾವು ಪರೀಕ್ಷಿಸಿದ ರೇಡಿಯೋ ಪದಾರ್ಥಗಳಲ್ಲಿ ಹೆಚ್ಚು ವಯಸ್ಸಿಂದರೆ, ೨೦೦೦ರಿಂದ ೩೫೦ ಕೋಟಿ ವರ್ಷ ವಯಸ್ಸುಳ್ಳುವೆಂದು ನಿರ್ಧರಿಸಿರುತ್ತಾರೆ. ಆದರೆ ಇತ್ತೀಚೆಗೆ ೩೦೦ ಕೋಟಿ ವಯಸ್ಸುಳ್ಳ ರೇಡಿಯೋ ಪದಾರ್ಥಗಳು ಸಿಕ್ಕಿವೆ.

೧೯೪೦ನೇ ಪ್ರಾಂತದಲ್ಲಿ ಹೋಮ್ಸ್ ಎಂಬ ಬ್ರಿಟಿಷ್ ಶಾಸ್ತ್ರವೇತ್ತನು ಸೀಸವನ್ನು ಬೇರೆ ಬೇರೆ ಸ್ಥಳಗಳಲ್ಲಿ ಅಂದರೆ, ಕಚ್ಚಾ ಪದಾರ್ಥವಾಗಿ ದೊರಕಿದ ಸ್ಥಳಗಳಲ್ಲಿ ಮತ್ತು ರೇಡಿಯೋ ಪದಾರ್ಥಗಳ ಶೇಷವಾಗಿ ದೊರಕಿದ ಸ್ಥಳಗಳಲ್ಲಿ, ಪರಿಶೀಲನೆ ಮಾಡಿ, ಭೂಮಿಯ ವಯಸ್ಸು ೩೫೦ ಕೋಟಿ ವರ್ಷಗಳೆಂದು ನಿರ್ಣಯಿಸಿದನು. ಆದರೆ ಹೋಮ್ಸನ ಅಭಿಪ್ರಾಯ ಭೂಮಿ ಉರಿದು ತಣಿದ ಗೋಳವೆಂಬುದೇ. ಅದರ ಮೇಲಿನ ಪರೆಯ ವಯಸ್ಸಿಗೂ, ಭೂಮಿಯ ವಯಸ್ಸಿಗೂ ಹೆಚ್ಚಿನ ವ್ಯತ್ಯಾಸವಿಲ್ಲವೆಂದು ಆತ ಹೇಳಿದನು.

೧೯೫೦—'೫೨ರಲ್ಲಿ ವಿನೋಗ್ರಡೋವ್ ಎಂಬ ಸೋವಿಯೆಟ್ ಶಾಸ್ತ್ರವೇತ್ತನು ಸೀಸವನ್ನು ಮಾತ್ರವೇ ತೆಗೆದುಕೊಂಡು ಪರಿಶೀಲಿಸಿ ಭೂಮಿಯ ಮೇಲ್ಪರೆಯ ವಯಸ್ಸನ್ನು ಹೇಳುವುದು ಕಷ್ಟವೆಂದೂ, ಏನಾದರೂ ಅದರ ವಯಸ್ಸು ೫೦೦ ಕೋಟಿ ವರ್ಷಗಳಿಗೆ ಮೀರಲಾರದೆಂದೂ ಹೇಳಿದನು.

ಭೂಮಿಯ ಮೇಲ್ಪರೆಯ ವಯಸ್ಸಿಗಿಂತಲೂ ಭೂಮಿಯ ವಯಸ್ಸು ಹೆಚ್ಚೆನ್ನಲು ಯಾವ ಸಂದೇಹವೂ ಇಲ್ಲ. ರೇಡಿಯೋ ಪದಾರ್ಥಗಳ ಪರಿಶೀಲನೆಯಿಂದ ಆ ವಯಸ್ಸನ್ನು ನಿರ್ಧರಿಸಲು ಸಾಧ್ಯವಿಲ್ಲ. ಅದರಿಂದ ನಮಗೆ ತಿಳಿಯುವುದೆಲ್ಲಾ ಏನೆಂದರೆ, ಭೂಮಿಯಲ್ಲಿ ಸೇರಿರುವ ಪದಾರ್ಥದಲ್ಲಿ ಹೊಸ ರೇಡಿಯೋ ಪದಾರ್ಥವೇ ಏರ್ಪಡುವ ಕಾರ್ಯ ನಿಂತುಹೋಗಿ ಎಷ್ಟು ನೂರು ವರ್ಷಗಳಾದುವೆಂಬುದು ಮಾತ್ರವೇ ಸರಿ.

ಭೂತಕಾಲದ ಅಂದಾಜು

ಯುರೇನಿಯಂನಲ್ಲಿ ಎರಡು ಬಗೆಗಳಿವೆ. ಒಂದರ ಪರಮಾಣು ಭಾರ ೨೩೮. ಎರಡನೆಯದರದು ೨೩೮. ಯುರೇನಿಯಂ ೨೩೮ ಹೆಚ್ಚಿನ ವೇಗದಿಂದ ವಿಚ್ಛಿತ್ತಿಯಾಗುತ್ತದೆ. ಅದಕ್ಕೇ ಅದು ಯುರೇನಿಯಂ ೨೩೮ರಲ್ಲಿ ೧೯೯ನೆಯ ಒಂದಂಶದಷ್ಟು ಮಾತ್ರವೇ ಲಭ್ಯವಾಗುತ್ತದೆ. ಆದಿಯಲ್ಲಿ ಈ ಎರಡುಬಗೆಯ ಯುರೇನಿಯಂಗಳೂ ಹೆಚ್ಚು ಕಡಮೆ ಸಮಪಾಲಿನಲ್ಲೇ ಸೃಷ್ಟಿಯಾದುವೆಂದು ಕೇಳಬಹುದು. ಸಿದ್ಧಾಂತ ರೀತ್ಯಾ ಇನ್ನೊಂದು ವಿಧವಾಗಿ ನಡೆಯಿತೆನ್ನುವ ಅಗತ್ಯವೂ ಇಲ್ಲಿಲ್ಲ. ಒಂದು ಕಾಲದಲ್ಲಿ ಸಮಪಾಲಿನಲ್ಲಿದ್ದ ಈ ಇಬ್ಬಗೆಯ ಯುರೇನಿಯಂಗಳಲ್ಲಿ ಒಂದು ಎರಡನೆಯದಕ್ಕಿಂತ ೧೯೯ನೆಯ ಪಾಲಿನಷ್ಟು ಕಡಮೆಯಾಗಲು ಎಷ್ಟು ಕಾಲ ಹಿಡಿಯಿತೆಂದು ಅಂದಾಜು ಕಟ್ಟಬಹುದು. ಅದು ೫೦೦ರಿಂದ ೭೦೦ ಕೋಟಿ ವರ್ಷಗಳಷ್ಟು ಬೀಳುತ್ತದೆ.

ತನ್ನ ಸಿದ್ಧಾಂತದಂತೆ ಭೂಮಿಯ ವಯಸ್ಸನ್ನು ಕುರಿತು ಪ್ರಿಸ್ಟಾ ಈ ವಿಧವಾಗಿ ಅಂದಾಜು ಮಾಡಿದ್ದಾನೆ.

ಸುತ್ತು ಮುತ್ತಿನ ಮೇಘದಲ್ಲಿ ಪದಾರ್ಥವು ಹೆಚ್ಚಾಗಿದ್ದ ದಶೆಯಲ್ಲಿ ಗ್ರಹಗಳು ವೇಗದಿಂದ ಹರಿದಾಡುವು. ಈ ಪದಾರ್ಥವು ಕಡಮೆಯಾದಂತೆ ಗ್ರಹಗಳ ಹಿಗ್ಗುವಿಕೆಯ ವೇಗವು ತಗ್ಗಿತು. ಈಗ ಗ್ರಹಗಳ ಹಿಗ್ಗುವಿಕೆ ಸುಮಾರಾಗಿ ನಿಂತು ಹೋಯಿತೆಂದೇ ಹೇಳಬೇಕು. ಈಗಲೂ ಭೂಮಿಯ ಮೇಲೆ ಉಲ್ಕೆಗಳು ಬೀಳುವ ಮಾತು ನಿಜವೇ. ಭೂಮಿಯ ಸುತ್ತಲೂ ಇರುವ ವಾತಾವರಣದೊಳಗೆ ದಿನಾ ಕೆಲವು ನೂರು ಟನ್ನು ಭಾರವುಳ್ಳ ಉಲ್ಕೆಗಳು ಪ್ರವೇಶಿಸಿ ಮಸಿಯಾಗಿ ಹೋಗಿ, ಆ ಮಸಿ ವಾತಾವರಣದೊಳಗೆ ವ್ಯಾಪಿಸಿಕೊಂಡೇ ಇದೆ. ಆದರೂ ಭೂಮಿಯ ಭಾರವನ್ನಾಗಲೀ, ಪ್ರಮಾಣವನ್ನಾಗಲೀ ಹೇಳಿಕೊಳ್ಳುವಷ್ಟು ಅವು ಹೆಚ್ಚಿಸಲಾರವು. ಭೂಮಿಯ ಮೇಲ್ಪರೆಯ ದಪ್ಪವು ಆ ಮಸಿಯ ಧೂಳಿಯಿಂದ ಒಂದು ಮಿಲ್ಲಿ ಮೀಟರಿನಷ್ಟು ಬೆಳೆಯಲಿಕ್ಕೆ ಅನೇಕ ಲಕ್ಷ ವರ್ಷಗಳು ಬೇಕು.

ಈಗ ಭೂಮಿಯಲ್ಲಿ ಸೇರಿರುವ ಪದಾರ್ಥದಲ್ಲಿ ೬೦೦ ಕೋಟಿ ವರ್ಷಗಳ ಕೆಳಗೆ ರೇಡಿಯೋ ಪದಾರ್ಥಗಳ ಸಂಬಂಧದ ಪರಮಾಣು ಕೇಂದ್ರಗಳು ಏರ್ಪಡುವಂಥ ಪರಿಸ್ಥಿತಿಯುಂಟಾಯಿತು. ಆ ತರುವಾಯ ಕೆಲವು ಕೋಟಿ ವರ್ಷಗಳ ವರೆಗೆ ಈ ಪದಾರ್ಥವು ನಮಗಿನ್ನೂ ಗೊತ್ತಾಗದಿರುವ ಪರಿಣಾಮಗಳಿಗೆ ಗುರಿಯಾಗಿ, ಕೊನೆಗೆ ಸೂರ್ಯನ ಸುತ್ತಲೂ ಒಂದು ಮೇಘವಾಗಿ ಏರ್ಪಟ್ಟಿತು. ಆ ಮೇಘದಿಂದ ಬೇಗದಲ್ಲಿಯೇ ಭೂಮಿಯಾದುತ್ತು ಇತರ ಗ್ರಹಗಳು ಹುಟ್ಟಿದುವು.

ರೇಡಿಯೋ ಪದಾರ್ಥವು ವಿಚ್ಛಿನ್ನತೆಯೊಂದಿಗೆ ಬಿಡುಗಡೆಮಾಡಿದ ಉಷ್ಣವು, ಈ ಪದಾರ್ಥವು ಕಣಗಳಾಗಿದ್ದ ದಶೆಯಲ್ಲಿ ಆಕಾಶದೊಳಗೆ ಹೋಯಿತು; ಆದರೆ ಭೂಮಿ ಏರ್ಪಟ್ಟಮೇಲೆ ಭೂಗರ್ಭದೊಳಗೇ ಹುದುಗಿಕೊಳ್ಳುತ್ತ ಸಾಗಿತು. ಸುಮಾರು ೪೦೦ ಅಥವಾ ೫೦೦ ಕೋಟಿ ವರ್ಷಗಳ ಕೆಳಗೆ ಈ ಉಷ್ಣಕ್ಕೆ ಭೂಗರ್ಭದೊಳಗಿನ ಪದಾರ್ಥವು ದ್ರವರೂಪ ಹೊಂದುತ್ತಾ ಹೋಯಿತು.

ಕ್ರಮವಾಗಿ ದ್ರವರೂಪ ಹೊಂದಿದ ಹೆಗುರು ಪದಾರ್ಥವು ಮೇಲುಭಾಗಕ್ಕೆ ದೂಡಲ್ಪಟ್ಟಿತು. ಈ ವಿಧವಾಗಿ ಏರ್ಪಟ್ಟ ಭೂಮಿಯ ಮೇಲೆ, ಪರೆಗಳೂ, ಶಿಲೆಗಳೂ, ಖನಿಜಗಳೂ ಸೇರಿದುವು. ಈ ಭೂಮಿಯ ಮೇಲ್ಪರೆ ಅನುಕ್ಷಣವೂ ಬದಲಾಗುತ್ತಾ ಇದೆ. ಇದರ ಮೇಲುಭಾಗವನ್ನು ಪ್ರವಾಹಗಳು ಕೊರೆದು ಕೊಂಡೊಯ್ದು ಸಮುದ್ರದಡಿಯಲ್ಲಿ ಕೂಡಿಸುತ್ತವೆ. ಭೂಗರ್ಭದಿಂದ ಹೊಸ ಪದಾರ್ಥವು ನಿತ್ಯವೂ ಮೇಲಕ್ಕೆ ಬರುತ್ತಿದೆ. ಆದರೂ ಭೂತತ್ವವೇತ್ತರು ೩೦೦ ಕೋಟಿ ವರ್ಷಗಳ ಕಾಲದ, ಏನೂ ಮಾರ್ಪಾಡಾಗದ ಖನಿಜಗಳನ್ನು ಭೂಮಿಯ ಮೇಲೆ ಕಂಡುಹಿಡಿದಿದ್ದಾರೆ.

ಭೂಮಿ ಈಗೀಗ ತಾನೇ ಯುಕ್ತವಯಸ್ಸನ್ನು ತಲಪುತ್ತಿದೆಯೆಂದು ಹೇಳಬಹುದು. ಇನ್ನು ಕೆಲವು ನೂರು ಕೋಟಿ ವರ್ಷಗಳಲ್ಲಿ ಭೂಗರ್ಭವು ತಣಿದುಹೋಗುತ್ತದೆ. ಆದರೊಳಗಿನ ಸಂಚಲನೆಗಳೆಲ್ಲವೂ ನಿಂತುಹೋಗುತ್ತದೆ.

ಭೂಮಿಯ ಚರಮ ಪರಿಸ್ಥಿತಿಯೇನು? ಅದಕ್ಕೆಷ್ಟು ಕಾಲ ಬೇಕು? ಇದನ್ನು ಹೇಳುವ ಪರಿಸ್ಥಿತಿಯಲ್ಲಿ ಶಾಸ್ತ್ರವಿಲ್ಲ. ಈಗಂತೂ ಶಾಸ್ತ್ರವೇತ್ತರು ಅದರ ಗತಕಾಲದೊಂದಿಗೇ ಮಥನ ಮಾಡಿಕೊಳ್ಳುತ್ತ, ಪ್ರಸ್ತುತ ಪರಿಸ್ಥಿತಿಯನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸುತ್ತಿದ್ದಾರೆ.

ಇನ್ನೂ ತಿಳಿಯತಕ್ಕುದಿದೆ

ಸೌರ ಕೂಟವನ್ನು ಕುರಿತು ತಿಳಿಯತಕ್ಕಂಥಾದ್ದು ಇನ್ನೂ ಎಷ್ಟೋ ಇದೆ. ಅದಕ್ಕೆ ಸಂಬಂಧಿಸಿದ ಕೆಲವು ಸಮಸ್ಯೆಗಳು ಇನ್ನೂ ಬಗೆ ಹರಿಯಲಿಲ್ಲ. ಕೆಲವು ಸಮಸ್ಯೆಗಳನ್ನು ಇನ್ನೂ ವಿವರವಾಗಿ ಪರಿಶೀಲಿಸಬೇಕಾಗಿದೆ. ಉದಾಹರಣೆಗೆ, ಇತರ ಗ್ರಹಗಳ ಸುತ್ತಲೂ, ಅವುಗಳ ಸಹಾಸ್ರಾಂಶ ಪ್ರಮಾಣವುಳ್ಳ ಉಪಗ್ರಹಗಳು ತಿರುಗುತ್ತಿದ್ದರೆ, ಭೂಮಿಯ ಸುತ್ತಲೂ ಭೂ

(೧೦ನೇ ಪುಟ ನೋಡಿರಿ)

40 ವರ್ಷಗಳ ಭದ್ರ ಹಾಗೂ ಸಮರ್ಥ ಬೇಂಕಿಂಗ್ ಸೇವೆ
ದಿ. ಪಾಂಗಾಳ ನಾಯಕ್ ಬೇಂಕ್ ಲಿ.,
ಪ್ರಧಾನ ಕಛೇರಿ: ಉಡುಪಿ, (ದ. ಕನ್ನಡ.)
ನಮ್ಮ 3 ವರ್ಷ ವಾಯಿದೆಯ ಕ್ಯಾಷ್ ಸರ್ಟಿಫಿಕೇಟುಗಳಲ್ಲಿ ತೇವಣಿ ಮಾಡಿರಿ.
ಬಡ್ಡಿ ಶೇಕಡಾ 5ರಂತೆ ರೂ. 87-00 3 ವರ್ಷಗಳ
ಅಂತ್ಯದಲ್ಲಿ ಬಡ್ಡಿ ಕೂಡಿ ರೂ. 100-00 ಒದಗಿಸುವುದು.
ಕರೆ, ಚಿಕ್ಕವಾಯಿದೆ, ನಿರಖು ತೇವಣಾತಿಗಳ ಮೇಲೆ
ಬಡ್ಡಿ ಶೇಕಡಾ 4½ರ ವರೆಗೆ.
ರೂ. 1 ಕೋಟಿಗೂ ಮಿಕ್ಕಿದ ಚಲಾವಣಾ ಭಂಡವಾಳ
ಶಾಖೆಗಳು: ಬೆಂಗಳೂರು, ಮಂಗಳೂರು, ಬೇಲೂರು, ಶಿವಮೊಗ್ಗ, ಭದ್ರಾವತಿ, ತುಮಕೂರು, ಕುಣಿಗಲ್, ಕಾಸರಗೋಡು ಇತ್ಯಾದಿ.
(ಸ್ಥಾಪನೆ: 1920)

ಜೀವನದ ವಿವಿಧ ಘಟನೆಗಳನ್ನು ಹೃದಯಸ್ಪರ್ಶಿಯಾಗಿ ಚಿತ್ರಿಸುವ ಕಥಾಸಂಗ್ರಹ
ಮದುವೆ ಸೀರೆ
ಮದುವೆ ಕಾಲದಲ್ಲಿ ವಧೂವರರಿಗೆ ಉಡುಗೊರೆಯಾಗಿ ಕೊಡಲಿಕ್ಕೂ ಯೋಗ್ಯವಾದ ಸುತ್ತಕ.
ಬೆಲೆ: ರೂಪಾಯಿ ಒಂದು.
ರೂ. 1-35 ಕಳಿಸಿದರೆ ಒಂದು ಪ್ರತಿಯನು ಬುಕ್‌ಪೋಸ್ಟ್ ಮಾಡಬಹುದು
ನವಭಾರತ ಪುಸ್ತಕ ಭಂಡಾರ, ಉಡುಪಿ.

ಯಶಸ್ವೀ ಪ್ರಜಾಸತ್ತೆ

ನಾವು ಮತ್ತು ಪ್ರಜಾತಂತ್ರ

ಭಾರತ ಒಕ್ಕೂಟ ಪ್ರಜಾತಂತ್ರವೆಂದು ತನ್ನನ್ನು ತಾನೇ ಘೋಷಿಸಿಕೊಂಡಿದೆ. ಆದರೆ, ಈ ಐತಿಹಾಸಿಕ ಸತ್ಯ ಸಮಸ್ತ ಭಾರತೀಯರಿಗೆ ಮನವರಿಕೆಯಾಗಿಲ್ಲ. ನಮ್ಮ ಶಾಸಕರು, ಪ್ರತಿನಿಧಿಗಳು ಪ್ರಜಾಸತ್ತೆಯ ತತ್ತ್ವಗಳನ್ನು ಮೊತ್ತಮೊದಲು ಅನುಸರಿಸಿ ಉಳಿದವರಿಗೆ ಮಾರ್ಗದರ್ಶಕರಾಗಬೇಕಾದ ಕಾಲವಿದು.

(ಪ್ರಜಾರಾಜ್ಯದಿನ ಸಂಚಿಕೆಗೆ ಬಂದ ಲೇಖನ)

ಲೇಖಕಿ: **ಸರೋಜಿನಿ ಮಹಿಷಿ**, ಎಂ. ಎ., ಬಿ. ಎಲ್.

ಪ್ರಜಾತಂತ್ರದ ಒಳಗೆ ಸಿಕ್ಕು ನೋಡುವವರಿಗಿಂತ, ಹೊರಗಿದ್ದು ನೋಡುವವರಿಗೆ, ಪ್ರಜಾತಂತ್ರದ ಲೋಪದೋಷವು ನಮ್ಮ ರಾಷ್ಟ್ರದಲ್ಲಿ ಅದನ್ನು ಕಾರ್ಯಾಚರಣೆಯಲ್ಲಿ ತರಲು ಉಂಟಾದ ವಿಪತ್ತುಗಳು, ಗೋಚರವಾಗುವದು ಸಹಜ! ಪರಿಣಾಮದಲ್ಲಿ ಪ್ರಜಾತಂತ್ರದ ಸ್ವರೂಪವನ್ನು ನೋಡಿದಾಗ ಇದು ಪ್ರಜಾತಂತ್ರವೇ?—ಎಂಬ ಶಂಕೆಯೂ ಉತ್ಪನ್ನವಾಗಬಹುದು. ಭಾರತದ ಒಕ್ಕೂಟದಲ್ಲಿ ಪ್ರಜಾತಂತ್ರದ ನ್ಯಾಯವಾದ ಹಾಗೂ ದೃಢವಾದ ಪರಂಪರೆ ನಿರ್ಮಾಣವಾಗುತ್ತಿದೆಯೇ? ಅಥವಾ ಭಾರತದ ಒಕ್ಕೂಟವು ಭಾರತದ್ದೇ ಆಗಿರುವಂತೆ, ಪ್ರಜಾತಂತ್ರವೂ ಭಾರತದ್ದೇ ಆಗಿ ವೈಶಿಷ್ಟ್ಯಪೂರ್ಣವಾಗಿದೆಯೆ?

ಒಕ್ಕೂಟದಲ್ಲಿ, ಪ್ರಾಂತೀಯ ಘಟಕಗಳಿಗಿರಬೇಕಾದ ಸ್ವಾತಂತ್ರ್ಯವಿಲ್ಲ; ಪ್ರಾಂತೀಯ ಘಟಕಗಳೆಲ್ಲ ಸೇರಿ ಒಕ್ಕೂಟ ಸರಕಾರಕ್ಕೆ ಅಧಿಕಾರವನ್ನು ಕೊಟ್ಟವೆ ಎನ್ನುವದಕ್ಕಿಂತ, ಒಕ್ಕೂಟ ಸರಕಾರವೇ ಪ್ರಾಂತೀಯ ಸರಕಾರಗಳಿಗೆ ಅಧಿಕಾರ ಕೊಟ್ಟಿರುವಂತಿದೆ! "ಬಾಲವುಂಟು ಪ್ರಾಣಿಯಲ್ಲ, ಹಾರಾಡುವದು ಪಕ್ಷಿಯಲ್ಲ, ಹಾಗಾದರೆ ಅದು ಯಾವುದು?"—ಎಂದು ಮಕ್ಕಳು ಒಗಟು ಹೇಳಿದಂತೆ, ಒಕ್ಕೂಟವಿದೆ, ಪ್ರಾಂತೀಯ ಘಟಕಗಳಿಗೆ ಒಕ್ಕೂಟಕ್ಕೆ ಕೊಟ್ಟು ಉಳಿದಿಲ್ಲ ಅಧಿಕಾರವಿಲ್ಲ. ಪ್ರಸಂಗ ಬಂದರೆ ಒಕ್ಕೂಟವು ಅಳದುಹೋಗಿ ಕೇಂದ್ರ ಸಂಘಟಿತ ಶಾಸನವೇ ಬಳಕೆಯಲ್ಲಿ ಬರಬಹುದು—ಅಂಥದಾವುದು ಅಂದರೆ ಭಾರತದ ಒಕ್ಕೂಟ ಎಂಬ ಉತ್ತರವನ್ನು ಕೊಡಬೇಕಾಗುತ್ತದೆ.

ಭಾರತದ ರಾಜ್ಯಘಟನೆ ಒಕ್ಕೂಟದ ಘಟನೆಯೇ? ಹೌದು; ಅಥವಾ ಕೇಂದ್ರ ಸಂಘಟಿತ ಶಾಸನವೇ? ಆದೂ ಹೌದು; ನರೋ ವಾ ಕುಂಜರೋ ವಾ! ಇಂಗ್ಲಂಡು ನಮ್ಮ ಮೇಲೆ ರಾಜ್ಯ ನಡೆಸಿ, ಕೆಲವೊಂದು ಒಳ್ಳೆಯ ಪರಂಪರೆಗಳು ಇಲ್ಲಿ ಬೇರೂರುವಂತೆ ಮಾಡಿದೆ: ಪರಿಚಿತವಾದುದರಿಂದ ನಮಗವು ಪ್ರಿಯವಾಗಿವೆ. ಅವನು ಬಿಡಲು ಸಾಧ್ಯವಿಲ್ಲ; ಸ್ವಾತಂತ್ರ್ಯಗಳಿಸಿ ಹೊಸ ಇತಿಹಾಸವನ್ನು ನಾವು ಬರೆಯಬೇಕಾಗಿದೆ: ಅದಕ್ಕಾಗಿ ಅಮೇರಿಕೆಯ ಒಕ್ಕೂಟ ರಾಜ್ಯಘಟನೆಯಲ್ಲಿಯ ಒಳ್ಳೆಯ ಅಂಶಗಳೂ ನಮಗೆ ಬೇಕು! ಇಂಗ್ಲಂಡು ಅಮೇರಿಕೆಯ ರಾಜ್ಯಘಟನೆಗಳು ರಾಜನೀತಿ ಶಾಸ್ತ್ರದ ಮೇರೆಗೆ ಹೊಂದಿಕೊಳ್ಳುತ್ತಿರಲಿಕ್ಕಿಲ್ಲ, ಆದರೆ ಕರ್ಮತಃ ಅವು ಭಾರತದ ಒಕ್ಕೂಟದಲ್ಲಿಯೇ ಕೂಡಿಕೊಂಡಿವೆ! ಅಂದರೆ ಭಾರತೀಯರ ಸಾಮರ್ಥ್ಯವೆಷ್ಟು! ತ್ಯಾಗ ಎಂತಹದು!!

ಒಕ್ಕೂಟದ ಪ್ರಜಾತಂತ್ರದ ಯಶಸ್ಸಿಗೆ ತಳಹದಿಯೇನೆ.? ಇಂಗ್ಲಂಡು, ಅಮೇರಿಕೆಗಳಲ್ಲಿರುವ ಸಾಮಾಜಿಕ ಆರ್ಥಿಕ, ಔದ್ಯೋಗಿಕ ಹಿನ್ನೆಲೆ ನಮ್ಮ ರಾಷ್ಟ್ರದಲ್ಲಿ ಯಾವ ಬಗೆಯದಾಗಿದೆ?

ಮತಾಧಿಕಾರ ಹಾಗೂ ಸಾಮಾಜಿಕ ಪ್ರಜ್ಞೆ!

ಹುಚ್ಚ, ಗುನ್ಹೆಗಾರ ಎಂದು ಸಿದ್ಧವಾದ ಕೆಲವೇ ವ್ಯಕ್ತಿಗಳನ್ನು ಬಿಟ್ಟು ಇಪ್ಪತ್ತೊಂದು ವಯಸ್ಸನ್ನು ದಾಟಿದ ಎಲ್ಲರಿಗೂ ರಾಜಕೀಯ ಸ್ವಾತಂತ್ರ್ಯವಿದೆ,—ಮತಾಧಿಕಾರವಿದೆ! ತನ್ನ 'ಪವಿತ್ರ' ಮತವನ್ನು ದಾನಮಾಡಿ (ಶಕ್ಯವಿದ್ದರೆ ಮಾರಾಟ ಮಾಡಿ), ತನ್ನ ಪ್ರತಿನಿಧಿಯನ್ನು ಆರಿಸುವ (ಅಥವಾ ಆರಿಸಿ ಬಂದವನಿಗೇ ತನ್ನವನೆನ್ನುವ) ಅಧಿಕಾರವು ಪ್ರತಿಯೊಬ್ಬ ವ್ಯಕ್ತಿಗೂ ಇದೆ. ಕೇವಲ ವಯಸ್ಸಿನ ಆಧಾರದ ಮೇಲೆ ಮತಾಧಿಕಾರವಿದ್ದುದು ಭಾರತದಲ್ಲಷ್ಟೇ! ಇಂದಿಲ್ಲ ನಾಳೆ ಮತಾಧಿಕಾರ ದೊರೆತೇ ದೊರೆಯುತ್ತದೆನ್ನುವ ಭರವಸೆ ಭಾರತದಲ್ಲಿ ಹುಟ್ಟಿದ ಪ್ರತಿಯೊಂದು ವ್ಯಕ್ತಿಗೂ ಇದೆ! ಆದರೆ ಪಾವಿತ್ರ್ಯವನ್ನರಿಯುವ ಮೊದಲೇ ಅದು ಕೈಗೆ ಬಂದು ಬಿಡುತ್ತದೆ.

ಪ್ರಜಾರಾಜ್ಯದ ಪ್ರಧಾನ ಘಟಕವಾದ ಪ್ರಜೆ ತಾನು ಎಂಬುದನ್ನು ಕರ್ತವ್ಯದ ದೃಷ್ಟಿಯಿಂದ ಎಷ್ಟು ಜನ ಬಲ್ಲರು?—ಹಕ್ಕಿನ ದೃಷ್ಟಿಯಿಂದ ಬಹುಜನ ಬಲ್ಲವರಾಗಿದ್ದಾರೆ ನಿಜ: ಯೋಗ್ಯತೆಯಿದ್ದುದರಿಂದ ಅಧಿಕಾರ ಸ್ಥಾನಕ್ಕೆ ಬರುತ್ತಾರೆ ಎಂಬುದಕ್ಕಿಂತ, ಅಧಿಕಾರಸ್ಥಾನಕ್ಕೆ ಬಂದರೆ ತಾನೇ ಯೋಗ್ಯತೆ ಬರುತ್ತದೆ ಎಂಬ ನಿರ್ಧಾರಕ್ಕೂ ಆಗಲೇ ಬಂದು, ಪ್ರಯೋಗ ನಡೆದಿದೆ! ತನ್ನದೊಂದನ್ನೇ ಬಿಟ್ಟು, ಸಾಮಾಜಿಕ ಆರೋಗ್ಯ, ಸಾಮಾಜಿಕ ಜೀವನ, ಎಂಬುದು ಬೇರೆ ಇದೆ,—ಅದರ ರಕ್ಷಣೆಗಾಗಿ ಪ್ರತಿಯೊಬ್ಬ ವ್ಯಕ್ತಿಯೂ ಪರಿಶ್ರಮಪಡಬೇಕು, ಎಂಬ ವಿಚಾರವೇ ಬಹುಸಂಖ್ಯಾಕರಿಗೆ ಹೊಳೆಯದು.

ಅಧಿಕಾರದ ವಿಕೇಂದ್ರೀಕರಣ:

ಅಧಿಕಾರದ ವಿಕೇಂದ್ರೀಕರಣವು ಪ್ರಜಾರಾಜ್ಯದ ತಳಹದಿ: ಆ ಮೇರೆಗೆ ಪಂಚಾಯತ ರಾಜ್ಯಕ್ರಮವು ಬಳಕೆಯಲ್ಲಿ ಬರುತ್ತಿದೆ. ಇದ್ದ ಪರಿಸ್ಥಿತಿಯನ್ನು ನೋಡುವದಾದರೆ, ಒಂದು ಗುಂಪಿನ ಹಳ್ಳಿಗಳ ಸರ್ವತೋಮುಖ ಅಭಿವೃದ್ಧಿಯನ್ನು ನೋಡಿಕೊಳ್ಳುವದಕ್ಕಾಗಿ ಪಂಚಾಯತಿಗೆ ಕಾನೂನಿನ ಮೇರೆಗೆ, ಅನೇಕ ಆರ್ಥಿಕ ಹಾಗೂ ಕಾರ್ಯಕಾರೀ ಅಧಿಕಾರಗಳನ್ನು ಕೊಡಲಾಗಿದೆ.

ಅಧಿಕಾರಗಳ ಉಪಯೋಗವನ್ನು ಒಳ್ಳೇ ರೀತಿಯಲ್ಲಿ ಮಾಡಿಕೊಳ್ಳಬೇಕಾದರೆ, ಅಧಿಕಾರಪಡೆಯುವವರೂ ಅಧಿಕಾರಿಗಳಾಗಬೇಕಾಗಿರುತ್ತದೆ. ಯೋಗ್ಯತೆ ಇರದೆ ಅಧಿಕಾರ ಬಂದಾಗ, ಅಧಿಕಾರದ ದುರುಪಯೋಗವೇ ಸದುಪಯೋಗವೆಂದು ಕಾಣಬಹುದು! ಅಧಿಕಾರದ ವಿಕೇಂದ್ರೀಕರಣವೆಂದು "ತಾಲೂಕಿನ ಅಭಿವೃದ್ಧಿ ಮಂಡಲಗಳು, ಜಿಲ್ಲಾ ಅಭಿವೃದ್ಧಿ ಮಂಡಲಗಳು ರಚಿತವಾಗಿವೆ. ಅಭಿವೃದ್ಧಿಗೆ ಸಂಬಂಧಿಸಿದ ಅನೇಕ ಅಧಿಕಾರಗಳನ್ನು ಅವರಿಗೆ ಕೊಡಲಾಗಿದೆ. ಎಲ್ಲರಿಗೂ ಪ್ರಾತಿನಿಧ್ಯವನ್ನು ಕೊಡುವ ಪ್ರಯತ್ನವನ್ನೂ ಮಾಡಲಾಗುತ್ತಿದೆ. ಆದರೆ ಪ್ರತಿನಿಧಿಗಳೆಂದು ಹೋಗುವವರಲ್ಲಿ ತಿಳಿದುಕೊಳ್ಳುವ ಲಾಲಸವಿಕೆಯಿರಬೇಕಾದಂತೆ, ತರಬೇತಿಕೊಡುವವರಲ್ಲಿಯೂ ಕಾರ್ಯಕ್ಷಮತೆ ಹಾಗೂ ಅನುಭವಜ್ಞಾನಗಳು ಅವಶ್ಯವಾಗಿವೆ. ಇಲ್ಲದೇ ಹೋದರೆ ತರಬೇತಿಯೂ ಒಂದು ಪ್ರದರ್ಶನವಾಗಿ, ರಾಷ್ಟ್ರದ ಹಣ ಅದಕ್ಕೂ ವ್ಯಯವಾಗುತ್ತದೆ.

ಯೋಜನೆಗಳ ಹುಟ್ಟು ಹಾಗೂ ಪ್ರಚಾರ:

ಪ್ರಜೆಗಳು ಪ್ರಬುದ್ಧರಾಗಿ ಪ್ರಜಾತಂತ್ರವನ್ನು ಬರಮಾಡಿಕೊಳ್ಳುತ್ತಾರೆಂಬುದು ಐತಿಹಾಸಿಕ ಸತ್ಯ! ಭಾರತದಲ್ಲಿ ಘಟನೆಯಲ್ಲಿ "ಘಟನೆಯನ್ನು ನಾವೇ ಸಿದ್ಧಪಡಿಸಿಕೊಂಡು, ನಮಗೆ ನಾವೇ ಕೊಟ್ಟುಕೊಂಡಿದ್ದೇವೆ", ಎಂಬ ಒಕ್ಕಣಿಕೆಯಿದ್ದರೂ ನಮಗೇ ಅದು ತಿಳಿಯದು. ಯಾರೋ ಯಾವುದೋ ಘಟನೆಯನ್ನು ತಯಾರುಮಾಡಿ ನಿಮ್ಮದೆಂದು ಕೊಟ್ಟಿದ್ದಾರೆ ಎಂದು ನಾವು ತಿಳಿದಿರುವಂತೆ, ಯೋಜನೆಗಳನ್ನೂ ಯಾರೋ ಸಿದ್ಧಪಡಿಸಿ ಇಡುತ್ತಿದ್ದಾರೆ, ನಮಗೇನು ಸಂಬಂಧ ಎನ್ನುವ ರೀತಿಯಲ್ಲಿ ಜನತೆಯಲ್ಲಿ ನಿರ್ಲಿಪ್ತತೆ ಕಂಡುಬರುತ್ತದೆ. ಜನತೆಯಲ್ಲಿ ಯೋಜನೆಯ ಅವಶ್ಯಕತೆ ತಾನೇ ರೂಪುಗೊಳ್ಳಬೇಕು; ಒತ್ತಾಯದಿಂದ ಜನತೆಯನ್ನು, ಸಹಾಯ ಸಹಕಾರ ಕೊಡಿರಿ ಎಂದು ಸರಕಾರ ಕೇಳಿದರೆ, ಜನತೆಗೆ ವಿಶ್ವಾಸ ಹೇಗೆ ಉಂಟಾದೀತು? ಜನತೆಯ ಪ್ರತಿನಿದಿಗಳೇ ಯೋಜನೆಯನ್ನು ರೂಪಿಸುವಂತಾದರೆ, ಪ್ರತಿನಿಧಿಗಳಿಗಾದರೂ ಅದರ ಬಗ್ಗೆ ಒಳ್ಳೇ ಅಭಿಪ್ರಾಯ ಉಂಟಾದೀತು! ಕಾರ್ಯಕ್ಷಮತೆ, ಅಳವಾದ ಅಭ್ಯಾಸ, ನೇಶದ ಜನತೆ ಗೋಸುಗ ಕಾಯಿದೆಮಾಡುವ ಶಕ್ತಿಯಿದೆಯೆಂದು ವಿಧಾನಮಂಡಲಗಳ ಸದಸ್ಯರಾಗುತ್ತಾರೆ ಎನ್ನುವದಕ್ಕಿಂತ, ವಿಧಾನಮಂಡಲದ ಸದಸ್ಯರಾದ ಮೇಲೆಯೇ ಅದುದೇಕೆ ಎಂದು ತಿಳಿಸಿಕೊಡುವ ಪ್ರಯತ್ನ ಮಾಡುವಂತೆ, ಯೋಜನೆಯ ರೂಪುರೇಖೆಗಳನ್ನೂ ಪ್ರತಿನಿಧಿಗಳಿಗೆ ತಿಳಿಸಿಕೊಡಲಾಗುತ್ತಿದೆ. ಎಷ್ಟು ಜನ ಮುಂದಾಳುಗಳು ಪ್ರಚಾರಕರು ಯೋಜನೆಯನ್ನು ಕುರಿತು ಅಭ್ಯಾಸಮಾಡಿದ್ದಾರೆ?

ಅಧಿಕಾರಿಗಳ ಸಹಕಾರ:

ಪ್ರಜೆಗಳೇ ಯೋಜನೆಯ ಕಾರ್ಯಕರ್ತರು ಎಂಬ ತಿಳುವಳಿಕೆಗೆ ಆಸ್ಪದವಿರುವದಾದರೆ, ಅಧಿಕಾರಿಗಳು ಯೋಜನೆ ಕಾರ್ಯಗತವಾಗಲು ಸಹಾಯಕರಾಗಿ ಮಾತ್ರ ಬರುತ್ತಾರೆ. ಆದರೆ ಬ್ರಿಟಿಷ ಸಾರ್ವಭೌಮತ್ವದ ಅಧಿಕಾರಿಗಳ ಔಪಚಾರಿಕತೆ ಇನ್ನೂ ಉಳಿದಿದೆಯೇನೋ, ಜನತೆಯೊಡನೆ ಬೆರೆಯಲು ಅಧಿಕಾರಿಗಳೂ ಹಿಂದುಮುಂದೆ ನೋಡುತ್ತಾರೆ. ಯಾವ ಸರಕಾರ ಬಂದರೇನು? ಮೂವತ್ತು ದಿನಗಳವರೆಗೆ ದುಡಿದಿದ್ದೇವೆಂದರೆ ಆಯಿತು. ಸಂಬಳ ದೊರೆಯುತ್ತದೆ ಎಂಬ ಮನೋವೃತ್ತಿ ರಾಷ್ಟ್ರದ ಹಿತಕ್ಕೆ ವಿಘಾತಕವಾಗಿದೆ. "ಗಾಂಧೀ ಜಯಂತಿ"ಯಂದು ಹರಿಜನಕೇರಿಗೆ ಹೋಗಿ ಸ್ವಚ್ಛತೆಯ ಬಗ್ಗೆ ತಿಳಿಸಲು, ಸರಕಾರದ ಸೂಚನೆ ಬಂದಿದೆ. ಆದಕ್ಕಾಗಿ ನಾವಿಲ್ಲಿ ಬಂದಿದ್ದೇವೆ; ಎಂದು ಹರಿಜನಕೇರಿಯಲ್ಲಿ ವಾಸಿಸಿದವರಿಗೆ ಹೇಳುವ ಮನೋವೃತ್ತಿಯಲ್ಲಿ ಯಾವತರದ ವಿನಾಶಕಾರಿಯಾದ ಅಂಶ ಅಡಗಿದೆಯೆಂಬುದು ತಾನೇ ವಿದಿತವಾಗುತ್ತದೆ; "ಹಾಗೆ ಸೂಚನೆ ಬರದೇ ಹೋಗಿದ್ದರೆ ನಾವೆಲ್ಲಿ ಬರುತ್ತಿದ್ದೆವು" ಎಂಬ ಸೂಕ್ಷ್ಮ ವಿಚಾರವೂ ಅಲ್ಲಿದೆ. ವೈಯಕ್ತಿಕ ಸಹಾನುಭೂತಿಗೆ, ಅಥವಾ ರಾಷ್ಟ್ರದ ಹಿತಕ್ಕೆ ಅಲ್ಲಿ ಅವಕಾಶವೇ ಇಲ್ಲ. "ಸರಕಾರ ಹೇಳಿದೆ, ಸಂಬಳ ಕೊಟ್ಟಿದೆ ಅವರ ಕರ್ತವ್ಯ ಬಂದಿದ್ದಾರೆ, ಅದರ ಪರಿಣಾಮಕ್ಕೆ ಹೊಣೆ ನಾವೇಕೆ?"—ಎಂಬ ಮನೋವೃತ್ತಿ ಅಲ್ಲಿರುವ ಹರಿಜನರಲ್ಲಿಯೂ (ಯಾರಲ್ಲಿಯಾದರೂ) ಮೂಡಬಹುದಾಗಿದೆ. ವರುಷಕ್ಕೆ ಇಂತಿಷ್ಟು ಸಹಕಾರಿ ಸಂಘಗಳನ್ನು ಪ್ರಾರಂಭಿಸ

(ಇನೇ ಪುಟ ನೋಡಿರಿ)

ಠೇವಣಾತಿಗಳು.....ಆಕರ್ಷಕ ಬಡ್ಡಿ ದರಗಳು

ಜೀವನದ ವೆಚ್ಚವು ದಿನೇ ದಿನೇ ಹೆಚ್ಚುತ್ತಲಿದ್ದರೂ, ಕಷ್ಟಪಟ್ಟು ಉಳಿಸಿದ ನಿಮ್ಮ ಹಣಕ್ಕೆ—ಅತ್ಯಗತ್ಯವಿರುವ ಸುರಕ್ಷಿತತೆ ಮತ್ತು ಭದ್ರತೆಗಳೊಂದಿಗೆ—ಅತ್ಯಾಕರ್ಷಕ ದರದಲ್ಲಿ ಬಡ್ಡಿ ಕೊಟ್ಟು, ನಿಮ್ಮನ್ನು ಸಂತುಷ್ಟರಾಗಿ ಮಾಡಲು

ಕೊರ್ಪೊರೇಶನ್ ಬೇಂಕು

ತಾನು ಠೇವಣಾತಿಗಳ ಮೇಲೆ ಕೊಡುವ ಬಡ್ಡಿ ದರಗಳನ್ನು ಇತ್ತೀಚೆಗೆ ಬದಲಾಯಿಸಿದೆ.

ವಿವರಗಳನ್ನು ನಿಮಗೆ ಸಮೀಪವಿರುವ ಇದರ ಶಾಖೆಯಿಂದ ಪಡೆಯಬಹುದು.

ದಿ. ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್

ವರ್ಗ—ಊಳಿಗ

ಮೊದಲಾದ ಯಾವತ್ತೂ ತರದ

ಎಕೌಂಟ್ ಪುಸ್ತಕಗಳು

ವಿವಿಧ ಸೈಜುಗಳಲ್ಲಿ

ದೊರೆಯುತ್ತವೆ.

ವಿಚಾರಿಸಿರಿ—

ನವಯುಗ ಪ್ರೆಸ್, ಉಡುಪಿ

ಅಭಿಪ್ರಾಯ

ಪುರಾಕೃತ ಕರ್ಮಫಲ

ಜೀರ್ಣಿಸಿಕೊಳ್ಳಲಾರದಷ್ಟು ಊಟ ಬಡಿಸಿದರೆ, ಬಲಾತ್ಕಾರದಿಂದ ಉಣಿಸಿದರೆ, ಅಜೀರ್ಣದಿಂದ ನರಳಲೇಬೇಕಾಗುವುದು; ಜೀವನವನ್ನೇ ಅಶಾಂತಿಯಿಂದ ಕಳೆಯಬೇಕಾಗುವುದು. ಜೀರ್ಣಿಸಿಕೊಳ್ಳಲಾರದ ಅಸಂಸ್ಕೃತ ಬಾಲಕರ ತಲೆಯ ಮೇಲೆ ಹೊರಲಾರದ ಚಕ್ಕಡಿ ಹೊರಿಸಿದರೂ ಆಗುವ ಸ್ಥಿತಿಯದೇ, ಇದು ಇಂದಿನ ಭಾರತೀಯ ವಿದ್ಯಾರ್ಥಿಯ ಸುಸಂಸ್ಕೃತ ಕರ್ಮಫಲ!

ಶ್ರೀ ಎಸ್. ಗೋಪೀಚಂದ ರಾವ್,

ನಾವೆಷ್ಟು ಭಾಷೆಯನ್ನು ಕಲಿಯಬೇಕು? - ಇದು ಪ್ರತಿಯೊಬ್ಬ ಭಾರತೀಯ ವಿದ್ಯಾರ್ಥಿಯನ್ನು ಕಾಡುವ ಮಹಾ ಪ್ರಶ್ನೆಯಾಗಿ ಇಂದು ಪರಿಣಮಿಸಿದೆ. ನೋಟಕ್ಕೆ ಇದು ವಿಲಕ್ಷಣ ಪ್ರಶ್ನೆ ಅಥವಾ ಸಮಸ್ಯೆಯೆಂದು ತೋರಿಬಂದರೂ ಗಾಳಿಗೆ ತೂರಿ ಬಿಡುವಷ್ಟು ಲಘುವಾದುದಲ್ಲ. ಇದೊಂದು ಗಂಭೀರವಾದ—ಸಾಕಷ್ಟು ಗಂಭೀರವಾದ ಪ್ರಶ್ನೆಯೆಂಬುದರಲ್ಲಿ ಅನುಮಾನವಿಲ್ಲ.

ಇಂತಹ ಒಂದು ಪ್ರಶ್ನೆ ಬೇರಾವ ದೇಶವನ್ನೂ ಅತಿಯಾಗಿ ಪೀಡಿಸುತ್ತಿಲ್ಲವೆಂದೇ ಹೇಳಬೇಕು. ನಮ್ಮ ದೇಶವು ಇತ್ತೀಚೆಗೆ ಸ್ವತಂತ್ರವಾದುದೂ ಇಲ್ಲಿ ಶಿಕ್ಷಿತರ ಪ್ರಮಾಣವು ಅತೀವ ಕಡಿಮೆಯಿರುವುದೂ ಇಂತಹಪ್ರಶ್ನೆಯೇಳುವುದಕ್ಕೂ ಅದು ಬಗೆಹರಿಯುದಿರುವುದಕ್ಕೂ ಇರುವ ಆತಂಕವೆಂದು ಊಹಿಸಬಹುದು. ಅಲ್ಲದೇ ಸುಮಾರು ಅರ್ಧ ಸಹಸ್ರಕ್ಕೂ ಮಿಕ್ಕಿದ ಭಾಷೆಗಳ ತವರೂರಲ್ಲಿ ಯಾವುದನ್ನು ಕಲಿಯಬೇಕು ಯಾವುದನ್ನು ಬಿಡಬೇಕು ಎಂಬುದನ್ನು ವಿಚಾರಕ್ಕೆ ಎತ್ತಿಕೊಂಡಾಗ ತಲೆ ಚಿಟ್ಟು ಹಿಡಿಯತೊಡಗುವುದು ಖಂಡಿತವೆ.

ಈ ನೂರಾರು ಭಾಷೆಗಳಲ್ಲಿ ಕೇವಲ ಮಾತುಗಾರಿಕೆಯಲ್ಲಿ ಬಳಸುವ ಕ್ಷುಲ್ಲಕ ಭಾಷೆಗಳನ್ನು ಅತ್ತ ಇಂಬಬೇಕಾಗುವುದು. ಏಕೆಂದರೆ, ಇವನ್ನು ಕೇವಲ ಒಡನಾಟದಲ್ಲಿಯೇ ಕಲಿಯಬೇಕಲ್ಲದೆ ಅನ್ಯ ಸಾಧನಗಳಿಂದ ಅಸಾಧ್ಯ. ಸ್ವತಂತ್ರ ಲಿಪಿಯಿಲ್ಲದಿರುವುದೇ ಒಂದು ಮುಖ್ಯ ವಿಘ್ನ. ಉಳಿದುವಲ್ಲಿಯಾದರೂ ಬಹಳ ಕಡಿಮೆ ಜನರು ಆಡುವ ಮತ್ತು ಬಳಸುವ ಭಾಷೆಗಳನ್ನು ಒಂದುಕಡೆ ಇಟ್ಟರೆ, ಸಂವಿಧಾನ ಮಾನ್ಯವಾದ ಹದಿನೈದು ಭಾಷೆಗಳು ಪ್ರಧಾನ ಸ್ಥಾನವನ್ನು ಪಡೆಯುತ್ತವೆ. ಈ ಹದಿನೈದನ್ನು ಕರಗತ ಮಾಡಿಕೊಂಡ ನಂತರ ತಾನೇ ಉಳಿದ ಭಾಷಾಧ್ಯಯನದತ್ತ ಒಲವು ಹರಿಸಬೇಕಾದುದು?

ಮಾನ್ಯವಾದ ಭಾಷೆಗಳಲ್ಲಿಯಾಗಲಿ ಎಲ್ಲವನ್ನೂ ಕಲಿಯುವುದು ಸಾಮಾನ್ಯ ವ್ಯಕ್ತಿಯೊಬ್ಬನಿಂದ ಸಾಧ್ಯವೆಂದು ಹೇಳುವುದು ಶುದ್ಧ ಉನ್ಮತ್ತತೆಯೆನಿಸೀತು. ಆದುದರಿಂದ, ಪ್ರಾಶಸ್ತ್ಯ ಮತ್ತು ಆವಶ್ಯಕತೆಯ ದೃಷ್ಟಿಯಿಂದ ಪ್ರತಿ ಭಾರತೀಯನೂ ಅವಶ್ಯ ತಿಳಿದಿರಲೇಬೇಕಾದ ಭಾಷೆಗಳು ಯಾವುವು ಎಂಬುದೀಗ ನಮ್ಮ ಮುಂದಿರುವ ಪ್ರಶ್ನೆ. ಇದನ್ನು ಉತ್ತರಿಸುವಾಗ ನಾವು ಅತೀವ ಬುದ್ಧಿಶಾಲಿಗಳಾಗಿ ಎಲ್ಲ ಭಾಷೆಗಳನ್ನೂ ಕರತಲಾಮಲಕ ಮಾಡಿಕೊಂಡ ಮಹಾಮೇಧಾವಿಗಳನ್ನೂ ಏನೂ ತಿಳಿಯದೆ ತಮ್ಮ ದೈನಂದಿನ ಜೀವನವನ್ನು ಬದುಕುವ ತೀರ ಸಾಮಾನ್ಯರನ್ನೂ ಬಿಟ್ಟುಕೊಟ್ಟು, ಈಯೆರಡು ಪಂಗಡಗಳಿಂದ ಭಿನ್ನರಾಗಿರುವ ಅಧಿಕ ಸಂಖ್ಯಾಕ 'ಮಧ್ಯಮರನ್ನು ಮಾತ್ರ ಅನುಲಕ್ಷಿಸಬೇಕಾಗಿದೆ.

ಕೆಲವು ವಾರಗಳಿಗೆ ಮೊದಲು ಉತ್ತರ ಭಾರತದ ಹಿಂದೀ ವಿದ್ಯಾಪೀಠದ ಪ್ರತಿನಿಧಿಗಳೊಬ್ಬರನ್ನು ಭೆಟ್ಟಿಯಾಗುವ ಸದವಕಾಶ ನನಗೆ ದೊರಕಿತು. ಎಲ್ಲಾ ಮಾನ್ಯ ಭಾಷೆಗಳಿಗೆ ದೇವನಾಗರಿ ಲಿಪಿಯನ್ನು ಬಳಸುವ ಬಗ್ಗೆ ಪ್ರಚಾರ ಮಾಡುವ ಮತ್ತು ಹಿಂದ್ಯೇತರ ಭಾಷೆಗಳ ವೈಶಿಷ್ಟ್ಯವನ್ನು, ಆ ಭಾಷೆಗಳ ಲಿಪಿಗಳ ಕಂಠ್ರ ಹಾಗೂ ರಚನೆಯನ್ನೂ ಅಭ್ಯಾಸ ಮಾಡಲು ಅವರು ಸಂಚಾರ ಕೈಗೊಂಡಿದ್ದರೆಂದು ತಿಳಿದು ಬಂತು. ತನ್ನ ಪರಿಚಯವನ್ನು ಮಾಡಿಕೊಡುತ್ತ ಅವರು ತನಗೆ ಎಲ್ಲಾ ಸಂವಿಧಾನ ಮಾನ್ಯ ಭಾಷೆಗಳ ಲಿಪಿಯೂ ಬರುವುದೆಂದು ಹೇಳುತ್ತ ಅವೆಲ್ಲವುಗಳಲ್ಲಿ ಸಹಿ ಹಾಕಿದ್ದ ಒಂದು ಕಾಗದವನ್ನು ಮುಂದಿಟ್ಟರು. ಅವರ ವಾಗ್ಜಾಲಕ್ಕೆ ಬೆರಗಾಗಿದ್ದ ನಾನು ಆ ಪತ್ರವನ್ನು ನೋಡಿದೆ. ಇಂಗ್ಲಿಷ್ ಲಿಪಿಯಲ್ಲಿ ನಾವು ಬರೆಯುವಂತೆಯೇ ಅವರ ಸಹಿ ಹಾಕಿತ್ತು; ಆದರೆ, ಕನ್ನಡ ಲಿಪಿಯ ಸಹಿ ಅಚ್ಚಿನ ಮೊಳೆಗಳನ್ನು ನೋಡಿ ಪ್ರಯತ್ನಪೂರ್ವಕ ಬರೆದಂತಿತ್ತು. ನಾನಾಗ ಹೇಳಿದೆ, "ಸ್ವಾಮಿ, ನಾವು ಕನ್ನಡವನ್ನು ಈ ರೀತಿ ಬರೆಯುವುದಿಲ್ಲ; ಇದು ಕೇವಲ ಅಚ್ಚಿನ ರೂಪ" ಎಂದು. ಅವರು ವಿಸ್ಮಯಪಟ್ಟು, ಬರವಣಿಗೆಯ ಅಕ್ಷರಗಳನ್ನು ನನ್ನಿಂದ ಬರೆಸಿದರು. ಅಂತೆಯೇ ಅಲ್ಲೇ ಇದ್ದ ನನ್ನೊಬ್ಬ ಮಿತ್ರರು ಅವರು ಮಲೆಯಾಳಿ ಲಿಪಿಯಲ್ಲಿ ಮಾಡಿದ್ದ ತಪ್ಪನ್ನು ತೋರಿಸಿಕೊಟ್ಟರು. ಎಂದರೆ, ಒಬ್ಬ ವ್ಯಕ್ತಿ ಎಲ್ಲ ಭಾಷೆಗಳ ವರ್ಣಮಾಲೆಯನ್ನು ಕಲಿತಿರುವುದೆಂದರೆ, ಅದು ಹೊರಲಾರದ ಚಕ್ಕಡಿಯೇ ಸರಿ. ಅವರಲ್ಲಿಯೇ ತಪ್ಪರಾಗಿ ತಮ್ಮ ಜೀವನವನ್ನು ಅದಕ್ಕಾಗಿಯೇ ಮೀಸಲಿಟ್ಟಂತಹವರಿಂದಲೂ ಅಸಾಧ್ಯವಾಗುವ ಕೆಲಸ. ಜೀವನದ ಜಂಜಾಟದಲ್ಲಿ ನರಳುವವರಿಂದ ಆಗುವುದು ಸಾಧ್ಯವೆ? ಎಂದು ಕೇಳಿದರೆ, ಇಲ್ಲವೆಂಬುದೇ ಉತ್ತರ.

ನಾನು ಭೆಟ್ಟಿಯಾದ ಮೇಲಿನ ವ್ಯಕ್ತಿ ಬಹು ಸಮಯದ ವರೆಗೆ ದಕ್ಷಿಣ ಭಾರತದಲ್ಲಿ— ಉತ್ತರ ಭಾರತದ ವಿವಿಧ ಪ್ರಾಂತಗಳಲ್ಲಿ ಮೊದಲೇ ತಿರುಗಾಡಿದ್ದಾರೆ. ಅವರು ಆಯಾ ಪ್ರಾದೇಶೀಕ ಭಾಷೆಗಳಲ್ಲಿ ನೂತನವಾದ ಲಿಪಿಗಳೆಂದು ಅವರೇ ತಿಳಿಸಿದರು. ಅಲ್ಲದೆ ನಾವು ಮಾತಾಡಿದುದನ್ನಾದರೂ ಸರಿಯಾಗಿ ಅರ್ಥಮಾಡಿಕೊಂಡಾರೆಂದು ಹೇಳಲು ನನಗೆ ಧೈರ್ಯಸಾಲದು. ಅದೇನೋ ತಲೆದೂಗುತಿದ್ದರು; ಆದರೆ, ಅದರ ಕಾರಣ ಕೇಳಿದಾಗ ಮೌನವಾಗುತಿದ್ದರು. ಈ ಒಂದು ಸನ್ನಿವೇಶವನ್ನು ತಂದ ಕಾರಣವಿಷ್ಟೆ. ಒಂದು ಭಾಷೆಯನ್ನಾಗಲೀ, ಅವರ ವರ್ಣಮಾಲೆಯನ್ನಾಗಲೀ ಕಲಿಯುವುದು ಬಳಸಿಕೊಳ್ಳುವುದು ಸುಲಭ ಸಾಧ್ಯವೆನ್ನುವಂತಿಲ್ಲ. ಅದು ಸುಲಿದ ಹಣ್ಣುತಿಂದಂತೆಯೆಂದು ಹೇಳಿದರೆ, ಅನನುಭವದ ಮಾತದು ಎಂದು ಯಾರೂ ಹೇಳಬಹುದು.

ಇನ್ನು ನಾವು ವಿಷಯದತ್ತ ಹೊರಳುವ. ನಮ್ಮ ಕರ್ನಾಟಕ ರಾಜ್ಯವನ್ನೇ ತೆಗೆದುಕೊಳ್ಳುವ ನಾವೆಷ್ಟು ಭಾಷೆ ಕಲಿಯಬೇಕು? ನಮ್ಮ ಮಾತೃ ಭಾಷೆ ಕನ್ನಡವಾದರೂ ನ್ಯಾಯವಾಗಿ ಮತ್ತು ಸತ್ಯವಾಗಿ ಅದು ಪ್ರಾದೇಶಿಕ ಭಾಷೆ. ರಾಜ್ಯದ ಒಂದೊಂದುಕಡೆತುಳು, ಮಲೆಯಾಳ, ತೆಲುಗು, ತಮಿಳು, ಉರ್ದು, ಮರಾಠಿ ಕೊಂಕಣಿ ಮೊದಲಾದ ಅನ್ಯ ಭಾಷೆಗಳು ಮನೆ ಮಾತಿನಲ್ಲಿ ಬಳಸಲಾಗುತ್ತಿವೆ. ಇನ್ನು ಕನ್ನಡವನ್ನೇ ಉಪಯೋಗಿಸುವವರಾದರೂ ಆಯಾ ಸ್ಥಾನೀಯ ನುಟ್ಟಿದ ಭಾಷೆಯನ್ನೇ ಬಳಸುತ್ತಾರೆ ಹಾಗಾಗಿ ನಮ್ಮ ರಾಜ್ಯದ ಮಕ್ಕಳು ಶಾಲೆಯನ್ನು ಪ್ರಾದೇಶಿಕದೊಡನೆಯೇ ಕಲಿಯಬೇಕು—ಸಾಹಿತ್ಯಿಕ ಭಾಷಾರೂಪೀ ಕನ್ನಡವನ್ನು, ಅದರ ಲಿಪಿಯನ್ನು, ಕಲಾತ್ಮಕವಾಗಿರುವ ಈ ಕನ್ನಡ ವರ್ಣಮಾಲೆಯ ಎಲ್ಲ ಅಕ್ಷರಗಳನ್ನು ಬರೆಯಲು ತಿಳಿಯದ ಪದವೀಧರರೂ ಇಂದು ಸಾಕಷ್ಟು ಇರುವಾಗ ಸಣ್ಣ ಮಕ್ಕಳ ಪಾಡೇನು? ಅಂತೂ ಬಹು ಪ್ರಯಾಸದಿಂದ ಮೊದಲು ಭಾಷೆಯನ್ನೂ ಅನಂತರ ಲಿಪಿಯನ್ನೂ ಕರಗತಮಾಡಿಕೊಂಡ ಈ ಎಳೆಯ ಮಕ್ಕಳು ಒಂಬತ್ತು—ಹತ್ತು ವರ್ಷ ಪ್ರಾಯವಾಗುತ್ತಲೇ ಅವರು ಕಲಿಯಬೇಕು ಆಂಗ್ಲಭಾಷೆ ಮತ್ತು ಲಿಪಿಗಳನ್ನು. ಪ್ರಾದೇಶಿಕ ಭಾಷೆಯನ್ನೇ ಕಲಾತ್ಮಕವಾಗಿ ಸುಂದರವಾಗಿ ಬರೆಯಲು ಬಾರದ ಆ ಬುರುಡೆಗಳಿಗೆ ಹೊಸ ಭಾಷೆಯ ಪ್ರವೇಶವಾಗುವುದು. ಅಲ್ಲಿಗೆ ಅದೂ ಇಲ್ಲ—ಇದೂ ಇಲ್ಲವೆಂಬಂತಹ ದುಃಸ್ಥಿತಿಯೊದಗುವುದು. ಅದೂ ಹತ್ತುವರ್ಷದ ನಂತರ ಮಕ್ಕಳ ಮನೋನುಟ್ಟಿನ ಗಣನೀಯ ಪ್ರಮಾಣವಲ್ಲಿ ಏರುತ್ತ ಬರುವುದರಿಂದ ಒತ್ತಾಯದಿಂದ ಬಂದ ಉತ್ಸಾಹದ ಭರದಲ್ಲಿ ಹೇಗಾದರೂ ಸುಧಾರಿಸಿಕೊಂಡು ಬಂದಾವು ಎನ್ನುವಷ್ಟರಲ್ಲಿಯೇ ದೇವನಾಗರಿ ಲಿಪಿ ಹಾಗೂ ಹಿಂದೀ ಭಾಷೆಯು ಅವರ ಮೆದುಳನ್ನು ತಿನ್ನ ತೊಡಗುವುದು. ರಾಷ್ಟ್ರೀಯ ವಾದಿಗಳು ಪ್ರಾದೇಶಿಕ ಭಾಷೆ ಕನ್ನಡ, ಭಾರತದ 'ರಾಷ್ಟ್ರ' ಭಾಷೆ ಹಿಂದಿ ಮತ್ತು ಅಂತಾರಾಷ್ಟ್ರೀಯ ಭಾಷೆ ಇಂಗ್ಲಿಷನ್ನು ಅಧ್ಯಯನ ನಡೆಯಬೇಕೆಂದು ಹೇಳುತ್ತಾರೆ. ಆದರೆ, ಉಪದೇಶವೀಯುವವರ ಅಭಿಪ್ರಾಯವೆಲ್ಲವೂ ಏಕರೂಪವಾಗಿದ್ದರೆ, ತೊಂದರೆಯಿಲ್ಲ; ಸಂಸ್ಕೃತಿಪ್ರಿಯರ ಉಪದೇಶದ ಮಾದರಿ ಬೇರೆಯೇ ಒಂದಾಗಿದೆ. ನಮ್ಮ ಸಂಸ್ಕೃತಿಯ ಅರಿವು ನಮಗಾಗ ಬೇಕಾದರೆ, ಸಂಸ್ಕೃತ

(ಅನೇ ಸುಖ ನೋಡಿರಿ)

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ, ಪ್ರತಿಯೊಬ್ಬರಿಗೂ ಅತ್ಯುಪಯುಕ್ತವಾದ ಹೊಸ ಪುಸ್ತಕ

LETTER WRITING MADE EASY

ಸುಲಭದಲ್ಲಿ ಪತ್ರಲೇಖನ

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.

ಬೆಲೆ ರೂ. 1-4-0 (1=25).

ಮನೆಯೆಂದಾದಲ್ಲಿ ಇರಲೇಬೇಕಾದ ಗೃಹವೈದ್ಯ

ಮನೆ ಮದ್ದು

ಬರೆದವರು: ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್, ಎಲ್.ಐ.ಎಮ್. ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ. ಹೆರಿಗೆ ವಿಧಾನ ಸವಿಸ್ತಾರವಾಗಿ ಕೊಡಲ್ಪಟ್ಟಿದೆ. ಬೆಲೆ ರೂ. ಎರಡು.

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ— ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—

ವಿ| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

(ENGLISH MADE EASY)

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ. ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು.

ಬೆಲೆ: ರೂ. ಎರಡು. ಉತ್ತಮ ಪ್ರತಿ: ರೂ. ಎರಡೂವರೆ

ವಿ. ಸೂ.—ಆಯಾಯ ಪುಸ್ತಕದ ಬೆಲೆಯೊಂದಿಗೆ ಟಪ್ಪಾಲು ಖರ್ಚಿಗಾಗಿ 0=25 N.P ಸೇರಿಸಿ ಮನಿಆರ್ಡರು ಮಾಡಿದರೆ ಪುಸ್ತಕಗಳಿಸಲಾಗುವುದು.

ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ಸಿಗದಿದ್ದರೆ ನಮಗೆ ಬರೆಯಿರಿ.

ನವಭಾರತ ಪುಸ್ತಕ ಭಂಡಾರ, ಉಡುಪಿ

> ಶುದ್ಧಭಾವದಿಂದ ಮಾಡುವ ಕೆಲಸದ ಪರಿಣಾಮವು ಸದಾ ಶುಭವಾಗಿರುತ್ತದೆ.

ನವಯುಗ

ಸಂಪುಟ ೪೦	ಉಡುಪಿ ೨-೨-೧೯೩೧	ವಾರ ೨೧

ಶಿಕ್ಷಣದ ಮಾಧ್ಯಮ

ಕೇಂದ್ರ ಶಿಕ್ಷಣ, ವೈಜ್ಞಾನಿಕ ಸಂಶೋಧನೆ ಮತ್ತು ಸಾಂಸ್ಕೃತಿಕ ಮಂತ್ರಿಶಾಲೆಯ ಪ್ರತಿನಿಧಿಗಳಿಂದಲೂ ಇತರ ತಜ್ಞರಿಂದಲೂ ಕೂಡಿದ ಹದಿನಾರು ಜನ ವಿದ್ಯಾತಜ್ಞರ ಸಮಿತಿಯೊಂದನ್ನು ವಿಶ್ವವಿದ್ಯಾನಿಲಯ ಸಹಾಯಧನ ಆಯೋಗವು ನೇಮಿಸಿ ಭಾರತದಲ್ಲಿ ಶಿಕ್ಷಣ ಮಾಧ್ಯಮದ ಪ್ರಶ್ನೆಯನ್ನು ಪರಿಶೀಲಿಸಲು ಕೇಳಿಕೊಂಡಿತ್ತು. ಈ ತಜ್ಞ ಸಮಿತಿಯು ಸದ್ಯ ತನ್ನ ವರದಿಯನ್ನು ಬಹಿರಂಗಪಡಿಸಿದೆ. ಇಂಗ್ಲಿಷ್‌ನಿಂದ ಹಿಂದಿಗೆ ಅಥವಾ ಇನ್ನಿತರ ಭಾರತೀಯ ಭಾಷೆಗಳಿಗೆ ವಿಶ್ವವಿದ್ಯಾಲಯ ಶಿಕ್ಷಣ ಮಾಧ್ಯಮವನ್ನು ಬದಲಾಯಿಸುವ ಬಗ್ಗೆ ಅಭಿಪ್ರಾಯವೀಯುವ ಅಥವಾ ಈ ಬದಲಾವಣೆಯು ಅಪೇಕ್ಷಣೀಯವೇ ಅಲ್ಲವೇ ಎನ್ನುವ ಕೆಲಸ ಸಮಿತಿಗೆ ಕೂಡಲ್ಪಟ್ಟಿರಲಿಲ್ಲ. ಇಂಗ್ಲಿಷಿನ ಸ್ಥಾನವನ್ನು ಇತರ ಭಾರತೀಯ ಭಾಷೆಗಳಿಗೆ ಇತ್ತು ಅವನ್ನೇ ಮಾಧ್ಯಮವಾಗಿ ಬಳಸಲು ನಿರ್ಧರಿಸುವುದಾದರೆ ಯಾವ ಯಾವ ಪೂರ್ವತಯಾರಿ ಬೇಕಾಗುವುದೆಂಬುದನ್ನು ಸಮಿತಿಯು ವಿಚಾರಿಸಬೇಕಾಗಿತ್ತು. ಶಿಕ್ಷಣ ಮಾಧ್ಯಮದಲ್ಲಿ ಸರಿಪರ್ತನೆಯು ರಾತ್ರಿ ಬೆಳಗಾಗುವುದರೊಳಗೆ ನಡೆಯುವ ಸಾಹಸ ಪ್ರದರ್ಶನವಲ್ಲವೆಂದೂ ಅದು ಕ್ರಮಗತವಾಗಿ, ಹಂತ ಹಂತವಾಗಿ ನಡೆಯುವುದು ಅಪೇಕ್ಷಣೀಯವೆಂದೂ ಸಮಿತಿಯು ಅಭಿಪ್ರಾಯಪಟ್ಟಿದೆ; ಆದರೂ ನಾವು ಮುಂದಕ್ಕಾದರೂ ಇಂಗ್ಲಿಷಿನ ಮುಖವನ್ನೇ ನೋಡಿಕೊಳ್ಳಬೇಕಾಗುವ ಪರಿಸ್ಥಿತಿಯಿದೆಯೆಂದು ಹೇಳಿದೆ. "ಸದ್ಯ ಪೃತ್ತಿಪರ ಮತ್ತು ಸ್ನಾತಕೋತ್ತರ ವರ್ಗಗಳಲ್ಲಿ ಮಾಧ್ಯಮ ಭಾಷೆ ಬದಲಾವಣೆ ಹೊಂದಬಾರದು; ಸ್ನಾತಕ ವರ್ಗಗಳಲ್ಲಿಯೂ ವಿಜ್ಞಾನ ವಿಷಯಗಳ ಮಟ್ಟಿಗೆ ಇಂಗ್ಲೀಷೇ ಮುಂದುವರಿಯಬೇಕು; ವಿಜ್ಞಾನೇತರ ವಿಷಯಗಳನ್ನು ಯಾ ಪ್ರದೇಶ ಭಾಷೆಯ ಮೂಲಕ ಬೋಧಿಸುವುದು ಅಷ್ಟು ಕಠಿಣವಲ್ಲವೆಂಬುದನ್ನು ನಾವು ಒಪ್ಪಿಕೊಂಡರೂ ಪಠ್ಯ ಪುಸ್ತಕಗಳು, ತಿಳುವಳಿಕೆಯ ಹಿನ್ನೆಲೆ, ಸಹಾಯಕ ಗ್ರಂಥಗಳು, ಪ್ರಾದೇಶಿಕ ಮತ್ತು ಇಂಗ್ಲಿಷ್ ಭಾಷೆಗಳೆರಡರಲ್ಲೂ ಸಿದ್ಧಾಂತರಿಸುವ ಅಧ್ಯಾಪಕರ ತರಬೇತಿ--ಇವು ಅತ್ಯವಶ್ಯ ಮತ್ತು ಅನಿವಾರ್ಯವೆಂಬುದನ್ನು ಗಮನಿಸಬೇಕಾಗುವುದು. ಪ್ರಾದೇಶಿಕ ಭಾಷಾ ಮಾಧ್ಯಮವನ್ನು ಬಯಸುವ ವಿಶ್ವವಿದ್ಯಾಲಯಗಳೇ ಇವುಗಳ ಹೊಣೆಗಾರಿಕೆಯನ್ನು ಹೊರಲು ಸಿದ್ಧವಿರಬೇಕು, ಆರ್ಥಿಕ ಹಾಗೂ ಇತರ ನೆರವಿಗಾಗಿ ಸರಕಾರ ಹಾಗೂ ನಾಗರಿಕರತ್ತ ಕೈಜಾಚಬಹುದು" ಎಂದು ಈ ಹೊಡಪ ತಜ್ಞ ಸಮಿತಿಯ ಅಭಿಮತ ದಕ್ಷಿಣ ಭಾರತದ ಎಂಟು ವಿಶ್ವವಿದ್ಯಾಲಯಗಳ ಉಪಕುಲಪತಿಗಳು ಒಂದೆಡೆ ಮಾಸ ಮೊದಲು ಸೇರಿ ಸ್ವೀಕರಿಸಿದ ಗೊತ್ತುವಳಿಯನ್ನು ಈ ತಜ್ಞ ಸಮಿತಿಯು ಹೆಚ್ಚಿಗೆ ಬಿಟ್ಟಿರುವುದಿಲ್ಲವೆಂದೇ ಹೇಳಬೇಕು; ಮತ್ತು ಅದರ ಈ ಅಭಿಪ್ರಾಯವು ಪರ್ಯಾಲೋಚನಾರ್ಹವಾಗಿರುವುದು.

ಇಂಗ್ಲಿಷ್ ಭಾಷೆಯ ಮಟ್ಟವನ್ನು ಎತ್ತರಕ್ಕೆ ತರಬೇಕೆಂಬುದು ಈ ಸಮಿತಿಯ ಇನ್ನೊಂದು ಅಭಿಪ್ರಾಯ. ಕೆಲವೊಂದು ವಿಷಯಗಳನ್ನು ಕಲಿಸಲು ಪ್ರಾದೇಶಿಕ ಭಾಷೆಗಳನ್ನೇ ಮಾಧ್ಯಮವಾಗಿ ಬಳಸಿಕೊಂಡ ಕಾಲೇಜುಗಳಲ್ಲಿ ಯಾದರೂ ಇಂಗ್ಲಿಷಿನ ಸ್ಥಾನಮಾನವನ್ನು ಕೀಳುಗೊಳಿಸಬಾರದು; ಕಾಲೇಜುಗಳಿಗೆ ಯಾವುದೇ ಮಾಧ್ಯಮವನ್ನು ಬಳಸಿಕೊಳ್ಳುವ ಸ್ವಾತಂತ್ರ್ಯವೀಯಬೇಕು; ಕೇಂದ್ರ ವಿಶ್ವವಿದ್ಯಾಲಯಗಳು ಮತ್ತು ಕೇಂದ್ರ ಸರಕಾರವು ನಡೆಸುವ ಸಂಸ್ಥೆಗಳಲ್ಲಿ ಪರ್ಯಾಯವಾಗಿ ಇಂಗ್ಲಿಷ್ ಮಾಧ್ಯಮವನ್ನು ಇರಗೊಳಿಸಬೇಕು ಎಂಬ ಸಮಿತಿಯ ಅಭಿಪ್ರಾಯವು ಅರ್ಥವತ್ತಾಗಿದೆ. ಯಾವುದೇ ಒಂದು ಪ್ರದೇಶದ ವಿಶ್ವವಿದ್ಯಾಲಯಗಳು ಇಂಗ್ಲಿಷನ್ನು ಬಿಟ್ಟುಕೊಟ್ಟು ತಮ್ಮ ಪ್ರಾದೇಶಿಕ ಭಾಷೆಯನ್ನಷ್ಟೆ ಶಿಕ್ಷಣಮಾಧ್ಯಮವಾಗಿಲು ಳಿಸಿಕೊಂಡರೆ, ಅಖಿಲಭಾರತೀಯ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಕೇಂದ್ರ ವಿಶ್ವವಿದ್ಯಾಲಯಗಳು ಕೆಲಸಮಾಡುವಂತಾಗುವುವು. ಏಕೆಂದರೆ, ಒಂದು ಪ್ರದೇಶದ ವಿದ್ಯಾರ್ಥಿಯು ಇನ್ನೊಂದು ಪ್ರಾದೇಶಿಕ ಭಾಷೆಯ ಮೂಲಕ ಶಿಕ್ಷಣ ಪಡೆಯುವುದು ಸುಲಭಸಾಧ್ಯವಲ್ಲ. ಅಲ್ಲದೆ ಸಮಸ್ತ ಭಾರತೀಯರಿಗೂ ಸಮಾನಾವಕಾಶವನ್ನೀಡುವುದು ಇಂತಹ ಶೈಕ್ಷಣಿಕ ಸಂಸ್ಥೆಗಳ ಕರ್ತವ್ಯವಾದುದರಿಂದಲೂ ಅಲ್ಲಿ ಇಂಗ್ಲಿಷ್ ಮಾಧ್ಯಮವನ್ನು ಉಳಿಸಿಕೊಳ್ಳುವುದು ವಿಹಿತವೆ.

ವಿದ್ಯಾರ್ಥಿಗಳು ಮಾತೃಭಾಷೆಯಲ್ಲಿ ವಿಷಯವನ್ನು ಗ್ರಹಿಸುವಷ್ಟು ಮತ್ತು ಅಧ್ಯಯನ ನಡೆಸುವಷ್ಟು ಬೇರೆ ಭಾಷೆಯ ಮೂಲಕವಲ್ಲವೆಂಬುದೂ ಪರಭಾಷೆಯು ಬೋಧ್ಯ ಭಾಷೆಯಾಗಿರುವುದು ಹಲವು ಸಂದರ್ಭಗಳಲ್ಲಿ ಹೊರಲಾರದ ಚಕ್ಕಡಿಯಂತಾಗಿರುವುದೆಂಬುದೂ ಈ ಕಾರಣದಿಂದ ವಿದ್ಯಾರ್ಥಿಯು ಸುಲಭದಲ್ಲಿ ಅಧಿಕ ಜ್ಞಾನಗಳಿಸಬೇಕೆದ್ದರೆ ಮಾತೃ ಭಾಷೆಯೇ ಶಿಕ್ಷಣ ಮಾಧ್ಯಮವಾಗಬೇಕೆಂಬುದೂ ಯಥಾರ್ಥವೇ. ಪ್ರಾದೇಶಿಕ ಭಾಷೆಗಳಲ್ಲಿ ಪಠ್ಯ ಪುಸ್ತಕಗಳು ಹಾಗೂ ಸಾಕಷ್ಟು ಸಹಾಯಕ ಗ್ರಂಥಗಳ ನಿರ್ಮಾಣವಾಗ ಬೇಕಾಗಿದೆ. ಇವು ಇಂಗ್ಲಿಷ್ ಪುಸ್ತಕಗಳ ಅನುವಾದವಾಗಿದ್ದರೆ ಮಾತ್ರ ಸಾಲದು; ಅವುಗಳಲ್ಲಿ ಸುಲಲಿತವಾದ ಮಾತೃ ಭಾಷೆ ಪ್ರಸಹಿಸುವಂತಿರಬೇಕು; ರಸವತ್ತಾಗಿ ವಿವರಣೆ ತುಂಬಿರಬೇಕು. ಈಗ, ವಿದ್ಯಾರ್ಥಿಗಳಿಗೂ ಅಧ್ಯಾಪಕರಿಗೂ ಉಪಕಾರವಾಗುವುದು. ಆದರೆ, ಶಿಕ್ಷಣ ಮಾಧ್ಯಮವನ್ನು ಬದಲಾಯಿಸದೆ ಇಂತಹ ಅಮೂಲ್ಯ ಬೃಹತ್ ಗ್ರಂಥಗಳು 'ಹೊರ ಬರುವ ನಿರೀಕ್ಷೆಯಿಲ್ಲ; ಬಂದರೂ ಅದಕ್ಕೆ ಜನಾನುರಾಗವೂ ದೊರೆಯುವಂತಿಲ್ಲ; ಇವು ಹೊರಬಾರದೆ ಶಿಕ್ಷಣ ಮಾಧ್ಯಮವನ್ನು ಬದಲಾಯಿಸದೆ ಬಳಿತರೆ, ನಮ್ಮ ಗುರಿ ಕೊನೆಯ ವರೆಗೂ ಸಾಧಿಸಲ್ಪಡುವ ನಿರೀಕ್ಷೆಯಿಲ್ಲ. ಆದುದರಿಂದ, ಇಲ್ಲಿ ಯಾವುದಾದರೂ ಒಂದು ಸಾಹಸದಿಂದ ಮುಂದುವರಿಯಬೇಕಾಗಿದೆ; ಸಾಧ್ಯವಿರುವಲ್ಲಿ ಶಿಕ್ಷಣ ಮಾಧ್ಯಮದ ಪರಿವರ್ತನೆಯೇ ಸಾಧ್ಯವಾಗಿ ಆದಾನಂತರ ಗ್ರಂಥಗಳ ಸಾಹಿತ್ಯಗಳ ಸೃಷ್ಟಿಯೂ ದೀತು. ಆದರೆ, ಇಂದು ವ್ಯವಹಾರ್ಯವೆ? ಪರಿಣಾಮ ರಮಣೀಯವೆ? ಇಲ್ಲದ ಹೊಸತನ್ನು ನಂಬಿ ಹಳೆಯದನ್ನು ಕಿತ್ತು ಬಿಸುಡುವುದು ಸರಿಯೆ?—ಅದೂ ಅಲ್ಲ. ಇದಕ್ಕಿರುವ ಏಕಮಾತ್ರ ಉಪಾಯವೆಂದರೆ, ಹಂತ ಹಂತಗಳಲ್ಲಿ ಮೆಲ್ಲ ಮೆಲ್ಲನೆ ಪ್ರಾದೇಶಿಕ ಭಾಷಾ ಮಾಧ್ಯಮವನ್ನು ಪರ್ಯಾಯವಾಗಿ ಮುಂದುತರುವುದು ಮಾತ್ರ. ಆಗ ತುಸು ಹೆಚ್ಚುಕಡಿಮೆಯಾದರೂ ಸುಧಾರಿಸಿಕೊಂಡು ಹೋಗಬಹುದು. ಅದು ಬಿಟ್ಟು ಇಂಗ್ಲಿಷನ್ನೇ ಶಿಕ್ಷಣ ಮಾಧ್ಯಮವಾಗಿ ಇನ್ನೂ ಮುಂದುವರಿಯಗೊಡುವುದು ಸಾಮಾನ್ಯ ಮಟ್ಟದ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಸರಿಯಲ್ಲ. ಸಮಿತಿಯು ವ್ಯಕ್ತಪಡಿಸಿದ ಎರಡು ಅಭಿಪ್ರಾಯಗಳನ್ನು ಮುಖ್ಯವಾಗಿ ಗಮನಿಸಿ ಈ ಬಗ್ಗೆ ಕಾರ್ಯರಂಗಕ್ಕೆಳಿಯುವುದು ಅವಶ್ಯವಿದೆ.

ಜನಗಣನೆ

ನಮ್ಮ ಭಾರತವು ಸ್ವತಂತ್ರವಾದ ನಂತರ ಈ ವರ್ಷ ಎರಡನೆಯ ಬಾರಿಗೆ ಸಾರ್ವತ್ರಿಕ ಜನಗಣನೆಯು ನಡೆಯಲಿದ್ದು ಆ ಬಗ್ಗೆ ತಕ್ಕ ಪೂರ್ವಸಿದ್ಧತೆಗಳು 'ಸರಿಯಾಗಿ' ನಡೆಯುತ್ತಿವೆ. ಸಂಪ್ರದಾಯದಂತೆ ಅಧ್ಯಾಪಕರನ್ನೇ ಅಧಿಕವಾಗಿ ಜನಗಣಕರನ್ನಾಗಿ ನೇಮಿಸಲಾಗಿದೆ. ಆದರೆ, ಒಂದು ಊರಿನ ಅಧ್ಯಾಪಕನಿಗೆ ಮತ್ತೊಂದು ಗ್ರಾಮದ ಜನಗಣನೆಯ ಕಾರ್ಯವನ್ನು ಕೊಡುವಂತಿದ್ದರೂ ಅತನು ಶಾಲಾ ಸಮಯದನಂತರವೇ ಅದಕ್ಕೆ ತೆರಳಬೇಕಾಗಿದೆ ಗ್ರಾಮೀಣ ಪ್ರದೇಶಗಳ ಜನಗಣನೆಯು ಈ ಕಾರಣದಿಂದ ಸಮರ್ಪಕವಾಗಿ ನಡೆಯುವುದು ಸಂದೇಹವೇ; ಅಧ್ಯಾಪಕರಿಗಂತೂ ತ್ರಿಶಂಕು ಸ್ವರ್ಗವೇ. ಈ ಸಂಬಂಧದಲ್ಲಿ ಮೊದಲೇ ಆಯಾ ಗ್ರಾಮಕ್ಕೆ ಆಯಾ ಗ್ರಾಮಶಾಲೆಯ ಅಧ್ಯಾಪಕರನ್ನೇ ನೇಮಿಸುವ ಜಾಣ್ಮೆಯನ್ನು ವಹಿಸಬಹುದಿತ್ತು. ಅಧ್ಯಾಪಕರಿಗೆ ಶಾಲೆಗೆ ಹಾಜರಾಗುವುದರಿಂದ ವಿನಾಯತಿಯನ್ನು ಕೊಟ್ಟು ಈ ತೊಂದರೆಯನ್ನು ನೀಗಿಸಿಕೊಳ್ಳಬಹುದಾಗಿದೆ. ಆದರೆ, ಅಷ್ಟುದಿನ ವಿನಾಯತಿ ಕೊಡಲಾದೀತು? ಕೆಲವೊಂದು ಶಾಲೆಗಳಲ್ಲಿ ಹಲವಾರು ಮಂದಿಗೆ ಜನಗಣತಿಯ ಕಾರ್ಯ ಬಂದಿರುವ ಸಂದರ್ಭಗಳೂ ಇವೆ. ಆದುದರಿಂದ ಇಡಿ ಜನಗಣನೆಯ ಅವಧಿಯಲ್ಲವಾದರೂ, ಕೆಲವು ದಿನಗಳ ಮಟ್ಟಿಗಾದರೂ ಶಾಲೆ—ಮನೆ—ಹಾಗೂ ಜನಗಣನೆಯ 'ಗ್ರಾಮ ದೂರ ದೂರವಿರುವ ಅಧ್ಯಾಪಕರ ಮಟ್ಟಿಗೆ ಅಧಿಕೃತವಾಗಿ ವಿದ್ಯಾ ಇಲಾಖೆಯವರು ಓ. ಡಿ. (On Duty) ರಜೆಯನ್ನು ಸೀಡುವ ಬಗ್ಗೆ ಆಲೋಚಿಸುವುದೊಳ್ಳೆಯದು. ಜನಗಣನೆಯ ಅಧಿಕಾರಿಗಳು ವಿದ್ಯಾ ಇಲಾಖೆಯವರಿಗೆ ಈ ಬಗ್ಗೆ ಅಜ್ಞೆ ವಿಧಿಸಲು ಕೇಳಿಕೊಳ್ಳುವುದು ಹಿತಕರ. ಜನಗಣನೆ ಯಶಸ್ವಿಯಾಗಬೇಕಾದರೆ, ಇದೂ ಒಂದು ಸಾಧನ.

ಬತ್ತಕ್ಕೆ ತಗಲಿರುವ ಕೀಟಗಳ ನಿವಾರಣೋಪಾಯ

ತಿರಿ ಅಥವಾ ತೊಪ್ಪೆಗಳಿಗೆ ಮತ್ತು ಮುಡಿವಗೈರೆಗಳಲ್ಲಿ ದಾಸ್ತಾನ ಮಾಡಿರುವ ೧೧ನೇ ಬೆಳೆ (ಕಾರ್ತಿ)ಯ ಬತ್ತ ಮತ್ತು ಬೀಜ ಇವುಗಳಿಗೆ ತಗಲಿರುವ ಕೀಟಗಳಿಗೆ ಕೆಳಕಂಡಂತೆ ನಿವಾರಣೋಪಾಯವನ್ನು ಸೂಚಿಸಲಾಗಿರುತ್ತದೆ.

ತಿರಿ ಮತ್ತು ಮುಡಿ ವಗೈರೆಗಳನ್ನು ಕೂಡ್ಲೆ ಬಿಚ್ಚಿ ಅಂಗಳದಲ್ಲಿ ಹರಡಿ 3—4ದಿನ ಬಿಸಿಲನ್ನಲ್ಲಿ ಒಣಗಿಸುವುದು.

ಜೆನ್ನಾಗಿ ಒಣಗಿದ ಬತ್ತವನ್ನು ಗಾಳಿಯಲ್ಲಿ ತೂರಿ ಜಳ್ಳು ವಗೈರೆಗಳನ್ನು ಬೇರ್ಪಡಿಸುವುದು. ಹೀಗೆ ಸ್ವಚ್ಛಗೊಳಿಸಿದ ಬತ್ತವನ್ನು ಗೋಣಿ ಚೀಲಗಳಲ್ಲಿ ತುಂಬಿಸಿ ದಾಸ್ತಾನ ಮಾಡುವುದು ಒಳ್ಳೆಯದು. ದಾಸ್ತಾನ ಮಾಡುವ ಕೋಣೆಯನ್ನೂ ಮುಂಚಿತವಾಗಿ ಬಿ. ಹೆಚ್. ಸಿ. ೯೦% ಹುಡಿಯನ್ನು ನೀರಲ್ಲಿ ಬೆರಸಿ (1 ರಾತ್ಲು-10ಗ್ಯಾಲನ್ ನೀರಿನಲ್ಲಿ ಸ್ಪ್ರೆ ಮಾಡಿ ಅಥವಾ ಬಿ. ಹೆಚ್. ಸಿ. 10% ಹುಡಿಯನ್ನು ಕೋಣೆಗೆ ಉದಿರಿಸಿ ಮೂಟೆಗಳನ್ನು ದಾಸ್ತಾನು ಮಾಡಬಹುದು ಮತ್ತು ಮೂಟೆಗಳ ಮೇಲುಗಡೆಯಲ್ಲಿ 10% ಹುಡಿಯನ್ನು ಹರಡಬಹುದು.

ಬೀಜ ಭತ್ತಕ್ಕೆ ಮೇಲ್ಕಂಡಂತೆ ಮಾಡುವುದರ ಜೊತೆಗೆ ಒಂದು ಮುಡಿ ಭತ್ತಕ್ಕೆ 5ತೊಲೆ ಬಿ. ಹೆಚ್ ಸಿ. ಹುಡಿಯನ್ನು ಮಿಶ್ರಮಾಡಿ (1 ರಾತ್ಲು ಬಿ ಹೆಚ್ ಸಿ. 10% 8ಮುಡಿ ಬತ್ತ) ದಾಸ್ತಾನು ಮಾಡ ಬಹುದು. ಹೆಚ್ಚಿನ ವಿವರಗಳಿಗೆ ನಿಮ್ಮ ಹತ್ತಿರದ ವ್ಯವಸಾಯ ಅಧಿಕಾರಿಗಳನ್ನು ಬೇಟಿಮಾಡಿ ಸಲಹೆ ಪಡೆಯ ಬಹುದು—ಎಂದು ಸಂಬಂಧಪಟ್ಟವರು ತಿಳಿಸುತ್ತಾರೆ.

ಕಾಲ ಬದಲಾಗಿದೆ....

'ಕಾಲಕ್ಕೆ ತಕ್ಕ ವೇಶ' ಹಾಕುವಲ್ಲಿ ನಮ್ಮ ದೇಶದ ನೂರಾರು ರಾಜ ಮಹಾರಾಜರು ತಪ್ಪಿರುವುದರಿಂದಲೇ ಅವರ ಬಗ್ಗೆ ಜನತೆಯಲ್ಲಿ ಸದಭಿಪ್ರಾಯ ಇನ್ನೂ ಮೂಡಿಬರುವುದಿಲ್ಲ. ಮೈಸೂರಿನ ಶ್ರೀ ಜಯಚಾಮರಾಜರು ದಸರದ ಅವಸರದಲ್ಲಿ ದರ್ಬಾರು, ಜಂಬೂಸವಾರಿಗಳನ್ನು ನಡೆಸಿ ರಾಜವೈಭವವನ್ನು ಪ್ರದರ್ಶಿಸುತ್ತಿರುವ ಸಂಗತಿ ನಮಗೆಲ್ಲಾ ವಿದಿತವಿದೆ. ಈಗ ಜಯಸುರದ ಮಹಾರಾಜರು ಬ್ರಿಟಿಷಿನ ರಾಣಿ ಎಲಿಜಬೆಥರ ಗೌರವಕ್ಕಾಗಿ ಏರ್ಪಡಿಸಿದ ಭೋಜನ ಸತ್ಕಾರದಲ್ಲಿ ಯೂ ಇದೇ ಮಾದರಿಯ ವೈಭವ ತೋರಿಬಂದಿದೆ. ಈ ದೇಶೀಯ ರಾಜರು ಪ್ರಜಾಪ್ರಭುತ್ವದ ತತ್ವಗಳನ್ನೂ ನೀತಿಯನ್ನೂ ಇನ್ನೂ ಅರಿತುಕೊಳ್ಳದಿರುವುದರಿಂದಲೇ ; ಬಸ್ತಾರದ, ಮಹಾರಾಜರು ಪಕ್ಷಕಟ್ಟುವ ವಿಚಿತ್ರವಾದವನ್ನು ಮುಂದೂಡಿದ್ದಾರೆ. ಅ ದೃಷ್ಟಿಯಲ್ಲಿ ಇದ್ದುದರಲ್ಲಿ ವಾಸಿ ಮೈಸೂರಿನ ಮಹಾರಾಜರು.

ಭಾರತದ ಕಣ್ಣು—ಆಗ್ರಾ

ಸೌಂದರ್ಯದ ಉಪಾಸಕರು ಸೌಂದರ್ಯ ಸವಿಸವಿದು ದಣಿಯಲಾರರು. ಬ್ರಿಟಿಷಿನ ರಾಣಿಯು ಮನುತಾಜಳ ಅಮೃತ ಸ್ಮಾರಕ ತಾಜಮಹಲನ್ನು ಕಂಡು ಆನಂದ ವಿಭೋರರಾದರು. ಪ್ರಪಂಚದ ಸೈಚಿತ್ರ್ಯಗಳಲ್ಲಿ ಒಂದಾದ ತಾಜಮಹಾಲು ಈಗೀಗ ಕೆಡುತ್ತಾ ಕುಬ್ಜಂದಿರುವುದರಿಂದ, ಅದರ ರಕ್ಷಣೆಯೇ ಒಂದು ಹೊರಲಾರದ ಹೊರೆಯಂಬಂತಾಗಿದೆ

ಅಲ್ಲಲ್ಲಿಯ ಸುದ್ದಿಗಳು

ಯಂ. ಜಿ. ಯಂ. ಕಾಲೇಜಿನ ವರ್ಧಂತಿ—ಉತ್ಸವವು ಕಳೆದ ತಾ 21ರಂದು ಮೈಸೂರು ವಿಶ್ವವಿದ್ಯಾನಿಲಯದ ವೈಸ್ ಚಾನ್ಸಲರ್, ಪ್ರೊ| ಎನ್. ಎ. ನಿಕ್ಕಂ ಅವರ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ನೆರವೇರಿತು ಕಾಲೇಜಿನ ಕರೆಸ್ಪೋಂಡೆಂಟ್ ಶ್ರೀ ಟಿ. ಎ. ಪೈಗಳು ಸ್ವಾಗತ ಭಾಷಣ ಮಾಡಿದರು ಮಾಜಿ ಮುಖ್ಯಮಂತ್ರಿಗಳಾಗಿದ್ದ ಶ್ರೀ ಕೆ. ಹನುಮಂತಯ್ಯನವರು ಭಾಷಣಮಾಡುತ್ತ ಉಡುಪಿಯವರ ಕಾರ್ಯ ಕುಶಲತೆಗೆ ಮೆಚ್ಚಿಗೆ ಸೂಚಿಸಿ ಕೆಲವೊಂದು ಸಲಹೆಗಳನ್ನಿತ್ತರು. ಶ್ರೀ ಗಾನೇಟ್ಕರ್ ರೇಗೂರವರು ಮಾಡಿದ ಸ್ವಾಗತ ವಾಚನಕ್ಕೆ ಡಾ. ಕೆ. ಬಿ. ರಾಮಕೃಷ್ಣರಾಯರು ಉತ್ತರವಿತ್ತರು. ಉಡುಪಿ ಲಾಯನ್ಸ್ ಕ್ಲಬ್ಬಿನವರು ಕಾಲೇಜಿಗೆ ಕೊಟ್ಟ ಸಿಂಡಿಕೇಟ್ ಬಾಕ್ ಬ್ಯಾಂಕನ್ನು ಇದೇ ಸಮಯದಲ್ಲಿ ಪ್ರೊ| ನಿಕ್ಕಂರವರು ಉದ್ಘಾಟಿಸಿದರು ಪ್ರಿನ್ಸಿಪಾಲ್ ಎಚ್. ಸುಂದರ ರಾಯರು ಕಾಲೇಜಿನ ವಿವಿಧ ಭಾಗಗಳ ಪ್ರಗತಿಯನ್ನು ನಿವರಿಸಿ ವರದಿಯನ್ನು ಒಪ್ಪಿಸಿದರು. ಅಧ್ಯಕ್ಷರು ಕಾಲೇಜಿನ ಪ್ರಗತಿಯನ್ನು ಶ್ಲಾಘಿಸಿ ಮಾತನಾಡಿದಮೇಲೆ ಪ್ರೊ|ಯು. ಎಲ್. ಆಚಾರ್ಯರು ಧನ್ಯವಾದಗಳನ್ನರ್ಪಿಸಿದರು. ರಾತ್ರಿ ಮನರಂಜನೆಯ ಕಾರ್ಯಕ್ರಮಗಳು ಯಶಸ್ವಿಯಾಗಿ ನೆರವೇರಿದುವು.

ಅದೇ ದಿನ ಬೆಳಿಗ್ಗೆ ಕಾಲೇಜಿನ ಸ್ಟೂಡೆಂಟ್ಸ್ ರಿಕ್ರಿಯೇಶನ್ ಹಾಲಿನಲ್ಲಿ ವೈಸ್ ಚಾನ್ಸಲರಿಗೆ ಪ್ರಿನ್ಸಿಪಾಲರೂ, ಪ್ರಾಧ್ಯಾಪಕರೂ ಉಪಾಹಾರ ಸತ್ಕಾರವಿತ್ತು ದಕ್ಷಿಣ ಕನ್ನಡದ ಕಾಲೇಜುಗಳಲ್ಲಿ ಸ್ನಾತಕೋತ್ತರ ವಿಭಾಗವನ್ನು ಆರಂಭಿಸುವ ಅವಶ್ಯಕತೆ ಮೊದಲಾದ ಕುರಿತು ಮನವಿಯೊಂದನ್ನರ್ಪಿಸಿದರು. ವೈಸ್ ಚಾನ್ಸಲರು ಎಕೇಡಮಿಯ ವಿದ್ಯಾ ಸಂಸ್ಥೆಗಳ ಪ್ರಗತಿಗಾಗಿ ಮೆಚ್ಚಿಗೆ ಸೂಚಿಸಿ ಉತ್ತರವಿತ್ತರು

ಉಡುಪಿ ನಗರ ಸಭೆಯ ರಜತೋತ್ಸವ ಸಮಾರಂಭಗಳು— ಕಳೆದ ತಾ. 21ರಂದು ಸೋದೆ ಶ್ರೀ ವಿಶ್ವೋತ್ತಮ ತೀರ್ಥ ಸ್ವಾಮಿಯವರು ಸಮಾರಂಭವನ್ನು ಉದ್ಘಾಟಿಸಿದರು. ಅಧ್ಯಕ್ಷತೆಯನ್ನು ಮೈಸೂರಿನ ಮಾಜಿ ಮುಖ್ಯಮಂತ್ರಿ ಶ್ರೀ ಕೆ. ಹನುಮಂತಯ್ಯನವರು ವಹಿಸಿದ್ದರು. ಶ್ರೀ ಎ. ಜಿ. ಅಲ್ಸೆಯವರು ಸಂದೇಶಗಳನ್ನೋದಿದ ಮೇಲೆ ನಗರ ಸಭಾಧ್ಯಕ್ಷ ಡಾ| ಕೆ ಎಲ್. ಐತಾಳರು ಸ್ವಾಗತ ಭಾಷಣ ಮಾಡಿದರು.

ತಾ. 22ರಂದು ಎರಡನೇ ದಿನ ಸಮಾರಂಭವು ಡಾ| ಟಿ. ಎಂ. ಎ. ಪೈಗಳ ಅಧ್ಯಕ್ಷತೆಯಲ್ಲಿ ಜರಗಿತು. ಅದೇ ದಿನ ಬೆಳಿಗ್ಗೆ ಕಿನ್ನಿಮೂಲ್ಕಿ ಮುನಿಸಿಪಲ್ ಎಲಿಮೆಂಟರಿ ಶಾಲೆಯ ಹೊಸ ಕಟ್ಟೋಣಕ್ಕೆ ಶಂಕುಸ್ಥಾಪನೆ ಮಾಡಿದ ಶ್ರೀ ಅರೂರು ಲಕ್ಷ್ಮೀನಾರಾಯಣ ರಾಯರು ಭಾಷಣವಿತ್ತರು. ಸಂತೆಕಟ್ಟೆ ಮಾರ್ಕೆಟಿನ ಹೊಸ ಕಟ್ಟಡಕ್ಕೆ ಶಂಕುಸ್ಥಾಪನೆ ಮಾಡಿದ ಶ್ರೀ ಎ. ಎಸ್. ಕುಡುವರ ಧ್ವನಿ ಮುದ್ರಿತ ಭಾಷಣವನ್ನು ಬಿತ್ತರಿಸಲಾಯಿತು. ಮಾಜಿ ಅಧ್ಯಕ್ಷರುಗಳಿಗೆ ಗೌರವ ಸಲ್ಲಿಸಿದ ಮೇಲೆ ಮುಖ್ಯ ಅತಿಥಿಗಳಿಂದ ಭಾಷಣ ನಡೆಯಿತು. ಅಧ್ಯಕ್ಷ ಡಾ. ಪೈಗಳು ಸಂದರ್ಭೋಚಿತ ಭಾಷಣವಿತ್ತರು.

ತಾ 23ರಲ್ಲಿ ಸಮಾರೋಪ ಸಮಾರಂಭವು ಜಿಲ್ಲಾ ಕಾಂಗ್ರೆಸ್ಸಿನ ಅಧ್ಯಕ್ಷ ಶ್ರೀ ಟಿ. ಎ. ಪೈಗಳ ಹಿರಿತನದಲ್ಲಿ ನೆರವೇರಿತು. ಡಾ. ಕೆ. ಎಲ್. ಐತಾಳರು ಸ್ವಾಗತಿಸಿದ ಮೇಲೆ, ಶ್ರೀಗಳಾದ ಕು. ಶಿ. ಹರಿದಾಸ ಭಟ್ಟರೂ, ಬನ್ನಂಜೆ ರಾಮಾಚಾರ್ಯರೂ ಅಭಿನಂದನಾ ಭಾಷಣ ಮಾಡಿದರು. ಅಧ್ಯಕ್ಷರು ಬಹುಮಾನ ವಿತರಣೆ ಮಾಡಿ ನಮ್ಮ ಜಿಲ್ಲೆಯು ಕೈಗಾರಿಕಾ ಜಿಲ್ಲೆಯಾಗಿ ಬೆಳೆದಿಲ್ಲವೆಂದೂ ಉಡುಪಿಯು ವಿದ್ಯಾಕೇಂದ್ರವಾಗಿಯೇ ಉಳಿಯಬಹುದೆಂದೂ ನಗರದ ಬೆಳವಣಿಗೆಗಾಗಿ ನಾವು ವಿಸ್ತೃತ ಯೋಜನೆಯೊಂದನ್ನು ಸಿದ್ಧಪಡಿಸಬೇಕೆಂದೂ ಆರ್ಥಿಕಾಭಿವೃದ್ಧಿಯ ಕುರಿತು ಕೆಲವೊಂದು ಸೂಚನೆಗಳನ್ನಿತ್ತರು ಶ್ರೀ ಆರ್. ಆರ್. ಕುಂದೂರರು ಧನ್ಯವಾದಗಳನ್ನಿತ್ತರು.

ಉಡುಪಿ ಬೋರ್ಡ್ ಹೈಸ್ಕೂಲಿನ ವರ್ಧಂತ್ಯುತ್ಸವವು— ತಾರೀಕು 20-1-61ರಂದು ಪೂರ್ಣಪ್ರಜ್ಞ ಕಾಲೇಜಿನ ಪ್ರಿನ್ಸಿಪಾಲ್ ಶ್ರೀ ವಿ. ಎಂ. ಇನಾಂದಾರ್ ಇವರ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ನೆರವೇರಿತು. ಕಾಲಾ ಮುಖ್ಯೋಪಾಧ್ಯಾಯ ಶ್ರೀ ಕೆ. ವಿಟ್ಟಪ್ಪನವರು ಸ್ವಾಗತ ಭಾಷಣ ಮಾಡಿದರು. ವರದಿ ವಾಚನ, ನಗರ ಸಭೆಯ ಉಪಾಧ್ಯಕ್ಷ ಶ್ರೀ ಬಿ. ರಂಗನಾಥ ಶೆಣೈ ಅವರಿಂದ ಸ್ವಸ್ತಿ ವಾಚನವಾದ ಮೇಲೆ ಅಧ್ಯಕ್ಷರು ಬಹುಮಾನ ವಿತರಣೆಮಾಡಿ ಶಾಲೆಯ ಪ್ರಗತಿಯನ್ನೂ ಅಧ್ಯಾಪಕ ವೃಂದದ ದಕ್ಷತೆಯನ್ನೂ ಶ್ಲಾಘಿಸಿ ಕೆಲವೊಂದು ಸಲಹೆ ಸೂಚನೆಗಳನ್ನಿತ್ತು ಭಾಷಣ ಮಾಡಿದರು ರಾತ್ರಿ ಮನೋರಂಜನಾ ಕಾರ್ಯಕ್ರಮಗಳು ಜಯಶೀಲವಾಗಿ ನೆರವೇರಿದುವು.

ಮಂಜಳಾ ಕ್ಲಿನಿಕ್— ತಾರೀಕು 23-1-61ರಂದು ಉತ್ತರ ಕೊಡಗಿನ ಶುಂಠಿಕೊಪ್ಪದಲ್ಲಿ ಡಾ. ಸಿ.ಮನೋಹರ ಹೆಗ್ಡೆಯವರು 'ಮಂಜುಳಾ ಕ್ಲಿನಿಕ್' ಎಂಬ ಚಿಕಿತ್ಸಾ ಮಂದಿರವನ್ನು ಪ್ರಾರಂಭಿಸಿರುವರು.

ಎ. ಬಿ. ಸೆಟ್ಟಿ ಸ್ಮಾರಕ ವಿದ್ಯಾರ್ಥಿ ನಿಲಯ—ಮೈಸೂರಿನ ಯೂದವಗಿರಿ ಬಡಾವಣೆಯಲ್ಲಿರುವ ಈ ವಿದ್ಯಾರ್ಥಿನಿಲಯದಲ್ಲಿ ಗಣರಾಜ್ಯೋತ್ಸವವು ವಿವಿಧ ಕಾರ್ಯಕ್ರಮಗಳಿಂದ ಆಚರಿಸಲ್ಪಟ್ಟಿತು. ಶ್ರೀ ಎಂ. ಎಸ್. ಶ್ರೀಕಂಠಯ್ಯನವರು ಬೆಳಿಗ್ಗೆ ಧ್ವಜಾರೋಹಣ ಮಾಡಿ ಭಾಷಣವಿತ್ತರು. ಶ್ರೀ ಎಚ್. ಶಿಮ್ಮಪ್ಪ ಭಂಡಾರಿಯವರು ವಂದನೆಗಳನ್ನರ್ಪಿಸಿದರು.

ಅದಮಾರು— ಹಾಸ್ಟೂಲಿನ ಸಾಯಿನ್ಸ್ ಬ್ಲಾಕಿನ ಶಂಕುಸ್ಥಾಪನಾ ಸಮಾರಂಭವು ಇದೇ ತಾ 23-1-61ನೇ ರವಿವಾರ ಬೆಳಿಗ್ಗೆ ಗಂಟೆ 10ಕ್ಕೆ ಮೈಸೂರಿನ ಮಾಜಿ ಮುಖ್ಯಮಂತ್ರಿ ಶ್ರೀ ಕೆ ಹನುಮಂತಯ್ಯನವರ ಅಧ್ಯಕ್ಷತೆಯಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಉಪಕುಲಪತಿಗಳಾದ ಪ್ರೊ| ಎನ್. ಎ. ನಿಕ್ಕಂರವರಿಂದ ನೆರವೇರಿಸಲ್ಪಟ್ಟಿತು. ಅದಮಾರು ಶ್ರೀ ಶ್ರೀಗಳವರು ಅತಿಥಿಗಳನ್ನು ಸ್ವಾಗತಿಸಿದರು. ವಿಶ್ವವಿದ್ಯಾಲಯದ ರಿಜಿಸ್ಟ್ರಾರರೂ ಹಾಜರಿದ್ದರು. ಅಂತ್ಯದಲ್ಲಿ ಮುಖ್ಯೋಪಾಧ್ಯಾಯ ಶ್ರೀ ಎ. ಶ್ರೀನಿವಾಸ ಭಟ್ಟರು ಧನ್ಯವಾದಗಳನ್ನರ್ಪಿಸಿದರು.

ನಂದಳಿಕೆ— ತಾ. 24-1-61ರಂದು ಮುದ್ದಣ ಜಯಂತಿ ಉತ್ಸವ ಹಾಗೂ ಮುದ್ದಣ ಸ್ಮಾರಕ ಯುವಕ ಸಂಘದ ವಾರ್ಷಿಕೋತ್ಸವವು ಶ್ರೀ ಅ. ಗಾ. ಕಿನ್ನಿಗೋಳಿಯವರ ಅಧ್ಯಕ್ಷತೆಯಲ್ಲಿ ಜರಗಿತು ಶ್ರೀ ಎನ್. ಕೃಷ್ಣ ಸೆಟ್ಟರು ಸ್ವಾಗತಿಸಿದರು. ಶ್ರೀ ಕಂಗಿತ್ಲು ರಾಮಚಂದ್ರ ಭಟ್ಟರು ರಚಿಸಿದ ಮುದ್ದಣಭವಾವಚಿತ್ರ ಅನಾವರಣದ ಬಳಿಕ ಕೊಡತ್ತೂರು ಅನಂತಪದ್ಮನಾಭ ಉಡುಪ, ಡಾ, ಕೊರಡ್ಕಲ್ ವೆಂಕಟ್ರಾವ್, ಶ್ರೀ ಎನ್. ಕೃಷ್ಣ ಭಟ್ಟ ಇವರು ಭಾಷಣವಿತ್ತರು. ಅಧ್ಯಕ್ಷರು ಕವಿ ಮುದ್ದಣನ ಪ್ರತಿಭೆಯನ್ನು ವಿವರಿಸಿ ಮಾತನಾಡಿದರು. ಶ್ರೀ ಎಂ. ಸುಂದರರಾಮ ಹೆಗ್ಡೆಯವರು ಧನ್ಯವಾದವನ್ನಿತ್ತರು.

ಮರುದಿನದ ಸಭೆಯು ಶ್ರೀ ಸುರತ್ಕಲ್ ಸುಬ್ರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಎನ್. ನಾರಾಯಣ ಸೆಟ್ಟರು ಸ್ವಾಗತಿಸಿ ಬಳಿಕ ಶ್ರೀ ಪದ್ಮನಾಭ ಸೋಮಯಾಜಿ, ವಿಠಲದಾಸ್ ನಂದಳಿಕೆ ಮತ್ತು ಅಧ್ಯಕ್ಷರು ಭಾಷಣ ಮಾಡಿದರು. ಎರಡೂ ದಿನ ವಿವಿಧ ಮನರಂಜನಾ ಕಾರ್ಯಕ್ರಮಗಳು ನಡೆದವು.

ಕಾರ್ಕಳ— ಸ್ಥಳೀಯ ಶ್ರೀ ಅನಂತಶಯನ ದೇವಸ್ಥಾನದ ಗೋಪುರದಲ್ಲಿ ತಾ 8ರಂದು ಕೂಸ್ಟರ್ ಶ್ರೀ ಸೀನ ದೇವಡಿಗರ ನೇತೃತ್ವದಲ್ಲಿ ಜರಗಿದ ಸಭೆಯಲ್ಲಿ 'ಕಾರ್ಕಳ ದೇವಾಡಿಗ ಸುದಾರಕ ಸಂಘ'ವನ್ನು ಸ್ಥಾಪಿಸಲಾಯಿತು. ಅನಂತರ ನಡೆದ ಕಾರ್ಯಕಾರೀ ಸಮಿತಿ ರಚನೆಯಲ್ಲಿ ಶಾಲಾ ಇನ್ಸ್‌ಪೆಕ್ಟರ್ ಶ್ರೀ ಕೆ. ಗೋಪಾಲ ಮೈಲಿ, ಅಧ್ಯಕ್ಷ, ಶ್ರೀ ಸೂರ ದೇವಡಿಗ ಉಪಾಧ್ಯಕ್ಷ, ಶ್ರೀ ಕೆ. ರಾಜು ದೇವಡಿಗ ಕಾರ್ಯದರ್ಶಿ, ಕೆ. ನಾರಾಯಣ ಮೈಲಿ ಜೊತೆ ಕಾರ್ಯದರ್ಶಿ, ಶ್ರೀ ಕಾಳು ಸೇರಿಗಾರ ಕೋಶಾಧಿಕಾರಿಯಾಗಿ ಆಯ್ಕೆಗೊಂಡರು.

ಅ. ಭಾ. ಮಧ್ವ ಮಹಾಮಂಡಲಿ—ಇವರ ಉಡುಪಿ ಶಾಖಾ ಸಂಘದ ಸಭೆಯು ಶ್ರೀ ಡಾ ಪಿ. ಜಿ. ಆಚಾರ್ ಇವರ ಅಧ್ಯಕ್ಷತೆಯಲ್ಲಿ ಜರಗಿತು.

ಶ್ರೀ ಕೆ. ವೆಂಕಟ್ರಾವ್, ಬಿ. ಎ ಬಿ. ಯಲ್. ಅವರು ತ್ರಿಕಾಲದಲ್ಲಿಯೇ ಬಹು ಸಂಖ್ಯೆಯಲ್ಲಿ ಸದಸ್ಯರನ್ನು ಒಟ್ಟುಗೂಡಿಸಬೇಕೆಂದು ಸೂಚಿಸಿದರಲ್ಲದೆ, ತಾ. 6-2-61 ಚಂದ್ರವಾರ ಮತ್ತು 24-2-61 ಶುಕ್ರವಾರ ದಿನಗಳಲ್ಲಿ ಬೆಳಿಗ್ಗೆ ಬಡತನದ ಮಧ್ವವರ್ಗದ—ಶಿವಳ್ಳಿ, ಗೌಡ ಸಾರಸ್ವತ, ದೈವಜ್ಞ, ಬ್ರಾಹ್ಮಣ ಪಟುಗಳಿಗೆ ಪ್ರತ್ಯೇಕ ಪ್ರತ್ಯೇಕವಾಗಿ ಶ್ರೀ ಪೇಜಾವರ ಮಠ ಉಡುಪಿಯನ್ನು, ಶ್ರೀ ಲಕ್ಷ್ಮೀ ವೆಂಕಟರಮಣ ದೇವಸ್ಥಾನ ಉಡುಪಿ ಈ ಕೇಂದ್ರಗಳಲ್ಲಿ ದರ್ಖಾಸ್ತಾಗಿ ಉಪನಯನ ಸಂಸ್ಕಾರವನ್ನು ಶಾಖಾ ಸಂಘದ ಮತಿಯಿಂದ ನೆರವೇರಿಸಬೇಕೆಂಬ ನಿರ್ಣಯವನ್ನೂ ಮಂದಿಸಿದರು.

ಶ್ರೀ ಕೆ ಎನ್. ಸುಬ್ರಹ್ಮಣ್ಯ ಉಪಾಧ್ಯಾಯರು ಆ ನಿರ್ಣಯವನ್ನು ಸಮರ್ಥಿಸಲಾಗಿ ಅಧ್ಯಕ್ಷರ ಸಲಹೆಯೊಂದಿಗೆ ಸರ್ವಾನುಮತದಿಂದ ಅಂಗೀಕರಿಸಲ್ಪಟ್ಟಿತು.

ಉಡುಪಿ ಹಿಂದೀ ಪ್ರಚಾರ ಸಮಿತಿ—ಇದರ ವಾರ್ಷಿಕ ಸಭೆಯು ಇತ್ತೀಚೆಗೆ ರಾಜ್ಯ ಸಂಗೀತ ನಾಟಕ ಎಕೇಡಮಿಯ ಸದಸ್ಯೆ ಹಾಗೂ ಉಡುಪಿ ಮಹಿಳಾ ಸಮಾಜದ ಕಾರ್ಯದರ್ಶಿನಿಯಂದ ಶ್ರೀಮತಿ ಅನಸೂಯಾ ಬಿ. ಸೆಟ್ಟಿಯವರ ಅಧ್ಯಕ್ಷತೆಯಲ್ಲಿ ಜರಗಿತು. ವರದಿ ವಾಚನ ಶ್ರೀ ಬಿ. ಎಲ್. ನೆಲ್ಲಿಯವರ ಭಾಷಣವಾದ ಮೇಲೆ ಅಧ್ಯಕ್ಷೆಯರು ಸ್ತ್ರೀಯರ ಕರ್ತವ್ಯ, ಹೊಣೆಗಾರಿಕೆ ಮೊದಲಾದ ಕುರಿತು ಬೋಧಪರ ಭಾಷಣ ಮಾಡಿದರು.

ಮಂಗಳೂರು ಗೋಕರ್ಣನಾಥ ಕ್ಷೇತ್ರದಲ್ಲಿ—ಇದೇ ತಾ 8ರಿಂದ 15ರ ವರೆಗೆ ಶಿವರಾತ್ರಿ ಉತ್ಸವವು ನಾಡಿಕೆಯಂತೆ ವಿವಿಧ ಕಾರ್ಯಕ್ರಮಗಳೊಂದಿಗೆ ನೆರವೇರಲಿರುವುದು.

ಪ್ರಜಾ ಪ್ರಭುತ್ವ ದಿನಾಚರಣೆಯು ಉಡುಪಿಯಲ್ಲಿ ಯಥಾಸಾಂಗವಾಗಿ ಆಚರಿಸಲ್ಪಟ್ಟಿತು ಆಜ್ಞೆಕಾಡಿನ ಗಾಂಧಿ ಸೈವಾನಿನಲ್ಲಿ ಡಾ| ಕೆ. ಎಲ್ ಐತಾಳರು ರಾಷ್ಟ್ರಧ್ವಜಾರೋಹಣ ಮಾಡಿದ ಬಳಿಕ ಶಾಲಾ ಮಕ್ಕಳಿಗೆ ಸಿಹಿತಿಂಡಿ ವಿತರಣೆಯಾಯಿತು. ಸುಧಾರ್ಮ ಮುನಿಸಿಪಲ್ ಸ್ರವಾನಿ ಮಂದಿರದ ಆವರಣದಲ್ಲಿ ವಿವಿಧ ಸ್ಪರ್ಧೆಗಳು ಜರಗಿದ ಮೇಲೆ ಶ್ರೀ ಕೆ. ಕೆ. ಪೈಗಳವರ ಅಧ್ಯಕ್ಷತೆಯಲ್ಲಿ ಸಭೆ ಮತ್ತು ನಗರ ಸಭಾಧ್ಯಕ್ಷರಿಂದ ಬಹುಮಾನ ವಿತರಣೆಯಾಯಿತು.

ಲಾಯನ್ಸ್ ಕ್ಲಬ್ಬಿನ ಸಭೆಯೊಂದು ತಾ. 27-1-61ರಂದು ಸಾಂಗಾಳಿ ನಾಯಕ್ ಟೇಂಕಿನ ಪ್ರಧಾನ ಕಾರ್ಯಾಲಯದಲ್ಲಿ ಡಿ. ಮುನ್ಸಿಫ್ ಶ್ರೀ ಜಿ. ಎಲ್. ನಾಗಮೋತಿಯವರ ಹಿರಿತನದಲ್ಲಿ ನೆರವೇರಿತು. ಕಾರ್ಯದರ್ಶಿ ಶ್ರೀ ಬಿ. ಜಗನ್ನಾಥ ಹೆಗ್ಡೆಯವರು ಕ್ಲಬ್ಬಿನ ಕಡೆಯಿಂದ ತೆರೆಯಲಾದ ಬುಕ್ ಬ್ಯಾಂಕಿನ ವಿಚಾರವಾಗಿ ಮಾತನಾಡಿದರು. ಬ್ಯಾಂಕಿನ ಜನರಲ್ ಮೆನೇಜರ್ ಶ್ರೀ ಕೆ. ಎಸ್. ಕಾಮತರು ಸತ್ಕಾರ ಕೂಟವನ್ನೇರ್ಪಡಿಸಿದ್ದರು

ಉಡುಪಿ ಡಿ. ಮು. ಕೋರ್ಟಿನಲ್ಲಿ

ಸ್ಮಾಲ್ ನಂಬ್ರ 609/1960

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್ ಲಿಮಿಟೆಡ್ ಉಡುಪಿ —ವಾದಿ.

ಮತ್ತು

1. ಶ್ರೀನಿವಾಸ ಕಾಮತ್—ಸುಬ್ರಾಯ ಕಾಮತರ ಮಗ, 2. ಕಮಲಮ್ಮ—1ನೇ ಪ್ರತಿವಾದಿ ಹೆಂಡ್ತಿ. 3. ಸುಂದರೇಶ ಕಾಮತ್—1ನೇ ಪ್ರತಿವಾದಿಯ ಮಗ, ಶಿವಳ್ಳಿ ಗ್ರಾಮದ ಗುಂಡಿಬೈಲು —ಪ್ರತಿವಾದಿರು.

ಸದರಿ ಪ್ರತಿವಾದಿರಿಗೆ

ಪ್ರತಿವಾದಿರು ವಾದಿ ಬೇಂಕಿಗೆ ತಾರೀಕು 28-2-1959ಲ್ಲಿ ರೂಪಾಯಿ 800/-ಕ್ಕೆ ಬರೆಕೊಟ್ಟ ಡಿಮಾಂಡ್ ನೋಟಿನ ಅಸಲು ಬಾಕಿವ ಬಡ್ಡಿ ಕೂಡಾ ರೂಪಾಯಿ 295.42ಕ್ಕೆ ವಾದಿಯ ಪ್ರತಿವಾದಿರ ಮೇಲೆ ಮಾಡಿದ ಸದರಿ ದಾವೆಯು ತಾರೀಕು 14-2-1961ಕ್ಕೆ ತನ್ನ ಬಗ್ಗೆ ಇಟ್ಟಿದೆ ಆದಿವ್ಸ ಸದರಿ ಪ್ರತಿವಾದಿರು ಸ್ವತಹಾ ಯಾ ವಕೀಲರ ಮುಖಾಂತ್ರ ಕೋರ್ಟಿಗೆ ಹಾಜರಾಗಿ ಉಡಹರಿಸದೆ ಇದ್ದೆ ಅವರ ಗೈರ್ ಹಾಜರಿಯಿಂದ ಸದರಿ ವ್ಯಾಜ್ಯವು ತೀರ್ಮಾನಿಸಲ್ಪಡುವದೆಂದು—ಸದರಿ ಪ್ರತಿವಾದಿರಿಗೆ ಈ ಮೂಲಕ ತಿಳಿಯಪಡಿಸೋಣಾಗಿಯದೆ.

M. Damoder Kamath,
Advocate for Plaintiff.

ಉಡುಪಿ, ತಾ 23-1-61.

SYNDICATE BANK REPORTS GREATER PROGRESS—
PROFITS & DEPOSITS IMPROVE

The Canara Industrial & Banking Syndicate Ltd. have pleasure in announcing that, subject to audit, the net profits of the Bank for the year 1960 is Rs. 25,54,000/-, inclusive a sum of Rs. 29,000/- brought forward from the previous year's account, as against Rs. 20.14,000/- in 1959. Out of this, the Directors propose to transfer Rs. 7,50,000/- to the Reserve Fund, bringing the total reserves inclusive of share Premium of Rs. 1,00,000/- to Rs. 42,50,000/-. The balance of Rs. 18,04,000/- is proposed to be appropriated as under:

Provision for dividend	...	... Rs. 6,36,000
Dividend maintained at the last year's level of 14% tax-free net		
Provision for taxation	...	... Rs. 9.64,000
Bonus to staff	...	... Rs. 1,75,000
Carried forward	...	... Rs. 29,000

The total deposits of the Bank have increased to Rs. 18,80,00.000/- during the year, as against Rs. 17,08,00,000/- last year—an increase of Rs. 1,72,00,000/-.

ನಮ್ಮ ಪ್ರಜಾರಾಜ್ಯ ವಿಶೇಷಾಂಕದಲ್ಲಿ ಪ್ರಕಟವಾದ 'ನಮ್ಮ ಪ್ರಜಾಸತ್ತೆಯ ಪಥವೆತ್ತ ಸಾಗಿದೆ, ಎಂದು ಹೇಳಿದವರು ಶ್ರೀಮತಿ ಬಿ. ಎಸ್. ಚಂದ್ರಕಲಾ, ಬೆಂಗಳೂರು.

(ಸಂ. ನ.)

ಉಡ್ಪಿ ಡಿ. ಮು. ಕೋರ್ಟಿನಲ್ಲಿ

O. S. No. 409/1960

B. ಗಿರಿಜ ಹೆಗ್ಡತ್ತಿ —ವಾದಿಳು.

ಮತ್ತು

ರಾಮಂಣ ಶೆಟ್ಟಿ ಕೂಡಾ —ಪ್ರತಿವಾದಿರು.

ಯೆವರೊಳಗೆ.

3ನೆ ಪ್ರತಿವಾದಿ ರಗುರಾಮ ಶೆಟ್ಟಿ, ಶೀನಪ್ಪ ಶೆಟ್ಟಿ ಮಗ ಉಪ್ಪಿತಾಲ್ಕು ಹಾಲಾಡಿ ಗ್ರಾಮದಲ್ಲಿರ್ವಾ —

ಮೆಲ್ಕಂಡ ವ್ಯಾಜ್ಯದಲ್ಲಿ ಸದ್ರಿ ಪ್ರತಿವಾದಿಗೆ ಅಗತಕ್ಕ ವ್ಯಾಜ್ಯದ ನೊಟ್ಸು ತಾರೀಕು 6-2-1961ಕ್ಕೆ ಯಿಟ್ಟಿರುವದ್ರಿಂದ ಆ ದಿನ ಸದ್ರಿ ಪ್ರತಿವಾದಿಯು ತನ್ನ ಆಕ್ಷೇಪ ಹೇಳುವದನ್ನು ಸದ್ರಿ ಕೋರ್ಟುಮುಂದೆ ಹಾಜ್ರಾಗಿ ಜಾಬೀರುಮಾಡಿಕೊಳ್ಳತಕ್ಕದ್ದು.

P. Padaman abha Rao,
Vakil for Plaintiff.

Dated. 31-1-61 Udipi.

ಅಭಿಪ್ರಾಯ

(೫ನೇ ಪುಟದಿಂದ)

ದ ಜ್ಞಾನ ಅತ್ಯಗತ್ಯ. ಆದುದರಿಂದ ಅದರ ಅಭ್ಯಾಸಕ್ಕೆ ಪಾಠಪಟ್ಟಿಯಲ್ಲಿ ಅವಕಾಶ ವಿರಬೇಕು ಎಂಬ ವಾದ ಅವರದು. ನಾವು ಇದನ್ನೂ ಅಲ್ಲಗಳೆಯುವಂತಿಲ್ಲ. ನಮ್ಮ ನೆರೆ ರಾಜ್ಯಗಳ ಭಾಷೆಯನ್ನೂ, ಇತರ ಭಾರತೀಯ ಹಾಗೂ ವಿದೇಶೀಯ ಭಾಷೆಗಳನ್ನೂ ದೂರಕ್ಕಿಟ್ಟರೂ ಮೂರು ಲಿಪಿಗಳನ್ನೂ ನಾಲ್ಕು ಭಾಷೆಗಳನ್ನೂ ಭಾರತೀಯ ವಿದ್ಯಾರ್ಥಿ ತನ್ನ ಹನ್ನೆರಡು ವರ್ಷಗಳೊಳಗೆ ಕಲಿತುಕೊಳ್ಳಬೇಕಾಗುವುದು. ಅಷ್ಟಲ್ಲದೆ, ಈ ಭಾಷಾ ಜಗತ್ತನ್ನಲ್ಲದೆ ಅತ ಇತರ ಗಣಿತ, ವಿಜ್ಞಾನ, ಇತಿಹಾಸ, ಭೂಗೋಳ, ಕಲೆ ಮೊದಲಾದ ವಿಷಯಗಳ ಜ್ಞಾನವನ್ನು ಪಡೆಯಬೇಕು. ಇವುಗಳಲ್ಲಿ ಯಾವುದಾದರೊಂದರಲ್ಲಿ ಅತ ಕನಿಷ್ಠ ಅಂಕಗಳನ್ನು ಪಡೆಯಲು ಅಸಮರ್ಥನಾದರೆ, ಅವನ ಭವಿಷ್ಯವೇ ವ್ಯರ್ಥವೆಂಬಂತಾಗುವುದು.

ಪ್ರತಿಭಾಸಂಪನ್ನರು ಇಷ್ಟೆಲ್ಲ ವಿಷಯಗಳನ್ನು ತಲೆಗೆ ಹಚ್ಚಿಕೊಳ್ಳಬಹುದು. ಆದರೆ, ಇಂತಹ ಮೇಧಾವಿಗಳು ಎಷ್ಟು ಜನಯಿದ್ದಾರೆ? ವಿಶ್ವೇಶ್ವರಯ್ಯನವರು ಪಂಡಿತ ನೆಹರು ಒಬ್ಬೊಬ್ಬರೇ ವಿದ್ಯಾರ್ಥಿಗಳಾಗಿದ್ದಿಲ್ಲ; ಆದರೆ, ವಿಶ್ವೇಶ್ವರಯ್ಯ— ನೆಹರು ರವರಲ್ಲಿದ್ದಂತೆ ಇತರರಾರಲ್ಲಿಯೂ ಆ ಸ್ಫೋಂದ ಪ್ರತಿಭೆಯಿರಲಿಲ್ಲ; ಇದ್ದರೂ ಅದು ಹೊರಬರುವುದಕ್ಕೆ ಉಚಿತಾವಕಾಶವೊದಗಲಿಲ್ಲ. ಕಾವ್ಯಗಳನ್ನು ಬರೆದ ಕವಿಗಳು ಸಾವಿರಸಂಖ್ಯೆಯಲ್ಲಿದ್ದಾರೆ. ಆದರೆ, ಕಾಲಿದಾಸ— ಬಾಣರ ಸಮೀಪಕ್ಕೆ ಹಿಡಿಗೆ ನಿಲ್ಲಬಲ್ಲವರೆಷ್ಟು ಜನ? ಅಂತೆಯೇ ಎಲ್ಲವನ್ನೂ ಅಧ್ಯಯನ ನಡೆಸುವಷ್ಟು ಸಹನೆ, ಅವನ್ನು ಜೀರ್ಣಿಸಿಕೊಳ್ಳುವಷ್ಟು ಶಕ್ತಿ ನಮ್ಮ ಮಕ್ಕಳಲ್ಲಿ ಖಂಡಿತಕ್ಕೂ ಇಲ್ಲವೆಂಬುದು ನಿರ್ವಿವಾದ.

ಹೀಗೆ ಹೇಳಿದ ಮಾತ್ರಕ್ಕೆ ನಮ್ಮವರು ಬುದ್ಧಿಶಕ್ತಿಯಲ್ಲಾಗಲಿ ಪ್ರತಿಭೆಯಲ್ಲಾಗಲಿ ಅನ್ಯದೇಶೀಯರಿಗಿಂತ ಹಿಂದುಳಿದವರೆಂದು ಹೇಳುವಂತಿಲ್ಲ. ಏಕೆಂದರೆ, ಅನ್ಯದೇಶಗಳಲ್ಲಿ, ಮುಖ್ಯವಾಗಿ ಯುರೋಪ್-ಅಮೆರಿಕೆಗಳ ನವನಾಗರಿಕ ರಾಷ್ಟ್ರಗಳಲ್ಲಿ —ಇನ್ನೆಲ್ಲವನ್ನೂ ಮಕ್ಕಳಿಗೆ ಕಲಿಸಲಾಗುವುದು. ಅವರದನ್ನು ಕಲಿತುಕೊಳ್ಳಲು ಸಮರ್ಥರಾಗುವ ವಾತಾವರಣವು ನಮ್ಮದಕ್ಕಿಂತ ಹೆಚ್ಚು. ಇದಕ್ಕೆ ಉತ್ತರ ಹುಡುಕಲು ನಾವು ದೂರ ಹೋಗಬೇಕಾಗಿಲ್ಲ. ಅವರ ಹಾಗೂ ನಮ್ಮ ಶೈಕ್ಷಣಿಕ ಪ್ರಗತಿಯ ಇತಿಹಾಸಾವಧಿಯನ್ನಷ್ಟೆ ಗಮನಿಸಿದರೆ ಸಾಕು ನಮ್ಮಲ್ಲಿ ಸಾರ್ವತ್ರಿಕ ಶಿಕ್ಷಣದ ವಾದವೆದ್ದು ಹೆಚ್ಚು ಸಮಯವಾಗಿಲ್ಲ; ಶಿಕ್ಷಣದಲ್ಲಿ ಆಸಕ್ತಿಯೇ ಇಲ್ಲದ ಅನೇಕ ಕುಟುಂಬಗಳು—ಅವುಗಳ ಅನಾಸಕ್ತಿಯೋಗದ ಅನಂತ ಕಾರಣಗಳು—ಆಸಕ್ತಿಯಿದ್ದರೂ ಅವುಗಳಲ್ಲಿ ವಿದ್ಯೆಯ ಸಂಸ್ಕಾರದ ಗಂಧಗಾಳಿಯಿಲ್ಲದೆ ಇರುವುದರಿಂದ ಅವರು ಎದುರಿಸಬೇಕಾದ ಕಷ್ಟ —ಇವೇ ಮೊದಲಾದುವುಗಳಿಂದ ನಮ್ಮಲ್ಲಿ ಇಂತಹ ಸಾಧನೆ ಸದ್ಯ ಅಸಾಧ್ಯವೆನ್ನುವಂತಾಗಿದೆ. ನಾಡಿನ ಎಲ್ಲ ಮಕ್ಕಳಿಗೂ ಪ್ರಾದೇಶಿಕ ಭಾಷೆ ಹಾಗೂ ಇನ್ನಿತರ ಅವಶ್ಯಕ ವಿಷಯಗಳು ಸಂಸ್ಕಾರ ಜನ್ಯವಾಗಿ ಬಾರದೆ ಹೊರತು ಅವುಗಳ ಬುದ್ಧಿಶಕ್ತಿ ವಿಕಾಸವಾಗದ ಹೊರತು ಹೆಚ್ಚಿನ ಭಾರತ ಚಕ್ಕಡಿಯನ್ನು ಅವರ ಮೇಲೆ ಹೊರಿಸಿದರೆ, ಬಾಲನ ತಲೆಯ ಮೇಲೆ ಮುಡಿ ಭಾರ ಹೇರಿದಂತಾಗುವುದು. ಇತ್ತೀಚೆಗೆ ಎದ್ದ ಶಿಕ್ಷಣ ಮಟ್ಟವು ಇಳಿಯುತ್ತಿದೆ ಎಂಬ ಕೂಗು ಯಥಾರ್ಥವೆಂದಾದರೆ, ಶಿಕ್ಷಣದ ಸೌಲಭ್ಯ ಹಾಗೂ ಅವಕಾಶಗಳು ಪರಿಮಿತವಾಗಿರದೆ ಅವು ದಿನೇ ದಿನೇ ಸುವಿತ್ತೃತಗೊಂಡಿರುವುದೇ ಕಾರಣ. ಇಷ್ಟಾದರೂ ನಾವು ಎಲ್ಲ ಮಕ್ಕಳಿಗೂ ಶಿಕ್ಷಣ ಸೌಲಭ್ಯವೊದಿಸುವುದು ಕಾಗದ ಪತ್ರಗಳಲ್ಲಿಯೇ ಉಳಿದಿದೆ. ಇದೂ ಕಾರ್ಯರೂಪಕ್ಕೆ ಬಂದಾಗ ಶಿಕ್ಷಣದ ಮಟ್ಟ ಮತ್ತಷ್ಟು ಕೆಳಗಿಳಿಯುವುದು ಖಂಡಿತ. ಪಾಠ್ಯಕ್ರಮವನ್ನು ಬಿಗಿಗೊಳಿಸಿದೊಡನೆಯೇ ಶಿಕ್ಷಣಸ್ತರ ಏರುವುದಿಲ್ಲ. ಅದರ ಫಲ ಅನುಭವಿಸುವ ಮಕ್ಕಳು ಆ ಕ್ರಮವನ್ನು ಜೀರ್ಣಿಸಿಕೊಳ್ಳುವುದಕ್ಕೆ ಸಮರ್ಥರಾಗಬೇಕು. ಸಾರ್ವತ್ರಿಕ ಶಿಕ್ಷಣ ಯೋಜನೆಯನ್ವಯ ಹೊಳ್ಳೂ ಜಳ್ಳೂ ಸೇರುವುದರಿಂದ ಅವರೆಲ್ಲರಿಗೂ ಹೊಂದಿಕೊಂಡು ಅಭ್ಯಾಸಕ್ರಮವನ್ನು ರೂಪಿಸುವಾಗ ಅದು ಇಳುವರಿ ತೋರಲೇಬೇಕಾಗುತ್ತದೆ.

ಇಂತಹ ಗಂಭೀರ ಪರಿಸ್ಥಿತಿಯನ್ನು ನಾವು ನಮ್ಮ ಮುಂದೆ ತಂದಿಟ್ಟುಕೊಂಡು, ಮೂರು—ನಾಲ್ಕು ಭಾಷೆಗಳು, ಮತ್ತೂ ಒಂದೆರಡು ಭಾಷೆಗಳು ಹಾಗೂ ಇನ್ನಿತರ ಅವಶ್ಯಕ ವಿಷಯಗಳೆಂದು ಹೇಳುತ್ತ ಕುಳಿತರೆ ಅಧಿಕಸಂಖ್ಯಾಕ ವಿದ್ಯಾರ್ಥಿಗಳ ಭವಿಷ್ಯ ಮಣ್ಣುಪಾಲಾಗುವುದು. ವಿದೇಶಗಳಲ್ಲಿರುವಂತೆ ಒಬ್ಬನ ಅಭಿರುಚಿಗೆ ಹೊಂದಿಕೊಳ್ಳುವ ವಿಷಯಗಳನ್ನಷ್ಟೇ ಕಲಿಯುವ ಅವಕಾಶ ಒದಗಿಸಿಕೊಡುವುದಾದರೆ, ಸವಿಧಾನವೆ. ಆದರೆ, ಅಂತಹ ಸಂಸ್ಕಾರ ಭಾರತಕ್ಕೆ ಕಾಲಿರಿಸಬೇಕಾದರೆ, ಬಹುವರ್ಷ ಪಲ್ಲಬೇಕು. ನಾವು ನಮ್ಮ ಅಭ್ಯಾಸಪ್ರಣಾಳಿಯಲ್ಲಿ ಅವಶ್ಯಕ ಪಾಠಗಳು—ಭಾಷೆಗಳ ಸಂಖ್ಯೆಯನ್ನು ಇಳಿಸಿದಷ್ಟು ವಿದ್ಯೆಯ ಮಟ್ಟ ಉತ್ತಮಗೊಳ್ಳಬಹುದು. ಇಲ್ಲವಾದರೆ, 'ಎಲ್ಲವನ್ನೂ ಅರಿತವನು ಏನನ್ನೂ ತಿಳಿಯನು' ಎಂಬಂತಾದರೆ ವಿಸ್ಮಯಪಡಬೇಕಾಗಿಲ್ಲ.

ಶಿಕ್ಷಣ ಮಾಧ್ಯಮ ಪ್ರಾದೇಶಿಕ ಭಾಷೆಯಾಗಬೇಕೆಂಬುದರ ಹಿಂದೆ ಇರುವ ತತ್ತ್ವವೂ ಇದೇ. ಮಾತೃ ಭಾಷೆಯಲ್ಲಿ ವಿಷಯವನ್ನು ಸರಿಯಾಗಿ ತಿಳಿದುಕೊಳ್ಳುವಷ್ಟು ಉಳಿದ ಭಾಷಾ ಮಾಧ್ಯಮದಿಂದ ಸಾಧ್ಯವಿಲ್ಲ. ಇನ್ನು ಆಧುನಿಕ ವಿಜ್ಞಾನಗಳ ತಂತ್ರವನ್ನು ಅಮೂಲಾಗ್ರ ಕಲಿಯಬೇಕೆಂಬವನು, ಅಂತಾರಾಷ್ಟ್ರೀಯ ಸಾಧನೆ ಮಾಡಬೇಕೆಂಬವನು 'ಸಾಮಾನ್ಯ ಪ್ರತಿಭಾವಂತ'ನಾಗಿರಲಾರ. ಅಂತಹನು ತನ್ನ ಪ್ರತಿಭೆಯ ಸದುಪಯೋಗವನ್ನು ತಾನಾಗಿಯೇ ಮಾಡಿಕೊಳ್ಳುತ್ತಾನೆ. ಅಕ್ಷರ ಸ್ಥರೆಲ್ಲರೂ ಮೇಧಾವಿಗಳಾಗುವುದು ಸಾಧ್ಯವಿಲ್ಲ. ಇಂದು ನಾವು ಮೇಧಾವಿಗಳೆಂದು ಹೆಸರಿಸುವವರು ಸ್ವಪರಿಶ್ರಮದಿಂದಲೇ ಹಾಗಾದರು. ಅದಕ್ಕಾಗಿ ಇಂಗ್ಲಿಷನ್ನೂ, ಹಿಂದಿಯನ್ನೂ ಸಂಸ್ಕೃತವನ್ನೂ ಬೇಕಾದರೆ ಎಲ್ಲಾ ಭಾಷೆಗಳನ್ನೂ ಕಲಿಯಲಿ. ಯಾರೂ ಅಲ್ಲವೆನ್ನಲಾರರು; ಕಲಿಯುವ ಅವಕಾಶವನ್ನೂ ಒದಗಿಸಲಿ. ಆದರೆ, ಈ ಭಾಷೆಗಳ ಗೊಂದಲದಲ್ಲಿ ಶಿಕ್ಷಣದ ಸಂಸ್ಕಾರವಿಲ್ಲದ ಬರಡು ಭಾರತೀಯ ವಿದ್ಯಾರ್ಥಿಗಳ ಹೃದಯಮಸ್ತಂಭನವಾಗದಂತೆ, ಶಿಕ್ಷಣದ ಮಟ್ಟ ಇತಿಳಿಯದಂತೆ ಎಚ್ಚರಿಕೆ ವಹಿಸಬೇಕಾದ ದು ಅಗತ್ಯ.

ಮಾತೃಭಾಷೆಯ ವರ್ಣಮಾಲೆ, ಭಾಷೆ, ಅದರ ವ್ಯಾಕರಣ ನಿಯಮಗಳು, ವಾಕ್ಯರಚನೆ, ಭಾಷೆಯಲ್ಲಿರುವ ಪದಗಳ ನಿಧಿ, ಇದನ್ನು ಯಥೋಚಿತವಾಗಿ ಬಳಸಿಕೊಳ್ಳುವ ವಿಧಾನ,ಅನು ಕಂಡುದನ್ನು, ಕೇಳಿದುದನ್ನು ಮಾತೃಭಾಷೆಯ ನಾಲ್ಕು ವಾಕ್ಯಗಳಲ್ಲಿ ವ್ಯಕ್ತಪಡಿಸುವ ಶಕ್ತಿ—ಇವುಗಳೂ ಕಂಗತವಾಗದ ವಿದ್ಯಾರ್ಥಿಯ ತಲೆಗೆ ಅನ್ಯಭಾಷೆಗಳನ್ನು ತುರುಕಿಸುವುದೆಂದರೆ, "ನೀರಿಳಿಯದ ಗಂಟಲಲ್ಲಿ ಕಡುಬನ್ನು ತುರುಕಿದಂತೆ". ಅವುಗಳ ಜೀವನವನ್ನೇ ನಷ್ಟಗೊಳಿಸಿದಂತೆ. ಸಾರ್ವತ್ರಿಕ ಶಿಕ್ಷಣ —ರಾಷ್ಟ್ರೀಯ ಶಿಕ್ಷಣಗಳ ಹೆಸರಿನಲ್ಲಿ ನಮ್ಮ ಮುಂದಿನ ಪೀಳಿಗೆಗಾಗುತ್ತಿರುವ ಈ ಅನ್ಯಾಯವನ್ನು ನಿವಾರಿಸುವತ್ತ ಅವಶ್ಯ ಗಮನಕೊಡಬೇಕಾಗಿದೆ ಸೂಕ್ತ ಪರಿಹಾರ ಸೂಚಿಸಬೇಕಾಗಿದೆ.

ಸ್ವಾತಂತ್ರ್ಯಯೋಧರೂ, ತ್ಯಾಗವೀರರೂ, ವಿಧಾಯಕ ಕಾರ್ಯಕರ್ತರೂ ಆಗಿದ್ದ ದಿ. ಪಾಂಗಾಳ ಲಕ್ಷ್ಮೀನಾರಾಯಣ ನಾಯಕರು.

ಶ್ರೀ ನಾಯಕರು ದೀನದಲಿತರ ಹಿತಸಾಧಕರಾಗಿಯೂ, ನಿಷ್ಕಾಮ—ನಿಷ್ಠಾವಂತ ಜನಸೇವಕರಾಗಿಯೂ ಸಾದಾ ಜೀವನ, ಆದರ್ಶ ನಡೆನುಡಿಯುಳ್ಳವರಾಗಿಯೂ ಅತ್ಯಂತ ಜನಪ್ರಿಯರಾಗಿದ್ದರು. ಭುವನೇಂದ್ರ ಪ್ರೊಡಕ್ಟ್ಸ್‌ನ ಸ್ಥಾಪಕ ಡೈರೆಕ್ಟರ ರೊಬ್ಬರಾಗಿ ಅದರ ಪ್ರಗತಿಗಾಗಿ ದುಡಿದ ಪ್ರಮುಖರಲ್ಲೊಬ್ಬರಾಗಿದ್ದರು. ನ್ಯೂ ಕರ್ನಾಟಕ ಪ್ರೊವಿಡೆಂಟ್ ಇನ್ಶೂರೆನ್ಸ್ ಮೊದಲಾದ ಸಂಘ ಸಂಸ್ಥೆಗಳಲ್ಲಿ ಡೈರೆಕ್ಟರರಾಗಿಯೂ ಗಣನೀಯ ಕೆಲಸ ನಿರ್ವಹಿಸಿದ್ದರು.

'ನಚಿಕೇತ'ರು ಬರೆದ ಭಾವಪೂರ್ಣ ಕಾದಂಬರಿ

ಭಾವಾರ್ಚನೆ

ಸುಮಧುರ ಗಂಭೀರ ಪರಿಣಾಮವನ್ನುಂಟುಮಾಡುವ
ಸರಳ ಶೈಲಿಯ ನೂತನ ಕಾದಂಬರಿ.

ಆಕರ್ಷಕ ಮುಖಪತ್ರ. ಬಿಳಿ ಕಾಗದ.

120 ಪುಟಗಳು. ಒಂದೂಕಾಲು ರೂಪಾಯಿ ಬೆಲೆ.

ಒಂದೂವರೆ ರೂಪಾಯಿ ಕಳಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟ್ ಮಾಡಬಹುದು

ಪ್ರಕಾಶಕರು: ನವಯುಗ ಎಂಟರ್‌ಪ್ರೈಸ್ ಲಿ., ಉಡುಪಿ.

ಮಾರಾಟಗಾರರು: ನವಭಾರತ ಬುಕ್ ಡಿಪೊ, ಉಡುಪಿ.

ಕನ್ನಡ ಪುಸ್ತಕಗಳಿಗೆ—
ಮತ್ತು
ಶಾಲೆಗಳಿಗೆ ಬೇಕಾಗುವ
ಯೂನಿಫಾರ್ಮಗಳೂ
ಹಾಜರಿ ರಿಜಿಸ್ಟ್ರಿಗಳೂ
ಕಥೆಕಾದಂಬರಿ ಇತ್ಯಾದಿಪುಸ್ತಕಗಳಿಗೆ
ನವಭಾರತ ಪುಸ್ತಕ ಭಂಡಾರ,
ಉಡುಪಿ.

ಯಶಸ್ವೀ ಪ್ರಜಾಸತ್ತೆ

(ಳನೇ ಪುಟದಿಂದ)

ಬೇಕು, ಎಂಬ ಆದೇಶವಿದ್ದರೆ, 'ಪ್ರಾರಂಭಿಸಲು ಆದೇಶವಿದೆ', ಎಂಬ ರಕ್ಷಾಕವಚದಲ್ಲಿಯೇ ಮುಂದುವರಿದರೆ, ಜನತೆ—ಅಧಿಕಾರಿಗಳ ಮಧ್ಯದಲ್ಲಿ ಸಹಕಾರ—ಸಹಾನುಭೂತಿ, ಆತ್ಮೀಯತೆಗಳು ಮೂಡಿ ಬರಲಾರವು. ಅಲ್ಲದೆ ಪ್ರಾರಂಭಿಸಿದ ಬಾಲಗ್ರಹಪೀಡಿತ ಸಂಸ್ಥೆಗಳ ಗತಿ ಏನಾಯಿತು?—ಎಂಬುದರ ಕಡೆಗೂ ಹೆಚ್ಚು ಲಕ್ಷ್ಯ ಪೂರೈಸುವ ಅಗತ್ಯವೆನಿಸಲಿಕ್ಕಿಲ್ಲ. ಕಾರ್ಯದ ಮಹತ್ವವನ್ನೂ, ಸಾರವನ್ನೂ, ಆತ್ಮವನ್ನೂ ಅರಿಯದೆ ಅದರ ಆಸ್ಥಿಪಂಜರಕ್ಕಷ್ಟೇ ಮಹತ್ವ ಕೊಟ್ಟರೆ, ಯಾವ ಕಾರ್ಯತಾನೇ ಯಶಸ್ವಿಯಾದೀತು? ರಾಷ್ಟ್ರದ ಪ್ರಗತಿ ಹೇಗಾದೀತು? ಪ್ರಗತಿ ಬರೀ ಅಂಕೆ ಸಂಖ್ಯೆಗಳ ಪ್ರದರ್ಶನದಲ್ಲಿಲ್ಲ, ಎಂಬುದೆನ್ನರಿತವರು ಅಂಕೆ—ಸಂಖ್ಯೆಗಳಿಗೆ ಯಾವ ಮಹತ್ವವನ್ನೂ ಕೊಡಲಿಕ್ಕಿಲ್ಲ! ದೇಶದಲ್ಲಿ ಇಷ್ಟು ಜನ ಸಾಕ್ಷರರಿದ್ದಾರೆ ಎಂಬುದು ಅಂಕೆ ಸಂಖ್ಯೆಗಳ ಆಧಾರದಿಂದ ಸಿದ್ಧವಾಗಬಹುದಾದರೂ, ಅ ಸಾಕ್ಷರತೆಯ ಪರಿಣಾಮ ಇನ್ನುಳಿದ ಕ್ಷೇತ್ರದಲ್ಲಿ ಕಾಣದೇ ಇದ್ದಾಗ, ಸಾಕ್ಷರರ ಸಂಖ್ಯೆಯಲ್ಲಿಯೇ ಅವಿಶ್ವಾಸವುಂಟಾಗುತ್ತದೆ.

ನಮ್ಮ ದೇಶದಲ್ಲಿ ನಾವು ಸ್ವತಂತ್ರರು:

ನಮ್ಮ ದೇಶದಲ್ಲಿ ನಾವು ಏನುಮಾಡಲೂ ಸ್ವತಂತ್ರರು ಎಂಬುದು ವಿಚಾರವುಳ್ಳ ವಿಧಾಯಕ ಕಾರ್ಯಕರ್ತರಿಗಷ್ಟೇ ಅನ್ವಯಿಸುವ ಮಾತು. ಹಕ್ಕು—ಕರ್ತವ್ಯಗಳು ಪರಸ್ಪರ! ಇನ್ನೊಬ್ಬರ ಹಕ್ಕು ಸ್ಥಾಪಿತವಾಗಬೇಕಾದರೆ, ನಾವು ಕರ್ತವ್ಯವನ್ನು ಮಾಡುವುದು ಅನಿವಾರ್ಯ ಎನ್ನುವ ಕಡೆಗೆ ನಮ್ಮ ಲಕ್ಷ್ಯವಿರುವದಕ್ಕಿಂತ ಹೆಚ್ಚಾಗಿ ನಮ್ಮ ಹಕ್ಕಿಗಾಗಿ ಇನ್ನೊಬ್ಬರು ಯಾಕೆ ಕರ್ತವ್ಯವನ್ನು ಮಾಡಲಿಲ್ಲ ಎಂಬುದರ ಕಡೆಗೇ ಹೆಚ್ಚು! ನಮ್ಮ ದೇಶವನ್ನು ಒತ್ತಿ ಹಾಕಲೂ ನಾವು ಸ್ವತಂತ್ರರೇ! ನಮ್ಮ ಸಂಘ ಸಂಸ್ಥೆಗಳನ್ನು ಹಾಳುಮಾಡಿಕೊಳ್ಳಲೂ ನಾವು ಸ್ವತಂತ್ರರೇ!! ಇನ್ನೊಬ್ಬರ ರಾಜಕೀಯ ಅಧೀನದಲ್ಲಿಯೂ ನಾವು ಸ್ವತಂತ್ರರೇ! ಆದರೆ ಅಲ್ಲಿಂದ ಹೊರಗೆಬರುವ ಸ್ವಾತಂತ್ರ್ಯ ಮಾತ್ರ ನಮಗಿಲ್ಲ ಆ ಮೇಲೆ!! ವೈಚಾರಿಕ ಹಿನ್ನೆಲೆ ಸಿದ್ಧವಾಗದ್ದೆ ದುಡಿಮೆಯ ಮೂಲ್ಯವನ್ನರಿಯದೆ ಬದುಕುವದು—ಬಾಳುವದು ಹೇಗೆ ಸಾಧ್ಯ? ಎಂದು ಸಾಧ್ಯ?

ಪ್ರಜಾರಾಜ್ಯದ ಯಶಸ್ಸಿಗೆ ಪ್ರಜೆಗಳ ಯೋಗ್ಯತೆ—ಶಕ್ತಿಗಳೇ ಮೂಲ! ಅದಿಲ್ಲದೆ ಸಾಗುವದಾಗಲಿ, ಇದ್ದಂತೆ ನಟಿಸುವದಾಗಲಿ ವಿಘಾತಕ!!

ಬೆಳೆಯುತ್ತಿರುವ ಜನಸಂಖ್ಯೆ—ಆಕಾಂಕ್ಷೆ

ದೇಶದಲ್ಲಿ ಜನಸಂಖ್ಯೆ ತ್ವರಿತಗತಿಯಿಂದ ಬೆಳೆಯುತ್ತಿದೆ. ಅದರ ಪರಿಣಾಮವು ಇನ್ನಿತರ ಔದ್ಯೋಗಿಕ ಹಾಗೂ ವ್ಯಾಪಾರಾಯಿಕ ಹುಟ್ಟುವಳಿಯ ಮೇಲೆ ಆಗುತ್ತದೆ. ಔದ್ಯೋಗಿಕ ಪ್ರಗತಿಯನ್ನು ಎಷ್ಟು ತ್ವರಿತ ಗತಿಯಿಂದ ಮಾಡಬೇಕೆಂದು ಯೋಚಿಸಿದರೂ, ಜನಸಂಖ್ಯೆಯ ಜೊತೆಗೆ ಸ್ಪರ್ಧೆ ಸಾಧ್ಯವಿಲ್ಲ. ಜನಸಂಖ್ಯೆಯ ಜೊತೆಗೆ ಜನತೆಯ ಆಕಾಂಕ್ಷೆಯೂ ಬೆಳೆಯುತ್ತಿದೆ. ಆದರೆ ಬುದ್ಧಿಶಕ್ತಿ, ದೈಹಿಕಬಲ, ಹಾಗೂ ಆರ್ಥಿಕ ಶಕ್ತಿಗಳಲ್ಲಿ ಮಾತ್ರ ದಾರಿದ್ರ್ಯ ತುಂಬಿದೆ. ಇಂಗ್ಲಂಡಿನಲ್ಲಿ ಔದ್ಯೋಗಿಕ ಪ್ರಗತಿಯಾದ ಮೇಲೆ ಜನತೆಯ ಆಕಾಂಕ್ಷೆಗಳು ಬೆಳೆದದ್ದರಿಂದ, ಅವುಗಳನ್ನು ಪೂರೈಸುವದು ಅವರಿಗೆ ತೊಂದರೆಯೆನಿಸಲಿಲ್ಲ. ಇಲ್ಲಿ ಪೂರೈಕೆ ಅಸಾಧ್ಯವಾಗಿ ಜನತೆಯಲ್ಲಿ ನಿರಾಶೆ, ಅವಿಶ್ವಾಸಗಳು ಮೂಡತೊಡಗಿದಾಗ, ಜನಸಂಖ್ಯೆಯ ನಿಯಂತ್ರಣದ ವಿಚಾರ ಕಂಡು ಬರುತ್ತದೆ. ಇದೂ ಯಶಸ್ವಿಯಾಗಬೇಕಾದರೆ ಮತ್ತೆ ಜನತೆಯಲ್ಲಿ ವೈಚಾರಿಕ ಕ್ರಾಂತಿಯುಂಟಾಗಬೇಕು!

ವಿವಿಧ ಪಕ್ಷ ಹಾಗೂ ಮುಂದಾಳುಗಳು

ಪ್ರಜಾಸತ್ತೆಯಲ್ಲಿ ವಿವಿಧ ಪಕ್ಷಗಳನ್ನು ಕಟ್ಟುವ ಸ್ವಾತಂತ್ರ್ಯವಿರುವದು ಅಪರಿಹಾರ್ಯ. ಪಕ್ಷಗಳನ್ನು ಕಟ್ಟುವ ಸ್ವಾತಂತ್ರ್ಯವಿದೆಯೆಂದು ದುರ್ಬಲ ಪಕ್ಷಗಳು ಅನೇಕ ಹುಟ್ಟಿಕೊಂಡರೂ ಪ್ರಯೋಜನವಿಲ್ಲ. ಅಧಿಕಾರಾರೂಢ ಪಕ್ಷಕ್ಕೆ ಎದುರಾಗುವಂಥ, ಪ್ರಸಂಗ ಬಂದರೆ ತಾನೇ ರಾಜ್ಯಭಾರವನ್ನು ನಡೆಸಿಕೊಳ್ಳುವಂಥ ಸಬಲ ವಿರೋಧೀ ಪಕ್ಷವಿದ್ದರೆ ಮಾತ್ರ, ಅಧಿಕಾರಾರೂಢ ಪಕ್ಷದ ಕಾರ್ಯಗಳ ವಿಧಾಯಕ ಟೀಕೆ ಕೇಳಬರಬಹುದು! ಏನಾಶಕಾರಿಯಾದ ಟೀಕೆ ಮಾಡುವದೇ ಪಕ್ಷದ ಗುರಿಯಾಗಿದ್ದರೆ, ಅಷ್ಟು ಮಟ್ಟಿನ ಸಮಾಧಾನ ಮಾತ್ರ ಸಿಗಬಹುದು! ಇಂಗ್ಲಂಡಿನಲ್ಲಿ ವಿರೋಧೀ ಪಕ್ಷದ ಮುಖಂಡನಿಗೆ ಸಂಭಾವನೆಯನ್ನೂ ಕೊಡುತ್ತಾರೆ. ವಿರೋಧೀ ಪಕ್ಷವು ಕಾರ್ಯವನ್ನು ಟೀಕಿಸುವದಿಕ್ಕಿಂತ ವ್ಯಕ್ತಿಗಳನ್ನೇ ಟೀಕಿಸಿದರೆ, ಅದರ ದೌರ್ಬಲ್ಯ ಸಹಜವಾಗಿಯೇ ವ್ಯಕ್ತವಾಗುತ್ತದೆ! ಕಾರ್ಯವನ್ನು ವಿಮರ್ಶಿಸಿ ಸರಿಯಾದ ಮಾರ್ಗದಲ್ಲಿ ಸರಕಾರವನ್ನು ಅಪ್ರತ್ಯಕ್ಷ ರೀತಿಯಿಂದ ಎಚ್ಚರಿಸುವದೇ ವಿರೋಧೀ ಪಕ್ಷದ ಕಾರ್ಯ! ಆ ವಿಚಾರವನ್ನು ಸರಕಾರವು ಎಷ್ಟು ಮಟ್ಟಿಗೆ ಆಚರಣೆಯಲ್ಲಿ ತಂದಿದೆ? ವಿರೋಧೀ ಪಕ್ಷಗಳು ಎಷ್ಟು ಮಟ್ಟಿಗೆ ಅರ್ಥ ಮಾಡಿಕೊಂಡಿವೆ?

ಅಧಿಕಾರಾರೂಢ ಪಕ್ಷದ ಮುಂದಾಳುಗಳು ತಮ್ಮ ಸ್ಥಾನಕ್ಕೆ ಬಾಧೆಯುಂಟಾಗದಂತೆ ನೋಡಿಕೊಳ್ಳುವದರಲ್ಲಿ ದಕ್ಷರಾಗಿದ್ದಾರೆ. ಯಾವ ಬೆಲೆಯನ್ನೇ ಆದಕ್ಕಾಗಿ ತೆರಲೂ ಸಿದ್ಧವಾಗಿದ್ದಾರೆ. ವಿರೋಧೀ ಪಕ್ಷದ ಮುಖಂಡರು ಅವರನ್ನು ಪದಚ್ಯುತಗೊಳಿಸಿ ತಾವು ಅಧಿಕಾರಾರೂಢರಾಗಬೇಕೆಂಬ ಪ್ರಯತ್ನದಲ್ಲಿದ್ದಾರೆ. ಈ ಸ್ಪರ್ಧೆಯಲ್ಲಿ ಸಾಮಾನ್ಯ ಪ್ರಜೆ ನುಚ್ಚುನೂರು. ದೇಶದ ಔದ್ಯೋಗಿಕ ಪ್ರಗತಿಯ ಸಾಧನಗಳು. ಸಾಂಸ್ಕೃತಿಕ ಕಾರ್ಯಕ್ರಮಗಳು, ಅಧಿಕಾರವನ್ನು ಕಾಯ್ದುಕೊಳ್ಳುವ ಸಾಧನಗಳು! ಅವು ಸಾಧನಗಳ ಮಟ್ಟಕ್ಕಿಂತ ಮೇಲೇರುವಂತೆಯೇ ಇಲ್ಲ! ವಿರೋಧೀ ಪಕ್ಷವು ಇತ್ತಗಳನ್ನು ವಿಮರ್ಶಿಸಿ, ದಾರಿಯಲ್ಲಿ ವಿಘ್ನಗಳನ್ನು ತಂದಿರುವದೇ ಪ್ರಧಾನ ಕಾರ್ಯವೆಂದು ಬಗೆಯುವದು ಅನಿವಾರ್ಯವಾದಂತಿದೆ! ಔದ್ಯೋಗಿಕ ಪ್ರಗತಿಯ ಕಾರ್ಯ ಯಶಸ್ವಿಯಾದರೆ, ಅಧಿಕಾರಾರೂಢ ಪಕ್ಷ ಜನಪ್ರಿಯವಾಗಬಹುದು ಮತ್ತೆ ಈ ಸಂಘರ್ಷಗಳ ಒಟ್ಟು ಪರಿಣಾಮವೆಂದರೆ ಜನತೆಯ ದೈಹಿಕ ಹಾಗೂ ಬೌದ್ಧಿಕ ಶಕ್ತಿ, ಸಂಘಟನಾ ಶಕ್ತಿಗಳು ವಿಧ್ವಂಸಕ ರೀತಿಯಲ್ಲಿ ಕಾರ್ಯಗತವಾಗುತ್ತಿವೆಯೆಂಬುದು ಸ್ಪಷ್ಟ! ರಾಜಕಾರಣದ ಯಾವ ಗಂಧವೂ ಇಲ್ಲದ ಜನ, ಮುಖಂಡರು ಹೇಳುತ್ತಾರೆಂದರೆ ತಮ್ಮ ಶಕ್ತಿಯನ್ನೆಲ್ಲ ವ್ಯರ್ಥ ವೆಚ್ಚಮಾಡುತ್ತಾರೆ ಗಡಿ ತಂಟೆಯ ಸಂದರ್ಭದಲ್ಲಿ ಯಾವ ಜನ ಪ್ರಕ್ಷೋಭೆವನ್ನುಂಟು ಮಾಡಿದರೋ ಆ ಜನರಿಗೆ ತಾವು ಯಾಕೆ ಹಾಗೆ ಮಾಡಿದ್ದು ಎಂಬುದು ಗೊತ್ತೇ ಇರಲಿಲ್ಲವಂತೆ! ಇಂತಹ ಪ್ರಜೆಗಳು ಅವರನ್ನು ಸುಲಿದು ಬದುಕುವ ಮುಖಂಡರೂ ಇರುವ ವರೆಗೆ ಪ್ರಜಾರಾಜ್ಯದ ಯಶಸ್ವಿ ಚಿತ್ರ ಕಾಣುವದು ಹೇಗೆ? ತಾಸಿಗೆ ಎರಡು ಮೈಲಿನಂತೆ ಅಧಿಕಾರಾರೂಢ ಪಕ್ಷ ಓಡಿದರೆ, ವಿರೋಧೀ ಪಕ್ಷ ತಾಸಿಗೆ ಎರಡು ಮುಕ್ಕಾಲು ಮೈಲುಗಳಂತೆ ಓಡಿದರೆ, ಅಧಿಕಾರಾರೂಢ ಪಕ್ಷ ಹೊರಟ ಅರ್ಧ ಗಂಟೆಯ ಮೇಲೆ ವಿರೋಧೀ ಪಕ್ಷ ಓಡಲು ಪ್ರಾರಂಭಿಸಿದರೆ, ಎಲ್ಲಿ ಯಾವಾಗ ಎರಡೂ ಪಕ್ಷಗಳು ಸಂಘರ್ಷಿಸುವವು ಎಂಬುದನ್ನು ಲೆಕ್ಕ ಹಾಕಿಯೇ ತಿಳಿಯಬೇಕು. ಈ ಎರಡೂ ಪಕ್ಷಗಳ ಹಿಂದೆ ಓಡುವ ಜನತೆ ಯಾರ ಪಕ್ಷವೆಂದು ತಿಳಿಯುವ ಸೌಜನ್ಯವೂ ಇಲ್ಲದೆ ಓಡತ್ತದೆ. ಯೋಗ್ಯ ಮುಖಂಡತ್ವವಿಲ್ಲದೆ ಜನತೆಯ ಬಲ ವ್ಯರ್ಥವಾಗುತ್ತಿದೆ.

ರಾಜ್ಯ ಘಟನೆ ಕೊಟ್ಟ ಸ್ವಾತಂತ್ರ್ಯ ಹಾಗೂ ಅಭಯವಾದ ಅರ್ಥವನ್ನು ಮುಖಂಡರೂ, ವಿಧಾನಸಭೆಯಲ್ಲಿರುವವರೂ ತಿಳಿಯದೆ ಹೋದರೆ ಅಥವಾ ತಪ್ಪು ತಿಳಿದು ದುರುಪಯೋಗ ಸಡಿಸಿಕೊಂಡರೆ, ಪ್ರಜೆಗಳನ್ನು ಪ್ರತಿನಿಧಿಸಲು ವಾಕ್ ಸ್ವಾತಂತ್ರ್ಯ; ಸಿಕ್ಕುವದನ್ನು ಮಾತಾಡಲಲ್ಲ ಎಂಬುದು ಅರ್ಥವಾಗದೆ ಹೋದರೆ, ಏನು, ಗತಿ?

ಯಾರ ಭಿಡೆ ಮುರವತ್ತಿಗೂ ಒಳಗಾಗದೆ ಪ್ರಜಾಪ್ರತಿನಿಧಿಗಳು ಅರಿತು ಮತ ಕೊಟ್ಟು ನಡೆದರೆ, ಪ್ರಜಾತಂತ್ರ ಸುಗಮವಾದೀತು. ಪ್ರತಿನಿಧಿಗಳು ಸ್ಥಾನದ ದುರುಪಯೋಗ ಮಾಡಿಕೊಂಡು, ಯೋಗ್ಯತೆ ಬೆಳೆಸಿಕೊಳ್ಳದೆ ಮೇಲೆ ಕಳೆದರೆ ಯಾರು ಅವರ ಮಾತಿಗೆ ಬೆಲೆ ಕೊಟ್ಟಾರು?

ಪ್ರಜಾರಾಜ್ಯತಂತ್ರದ ತಾಂತ್ರಿಕ ನಿಯಮಗಳಲ್ಲಿಯೂ ಇಂದು ವ್ಯತ್ಯಾಸ ಅವಶ್ಯ; ನೂರು ವರ್ಷಗಳ ಹಿಂದಿದ್ದ ಪ್ರಜಾತಂತ್ರ, ಅಥವಾ ಅಮೇರಿಕೆಯ ಪ್ರಜಾತಂತ್ರ ಭಾರತಕ್ಕೆ ಅನ್ವಯಿಸುವದೋ ಇಲ್ಲವೋ ಎಂದು ನೋಡುವದೂ ಅವಶ್ಯ.

ಪ್ರಜಾತಂತ್ರದ ಯಶಸ್ಸಿಗೆ ಪ್ರಜೆಗಳ ವೈಚಾರಿಕ ಹಿನ್ನಲೆ ಹಾಗೂ ಕಾರ್ಯಪ್ರವೃತ್ತಿ,—ಜಾಗೃತಿಗಳ ಭದ್ರವಾದ ಬುನಾದಿ ಅವಶ್ಯ! ಅದಿಲ್ಲದೆ ಪ್ರಜಾತಂತ್ರದ ಕಟ್ಟಡ ಚಿರಸ್ಥಾಯಿಯಾಗದು!!

ಅಮೆರಿಕೆಯ ಅಧ್ಯಕ್ಷ ಗದ್ದುಗೆಯಿಂದ ಇಳಿದ ಐಸನ್ ಹಾವರ್ ಮತ್ತವನ್ನು ಏರಿದ ಜಾನ್ ಕೆನ್ನೆಡಿಯವರು ಪರಸ್ಪರ ಆಡಿಕೊಳ್ಳುತ್ತಿರುವಾಗ ತೆಗೆದ ಚಿತ್ರವಿದು.

'NAVAYUGA' WEEKLY is in the list of periodicals and Newspapers approved for use in Secondary School as per proceedings Roc. No. 466 N/50 date 2-12-1950 of the Director of public Instruction Madras.

ಕುಮಾರಿ ಬಿಲ್ಲೆಗಳು

(Registered)

ಈ ದೇಶೀಯ ತಯಾರಿಕೆಯ ಗುಣಾಂಶವು ವರ್ಷಗಟ್ಟಲೆಯಿಂದ ವಿಖ್ಯಾತವಾಗಿದೆ ಮತ್ತು ಪ್ರಮುಖ ಕೆಮಿಸ್ಟರಿಂದ ಈ ಕೆಳಗಿನ ದರಗಳಲ್ಲಿ ವಿಕ್ರಯಿಸಲ್ಪಡುತ್ತವೆ. ಟ್ಯೂಬಿಗೆ ರೂ. 3=00 (ಸಾದಾ), ರೂ. 5=00(ಸ್ಪೆಶ್ಯಲ್), ರೂ. 8=00 (ಎಕ್ಸ್ಟ್ರಾ ಸ್ಪೆಶ್ಯಲ್).

P. DEVEE & Co. (M. I.) CALCUTTA—40

ಸ್ವಾಕಿಸ್ತರು: ಸಾ ಕಂಪೆನಿ, ಮಂಗಳೂರು—1.

ಕಾರಂತರ ಪುಸ್ತಕಗಳು

ಅಳಿದ ಮೇಲೆ (ಹೊಸ ಕಾದಂಬರಿ)	3_75
ಸಂಜಮುತು (ಕಾದಂಬರಿ)	3_50
ನಮ್ಮ ಸುತ್ತಿನ ಕಡಲು	1_75
ಪರಮಾಣು—ಇಂದು—ನಾಳೆ	3_00

ಸಿಗುವ ಸ್ಥಳ:

ನವಭಾರತ ಬುಕ್ ಡಿಪೊ, ಉಡುಪಿ.

ಪುಸ್ತಕ ವಿಮರ್ಶೆ

(ವಿಮರ್ಶೆಗಾಗಿ ಪುಸ್ತಕಗಳನ್ನು ಕಳುಹಿಸುವವರು ಎರಡೆರಡು ಪ್ರತಿಗಳನ್ನು ಕಳುಹಿಸಬೇಕಾಗಿ ವಿನಂತಿ.—ಸಂ. ಸ.)

ಬೆಳಗಾಗಿತ್ತು— ಬರೆದವರು: ನಳಿನಿ. ಪ್ರಕಾಶಕರು: ಎಸ್. ಎನ್. ಎಸ್. ಪ್ರಕಾಶನ, ಮುಂಬಯಿ. ಪುಟಗಳು: ೧೧೯. ಬೆಲೆ: ರೂ. ೩-೨೫.

ಹದಿನಾರು ವರ್ಷಗಳಿಗೆ ಮೊದಲು ಬರೆದಿದ್ದ ಸಣ್ಣ ಕಥೆಯೊಂದರ ವಿಸ್ತೃತ ರೂಪವೇ ಕಾದಂಬರಿಯೆಂದು ಲೇಖಕಿಯವರು ಹೇಳಿಕೊಂಡಿದ್ದಾರೆ. ಬಾಲ್ಯ ಸ್ನೇಹಿತರಾಗಿದ್ದ ಮಾಧವ ಮತ್ತು ನೀಲಾರೇ ಕಾದಂಬರಿಯ ಪ್ರಧಾನ ಪಾತ್ರಗಳು. ಈ ಸ್ನೇಹಿತರಲ್ಲಿ ಕೇವಲ 'ಇಷ್ಟಾವು ಭಾವನೆ'ಯಿತ್ತು. ಎಂತಲೇ ಇವರ ವಿವಾಹ ಬೇರೆ ಬೇರೆಯವರೊಡನಾಯಿತು. ಇದೇ 'ನಿಷ್ಕಾಮ ಸ್ನೇಹ'—ಅಣ್ಣ ತಂಗಿಯರಲ್ಲಿ ಕಾಣಬಹುದಾದ ಅಮರ ಪ್ರೇಮ ಕಾದಂಬರಿಯ ಆರಂಭದಿಂದ ಕೊನೆಯ ವರೆಗೂ ದೃಗ್ಗೋಚರವಾಗುತ್ತಿದೆ. ಯಾವನದ ಉನ್ನತ್ತತೆಯಲ್ಲಿ ಪೂರ್ವಾಪರ ವಿನೇಚನೆಯಿಲ್ಲದೆ ನೀಲಾರ ರಸಮಯ ಸಂಸಾರವನ್ನು ಕೆಡಿಸಿದ ಸುಬ್ಬ ಸಖೂಜದ ಧೂಮಕೇತುಗಳ ಪ್ರತೀಕದಂತಿದ್ದರೆ, ಕುಲೀನವಂಶ ಸಂಜಾತ ತನ್ನ ತಪ್ಪನ್ನು ತಿದ್ದಿ ಸಜ್ಜನನಾಗಬಯಸುವೆಂದು ಹೇಳಿ ಸಾರುತ್ತಾನೆ. ಮಾಧವನ ತಾಯಿ ಕಾಶೀರನ್ನು ಹಾಗೂ ನೀಲಳ ತಾಯಿ ಭಾಗ್ಯಮ್ಮ ಅದರ್ಶ ನಾರಿಯರಂತೆ ತೋರುತ್ತಾರೆ. ಇವಿಷ್ಟು ಗೃಹಜೀವನದ ಚಿತ್ರವಾದರೆ, ಮಾಧವ-ರಾಗಿಣಿಯರ ಪ್ರೇಮ—ಪಂಚಾಪಕೇರನ ಲಘು ಹಾಸ್ಯ—ಕಾಲೇಜು ಜೀವನದ ಮಿಂಚು. ಮಾಧವ ಮತ್ತು ನೀಲಾರ ಪಾತ್ರಗಳು ಸಾಮಾನ್ಯ ತುಂಬಿ ಬಂದಿರುವುವಾದರೂ ನೀಲಾಳ ಗಂಡ ರಮೇಶ ಮತ್ತು ಮಾಧವನ ತಾಯಿ ಶಾರೇರನ್ನುರದು ಸಾಲದೆನಿಸುತ್ತದೆ. ಕಥಾವಸ್ತುವು ಇಂದಿನ ಕಾಲಕ್ಕೆ ತುಸು ಹಳೆಯದೇ ಆಗಿರುವುದಾದರೂ ಅಂತ್ಯ ಪಲ್ಲಿನೆಂಬ ಕುತೂಹಲ ಕೆರಳಿಸುವಂತಿರುವುದೆ ಇಲ್ಲಿ ಕಾಣುವ ಒಂದು ವೈಶಿಷ್ಟ್ಯ. ಅದರೂ ಭಾಷೆಗೆ ಓಟ ಸಾಲದು. ಲೇಖಕಿಯವರ ಪ್ರಥಮ ಕಾದಂಬರಿಯಾದುದರಿಂದ, ಮುಂದಿನವುಗಳಲ್ಲಿ ದೋಷಗಳನ್ನು ದೂರೀಕರಿಸುವರೆಂದು ಆಶಿಸಬಹುದಾಗಿದೆ.

ಕಾಗೆಗೆ ಹೇಳಿದ ಕಥೆ—(ಸಣ್ಣ ಕಥೆಗಳು. ಲೇಖಕರು: ಶ್ರೀ ಶ್ರೀನಿವಾಸ ಹಾವನೂರ. ಪ್ರಕಾಶಕರು: ಪರಾಗ ಪ್ರಕಾಶನ, ಧಾರವಾಡ. ಪುಟಗಳು: ೧೧೬. ಬೆಲೆ: ರೂ. ೨-೨೫.

ನಮ್ಮ ಜೀವನದಲ್ಲಿ ಅವಿರ್ಭವಿಸುವ ಸಮಸ್ಯೆಗಳನ್ನೇ ಎತ್ತಿಕೊಂಡು ತಮ್ಮ ಬಹುಮುಖ ಪ್ರತಿಭೆ ಹಾಗೂ ಕಲಾಪ್ರಚಯಗಳಿಂದ ಸರ್ವಪ್ರಿಯರಾದ ಶ್ರೀ ಶ್ರೀನಿವಾಸ ಹಾವನೂರರು ಅವುಗಳ ಹಿಂದು ಮನೋಹರವಾದ ಶಾಬ್ದಜಾಲವನ್ನು ನೇಯ್ದಿದ್ದಾರೆ. ಇಂತಹ ಸಪ್ತ ಕಥಾನಕಗಳು ನಮ್ಮ ಮುಂದೆ ಈ ಸಂಕಲನದ ಮೂಲಕ ಬಂದಿವೆ.

ಸೊಸೆ ನೀಲವ್ವ ಎಳವೆಯಲ್ಲೇ ವಿಧವೆಯಾಗಿದ್ದಳು. ಮಾವ ತಿಮ್ಮಯ್ಯನವರೂ ವಿಧುರ— ತಿಮ್ಮಯ್ಯನವರು ದುರ್ದೈವದಿಂದ ನೀಲವ್ವಳ ಮೇಲೆ ಜಾಲ ಬೀಸಬಯಸಿದರು. ಆದರೆ, ಸುಬ್ಬೈವದಿಂದ ಪಶ್ಚಾತ್ತಾಪಾಗ್ನಿಯಿಂದ ಮನ ದಹಿಸಲು, ಅವರು ತುಂಗಭದ್ರೆಯ ಪಾಲಾಗುತ್ತಾರೆ—'ತಿಮ್ಮಯ್ಯನವರ ಮರಣ' ದಿಂದ ಸಖೂಜದ ಬೇಕೆಬೆಸ್ಸಜೆಗಳಿಗೆ ತಡೆಯಾಯಿತು. ಅವರು ಜೀವಂತ ಬದುಕುತ್ತಿದ್ದರೆ...? ಕೃಷ್ಣನನ್ನೇ ವರಿಸಬೇಕೆಂದಿದ್ದ ಸುಂದರಿ ಕೃಷ್ಣನಂತಹನನ್ನಾದರೂ ಮದುವೆಯಾಗುವೆನೆಂದುಕೊಂಡಳು. ಅವರೆ, ತಾನೊಂದು ಬಗೆದರೆ ದೈವ ಬೇರೊಂದು ಬಗೆಯಿತು ಹುಟ್ಟಿದ ಮಗುವಿನ ಮೇಲೂ ಆಕೆಗೆ ಬೇಸರ ಆದರೆ, ತಾಯ್ತನದ ಅರಿವು ಮೂಡಿ ಬಂದಾಗ, ಅದೇ ಮಗುವಿನಲ್ಲಿ ಕೃಷ್ಣ ತೋರಿಬಂದ--ಇದೇ 'ಸ್ವಪ್ನ ಮುರಲಿ'. ತಾಯಿ ಮೃತಜಾತ ಶಿಶುವನ್ನು ಹೆರುತ್ತಿರುವಾಗ ತಂದೆ ನೀಲಾಸಾನಿಯ ಶಾದಗಳನ್ನೆ ಪ್ರೇಮಾನುಭಿಕ್ಷೆ ಬೇಡುತ್ತಾರೆ; ಅವರನ್ನು ಕರೆತರಲು ಹೋದ ಅನಂತ ತಂದೆಯನ್ನು ಕರೆತರಲಿಲ್ಲ; ಬದಲು ತನ್ನನ್ನೇ ಅಲಕಾವತಿಯಿಂದ ಉಳಿಸಿ ಕರೆತಂದು ತಾಯಿಗೊಪ್ಪಿಸಿದ. 'ರಾಪ್ರಿಸೂಕ್ತ' ಈ ಕಥಾನಕ ಸ್ವಾರಸ್ಯವಿದೆ. ಮಗುವಿನ ಮೇಲೆ ವಾತ್ಸಲ್ಯ ತಂದೆಗೆ ಹೆಚ್ಚೆಂದು ತಾಯಿಗೆಯೇ ಎಂಬ ವಿವಾದಕ್ಕೆ ವಿನೋದ ಪೂರ್ಣವೆನಿಸಿದ ಪರೀಕ್ಷೆ ನಡೆದು ಸಿಗುವ ತಿರ್ಮಾನವು 'ವಾತ್ಸಲ್ಯ ಪರೀಕ್ಷೆ'ಯಲ್ಲಿದೆ. ಮೋಹನನು ಬಾಲ ವಿಧವೆ ಶಾಂತಳಲ್ಲಿ ಅನುರಕ್ತನಾಗಿ ಆಕೆಗಾಗಿ ಹಾತೊರೆದಾಗ, ತಂದೆ 'ಆಕೆಯನ್ನು ಮದುವೆಯಾದರೆ, ನಿನ್ನ ಗೋರಿಯನ್ನು ನೀನೇ ಮಾಡಿಕೊಂಡಂತೆ' ಎಂದು ಎಚ್ಚರಿಸಿದರೂ ತನ್ನ ಹಟ್ಟುಬಿಡದ ಕೆಚ್ಚಿನವನಾದರೂ ಆತ ಒಲಿದ ಶಾಂತ ಇದ್ದಕ್ಕಿದ್ದಂತೆ ಅಡಗಿ ಹೋಗಿ ತನ್ನ ಮೊದಲನೆಯ ಸಂಬಂಧವನ್ನು ಮರೆಯದ ದೃಢ್ಯ ಮೊದಲನೆಯ ಸಂಬಂಧ' ದಲ್ಲಿ, ನಮಗೆ ಕಾಣುತ್ತದೆ. ಸಂಸಾರವೆಂದೊಡನೆಯೇ ಚಿಕ್ಕ ಸುಟ್ಟ ಕಲಹಗಳು ಏಳುವುದು ಸ್ವಾಭಾವಿಕ. ಇವುಗಳ ಬೆಂಕಿಪೆಟ್ಟಿಗೆ—ಕಡ್ಡಿ ತಿಕ್ಕುವಂತಲ್ಲ; ಗಂಧದ ಕೊರಡೆಗೆ ಮತ್ತು ಕಲ್ಲುಗಳ ಘರ್ಷಣೆಯಂತೆ! ಗಂಡ-ಹೆಂಡಿರು ಪರಸ್ಪರ ದೋಷಾರೋಪಣೆ ನಡೆಸಿ, ಕೊನೆಗೆ ಮೌನಸ್ತ್ರತಧಾರಣೆ ಮಾಡಿದರೇನೋ ನಿಜ; ಆದರೆ, ಗಂಧ, ಕಲ್ಲು ಬೇರೆ ಬೇರೆಯಾದರೆ, ಸುಗಂಧ ತೀಚುವುದುಂಟೆ? ಇದೇ 'ಗಂಧ ಮತ್ತು ಕಲ್ಲು'ನ ವಿಷಯ, 'ಅತ್ತಿಗೆ' ಅರಿಯದೆಯೇ ನೈದುನನ ಮಗುಳ್ಳಗೆಯಿಂದ ಅಕರ್ಷಿತಳಾದಳು. ಮುಂದೆ— ಘಟಿಸಬಾರದಾದ ಘಟನೆಯೂ ನಡೆಯಿತು. ಹುಟ್ಟಿದ ಕೂಸು ಯಾರದೆಂಬುದು ಅವರಿಬ್ಬರಿಗೆ ಮಾತ್ರ ಗೊತ್ತು. ಅಂತೂ ಆತ್ಮಹತ್ಯೆ ಮಾಡಿಕೊಂಡ ಅಕೆ ತನ್ನ ವಾಸನೆಯನ್ನು ಕಾಗೆಗೆ ತಿಳಿಸಿ ಹಾಕಿದ ಪಿಂಡವನ್ನು ಸುಟ್ಟುವಂತೆ ಪ್ರಾರ್ಥಿಸಬೇಕಾಯ್ತು. 'ಇದೇ ಕಾಗೆಗೆ ಹೇಳಿದ ಕಥೆ' ಯಿದು!

ಜೀವನದ ಅನುಭವದಾಳದಿಂದ ಮೂಡಿ ಬಂದ ಸಮಾಜದ ಚಿತ್ರಗಳನ್ನು ನಮ್ಮ ಮುಂದೆ ಸಮಸ್ಕಾರೂಪದಲ್ಲಿ ಮಂಡಿಸಿದ ಶ್ರೀ ಹಾವನೂರರ ಸಂಕಲನ ಅವಶ್ಯ ಸಂಗ್ರಹಣೀಯವಿದೆ; ಅವರು ನಿರೂಪಿಸಿದ ಸಮಸ್ಯೆಗಳ ಬಗ್ಗೆ ಸಮಾಜವಾದರೂ ಗಂಭೀರವಾಗಿ ಯೋಚಿಸಿ ಅವನ್ನು ಬಗೆಹರಿಯುವತ್ತ ಗಮನ ಹರಿಸಬೇಕಾಗಿದೆ.

ಪ್ಲವಸಂವತ್ಸರದ ಶ್ರೀಕೃಷ್ಣ ಪಂಚಾಂಗ—(ಶ್ರೀ ಲಕ್ಷ್ಮೀನಾರಾಯಣ ಆಡಗರಿಂದ ಗುಣಿಸಿ ಪರಿಶೋಧಿಸಲ್ಪಟ್ಟದ್ದು) ಬೆಲೆ: ೦-೨೫. ಭಾವಿ ಸಂವತ್ಸರದ ವಿವಿಧಸಂಪಾಂಗಗಳಲ್ಲಿಯೊತ್ತಮವೆನಿಸಿದ ಪ್ರಕಾಶಗೊಳ್ಳುವ ಶ್ರೀಕೃಷ್ಣ ಪಂಚಾಂಗ ಜನತೆಯ ಅವಶ್ಯಕತೆಗಳನ್ನು ಬಹು ವರ್ಷಗಳಿಂದಲೂ ಪೂರೈಸುತ್ತ ಬಂದಿದೆ. ಪಂಚಾಂಗ ವಿಷಯಗಳಲ್ಲಿಯೂ ಇತರ ನಿತ್ಯೋಪಯೋಗಿ ವಿಷಯ ಸಂಗ್ರಹಗಳಲ್ಲಿಯೂ ಇದು ಉಪಯುಕ್ತವಿನೆ. ಸುಲಭ ಬೆಲೆಯಲ್ಲಿ ಅಧಿಕ ಪ್ರತಿಫಲ ಪಡೆಯಬಯಸುವಾಗುದು ಇದರ ವೈಶಿಷ್ಟ್ಯ.

ವಿಕಟ ವಿನೋದಿನಿ— ಬೆಂಗಳೂರಿನಿಂದ ಶ್ರೀ ಬಿ. ಶಿವಪ್ಪನವರ ಸಂಪಾದಕತ್ವದಲ್ಲಿ ಸುವರ್ಣ ಮಹೋತ್ಸವದ ಶುಭದಿನವನ್ನು ಕಂಡ 'ವಿಕಟ ವಿನೋದಿನಿ'ಯ ಬ್ರಹತ್ ಪ್ರಮಾಣದ ವಿಶೇಷ ಸಂಚಿಕೆಯನ್ನು ಸ್ವಾಗತಿಸುತ್ತೇವೆ. ಹಾಸ್ಯರಸ ಪ್ರಧಾನವಾಗಿರುವ ಬೀಟಿ, ವೀಕ್ಷಿತ್, ನಾರಿಗೇರಿ, ಬೆಂಕಣ್ಣ ಮೊದಲಾದವರ ಬರಹಗಳು ರಂಜಕವಿವೆ. ಈ ಸಂಚಿಕೆಯ ಬೆಲೆ: ರೂ. ೦-೫೦.

—ಗೋರಿ.

ಸೂಚನೆ

"ಸವಯುಗ"ದಲ್ಲಿ ಪ್ರಕಟಣೆಗಾಗಿ ಲೇಖನಗಳನ್ನು ಆಮಂತ್ರಿಸಲಾಗಿದೆ. ಇವು ಚಿಕ್ಕದಿರ ಬೇಕಲ್ಲದೆ ಕಾಗದದ ಒಂದೇ ಮಗ್ಗುಲಿನಲ್ಲಿರಬೇಕು. ಲೇಖಕಬಂಧುಗಳು ಸಹಕರಿಸಬೇಕಾಗಿ ವಿನಂತಿ. -ಸಂ.ಸ.

ವಿಜಾರವರ್ಷ

(೩ನೇ ಪುಟದಿಂದ)

ಮಿಯ ಲಾನೇ ಒಂದಂಶದಷ್ಟು ಪ್ರಮಾಣವುಳ್ಳ ಚಂದ್ರವು ಮಾತ್ರವೇ ಏಕೆ ತಿರುಗುತ್ತದೆ? ಚಂದ್ರನ ಮೇಲು ಭಾಗವು ಈಗ ಇರುವ ರೀತಿಯಾಗಿರಲು ಕಾರಣವೇನು? ಅಂಗಾರಕದಲ್ಲಿ ದೊಡ್ಡ ಪರ್ವತಗಳಾಗಲೀ ಸರಪತ ಶ್ರೇಣಿಗಳಾಗಲೀ ಏಕಿಲ್ಲ? ಧೂಮಕೇತುಗಳ ಸಮೂಹಗಳು ಏರ್ಪಡಲು ಕಾರಣವೇನು?

ಇಂತಹ ಪ್ರಶ್ನೆಗಳಿಗೆ ತಕ್ಕ ಸಮಾಧಾನಗಳಿಲ್ಲ; ಇದ್ದರೂ ತೃಪ್ತಿಕರವಾಗಿಲ್ಲ.

ಸೂರ್ಯನ ಉತ್ಪತ್ತಿ, ಪರಿಣಾಮ, ಅಲ್ಪ ಗ್ರಹಗಳು, ಧೂಮಕೇತುಗಳು, ಮೊದಲಾದುವುಗಳನ್ನು ಕುರಿತು ಸಂಶೋಧನೆ ನಡೆದಷ್ಟೂ, ಸ್ಥಿತ್ ಸಿದ್ಧಾಂತದಲ್ಲಿ ಕೆಲವು ಸಂಸ್ಕರಣೆಗಳುಂಟಾಗಬಹುದು. ಆದರೆ ಲಕ್ಷಿಸಬೇಕಾದ ಸಂಗತಿಯೇನಂದರೆ, ಗ್ರಹಗಳ ಉತ್ಪತ್ತಿಗೆ ಸಂಬಂಧಿಸಿದ ಪ್ರಾಥಮಿಕ ವಿಷಯಗಳು ಸೋವಿಯೆಟ್ ಶಾಸ್ತ್ರದ ಮೂಲಕ ಸರಿಯಾಗಿ ವ್ಯಕ್ತೀಕರಿಸಲ್ಪಟ್ಟಿವೆ. ಈ ಪರಿಜ್ಞಾನದ ಪುರೋಭಿವೃದ್ಧಿಗೆ ತುಂಬಾ ಅನುಕೂಲವುಂಟಾಗಿದೆ.

ಸೋವಿಯೆಟ್ ಶಾಸ್ತ್ರವೇತ್ತರು ಸೂರ್ಯಕುಟುಂಬದ ಹುಟ್ಟು ಮಾತ್ರವಲ್ಲದೆ, ನಕ್ಷತ್ರಗಳು, ಬ್ರಹ್ಮಾಂಡಗಳು ಮೊದಲಾದುವುಗಳ ಪರಿಣಾಮವನ್ನು ಕುರಿತೂ ಸಮಸ್ಯೆಗಳನ್ನು ಪರಿಶೀಲಿಸುತ್ತಿದ್ದಾರೆ. ಏಕೆಂದರೆ ಆಕಾಶದಲ್ಲಿರುವ ವಿವಿಧ ಬಗೆಗಳ ರೂಪಗಳ ಅಭಿವೃದ್ಧಿಗೂ ಸಂಬಂಧವುಂಟು. ಸೃಷ್ಟಿಯೊಳಗಿರುವ ಪದಾರ್ಥವು ಹೊಂದುವ ಪರಿಣಾಮ ವ್ಯವಸ್ಥೆಗಳನ್ನೆ ಅವು ಪ್ರತಿಬಿಂಬಿಸುತ್ತವೆ. ಈ ಪರಿಣಾಮದಶೆಗಳನ್ನು ಕುರಿತು ಸ್ವಲ್ಪ ಪರಿಶೋಧನೆ ಮಾತ್ರವೇ ನಡೆಯಿತು. ಇನ್ನೂ ಎಷ್ಟೋ ನಡೆಯ ಬೇಕಾಗಿದೆ. ಬೇರೆ ಬೇರೆ ಮೂಲ ಪದಾರ್ಥಗಳ ; ಪರಮಾಣುಗಳು ಹೇಗೆ ಉತ್ಪತ್ತಿಯಾಗುತ್ತವೆಂಬುದು ಸ್ಪಷ್ಟವಾಗಿ ತಿಳಿಯಬೇಕಾಗಿದೆ. ಮುಖ್ಯವಾಗಿ ರೇಡಿಯೋ ಪದಾರ್ಥಗಳ ಪರಮಾಣುಗಳ ಉತ್ಪತ್ತಿಯೇ ವಿಚಿತ್ರವಾದುದು. ಭೂಮಿಯ ಮೇಲೆ ನಾವು ಈ ಪರಮಾಣುಗಳ ಶಿಥಿಲಾವಸ್ಥೆಯನ್ನಷ್ಟೇ ನೋಡುತ್ತೇವೆಯೇ ಹೊರತು, ಅದರ ಸೃಷ್ಟಿಯನ್ನು ನೋಡಲಿಲ್ಲ. ಇನ್ನು ಮುಂದೆ ಕೆಲವು ಕೋಟಿ ಕೋಟಿ ಸಂವತ್ಸರಗಳ ಅನಂತರ, ಸೂರ್ಯನೂ ಗ್ರಹಗಳೂ ಏನಾದಾದು? ಅವುಗಳನ್ನು ಹೊಂದಿರುವ ಪದಾರ್ಥಗಳ ಗತಿ ಹೇಗೆ ಮೂರ್ಪಟ್ಟೀತು? ಅವು ಮೊತ್ತಮೊದಲನೇ ಸ್ಥಿತಿಯನ್ನು ಯಾವ ವಿಧದಲ್ಲಿ ಹೊಂದಿಯೂವು? ಈ ಪ್ರಶ್ನೆಗಳು ಶಾಸ್ತ್ರಜ್ಞರನ್ನು ಇದಿರಿಸುತ್ತಿವೆ.

ಸೋವಿಯೆಟ್ ಶಾಸ್ತ್ರವೇತ್ತರು ಈ ಸಮಸ್ಯೆಗಳನ್ನು ಗುರಿಸದೆ ಹೋಗಲಿಲ್ಲ. ಆದರೆ ಇವೇನೂ ಅವಸರದಲ್ಲಿ ತೇಲುವಂಥವಲ್ಲ. ಇನ್ನೂ ಸಂಶೋಧನೆ ನಡೆದಷ್ಟೂ ಭೂಮಿ, ಇತರ ಗ್ರಹಗಳು, ನಕ್ಷತ್ರಗಳು ಮೊದಲಾದುವುಗಳ ಉತ್ಪತ್ತಿಯನ್ನುಕುರಿತು ಇನ್ನಿಷ್ಟು ತಿಳಿಯೂದ ಜ್ಞಾನವು ಲಭಿಸುವುದೆನ್ನಲು ಸಂದೇಹವಿಲ್ಲ.

(ಮುಗಿದುದು)

The Moolky Bank, Ltd.
MULKI.

ಡಿಪೋಸಿಟು ಮೇಲಣ ಆಕರ್ಷಕ ಬಡ್ಡಿ ದರಗಳು—

1ರಿಂದ 4 ತಿಂಗಳ ವರೆಗೆ		4%
5 ,, 12	,,	4½%
13 ,, 24	,,	4¾%

ರೂ. 8,000/- ಮತ್ತು ಮೇಲಣ ಡಿಪೋಸಿಟಿಗೆ ¼% ಹೆಚ್ಚು

ಸೇವಿಂಗ್ಸ್ ಬ್ಯಾಂಕ್ ಲೆಕ್ಕಕ್ಕೆ 2½%

ಚಾಲ್ತಿ ಶೇಷಕಾತಿಗೆ ½%

ಸುಲಭ ಬಡ್ಡಿ ದರದಲ್ಲಿ ಚಿನ್ನಾಭರಣಗಳ ಮೇಲೆ ಮತ್ತು ಇತರ ರೀತಿಯಲ್ಲಿ ಸಾಲಕೊಡಲಾಗುವುದು.

ಯಂ. ಆರ್. ಯಜ್. ಪೂಂಜ.
ಮೆನೇಜರ್,
ಮೂಲ್ಕಿ ಬ್ಯಾಂಕ್ ಲಿ. ಮುಲ್ಕಿ.

ಏಲಂ ನೋಟೀಸು

ದಿ ಕೆಥೋಲಿಕ್ ಬ್ಯಾಂಕ್ ಲಿಮಿಟೆಡ್ ಶಿರ್ವ.

The Catholic Bank Ltd., Shirva.

ಈ ಕೆಳಗೆ ಹೆಸರು ಕಾಣಿಸಿದ ಮಹನೀಯರು, ಸದ್ರಿ ಬ್ಯಾಂಕಿನಿಂದ ಚಿನ್ನಾಭರಣಗಳ ಈಡಿನ ಮೇಲೆ ಪಡೆಕೊಂಡ ಸಾಲವನ್ನು ಕೃಮಸ್ರಕಾರ ರಿಜಿಸ್ಟ್ರಿ ನೋಟೀಸು ಕೊಟ್ಟಲ್ಲಿ ಕೂಡಾ ಮರುಪಾವತಿ ಮಾಡದಿರುವುದರಿಂದ ಸದ್ರಿಯವರಿಗೆ ಸದ್ರಿಯವರು ಮೃತಪಟ್ಟಲ್ಲಿ ಸದ್ರಿಯವರ ವಾರೀಸುದಾರರಿಗೆ ಈ ಮೂಲಕ ತಿಳಿಸುವುದೇನಂದರೆ:-ಸದ್ರಿಯವರು ಈಡಿಟ್ಟ ನಗಗಳನ್ನು ಇದೇ ತಾರೀಕು 9-2-61ರ ಬಳಿಗೆ ನಿಡಿಸದಿದ್ದಲ್ಲಿ ತಾ. 11.2-61 ನೇ ಶನಿವಾರ ಮಧ್ಯಾಹ್ನ ಗಂಟೆ 2ಕ್ಕೆ ಯೂ, ನಮಗೆ ಯುಕ್ತಕಂಡ ಇನ್ನಿತರ ದಿನಗಳಲ್ಲಿ ಬಹಿರ್ನೋಟೀಸು ಕೊಡದೆನೇ ಬ್ಯಾಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವುದು.

ಸಾಲದ ನಂಬ್ರ	ಹೆಸರು ಮತ್ತು ವಿಳಾಸ	ಅಸಲು ರೂಪಾಯಿ
2130	ಶ್ರೀ ಟೊಮ್ಮಯ್ಯ ಸೆಟ್ಟಿ N/o ಅಂಗರ ಸೆಟ್ಟಿ, ಸೂಡ ಮಜಲ, ಸೂಡ ಪೋಸ್ಟ್, ದ. ಕ.	25—00
2203	ಶ್ರೀ ಶಿವಾಸು ಸೆಟ್ಟಿ, S/o ಅಂತಯ ಸೆಟ್ಟಿ ಕಾಪಿಕಾಡು, ಪಿಲಾರ್ ಪೋಸ್ಟ್, ದ. ಕ.	75—00
35/159	ಶ್ರೀ ಸಲ್ವಾದೋರ್ ಪೇರಾಪೋ, S/o ಲೊರೆನ್ಸ್ ಪೇರಾಪೋ, ಗೂರುಂಜೆ, ಶಿರ್ವ ಪೋಸ್ಟ್, ದ. ಕ.	35 00
510	ಸೇಕು ಹುಸೈನ್ S/o ಸಬುಬ್ಬಾನ್, ಮಂಚಕಲ್, ಶಿರ್ವ ದ. ಕ.	10—00
1937	ಶ್ರೀ ಜೋರ್ಜ್ ಅಲ್ಫೊನ್ಸ್ S/o ಕಾಸ್ಮಿರ್ ಅಲ್ಫೊನ್ಸ್ ಹಳೆಹಿತ್ಲು ಶಿರ್ವ ಪೋಸ್ಟ್, ದ. ಕ.	45 ..00

Office of The Catholic Bank Ltd. Shirva, S.K. } (Sd) M. B. Shet, *Agent.*

ಆಧ್ಯಾತ್ಮ ವಿಚಾರ

ಭಗವದ್ಗೀತೆಯ ಪ್ರಕಾಶ

ಪರಮಾತ್ಮನಲ್ಲಿ ಅನನ್ಯ ರೀತಿಯಿಂದ ಚಿತ್ತವಿಟ್ಟು ಸರ್ವಶರಣಾಗತರಾದರೆ ಮಾತ್ರ ಆತನ ನಿಜಸ್ವರೂಪದ ಅರಿವಾಗುವುದು. ಅಣುರೇಣುತೃಣಕಾಷ್ಠಗಳಲ್ಲಿಯೂ ಇರುವ ಆತನನ್ನು ಅನ್ಯ ವಿಧಾನದಿಂದ ಕಾಣುವುದು ದುಸ್ತರ.

ಶ್ರೀ ಎಂ. ಬಿ. ಶಂಕರ ರಾವ್, ಐ. ಎ. ಎಸ್. (ನಿವೃತ್ತ)

ಕಿರಣ ೭: ಅನುಭವ ಯೋಗ

ಭಗವಾನ:—ಪಾರ್ಥನೇ, ನಿನ್ನ ಚಿತ್ತವನ್ನು ನನ್ನಲ್ಲಿಟ್ಟು. ನನ್ನಲ್ಲಿ ಸಂಪೂರ್ಣ ಶರಣುಹೊಂದಿ, ಬಾಳುವವನಾಗು. ಆಗ ನಾನಾರೆಂದು ನಿನಗೆ ತಿಳಿವುದು. ನಿನ್ನಲ್ಲಿ ವಿವೇಕವನ್ನೂ, ಜ್ಞಾನವನ್ನೂ ಉದಿಸುತ್ತೇನೆ. ಒಂದು ಕೋಟಿ ಮಾನವರಲ್ಲಿ ಒಬ್ಬನೇ ಒಬ್ಬನು ಸಂಪೂರ್ಣ ಯೋಗಿಯಾಗುವನು. ಅಂತಹ ಯೋಗಿಗಳು ಮಾತ್ರ ನನ್ನನ್ನು ತಿಳಿದುಕೊಳ್ಳುವರು. ನನ್ನ ಸ್ವಭಾವದಲ್ಲಿ ಎಂಟು ಭಾಗಗಳಿವೆ. ೧. ಮಣ್ಣು. ೨. ನೀರು ೩. ಬೆಂಕಿ. ೪. ಗಾಳಿ. ೫. ಆಕಾಶ ೬. ಮನಸ್ಸು. ೭. ಬುದ್ಧಿ. ೮. ಅಹಂಕಾರ. ಇವೇ ಆ ಭಾಗಗಳು. ಈ ಭಾಗಗಳು ನನ್ನ ಕೆಳಗಿನ ಸ್ವಭಾವಕ್ಕೆ ಸೇರಿರುವವು. ಆದರೆ ನನ್ನ ಮೇಲಿನ ಸ್ವಭಾವವು ಬೇರೆಯಾಗಿದೆ. ನನ್ನ ಮೇಲಿನ ಸ್ವಭಾವವನ್ನು ಆದರಿಸಿ ಜಗತ್ತು ಪ್ರಕಾಶಗೊಂಡಿದೆ. ಸೃಷ್ಟಿಯುಂಟಾದುದು ನನ್ನ ಮೇಲಿನ ಸ್ವಭಾವದ ಶಕ್ತಿಯಿಂದ. ನಾನು ಸೃಷ್ಟಿ ಕರ್ತನು. ಸೃಷ್ಟಿ ನಾಶವೂ ನನ್ನಿಂದಲೆ ಆಗುವುದು, ಧನಂಜಯನೇ, ನನ್ನಿಂದ ಮೇಲಾದವನು ಬೇರಾರೂ ಇಲ್ಲ. ನೀರಿಗೆ ನನ್ನಿಂದ ರುಚಿಯು ಬಂತು. ಸೂರ್ಯಚಂದ್ರರಿಗೆ ನನ್ನಿಂದ ಪ್ರಕಾಶವು ಒದಗಿತು. ವೇದಗಳಲ್ಲಿ ಹೇಳಿದ "ಓಂ" ಶಬ್ದ ನಾನೇ. ಆಕಾಶ ವಾಣಿಯೂ ನಾನೇ. ನಾನೇ ಚೈತನ್ಯ, ಅಗ್ನಿಯಿಂದ ಏಳುವ ಜ್ವಾಲೆಯೂ ನಾನೇ. ಸಮಸ್ತ ಜೀವಿಗಳಲ್ಲಿರುವ ಪ್ರಾಣವೂ ನಾನೇ. ಯೋಗಿಗಳ ಧ್ಯಾನದಲ್ಲೂ ನಾನೇ. ಆದಿ ಬೀಜವೂ ನಾನೇ. ವಿವೇಕಿಗಳ ವಿವೇಕವೂ ನಾನೇ. ಪ್ರಕಾಶಿಸುವವರ ಜ್ಯೋತಿಯೂ ನಾನೇ. ಶಕ್ತಿವಂತರ ಶಕ್ತಿಯೂ ನಾನೇ ನನ್ನಲ್ಲಿ ಆಶೆಯೂ ಇಲ್ಲ, ಮೋಹವೂ ಇಲ್ಲ. ಮಾನವರಲ್ಲಿ ಧರ್ಮವನ್ನು ಅನುಸರಿಸಿದ ಆಶೆಗಳನ್ನು ಹುಟ್ಟಿಸುವವನೂ ನಾನೇ. ಧರ್ಮ ಕರ್ಮಗಳು ನನ್ನ ಶಕ್ತಿಯಿಂದಲೆ ನಡೆಯುವವು. ನಾನು ಮಾತ್ರ ಆ ಕರ್ಮಗಳಲ್ಲಿ ಅಡಕವಾಗಿಲ್ಲ. ಆದರೆ ಕರ್ಮಗಳು ನನ್ನಲ್ಲಿ ಸೇರಿರುವವು. ಮಾಯಾಭರಿತವಾದ ಈ ಜಗತ್ತು ನನ್ನನ್ನು ತಿಳಿಯದೆ ಇದೆ. ನಾನು ನನ್ನ ಸ್ವಭಾವಗಳನ್ನೊಳಗೊಂಡೇ ಇರುವೆನು. ನನ್ನಲ್ಲಿ ಶರಣುಹೊಕ್ಕವರು ಮಾಯಾಜಾಲಕ್ಕೆ ಸಿಲುಕರು. ನಾಲ್ಕು ತರಗತಿಯ ಧರ್ಮಯುತರು ನನ್ನನ್ನು ಪೂಜಿಸುವರು. ೧. ಕಷ್ಟಗಳಿಗೆ ಈಡಾದ ಮನುಷ್ಯನು. ೨. ಜ್ಞಾನವನ್ನು ಸಂಪಾದಿಸುವ ಉತ್ಸಾಹಿ. ೩. ಮುಕ್ತಿಸಾಧಕ. ೪. ಸಂಪೂರ್ಣ ಜ್ಞಾನವನ್ನು ಪಡೆದವನು. ಈ ನಾಲ್ವರಲ್ಲಿ ಸಂಪೂರ್ಣ ಜ್ಞಾನಿಯು ನನಗೆ ಅತ್ಯಂತ ಪ್ರಿಯನು. ಆತನು ನನ್ನಲ್ಲಿ ಶರಣನು. ಈ ನಾಲ್ಕು ತರಗತಿಯವರೂ ಉತ್ತಮರು. ಅನೇಕ ಜನ್ಮಗಳನ್ನು ದಾಟಿದ ನಂತರ ಮಾನವನು ಸಂಪೂರ್ಣ ಜ್ಞಾನಿಯಾಗಿ ನನ್ನಲ್ಲಿ ಶರಣುಹೊಂದಿದಾಗ ಆತನಿಗೆ ಮೋಕ್ಷದ ದಾರಿಯು ಗೋಚರವಾಗುವುದು. ಹಲವು ಜನ್ಮದಾರಣಗಳಿಂದ ಅನುಭವವು ಪ್ರಾಪ್ತಿಸುವುದು. ಅನುಭವವು ಶಕ್ತಿಯುತವಾದ ಯೋಗವು. ಅನುಭವ ಯೋಗದಿಂದ ಮಾನವನು ಎಲ್ಲಾ ಸಂಶಯಗಳನ್ನು ಬಿಟ್ಟು ಸಂಪೂರ್ಣ ವಿಶ್ವಾಸದಿಂದ ನನ್ನನ್ನು ಪೂಜಿಸುವನು. ಕ್ರಮೇಣ ಆತನು ನನ್ನಲ್ಲಿ ಐಕ್ಯನಾಗುವನು. ನನಗೆ ಪ್ರತ್ಯೇಕವಾದ ಒಂದು ರೂಪವಿದೆ ಎಂದು ಭಾವಿಸುವವರು ಮೂಢರು. ದಿವ್ಯಶಕ್ತಿಯ ತೇಜದಿಂದ ನಾನು ಅದೃಶ್ಯನು. ನೋಹದಿಂದ ಬಂಧಿತನಾದ ಮಾನವನು ನನ್ನಲ್ಲಿ ರೂಪವನ್ನು ಕಲ್ಪಿಸುವನು. ನಾನು ತ್ರಿಕಾಲ ಜ್ಞಾನಿಯು. ಪ್ರೇಮ ಮತ್ತು ವೈರಗಳಿಂದ ಬಂಧಿಸಲ್ಪಟ್ಟ ಮಾನವನು ಹುಟ್ಟುವಾಗಲೆ ಮೋಹದ ಬಲೆಯಲ್ಲಿ ಬಿದ್ದು ಕಷ್ಟಪಡುವನು. ಧರ್ಮಬಲದಿಂದ ಮಾಯೆಯನ್ನು ಬಿಟ್ಟವರು ನನ್ನನ್ನು ವಿಶ್ವಾಸದಿಂದ ಪೂಜಿಸುವರು. ವ್ರತಗಳನ್ನು ಆಚರಿಸುವರು.

ರಾಜ್ಯಾಂಗ ಸಭೆಯು ಸಂವಿಧಾನವನ್ನು ಅಂಗೀಕರಿಸಿದ ನಂತರ ಸಭೆಯ ಅಧ್ಯಕ್ಷರಾದ ಶ್ರೀ ರಾಜೇಂದ್ರ ಪ್ರಸಾದರು ಸಂವಿಧಾನವನ್ನು ದೃಢೀಕರಿಸುತ್ತಿರುವುದನ್ನು ಚಿತ್ರವು ತೋರಿಸುತ್ತದೆ.

ಕಥಾವಿಹಾರ

(೨ನೇ ಪುಟದಿಂದ)

ಮಾಡಿದರೆ, ಸಮಾಜ ಅವಳನ್ನು ಹೊತ್ತು ಹುರಿಯುತ್ತದೆ. ಧಿಕ್ಕರಿಸುತ್ತದೆ! ಯಾಕೆಂದರೆ, ಅದು ಎಷ್ಟೆದರೂ ಹೆಣ್ಣು! ಸ್ವಲ್ಪ ಯೋಚಿಸಿ ನೋಡಿ-ಶೇಖರ ನಾನೂ ಸಹ ನಿಮ್ಮ ಹಾಗೆ ಮಾಡಿದ್ದರೆ.....?? ಹೆಚ್ಚಿಗೆ ಬರೆದಾದರೂ ಏನು ಪ್ರಯೋಜನ? ನಿಮ್ಮ ಮನಸ್ಸೂ ನೋಯುವದು. ಒಮ್ಮೆ ನಿಮ್ಮನ್ನು ಕಂಡು, ನಿಮ್ಮ ಪಾದ ಪದಗಳಿಗೆ ನಮಸ್ಕರಿಸಬೇಕೆಂಬ ಆಶೆ ಬಹಳವಿತ್ತು. ಆದರೆ, ಮುಖ, ಮುಖ ಕಂಡು ವಿನಃ ಕಾರಣ ಮನಸ್ತಾಪವಾಗುವದು, ಸ್ವಾಭಾವಿಕ. ಅಲ್ಲದೇ ನನ್ನ, ನಿಮ್ಮ ಕಾರ್ಯಕ್ಕೆ ಮತ್ತೆ ಅಡ್ಡಿಯಾಗಬಹುದೆಂಬ ಹೆದರಿಕೆಯಿಂದ ಕಾಣಲಾಗಲಿಲ್ಲ. ಇರಲಿ, ನಿಮ್ಮ ಪ್ರಕೃತಿಯತ್ತ ಜೋಕೆ! ನನ್ನದೊಂದು ಇಷ್ಟ! ಏನೆಂದರೆ, ಆ ದೇವರಲ್ಲಿ—"ಈ ಜನ್ಮದಲ್ಲಿ ಆಗದಿದ್ದರೂ ಸಹ ಮುಂದಿನ ಜನ್ಮದಲ್ಲಿಯಾದರೂ, ನಿಮ್ಮ ಪಾದ ಪದ್ಮಗಳ ಸೇವೆ ಮಾಡಲು ಸಿಗಲೇಬೇಕೆಂದು ಇಷ್ಟೇ ಪ್ರಾರ್ಥನೆ!

ಎಂದು ನಿಮ್ಮ ಜಗತ್ತನ್ನು ಬಿಟ್ಟ

—ಇಂದೂಮತಿ.

ಪತ್ರವನ್ನು ಕಂಡಕೂಡಲೇ ಕೈ, ಕಾಲು ತಣ್ಣಗಾದವು. ಏನು ಮಾಡಬೇಕೆಂಬುದೇ ತೋಚಲಿಲ್ಲ; ಸಿಟ್ಟುಸುರು ಬಿಟ್ಟೆ!

"ಹುಚ್ಚು ಹುಡುಗಿ"

—ಎಂದು ಮನ ಅಂದಿತು. ಕಣ್ಣುಗಳು ತೇವಗೊಂಡವು. ಅವಳ ತುಂಬಿಕೊಂಡ ಮುಖ ಕಣ್ಣೀರು ಸುರಿಸುವಂತೆ, ನನ್ನ ಮುಖದ ಎದುರು ನಿಂತಿತು.

"ನೀಚ, ವಚನಭ್ರಷ್ಟ, ಪಾಪಿ, ರಿನಗೇಡಿ; ಪ್ರೇಮದ ಬೆಲೆಯರಿಯದ ಮೆರುಳ! ದುಡ್ಡಿನ ಆಶೆಗಾಗಿ ಮತ್ತೊಬ್ಬಳ ಸಂಗಡ ಮದುವೆಯಾಗ ಹೊರಟೆ ಚಂಡಾಲ! ನಚ್ಚಿ ಬಂದವಳಿಗೆ, ಎರಡು ಬಗೆದ ನಾಯಿ!"

—ಎಂದು ಮನ ಅವಮಾನ ಮಾಡುತ್ತಿತ್ತು ನನಗೆ. ಬಾಗಿಲ ತೆರೆದ ಸಪ್ಪಳ ವಾಯಿತು. ಯಾರು? ಎಂದು ಹೊರಕ್ಕೆ ನೋಡಿದೆ—

ಅವಳು ಮನೋಹರರ ಮನೆಗೆಲಸದವಳು....

"ಬೇಬಿ"

" .... ವಿಜಯೂ.... ವಿದ್ಯುತ್ ದೀಪದ ತಂತಿ ತಾಗಿ.... ಮೃತಳಾದಳು.... "

—ಎಂದಷ್ಟೇ ಕಣ್ಣೀರು ಸುರಿಸುತ್ತ, ನಡಿದು ಹೋದಳು.

oo oo oo

ಶೇಖರ ಕಲಿಯುವದಕ್ಕಾಗಿ ಮದುವೆಗೆ ಒಪ್ಪಿಗೆ ಕೊಟ್ಟ. ಶೇಖರನ ಮದುವೆಯ ಪತ್ರ ಕಂಡು, ಇಂದೂಮತಿ ಆತ್ಮಹತ್ಯೆ ಮಾಡಿಕೊಂಡಳು. ವಿಜಯೂ ವಿದ್ಯುತ್ ದೀಪದ ತಂತಿ ತಾಗಿ ಮೃತಳಾದಳು. ಶೇಖರ ಸುರಿಸುತ್ತಿದ್ದ ಕಣ್ಣೀರು—ಇಂದೂಮತಿಗೋ? ಅಥವಾ ವಿಜಯೂಳಿಗೋ?

ಸತ್ಕರ್ಮಗಳನ್ನು ನಿಷ್ಕಾಮ ಬುದ್ಧಿಯಿಂದ ಮಾಡುವರು. ಆತ್ಮದ ತತ್ವವನ್ನು ತಿಳಿಯುವರು. ಅಣುರೇಣುತೃಣ ಕಾಷ್ಠಗಳಲ್ಲೂ ನಾನಿರುವೆನೆಂಬುದನು ಮನನ ಮಾಡುವರು. ನಿಷ್ಠೆಯಿಂದ ನನ್ನನ್ನು ಭಜಿಸುವರು ಮರಣ ಕಾಲದಲ್ಲಿ ನನ್ನನ್ನೇ ಧ್ಯಾನಿಸುವರು. ಅನುಭವದಲ್ಲಿ ಶ್ರೇಷ್ಠತೆಯಿದೆ.

ಬದಲಾವಣೆಗೆಂದು ಒಮ್ಮೆ
ಎಸ್. ಆರ್. ಬೀಡಿಯನ್ನು
ಬಳಸಿ ನೋಡಿರಿ,
ಅಂದರೆ ನೀವು ತೆಪ್ಪದೆ ಅದನ್ನೇ
ಎಂದೆಂದಿಗೂ ಕೊಂಡು
ಕೊಳ್ಳುವಿರಿ.

S. R. BEEDI WORKS,
UDIPI, S.K.

ಎಲ್ಲಾ ಕಡೆಗಳಲ್ಲಿಯೂ ಮಾರಲ್ಪಡುತ್ತವೆ.

ನವಯುಗ ವಾರ ಪತ್ರಿಕೆಗೆ
ಚಂದಾದಾರರಾಗಿ ಪ್ರೋತ್ಸಾಹಿಸಿರಿ

NAVAYUGA
REGD. NO.B. G. 176

UDIPI, THURSDAY
2—2—1961

LICENSE NO. 31
Licensed to Post without Prepayment

ಪ್ರಚಲಿತ ಪ್ರಸಂಗ

(೧ನೇ ಪುಟದಿಂದ)

ವಿತ್ತರು; ಗೌರವಿಸಿದರು; ಆದರಿಸಿ ಉಪಚರಿಸಿದರು. ಅತಿಥಿಪ್ರಿಯರಾದ ಭಾರತೀಯರು ಮನೆಗೆ ಬಂದ ಎಲ್ಲರನ್ನೂ ಹೃದಯಪೂರ್ವಕವಾಗಿ ಸ್ವಾಗತಿಸುತ್ತಾರೆಂಬುದು ನಿಜವಾದರೂ ಉಳಿದೆಲ್ಲರಿಗೂ ಸಂದಿರುವುದಕ್ಕಿಂತ ಹೆಚ್ಚಿನ ಗೌರವಾದರಗಳು ರಾಣಿಯನ್ನು ಕಾದಿದ್ದುವು; ಭಾರತೀಯರ ಹೃದಯವೇ ಆಕೆಗಾಗಿ ಮುಡುಪಾಗಿತ್ತು; ಅದು ಆಕೆಗೆ ದೊರೆಯಿತು.

ಬ್ರಿಟನ್ ಮತ್ತು ಭಾರತಗಳು ಸ್ವತಂತ್ರ ವಿದೇಶನೀತಿಯನ್ನು ಅನುಸರಿಸಿಕೊಂಡಿರುವುದರಿಂದಲೇ ಸುಯೇಜ ಕಾಲುವೆಯ ರಾಷ್ಟ್ರೀಕರಣದಸ್ಪೆಸಂಬಂಧದಲ್ಲಿ ಇವುಗಳ ನಡುವೆ ಸ್ವಲ್ಪ ವಿರಸವೊದಗಿದಂತಾಯಿತು. ಅಲ್ಲಿ ಎಂದೇನು, ವಿಶ್ವದಲ್ಲಿಯೇ ವಿಚಿತ್ರ ಸನ್ನಿವೇಶವನ್ನುಂಟುಮಾಡಿದ ಘಟನೆಯಿದು. ಆದರೂ ಅಮೆರಿಕೆಯ ನೇತೃತ್ವದಲ್ಲಿ ಬಿರುಗಾಳಿಯಂತೆ ಬೀಸಿಬಂದ ಈ ದುರ್ಘಟನೆ ತೇಲಿ ತೇಲಿ ಹೋಯಿತು. ಭಾರತ—ಬ್ರಿಟನ್‌ಗಳ ವಿರಸವೂ ಕೊನೆಗೊಂಡಿತು. ನಮ್ಮ ಪ್ರಧಾನಿಗಳು ನಮ್ಮ ರಾಷ್ಟ್ರಪತಿಗಳ ಅಧಿಕಾರ ಕಕ್ಷೆಯನ್ನು ಪದೇ ಪದೇ ಬ್ರಿಟಿಷ ರಾಣಿಯದಕ್ಕೆ ಹೋಲಿಸುತ್ತ ಬರುತಿದ್ದಾರೆ. ಪಾರ್ಲಿಮೆಂಟ್ ಮತ್ತು ರಾಣಿಯರ ನಡುವೆ ತಿಕ್ಕಾಟಗಳು ಬರುವ ಪ್ರಮೇಯವೇ ಇರುವುದಿಲ್ಲ. ಬ್ರಿಟನ್ನಿನಲ್ಲಿ ರಾಣಿ ಕೇವಲ ಅಲಂಕಾರ ಮೂರ್ತಿ; ಆದರೂ ಆಕೆ ರಾಷ್ಟ್ರದ ಅಗ್ರಗಣ್ಯ ಅಧಿಕಾರಿ! ಸುಮಾರು ನಾಲ್ನೂರು ವರ್ಷಗಳಿಂದ ಅಲ್ಲಿ ಸ್ಥಾಪಿತವಾಗಿ ನಡೆದುಬರುತ್ತಿರುವ ಒಂದು ರೀತಿಯ ಪ್ರಜಾಸತ್ತೆಯ ಈ ಉನ್ನತಾಧಿಕಾರ ವಂಶ ಪರಂಪರೆಯಾಗಿ ಲಭಿಸುತ್ತಿದೆ ಎನ್ನುವುದೇ ಸೋಜಿಗ.

ಭಾರತದಲ್ಲಿ ತಮಗೆ ಲಭಿಸಿದ ಆದರದ ಸ್ವಾಗತವನ್ನು ರಾಣಿಯವರ ಮೆಚ್ಚಿಕೊಂಡರು. ಭಾರತದ ಗಣರಾಜ್ಯ ದಿನೋತ್ಸವದಲ್ಲಿ ಭಾಗವಹಿಸಿ ಭಾರತದ ಯಶಸ್ಸನ್ನು ಹಾರೈಸಿದರು. ಕಾಮನ್‌ವೆಲ್ತಿನೊಳಗೆ ಭಾರತ ಮತ್ತು ಬ್ರಿಟನ್ನುಗಳ ಸಂಬಂಧವು ಸುದೃಢವಾಗುತ್ತಿರುವುದನ್ನವರು ಪ್ರಸ್ತಾಪಿಸಿ, ಕಠಿನ ಪರಿಸ್ಥಿತಿಯಿದ್ದರೂ ಮಾನವರು ತಮ್ಮ ಆತ್ಮದೇವತೆಯ ಇಚ್ಛೆಗನುಸಾರವಾಗಿ ವರ್ತಿಸಿದರೆ ಈ ಅನಿಶ್ಚಿತ ಜಗತ್ತಿನಲ್ಲಿ ಅವರ ಸಂಬಂಧ ಉತ್ತಮವಿರುವುದು ಸಾಧ್ಯವೆಂಬುದಕ್ಕೆ ಈ ಎರಡು ದೇಶಗಳೇ ಉದಾಹರಣೆಯೆಂದು ಅವರು ಉದ್ಗರಿಸಿದರು. ಭಾರತ ಮತ್ತು ಬ್ರಿಟನ್ನುಗಳ ನಡುವೆ ಇರುವ ಸಾಮ್ಯವನ್ನವರು ಎತ್ತಿ ಹೇಳುತ್ತ, ಉಭಯ ರಾಷ್ಟ್ರಗಳ ಜೀವನ ಮಾರ್ಗದಲ್ಲಿ ಭಿನ್ನತೆಯಿದ್ದರೂ ಎರಡು ರಾಷ್ಟ್ರಗಳವರಿಗೂ ದೊರೆತಿರುವ ಏಕಪ್ರಕಾರವಾದ ಅನುಭವ ಹಾಗೂ ಇಲ್ಲಿ ಒಂದೇ ಸಮವಾದ ಸಾಮಾಜಿಕ ವ್ಯವಸ್ಥೆಯಿರುವುದರಿಂದ ಸಂಪರ್ಕ ಬೆಳೆಯುವುದು ಸಾಧ್ಯವಾಗಿದೆ; ಈ ಅಂಶಗಳನ್ನು ಕಾಯ್ದುಕೊಂಡು ಮುಂದಕ್ಕೂ ಬೆಳೆಸಿಕೊಂಡು ಬರಬೇಕಾಗಿದೆ ಎಂದು ತಿಳಿಸಿ ಹೇಳಿದರು.

ಭಾರತ ಮತ್ತು ಬ್ರಿಟನ್ನುಗಳ ಇತಿಹಾಸವು ಉಜ್ವಲವಾಗಿದೆ; ಅವಿಚ್ಛಿನ್ನವಾಗಿದೆ. ಈ ಭವ್ಯ ಪರಂಪರೆಯನ್ನು ರಕ್ಷಿಸಿಕೊಂಡಿರುವ ಪ್ರಸ್ತುತ ಜನಾಂಗವು ಭಾವೀ ಜನಾಂಗಕ್ಕಾಗಿ ಹೊಸತನ್ನು ಯೋಜಿಸಿ ನಿರ್ಮಿಸುವ ಕರ್ತವ್ಯವನ್ನು ಪೂರೈಸಿಕೊಳ್ಳುವ ಅವಶ್ಯಕತೆಯನ್ನು ಬ್ರಿಟಿಷ ರಾಣಿಯವರು ಪ್ರತಿಬಿಂಬಿಸಿದರು. ಭಾರತವು ಅನಭಿವೃದ್ಧ ರಾಷ್ಟ್ರವಾಗಿದ್ದು ಅದು ತೀವ್ರವಾಗಿ ಆರ್ಥಿಕ ಸ್ವಾತಂತ್ರ್ಯವನ್ನು ಪಡೆಯುವ ಪ್ರಯತ್ನವನ್ನು ಮಾಡುತ್ತಿದೆ. ಹಳೆಯ ಜಾಡನ್ನು ಬಿಟ್ಟುಕೊಟ್ಟು ನವ ಜಗತ್ತಿನಲ್ಲಿ ಉನ್ನತಮಸ್ತಕವಾಗಿ ಎದ್ದು ನಿಲ್ಲಬೇಕಾಗಿದೆ. ಭಾರತವು ಈ ದಿಸೆಯಲ್ಲಿ ಮಾಡುತ್ತಿರುವ ಪ್ರಯತ್ನದಲ್ಲಿ ಬ್ರಿಟನ್ ಹಾಗೂ ಕಾಮನ್‌ವೆಲ್ತ್ ರಾಷ್ಟ್ರಗಳು ಮಹತ್ವಪೂರ್ಣಕೊಡುಗೆಯನ್ನು ಸಲ್ಲಿಸಿವೆ. ಟ್ರಾಂಬೆಯ ಅಣುಶಕ್ತಿ ಕೇಂದ್ರ ಹಾಗೂ ದುರ್ಗಾಪುರದ ಉಕ್ಕಿನ ಕಾರಖಾನೆಗಳು ಈ ಸಹಾನುಭೂತಿಯ ದ್ಯೋತಕಗಳಾಗಿ ಎದ್ದು ತೋರುತ್ತಿವೆ. ಈಯೆಲ್ಲವನ್ನೂ ಪ್ರಸ್ತಾಪಿಸಿದ ರಾಣಿಯವರು ಭಾರತೀಯರಿಗೆ ತಮ್ಮ ಕರ್ತವ್ಯ ಜ್ಞಾನವನ್ನೂ ಮಾಡಿಕೊಟ್ಟಿರುವರು. ಭಾಗತವನ್ನು ಪ್ರತಿಯೊಬ್ಬನಿಗೂ ತುಂಬು ಜೀವನವನ್ನು ನಡೆಸಲು ಸಾಧ್ಯವಾದ ರಾಷ್ಟ್ರವನ್ನಾಗಿ ಕಟ್ಟುವ ನಿರ್ಧಾರ ಪರಕೀಯರಲ್ಲಿರುವುದಲ್ಲ, ಅಂತಹ ಸುದೃಢ ಸಂಕಲ್ಪವನ್ನು ಭಾರತೀಯರೇ ಮಾಡಿ ಅದನ್ನು ಪೂರ್ತಿಗೊಳಿಸಲು ಬದ್ಧಕಂಕಣರಾಗಬೇಕೆಂಬ ಚಿರಂತನ ಸತ್ಯವನ್ನವರು ಹೊರಗೆಡಹಿದರು.

ಭಾರತಕ್ಕೆ ಮೊತ್ತಮೊದಲನೆಯ ಬಾರಿಗೆ ಸಂದರ್ಶನವೀಯುತ್ತಿರುವ ರಾಣಿ ಎಲಿಜಬೆಥರಲ್ಲಿ ಭಾರತದ, ಭಾರತೀಯ ನಾಯಕರ ಮತ್ತು ಸಮಸ್ತ ಭಾರತೀಯರ ಬಗ್ಗೆ ಗೌರವ ಭಾವನೆಯು ವ್ಯಕ್ತಪಟ್ಟಿದೆ. ಭಾರತವೂ ಮುಂದುವರಿದ ರಾಷ್ಟ್ರಗಳ ಸಾಲಿನಲ್ಲಿ ಸೇರಬೇಕು; ಅದಕ್ಕಾಗಿ ಕೈಗೊಳ್ಳುವ ಪ್ರಯತ್ನಗಳು ಯಶಸ್ವಿಯಾಗಬೇಕು ಎಂಬ ಉದಾರ ಭಾವನೆ ಅವರಲ್ಲಿದೆ. ಭಾರತೀಯರು ಅವರು ಬೆರಳಿಟ್ಟು ತೋರಿಸಿದ ಕರ್ತವ್ಯ ಪರಿಜ್ಞಾನವನ್ನು ದಿನಂಪ್ರತಿ ಸ್ಮರಿಸುತ್ತ ಅದರ ನಿರ್ವಹಣೆಗೆ ಅಹರ್ನಿಶಿ ಹೋರಾಡಬೇಕು. ಬ್ರಿಟಿಷ ರಾಣಿಯವರ ಈ ಭೆಟ್ಟಿಯಿಂದ ಈ ಭಾವನೆ ಇನ್ನೂ ಜಾಗ್ರತವಾಗುವುದೆಂದು ಆಶಿಸಬಹುದು.

ಬಾಲರ ಬಳಗ

ತಪ್ಪುಗಾರ

ರಾಮು ಭೀಮು ಇಬ್ಬರೂ ಹೂದೋಟದಲ್ಲಿ ಕದನವಾಡತೊಡಗಿದ್ದರು! ಕೇವಲ ಒಂದು ರೊಟ್ಟಿಗಾಗಿ! ಅಬ್ಬಾ! ಪರಚುವದು....ಗುದ್ದುವದು! ಏಳುವದು....ಬೀಳುವದು.

ಇಬ್ಬರಲ್ಲೊಬ್ಬರಿಗೆ ಮರಣಾಂತಕ ಪೆಟ್ಟಾಗುವದು ಖಂಡಿತ! ಅಷ್ಟರಲ್ಲಿ ಇಬ್ಬರೂ ಕೈಯಲ್ಲಿ ಕಲ್ಲು ಹಿಡಿದರು.

ಹೂದೋಟದಲ್ಲಿಯ ಹುಳವೊಂದನ್ನು ಕಚ್ಚಿಕೊಂಡು ಹಕ್ಕಿಯೊಂದು ಹಾರುವುದರಲ್ಲಿತ್ತು! ಆದರೆ ಇನ್ನೊಂದು ಹಕ್ಕಿಯು ಆ ಹುಳವನ್ನು ತನ್ನ ಆಹಾರವನ್ನಾಗಿ ಪಡೆಯಬೇಕೆಂದು ಮೊದಲಿನ ಹಕ್ಕಿಯನ್ನು ತನ್ನ ಕೊಕ್ಕಿನಿಂದ ಆಕ್ರಮಿಸಿತು. ಎರಡೂ ಹಕ್ಕಿಗಳೂ ಕಾದಾಡ ತೊಡಗಿದವು... ರಾಮು, ಭೀಮು ಇಬ್ಬರೂ ತಮ್ಮ ಜಗಳ ಮರೆತು ಹಕ್ಕಿಗಳ ಜಗಳ ನೋಡತೊಡಗಿದ್ದರು..... ಎರಡನೇ ಹಕ್ಕಿಯು ಮೊದಲನೆ ಹಕ್ಕಿಯನ್ನು ಘಾಸಿಮಾಡಿ ಇನ್ನೇನು ಹುಳವನ್ನು ಕಚ್ಚಿ ಹಾರುವದಂಲ್ತ್ತು.... ಅಷ್ಟರಲ್ಲಿ...

ಅಣ್ಣ ತಮ್ಮಂದಿರಿಬ್ಬರೂ ಅತ್ತ ನೋಡುತ್ತಾರೆ ಅವರ ಮನೆಯ ಬೆಕ್ಕು.... "ಕಾಳಿ"—ಸರ್ರನೆ ಹಾರಿ ಆ ಹಕ್ಕಿಯನ್ನು ಹುಳುಸಹಿತ ಹಿಡಿದು ಕುತ್ತಿಗೆ ಮುರಿದು ಹಾಕಿತು!....

ಅಯ್ಯೊ ರಾಮು! ಎಂದ ಭೀಮು... "ನಾವೇ ಆ ಹಕ್ಕಿಗಳೆಂದು ತಿಳಿ!—ಒಂದು ಹುಲಿ ಬಂದಿತೆಂದು ತಿಳಿ...ನಮ್ಮಲ್ಲಿ ಯಾರೊಬ್ಬರಾದರೂ ಅದಕ್ಕೆ ಬಲಿಯಾಗಿದ್ದರೆ!—

"ಅಯ್ಯೊ, ಭೀಮು!! ಆ ಹುಲಿ ನಿನ್ನನ್ನು ಹಿಡಿಯುತ್ತಿದ್ದಿಲ್ಲ!! ನನ್ನನ್ನೇ ಹಿಡಿಯುತ್ತಿತ್ತೋ ಏನೋ!! ಯಾಕಂದರೆ ಅಮ್ಮ ನಿನಗೆ ಕೊಟ್ಟ ರೊಟ್ಟಿಯನ್ನು ಪಡೆಯುವ ದುರುದ್ದೇಶದಿಂದ ನಾನು ನಿನ್ನ ಮೇಲೆ ಕೈಮಾಡಿದೆ! ತಪ್ಪುಗಾರ ನಾನು!'—ಎಂದು ಕಣ್ಣೀರಿಟ್ಟ—ಹಾಗೂ ತನ್ನ ಕೈಯಲ್ಲಿದ್ದ ರೊಟ್ಟಿಯನ್ನು ಅವನಿಗೇ ಕೊಟ್ಟ!!

"ಎಲ್ಲಿಯದಪ್ಪಾ, ಅದನ್ನು ಅಮ್ಮ ಕೊಟ್ಟಿರಲಿಲ್ಲ!! ಅಮ್ಮನ ಕಣ್ಣು ತಪ್ಪಿಸಿ ನಾನೇ ತಂದಿದ್ದು!! ನಿನಗಿಂತಲೂ ನಾನೇ ತಪ್ಪುಗಾರ!! ನನಗೆ ಬೇಡಪ್ಪಾ ನೀನೇ ತಗೊ!!"—

ರಾಮೂ, ಭೀಮೂ ನೀವಿಬ್ಬರೂ ಅಣ್ಣ ತಮ್ಮಂದಿರು, ನೀವಿಬ್ಬರೂ ಇನ್ನು ಮುಂದೆ ಇಂಥ ತಪ್ಪು ಮಾಡಬಾರದಪ್ಪಾ ಕಳವು ಹೊಡೆದಾಟ ದ್ವೇಷಾ.ಸೂಯೆಗಳಿಂದ ಮನುಷ್ಯನು ಸಮಾಜದಲ್ಲಿಯೂ ಇಹಪರಗಳಲ್ಲಿಯೂ ಯಾವ ಸ್ಥಾನವನ್ನೂ ಪಡೆಯಲಾರನು!! ರೊಟ್ಟಿಯನ್ನು ಇಬ್ಬರೂ ಅರ್ಧರ್ಧ ಹಂಚಿಕೊಳ್ಳಿರಿ" ಎನ್ನುತ್ತಾ ಇದನ್ನೆಲ್ಲಾ ಹಿತ್ತಲ ಬಾಗಿಲ ಮರೆಯಲ್ಲಿ ನಿಂತು ನೋಡುತ್ತಲಿದ್ದ ಅವರ ತಾಯಿಯೆಂದರು!! ಇಬ್ಬರೂ ತಾಯಿಯನ್ನು ಓಡಿಬಂದುಅವಚಿಕೊಂಡರು!

"ಸಿರಿಪತಿ"

ಉಡುಪಿ ಡಿ ಮುನ್ಸೀಫ್ ಕೋರ್ಟಿನಲ್ಲಿ
R. I. A. 987/60.
(O. S. 70/60.)

N. ಸ್ಥಾನುಮೂರ್ತಿ ರಾವ್— ಅರ್ಜಿದಾರ—ವಾದಿ.

ಮತ್ತು

ಇಗ್ನೇಶಿಯಸ್ ಸಾಲ್ವೋದರ್ ಲುವಿಸ್ ಕೂಡಾ —ಎದ್ರಿರು. (ಪ್ರತಿವಾದಿ.)

ಪ್ರತಿವಾದಿ ಎದ್ರಿರು:—

1. ಇಗ್ನೇಶಿಯಸ್ ಸಾಲ್ವೋದರ್ ಲುವೀಸ್, ಫಲಿಫ್ರಾಲೋರೆಸ್ ಲುವಿಸರ ಮಗ.

2 ಅನೆಸ್ಕಲ್ಲಾ ಸಿಸಿಲಿಯಾಲುವಿಸ್ ಬ್ಯಾ—1ನೇ ಯವನ ಹೆಂಡತಿ. ಉಡ್ಪಿ ತಾಲ್ಲೂಕು ಮೂಡುತೋನ್ಸೆ ಗ್ರಾಮದ ಕಲ್ಯಾಣಪುರದಲ್ಲಿರುವವರು—ಇವರಿಗೆ—

ಮೇಲ್ಕಂಡ ದಾವೆಯಲ್ಲಿ ಕೊಡೋಣಾದ 30—8—60 ನೇ ಪ್ರಿಲಿಮಿನರಿ ಡಿಕ್ರಿಯನ್ನು ಫೈನಲೈಸ್ ಮಾಡುವಾಗ್ಗೆ ಅರ್ಜಿದಾರರು ದಾಖಲು ಮಾಡಿದ ಅರ್ಜಿಯು ತಾ.11—2—61 ಕ್ಕೆ ಯಿಟ್ಟಿದೆ. ಆ ದಿನ್ಸ ಬೆಳಗ್ಗೆ 11ಗಂಟೆಗೆ ಕೋರ್ಟಿನ ಮುಂದೆ ಹಾಜ್ರಾಗಿ ನಿಮ್ಮ ಉದಾಹರಣೆ ದಾಖಲ್ಲು ಮಾಡುವರೆ ತಪ್ಪಿದರೆ ಸದ್ರಿ ಅರ್ಜಿಯನ್ನು ನಿಮ್ಮ ಗೈರ್‌ಹಾಜರಿಯಲ್ಲಿ ತೀರ್ಮಾನಿಸಲಾಗುವುದು.

Sd. V. G. KEDLAYA
Advocate for Petitioner (Plff.)
ಉಡ್ಪಿ. ತಾ. 29—1—61.

ನಿಮ್ಮ ಆಯ್ಕೆ
ಯಾವುದು? ? ಯಾವುದು?
ಸಿಂಡಿಕೇಟ್ ಬೇಂಕ್
ಯಾಕೆ? ? ಯಾಕೆ?
ಉತ್ತಮ ಬೇಂಕಿಂಗ್ ಸೌಲಭ್ಯಗಳಿಗೆ
ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್, ಲಿ.
ಪ್ರಧಾನ ಕಾರ್ಯಾಲಯ: ಉಡುಪಿ, ಮೈಸೂರು ರಾಜ್ಯ.
ದಕ್ಷಿಣ ಭಾರತದಾದ್ಯಂತ ಒಟ್ಟು ಶಾಖೆಗಳು: 139.

ಮಕ್ಕಳ ಮಮತೆಯ
'ಬಿಕ್ಕೊ'ರವರ
ಗ್ಲೊಕೋಸ್ ಕೂಡಿದ ಪೆಪ್ಪರ್ ಮಿಠಾಯಿಗಳು ರುಚಿಕರ, ಸೇವನೆಗೆ ಪ್ರಸಿದ್ಧಿಪಟ್ಟಿವೆ.
'ಬಿಕ್ಕೊ'ರವರ
ಹಣ್ಣಿನ ಶರಬತ್ತುಗಳು
ಅತಿಥಿಗಳ ಆದರದ ಸತ್ಕಾರಕ್ಕೆ
ಅತ್ಯನು ಕೂಲ.
ತಯಾರಕರು:
ಭಾರತ್ ಇಂಡಸ್ಟ್ರಿಯಲ್ ಎಂಡ್ ಕ್ಯಾನಿಂಗ್ ಕಂಪೆನಿ ಲಿಮಿಟೆಡ್
ಕಾಪು, ದ. ಕ.

Edited, Printed & Published by K. H. Shetty, at the Navayuga Press, Udipi, S. India.

40th year of publication. 9-2-1961 ೪೦ನೇ ವರ್ಷ

ಸಂಪುಟ ೪೦ Vol. 40

ನವಯುಗ

ಸಂಚಿಕೆ ೨೨ No. 22

ಜಲಿ ೩-13

NAVAYUGA KANNADA WEEKLY UDIPI

ಪ್ರಚಲಿತ ಪ್ರಸಂಗ

ಮಕಳು ಚದುರಂಗದ ಡಾಳಗಳಲ

ರ ೧

ಭಾವಿ ಜನಾಂಗ ಸ್ವರೂಪವಾದ ಮಕ್ಕಳನ್ನು ಸುಯೋಗ್ಯ ದೃಷ್ಟಿಯಿಂದ ಕಾಣಬೇಕು; ಅವರ ಉನ್ನತಿಯನ್ನು ಹಾರಯ್ಸಬೇಕು. ಅದು ತೊರೆದು, ಅವರನ್ನು ಚದುರಂಗದ ಡಾಳಗಳಂತೆ ಉಪಯೋಗಿಸುವ ಪ್ರವೃತ್ತಿ ರಾಷ್ಟ್ರ ವಿಘಾತುಕವಾಗಿದೆ.

ಆಂಧ್ರ ಪ್ರದೇಶದ ರಾಜಧಾನಿ ಹೈದರಬಾದಿನಲ್ಲಿ ಪ್ರಧಾನಿ ನೆಹರು ಮಾಡಿದ ಭಾಷಣ ಮತ್ತು ನೀಡಿದ ಸಲಹೆಗಳು ಅವರ ದೊಡ್ಡಸ್ತಿಕೆಗೆ ತಕ್ಕುದಾಗಿವೆ. ಕಾಂಗ್ರೆಸ್ ಪಕ್ಷ, ಸಮಾಜ, ಸಮಾಜದ ಪುನಾರಚನೆ, ಕುಟುಂಬನಿಯಂತ್ರಣ ಹಾಗೂ ಬಾಲಕಲ್ಯಾಣಗಳ ಬಗ್ಗೆ ಅವರು ಬೀರಿದ ಕ್ಷ—ಕಿರಣಗಳು ಭಾರತೀಯರಿಗೆಲ್ಲ ಮಾರ್ಗದರ್ಶಕವಾಗಿವೆ. ಈ ಕಿರಣಗಳನ್ನು ಶ್ರೀ ನೆಹರು ಈ ಮೊದಲೂ ಹೊರಗೆಡಹದಿಲ್ಲವಾದರೂ ಇವು ಹೊರಚೆಲ್ಲದಷ್ಟು ರಾಷ್ಟ್ರಕ್ಕೆ ರಾಷ್ಟ್ರೀಯರಿಗೆ ಹಿತಕಾರಿಯೆಂಬುದು ನಿರ್ವಿವಾದ. ಎಂತಲೇ ಸಮಸ್ತ ಭಾರತೀಯರೂ ಇವನ್ನು ಅವಶ್ಯ ಗಮನಿಸಬೇಕಾಗಿದೆ.

ದೇಶದ ವಿವಿಧೆಡೆಗಳಲ್ಲಿನ ಕಾಂಗ್ರೆಸ್ ಪಕ್ಷದೊಳಗೆ ಮುಖ್ಯವಾಗಿ ಅಧಿಕಾರಕ್ಕಾಗಿ ತಲೆದೋರಿದ, ತೋರುತ್ತಿರುವ ಒಡಕನ್ನು ಯಾವ ನಿಷ್ಠಾವಂತ ಕಾಂಗ್ರೆಸಿಗನೂ ಮೆಚ್ಚುವಂತಿಲ್ಲ. ಎಲ್ಲರೂ ಅಧಿಕಾರವನ್ನೇ ಬಯಸುತ್ತ ಅದನ್ನು ಕರಗತವಾಡಿಕೊಳ್ಳುವ ಪ್ರಯತ್ನದಲ್ಲಿಯೇ ತೊಡಗಿ ಸ್ವಕರ್ತವ್ಯವನ್ನು ಮರೆತಿರುವುದು ಕಾಂಗ್ರೆಸ್ ದೇಶದಲ್ಲಿ ಶಿಥಿಲವಾಗುವುದಕ್ಕೆ ಮೂಲ ಕಾರಣವಾಗಿದೆ. ಆಂಧ್ರ ಪ್ರದೇಶದಲ್ಲೂ ವಿಧಾನ ಸಭೆ ಮತ್ತು ಕಾಂಗ್ರೆಸ್ ಪಕ್ಷಗಳ ನಡುವೆ ವಿರಸಬೆಳೆದು ಅದು ವಿಕೋಪಕ್ಕೇನೇ ಹೋಗುವಂತಿತ್ತು. ಇದು ಒಳಗಿಂದೊಳಗೇನೇ ಹೊಗೆಯಾಡುತ್ತಿದೆ. ಅದು ಯಾವಾಗ ಭುಗಿಲೆನ್ನುವುದೆನ್ನುವಂತಿಲ್ಲ. ಇವರನ್ನು ಸಂಬೋಧಿಸುತ್ತ ಪ್ರಧಾನಿಯವರು,"ಕಾಂಗ್ರೆಸ್ಸಿನಲ್ಲಿ ಐಕ್ಯವಿಲ್ಲವಾದರೆ, ಭಾರತೀಯ ಸಮಾಜವು ಕ್ಷತವಾಗುವುದು. ಪ್ರತ್ಯೇಕ ಕಾಂಗ್ರೆಸಿಗನೂ ಕಳೆದ ೭೫ ವರ್ಷಗಳಿಂದ ಕಾಪಾಡಿಕೊಂಡು ಬಂದಿರುವ ಐಕ್ಯವನ್ನು ತನ್ನ ಅಥವಾ ತನ್ನ ಗುಂಪಿನ ವ್ಯಾಜದಿಂದ ನಷ್ಟವಾಗದಂತೆ, ಅದು ನಿರ್ಬಲವಾಗದಂತೆ ನೋಡಿಕೊಳ್ಳಬೇಕಾಗಿದೆ. ಕಾಂಗ್ರೆಸಿಗರೇ ಬಿರುಕು ಹುಟ್ಟಿಸಲು ತೊಡಗಿದರೆ, ಸಮಾಜದಲ್ಲಿ ಐಕ್ಯ ಸ್ಥಾಪನೆ ಮಾಡಬೇಕೆನ್ನುವ ಪಕ್ಷದ ಉದ್ದೇಶವು ಯಶಸ್ವಿಯಾಗುವುದಾದರೂ ಹೇಗೆ?" ಎಂದು ಸಮಸ್ಯೆಯನ್ನು ಮುಂದಿಟ್ಟರು. ರಾಷ್ಟ್ರದ ಹಿರಿಯ ಬಹುಸದಸ್ಯ ಸರಕಾರಿ ಪಕ್ಷ ಕಾಂಗ್ರೆಸ್ಸು ತನ್ನ ಐಕ್ಯವನ್ನು ಉಳಿಸಿಕೊಳ್ಳಲು ಪ್ರಾಣಪ್ರಣ ತೊಟ್ಟು ಪ್ರಯತ್ನ ನಡೆಸಬೇಕಾಗಿದೆ.

ಸಮಾಜದಲ್ಲಿ ಶಿಸ್ತು ಹಾಗೂ ಸಂಘಟನೆಗಳ ಮಹತ್ವವನ್ನು ಶ್ರೀ ನೆಹರು ಪುನರುಚ್ಚರಿಸಿದರು. ನಾವು ಅನುಶಾಸನ ಶೀಲತೆಯ ಭಾವನೆಯನ್ನು ಮರಳಿ ಜಾಗ್ರತಗೊಳಿಸಬೇಕಾದ ಕಾಲವೀಗ ಸನ್ನಿಹಿತವಾಗಿದೆ. ಶಿಸ್ತು ಮತ್ತು ರಾಷ್ಟ್ರೀಯ ಭಾವನೆಗಳ ಅಭಾವ ಹಾಗೂ ವಿಘಟನಾತ್ಮಕ ಪ್ರವೃತ್ತಿಗಳಿಂದಾಗಿಯೇ ಭಾರತವು ಈ ಮೊದಲು ಹಾಸಿಗೊಳಗಾದುದನ್ನು ಅವರು ಪ್ರಸ್ತಾಪಿಸಿದರು. "ನಾವು ಚಿಕ್ಕ ಪುಟ್ಟ ಮಾತುಗಳ ಬಗ್ಗೆಯೂ ಹೋರಾಡತೊಡಗಿದ್ದೇವೆ. ವಾದವಿವಾದ ಮತ್ತು ಚರ್ಚೆಗಳ ನಂತರ ಯಾವುದೇ ಒಂದು ನಿರ್ಣಯವನ್ನು ಕೈಗೊಳ್ಳುವ ಶಕ್ತಿ ನಮ್ಮಲ್ಲಿಲ್ಲವಾಗಿದೆ. ಗುಡುಗು ಮಿಂಚುಗಳನ್ನು ಮಾತ್ರ ಹೊರಡಿಸುವ ಮೋಡಗಳಂತೆ ನಮ್ಮ ಮಾತುಗಳಾಗಿವೆ. ಭಾರತದಲ್ಲಿ ಜನರು ಸಮುದಾಯ, ಪ್ರಾಂತ, ಧರ್ಮ ಮತ್ತು ಸಮಾಜಗಳ ಹೆಸರಿನಲ್ಲಿ ಪರಸ್ಪರ ಜಗಳಾಡುತ್ತೇವೆ ಧರ್ಮ ಮತ್ತು ಭಾವಗಳ ಕುರಿತಾಗಿ ಹೋರಾಡಬೇಕಾದ ಆವಶ್ಯಕತೆಯಿರುವುದಿಲ್ಲ. ನಮ್ಮಲ್ಲಿ ಸಾಂಪ್ರದಾಯಿಕ ಉದ್ದೇಶಗಳಿಗಾಗಿ, ಅವನ್ನು ಪೂರ್ತಿಗೊಳಿಸುವುದಕ್ಕಾಗಿ ಧರ್ಮವನ್ನು ದುರುಪಯೋಗಪಡಿಸುವ ಹವ್ಯಾಸವಿದೆ. ಇದರಿಂದ ಭಾರತದ ಹಿತವೆಂದಿಗೂ ಸಾಧಿಸಲ್ಪಡಲಾರದು" ಎಂದು ಅವರು ನಮ್ಮ ಆಚರಣೆಗಳಲ್ಲಿ ಸಂಕುಚಿತ ಪ್ರವೃತ್ತಿಯು ಸೋಂಕದಂತೆ ಎಚ್ಚರಿಕೆ ವಹಿಸಬೇಕೆಂಬ ಕರೆಯಿತ್ತರು.

೪೦ ಕೋಟಿ ಭಾರತೀಯರ ಜೀವನ ಮಟ್ಟವು ಉನ್ನತವಾಗುವಂತೆ ಪಂಚವಾರ್ಷಿಕ ಯೋಜನೆಗಳನ್ನೇನೋ ಕೈಗೊಳ್ಳಲಾಗುತ್ತಿದೆ. ಈ ಯೋಜನೆಗಳೆಂದರೆ, ಅಲ್ಪಾವುದ್ದೇನನ ದೀಪಗಳ ಜ್ಞ.ಆದುದರಿಂದಲೇ ನಮ್ಮ ಪ್ರಗತಿ, ಉನ್ನತಿ ಕಠಿನ ಸಾಧ್ಯವಾಗಿದೆ. ಜನರೆಲ್ಲರೂ ಕಷ್ಟಕಾರ್ಪಣ್ಯಗಳನ್ನು ಸಹಿಸಲು ಮುಂದುವರಿದು ಬಂದರೆ ಮಾತ್ರ ಈ ಕನಸು ನನವಾಗಿ ಪರಿಣಮಿಸಬಹುದೆಂದವರು ಅಭಿಪ್ರಾಯಿಸಿದರು. ಪ್ರತಿಯೊಂದಕ್ಕೂ ಸರಕಾರದ ಮುಖ ನೋಡುತ್ತ ಕೂರುವುದು ನಮ್ಮ ಅಭ್ಯಾಸವಾಗಿ ಪರಿಣಮಿಸಿದೆ; ಇದು ಸರಿಯಲ್ಲ

(೧ನೇ ಪುಟ ನೋಡಿರಿ)



ಉತ್ತರ ಧ್ರುವದಿಂದ ೮೦೦ ಮೈಲು ದೂರದಲ್ಲಿರುವ ಕೇಂಪ್ ಸೆಂಚುರಿಯೆಂಬಲ್ಲಿ ಅಮೆರಿಕೆ—ಹೊಲ್ಲೆಂಡ್‌ಗಳು ಸಂಯುಕ್ತವಾಗಿ ಕಟ್ಟಿಸಿದ ಅಣುಶಕ್ತಿ ಕೇಂದ್ರದ ಚಿತ್ರ.

ಮಂಗಳೂರಲ್ಲಿ ಈಗಾಗಲೇ ತೆರೆಯಲ್ಪಟ್ಟು ಪ್ರಗತಿಯಿಂದ ಮುಂದೆ ಸಾಗುತ್ತಿರುವ ಇನ್ನೊಂದು ಪ್ರಸಿದ್ಧ ಜವುಳಿ ಮಳಿಗೆ—

ಸಾರೀ ಎಂಪೋರಿಯಮ್

ಕೆಥೊಲಿಕ್ ಕ್ಲಬ್ಬಿನ ಎದುರು, ಹಂಪನಕಟ್ಟಾ, ಮಂಗಳೂರು-1

ನಿಮ್ಮ ಉತ್ತಮ ಆಯ್ಕೆಗೆ ಯೋಗ್ಯವೆಂದೆನಿಸಿದ ರೇಶ್ಮೆ ಸೀರೆಗಳೂ, ಹತ್ತಿ ನೂಲಿನ ಸೀರೆಗಳೂ ಸರ್ವೋತ್ಕೃಷ್ಟವಾಗಿವೆ, ಯಾವತ್ತೂ ತರದ ಶರ್ಟಿಂಗ್, ಕೋಟಿಂಗ್, ಚಿಂಟ್ಸ್, ಸಿಲ್ಕ್, ಸೈಲಾನ್ ಇತ್ಯಾದಿ ಬಟ್ಟೆಬರೆಗಳಿಗೂ ಸಂದರ್ಶಿಸಿರಿ —

SAREE EMPORIUM

Opposit Catholic Club,

HAMPANKATTA, MANGALORE—1.

ESTD. 1921

NAVAYUGA
KANNADA WEEKLY,
UDIPI.

Founder:
Late Sri A. B. Shetty,
Former Minister for Public Health, Govt. of Madras & Govt. of Mysore.

ನವಯುಗ

ಪ್ರತಿ ಗುರುವಾರ
ಉಡುಪಿಯಿಂದ ಹೊರಡುವ
ರಾಷ್ಟ್ರೀಯ ವಾರಪತ್ರಿಕೆ

ಸ್ಥಾಪನೆ: ೧೯೩೧.

ಗೌರವ ಸಂಪಾದಕರು:
ಎಸ್. ಗೋಪೀಚಂದ ರಾವ್,
ವಿದ್ವಾನ್.
ಬಿ. ಶಾಮರಾಯ ಶೆಟ್ಟಿ,
ಬಿ. ಎ., ಎಲ್. ಟಿ.

ಸಂಚಾಲಕ ಸಂಪಾದಕರು:
ಕೆ. ಹೊನ್ನಯ್ಯ ಶೆಟ್ಟಿ.

ಚಾಹೀರಾತು ದರಗಳು:
ನಿಯಮಿತ (ಕಂಟ್ರಾಕ್ಟ್)
ಕಲಂ ಇಂಚಿಗೆ ರೂ. 2-50
ಅನಿಯಮಿತ (ಕೆಜುವಲ್)
ಕಲಂ ಇಂಚಿಗೆ ರೂ. 3-50

ಹೆಚ್ಚಿನ ವಿವರಗಳಿಗೆ ವ್ಯವಹರಿಸಿರಿ.

ಚಂದಾ:
ವಾರ್ಷಿಕ ಚಂದಾ (ಅಂಚೆವೆಚ್ಚ ಸೇರಿ) ರೂ. 6-75
ಬಿಡಿಪ್ರತಿ ರೂ. 0-13

ಚಂದಾಹಣವನ್ನಾಗಲೀ ಜಾಹೀರಾತಿನ ಹೊಬಲಂಗನ್ನಾಗಲೀ ಸಿಂಡಿಕೇಟ್ ಬೇಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ'ದ ಖಾತೆಗೆ ಜಮೆ ಮಾಡುವಸೌಕರ್ಯವಿರುವುದು.

ಕಥಾವಿಹಾರ

ಶೃಂಗಾರರಸ ಲಹರಿ

ಶಕುಂತಲೆಯಲ್ಲಿ ಅನುರಕ್ತನಾದ ದುಷ್ಯಂತನು ಆಕೆಯನ್ನು ಲತಾಮಂಟಪದಲ್ಲಿ ಕಂಡು ಮೆಲ್ಲನೆ ಒಳಹೊಕ್ಕು ಅಲ್ಲಿನ ಮಾಧುರ್ಯತೆಗಳಲ್ಲಿ ಭಾಗವಹಿಸಿದ. ಅಲ್ಲಿ ಆ ಮೇಲೆ ಶೃಂಗಾರ ರಸ ಲಹರಿಯೇಳುವುದಕ್ಕೆ ಆರಂಭವಾಯಿತು.

ಶ್ರೀ ಕೆ. ಎನ್. ಭಟ್, ಶಿರಾಡಿಪಾಲ್, 'ವಿದ್ವಾನ್', 'ವಿಶಾರದ'.

ಪ್ರಿಯಂಕರನ ಪ್ರಥಮ ದರ್ಶನದಿಂದ ಪುಲಕಿತೆಯಾದ ಶಕುಂತಲೆ, ಕಾಮಶರ ಹತಿಯಿಂದ ಬಳಲುತ್ತಿದ್ದಾಳೆ! ಸಖಿಯರು ಬಗೆ ಬಗೆಯಿಂದ ಆಕೆಯನ್ನು ಉಪಚರಿಸುತ್ತಿರುವರು! ಪ್ರಿಯನಿಗೆ ಕಳುಹಿಸುವುದಕ್ಕಾಗಿ ಪ್ರೇಮಗೀತ, ರಚಿತವಾಗಿದೆ. ಅಷ್ಟರಲ್ಲಿ ಶಕುಂತಲೆಯ ಮತ್ತು ಸಖಿಯರ ಸಂಭಾಷಣೆಯನ್ನು ವೃಕ್ಷದ ಮರೆಯಿಂದ ಆಲಿಸುತ್ತ ನೋಡುತ್ತಿದ್ದ ದುಷ್ಯಂತನು ತನ್ನ ಪ್ರವೇಶಕ್ಕೆ ಇದೇ ತಕ್ಕ ಸಮಯವೆಂದರಿತು — ಎದುರು ಬಂದು ಕಾಣಿಸಿಕೊಳ್ಳುತ್ತಾನೆ! ರಾಜನನ್ನು ನೋಡಿದ ಸಖಿಯರು ಹರ್ಷದೊಡನೆ ಸ್ವಾಗತಿಸುತ್ತಾರೆ—ಮತ್ತು ಶಿಲಾಸನದ ಮೇಲೆ ಶಕುಂತಲೆಯ ಪಕ್ಕದಲ್ಲೇ ಕುಳಿತುಕೊಳ್ಳುವಂತೆ ಸೂಚಿಸುತ್ತಾರೆ, ರಾಜನ ಸಾಮೀಪ್ಯದಿಂದ ಶಕುಂತಲೆ, ಲಜ್ಜೆಯಿಂದ ಮುದುಡಿಕೊಳ್ಳುತ್ತಾಳೆ.

ರಾಜ—ಈಗ ನಿಮ್ಮ ಸಖಿಗೆ ಶರೀರದ ತಾಪ ಮೊದಲಿನ ಹಾಗೆ ಕಷ್ಟ ಕೊಡುತ್ತಿಲ್ಲವಲ್ಲ?

ಪ್ರಿಯಂವದೆ—ಈಗ ತಕ್ಕ ಔಷಧ ಸಿಕ್ಕಿದುದರಿಂದ ಶಾಂತವಾಯಿತು!

ಶಕುಂತಲೆ—(ನಾಚಿಕೊಳ್ಳುವಳು.)

ಪ್ರಿಯಂವದೆ — ಮಹಾಶಯರೇ, ನಿಮ್ಮೀರ್ವರ ಪ್ರೇಮಾನುರಾಗವು ಪ್ರತ್ಯಕ್ಷವಾಗಿರುವುದಾದರೂ, ಸಖಿಯ ಸ್ನೇಹವು ಅದನ್ನು ಸುನರುಚ್ಚರಿಸುವಂತೆ, ನನ್ನನ್ನು ಒತ್ತಾಯಿಸುತ್ತಲಿದೆ.

ರಾಜ—ನೀವು ಏನು ಹೇಳಬೇಕೆಂದಿರುವಿರೋ ಹೇಳಿರಿ, ಹೇಳಬಪೇಕ್ಷಿಸಿದುದನ್ನು ಪೂರ್ಣ ಹೇಳದಿದ್ದರೆ, ಕೇಳುವವರ ಮನಸ್ಸಿಗೆ, ಸಂತಾಪವಾಗುವುದು.

ಪ್ರಿಯಂವದೆ—ಮಾನ್ಯರೇ, ಹಾಗಾದರೆ ಕೇಳಿ—ಆಶ್ರಮ ವಾಸಿಗಳ ಕಷ್ಟಗಳನ್ನು ನಿವಾರಿಸುವುದು, ರಾಜನ ಧರ್ಮವಾಗಿರುವುದು.

ರಾಜ—ನೆನಗೆ ಯೋಗ್ಯವಾದ, ನನ್ನಿಂದ ಯಾವ ಸೇವೆ ಆಗಬೇಕು?

ಪ್ರಿಯಂವದೆ—ನಮ್ಮ ಈ ಸಖಿ, ತಮ್ಮ ಉದ್ದೇಶದಿಂದ, ಮನ್ಮಥನ ಮೂಲಕ ಈ ಅವಸ್ಥೆಗೆ ಈಡಾಗಿದ್ದಾಳೆ! ಆದುದರಿಂದ ತಾವು, ಕೃಪೆಮಾಡಿ ಸಖಿ, ಶಕುಂತಲೆಯ ಜೀವನವನ್ನು ರಕ್ಷಿಸಬೇಕು.

ರಾಜ—ಭದ್ರೆ! ಈ ಪ್ರಣಯ ಪ್ರಾರ್ಥನೆಯು, ಎರಡೂ ಕಡೆಗಳಿಂದ ಸರಿಸಮಾನವಾಗಿ ಇದೆ!

ಶಕುಂತಲೆ— ಅಂತಃಪುರದ ಪ್ರಿಯಜನರ ವಿಯೋಗದಿಂದ ಉತ್ಕಂಠಿತಾದ ರಾಜರ್ಷಿಗಳಿಗೆ ಹೀಗೆ ತೊಂದರೆ ಕೊಡುವುದು ಸರಿಯಲ್ಲ.

ರಾಜ – ಹೇ ಹೃದಯೇಶ್ವರಿ! ನನ್ನ ಮನಸ್ಸು ನಿನ್ನಲ್ಲೇ ಲೀನಗೊಂಡಿರುವಾಗ ನೀನೀಗ ಬೇರೆ ರೂಪದಿಂದ ಮಾತನಾಡಿದರೆ, ಹೇ! ಖಂಜನಯನೇ, ಮೊದಲೇ ಕಾಮನಿಂದ ಹೊಡೆಯಲ್ಪಟ್ಟ ನಾನು, ಪೂರ್ಣವಾಗಿ ಅತನ ಪೆಟ್ಟುಗಳಿಗೆ ಬಲಿಯಾಗಬಹುದು.

ಅನಸೂಯಾ— ರಾಜರಿಗೆ ಅನೇಕಮಂದಿ ಪ್ರಿಯೆಯರು ಇರುತ್ತಾರೆಂದು ಕೇಳುತ್ತೇನೆ. ಆದುದರಿಂದ ನನ್ನ ಸಖಿಯು ಆ ಬಂಧು ಜನರ ದುಃಖಕ್ಕೆ ಕಾರಣಳಾಗದಂತೆ ಏನಾದರೊಂದು ಉಪಾಯ ಮಾಡಿರಿ.

ರಾಜ—ಹೆಚ್ಚೇನು ಹೇಳಲಿ? ಹೆಚ್ಚು ಮಂದಿ ಸ್ತ್ರೀಯರಿದ್ದರೂ, ನನ್ನ ವಂಶಕ್ಕೆ ಗೌರವವಾಗಿರುವ ಎರಡೇ ಸ್ಥಳಗಳಲ್ಲಿ ಮಾತ್ರ ನನಗೆ ಗೌರವವಿದೆ. ರತ್ನಾಕರನಿಂದ ಸತ್ತುವರಿದ ಪೃಥ್ವಿ. ಮತ್ತು ಈ ನಿಮ್ಮ ಪ್ರಿಯ ಸಖಿ ಎಂದರೆ, ನಾನಾಳುವ ರಾಜ್ಯವನ್ನು ನಾನು ಎಷ್ಟು ಗೌರವಿಸುವೆನೋ, ನಿಮ್ಮ ಪ್ರಿಯ ಸಖಿಯನ್ನು ಅದಕ್ಕಿಂತಲೂ ಹೆಚ್ಚಾಗಿ ಗೌರವಿಸುತ್ತೇನೆ.

ಪ್ರಿಯಂವದೆ – ಅನಸೂಯಾ! ನೋಡು, ಬೇಸಿಗೆಯ ದಿನಗಳಲ್ಲಿ ಹವಾಮಾನ ಬದಲಾವಾಗ ಶಾಂತ ವಾತಾವರಣದಿಂದ, ಪ್ರಫುಲ್ಲ ವದನೆಯಾಗುವ ಹರಿಣಿಯಂತೆ, ನಮ್ಮ ಸಖೀ ಶಕುಂತಲೆಯ ಜೀವನವು ಈಗ ಕ್ಷಣಕ್ಷಣಕ್ಕೂ ಬದಲಾವಣೆ ಹೊಂದುತ್ತಿದೆಯೆಂದು ಆಕೆಯ ಸಂತೋಷ ಸೂಸುವ ಮುಖದಿಂದಲೇ ತಿಳಿದು ಬರುತ್ತಿದೆ!

ಶಕುಂತಲೆ— ನಾವುಗಳು ಇಚ್ಛಾನುಸಾರವಾಗಿ ಮಾತನಾಡಿ, ಶಿಷ್ಟಾಚಾರವನ್ನು ಉಲ್ಲಂಘಿಸಿ ಮಾಡಿರುವುದರಿಂದ, ಸಖಿಯರೇ, ನೀವಿಬ್ಬರೂ ರಾಜರ್ಷಿಗಳೊಡನೆ ಕ್ಷಮೆ ಕೇಳಿರಿ.

ಸಖಿಯರು—(ನಸುನಗುತ್ತ) ಯಾರು ಶಿಷ್ಟಾಚಾರ ಉಲ್ಲಂಘಿಸಿ ಮಾಡಿರುವರೋ ಅವರೇ ಕ್ಷಮೆ ಕೇಳಲಿ! ಬೇರೆಯವರು ಕ್ಷಮೆ ಕೇಳಬೇಕಾದ ಅಗತ್ಯವಾದರೂ ಏನು?

ಶಕುಂತಲೆ— (ರಾಜನನ್ನು ಕುರಿತು) ಹಿಂದಿನಿಂದ ಯಾರೂ ಏನು ಬೇಕಾದರೂ ಹೇಳಿಕೊಳ್ಳಲಿ! ಆದರೆ ತಾವು ಅದನ್ನು ಗಮನಿಸದೆ, ನಮ್ಮ ಈ ಅಪರಾಧವನ್ನು ಕ್ಷಮಿಸಬೇಕು.

ರಾಜ—(ನಗುತ್ತ) ಹೇ! ರಂಭೋರು ನಿನ್ನ ಪವಿತ್ರವಾದ ಅಂಗ ಸ್ಪರ್ಶದಿಂದ ಕಾಮ ಸಂತಪ್ತ ಹೃದಯವನ್ನು ತಣಿಬಲ್ಲ ನಿನ್ನ ಈ ಮೃದು ಶಯ್ಯೆಯಲ್ಲಿ ನನ್ನನ್ನು ನಿನ್ನವನೆಂದೇ ತಿಳಿದು, ನನಗೆ ಸ್ವಲ್ಪ ಸ್ಥಳ ಕೊಡುವಿಯಾದರೆ, ಆಗ ಮಾತ್ರ ನಾನು ನಿನ್ನ ಅಪರಾಧವನ್ನು ಕ್ಷಮಿಸತ್ತೇನೆ,

ಪ್ರಿಯಂವದೆ— ಹಾಗಾದರೆ ತಾವು ಎಷ್ಟರಿಂದಲೇ ಸಂತುಷ್ಟರಾಗುತ್ತೀರಾ?

ಶಕುಂತಲೆ— (ರೋಷದಿಂದ) ದುರ್ವಿನೀತೆ! ಮುಚ್ಚು ಬಾಯಿ ನನ್ನ ಅವಸ್ಥೆ ಹೀಗಾಗಿದೆ! ಇಚ್ಛಾವಾದ ಮೆಲೂ, ಕುಚಾಲುಮಾಡುತ್ತಾಳೆ!

ಅನಸೂಯಾ—(ಹೊರಗೆನೋಡಿ) ಅದೋ ಇಲ್ಲಿ ಜಿಂಕೆಯವರಿ ತನ್ನ ತಾಯಿಯನ್ನು ಹುಡುಕುತ್ತಿದೆ! ಹೋಗಿ ಅದನ್ನು ಅದರ ತಾಯಿಯಬಳಿ ಬಿಡುತ್ತೇನೆ.

ಪ್ರಿಯಂವದೆ—ಸಖಿ! ಅದು ಬಹಳ ತುಂಟಮರಿ! ನೀನೊಬ್ಬಳೇ ಅದನ್ನು ತಾಯಿಯಬಳಿ, ಬಿಡಲಾರೆ! ಆದುದರಿಂದ ನಾನೂ ಬರುತ್ತೇನೆ. (ಇಬ್ಬರೂ ಹೋಗುವರು ಪ್ರೇಮಿಗಳನ್ನು ಒಟ್ಟುಗೂಡಿಸಲು ಸಖಿಯರದು ಈ ಉಪಾಯ!)

ಶಕುಂತಲೆ—ಪ್ರಿಯ ಸಖಿಯರೇ, ನಿಮಗೆ ಹೋಗಲು ನಾನು ಅನುಮತಿಕೊಡುವುದಿಲ್ಲ. ಏಕೆಂದರೆ, ನಾನಿಲ್ಲಿ ಒಬ್ಬಳೆ ಅಸಹಾಯಕಳಾಗಿ ಇದ್ದೇನೆ.

ಸಖಿಯರು—(ನಗುತ್ತ) ನಿನ್ನ ಬಳಿ ಈ ಪೃಥ್ವಿಯ ಒಡೆಯರೇ ಸ್ವತಃ ಇರುವಾಗ, ನೀನು ಒಬ್ಬಳೇ ಆಗಿರುವುದು ಹೇಗೆ

ಶಕು—ಓಹ್! ಕೊನೆಗೂ, ನನ್ನ ಸಖಿಯರು ಹೊರಟೇ ಹೋದರೇ?

ರಾಜ—ಸುಂದರೀ, ಗಾಬರಿಪಡಬೇಡ ಸಖಿಯರ ಸ್ಥಾನದಲ್ಲಿ ನಿನ್ನ ಸೇವೆಮಾಡಲು, ಈ ಸೇವಕನು ಸಿದ್ಧನಿದ್ದಾನೆ! ಹೇ ಮಿಸುವವಳೇ ಹೇಳು! ಜಲಬಿಂದುಗಳಿದ ಶೀತಲವಾಗಿರುವ ಸಂತಾಪವನ್ನು ನಿಗಬಲ್ಲ ಕಮಲ ಪತ್ರದ ಚಾಮರದಿಂದ ನಿನಗೆ ಗಾಳಿ ಹಾಕಲೇ? ಅಥವಾ, ಕಮಲದಂತಹ ನಿನ್ನ ಕೋಮಲವಾದ ಕೆಂಪು ಕೆಂಪಾದ ಪಾದಗಳನ್ನು ನನ್ನ ತೊಡೆಯ ಮೇಲಿಟ್ಟುಕೊಂಡು, ಒತ್ತುತ್ತ ನಿನ್ನನ್ನು ಸುಖಿಸಲೇ? ಹೇಳು!

(೧೧ನೇ ಪುಟ ನೋಡಿರಿ)

40 ವರ್ಷಗಳ ಭದ್ರ ಹಾಗೂ ಸಮರ್ಥ ಬೇಂಕಿಂಗ್ ಸೇವೆ

ದಿ. ಪಾಂಗಾಳ ನಾಯಕ್ ಬೇಂಕ್ ಲಿ.,

ಪ್ರಧಾನ ಕಛೇರಿ: ಉಡುಪಿ, (ದ. ಕನ್ನಡ.)

ನಮ್ಮ 3 ವರ್ಷ ವಾಯಿದೆಯ ಕ್ಯಾಷ್ ಸರ್ಟಿಫಿಕೇಟುಗಳಲ್ಲಿ ಠೇವಣಿ ಮಾಡಿರಿ.
ಬಡ್ಡಿ ಶೇಕಡಾ 5ರಂತೆ. ರೂ. **87-00** 3 ವರ್ಷಗಳ
ಅಂತ್ಯದಲ್ಲಿ ಬಡ್ಡಿ ಕೂಡಿ ರೂ. **100-00** ಒದಗಿಸುವುದು.
ಕರೆ, ಚಿಕ್ಕವಾಯಿದೆ, ನಿರಖು ಠೇವಣಾತಿಗಳ ಮೇಲೆ
ಬಡ್ಡಿ ಶೇಕಡಾ 4½ರ ವರೆಗೆ.

ರೂ. **1** ಕೋಟಿಗೂ ಮಿಕ್ಕಿದ ಚಲಾವಣಾ ಭಂಡವಾಳ

ಶಾಖೆಗಳು: ಬೆಂಗಳೂರು, ಮಂಗಳೂರು, ಬೇಲೂರು, ಶಿವಮೊಗ್ಗ, ಭದ್ರಾವತಿ, ತುಮಕೂರು, ಕುಣಿಗಲ್, ಕಾಸರಗೋಡು, ಇತ್ಯಾದಿ.

(ಸ್ಥಾಪನೆ: 1920)

ಅಭಿಪ್ರಾಯ

ರಾಜ್ಯದ ಹೆಸರು ಕರ್ನಾಟಕವಾಗಬೇಕು

ಹತ್ತರೊಳಗೆ ಐದು ಇರುವುದೇ ಹೊರತು, ಐದರೊಳಗೆ ಹತ್ತು ಎಂದಾದರುವುದುಂಟೆ? ಗಣಿತ ಮಾನ್ಯವಾದ ಈ ಸತ್ಯವನ್ನೂ ಸುಳ್ಳಾಗಿಸುವ ಸಾಹಸವನ್ನು ರಾಜ್ಯದಲ್ಲಿ ನಡೆದಿದೆ. ಕರ್ನಾಟಕದೊಳಗಿರಬೇಕಾದ ಮೈಸೂರು ತನ್ನೊಳಗೇ ಕರ್ನಾಟಕ ಬಂದಿದೆ ಎನ್ನುವ ವಾದವನ್ನು ಮುಂದೂಡುತ್ತಿದೆ; ಇದನ್ನು ಹೇಳಿ ನಗಬೇಕೋ, ಕಳವಳಪಡಬೇಕೋ?

ಶ್ರೀ ಕೆ. ಜೆ. ಶೆಟ್ಟಿ.

ಚಾರಿತ್ರಿಕವಾಗಿ, ಪೌರಾಣಿಕವಾಗಿ, ಸಾಂಸ್ಕೃತಿಕವಾಗಿ, ಭೌಗೋಳಿಕವಾಗಿ—ಸರ್ವ ವಿಧದಲ್ಲೂ ಕನ್ನಡನಾಡಿಗೆ ಉಜ್ವಲ ಪರಂಪರೆ ಇದೆ. ಮಹೋನ್ನತವಾದ ಪರಂಪರೆ, ಮಾನವಿದೆ.

"ಉದಯವಾಗಲಿ ನಮ್ಮ ಚೆಲುವ ಕನ್ನಡನಾಡು"— ಅರ್ಥಾತ್ ಕರ್ನಾಟಕ ನಾಡು ಎಂಬ ಆಶಾವಾದದ ಸ್ಫೂರ್ತಿಯಿಂದ ಸ್ವರವೆತ್ತಿ ಹಾಡಿದ ಕವಿಯ ಭಾವನೆಯ ಏನಿತ್ತು? ನಾಡು ಎಂದಾದರೂ ಒಂದಾಗಿ ಉಳಿದ ಕರ್ನಾಟಕವೆಂಬ ಅರ್ಥ ನಾಮಧೇಯದಿಂದ ಮೆರೆಯಲೆಂದು ಕವಿಯ ಚಿಂತನೆಯಾಗಿತ್ತು.

ಕನ್ನಡನಾಡು ಈ ಹಿಂದೆ ಹೇಗೆ ಹೊಬೀಡಾಗಿ ಮೆರೆಯಿತೋ ಅಂತೆಯೇ ಮತ್ತೊಮ್ಮೆ ತಲೆಯೆತ್ತಿ ಪೂರ್ವ ಪರಂಪರೆಯನ್ನುಳಿಸಿ ಬಾಳಲೆಂದೇ ಕವಿಯ ಮನಸ್ಸಿನಲ್ಲಿ ಆಗಿತ್ತು. ಅಂತೆಯೇ ಒಂದಾದ ಕನ್ನಡನಾಡು 'ಕರ್ನಾಟಕ'ವೆಂಬ ಹೆಸರನ್ನು ಪಡೆಯಬೇಕಾಗಿದ್ದರೂ ಆಗಲೇ ಇದ ಮೈಸೂರೆಂಬ ಹೆಸರನ್ನಿಟ್ಟು ಕೊಂಡಿದ್ದಕ್ಕಾಗಿ ವಿಷಾದಿಸಬೇಕಾಗಿದೆ.

ಏಕೀಕೃತವಾದ ಕನ್ನಡನಾಡು ಸರ್ವಸೃಷ್ಟಿಯಲ್ಲೂ ಸಮಗ್ರ ಭಾರತದಲ್ಲೇ ಪ್ರಸಿದ್ಧರಿತವಾಗಿದೆ. ಜನಸಂಪತ್ತು, ಭೂಸಂಪತ್ತು, ಖನಿಜ ಸಂಪತ್ತು; ಸಂಪೂರ್ಣತೆಯ ಅನುಕೂಲ ಸ್ಥಿತಿಯಲ್ಲಿರುವ ಪ್ರಕೃತಿ ಸಂಪತ್ತು ನಮ್ಮಲ್ಲಿದೆ. ಇವೆಲ್ಲವ ಪ್ರಾಯೋಗಿಕವಾಗಿ ರೂಢಿಸಿಕೊಂಡ ನಾಡಿನ ಜನತೆ ಸಾಕಷ್ಟು ಸಂಪದಭಿವೃದ್ಧಿ ಪಡೆದು ತೃಪ್ತರಾಗಲು ಸಾಧ್ಯ. ವಿಧ ಕ್ಷೇತ್ರಗಳಲ್ಲೂ ಸ್ವಪರಿಪೂರ್ಣತೆಯನ್ನು ಪಡೆಯಬಲ್ಲ ಶಕ್ತಿ, ಸಾಧ್ಯತೆ, ಸಾನುಕೂಲತೆ ನಮಗಿದೆ. ಆದರೂ ಅದನ್ನು ಅನೂಕೂಲಸ್ಥಿತಿಗೊದಗಿಸಿಕೊಳ್ಳುವ ಆ ಬುದ್ಧಿ, ಆ ಮನೋಭಾವ, ಆ ಸಾಧನೆ ನಮ್ಮಲ್ಲಿನ್ನೂ ಮೈದೋರಲಿಲ್ಲ.—ನಾಡಿಗೆ ಬಂದು ಒಪ್ಪುವ ಹೆಸರನ್ನಿಡುವುದರಲ್ಲಿಯೇ ನಾವು ಅಸಡ್ಡೆತಳೆದು ಮೀನ ಮೇಷ ಎಣಿಸುತ್ತಿರುವಾಗ ಇನ್ನುಳಿದ ಜನಹಿತಾಭಿವೃದ್ಧಿ ಕಾರ್ಯವನ್ನು ಮಾಡಲು ಎಷ್ಟು ಉತ್ಸುಕತೆಯಿಂದ ಮುಂದುವರಿದೀತೆ?

ಕೈತಪ್ಪಿ ಹೋದ ಕನ್ನಡದ ಕೆಲವು ಭಾಗಗಳ ವಿಚಾರವನ್ನುಳಿದು ಹೇಳುವುದಾದರೆ ಪ್ರಾಂತೀಯ ಪುನಾರಚನೆಯಾದ ದಿನವು ಕನ್ನಡಿಗರಿಗೆ ಚಿರಸ್ಮರಣೀಯವಾಗಿದೆ. ಕೆಲಮಟ್ಟಿಗಾದರೂ ಕನ್ನಡಿಗರ ಕನಸು ನೆನಸಾದ ದಿನವದು. ಕನ್ನಡನಾಡು ನುಡಿಯ ಅಭಿಮಾನಿಗಳಾದ ಸಾಧಕ ಪುರುಷರ ತಪಸ್ಸಿದ್ಧಿಯಾದ ದಿನ! ಕನ್ನಡ ಸಂಸ್ಕೃತಿಯ ಪುರೋಭಿವೃದ್ಧಿಗೆ, ಬೌದ್ಧಿಕ ಪ್ರಗತಿಗೆ, ಸಾಮಾಜಿಕ ಜೀವೋನ್ನತಿಗೆ, ನಾಂದಿಯಾದ ದಿನ. ಅಂತಲೇ ಅದು ಪವಿತ್ರ ದಿನ.

ಕೆಲವು ಕಾಲದ ಹಿಂದೆ ನೃಪತುಂಗನಾಳಿದ ಕನ್ನಡನಾಡು, ವಿದ್ಯಾರಣ್ಯರು ಕಟ್ಟಿದ ಹೊನ್ನಬೀಡು, ಹೊಯ್ಸಳರು ಬೆಳೆಸಿದ ಕಲೆಯಗೂಡು, ಒಡೆಯರು ಪೊರೆದ ಚೆಲುವಿನ ನಾಡು, - ಮತ್ತೆ ಒಂದುಗೂಡಿ ಕನ್ನಡಿಗರೆದೆಯಲ್ಲಿ ಹೊಸ ಹುರುಪನ್ನು, ನವಚೇತನವನ್ನು ಹೊಡೆದೆಬ್ಬಿಸುವಂತೆ ಮಾಡಿತು. ಈ ದಿವ್ಯ, ಭವ್ಯ ಹಾಗೂ ನವ್ಯವಾದೀ ಕರ್ನಾಟಕವನ್ನು ಕಟ್ಟುವಂತೆ ಮಾಡಿದ, ದುಡಿದ; — ಸ್ಫೂರ್ತಿ, ಶಕ್ತಿ, ಚೈತನ್ಯವನ್ನು ಹೊರ ಹೊಮ್ಮಿಸಿದ, ಕವಿ, ಕಲಾವಿದ, ರಾಜಕಾರಣಿಗಳು ಇಷ್ಟರಿಂದಲೇ ತೃಪ್ತರೇ? ಏಕೀಕರಣದ ಕನಸು ಕಂಡು ಅದಕ್ಕಾಗಿ ಹೋರಾಡಿದ ಜನತೆ ಇಷ್ಟರಿಂದಲೇ ಸಂತುಷ್ಟರೇ? "ಕನ್ನಡನಾಡು ಒಂದಾಗಲಿ, ಕನ್ನಡ ಗೆಲ್ಲಲಿ, ಜಯಕರ್ನಾಟಕ, ಜಯ ಕರ್ನಾಟಕ ಮಾತೆ" ಎಂದು ನಾಡು ನುಡಿಯ ಪ್ರೇಮಾಭಿಮಾನದ ಸ್ಫೂರ್ತಿಯಿಂದ ಸ್ವರವೆತ್ತಿದ ಕೋಟಿ ಕೋಟಿ ಕಂಠಗಳು ನಾಡಿಗೆ, 'ಕರ್ನಾಟಕ'ವೆಂಬ ಹೆಸರನ್ನಿಡದೆ ಉಳಿದಲ್ಲಿ ಸಮಾಧಾನಗೊಳ್ಳುವುದುಂಟೇ?

ಆ ಅತೃಪ್ತ ಹೃದಯದಿಂದ ಹೊರಹೊಮ್ಮುವ ನುಡಿ ಕೆಡಿಯಂತೆ ಸಿಡಿದರೆ ತಪ್ಪೇನು? ಹಿಂದುಹಂಚಾಗಿದ್ದ ಕನ್ನಡ ಪ್ರದೇಶಗಳು ಕನ್ನಡಿಗರ ಸತತ ಹೋರಾಟದ ಫಲವಾಗಿ ಒಂದುಗೂಡಿದ ಆ ನವೋದಯದ ಕಾಲದಲ್ಲಿ ಎರಡು ಕೋಟಿ ಕನ್ನಡಿಗರು ಆಶಾವಾದದ ಬೆಳಕುಕಂಡು ತೃಪ್ತಿಗೊಂಡಿದ್ದುಂಟೆ!—ಆದರೆ—ಇದೀಗ ತಮ್ಮ ಎಣಿಕೆ ಬರೇ ಕನಸಿನ ಮಂಡಿಗೆಯಾಯಿತೆಂದು ನಿರುತ್ಸಾಹದ ನಿಟ್ಟುಸಿರೆಳೆದು ಅನುಸರಿಸಿಬರುವ ನಿರಾಸೆಯ ನೆರಳನ್ನೇ ಕಾಣಬೇಕಾಗಿದೆ. ಕಾರಣವೇನು?—ಕೈಬಿಟ್ಟುಹೋದ ಕನ್ನಡ ಪ್ರದೇಶಗಳ ಬಗ್ಗೆ ಅಧಿಕಾರೀವರ್ಗದ ಅನಾದರಣೆ, ಯಾರೂ ಮೆಚ್ಚದೆ, ಯಾರೂ ಒಪ್ಪದೆ ಇದ್ದರೂ; ಯಾವುದೋ ತಂತ್ರದ ಭದ್ರಶಿಬಂದಿಯ ಹಿನ್ನೆಲೆಯ ಕೈವಾಡದ ಪ್ರಭಾವದಿಂದ ರಾಜ್ಯಕ್ಕೆ ಮೈಸೂರೆಂಬ ನಾಮಕರಣ ಮಾಡಿ ಪಗಡೆಯಾಟವಾಡುತ್ತಿರುವುದು. ಇವೇ ಮುಖ್ಯ ಕಾರಣಗಳು.—

ದೇಹದ ಸರ್ವ ಅಂಗಗಳಿಗೂ ಪ್ರಾಮುಖ್ಯ ಇದೆ—ಆದರೂ ದೇಹದ ಒಂದು ಭಾಗಕ್ಕೇ ಪ್ರಾಧಾನ್ಯಕೊಟ್ಟು—ಕೈಯೇ ದೇಹ, ಕಾಲೇ ದೇಹ, ಕಣ್ಣೇ ದೇಹವೆಂದು ಹೇಳುವುದಿಲ್ಲ! ಹಾಗೆ ಹೇಳುವುದು ಮೂಢತನವೂ ಹೌದು.

ವಿವಿಧಾಂಗಗಳಿಂದ ಪರಿಪೂರ್ಣವಾಗಿಯೇ ಇರುವ ಒಂದು ಮರವನ್ನಾದರೂ, ಬೇರೇ ಮರ, ಎಲೆಯೇ ಮರ, ಕೊಂಬೆಯೇ ಮರ, ಎಂದು ಹೇಳುವುದು ಸರಿ ಎಂದರೆ ಮತಿಗೇಡಿತನವಾದೀತು—ಬುದ್ಧಿಶೂನ್ಯತೆ ಎಂದಾದೀತು!—ಹಾಗೆಯೇ ಹರಿದು ಹಂಚಾಗಿದ್ದ ಕನ್ನಡ ಪ್ರದೇಶಗಳೆಲ್ಲ ಒಂದೇ ರಾಜಕೀಯಾಡಳಿತೆಗೊಳಗಾಗಿ ಒಂದುಗೂಡಿದ ಒಂದು ರಾಜ್ಯಕ್ಕೆ ಅದರ ಯಾವುದೇ ಒಂದು ಭಾಗದ ಹೆಸರನ್ನು ಇಟ್ಟುಬಿಡುವುದು ಸರಿಯೆನಿಸೀತೇ?

ಇನ್ನೊಂದು ವಿಚಾರವೆಂದರೆ,—ಈ ಹಿಂದೆ ಕನ್ನಡ ಭಾಷೆ, ದೇಶಾಭಿಮಾನದಿಂದಿದ್ದ ಸಾಹಿತಿಗಳು, ಕವಿಗಳು, ರಾಜಕಾರಣಿಗಳು ಯಾವ ಏಕೀಕರಣಕ್ಕಾಗಿ ದುಡಿದಿದ್ದರು? ಕರ್ನಾಟಕ ಏಕೀಕರಣಕ್ಕಾಗಿಯೇ ಅಥವಾ ಮೈಸೂರು ಏಕೀಕರಣಕ್ಕಾಗಿಯೆ?

ಶ್ರೀ ಮಾಸ್ತಿಯವರಂದೆಂತೆ— "ಮೈಸೂರೆಂಬುದು ಕರ್ನಾಟಕದ ಒಂದು ಭಾಗವೇ ಹೊರತು, ಕರ್ನಾಟಕವು ಮೈಸೂರಿನ ಭಾಗವಲ್ಲ! ಹತ್ತರೊಳಗೇ ಐದು ಇದೆಯೇ ಹೊರತು ಐದರೊಳಗಿಂದ ಹತ್ತು ಬರುವುದಿಲ್ಲ! —" ಎಷ್ಟು ಸ್ಪಷ್ಟ ಹಾಗೂ ಸಹಜವಾಗಿದೆ ಈ ಮಾತು! ಕನ್ನಡನಾಡಿಗೆ ವಿಶಾಲ ಮೈಸೂರೆಂದು ನಾಮಕರಣ ಮಾಡಿದ ಬಗ್ಗೆ ವಿಷಾದವನ್ನು ವ್ಯಕ್ತಪಡಿಸುತ್ತಾ ಈ ಬಾಲಯ ಸಾಹಿತ್ಯ ಸಮ್ಮೇಳನಾಧ್ಯಕ್ಷ ಅ. ನ. ಕೃ. ಅವರು ಹೇಳಿದ ಮಾತುಗಳು ಕಿವಿನಿಗುರಿಸಿ ಕೇಳುವಂಥಾದ್ದಾಗಿದೆ.—ಮಾತ್ರವಲ್ಲ ನಮ್ಮ ಅಧಿಕಾರಿಗಳ ಕುಹಕತನವನ್ನು ಸ್ಮರಿಸಿ 'ಅಯ್ಯೋ' ಎಂದು ನಿಟ್ಟುಸಿರೆಳೆಯಬೇಕಾಗಿದೆ—.

'....ನಾವು ಬಯಸಿದ್ದು 'ವಿಶಾಲ ಕರ್ನಾಟಕ' ನಮಗೆ ದೊರೆತದ್ದು 'ವಿಶಾಲ ಮೈಸೂರು' ಕರ್ನಾಟಕದ ಕಟ್ಟಾಳುಗಳಾಗಿದ್ದ ರಾಜಕಾರಣಿಗಳು ಈ ರಾಜ್ಯವನ್ನ 'ಕರ್ನಾಟಕ' ಎಂದು ಕರೆಯಲು ಇನ್ನೂ ಏಕೆ ಧೈರ್ಯಮೇಷ ಎಣಿಸುತ್ತಿದ್ದಾರೋ ಗೊತ್ತಿಲ್ಲ. ಇದರಲ್ಲಿಯೂ ಜಾತಿ ವಾದಿಗಳ ಕೈವಾಡವಿದೆಯೇ? ಪ್ರಭುತ್ವದಲ್ಲಿರುವವರು ಕನ್ನಡ ಜನ ಪದದ ಅಭೋತ್ತರಗಳನ್ನು ಇಂತು ಹತ್ತಿಕ್ಕುತ್ತಿರುವುದು ಸರ್ವಥಾ ವಿಹಿತವಲ್ಲ!"....ವಿವೇಕ ಉಳ್ಳ ಮತಿವಂತ ಮಾನ್ಯ ಮುಖಂಡರುಗಳ ಸಂಕುಚಿತ ಮನೋಭಾವದ ರೋಗವನ್ನು ವಾಸಿಮಾಡಲು ಈ ಮೇಲಿನ ಅವರ ಪ್ರಭಾವಿತವಾದ ಮಾತಿನ ಚುಚ್ಚುಮದ್ದೇ ಸಾಲದೇ?

"ಯಾವ ಗುಂಪೇ ಬರಲಿ, ಕಾಂಗ್ರೇಸ್ ಮಂತ್ರಿ ಮಂಡಲ ಊರ್ಜಿತವಾಗಬೇಕಾದರೆ ಮೈಸೂರು ರಾಜ್ಯದ 'ಭಾರತ ಪ್ರಜೆ'ಗಳನ್ನು ತಮ್ಮ ಹೃದಯದಲ್ಲಿ ಕಾಂಗ್ರೇಸ್ ಸಂಸ್ಥೆಯನ್ನಿಟ್ಟುಕೊಂಡು ಪ್ರೇಮಿಸಿ ಪೋಷಿಸಬೇಕಾದರೆ ಮೈಸೂರು ರಾಜ್ಯಕ್ಕೆ—

೧ ಕರ್ನಾಟಕ ರಾಜ್ಯವೆಂದು ಹೆಸರಾಗಬೇಕು.

೨ ಕನ್ನಡವು (ಸಟ್ಟಿದರಸಿ) ರಾಜ್ಯ ಭಾಷೆಯಾಗಬೇಕು" ಎಂಬುದಾಗಿ ಹಿರಿಯರಾದ ಶ್ರೀ ತಿ. ತಾ. ಶರ್ಮರವರ ಎಚ್ಚರಿಕೆಯ ಮಾತುಗಳನ್ನು ಅಧಿಕಾರೀ ಮುಖ್ಯರು ಹತ್ತು ಬಾರಿಗೆ ಯೋಚಿಸಿಕೊಳ್ಳತಕ್ಕುದಾಗಿದೆ.

ಕನ್ನಡನಾಡನ್ನು ಮೈಸೂರೆಂದೇ ಹೆಸರಿಸಿ ಕರೆಯಬೇಕೆಂದು ತಲೆ ಬಡೆದುಕೊಳ್ಳುವ, ಕನ್ನಡದ ಮೇಲೆ ಅಪಾರ ಅಭಿಮಾನವುಳ್ಳ ಆದರ್ಶ ವ್ಯಕ್ತಿಗಳ ಅಗಾಧವಾದ ಅಜ್ಞಾನವನ್ನು ಹೋಗಲಾಡಿಸಿ ಅವರ ಹೃದಯದಲ್ಲಿ ತಿಳಿವಿನ ಬೆಳಕನ್ನು ಮೂಡಿಸಲು ಈ ಮೇಲಿನ ಹಿರಿಯರ ವಾದ ವಿವರಗಳೇ ಸಾಲವೇ?

ಅಂತಾಗಿ—ಕನ್ನಡ ಜನ, ಕನ್ನಡ ಮನ, ಕನ್ನಡ ನಡೆ, ಕನ್ನಡ ನುಡಿ, ಕನ್ನಡ ಕುಲ, ಕನ್ನಡ ನೆಲ, ಒಂದು ಎಂಬ ಭಾವೈಕ್ಯತೆ ನಮ್ಮಲ್ಲಿ ಮೂಡಿಬಂಬೇಕಾದರೆ ಕನ್ನಡನಾಡಿಗೆ ಕರ್ನಾಟಕವೆಂದೇ ಹೆಸರಿಡಬೇಕು! ಏಕೀಕೃತ ಕನ್ನಡನಾಡನ್ನು ಕರ್ನಾಟಕವೆಂದೇ ಕರೆಯಬೇಕು. ಆಗಲೇ ಕನ್ನಡಿಗರೆಲ್ಲರ ಹೃದಯ, ಮನಸ್ಸು, ಭಾವನೆಗಳು ಒಮ್ಮುಖವಾಗಿ ಹರಿಯಲು ಸಾಧ್ಯವಾಗುವುದು. ಕನ್ನಡಿಗರ ನರನಾಡಿಗಳಲ್ಲಿ ಹೊಸ ಚೈತನ್ಯವು ಹೊಮ್ಮಿಬರಲು ಸಾಧ್ಯವಿರುವುದು! ಈ ಕಾರ್ಯ ಅದಷ್ಟು ಬೇಗನೇ ಆಗಬೇಕು.

ಕನ್ನಡನಾಡಿಗೆ 'ಕರ್ನಾಟಕ'ವೆಂಬ ಹೆಸರೇ ಪೂಜ್ಯ!

ಅನ್ಯಥಾ ಸರ್ವವೂ ತ್ಯಾಜ್ಯ!

"ಕನ್ನಡಗೆಲ್ಲಲ್ಲ!"

ಠೇವಣಾತಿಗಳು.....ಆಕರ್ಷಕ ಬಡ್ಡಿ ದರಗಳು

ಜೀವನದ ವೆಚ್ಚವು ದಿನೇ ದಿನೇ ಹೆಚ್ಚುತ್ತಲಿದ್ದರೂ, ಕಷ್ಟಪಟ್ಟು ಉಳಿಸಿದ ನಿಮ್ಮ ಹಣಕ್ಕೆ—ಅತ್ಯಗತ್ಯವಿರುವ ಸುರಕ್ಷಿತತೆ ಮತ್ತು ಭದ್ರತೆಗಳೊಂದಿಗೆ—ಅತ್ಯಾಕರ್ಷಕ ದರದಲ್ಲಿ ಬಡ್ಡಿ ಕೊಟ್ಟು, ನಿಮ್ಮನ್ನು ಸಂತುಷ್ಟರಾಗಿ ಮಾಡಲು

ಕೊರ್ಪೊರೇಶನ್ ಬೇಂಕು

ತಾನು ಠೇವಣಾತಿಗಳ ಮೇಲೆ ಕೊಡುವ ಬಡ್ಡಿ ದರಗಳನ್ನು ಇತ್ತೀಚೆಗೆ ಬದಲಾಯಿಸಿದೆ.

ವಿವರಗಳನ್ನು ನಿಮಗೆ ಸಮೀಪವಿರುವ ಇದರ ಶಾಖೆಯಿಂದ ಪಡೆಯಬಹುದು.

ದಿ. ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್

ಅನುಭವ

ಗಾಂಧೀಜಿಯನ್ನು ನೋಡಿದಾಗ.....

ನಿಜವಾದ ಮಹಾಪುರುಷನಲ್ಲಿ ವ್ಯಾವಹಾರಿತೆಯಿಂದಮೇಲೇರುವ ಸಾಹಸ ಮತ್ತು ಜನಸಾಮಾನ್ಯರನ್ನು ತನ್ನ ಧೋರಣೆಗಳಲ್ಲಿ ನಿಷ್ಠಿಸುವ ಸಾಮರ್ಥ್ಯವಿರ ಬೇಕೆನ್ನುತ್ತಾರೆ. ವ್ಯಂಗ್ಯ ಚಿತ್ರಕಾರ ಶ್ರೀ ಡೇವಿಡ್ ಲೋ ರವರು ಮಹಾತ್ಮಾ ಗಾಂಧಿಯವರಲ್ಲಿ ಈ ಎಂಡೂ ಶಕ್ತಿಗಳನ್ನು ಕಂಡಿದ್ದರು.

ದುಂಡುಮೇಜಿನ ಪರಿಷತ್ತಿನಲ್ಲಿ ಭಾಗ ವಹಿಸಲು ಗಾಂಧೀಜಿಯವರು ೧೯೩೧ರಲ್ಲಿ ಲಂಡನ್ನಿಗೆ ಬಂದಿದ್ದರು. ನಾನವರನ್ನು ಹೌಸ್ ಆಫ್ ಕಾಮನ್ಸ್‌ನ ಹಾಲಿನಲ್ಲಿ ಕಂಡೆ. ಅವರಲ್ಲಿ ಪಾರ್ಲಿಮೆಂಟಿನ ಸರ್ವ ಪಕ್ಷೀಯ ಸದಸ್ಯರ ಮುಂದೆ ತನ್ನ ದೃಷ್ಟಿ ಕೋಣವನ್ನು ಮಂಡಿಸುತ್ತಿದ್ದರು. ಅವರ ಮಗ ಮತ್ತು ಮಿಸ್ ಸ್ಲೇಡ್‌ರು ಒಂದು ಪಕ್ಕದಲ್ಲಿ ತೆಪ್ಪಗೆ ವಿನೀತಭಾವ ದಿಂದ ನಿಂತಿದ್ದರು.

ಬಹಳ ಉತ್ಸಾಹದಿಂದಲೇ ಗಾಂಧೀಜಿ ಯವರು ನನ್ನನ್ನು ಸ್ವಾಗತಿಸಿದರು. ಅವ ರ ಕೈಯಲ್ಲಿ ಸಂಜೆಯ ಪತ್ರಿಕೆ ಹಿಡಿದು ಕೊಂಡಿದ್ದರು. ಅದರಲ್ಲಿ ಗಾಂಧೀ ಮತ್ತು ವಿನ್‌ಸ್ಟನ್ ಚರ್ಚಿಲ್ಲರ ಭೆಟ್ಟಿಯ ಬಗ್ಗೆ ನನ್ನ ವ್ಯಂಗ್ಯಚಿತ್ರವೊಂದು ಪ್ರಕಟವಾಗಿ ತ್ತು. ಅವರ ಬಾಯಿ ತೆರೆದು ಕೆಳದವಡೆ ಯ ಇಕ್ಕಡೆಗಳಲ್ಲೂ ಹೊಳೆಯುವ ಮೂ ರು ಮೂರು ಹಲ್ಲುಗಳು ನನಗೆ ಕಂಡುವು. ಇದರಿಂದ ಪ್ರೋತ್ಸಾಹಿತನಾದ ನಾನು 'ನಿಮ್ಮಲ್ಲಿಗೇನೇ ಬರುತ್ತೇನೆ. ಅಧಿಕ ವಿ ಕಾಂತದಲ್ಲಿ ಮಾತಾಡೋಣ' ಎಂದೆ.

ಸ್ಟೇಟ್ ಬ್ರಿಜ್‌ನ ಸಮೀಪದ ಅವ ರ ಉಪ್ಪರಿಗೆಗೆ ನಾನು ಕಾಲಿರಿಸಿದೊಡನೆ ಯೇ ಗಾಂಧೀ ಪುತ್ರ ನನ್ನನ್ನು ಗಾಂಧೀಜಿ ಯವರಲ್ಲಿಗೆ ಕರೆದುಕೊಂಡು ಹೋದ ಅ ವರು ಅಗ್ನಿಶಿಖೆಯ ಮುಂದೆ ಉರಿಕಾಸು ತಿದ್ದರು. ಬಲಗಡೆ ಚರಖ ಇತ್ತು. ಚಿಕ್ಕ ಉರುಟಾದ ಬೂದಿ ಬಣ್ಣದ ತಲೆ, ಕೈ ಯಿಂದ ನೂತ ವಿಶಾಲ ಶಾಲಿನಡೆ ಇಣಿಕಿ ನೋಡುವ ಎಳೆಗೂದಲು, ಉದ್ದವಾದ ಕೈವಾದಗಳು, ಬಿಸಿ ಬಿಸಿಯೂದರೂ ಮು ಟ್ಟುವಾಗ ಮೃದುವಾದ ಚರ್ಮ—ಎಲ್ಲ ಅಂಗಗಳಲ್ಲಿಯೂ ಸ್ವಾಗತದ ಭಾವ ಎ ದ್ದು ತೋರುತಿತ್ತು. ಇಂತಹ ಸಮೃದ್ಧ ವ್ಯಕ್ತಿತ್ವವನ್ನು ನಾನು ಬಹುಕಾಲದಿಂದ ಕಂಡಿರಲಿಲ್ಲ. ಅವರ ಸುತ್ತಲೂ ಭಾರತೀ ಯ ಮಿತ್ರರು ಮಂಡಿಸಿದ್ದರು. "ಸ್ವಲ್ಪ ದೂರ ಕೂರಿ" ಗಾಂಧೀಜಿ ಹೇಳಿದರು ನಾವೆಲ್ಲರೂ ಇತರರಿಂದ ತುಸು ದೂರದ ಲ್ಲಿ ಕುಳಿತುಕೊಂಡೆವು.

ನನ್ನ ದೃಷ್ಟಿ ಕಲಾಕಾರನದಾಗಿತ್ತು, ಸುದ್ದಿ ಸಂಗ್ರಹಿಸುವ ಪತ್ರಕಾರನದ್ದಾಗಿರ ಲಿಲ್ಲ; ಬದಲು ನಾನು ರಾಜಕೀಯರಹಸ್ಯ ಗಳನ್ನು ತಿಳಿದುಕೊಳ್ಳಲು ಅಲ್ಲಿ ಬಂದಿರ ಲಿಲ್ಲ; ಬದಲು ಆ ಮನುಷ್ಯನ ರೂಪರೇ ವರಿಯಲು ಆಗಮಿಸಿದ್ದೆ. ಅವರು ನನ್ನೊ ಡನೆ ಪ್ರಶ್ನೋತ್ತರ ನಡೆಸುವರೆಂದು ನಾ ನು ನಂಬಿದ್ದೆ; ಎಂತಲೇ ಹಿಂದಿನ ರಾತ್ರಿ ನಾನು ಕೆಲವಾರು ಪ್ರಶ್ನೆಗಳನ್ನು ಆಲೋ ಚಿಸಿದ್ದೆ—ಕೆಲವು ಅಸ್ಪಷ್ಟವಾಗಿದ್ದು ಅವ ರಿಗೆ ಮಾತಾಡಲು ಅವಕಾಶವಿತ್ತು ನಾನು ಕೂತು ಕೇಳುತ್ತಿರುವಂತಹವುಗಳು—ಆ ದರೆ, ಸ್ವಲ್ಪವೇ ಸಮಯದಲ್ಲಿ ಅವರ ಶಬ್ದ ಗಳು ಅವರ ವ್ಯಕ್ತಿತ್ವದ ಅಂಗಗಳೇ ಎಂ ದು ಗೊತ್ತಾಯಿತು. ನನಗೆ ತುಸು ನೋ ಟ್ಸ್ ಬರೆದುಕೊಳ್ಳಬೇಕಾಗಿಯೂ ಬಂತು. ನಾನು ಮಾತುಕತೆಗೆ ಪ್ರಾರಂಭಮಾಡಿದೆ.

"ನಾನು ತಮ್ಮ ನೆರಳನ್ನು ನೋಡಲು ಬಂದಿರುವೆನೇ ಹೊರತು ಪ್ರಶ್ನಿಸುವುದಕ ಲ್ಲ. ಆದರೂ, ತಾವು ತಮ್ಮ ದೇಶವಾಸಿಗ ಳಲ್ಲಿ ಹರಡಿಸಿದ ರಾಷ್ಟ್ರೀಯತೆಯ ಭಾವ ನೆಯು ಭಾರತ ಮತ್ತು ಪಾಶ್ಚಾತ್ಯ ರಾ ಷ್ಟ್ರಗಳನ್ನು ಸಮೀಪ ತರುವುದೇ ಅಥವಾ ಅವನ್ನು ದೂರವಾಗಿಸುವುದೇ ಎಂಬುದ ನ್ನು ತಿಳಿಯ ಬಯಸುತ್ತೇನೆ."

ಸಾಕಷ್ಟು ವ್ಯಾಪಕ ಪ್ರಶ್ನೆಯಾಗಿತ್ತು. ಅದಕ್ಕಾಗಿಯೇ ನಯವಾಗಿ ಪ್ರಾರಂಭಿಸಿ ದ್ದೆ. ಇದರ ಉತ್ತರವಾದರೂ ನನಗೆ ಮೊದಲೇ ಗೊತ್ತಿತ್ತು. ಒಂದು ರಾಷ್ಟ್ರ ಇನ್ನೊಂದರ ನೀತಿಯನ್ನು ಒಪ್ಪದಿರುವಾ ಗ, ಅವು ಸಮೀಪ ಬರುವುದಿಲ್ಲ; ದೂರ ದೂರವೇ ಸರಿಯುತ್ತವೆ. ಗಾಂಧೀಜಿ ಹರ ಡಿಸಿದ ರಾಷ್ಟ್ರೀಯ ಭಾವನೆಯ ಉದ್ದೇ ಶ ಭಾರತ ಮತ್ತು ಪಾಶ್ಚಾತ್ಯ ದೇಶಗಳ ಗಳನ್ನು ಅಧಿಕ ಸಮೀಪಮಾಡುವುದು—ಅದೂ ಎರಡೂ ಕಡೆಯವರಿಗೆ ಲಾಭವಾ ಗುವಂತೆ....ಇತ್ಯಾದಿ ಇತ್ಯಾದಿ.

ಅನಂತರ ನಾವು ಬ್ರಿಟನ್ ಮತ್ತು ಭಾರತಗಳ ಆದರ್ಶ ಸಂಬಂಧ ಹೇಗಿರ ಬಹುದು ಎಂಬ ಬಗ್ಗೆ ಚರ್ಚೆಗೆ ತೊಡಗಿದೆ ವು. ಪ್ರಾಂತೀಯ ಸ್ವಾಧಿಕಾರ, ವಸಾಹ ತು ಸತ್ತೆ. ಮೊದಲಾದ ಎಲ್ಲ ಪ್ರಚಲಿತ ರಾಜಕೀಯ ಕಲ್ಪನೆಗಳನ್ನು ಒಂದೊಂದಾ ಗಿ ಪರಿಶೀಲಿಸುತ್ತ ತಿರಸ್ಕರಿಸುತ್ತ ನಾವು ಯಾವುದೊ ರತ್ನದಂಗಡಿಯಲ್ಲಿ ರತ್ನಕೊ ಳ್ಳುವವರಂತೆ ಮುಂದುವರಿದೆವು.

ಮಾತಿನ ಮಾಲೆ ಮುರಿಯದಂತೆ ಮ ತ್ತು ಅವರ ವ್ಯಕ್ತಿತ್ವದ ಸಚಿತ್ರ ತತ್ವವ ನ್ನು ತಿಳಿಯುವಂತೆ ನಾನು ಸೂಚನೆಯಿ ತ್ತೆ: ತಾವೇ ಗವರ್ನರ ಜನರಲ್ಲರ ಪದವಿ ಯನ್ನು ಸ್ವೀಕರಿಸಿದಿರೆಂದರೆ, ಎಲ್ಲ ಸಮ ಸ್ಯೆಗಳೂ ಬಗೆಹರಿಯುತ್ತವೆ ಎಂದು ದೇಶೀ ಯ ಕಂಬಳಿ, ಮೊಣಗಂಟಿನ ವರೆಗಿನ ಧೋತ್ರ, ತಲೆಯ ಮೇಲೆ ಬಾಗಿದ ಹೇಟು ಗಳ ಗಾಂಧೀಜಿಯ ಈ ಮಾನಸಿಕ ಚಿತ್ರ ನನಗೆ ಬಹು ಮೋಹಕವೆನಿಸಿತು.

ಅವರ ಮಾತುಗಾರಿಕೆಯಲ್ಲಿ ಬಹಳಷ್ಟ ನ್ನು ನಾನು ಮೊದಲೇ ಕೇಳಿದ್ದೆ. ಅದರೂ ಕಣ್ಣುಗಳಲ್ಲಿ ಕಣ್ಣಿಟ್ಟು, ಬಾಯಮುಂದೆ ಬಾಯಿಯಿಟ್ಟು ಉಸಿರಿನೊಡನೆ ಅಡಿನ ಹಾಲಿನ ಸುವಾಸನೆಯನ್ನು ಹರಡಿಸುತ್ತ ಅವೇ ಮಾತುಗಳನ್ನು ಅವರೇ ಹೇಳಿದಾ ಗ, ನನಗವು ಹೊಸತೆಂಬಂತೆಯೇ ಭಾಸ ವಾದುವು. ಕೃಷಿ ಪ್ರಧಾನ, ಗ್ರಾಮ ಕೇಂ ದ್ರಿತ ಮತ್ತು ಪ್ರಾಚೀನ ಗ್ರಾಮೋದ್ಯೋ ಗಗಳ ಮೇಲೆ ಬಲವಾಗಿ ಹೊಂದಿಕೊಂಡಿ ರುವ ಭಾವಿ ಭಾರತದ ಚಿತ್ರ ನನಗೆ ಸರ್ವ ಥಾ ಸ್ವಾಭಾವಿಕ ಮತ್ತು ಸಂಪನ್ನವಾಗಿ ತೋರಿತು. ಅದರೊಂದಿಗೆ ಹೋಲಿಸಿದಾಗ ಔದ್ಯೋಗೀಕರಣ ದೂಷ್ಯವಾಗಿ ಕಂಡಿತು.

"ನಾನೂ ಕೆಲವಾರು ಪಾಶ್ಚಾತ್ಯ ವಿ ಧಾನಗಳನ್ನು ಸ್ವೀಕರಿಸಿದ್ದೇನೆ" ಗಾಂಧೀ ಜಿ ಹೇಳಿದರು. (ಸತ್ಯ ಹೇಳುವುದಾದರೆ, ಪಶ್ಚಿಮದ ಗಾಳಿಯು ಅವರನ್ನು ಸ್ಪರ್ಶಿಸ ಲೇ ಇಲ್ಲವೆಂಬಂತೆ ತೋರುತಿತ್ತು) "ಆದ ರೆ, ವಿಧಾನ — ಮಾರ್ಗಗಳಲ್ಲಿಯೂ ಭೂ ಗೋಳವನ್ನು ಹೆಚ್ಚಾಗಿ ಹೊಂದಿಕೊಂಡಿ ರುತ್ತವೆ. ನನ್ನನ್ನೇ ನೋಡಿರಿ, ಭಾರತದ ಲ್ಲಿ ನಾನು ಅಂಗವಸ್ತ್ರವನ್ನು ಮಾತ್ರ ಧರಿ ಸುತ್ತೇನೆ. ಇಲ್ಲಿ ನಾನು ಇವನ್ನೆಲ್ಲಾ ಹೊತ್ತು ನಡೆಯಬೇಕಾಗಿದೆ. ನಿಮ್ಮ ಬ ಟ್ಟೆಬರೆಗಳನ್ನೇ ನೋಡಿರಿ. ಭಾರತನಲ್ಲಿವು ನಿರುಪಯುಕ್ತವಾಗಿವೆ. ಅಲ್ಲಿ ಇವು ಕೃಮಿ ಗಳ ಆವಾಸಸ್ಥಾನವಾಗುವುವು. ಈ ಸರ ಸೆಗಳು! ಅವು ಭೂಳು ಒಂದುಗೂಡಿಸುವ ಸಾಧನಗಳಾಗುವುವು. ಎರಡೂ ದೇಶಗಳು ಹೇಗೆ ನಿಕಟ ಬಂಧವೆಂದು ನೀವು ಕೇ ಳುತ್ತೀರಿ. ನೆಲದ ಮೇಲೆ ಕೂರುವುದಕ್ಕಿಂ ತ ಕುರ್ಚಿಯಲ್ಲಿ ಮಂಡಿಸುವುದು ಹೇಗೆ ಒಳ್ಳೆಯದು? ಎಲ್ಲರೂ ನೆಲದ ಮೇಲೆ

(ಕೆಳೆ ಪುಟ ನೋಡಿರಿ)

ಸಹಕಾರ ಸಿದ್ಧಿ

ದೆಹಲಿಯಲ್ಲಿ ರಿಕ್ಷಾವಾಲರ ಸಹಕಾರ ಸಂಘದ ಸಹಾಯದಿಂದ ಸಾಲಾಗಿ ರಿಕ್ಷಾ ಕೊಂಡು ಈಗ ಋಣಮುಕ್ತನಾದ ಶ್ರೀ ಲಲ್ಲೂ ಸಿಂಘನ ಕಾರ್ಯತತ್ಪರತೆ ಯನ್ನು ಗಮನಿಸಿರಿ.

ಸ್ಥಾಪನೆ: 1924

ದಿ ಕರ್ಣಾಟಕಬೇಂಕ್ ಲಿಮಿಟೆಡ್

(ಶೆಡ್ಯೂಲ್ಡ್ ಬೇಂಕ್)

ಪ್ರಧಾನ ಆಫೀಸು: ಮಂಗಳೂರು—3.

ಈ ಕೆಳಗಿನ ಬಡ್ಡಿದರಗಳಲ್ಲಿ ಶೇವಣಾತಿಗಳನ್ನು ಸ್ವೀಕರಿಸಲಾಗುವುದು.

ಒಂದು ತಿಂಗಳಿಗೆ	....	ಸಾ॥ ಸೇಕಡಾ 3-75	ನ.ಪೈಸೇ
ಮೂರು ತಿಂಗಳುಗಳಿಗೆ	....	,, 4-00	,,
ಆರು ತಿಂಗಳುಗಳಿಗೆ	....	,, 4 25	,,
12 ತಿಂಗಳುಗಳಿಂದ 23 ತಿಂಗಳುಗಳ ವರೆಗೆ	....	,, 4-50	,,
24 ತಿಂಗಳುಗಳಿಂದ 48 ತಿಂಗಳುಗಳ ವರೆಗೆ	....	,, 4·75	,,

"ಹನಿ ಡಿಪೋಸಿಟ್ಸ್" ನಲ್ಲಿ

ನಿಮ್ಮ ದೈನಂದಿನ ಉಳಿತಾಯವನ್ನು ವಿನಿಯೋಗಿಸಿರಿ.

THE KARNATAKA BANK LIMITED.

ಕ್ಷೇತ್ರ ಪರಿಚಯ

ಲೂಟಿಗೆ ಸಿಕ್ಕ ಸೋಮನಾಥ ದೇವಾಲಯ

ಐದು ಬಾರಿ ಧ್ವಂಸವಾದರೂ ಮತ್ತೂ ತಲೆಯೆತ್ತಿ ಪುನರ್ನಿರ್ಮಿತವಾಗುತ್ತಿರುವ ಸೋಮನಾಥ ದೇವಾಲಯ ಪ್ರಧಾನ ಯಾತ್ರಾಕೇಂದ್ರವಾಗಿದೆ. ಸಮುದ್ರ ರಾಜನು ಹಾಡುವ ಚಿರಂತನ ಸಂಗೀತ ಮತ್ತು ದೇವಾಲಯದಲ್ಲಿ ಬಾರಿಸುವ ಹಿನ್ನೆಲೆಯ ವಾದ್ಯಗಳು ಕಿವಿದೆರೆಗಳನ್ನು ಬಡಿದಾಗ ಯಾರ ಹೃದಯ ತಾನೇ ತುಂಬಿ ಬರಲಾರವು?

ಪ್ರಭಾತ ವೇಳೆಯಲ್ಲಿ ಅರಬ್ಬೀ ಸಮುದ್ರದ ನೀಲ ಹೊದಿಕೆಯ ಮೇಲೆ ಸೋಮನಾಥ ಮಂದಿರವು ಸೂರ್ಯನ ಕಿರಣಗಳಿಂದ ಹೊಳೆಯುತ್ತದೆ. ನೋಡಿದೊಡನೆಯೇ ಕಣ್ಣಮುಂದೆ ಗತೇತಿಹಾಸದ—ಪ್ರಾಚೀನ ಇತಿಹಾಸ, ಭಾರತದ ಪ್ರಾಚೀನ ನಾಗರಿಕತೆ, ಸಂಸ್ಕೃತಿ ಮತ್ತು ನಿಮೋಜವು ಸಿನೆಮೂದ ಫಿಲ್ಮಿನಂತೆ ವೇಗವಾಗಿ ಮಿಂಚ ತೊಡಗುವುದು ಮೋಟಾರು ಮಂದಿರದತ್ತ ಮುಂದುವರಿದಂತೆ ಇತಿಹಾಸದಲ್ಲಿನ ಒಂದೊಂದು ಯುಗವನ್ನು ದಾಟಿದಂತೆನೇ ನಮಗೆ ಭಾಸವಾಗುವುದು.

ಒಂದು ವೈದಿಕ ಮಂತ್ರವು ಕಿವಿಯಲ್ಲಿ ಪ್ರತಿಧ್ವನಿಸ ತೊಡಗುವುದು:

ಯತ್ರ ಗಂಗಾಚ ಯಮುನಾ |
ಯತ್ರಾಸ್ತಾಚೀಶರಸ್ವತಿ
ಯತ್ರ ಸೋಮೇಶ್ವರೋ ದೇವ |
ಸ್ತತ್ರ ಮಾಮಮೃತಂಕೃತಂ ||
ಕೃಧೀಂದ್ರಯೇಂದೀ ಪರಿಶ್ರವ ||

ಕಣ್ಣುಗಳು ಭಕ್ತಿ ಗೌರವ ಭಾವದಿಂದ ಮುಚ್ಚಿದ್ದುವು. ಭೂಮಿ ಒಡೆದಂತೆ ಆಗಿ ಅದರೆಡೆಯಲ್ಲಿ ಅಂಡಾಕಾರದ ಶಿವನ ಸ್ಪರ್ಶ ಲಿಂಗವು ಎದ್ದು ತೋರುವುದು. ಅದರ ಮೇಲೆ ಬ್ರಹ್ಮನು ಬ್ರಹ್ಮ ಶಿಲೆಯಿಡುವನು. ಅದರ ಮೇಲೆ ಭಗವಾನನು ಸೋಮನಾಥನ ದೊಡ್ಡ ಲಿಂಗವನು ಸ್ಥಾಪಿಸುವನು. ಚಂದ್ರದೇವ ಮತ್ತು ಆತನ ಪತ್ನಿ ರೋಹಿಣಿಯರ ಮುಖದಿಂದ ಮಂತ್ರಗಳು ಹೊರಡುವುವು.

ಸೋಮನಾಥನ ಸ್ಥಾಪನೆಯೊಡನೆ ದಕ್ಷ ಪ್ರಜಾಪತಿ ಮತ್ತು ಆತನ ೨೭ ಪುತ್ರಿಯರ ಕಥೆ ನಾಟಕದಂತೆ ತೋರುವುದು. ದಕ್ಷನು ಎಲ್ಲ ಪುತ್ರಿಯರ ವಿವಾಹವನ್ನೂ ಸೋಮನೊಡನೆ ಮಾಡಿದನು; ರೋಹಿಣಿಯು ಅವರೆಲ್ಲರಲ್ಲಿ ಅತಿ ಸುಂದರಿಯಾಗಿದ್ದಳು; ಇದರಿಂದಾಗಿಯೇ ಸೋಮನಿಗೆ ಆಕೆಯೆಂದರೆ ಪಂಚಪ್ರಾಣ. ಮತ್ಸರದಿಂದ ಉಳಿದವರು ತಂದೆಯೊಡನೆ ದೂರಿಟ್ಟರು. ಆತನು ಕ್ರುದ್ಧನಾಗಿ ಶಾಪವಿತ್ತನು; ಇದರ ಫಲವಾಗಿ ಸೋಮ ಕ್ಷೀಣವಾಗುತ್ತ ಬಂದನು. ಇದರಿಂದ ದೇವತೆಗಳು ವ್ಯಥಿತ ಹೃದಯರಾದರು. ಇತ್ತ ಶಾಪವನ್ನು ಹಿಂದೆಗೆಯುವಂತೆ ಪ್ರಾರ್ಥಿಸಿದರು. ದಕ್ಷನು ಇದನ್ನು ಒಪ್ಪಿಕೊಂಡರೂ ಒಂದು ಶರತ ಹಾಕಿದನು, ಇದರಂತೆ ಆತ ಪ್ರಭಾಸ ತೀರ್ಥದಲ್ಲಿ ಸಮುದ್ರ ಸ್ನಾನ ಮಾಡಿ ಮಹಾದೇವನನ್ನು ಪೂಜಿಸಬೇಕಾಯಿತು. ನಾಲ್ಕು ಸಾವಿರ ವರ್ಷಗಳ ಘೋರ ತಪಸ್ಯಾನಂತರ ಶಿವ ಪ್ರಸನ್ನನಾದನು. ಅನಂತರ ಸೋಮ ಕಳೆದುಕೊಂಡ ಪ್ರಕಾಶವನ್ನು ಮರಳಿ ಪಡೆದನು.

ಮಹಾಭಾರತದ ಯುಗ ಬಂದಿತು. ಭಗವಾನ್ ಶ್ರೀ ಕೃಷ್ಣನು ಪೂಜಿಸಲು ಬಂದನು. ಆನಂತರ ದ್ವಾರಕೆಗೆ ತೆರಳುವಾಗ ಅರ್ಜುನನು ಬಂದನು. ಕೊನೆಗೆ ಸೋಮಯೋಗಿಗಳು ಇದನ್ನು ತಮ್ಮ ಕೇಂದ್ರವನ್ನಾಗಿ ಮಾಡಿದರು. ಕ್ರಿಸ್ತಶಕ ಎರಡನೆಯ ಶತಮಾನದಲ್ಲಿ ಲಕುಲಿಸ್ ಎಂಬವನು ಪಶುಪತಿವಾದದ ಕೇಂದ್ರವೊಂದನ್ನು ಇಲ್ಲಿ ಸ್ಥಾಪಿಸಿದನು. ಆ ದಿನಗಳಲ್ಲಿಯೇ ಭಾರಶಿವ ಮತ್ತು ವಕಾಟಕ ರಾಜನು ಸೋಮನಾಥನ ಭವ್ಯ ಮಂದಿರವನ್ನು ಕಟ್ಟಿಸಿದರು. ಕ್ರಿ. ಶ. ೮೮೯ರ ಸುಮಾರಿನಲ್ಲಿ ಅದರ ಸಮೀಪದಲ್ಲಿಯೇ ಇನ್ನೊಂದು ಮಂದಿರವು ನಿರ್ಮಾಣಗೊಂಡಿತು.

ಎಂಟನೆಯ ಶತಮಾನದಲ್ಲಿ ಅರಬ ಆಕ್ರಮಣಕಾರರು ಬಂದರು. ಅವರು ದೇವಾಲಯವನ್ನು ಲೂಟಿ ಮಾಡಿದರು ಆದರೆ ಕ್ರಿ. ಶ. ೮೦೦ರಲ್ಲಿ ಭಕ್ತ ಮಹಾಜನರು ಅದೇ ಸ್ಥಳದಲ್ಲಿ ಮೂರನೆಯ ದೇವಾಲಯವನ್ನು ಕಟ್ಟಿಸಿದರು. ೭೫೦ರಿಂದ ೯೫೦ರ ವರೆಗೆ ಈ ಭಾಗದಲ್ಲಿಯೂ ಜಾಲುಕ್ಯರ ಪ್ರಭುತ್ವವಿತ್ತು. ಇವರು ದೇವಾಲಯದ ಸಮೀಪ ದೊಡ್ಡ ರೇಪೊಂದನ್ನು ಕಟ್ಟಿಸಿದರು.

೬--೧-೧೧೮೬ರಂದು ಗಜನಿಯ ಮಹಮೂದನು ಸೋಮನಾಥ ಮಂದಿರದ ಮೇಲೆ ಧಾಳಿ ಮಾಡಿದನು. ದೇವಸ್ಥಾನದ ಹೊರಗೆ ಸಮುದ್ರಸ್ನಾನ ಮಾಡುತ್ತ ಗುಡಿಯ ಸಂರಕ್ಷಣೆಗೆ ೫೦ ಸಾವಿರ ಜನರು ಮುಂದೆ ಬಂದರು. ಭಯಾನಕ ಕದನವಾಯಿತು. ಎಲ್ಲ ರಕ್ಷಕರೂ ಯಮಸದನರಿಗೆ ಸಂದರು. ಮಹಮೂದ ಮಂದಿರದತ್ತ ನಡೆದು ಲಿಂಗವನ್ನು ಕಿತ್ತು ಹಾಕಿದ; ಮಂದಿರವನ್ನು ಉರಿಸಿದ; ಲೂಟಿಯ ಪದಾರ್ಥಗಳನ್ನು ಒಂಟೆಗಳ ಮೇಲೆ ಹೇರಿ ಗಜನಿಯತ್ತ ಧಾವಿಸಿದ.

ಮಹಮೂದನು ಹಿಂದೆರಳಿದ ಮೇಲೆ ಅನಹಿಲವಾಡ ಪಾಟಣದ ರಾಜರು ಸೋಮನಾಥ ದೇವಾಲಯವನ್ನು ನಾಲ್ಕನೆಯ ಬಾರಿಗೆ ಕಟ್ಟಿಸಿದರು. ೧೧೧೪ರಲ್ಲಿ ಕುಮಾರ ಪಾಲನು ಸಿಂಹಾಸನ ಏರಿದೊಡನೆಯೇ ಇದನ್ನು ಐದನೆಯ ಸಾರಿಗೆ ನಿರ್ಮಿಸಲು ತೊಡಗಿದ. ಆದರೂ ಆತನ ನಂತರವೂ ಅನೇಕ ಧಾಳಿಗಾರರು ಸೋಮನಾಥ ದೇವಾಲಯವನ್ನು ಸೂರೆಗೊಂಡರು, ಜ್ವಲಿಸಿ ಬಿಟ್ಟರು. ಮಳೆ, ಧೂಳು, ಸೂರ್ಯ ಮತ್ತು ಸಮುಯಗಳು ತಮ್ಮ ಓಟನ್ನು ಕೊಡುತಿದ್ದರೂ ಮಂದಿರವನ್ನು ಅವಶೇಷ ಮಾತ್ರ ಮಾಡುವುದಕ್ಕಾಗಲಿಲ್ಲ. ಹೀಗೆ ಇತಿಹಾಸ ಸಾಗರದಲ್ಲೇ ಮುಳುಗಿರುವಾಗ ಯಾರಾದರೂ ಎಚ್ಚರಿಸುತ್ತಾರೆ. ನಾವೀಗ ಪ್ರಭಾಸ ಪಾಟಣದ ಕೋಟೆಯೊಳಗೆ ಬಂದಿರುತ್ತೇವೆ. ಮೂಗದ ಇಕ್ಕೆಲಗಳಲ್ಲಿಯೂ ನೂರಾರು ಸಮಾಧಿಗಳು ತೋರಿ ಬರುತ್ತಿವೆ. ಇವು ಬೇರೆ ಬೇರೆ ಕಾಲದಲ್ಲಿ ಸೋಮನಾಥದ ಮೇಲೆ ಧಾಳಿ ಮಾಡಿದವರದಿರಬೇಕು.

ಈ ಸಮಾಧಿಗಳನ್ನು ನೋಡುತ್ತ ಈ ದೇವ ಮಂದಿರದ ಹೆಸರಿನಲ್ಲಿ ಅದೆಷ್ಟು ಭಯಾನಕ ಹೋರಾಟ ನಡೆದಿರಬಹುದು, ರಕ್ತದ ನದಿಗಳು ಅದೆಷ್ಟು ಹರಿದಿರಬೇಕು ಎಂಬುದನ್ನು ಊಹಿಸುತ್ತ ನಾವು ವಿಸ್ಮಯ ಚಕಿತನೇತ್ರರಾಗುತ್ತೇವೆ.

ಸೋಮನಾಥನ ಮಂದಿರಕ್ಕೆಂತ ನೂರು ಗಜ ದೂರದಲ್ಲಿ ಮೋಟಾರು ನಿಲ್ಲುವುದು. ತಂಗಾಳಿಯಲ್ಲಿ ದೇವಾಲಯದ ಘಂಟೆಯಧ್ವನಿಯತ್ತ ಸಮುದ್ರದ ತೆರೆಗಳ ತಾಳಗಳು ತೂಗಾಡಿ ಕಿವಿಗೆ ಬಡಿಯುತಿದ್ದುವು. ಮೋಟಾರಿನಿಂದ ಇಳಿದ ನಾವು ಸ್ಥಬ್ದರಾಗಿ ಬಿಡುವೆವು ಮುಂದೆ ಭವ್ಯ ಮಂದಿರ ಕಂಗೊಳಿಸುತ್ತದೆ. ಈ ಆನಂದದಲ್ಲಿ ತನ್ಮಯವಾದ ಮನಸ್ಸು ಅತ್ತಿತ್ತ ಹರಿದಾಡಲು ನಿರಾಕರಿಸುತ್ತದೆ. ಬಹು ಸಮಯ ನಿಂತು ಮುಂದಿನ ದೇಗುಲವನ್ನು ಕಾಣಬೇಕೆಂಬ ಹಂಬಲ ಹೃದಯದಲ್ಲಿ ಅಂಕುರಿಸುವುದು. ಎಡಗಡೆ

(ಆನೇ ಪುಟ ನೋಡಿರಿ)

ದಿ. ವಿಜಯ ಬೇಂಕ್ ಲಿಮಿಟೆಡ್
(ಶೆಡ್ಯೂಲ್ಡ್ ಬೇಂಕ್)
ಸ್ಥಾಪನೆ: 1931
ಕಾಯಂ ಠೇವಣಾತಿದಾರರಿಗೆ ಸುಸಂದರ್ಭ
ಮೇಲಿನ ಠೇವಣಾತಿ ಬಡ್ಡಿ ದರವನ್ನು
5% ವರೆಗೆ ಹೆಚ್ಚಿಸಲಾಗಿದೆ.
ವಿವರಗಳಿಗೆ ನಮ್ಮ ಶಾಖೆಗಳಲ್ಲಿ ವಿಚಾರಿಸಿರಿ.
ನಮ್ಮ ಶಾಖೆಗಳು:-
ಮುಂಬಾಯಿ, ಮಂಗಳೂರು, ಬೆಂಗಳೂರು,
ಮೈಸೂರು, ಮಡಿಕೇರಿ, ಉಡುಪಿ
ಇತ್ಯಾದಿ ಇತ್ಯಾದಿ

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ, ಪ್ರತಿಯೊಬ್ಬರಿಗೂ ಅತ್ಯುಪಯುಕ್ತವಾದ ಹೊಸ ಪುಸ್ತಕ
LETTER WRITING MADE EASY
ಸುಲಭದಲ್ಲಿ ಪತ್ರಲೇಖನ
ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.
ಬೆಲೆ ರೂ. 1-4-0 (I=25).
ಮನೆಯೆಂದಾದಲ್ಲಿ ಇರಲೇಬೇಕಾದ ಗೃಹವೈದ್ಯ
ಮನೆ ಮದ್ದು
ಬರೆದವರು: ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್, ಎಲ್.ಎ.ಎಮ್
ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ. ಹೆರಿಗೆ ವಿಧಾನ ಸವಿಸ್ತಾರವಾಗಿ ಕೊಡಲ್ಪಟ್ಟಿದೆ. ಬೆಲೆ ರೂ. ಎರಡು.
ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
ದಿ| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—
ಸುಲಭದಲ್ಲಿ ಇಂಗ್ಲಿಷ್
(ENGLISH MADE EASY)
ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ.
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು.
ಬೆಲೆ: ರೂ. ಎರಡು. ಉತ್ತಮ ಪ್ರತಿ: ರೂ. ಎರಡೂವರೆ
ಪಿ. ಸೂ.—ಅಯಾಯ ಪುಸ್ತಕದ ಬೆಲೆಯೊಂದಿಗೆ ಟಪ್ಪಾಲು ಖರ್ಚಿಗಾಗಿ 0=25 N.P ಸೇರಿಸಿ ಮನಿಆರ್ಡರು ಮಾಡಿದರೆ ಪುಸ್ತಕಗಳಿಸಲಾಗುವುದು.
ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ಸಿಗದಿದ್ದರೆ ನಮಗೆ ಬರೆಯಿರಿ.
ನವಭಾರತ ಪುಸ್ತಕ ಭಂಡಾರ, ಉಡುಪಿ

> ಕರ್ತವ್ಯ ಪಾಲನೆಯನ್ನು ಸಮರ್ಥ ರೀತಿಯಲ್ಲಿ ನಿರ್ವಹಿಸಿ ಜೀವನ ಮಾರ್ಗದಲ್ಲಿ ನಿರ್ಭೀತಿಯಿಂದ ಮುಂದುವರಿಯದೆ ಮನುಷ್ಯನ ಭಾಗ್ಯವು ಎಂದಿಗೂ ಕಣ್ಣು ತೆರೆಯುವುದಿಲ್ಲ.

ನವಯುಗ

ವರುಷ ೪೦	ಉಡುಪಿ ೯-೨-೧೯೬೧	ವಾರ ೨೨

ಆತ್ಮ ಪ್ರತ್ಯಯ ಹೆಚ್ಚಲಿ

ಹೈದರಬಾದದಲ್ಲಿ ಸೇರಿದ್ದ ವಿಧಾನ ಮಂಡಳದ ಹರಿಜನ ಸದಸ್ಯರ ಅಖಿಲ ಭಾರತ ಸಮ್ಮೇಳನವನ್ನು ಏರ್ಪಡಿಸಿದ್ದ ಉದ್ದೇಶಗಳು ಏನೇ ಇದ್ದರೂ ಅದು ಸಮಂಜಸವೆಂದು ಒಪ್ಪುವುದು ವಿವೇಕಿಗಳಿಗೆ ತುಸು ಕಷ್ಟವಾದ ಮಾತು. ಸಮಾಜವಾದಿ ಮಾದರಿಯ ಜಾತ್ಯತೀತ ಕಲ್ಯಾಣ ರಾಷ್ಟ್ರವನ್ನು ಕಟ್ಟಲು ಬದ್ಧಕಂಕಣರಾದ ನಾವು ಎಲ್ಲರಿಗೂ ಎಲ್ಲ ಕ್ಷೇತ್ರಗಳಲ್ಲಿಯೂ ಸಮಾನಾವಕಾಶವನ್ನು ಕೊಡಬೇಕೇ ಹೊರತು ಒಂದು ಪಂಗಡ ಇಲ್ಲವೆ ಜಾತಿಗೆ ಯಾವುದೇ ರೀತಿಯ ಸ್ಪೋತ್ಸಾಹವನ್ನೂ ಉತ್ತೇಜನವನ್ನೂ ಅವಕಾಶಗಳನ್ನೂ ವಿಶೇಷವಾಗಿಡುವುದು ಸರ್ವಥಾ ಸರಿಯಲ್ಲ. ಈ ಸಮ್ಮೇಳನದ ಉದ್ಘಾಟಕರಾದ ಪ್ರಧಾನಿ ನೆಹರೂರವರು ಈ ಬಗೆ ಉದ್ಗರಿಸಿದ ಮಾತುಗಳು ಅಕ್ಷರಶಃ ನಿಜವಿನೆ. ಜಾತಿ ಪದ್ಧತಿಯನ್ನು, ಹಿಂದಿನ ಸಮಾಜ ರಚನೆಯನ್ನೇ ದೂರೀಕರಿಸಿ 'ಭಾರತೀಯರು' ಎಂಬ ಏಕಜಾತಿಯನ್ನು ನಿರ್ಮಿಸಿ ರಾಷ್ಟ್ರದ ಐಕ್ಯವನ್ನು ಸ್ಥಾಪಿಸಲು ನಾವು ಹೆಣಗುತ್ತಿರುವಾಗ 'ಜಾತೀಯ ಸಮ್ಮೇಳನ'ಗಳು ಅಖಿಲ ಭಾರತದ ಸ್ವರೂಪದಲ್ಲಿ ನಡೆದು ತಮ್ಮ ಜಾತಿವಾದವನ್ನೇ ಮತ್ತಷ್ಟು ಬಲಪಡಿಸಲು ಹವಣಿಳುವುದು ಸರಿಯೆಂದು ಹೇಳುವುದು ಸಾಧ್ಯವಿಲ್ಲ. ನ್ಯಾಯವಾಗಿ ಶತಾಬ್ದಾಂತರಗಳಿಂದ ಹಿಂದುಳಿದ ವರ್ಗಗಳನ್ನು ಉಳಿದವರ ಸರಿಸಮಕ್ಕೆ ತಂದು ನಿಲ್ಲಿಸುವುದು, ನ್ಯಾಯೋಚಿತವಾದ ಕಾರ್ಯಕ್ರಮಗಳನ್ನು ಈಗಾಗಲೇ ನಮ್ಮ ಸರಕಾರವು ಕೈಗೊಂಡಿದೆ; ಸಂವಿಧಾನದಲ್ಲಿ ಅವರಿಗೆ ಆಶ್ವಾಸನೆ ನೀಡಿದೆ; ಪ್ರಾರಂಭದಲ್ಲಿ ಹತ್ತು ವರ್ಷಗಳವರೆಗೆ ಮಾತ್ರ ಇದ್ದ ಈ ರಕ್ಷಣೆ ಈಗ ಇನ್ನೂ ಹತ್ತು ವರ್ಷಗಳವರೆಗೆ ಮುಂದುವರಿಸಲ್ಪಟ್ಟಿದೆ. ಸರಕಾರವು ಒಂದಲ್ಲ ಹಲವು ರೀತಿಯಲ್ಲಿ ಅವರ ಏಳಿಗೆಗಾಗಿ ಪ್ರಯತ್ನಿಸುವಾಗ, ಅವಕಾಶಗಳ ಸದುಪಯೋಗ ಪಡೆಯುವುದನ್ನು ಬಿಟ್ಟು, ತಾವು ಇನ್ನೂ ಹಿಂದುಳಿದಿದ್ದೇವೆ; ತಮ್ಮ ಪ್ರಗತಿಯಾಗಿಲ್ಲ; ತಮ್ಮನ್ನು ಸಮಾಜ ಕಾಣುವದೃಷ್ಟಿ ಬದಲಾಗಿಲ್ಲ ಎಂದು ಮುಂತಾಗಿ ಹೇಳಿಕೊಂಡ ಪಕ್ಷದಲ್ಲಿ ಅದು ಅ ಗುಂಪಿನ ದುರ್ಬಲತೆಯನ್ನಷ್ಟೇ ಪ್ರದರ್ಶಿಸಿದಂತಾದೀತು; ಆದರಿಂದ ಅವರ ಅಶಕ್ತತೆ ಮತ್ತು ಅಸಮರ್ಥತೆಗಳೇ ವ್ಯಕ್ತಪಟ್ಟೀತು. ದೇಶದ ಎಲ್ಲ ಪ್ರಜೆಗಳ ಬುದ್ಧಿಯೂ ಶಕ್ತಿಯೂ ಏಕರೂಪವಾಗಿರುವುದು; ಏಕರೂಪಕ್ಕೆ ತರುವ ಪ್ರಯತ್ನ ನಡೆಸುವುದು ಸಾಧ್ಯವಿಲ್ಲ. ವಿಸ್ತಾರವಾದ ಸಮುದ್ರದಲ್ಲಿನ ನೀರು ತಂದ ಬಿಂದಿಯ ಪ್ರಮಾಣದಷ್ಟೇ ನಮ್ಮ ಬಳಿ ಬಂದೀತೇ ಹೊರತು ಹೆಚ್ಚಲ್ಲ. ಹಾಗೆಂದು ಸಮುದ್ರದ ನೀರೊಯ್ಯುವ ಅವಕಾಶ ಮಾತ್ರ ಚಿಕ್ಕ—ದೊಡ್ಡ ಬಿಂದಿಗೆದಾರರೆಲ್ಲರಿಗೂ ದೊರೆಯಬೇಕು ಅಷ್ಟೆ.

ಕೇಂದ್ರದ ಪ್ರಭಾವಿ ಮಂತ್ರಿ ಶ್ರೀ ಜಗಜ್ಜೀವನ ರಾಮರು ಹಿಂದೊಮ್ಮೆ ಕಳೆದ ವರ್ಷಗಳಲ್ಲಿ ಹರಿಜನ—ಗಿರಿಜನರ ಉದ್ಧಾರವೇನೂ ಆಗಿಲ್ಲ ಎಂದು ಅಂದಿದ್ದರು. ಮೈಸೂರಿನ ಶ್ರೀ ರಾಜಯ್ಯನವರೂ ಈಗ ಅದೇ ಮಾತನ್ನು ಆಡತೊಡಗಿದ್ದಾರೆ. ಹೀಗೆ ಇವರು ತಮ್ಮ ಸಮಾಜವನ್ನು ಮುಂದೆ ತರುವ ಹೆಸರಿನಲ್ಲಿ ಸದಾ ಹಿಂದುಳಿಯುವಂತೆ ಪ್ರೇರೇಪಿಸುತ್ತಿದ್ದಾರೆ. ಸರಕಾರದ ರಕ್ಷಣೆಯ ಛತ್ರದಡಿಯಲ್ಲಿ ನಿಶ್ಚಿಂತತೆಯಿಂದ ದಿನ ದೂಡುವ ಆಲಸಿಗಳ ಸಂಖ್ಯೆಯನ್ನು ಹೆಚ್ಚಿಸಲು ಅವ್ಯಕ್ತ ಪ್ರೇರಣೆ ನೀಡುವಂತಹ ಮಾತುಗಳನ್ನು ಆಡುತಿದ್ದಾರೆ. ರಾಷ್ಟ್ರೀಯ ಸರಕಾರವು ಇತರರೆಲ್ಲರನ್ನೂ ಕಡೆಗಣಿಸಿ ಕೇವಲ ಹರಿಜನ—ಗಿರಿಜನರ ಬಾಯಿ ಮೊಸರಾಗುವಂತೆ ಕಾರ್ಯಪ್ರವೃತ್ತರಾಗುವುದು ಸಾಧ್ಯವಿಲ್ಲ. "ಒಂದು ಪ್ರದೇಶದಲ್ಲಿ ವಾಸಿಸುವ ಹರಿಜನರು ಗಿರಿಜನರು ಒಂದುಕಡೆ ಸೇರಿ ತಮ್ಮ ಸಮಸ್ಯೆಗಳನ್ನು ಚರ್ಚಿಸಿಕೊಳ್ಳುವುದು ನ್ಯಾಯವೇ; ಉಪಯುಕ್ತವೆ. ಆದರೆ, ದೇಶದ ಎಲ್ಲೆಡೆಗಳ ವಿಧಾನಮಂಡಳಗಳ ಹರಿಜನ ಸದಸ್ಯರು ಒಂದುಸೇರುವುದರ ಅರ್ಥವೇನು?" ಎಂಬ ಪ್ರಧಾನಿಯವರ ಉದ್ಗಾರವು ಅರ್ಥವತ್ತಾಗಿದೆ. ದೇಶದ ಜಾತೀಯ ಪದ್ಧತಿಯನ್ನು ಮುಖ್ಯವಾಗಿ ಹರಿಜನರು—ಗಿರಿಜನರು ಅಥವಾ ಅಸ್ಪೃಶ್ಯರು ಮತ್ತು ಇತರರು ಎಂಬ ಭೇದಭಾವನೆಯನ್ನು ತೊಡೆದು ಹಾಕಲುಕಾರ್ಯೋನ್ಮುಖವಾಗಿರುವಾಗ ಬೆಕ್ಕಿನ ಬಿಡಾರ ಬೇರೆ ಎಂದು ಈ ಭೇದವನ್ನು ಚಿರಂತನವಾಗಿರಿಸುವಂತಹ ಕಾರ್ಯಕ್ರಮಗಳನ್ನು ಕೈಗೊಳ್ಳುವುದು ಸ್ವಯಂ ಹರಿಜನ—ಗಿರಿಜನರ ಹಾಗೂ ರಾಷ್ಟ್ರದ ಹಿತದೃಷ್ಟಿಯಲ್ಲಿ ಯೋಗ್ಯವಲ್ಲವೆಂದು ಅನಿವಾರ್ಯವಾಗಿ ಹೇಳಬೇಕಾಗಿದೆ. ಪೊಣೆಗಾರಿಕೆಯ ಸ್ಥಾನಗಳಲ್ಲಿರುವವರೇ ತಮ್ಮವರನ್ನು ಉಳಿದವರಿಗೆ ವಿರುದ್ಧವಾಗಿ ಎತ್ತಿಕಟ್ಟುವ ಅಪ್ರತ್ಯಕ್ಷ ಕಾರ್ಯದಲ್ಲಿ ತೊಡಗಿದರೆ, ಅದರ ಪರಿಣಾಮ ನೆಟ್ಟಗಾಗದು. ಒಂದು ಸಮಾಜವು ಅಥವಾ ವ್ಯಕ್ತಿಯು ಆತ್ಮವಿಶ್ವಾಸ ಮತ್ತು ಸ್ವಸಾಮರ್ಥ್ಯಗಳನ್ನು ಹೆಚ್ಚಿಸುವುದರಿಂದ ಮಾತ್ರ ಉದ್ಧಾರವಾಗಬಹುದೇ ಹೊರತು ಬೇರೆ ವಿಧಾನಗಳಿಂದಲ್ಲ. ಬೇರೆಯವರ ಸಹಾಯವು ದೊರೆತರೂ ಅದು ಅಲ್ಪಕಾಲಿಕವಾದುದು. ಬಾಡಿಗೆಯ ಆಭರಣದಂತಿರುವುದು. ಆದನ್ನೇ ನೆಚ್ಚಿಕೊಂಡು ಅದೇ ಮತ್ತೂ ಮತ್ತೂ ಬೇಕೆಂದು ಕೇಳಿಕೊಳ್ಳುವುದು ಯುಕ್ತವಲ್ಲ; ಮರ್ಯಾದೆಯೂ ಅಲ್ಲ.

ಪರಿಶ್ರಮವೇ ಉನ್ನತಿಗೆ ಹೇತುವಾಗಿದೆ. ಸ್ವಾವಲಂಬನೆ, ಆತ್ಮ ಗೌರವಗಳನ್ನು ಬಿಟ್ಟು ತಾವು "ಹಿಂದುಳಿದವರು" ಎಂಬ ಬೆಗಡೆ ಹಚ್ಚಿ ಕೂರುವಷ್ಟರಿಂದಲೇ ಯಾರೂ ಉದ್ಧಾರವಾಗಲಾರರು. ಇದಕ್ಕೆ ಹರಿಜನ—ಗಿರಿಜನರೂ ಹೊರತಾಗಿಲ್ಲ. ಈಗ ಸೇರಿದ ಸಮ್ಮೇಳನದಲ್ಲಿ ಈ ವರ್ಗಗಳ ರಾಜಕಾರಣದ ನಾಗರಿಕರು ಮತ್ತೆಷ್ಟು ಅಧಿಕಾರವನ್ನೂ ಅವಕಾಶವನ್ನೂ ಬೇಡಿಯಾರು; ಬೇಡುತ್ತಾರೆ. ಆದರೆ ಅಧಿಕಾರ ಅಥವಾ ಅವಕಾಶಗಳನ್ನು ಪಡೆದ ಮಾತ್ರಕ್ಕೆ ಯಾರ ಪ್ರಗತಿಯೂ ಆಗುವುದಿಲ್ಲ. ತಾವು 'ಇತರರಿಗೆ ಸರಿಸಮರು' ಎಂಬ ಭಾವನೆ ಮೂಡಬೇಕು; ಕರ್ತವ್ಯ ನಿರ್ವಹಣೆಯಲ್ಲಿ ದಕ್ಷರಾಗಬೇಕು. ಕೇವಲ ಅಧಿಕಾರ—ಹೆಚ್ಚುಗಳಿಗಾಗಿ ಹೋರಾಡುತ್ತ ನಡೆದರೆ, ಅವು ದೊರೆತರೂ ಅಕರ್ಮಣ್ಯವಾಗಿ ಪರಿಣಮಿಸುವ ವಾತಾವರಣವೂ ಹುಟ್ಟಬಂದೀತು. ಕೇವಲ ಜಾತಿಯನ್ನೇ ಹಿಂದುಳಿಯುವಿಕೆಯ ಮಾನದಂಡವಾಗಿ ತಿಳಿಯುವುದು ಮೂರ್ಖತನ; ಸಮಾಜವಾದಿ ಸಮಾಜರಚನೆಯ ದೀಕ್ಷೆ ಹೊತ್ತ ಭಾರತ ಈ ಮಾನದಂಡವನ್ನೇ ಮನ್ನಿಸುತ್ತ ಇನ್ನೂ ಮುಂದುರಿದರೆ, ಪರಿಸ್ಥಿತಿ ವಿಸಂಗತವಾದೀತು. ಸರ್ವರಿಗೂ ಸಮಾನಾವಕಾಶ ಸಮಾನಾಧಿಕಾರ, ಜಾತ್ಯತೀತ ರಾಷ್ಟ್ರವೆಂದು ಮುಂತಾಗಿ ಹೇಳಿ ಅವನ್ನು ಕಾಗದ ಪತ್ರಗಳಲ್ಲಿ ಮಾತ್ರ ಉಳಿಸಿದರೆ ಅದರಿಂದ ರಾಷ್ಟ್ರದಲ್ಲಿ ಅತೃಪ್ತಿ ಹರಡುವುದು ಖಂಡಿತ. ಆದುದರಿಂದ ಹರಿಜನ—ಗಿರಿಜನರು—ಮುಖ್ಯವಾಗಿ ಅವರ ನಾಯಕರು ಪರರನ್ನೇ ಹೊಂದಿಕೊಂಡಿರುವ ತಮ್ಮವರ ಮನೋವೃತ್ತಿಯನ್ನು ಆತ್ಮ ಪ್ರತ್ಯಯದತ್ತ ಪ್ರವರ್ತಿಸುವಂತೆಗಮಬೇಕೇ ಹೊರತು, ತಾವು ಹಿಂದುಳಿದವರು ಎಂಬ ಭಾವನೆಯನ್ನು ಮತ್ತೂ ಅವರಲ್ಲಿ ಬೆಳೆಸುವುದರಲ್ಲಿಯಲ್ಲ. ಏಕೆಂದರೆ, ಇನ್ನೂ ಬಹುಕಾಲ ಸಮಾಜದ ಒಂದು ಅಂಶಕ್ಕೆ ವಿಶಿಷ್ಟ ಮೂಲಭೂತ ರಕ್ಷಣೆನೀಡಲು ವಿಚಾರಶೀಲರು ಖಂಡಿತ ಒಪ್ಪಲಾರರೆಂಬುದು ಖಂಡಿತ.

ಅಳಿಯದ ಕುತ್ತ

ಸ್ವಾತಂತ್ರ್ಯ ಪ್ರಾಪ್ತಿಯ ನಂತರ ಕಾಂಗ್ರೆಸ್ಸಿನಲ್ಲಿ ಮೊದಲಿದ್ದ ನಿಸ್ವಾರ್ಥತೆ, ನಿಸ್ವಾರ್ಥತೆ, ಸೇವಾಭಾವನೆಗಳು ಹ್ರಾಸಗೊಳ್ಳುತ್ತ ಬಂದು ಕಾಂಗ್ರೆಸ್ಸಿಗರಲ್ಲಿ ಅಧಿಕಾರ ಮೋಹ ಹಾಗೂ ಇದನ್ನು ಸಾಧಿಸಲು ಗುಂಪುಕಟ್ಟುವ ಮನೋವೃತ್ತಿಯು ಬೆಳೆಯುತ್ತಿರುವುದು ಕಾಂಗ್ರೆಸ್ಸಿನ ಹಾಗೂ ಭಾರತದ ದುರದೃಷ್ಟ. ಡಾ॥ ಸಂಪೂರ್ಣಾನಂದರ ರಾಜಿನಾಮೆ, ಗುಪ್ತರ ಸಿಂಹಾಸನಾರೋಹಣದಿಂದ ಉತ್ತರ ಪ್ರದೇಶದಲ್ಲಿ ವಾತಾವರಣವನ್ನು ಹಸನುಗೊಳಿಸಿದೆವು ಎಂದು ತಿಳಿದಿದ್ದ ಕಾಂಗ್ರೆಸ್ ವರಿಷ್ಠರು ಮೊನ್ನೆನ ಅಲ್ಲಿನ ಕಾಂಗ್ರೆಸ್ ವಿಧಾನ ಮಂಡಳ ಸದಸ್ಯರ ವರ್ತನೆಯಿಂದ ನಾಚಿಗೆಪಟ್ಟುಕೊಳ್ಳುವಂತಾಗಿದೆ. 'ಹಿಂದಿನ ಮಂತ್ರಿಮಂಡಳ'ಯ ಸಮರ್ಥಕರೆಂಬ ಹೆಸರು ಪಡೆದ ಹಲವಾರು ಸದಸ್ಯರು ರಾಜ್ಯಪಾಲರ ಭಾಷಣವನ್ನು ಬಹಿಷ್ಕರಿಸಿ ಅಧಿವೇಶನದಲ್ಲಿ ಉಪಸ್ಥಿತರಿರಲಿಲ್ಲವೆಂಬುದರಿಂದ ಅಲ್ಲಿನ ವಾತಾವರಣದ ವಿಷವಾಯು ದೂರವಾಗಿಲ್ಲವೆಂದು ಹೇಳಬಹುದು. ಹಾಗೆಯೇ ಆಂಧ್ರ ಪ್ರದೇಶದಲ್ಲಿ ಕೂಡ ಇದೇ ಮಾದರಿಯ ಇನ್ನೂ ಕೆಲವು ರಾಜ್ಯಗಳ ಕಾಂಗ್ರೆಸ್ ಸದಸ್ಯರು ಅನುಸರಿಸಿದರೆಂದರೆ, ಅದೊಂದು ಸೋಂಕು ರೋಗವೇ ಆಗಿ ಪರಿಣಮಿಸುವುದು; ಇದನ್ನು ದೂರೀಕರಿಸುವ ಸಿದ್ಧಾಷಧಿ ಯಾವ ವರಿಷ್ಠರೆನಿಸಿಕೊಂಡವರಿಂದಲೂ ತಯಾರಿಯಾಗಲಾರದು. ಹೈದರಬಾದಿನಲ್ಲಿ ಕಾಂಗ್ರೆಸಿಗರನ್ನುದ್ದೇಶಿಸಿ ಮಾತನಾಡಿದ ಪ್ರಧಾನಿ ನೆಹರು ಈ ಗುಂಪು ಮನೋವೃತ್ತಿ, ಅವಿಶ್ವಾಸ ವ್ಯಕ್ತಪಡಿಸಲು ಅಂಕಿಕಗಳನ್ನು ಸಂಗ್ರಹಿಸುವುದು ಮೊದಲಾದ ಪ್ರವೃತ್ತಿಗಳು ದೊಷ್ಟವೆಂದು ಸಾರಿ, ಸೌಹಾರ್ದದಿಂದ ಭಿನ್ನಾಭಿಪ್ರಾಯಗಳನ್ನು ಬಗೆಹರಿಸಬೇಕೆಂದು ಹೇಳಿದ್ದಾರೆ ನಿಜವೇ ಆದರೆ, ಇದರಂತೆ ವರ್ತಿಸಲು ಸಿದ್ಧರಿರುವವರು ಯಾರು ಎಂಬುದಕ್ಕೆ ಮಾತ್ರ ಉತ್ತರ ದೊರೆಯಲಾರದು- ನಿಯಮಗಳು ಹೇಗೆಯೇ ಇರಲಿ, ಅವು ಮಾನವನಿಗಾಗಿರಬೇಕೇ ಹೊರತು ಮಾನವನು ನಿಯಮಗಳಿಗಾಗಿರುವುದಲ್ಲ. ಪ್ರಜಾಪ್ರಭುತ್ವದಲ್ಲಿ ಭಿನ್ನಾಭಿಪ್ರಾಯಗಳಿಗೆ, ಅವಿಶ್ವಾಸ ಪ್ರದರ್ಶನಕ್ಕೆ ಎಡೆಯಿಡೆ ಸರಿಯೇ; ಆದರೆ, ಪ್ರಜಾಸತ್ತೆಯ ಹೆಸರಿನಲ್ಲಿ ಕೊಳೆಜೆಹರಿಸುವುದು ಅನಪೇಕ್ಷಣೀಯ. ರಾಜಕಾರಣವು ಜೀವನತುಂಬ ಪ್ರವಹಿಸುವುದು ಯಾವುದಕ್ಕೂ ಶ್ರೇಯಸ್ಕರವೆಂದರೆ ಅಸಮಂಜಸವಾಗುವುದು. ರಾಷ್ಟ್ರದ ಹಿತವನ್ನು ಮಾತ್ರ ಬಯಸಿ ರಾಜಕಾರಣಿಗಳು ಕಾರ್ಯವೆಸಗಬೇಕು. ಇಲ್ಲಿ ವ್ಯಕ್ತಿಯ ಸ್ವಾರ್ಥ, ಸಂಕುಚಿತತೆ, ಅಧಿಕಾರ ವ್ಯಾಮೋಹ, ಗುಂಪಿನ ಮನೋಭಾವನೆ ಎಂದಿಗೂ ಸಲ್ಲದು. ಭಾರತವು ಅಖಂಡವಾಗಿರಬೇಕಾದಂತೆ ಕಾಂಗ್ರೆಸ್ ಪಕ್ಷವೂ ಅಖಂಡವಾಗಿರಬೇಕು. ಅದೇ ಆಡ್ಡ ದಾರಿ ಹಿಡಿದರೆ, ಆಗ ಬೇಲಿಯೇ ಹೊಲ ಮೇದಂತೆ. ದನಗಳು ವಿಧವಿಧವಿದ್ದರೂ ಹಾಲೆಲ್ಲಾ ಬಿಳಿವೇ ಆಗಿರುವಂತೆ ಕಾಂಗ್ರೆಸಿಗರೆಲ್ಲರೂ ಒಟ್ಟು ರಾಷ್ಟ್ರಹಿತದ ದೃಷ್ಟಿಯಿಂದ ಮುಂದುವರಿಯಬೇಕಾಗಿದೆ. ಇದಕ್ಕೆ ನಾಕಷ್ಟು ವರ್ಷಕ್ಕು ಬೀರುವ ಶಕ್ತಿಯಿಂದು ಯಾವ ಧುರೀಣರಲ್ಲಿದೆ?

ಕಡಿರುದ್ಯಾವರ— ಸ್ಥಳೀಯ ಪಂಚ್ಯಾತ, ಶಾಲೆಯ ಮಕ್ಕಳ ಕಲಾ ಉತ್ಸವವು ಬೆಳ್ಳಂಗಡಿ ಸರ್ಕಾರಿ ಪೋಸ್ಟ್‌ಮಾಸ್ಟರ್ ಶ್ರೀ ಅನಂತ ನಾರಾಯಣ ಭಟ್ಟರ ಅಧ್ಯಕ್ಷತೆಯಲ್ಲಿ ಕಳೆದ ತಾ. 15ರಂದು ಜರಗಿತು.

ಶಿರ್ವ— ಕಳೆದ ತಾ. 26ರಂದು ಸ್ಥಳೀಯ ಸ್ಕೌಟ್ ಮೇರೀಸ್ ಹ್ಯಾಸ್ಟೂಲಿನ ವಠಾರದಲ್ಲಿ ಸಿ. ಕೆ. ಪಾ.ಎಚ್. ಗೊನ್ಸಾಲ್ವಿಸರ ಅಧ್ಯಕ್ಷತೆಯಲ್ಲಿ ಪಂಚವಾರ್ಷಿಕ ಯೋಜನೆ ಮತ್ತು ಸಣ್ಣ ಉಳಿತಾಯ ಯೋಜನೆ ಕುರಿತು ಸಭೆ ಜರಗಿತು. ಶ್ರೀ ಎಸ್. ಅಂ ಚಿಪಳ್ಳೂಕರರು ಸ್ವಾಗತಿಸಿದ ಬಳಿಕ ಶ್ರೀಗಳಾದ ಕೆ. ಎಂ. ಹೊಳ್ಳ ಜಯರಾಮ ಸೆಟ್ಟಿ, ಡಾ. ಯು. ಕೆ. ಆಚಾರ್ಯರು ಭಾಷಣಮಾಡಿದರು

ಕಾಸರಗೋಡು ಮುನ್ಸಿಫ್ ಕೋರ್ಟಿನಲ್ಲಿ

R. E. P. 622/1960.

H. ಮಹಮದ್ ಬ್ಯಾರಿ— ಅರ್ಜಿದಾರ.

ಮತ್ತು

ಲೀಲಾವತಿ ಕೊಡಾ— ರೆಸ್ಪಾಂಡೆಂಟರು.

1. ಲೀಲಾವತಿ ಹ್ಸೊದುಗಾ ಸೋಮಸ್ವಾಮಿ, ಜಲಜಾಕ್ಷಿ ಮಗಳು.

2. ಶಕುಂತಲಾ. 1ನೇ ರೆಸ್ಪಾಂಡೆಂಟಳು ಲೀಲಾವತಿಯ ಮಗಳು—

ಉಡ್ಪಿ ಕ್ವಟಿಯಲ್ಲಿರುವವರು.

ಅರ್ಜಿದಾರನು ದಾಖ್ಲುಪಡಿಸಿದ ಎಲಂ ಯಿಸ್ತಿಹಾರು ಮಂಜೂರಾತಿಯ ಬಗ್ಗೆ ತಾರೀಕು 27—2—1961ಕ್ಕೆ ಯಿಟ್ಟಿರುತ್ತದೆ.

Sd/— P. Ahmad

Advocate for Petitioner

ಕಾಸರಗೋಡು. 3—2—1961

ಅಲ್ಲಲ್ಲಿಯ ಸುದ್ದಿಸಾರ

ಕಡಿಯಾಳಿ ಮಹಿಷಮರ್ದಿನೀ ಯಕ್ಷಗಾನ ಸಂಘದ ವಾರ್ಷಿಕೋತ್ಸವವು ಕಳೆದ ತಾ. 23ರಂದು ಶ್ರೀ ಕೆ. ಪ್ರಭಾಕರ ಪೈ, ಬಿ. ಯಸ್‌ಸಿ. ಇವರ ಅಧ್ಯಕ್ಷತೆಯಲ್ಲಿ ಜರಗಿತು. ಕೆ. ಜಗನ್ನಾಥ ಸೆಟ್ಟಿರಿಂದ ಸ್ವಾಗತ, ದೇವರಾಯ ಪ್ರಭುಗಳಿಂದ ವರದಿ ವಾಚನ ಶ್ರೀ ಸೀತಾನದಿ ಗಣಪಯ್ಯ ಸೆಟ್ಟಿರಿಂದ ಭಾಷಣಗಳಾದುವು. ಅಧ್ಯಕ್ಷರು ಯಕ್ಷಗಾನ ಕಲೆಯ ಕುರಿತು ಭಾಷಣವಿತ್ತ ಮೇಲೆ ಉಡುಪಿ ಯಕ್ಷಗಾನ ಕಲಾ ಮಂಡಲದವರಿಂದ ಯಕ್ಷಗಾನ ಕಾಲಕ್ಷೇಪ ನಡೆಯಿತು.

ಶಿರ್ವಾಡಿ—ಹೋಲಿ ಏಂಜಲ್ಸ್ ಹಾ. ಏ. ಶಾಲೆಯಲ್ಲಿ ಪ್ರಜಾಪ್ರಭುತ್ವ ದಿನಾಚರಣೆಯು ಸರ್ವೇಯರ್ ಎಲಿಯಾಸ್ ಪಿಂಟೋರವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀಗಳಾದ ಪೆಲಿಕ್ಸ್ ಡೇಸ, ರಾಮ ಬೇಕಲ್, ಪ್ರೇಮಲತಾ, ಶಿರ್ವಾಡಿ ವಿಲಿಯಂ ಪಿಂಟೊ, ಸಿಸ್ಟರ್ ಕೊಚಿಟಾ ಮೊದಲಾದವರು ಮಾತನಾಡಿದರು. ಬಳಿಗ್ಗೆ ಡಾ| ರಾಮ ಸೆಟ್ಟರು ಧ್ವಜವನ್ನೇರಿಸಿದರು.

ಪರ್ಕಳೆ— ಗಣರಾಜ್ಯ ದಿನದ ರಾತ್ರಿ ಸ್ಥಳೀಯ ಬಾಸೆಲ್ ಮಿಶ್ಶನ್ ಹಾ. ಏ. ಶಾಲೆಯಲ್ಲಿ ಶ್ರೀ ಬಿ. ಲಕ್ಷ್ಮಣದೇವ ವಿದ್ಯಾರ್ಥಿಯವರಾ ರಾಮ ಪಟ್ಟಾಭಿಷೇಕವೆಂಬ ಪರಿಕಥಾ ಕಾಲಕ್ಷೇಪವನ್ನು ಹಿರಿಯಡ್ಕ ಪಂಚಾಯಿತ ಶ್ರೇಯಾಮೇಸ್ ಶ್ರೀ ಪಿ. ಗೋವಿಂದರಾಜ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿಸಿದರು.

ಬೆಳ್ಳಣ್ಣು—ಸ್ಥಳೀಯ ಬೋರ್ಡ್ ಪ್ರೈಮರಿ ಸ್ಕೂಲಿನ ವರ್ಷಾಂತ್ಯೋತ್ಸವವು ತಾ. 4ರಂದು ಕಾರ್ಕಳ ತಾಲೂಕು ಬೋರ್ಡಿನ ಅಧ್ಯಕ್ಷ ಶ್ರೀ ಎನ್. ಮೋಹನದಾಸ ಅಡ್ಯಂತಾಯ ಇವರ ಅಧ್ಯಕ್ಷತೆಯಲ್ಲಿ ವಿವಿಧ ಕಾರ್ಯಕ್ರಮಗಳಿಂದ ಯಥಾಸಾಂಗವಾಗಿ ನೆರವೇರಿತು.

ಅಂಬಲಪಾಡಿ—ಸ್ಥಳೀಯ ಶ್ರೀ ಲಕ್ಷ್ಮೀ ಜನಾರ್ದನ ಯಕ್ಷಗಾನ ಕಲಾ ಮಂಡಳಿಯ ವಾರ್ಷಿಕೋತ್ಸವವು ಶ್ರೀ ಎ. ಜೆ. ಅಜೈಯವರ ಅಧ್ಯಕ್ಷತೆಯಲ್ಲಿ ತಾ. 28-1-61 ರಂದು ಜರಗಿತು. ಸಂಘದ ಕಲಾವಿದರು ವಿದ್ಯುನ್ಮತಿ ಕಲ್ಯಾಣ ಎಂಬ ಯಕ್ಷಗಾನ ಬಯಲಾಟವನ್ನು ಆಡಿ ತೋರಿಸಿದರು.

ಮಣಿಪಾಲ— ಸ್ಥಳೀಯ ಬುನಾದಿ ಪ್ರಾಥಮಿಕ ಶಾಲೆಯಲ್ಲಿ ಪ್ರಜಾರಾಜ್ಯ ದಿನಾಚರಣೆಯು ಶ್ರೀ ಎಸ್. ಕೆ. ಕುಡುವರ ಹಿರಿತನದಲ್ಲಿ ವಿವಿಧ ಕಾರ್ಯಕ್ರಮಗಳಿಂದ ನೆರವೇರಿತು.

ಉಡುಪಿಯ ಶ್ರೀ ಬ್ರಹ್ಮ ಬೈದರ್ಕಳೆ ಧೂಮಾವತಿ ಯಕ್ಷಗಾನ ಸಂಘದ ಕಾರ್ಯಾಲಯದಲ್ಲಿ ಪ್ರಜಾರಾಜ್ಯ ದಿನಾಚರಣೆಯು ಶ್ರೀ ಯು. ವಾಸುದೇವ ಆಚಾರ್ಯರ ಹಿರಿತನದಲ್ಲಿ ವಿವಿಧ ಕಾರ್ಯಕ್ರಮಗಳಿಂದ ಜರಗಿತು. ಶ್ರೀ ಕೃಷ್ಣ ರಾಯಭಾರಿ ಎಂಬ ಯಕ್ಷಗಾನಕಾಲಕ್ಷೇಪವು ನೆರವೇರಿತು.

ಉಡು. ಡಿ. ಮುಂ ಕೋರ್ಟಿನಲ್ಲಿ

O. S. No 223/60

R. E. P. No 657/60

ಪೊಳಲಿ ರಾಮಕೃಷ್ಣ ಭಟ್ಟ —ಅರ್ಜಿದಾರ.

ಮತ್ತು

ಜಯರಾಮ ಪಡಿಯಾರ —ಯೆದ್ರಿ.

ಯಿವರೊಳಗೆ.

ಗಾರ್ಡಿನಿಶಿಂ:—ಕನುಲಾಕ್ಷ ಪಡಿಯಾರ—ಯೆದ್ರಿ ಜಯರಾಮ ಪಡಿಯಾರನ ತಮ್ಮ ಕೆಳ ಅರ್ಕಳಬೆಟ್ಟು ಗ್ರಾಮ.

ಮೇಲ್ಕಂಡ ಅಮ್ಲಜ್ಞಾರಿಯಲ್ಲಿ ಸದ್ರಿ ಗಾರ್ಡಿನಿಶಿಗೆ ಆಗತಕ್ಕದ್ದು ಸ್ರೊ ನೊಟೀಸು ತಾ. 27—2—61ಕ್ಕೆ ಇಟ್ಟರುವದ್ರಿಂದ ಸದ್ರಿ ಎದ್ರಿಯು ತನ್ನ ಆಕ್ಷೇಪ ಹೇಳುವದನ್ನು ಸದ್ರಿ ಕೋರ್ಟು ಮುಂದೆ ಹಾಜ್ರಾಗಿ ಜ್ಯಾಹೀರು ಮಾಡಿಕೊಳ್ಳತಕ್ಕದ್ದು

P. Padmanabha Rao,
Vakil for Petitioner.

Dated 7—2—1961.

ಮಂದಾರ್ತಿ—ಸ್ಥಳೀಯ ಶ್ರೀ ದುರ್ಗಾ ಪರಮೇಶ್ವರಿ ದೇವಸ್ಥಾನದಲ್ಲಿ ವಾಡಿಕೆಯಂತೆ ಇದೇ ತಾ. 19ರಿಂದ 15ರ ವರೆಗೆ ಉತ್ಸವಗಳು ಜರಗಲಿರುವುವೆಂದೂ ತಾ. 18ಕ್ಕೆ ರಥೋತ್ಸವ ನೆರವೇರಲಿರುವುದೆಂದೂ ಸರ್ವರೂ ಬರಬೇಕೆಂದೂ ಎಕ್ಸಿಕ್ಯೂಟಿವ್ ಆಫೀಸರ್ ಶ್ರೀ ಉಮೇಶ ರಾಯರು ವಿನಂತಿಸುತ್ತಾರೆ.

ಹಂಗಾರಕಟ್ಟೆ—ಡಿ. ಎ. ಎನ್. ಪೆಬ್ಬಾರ್ ಸ್ಮಾರಕವಾಗಿ ಕಟ್ಟಿಸಲಾದ ಅಶೋಕ ಚಕ್ರ ಸಿಂಹಾಂಕಿತ ಧ್ವಜ ಸ್ತಂಭವನ್ನು ಜನವರಿ ತಾ. 26ರಂದು ಶ್ರೀ ಮುಕುಂದ ರಾವ್ ಎಮ್. ಎಲ್. ಸಿ. ಇವರು ಉದ್ಘಾಟಿಸಿದರು. ಸಭಾಧ್ಯಕ್ಷ ಶ್ರೀ ಕೆ. ಎಲ್. ಕಾರಂತರು ಧ್ವಜಾರೋಹಣಗೈದರು. ಬಳಿಕ ಸಾರ್ವಜನಿಕ ಸಭೆ ಜರಗಿದಾಗ ಸಮಿತಿಯ ಅಧ್ಯಕ್ಷ ಶ್ರೀ ಪಿ. ಜಿ. ವಿ ಚಡಗರು ಸ್ವಾಗತಿಸಿದರು, ಕಾರ್ಯದರ್ಶಿ ಶ್ರೀ ಎ. ಎಸ್. ಪೆಬ್ಬಾರ್ ಇವರು ವರದಿಯನ್ನು ಓದಿದರು ಶ್ರೀಗಳಾದ ಸೀತಾನದಿ ಗಣಪಯ್ಯ ಶೆಟ್ಟಿ, ಮೋನಪ್ಪ ಶೆಟ್ಟಿ ಇವರು ಭಾಷಣವಿತ್ತರು. ಅಧ್ಯಕ್ಷರು ದಿ ಪೆಬ್ಬಾರರ ಜೀವನದ ಕುರಿತು ಮಾತನಾಡಿ ಅವರಿಗೆ ಸ್ಮಾರಕ ರಚಿಸಿದುದು ಶ್ಲಾಘನೀಯವೆಂದರು.

ಹಂಗಾರ ಕಟ್ಟೆ ಕರ್ನಾಟಕ ಸಂಘದವರು ಕಳೆದ ತಾ 26ರಂದು ಮುದ್ದಣ ಜಯಂತಿಯನ್ನೂ ಗಣರಾಜ್ಯ ದಿನವನ್ನೂ ಅತಿಸ್ಪಂಬ್ರಮದಿಸಿದರು. ಶ್ರೀ ಕೆ ನರಸಿಂಹ ಮೂರ್ತಿ ಇವರ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ಜರಗಿಸಿದರು. ಶ್ರೀ ಎ. ಸದಾನಂದ ಹೆಬ್ಬಾರರಿಂದ ಸ್ವಾಗತ. ಶ್ರೀ ಎ. ಶ್ರೀನಿವಾಸ ತುಂಗ ಇವರಿಂದ ವರದಿ ವಾಚನ ನಡೆದ ಬಳಿಕ ಮುದ್ದಣ ಕವಿಯ ಸಾಹಿತ್ಯದ ಕುರಿತು ಶ್ರೀ ಎ ಕೃಷ್ಣ ಉಡುಪರು. ಶ್ರೀ ಎ. ಸುಬ್ರಾಯ ಆಚಾರ್ಯರೂ ಭಾಷಣ ಮಾಡಿದರು. ಶ್ರೀ ರ ಶ್ರೀರಾಮ ಐತಾಳರು ರಾಮ ಪಟ್ಟಾಭಿಷೇಕದ ಕೆಲವು ಪದ್ಯಗಳನ್ನು ಹಾಡಿದರು. ಅಧ್ಯಕ್ಷರು ಕರ್ನಾಟಕ ಸಂಘಗಳು ಮಾಡಬಹುದಾದ ಕೆಲಸಗಳನ್ನು ವಿವರಿಸಿ ಈ ಸಂಘದ ಕಾರ್ಯಕಲಾಪಗಳನ್ನು ಶ್ಲಾಘಿಸಿದರು. ಬಳಿಕ ಶ್ರೀ ಜನ್ಮಾದಿ ನಾರಾಯಣ ಸೆಟ್ಟಿರಿಂದವಿನೋದ ಸಂಘದ ಕಲಾವಿದರಿಂದ ನಾಟಕಾಭಿನಯವಾಯಿತು.

ಹಂಗಾರಕಟ್ಟೆ ಪ್ರಾಥಮಿಕ ಶಾಲೆಯ ವಾರ್ಷಿಕೋತ್ಸವವು ಕಳೆದ ತಾ 23 ರಂದು ಶ್ರೀ ಪಿ. ಆನಂದಕುಂದ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಎ ಸದಾನಂದ ಹೆಬ್ಬಾರರಿಂದ ವರದಿ ವಾಚನ, ಶ್ರೀ ಬಿ. ರಘುರಾಮ ಸೆಟ್ಟಿರಿಂದ ಸ್ವಾಗತ ವಾಚನ, ಶ್ರೀ ವೈ ಗೋಪಾಲ್ ಇವರಿಂದ ಬಹುಮಾನ ವಿತರಣೆಯಾಯಿತು ಅಧ್ಯಕ್ಷರ ಭಾಷಣಾನಂತರ ಮನರಂಜನ ಕಾರ್ಯಕ್ರಮಗಳಾದುವು. ಬೆಳಿಗ್ಗೆ ಶ್ರೀ ಮುದ್ದಣ್ಣ ಶೆಟ್ಟಿರಿಂದ ಧ್ವಜಾರೋಹಣ, ಬಾಳೆ ಕುದರು ಶ್ರೀ ಮಂಜಪ್ಪರವರಿಂದ ಸಿಹಿ ತಿಂಡಿ ವಿತರಣೆ, ಮಕ್ಕಳ ವಿವಿಧ ಸ್ಪರ್ಧೆಗಳಿದ್ದವು.

ಸುರತ್ಕಲ್— ಮುಕ್ತಮಿತ್ರ ಸಟ್ಟ ಮೊಗವೀರ ರಾತ್ರಿ ಶಾಲೆ ಮತ್ತು ಅಗ್ನಿದಕರಿ ಹಾ. ಏ. ಶಾಲೆಗಳ ಒಡನಾಟದಿಂದ ಮುಖ್ಯೋಪಾಧ್ಯಾಯರ ಅಧ್ಯಕ್ಷತೆಯಲ್ಲಿ ಪ್ರಜಾರಾಜ್ಯ ದಿನಾಚರಣೆಯು ಯಥಾಸಾಂಗವಾಗಿ ನೆರವೇರಿತು

ಮುಕ್ತ ಮಿತ್ರಸಟ್ಟ ಗಂಗಯ ಸ್ಮಾರಕ ಫಂಡಿನವರ ರಾಮ ಭಜನಾ ಮಂಡಳಿಯ ವಾರ್ಷಿಕ ಭಜನಾ ಸಪ್ತಾಹವು ಕಳೆದ ತಾ 29ರಂದು ಮಂಗಳೋತ್ಸವದೊಂದಿಗೆ ನೆರವೇರಿತು.

ಶಿವಾದ್ವೈತ ತತ್ತ್ವ ಪ್ರಚಾರಕ ಸಮಿತಿ, ಗಿರಿಯೂರು- ಇದರ ವಾರ್ಷಿಕೋತ್ಸವ ಉದ್ಘಾಟನೆಯನ್ನು ತಾ. 5ರಂದು ರಾಜ್ಯಪಾಲ ಶ್ರೀ ಮನ್ಮಹಾರಾಜ ಶ್ರೀ ಜಯಚಾಮರಾಜ ಒಡೆಯರ್ ಬಹದ್ದೂರ್ ಇವರು ನೆರವೇರಿಸಿದರು. ಸುತ್ತೂರು ವೀರ ಸಿಂಹಾಸನಾಧೀಶ್ವರ ಜಗದ್ಗುರು ಶ್ರೀ ಶಿವರಾತ್ರೀಶ್ವರ ಮಹಾಸ್ವಾಮಿಗಳವರು ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿದ್ದರು ಸಮಿತಿಯ ಸಂಸ್ಥಾಪಕರಾದ ಭಾಷಾಚಾರ್ಯ ಶ್ರೀ ಸದಾಶಿವಾಚಾರ್ಯ ಮಹಾಸ್ವಾಮಿಗಳವರಿಗೆ ವಿಭೂತಿ ಗ್ರಂಥವನ್ನು ಅರ್ಪಿಸಲಾಯ್ತು. ಅನಂತರ ಪ್ರಾಂತೀಯ ವೀರಶೈವ ಮಹಾಸಭೆ ಜರಗಿತು. ತಾ 6 ರಂದು ಜಿಲ್ಲಾ ಸಾಹಿತ್ಯ ಸಮ್ಮೇಳನವೂ ತಾ. 7ರಂದು ಮಹಿಳಾ ಗೋಷ್ಠಿ ಮತ್ತು ಸಮಾರೋಪ ಸಭೆ ಜರಗಿತು.

ಉಡುಪಿ ಹೆಮ್ಮಕ್ಕಳ ಸರಕಾರೀ ಸೆಕೆಂಡರಿ ಮತ್ತು ಟ್ರೈನಿಂಗ್ ಶಾಲೆ= ವರ್ಧಂತಿಯು ತಾ 4ರಂದು ಡಿ| ಮುಸ್ಸೀಫ್, ಶ್ರೀ ಜಿ. ಎಸ್. ನಾಗಮೋತಿ ಇವರ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ನೆರವೇರಿತು. ಮುಖ್ಯಾಧ್ಯಾಪಿಕೆ ಶ್ರೀಮತಿ ಎಲ್. ಜಿ. ಭಂಡಾರಿ ಇವರಿಂದ ವರದಿವಾಚನ ಕುಮಾರಿ ಕೃಷ್ಣಾ ಟ್ಯಾ ಭಂಡಾರ್ ಕಾರ್ ಇವರಿಂದ ಸ್ವಾಗತ ವಾಚನ ಶ್ರೀಮತಿ ಜಿ. ಎಸ್ ನಾಗಮೋತಿಯವರಿಂದ ಬಹುಮಾನ ವಿತರಣೆಗಳಾದ ಮೇಲೆ ಅಧ್ಯಕ್ಷರ ಸಂದರ್ಭೋಚಿತ ಭಾಷಣವಾಯಿತು. ಬಳಿಕ ವಿವಿಧ ಮನರಂಜನಾ ಕಾರ್ಯಕ್ರಮಗಳಾದುವು.

ಮರುದಿನ ಹಳೆ ವಿದ್ಯಾರ್ಥಿ ದಿನಾಚರಣೆಯು ಶ್ರೀಮತಿ ಲೀಲಾ ಬ್ಯಾ ಕಾಮತರ ಅಧ್ಯಕ್ಷತೆಯಲ್ಲಿ ವಿವಿಧ ಕಾರ್ಯಕ್ರಮಗಳಿಂದ ಜಯಶೀಲವಾಗಿ ನೆರವೇರಿತು.

ದಿ| ಪಾರ್ಥಸಾರಥಿ

ಸಜ್ಜನರನ್ನು ವಿಧಿ ಬಹುಬೇಗ ತನ್ನತ್ತ ಕರೆದೊಯ್ಯುತ್ತದೆ; ಅವರಿಗೆ ಈ ಭೂಮಿ ಯೋಗ್ಯವಿಲ್ಲವೆಂಬ ಮಾತು ಮದ್ರಾಸಿನ ಆಂಗ್ಲ ದೈನಿಕ 'ದಿ ಹಿಂದು'ವಿನ ಪ್ರಕಾಶಕ ಪಾರ್ಥಸಾರಥಿಯವರ ನಿಧನದಿಂದ ಮತ್ತಷ್ಟು ಪುಟಗೊಂಡಿದೆ. ತಮ್ಮ ೩೪ ವರ್ಷಗಳ ಪ್ರಾಯದಲ್ಲಿಯೇ ಇವರು ಪತ್ರಿಕೋದ್ಯಮದಲ್ಲಿ ಗಣಿಸಲ್ಪಟ್ಟವರಾದ ಸ್ಥಾನವನ್ನು ಗಳಿಸಿದ್ದಾರೆ- ಎರಡನೆಯ ಎಲಿಜಬೆಥರ ಕಿರೀಟಾರೋಹಣ ಸಮಾರಂಭದಲ್ಲಿ ಇವರು ಪತ್ರಿಕಾ ಪ್ರತಿನಿಧಿಯಾಗಿ ಭಾಗವಹಿಸಿದ್ದರು. ಅಮೆರಿಕೆಯು ನೀಡಿದ್ದ ಆಮಂತ್ರಣವನ್ನು ಮನ್ನಿಸಿ ಅಲ್ಲಿಗೂ ತೆರಳಿದ್ದರು. ಅಂತಾರಾಷ್ಟ್ರೀಯ ಪತ್ರಿಕಾ ತರ ಸಂಘದ ಸದಸ್ಯರಾಗಿದ್ದರು. ದಿ| ಪಾರ್ಥಸಾರಥಿಯವರಿಗೆ ಆಟ ಓಟಗಳಲ್ಲಿಯೂ ಆಸಕ್ತಿಯು ತೀವ್ರವಾಗಿತ್ತು; ಎಂತಲೇ ಇವರ ಅಂತಿಮ ಯಾತ್ರೆಯಲ್ಲಿ ಮದ್ರಾಸಿದ ವಿವಿಧ ಕ್ರೀಡಾಸಂಸ್ಥೆಗಳವರೂ ಭಾಗವಹಿಸಿದ್ದರು. ಎಳೆಯ ಪ್ರಾಯದಲ್ಲೇ ನುಂಗಿದ ವಿಧಿಯು ಮಹಾ ಅನ್ಯಾಯವನ್ನೇ ಮಾಡಿತು; ಆದರೆ, ಯಾರಕೈಯಲ್ಲೇನಿದೆ?

ಅಧಃಪತನದ ಕುರುಹು

"ನೀರಿದ್ದಲ್ಲಿ ಕೆಸರು" ಇದೆಯೋ ಇಲ್ಲವೋ ಎಂಬುದು ಈ ಸ್ಪುತ್ನಿಕ್ ಯುಗದಲ್ಲಿ ಹೇಳುವುದು ಕಷ್ಟ. ಆದರೆ, 'ಹುಡುಗಿಯರಿರುವಲ್ಲಿ ಹುಡುಗರಿದ್ದಾರೆ' ಎಂಬುದಂತೂ ನೂರಕ್ಕೆ ನೂರರಷ್ಟು ಸತ್ಯ. ಮುಖ್ಯವಾಗಿ ಕಾಲೇಜುಗಳಲ್ಲಿ ಕಲಿಸಿ ಕೊಟ್ಟರೂ ಬಾರದ ವಿದ್ಯೆ ಒತ್ತಟ್ಟು, ಕಲಿಸದೆ ಬರುವ ಪ್ರೇಮ ಪೊತ್ತಟ್ಟು. ಬೇಶಿಸ್ತಿನಿಂದ ವರ್ತಿಸಿ ಮಕ್ಕಳೆಯರನ್ನು ಉಪದ್ರವಿಸುವ ತಂಡ ಹಲವಾದರೆ, ಅವರನ್ನು ಹಿಂಸಿಸುವ ವರ್ಗವೂ ಇಲ್ಲವೆಂದಿಲ್ಲ ಜಟ್ಟಿ ಅಪರದಲ್ಲಿ ಒಬ್ಬ ಕಾಲೇಜು ಹುಡುಗಿಯ ಮೇಲೆ ಇಬ್ಬರು ಕಾಲೇಜು ತರುಣರು ಬಲಾತ್ಕಾರ ಪೇರಾತೊಡಗಿದುದು ಆಕೆಯು ಮೃತ್ಯುಮುಖಿಳಾದುದು—ಇದಕ್ಕೆ ಪುಷ್ಟಿಯೊಯುತ್ತದೆ. ಆಕೆಯು ಹೆಸರಿಗೆ ಆತ್ಮಹತ್ಯೆ ಮಾಡಿಕೊಂಡರೂ ಅದರ ಮೂಲಕಾರಣ ಮರ್ಯಾದೆ ತರುವಂತಹದಾಗಿರಲಾರದು. ನಾಗರಿಕತೆಯು ಬೆಳೆಯುತ್ತ ಹೋದಂತೆ ಇಂತಹ ಪ್ರಸಂಗಗಳೂ ಹೆಚ್ಚುತ್ತ ಬರುತ್ತಿರುವುದು ನಮ್ಮ ನೈತಿಕ ಅಧಃಪತನವನ್ನು ತೋರಿಸುವುದಿಲ್ಲವೆ?

ಚಂದಾದಾರರಲ್ಲಿ ವಿನಂತಿ.

'ನವಯುಗ'ದ ಚಂದಾ ಹಣ ಬಾಕಿ ಇರುವ ಚಂದಾದಾರರು ದಯಮಾಡಿ ತಮ್ಮ ಚಂದಾಹಣವನ್ನು ಈಗಲಾದರೂ ಆದಷ್ಟು ತ್ವರ್ಯ ಕಳುಹಿಸಿಕೊಡುವಂತೆ ಕೇಳಿ ಕೊಳ್ಳುತ್ತೇವೆ.

ಚಂದಾ ಹಣವನ್ನು ಸಿಂಡಿಕೇಟ್ ಬ್ಯಾಂಕಿನ ಯಾವದೇ ಶಾಖೆಯಲ್ಲಿ ಯಾವ ಖರ್ಚೂ ಯಿಲ್ಲದೆ ನವಯುಗದ ಲೆಕ್ಕಕ್ಕೆ ಜಾಮಾ ಮಾಡಬಹುದು. ಇದೇ ತಾ. 15ರೊಳಗೆ ಚಂದಾದಾರರಿದ್ದರೆ ಪತ್ರಿಕೆಯನ್ನು ಕ್ರಮಶಃ ವಿ. ಪಿ. ಮಾಡಿಕಳುಹಿಸುವೆವು. ಅದನ್ನಾದರೂ ಸ್ವೀಕರಿಸಿ ಸಹಕರಿಸುವಂತೆ ವಿನಂತಿ.

ಮೆನೇಜರ್.

ಕರ್ನಾಟಕ ಸಂಘ(ಉಡುಪಿ)ದ ಮೂರು ಪ್ರಕಟಣೆಗಳು ಓದಲೇ ಬೇಕಾಗಿರುವ ನವೀನ ಪುಸ್ತಕಗಳು!

೧. ಚಂದ್ರಲೋಕಕ್ಕೆ ಪ್ರಯಾಣ

ಲೇಖಕರು: ಯು. ರಾಘವೇಂದ್ರ ಆಚಾರ್ಯ, ಎಂ. ಎ.

ಆಧುನಿಕ ಪ್ರಪಂಚದ ಮಸ್ತಕ್ಕರವಾದ ಆಂದೋಲನಗಳು, ಪ್ರಪಂಚವನ್ನೆಲ್ಲಾ ಅಲುಗಾಡಿಸುತ್ತಿರುವ ಆರ್ಥಿಕ, ರಾಜಕೀಯ ಚಳುವಳಿಗಳು, ಅವುಗಳ ಹಿಂದಿರುವ ತತ್ತ್ವಗಳು, ಅವುಗಳಿಗೆ ಮಾನವನ ಪ್ರತಿಕ್ರಿಯೆ ಇವನ್ನೆಲ್ಲಾ ಗಮನಿಸಿ ರಚಿಸಿರುವ, ನಮ್ಮಲ್ಲಿ ವಿಚಾರರಕ್ತ ಬೆಳೆಯಲು ನೆರವಾಗುವ ವೈಜ್ಞಾನಿಕ ಗ್ರಂಥ.

೨. ಸಾಮಾನ್ಯ ರೋಗಗಳು

ಲೇಖಕರು: ಡಾ| ಕೆ. ಎಲ್. ಐತಾಳ, ಎಂ. ಬಿ. ಬಿ. ಎಸ್.
ಉಡುಪಿ ನಗರ ಸಭಾಧ್ಯಕ್ಷರು.

ಜನರಿಗೆ ತಗಲುವ ಹಲವಾರು ಸಾಮಾನ್ಯ ರೋಗಗಳ ಹುಟ್ಟು, ಕಾರಣ ಮತ್ತು ನಿವಾರಣೋಪಾಯಗಳನ್ನು ಸೂಚಿಸುವ ಅತ್ಯುಪಯುಕ್ತ ಪುಸ್ತಕ.

೩. ಭೌತಿಕ ದರ್ಶನ

ಲೇಖಕರು: ಬಡೆಕ್ಕಿಲ ಕೃಷ್ಣ ಭಟ್ಟ, ಎಲ್‌ಎಲ್.ಬಿ.

ಸಜ್ಜನರ, ವಿದ್ವಜ್ಜನರ, ವಿಜ್ಞಾನಿಗಳ ಅಭಿಮತವನ್ನು ಸಂಗ್ರಹಿಸಿ ಬರೆದ ಭೌತಿಕ ದರ್ಶನದ ಸ್ಥೂಲ ಪರಿಚಯ.

ಪ್ರತಿಯೊಂದು ಪುಸ್ತಕದ ಬೆಲೆ ಬರೇ ಒಂದು ರೂಪಾಯಿ.

ರೂ ೩=೫೫ನ್ನು ಮನಿಯಾರ್ಡರು ಮಾಡಿದರೆ ಮೂರೂ ಪುಸ್ತಕಗಳನ್ನು ಬುಕ್ ಪೋಸ್ಟ್‌ನಿಂದ ಕಳಿಸಬಹುದು.

ಪುಸ್ತಕ ವ್ಯಾಪಾರಿಗಳಿಗೆ ವಿಶೇಷ ಸವಲತ್ತುಗಳಿವೆ.

ವಿಚಾರಿಸಿರಿ:

ನವಭಾರತ ಪುಸ್ತಕ ಭಂಡಾರ, ಉಡುಪಿ.

ಕ್ಷೇತ್ರ ಪರಿಚಯ

(೫ನೇ ಪುಟದಿಂದ)

ಸಮುದ್ರ ತಲಪುವಂತೆ ಮೆಟ್ಟಲುಗಳಿವೆ. ಶಂಖಗಜಗಳ ದೂರದಲ್ಲೇ ನೀರಿದೆ. ಬಟ್ಟೆ ಕಿತ್ತು ಸ್ನಾನ ಮಾಡುವವರೂ ಹೆಚ್ಚಿನವರು. ಗೋಡೆಯ ಮೇಲೆ ನಿಂತು ಸಮುದ್ರದ ಶೋಭೆಯನ್ನು ನೋಡುತ್ತ ಬಹು ಹೊತ್ತು ಕಳೆದ ನಂತರ ಪ್ರಮೂದವಾಯಿತೆಂಬುದರ ಅರಿವಾಗಿ ಮಂದಿರದತ್ತ ಕಂಬಿ ಕೀಳತೊಡಗುವೆವು.

ಈಗಿನ ಸೋಮನಾಥ ದೇವಾಲಯವು ಮೊದಲ ದೇಗುಲವಿದ್ದಲ್ಲಿಯೇ ಇದೆ. ಸರಕಾರ ಪಟೇಲರು ೧೮—೧೧—೧೯೪೭ ರಂದು ಇಲ್ಲಿ ಬಂದಿದ್ದರು! ಅವರು ಸೋಮನಾಥವನ್ನು ಮನಃ ಪ್ರತಿಷ್ಠಾಪನೆ ಮಾಡುವ ಹೊಣೆ ಹೊತ್ತಿದ್ದರು. ಹಳೆಯ ಮಂದಿರವನ್ನು ಅಗೆದು ಅದೇ ಸ್ಥಾನದಲ್ಲಿ ೮—೫—೧೯೬೦ರಲ್ಲಿ ಹೊಸ ಮಂದಿರ ಶಿಲಾನ್ಯಾಸವು ಇಡಲ್ಪಟ್ಟಿತು. ೧೧—೫—೧೯೫೧ರಂದು ರಾಷ್ಟ್ರಪತಿ ರಾಜೇಂದ್ರ ಪ್ರಸಾದರು ಲಿಂಗ ಪ್ರತಿಷ್ಠೆ ಮಾಡಿದರು.

ಸೋಮನಾಥನ ಮಂದಿರವು ಅರನೆಯ ಬಾರಿಗೆ ಸುಮಾರು ೧೦ ವರ್ಷಗಳಲ್ಲಿ ಸಾಸಾಮಾನ್ಯ ರಚನೆಗೊಂಡಿದೆ. ಲಕ್ಷಾಂತರ ರೂಪಾಯಿಗಳ ವೆಚ್ಚದಿಂದಾಗಿ ಇದರ ಮುಂಭಾಗವು ಪೂರ್ಣಗೊಂಡಿದೆ. ಇನ್ನು ಒಳಭಾಗ ಸ್ವಲ್ಪ ಬಾಕಿಯಿದೆ. ಇದನ್ನು ಮುಗಿಸುವುದಕ್ಕಾಗಿ ಲಕ್ಷ ರೂಪಾಯಿ ಕೂಡಿಸುವ ಪ್ರಯತ್ನ ನಡೆದಿದೆ.

ಹಳೆಯ ಮಂದಿರವು ಹೇಗಿತ್ತುವೆಂಬುದನ್ನು ಸಂಶೋಧನೆ ನಡೆಸಿ ವಿಜ್ಞಾಂಸರು ಕಂಡುಹಿಡಿದಿರುವರೆಂದೂ ಹೊಸ ಕಟ್ಟಡವು ಸಂಪೂರ್ಣ ಹಳೆಯ ಮಾದರಿಯಿಂದ ಆಗುವುದೆಂದು ಜನರು ಹೇಳುತ್ತಾರೆ. ದೇವಾಲಯವನ್ನು ಮೂರು ಕಡೆಗಳಲ್ಲಿನ ಮೂರು ಬಾಗಿಲುಗಳಿಂದ ಪ್ರವೇಶಿಸಬಹುದು. ಮುಂದಿನ ಹೆಬ್ಬಾಗಿಲಿನಲ್ಲಿ ಎರಡು ಚಂದ್ರಕಾಂತ ಶಿಲೆಯ ಮೆಟ್ಟಲುಗಳಿವೆ. ಇದರ ಪಕ್ಕದ ಎರಡೂ ಕಂಬಗಳಲ್ಲಿ ಪಾರ್ವತಿಯ ಮೂರ್ತಿಗಳಿವೆ. ಮೆಟ್ಟಲೇರಿ ಬಾಗಿಲು ದಾಟಿ ಪಾದಾರ್ಪಣೆ ಮಾಡಿದಾಗ ಒಂದು ವಿಸ್ತಾರ ಜಾವಡಿ ಮುಂದುಗಡೆ ವೃತ್ತಾಕಾರದಲ್ಲಿ ವಿಶಾಲ ಶಿವಲಿಂಗ ಹೊಳೆಯುತ್ತದೆ. ಶಿವಲಿಂಗದ ಬಾಗಿಲ ಬಳಿಯ ಮಂಟಪದಲ್ಲಿ ಪೂಜಾರಿಗಳು ಪತ್ರಪುಷ್ಪಗಳನ್ನು ತೆಗೆದುಕೊಂಡು ಪ್ರಣಾದ ವಿತರಣೆ ಮಾಡುತ್ತಾರೆ.

ಸ್ಕಂದ ಪುರಾಣದ ಪ್ರಭಾಸ ಖಂಡದಲ್ಲಿ ಸೋಮನಾಥದ ಸ್ಪರ್ಶಲಿಂಗದ ಮಹಿಮೆಯನ್ನು ಹೀಗೆ ಹೇಳಿದೆ:

"ಈ ಸ್ವಯಂ ಭೂಲಿಂಗ ಮಹತ್ವದ್ದು. ಸೂರ್ಯನಂತೆ ಹೊಳೆಯುತ್ತದೆ, ಸರ್ಪದಿಂದ ಆವೃತ್ತವಾಗಿದೆ, ಭೂಮಿಯ ಕೆಳಗೆ ಕೋಳಿ ಮೊಟ್ಟೆಯಂತೆ ಇದೆ."

ಮಂದಿರದ ಹಿಂದೆ ೩೦ ಹೆಜ್ಜೆ ದೂರದಲ್ಲೇ ಸಮುದ್ರ ರಾಜನಿಂದ ರಕ್ಷಣೆ ಪಡೆಯುವುದಕ್ಕಾಗಿ ಗೋಡೆಯಿದೆ. ಇದರಲ್ಲಿ ಎತ್ತರವಾದ ಒಂದು ಗೋಪುರವಿದ್ದು ಇದರ ಮೇಲೆ ಪೃಥ್ವಿಯ ಒಂದು ಗೊಲವನ್ನು ನೂಡಿಟ್ಟಿದ್ದಾರೆ. ಗೋಲದಲ್ಲಿ ಒಂದು ಬಾಣವು ಇದೆ. ಈ ಬಾಣದ ತುದಿ ತೋರಿಸಿದ ದಿಕ್ಕಿದಲ್ಲಿಯೇ ಮುಂದುವರಿದರೆ, ದಕ್ಷಿಣ ಧ್ರುವವನ್ನು ಮುಟ್ಟಬಹುದೆಂದು ಹೇಳುತ್ತಾರೆ.

(ಅಧಾರಿತ)

ಸ್ವತಂತ್ರ ಭಾರತದ ಎರಡನೇ ಜನಗಣತಿ

ಇದೇ ಫೆಬ್ರವರಿ ತಾ. ೧೦ರಿಂದ ೨೮ನೇ ತಾರೀಕಿನ ವರೆಗೆ ತೆಗೆಯಲ್ಪಡುತ್ತದೆ. ಈ ಬಗ್ಗೆ ಸರಕಾರದ ಆದೇಶ ಪ್ರಕಾರ ಉಪಾಧ್ಯಾಯರುಗಳನ್ನೂ ಇತರ ಇಲಾಖೆಯ ಅಧಿಕಾರಿಗಳನ್ನೂ ಎನ್ಯುಮರೇಟರರಾಗಿಯೂ, ಸುಪರ್ ವೈಸರ್‌ರಾಗಿಯೂ ನೇಮಿಸಿರುತ್ತದೆ ಎನ್ಯುಮರೇಟರರು ತಮಗೆ ನಿಯಮಿಸಿದ ಪ್ರದೇಶಗಳಲ್ಲಿ ವಾಸವಾಗಿರುವ ಜನರ ಲೆಕ್ಕಗಳನ್ನು ತೆಗೆಯುವರು:-

ಕಳೆದ ಜನಗಣತಿಗಳಲ್ಲಿ ಪ್ರತಿ ಒಬ್ಬ ವ್ಯಕ್ತಿಯ ವಿಚಾರಗಳನ್ನು ಮಾತ್ರ ಬರೆಯುವ ಪದ್ಧತಿ ಇತ್ತು. ಆದರೆ ಈ ವರುಷದ ಜನಗಣತಿಯಲ್ಲಿ ಪ್ರತಿಕುಟುಂಬದವರು ನಡಿಸುವ ಕುಟುಂಬ ಸಾಗ್ವಳ್ಳಿಯ ವಿಚಾರ ಅಂದರೆ ಯಾವ ಹಕ್ಕಿನ ಮೇಲೆ ಮತ್ತು ಎಷ್ಟು ವಿಸ್ತೀರ್ಣ ಎಂಬ ವಿವರಗಳನ್ನೂ, ಕುಟುಂಬದವರು ಮಾಡುವ ಕೈಗಾರಿಕೆಯ ವಿಚಾರ ಅಂದರೆ ಯಾವ ತರದ ಕೈಗಾರಿಕೆ, ಕೆಲಸ, ಎಷ್ಟು ತಿಂಗಳು ಮಾಡುತ್ತಾರೆ—ಎಷ್ಟು ಜನರು ಈ ಕುಟುಂಬ ಸಾಗ್ವಳ್ಳಿಯನ್ನೂ ಎಷ್ಟು ಜನರು ಈ ಕುಟುಂಬ ಕೈಗಾರಿಕೆಯನ್ನು ನಡೆಸುತ್ತಾರೆ ಎಂಬ ವಿವರಗಳನ್ನು ಸಂಗ್ರಹಿಸುವರು. ಹಿಂದಿನ ಜನಗಣತಿಯಲ್ಲಿ ಸಂಗ್ರಹಿಸಿದಂತೆಯೇ ಈ ಸಲ ಸಹಾ ಪ್ರತಿಯೊಬ್ಬ ವ್ಯಕ್ತಿಯ ವಿಚಾರಗಳನ್ನು ಅಂದರೆ ವಯ್ಯಾ, ವಿದ್ಯೆ, ಯಾವ ತರದ ಕೆಲಸ, ಕೈಗಾರಿಕೆ ಮುಂತಾದ ವಿವರಗಳನ್ನು ಸದಾ ಪ್ರತ್ಯೇಕ ಚೀಟಿಗಳಲ್ಲಿ ಸಂಗ್ರಹಿಸುವರು. ಈ ರೀತಿ ಸಂಗ್ರಹಿಸಲ್ಪಟ್ಟ ವಿಷಯಗಳನ್ನು ಮನಃ ಸುಪರ್ ವೈಸರರು ಮೇಲ್ತನಿಖೆ ನಡಿಸುವರು.

ಫೆಬ್ರವರಿ ೨೮ನೇ ತಾರೀಕಿನ ರಾತ್ರೆ ಮನೆಮನೆಗಳಲ್ಲಿದ್ದ ಭಿಕ್ಷುಕರು ಮೊದಲಾದವರನ್ನು ಗಣತಿ ಮಾಡುವರು.

ಮಾರ್ಚಿ ೧ನೇ ತಾರೀಕಿನಿಂದ ೫ನೇ ತಾರೀಕಿನ ವರೆಗೆ ಎನ್ಯುಮರೇಟರರು ಎಲ್ಲಾ ಮನೆಗಳಿಗೂ ಮನಃ ಚೀಟಿಕೊಟ್ಟು ಸಂಗ್ರಹಿಸಿದ ವಿವರಗಳಲ್ಲಿ ಮಾರ್ಪಾಟುಗಳಿದ್ದರೆ ಸರಿಪಡಿಸಿಕೊಳ್ಳುತ್ತಾರೆ.

ಈ ಮೇಲಿನ ವಿವರಗಳು ಕೇವಲ ಅಂಕೆ ಅಂಶಗಳ ಬಗ್ಗೆ ಮಾತ್ರವಲ್ಲದೆ, ದೇಶದ ಸರ್ವತೋಮುಖವಾದ ಅಭಿವೃದ್ಧಿಯ ಬಗ್ಗೆ ಶಯಾರಿಸಲ್ಪಡುವ ಯೋಜನೆಯ ಕಾರ್ಯಕಲಾಪಗಳಿಗೆ ಅವಶ್ಯಕವಾಗಿರುತ್ತದೆ. ಅಲ್ಲದೆ ಜನಗಣತಿಯ ಸಮಯ ಸಂಗ್ರಹಿಸಿದ ವಿವರಗಳನ್ನು ರಹಸ್ಯವಾಗಿ ಇಡಲಾಗುವದು. ಆದ ಕಾರಣ ಈ ಮಹಾತ್ಕಾರ್ಯದಲ್ಲಿ ನಮ್ಮ ಜಿಲ್ಲೆಯ ಪ್ರತಿಯೊಬ್ಬ ನಾಗರಿಕನೂ ಜನಗಣತಿಯ ಅಧಿಕಾರಿಯು ಕೇಳಬಹುದಾದ ಪ್ರತಿ ಪ್ರಶ್ನೆಗೆ ಸರಿಯಾದ ಉತ್ತರಗಳನ್ನು ಕೊಟ್ಟು ಸಹಕರಿಸಬೇಕಾಗಿವಿನಂತಿ ಪೂರ್ವಕ ಕೇಳಿಕೊಳ್ಳುತ್ತೇನೆ.

ಕೆ. ಲಿಂಗಪ್ಪಯ್ಯ,
ದ. ಕ. ಜಿಲ್ಲಾ ಸೆನ್ಸಸ್ ಆಫೀಸರ್.

ಮಧು ಸಂಚಯ

ಆಡುವುದಕ್ಕೆ ಮೊದಲು ಆಲೋಚನೆ ಮಾಡಬೇಕು. ಅನಂತರವೇ ವಿಚಾರಗಳನ್ನು ವ್ಯಕ್ತಪಡಿಸಬೇಕು. ವಿಚಾರಗಳ ಮೇಲೆ ನಮ್ಮ ಅಧಿಕಾರವಿರುತ್ತದೆ; ಆದರೆ ಬಾಯಿಯಿಂದ ಹೊರಬಿದ್ದ ಮಾತುಗಳು ನಮ್ಮ ಅಧಿಕಾರ ಕಕ್ಷೆಗೆ ಹೊರತಾಗಿವೆ.

೦೦ ೦೦

ಜಗತ್ತಿನಲ್ಲಿ ಯಾವನೊಬ್ಬನಿಗೂ ಮಿತ್ರ—ಶತ್ರು ಎಂಬವರಿರುವುದಿಲ್ಲ; ಆತನ ನ ವ್ಯವಹಾರವೇ ಶತ್ರು ಅಥವಾ ಮಿತ್ರನಾಗುವ ಅಧಿಕಾರ ಪಡೆದಿರುತ್ತದೆ.

೦೦ ೦೦

ಮಾನವ ಜೀವನವನ್ನು ಅಮರತ್ವದ ಭಾವನೆ ಮಾತ್ರ ಸೌಂದರ್ಯಪೂರ್ಣ ಮತ್ತು ಮಾಧುರ್ಯಮಯವಾಗಿ ರೂಪಿಸಬಲ್ಲುದು.

೦೦ ೦೦

ಉಚ್ಚ ಪದವಿಯನ್ನಿಡರುವುದು ಬಹು ಪ್ರಯಾಸವೇ ಸರಿ. ಆದರೆ ಅಲ್ಲಿಂದ ಉರುಳುವುದಾದರೂ ಅತಿ ಸುಲಭ!

ಏಲಂ ನೋಟೀಸು.

ದಿ ಕೆಥೋಲಿಕ್ ಬ್ಯಾಂಕ್ ಲಿಮಿಟೆಡ್, ಬಜಪೆ, ದ. ಕ.

ಈ ಕೆಳಗೆ ಹೆಸರು ಕಾಣಿಸಿದವರು ನಮ್ಮ ಬ್ಯಾಂಕಿನಲ್ಲಿ ಚಿನ್ನಾಭರಣಗಳ ಈಡಿನ ಮೇಲೆ ಪಡೆಕೊಂಡ ಸಾಲವನ್ನು ರಿಜಿಸ್ಟ್ರಿ ನೋಟೀಸು ಕೊಟ್ಟಲ್ಲಿ ಸಹಾ ಮರುಪಾವತಿ ಮಾಡದೆ ಇದ್ದುದರಿಂದ ಸದ್ರಿಯವರು ಈಡಿಟ್ಟ ನಗಗಳನ್ನು ಇದೇ ತಿಂಗಳ ತಾರೀಕು 17—2—61ರ ಒಳಗೆ ಬಡಿಸದಿದ್ದಲ್ಲಿ ತಾರೀಕು 18—2—61ರಲ್ಲು ಅಪರಾಹ್ನ ಗಂಟೆ 1-00ಕ್ಕೆ ಸರಿಯಾಗಿ ಮೇಲ್ಕಾಣಿಸಿದ ಬೇಂಕಿನ ವಠಾರದಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವುದು. ಸದ್ರಿ ತಾರೀಕಿಗೆ ಏಲಂ ಮಾಡಲಸಾಧ್ಯವಾದಲ್ಲಿ ಸದ್ರಿ ಏಲಂಮನ್ನು ಮನಃ ನೋಟೀಸು ಕೊಡದೇನೇ ಬೇಂಕಿಗೆ ಯುಕ್ತ ಕಂಡ ಇನ್ನಿತರ ದಿನಗಳಲ್ಲಿ ಮುಂದುವರಿಸಲಾದೀತು.

ನಗಗಳ ನಂಬ್ರ ಮತ್ತು ತಾರೀಕು	ಹೆಸರು ಮತ್ತು ವಿಳಾಸ.		ಮೊಬಲಗು
35/526 27-4-59	P. H. ಅಬ್ದುಲ್ ಖಾದರ್, ಹಮ್ಮಬ್ಬ ಬ್ಯಾರಿಯವರ ಮಗ, ಕಾಪೂರು ಪದವು ಮನೆ, ಕಾಪೂರು ಪೋಸ್ಟು	Rs.	15=00
35/1262 3-8-59	ಫ್ರೆಂಕ್ ಪೇಗಸ್, ತೋಮಸ್ ಪೇಗಸರ ಮಗ, ತೋಕೂರು ಮೂಡುಮನೆ, ಜೋಕಟ್ಟೆ ಪೋಸ್ಟು	,,	60=00
35/1730 1-10-59	— Do —	,,	160=00
35/2085 8-12-59	ರಾಮಣ್ಣ ಸೆಟ್ಟಿ, ಬೊಗ್ರ ಸೆಟ್ಟಿಯವರ ಅಳಿಯ, ಮೇಗಿನ ಮನೆ, ಬಜ್ಪೆ ಪೋಸ್ಟು.	,,	35=00
36/211 12-2-60	Y. ಬಾಬು ಸಾಲಿಯಾನ್, ಉಮ್ಮಪ್ಪ ಪಂಡಿತರ ಮಗ, ಬಡಗ ಎಕ್ಕಾರು, ದೂಮಮನೆ, ಎಕ್ಕಾರು ಪೋಸ್ಟು	,,	90=00
36/268 24-2-60	ದೇವದಾಸ ಸೆಟ್ಟಿ, ತಿಮ್ಮಪ್ಪ ಸೇನವರ ಅಳಿಯ, ಮುಂಡಾರುಗುತ್ತು ಮನೆ, ಬಜ್ಪೆ ಪೋಸ್ಟು	,,	110=00
36/383 17-3-60	M. ಮಹಮ್ಮದ್, ಬಾವ ಬ್ಯಾರಿಯವರ ಮಗ, ಭಜನೆ ಮಂದಿರ ರೋಡ್, ಬಜ್ಪೆ ಪೋಸ್ಟು	,,	30=00

Office of the Catholic Bank Ltd.
Bajpe, S. K.
Dated 4—2—1961.

(Sd.) E. D'Cunha,
Agent.

The Vijaya Bank Ltd., Udipi.

ದಿ. ವಿಜಯಾ ಬೇಂಕ್ ಲಿಮಿಟೆಡ್, ಉಡುಪಿ.

ಏಲಂ ನೋಟೀಸು.

ಈ ಕೆಳಗೆ ಹೆಸರು ಕಾಣಿಸಿದವರು ಸದ್ರಿ ಬೇಂಕಿನಲ್ಲಿ ನಗದ ಈಡಿನ ಮೇಲೆ ಸಾಲ ಪಡೆಕೊಂಡು, ಕ್ಲಪ್ತ ವಾಯಿದೆಗೆ ಅಸಲು ಬಡ್ಡಿ ವಗೈರೆ ಬಾಕಿ ಮಾಡಿರುವುದರಿಂದಲೂ ಸದ್ರಿ ಸಾಲವನ್ನು ಬರಮಾಡಿಕೊಳ್ಳುವರೆ ಆವರಿಗೆ ರಿಜಿಸ್ಟ್ರಿ ನೋಟೀಸು ಬಿಟ್ಟಲ್ಲಿಯೂ, ಸದ್ರಿಯವುಗಳನ್ನು ಬಿಡಿಸಿಕೊಂಡು ಹೋಗುವರೆ ತಪ್ಪಿದ ಕಾರಣ, ಸದ್ರಿಯವರು ಈಡಿಟ್ಟ ನಗಗಳನ್ನು ಇದೇ ಬರುವ ತಾ. 25—2—1961 ಶನಿವಾರ ಮಧ್ಯಾಹ್ನ ಘಂಟೆ 3ಕ್ಕೆ ಸರಿಯಾಗಿ, ಆಥವಾ ಬ್ಯಾಂಕಿಗೆ ಯುಕ್ತ ಕಂಡ ಇತರ ಯಾವುದೇ ದಿನಗಳಲ್ಲಿ ಮನಃ ನೋಟೀಸು ಕೊಡದೆನೇ ಬ್ಯಾಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವುದು. ತಿಳಿದಿರಲಿ.

ಸಾಲದ ನಂಬ್ರ ಮತ್ತು ತಾರೀಕು	ಹೆಸರು ಮತ್ತು ವಿಳಾಸ	ಮೊಬಲಗು ಬಡ್ಡಿ ಸಮೇತ 31—12—60ರ ವರೆಗೆ
109/58 15-4-58	ಶ್ರೀ ಜಗನಾಥ ಶೆಟ್ಟಿ, ಕರಿಯ ಶೆಟ್ರ ಮಗ, ನಟ್ಟೂರು ಗ್ರಾಮ, ಪೋಸ್ಟ್ ಉಡುಪಿ	105=60
67/59 23-2-59	ಶ್ರೀ ಎನ್. ಎ. ಮಹಮ್ಮದ್, ಮೋರ್ನಿಂಗ್ ಸ್ಟಾರ್ ಸ್ಟೂಮಾರ್ಟ್, ಸಂತೆಕಟ್ಟೆ, ಉಡುಪಿ	31=30
161/59 28-4-59	ಶ್ರೀ ಕೆ. ರಾಮಯ್ಯ ನಾಯ್ಕ, ಶಂಕರ ನಾಯ್ಕರ ಮಗ, C/o ಶಾಲಾ ಇನ್ಸ್‌ಪೆಕ್ಟರರ ಆಫೀಸು, ಉಡುಪಿ	120=25
315/59 12-10-59	ಶ್ರೀ ಅಲ್ಬರ್ಟ್ ಮಥಾಯಿಸ್, ಜೋನ್ ಮಥಾಯಿಸರ ಮಗ, ಮಣಿಪುರ, ಉಡ್ಪಿ.	141=45
115/60 3-5-60	ಕುಯಿಂತ್ರ ಪೂಜಾರಿ, ತುಕ್ರ ಪೂಜಾರಿಯ ಮಗ, ಅಂಬಲಪಾಡಿ, ಉಡುಪಿ.	67=00

Office of the Bank,
Udipi, 4—2—61.

ಕೆ. ಸೀತಾರಾಮ ಶೆಟ್ಟಿ,
ಏಜೆಂಟ್.

ಪ್ರಚಲಿತ ಪ್ರಸಂಗ

(೧೯ನೇ ಪುಟದಿಂದ)

ನ್ಯಾಯವೂ ಅಲ್ಲ. ಜನರು ಪರಸ್ಪರ ಸಹಕಾರ ನೀಡುತ್ತ ಕಠಿನ ಪರಿಶ್ರಮದಿಂದ ಪ್ರಗತಿಯನ್ನೂ ಸಮೃದ್ಧಿಯನ್ನೂ ಗಳಿಸಬೇಕು. ಇದಕ್ಕಾಗಿ ವಿಜ್ಞಾನದ ಉಪಯೋಗವನ್ನು ನಾವು ಅಧಿಕಾಧಿಕವಾಡಿಕೊಳ್ಳಬೇಕು; ಎಂದರೆ, ಜೀವನವನ್ನು ಆಧುನಿಕೀಕರಣಮಾಡಬೇಕು. ದೇಶದ ಮುಂದೆ ಈಗ ಹಲವಾರು ಪ್ರಶ್ನೆಗಳು ಇವೆ. ಇವುಗಳಿಗೆ ಕೊನೆಯೆಂಬುದಿಲ್ಲ. ರಾಷ್ಟ್ರವು ಇಂತಹ ಪ್ರಶ್ನೆಗಳನ್ನು ಬಗೆಹರಿಸುವಲ್ಲಿ ತತ್ಪರವಾಗಿದೆ. ದೇಶೋನ್ನತಿಗಾಗಿ ಪ್ರಗತಿಗಾಗಿ ಮುಂದುವರಿಯುವಾಗ ಕೆಲವೆಡೆ ಮುಗ್ಗರಿಸಲೂ ಬಹುದು; ಆದರೂ ಹಿಡಿದ ದಾರಿಯು ಸರಿಯಾಗಿದ್ದರೆ, ಎದ್ದು ಮುನ್ನಡೆಯಬಹುದು ಎಂಬುದನ್ನು ಪ್ರಧಾನಿಯವರು ನೆನಪಿಸಿದರು.

ದಿನೇ ದಿನೇ ಬೆಳೆಯುತ್ತಿರುವ ಜನಸಂಖ್ಯೆಯು ಇಂದು ವಿಶ್ವಸಮಸ್ಯೆಯೇ ಆಗಿದೆ. ಭಾರತಕ್ಕಂತೂ ಇದು ತಲೆಕೊರೆಯುವ ಕೀಡಿಯಂತಾಗಿದೆ. ಇದಕ್ಕಾಗಿಯೇ "ಕುಟುಂಬ ನಿಯಂತ್ರಣ"ದತ್ತ ಭಾರತ ಸರಕಾರ ಗಮನಹರಿಸುತ್ತಿದೆ. ಏರುತ್ತಿರುವ ಜನಸಂಖ್ಯೆಯನ್ನು ತಡೆಗಟ್ಟುವುದು ಅವಶ್ಯವೆಂಬುದೀಗ ಎಲ್ಲ ನಾಯಕರಿಗೆ ಮಂದಟ್ಟಾಗಿದೆ. ಶ್ರೀ ನೆಹರುರವರೂ ಈ ಬಗ್ಗೆ ಮಾತನಾಡುತ್ತ "ಕುಟುಂಬ ನಿಯಂತ್ರಣದ ಹೆಸರಿನಲ್ಲಿ ಮಕ್ಕಳೇ ಹುಟ್ಟದಂತೆ ನೋಡಿಕೊಳ್ಳುವುದು ಸರಿಯಲ್ಲ ಏಕೆಂದರೆ, ಮಕ್ಕಳಿಲ್ಲದೆ ಪ್ರಪಂಚ ಬೆಳೆಯುವುದಾದರೂ ಹೇಗೆ? ಆದರೂ ಅವರ ಪಾಲನೆ ಪೋಷಣೆಯತ್ತ ಕೂಡ ಸಾಮೂಹಿಕ ವಿಧಾನವೊಂದನ್ನು ನಾವು ಕಂಡುಹಿಡಿಯಬೇಕು" ಎಂದರು.

ತೃತೀಯ ಪಂಚವಾರ್ಷಿಕ ಯೋಜನೆಯಲ್ಲಿ ಮಕ್ಕಳ ವಿದ್ಯಾಭ್ಯಾಸದತ್ತ ವಿಶೇಷ ಗಮನವನ್ನು ನೀಡಲಾಗಿದ್ದು ಈ ಬಗ್ಗೆ ಸುದೀರ್ಘ ವಿವರಣೆಗಳನ್ನು ಶ್ರೀ ನೆಹರು ಇತ್ತರು: "ಎಲ್ಲ ಮಕ್ಕಳಿಗೂ ಓದುವ ಅವಕಾಶವನ್ನು ಒದಗಿಸುವುದರೊಡನೆ ಮಧ್ಯಾಹ್ನದ ಊಟ, ಶಾಲೆಯ ಸಮವಸ್ತ್ರಗಳನ್ನೂ ನೀಡುವ ಯೋಜನೆಯನ್ನು ಸದ್ಯ ಮನ್ರಾಸ ರಾಜ್ಯದಲ್ಲಿರುವಂತೆ ಮಾಡಲಾಗಿದೆ. ವ್ಯಾವಸಾಯಿಕ ಪಾಠ್ಯಕ್ರಮಗಳನ್ನು ಅಧ್ಯಯನನಡೆಸುವ ಸ್ವತಂತ್ರಶಾಲೀ ವಿದ್ಯಾರ್ಥಿಗಳಿಗೆ ತಿಪ್ಪವೃತ್ತಿಗಳನ್ನು ನೀಡುವ ಹಂಚಿಕೆಯೂ ಇದೆ. ಈಗ ಅನೇಕ ಬುದ್ಧಿವಂತ ಹುಡುಗರು ಪ್ರಾಥಮಿಕ ಶಾಲೆಗಳ ಮೆಟ್ಟಲಿಳಿದನಂತರ ಕಠಿನ ಪರಿಸ್ಥಿತಿಗಳಿಂದಾಗಿ ತಮ್ಮ ವಿದ್ಯಾಭ್ಯಾಸವನ್ನು ಮುಂದುವರಿಸಲು ಸಶಕ್ತರಾಗುವುದಿಲ್ಲ. ಈ ದುರ್ಬಲತೆ ಅಥವಾ ಅಶಕ್ತತೆಯು ತಪ್ಪಬೇಕು. ಮಕ್ಕಳೆಂದರೆ ದೇಶದಸಂಪತ್ತು. ಭಾರತದ ಭಾವೀ ನಾಗರಿಕರವರು. ಆದುದರಿಂದಲೇ ಎಲ್ಲ ಮಕ್ಕಳಿಗೂ ಸಮಾನಾವಕಾಶವಿರಬೇಕು." ಎಂದು ಮುಂತಾಗಿ ಹೇಳುತ್ತ ಅವರು ಮುಂದಿನ ವರ್ಷಗಳಲ್ಲಿ ಅತಿ ಹೆಚ್ಚಿನ ಮಕ್ಕಳು ಸಫಲರಾಗುವರೆಂದು ಹಾರೈಸಿದರು.

ಮಕ್ಕಳ ಬಗ್ಗೆ ಮಾಡಬೇಕಾದ ಅನೇಕಾನೇಕ ಕಾರ್ಯಗಳನ್ನು ಅವರು ಪ್ರಸ್ತಾಪಿಸುತ್ತ, "ನಾವು ಹಲವಾರು ಕೆಲಸಗಳನ್ನು ಮಾಡಬೇಕಾಗಿದೆ. ಈ ಮಹಾ ಕೆಲಸಕ್ಕಾಗಿ ಕೇವಲ ಸರಕಾರದ ಪ್ರಯಾಸ ಸಾಲದು. ಜನತೆಯೂ ಈ ಬಗ್ಗೆ ಸಹಕರಿಸಬೇಕಾಗಿದೆ. ಸರಕಾರವು ನಿಯಮಾಂತರ್ಗತವಾದ ಅಧಿಕ ಕಾರ್ಯಗಳನ್ನು ರೂಪಿಸಬೇಕಾಗಿದೆ; ಇದರಿಂದ ಮಕ್ಕಳನ್ನು ಚದುರಂಗದ ಡಾಳಗಳಂತೆ ಮಾಡಬಾರದು." ಎಂದು ಅಭಿಪ್ರಾಯಪಟ್ಟರು. ಸರಕಾರವು ಈ ಬಗ್ಗೆ ಕೈಕೊಳ್ಳುವ ಪ್ರತಿಯೊಂದು ಕಾರ್ಯದಲ್ಲಿಯೂ ಸಾರ್ವಜನಿಕ ಸಹಾಯವು ಅತ್ಯಗತ್ಯವಾಗಿದೆ ಮಕ್ಕಳ ನೆಚ್ಚಿನ ನೆಹರುವರು ಬಾಲಪಿತದ ಮತ್ತು ಅವರ ಉನ್ನತಿಯ ಬಗ್ಗೆ ಆಡಿದ ಮಾತುಗಳನ್ನು ಎಲ್ಲರೂ ಮನಸ್ಸಿಗೆ ತಂದುಕೊಳ್ಳಬೇಕಾಗಿದೆ.

ಬ್ರಿಟನ್ನಿನ ರಾಣಿ ಎಲಿಜಬೆತ್ ಅವರು ಮತ್ತು ಎಡಿನ್‌ಬರೋ ಡ್ಯೂಕರಾದ ಪ್ರಿನ್ಸ್‌ಫಿಲಿಪ್ ಅವರೊಡಗೂಡಿ ಜನವರಿ ೨೧ ರಂದು ನವದೆಹಲಿಗೆ ಆಗಮಿಸಿದರು. ಗಣ್ಯಅತಿಥಿಗಳನ್ನು ನವದೆಹಲಿಯ ಪಾಲಂ ವಿಮಾನದ ನಿಲ್ದಾಣದಲ್ಲಿ ರಾಷ್ಟ್ರಪತಿಗಳು, ಉಪರಾಷ್ಟ್ರಪತಿಗಳು, ಪ್ರಧಾನ ಮಂತ್ರಿಗಳು ವಿವಿಧ ರಾಯಭಾರಿಗಳು ಮತ್ತಿತರರು ಸ್ವಾಗತಿಸಿದರು.

ವಿಮಾನ ನಿಲ್ದಾಣದಲ್ಲಿ ರಾಷ್ಟ್ರಪತಿ ಡಾ. ರಾಜೇಂದ್ರ ಪ್ರಸಾದರು ರಾಣಿಯವರನ್ನು ಸ್ವಾಗತಿಸುತ್ತಿರುವುದನ್ನು ಚಿತ್ರದಲ್ಲಿ ಕಾಣಬಹುದು. ಬಲಭಾಗದಲ್ಲಿ ಪ್ರಿನ್ಸ್‌ಫಿಲಿಪ್ ಅವರಿದ್ದಾರೆ, ಎಡಭಾಗದ ತುದಿಯಲ್ಲಿ ಪ್ರಧಾನ ಮಂತ್ರಿ ಶ್ರೀ ಜವಾಹರಲಾಲ್ ನೆಹರೂ ಅವರಿದ್ದಾರೆ. ಶ್ವೇತ ವಸ್ತ್ರ ಧರಿಸಿರುವ ಉಪರಾಷ್ಟ್ರಪತಿ, ಡಾ. ಎಸ್. ರಾಧಾಕೃಷ್ಣನ್ ಅವರನ್ನೂ ಚಿತ್ರದಲ್ಲಿ ಕಾಣಬಹುದು

ಅನುಭವ

(೨೩ನೇ ಪುಟದಿಂದ)

ಏಕೆ ಕೂರಬಾರದು? ನೀವೂ ಲಂಗೋಟಿ ತೊಟ್ಟುಕೊಂಡಿರಬಾರದೇಕೆ? ಪಾಶ್ಚಾತ್ಯ ನಾಗರಿಕತೆಯ ಬಹಳಷ್ಟು ಭಾಗ ಭಾರತಕ್ಕೆ ಉಪಯುಕ್ತವಿದೆ. ಹಾಗೆಯೇ ಭಾರತದ ಬಹಳ ವಿಷಯಗಳು ಪಶ್ಚಿಮಕ್ಕೆ ಉಪಯೋಗಿಯಾಗಿವೆ. ವಿಚಾರಗಳ ಕೊಡುಕೊಳ್ಳುವಿಕೆದಲ್ಲಿ, ಒಂದು ಇನ್ನೊಂದರ ಒಳಿತನ್ನು ಸ್ವೀಕರಿಸುವಲ್ಲಿಯೇ ಎರಡೂ ಹೃದಯಗಳು ಸಮೀಪಪಡುವುವು.

"ಮಿ| ಗಾಂಧಿ, ರಾಜಕಾರಣವು ಬಹಳ ತುಚ್ಛ ವಿಷಯ. ಈಗ ತುಸು ಜೀವನದತ್ತ ವಿಚಾರಮಾಡಿರಿ. ಜೀವನವನ್ನು ಹೇಗೆ ಜೀವಿಸಬೇಕು, ದಯಮಾಡಿ ಹೇಳುವಿರಾ?" ನಾನೆಂದೆ.

ತುಟಿದೆರದು ಮೂರು ಹಲ್ಲುಗಳನ್ನು ಹೊಳಪಿಸುತ್ತ ಗಾಂಧೀಜಿ ಹೇಳಿದರು: "ಸಂಗ್ರಹ ಮಾಡಬೇಡಿ; ಸಂಗ್ರಹದ ಇಚ್ಛೆಯನ್ನೂ ಇಟ್ಟುಕೊಳ್ಳಬೇಡಿ. ಕೀರ್ತಿ, ಸಂಪತ್ತು ಮತ್ತು ಅಧಿಕಾರ ಪ್ರಾಪ್ತಿಯಂತಹ ತುಚ್ಛ ಆಕಾಂಕ್ಷೆಗಳನ್ನು ಇಟ್ಟುಕೊಳ್ಳಬೇಡಿ ಮಾಡುವ ಕೆಲಸವನ್ನು ನಿಮ್ಮ ಧರ್ಮವೆಂದು ಮಾಡಿರಿ—ಫಲಾಪೇಕ್ಷೆಯನ್ನಿಟ್ಟುಕೊಳ್ಳಬೇಡಿ. ಸರಳತೆ, ಸ್ಪಷ್ಟತೆ, ಮತ್ತು ಶಕ್ತಿಗಳಿರುವವನನ್ನು ಯಾರೂ ಸೋಲಿಸುವುದು ಸಾಧ್ಯವಿಲ್ಲ."

ನನಗೆ ನನ್ನ ವಾಚಾಲತೆಯ ಫಲ ಲಭಿಸಿತು. ನಾನು ಕುಳಿತಲ್ಲಿಂದ ಎದ್ದು ಹೊರಡಲುದ್ಯುಕ್ತನಾದೆ.

"ನನ್ನ ಆಟನ್ನು ಕಂಡು ಹೋಗುವುದಿಲ್ಲವೆ? ಮಿ. ಲೋ...." ಗಾಂಧೀಜೀಯವರ ನಯನಗಳಲ್ಲಿ ಆ ಮಂತ್ರಣ ಮಿನುಗುತಿತ್ತು.

ಇಂದು ಇಷ್ಟು ವರ್ಷಾನಂತರ ನಾನ ಸತ್ಯಾಗ್ರಹದ ಈ ಸಫಲ ಪ್ರವರ್ತಕರ ಸಂದರ್ಭದ ಪೂರ್ಣತಮ ಲಾಭ ಪಡೆಯುವುದರಲ್ಲಿ ಸಮಜೋಡಿಯಿಲ್ಲದವರ—ಬಗ್ಗೆ ನಾನು ವಿಚಾರ ಮಾಡುತಿದ್ದೇನೆ. ಪರಿಸ್ಥಿತಿಗಳು ಭಿನ್ನವಾಗಿರುತಿದ್ದರೆ, ಆಂಗ್ಲೇಯರ ಹೊರತು ಬೇರಾರ ಪ್ರಭುತ್ವವಿರುತಿದ್ದರೆ ಅವರು ಸಫಲರಾಗುತಿದ್ದರೆ? ಪ್ರಾಯಶಃ ಇಲ್ಲ. ಗಾಂಧೀಜಿಯವರ ಆಗಮನಕ್ಕೆ ಬಹಳ ಮೊದಲೇ ಬ್ರಿಟನ್ನಿನಲ್ಲಿ ಕಠೋರ ಸಿದ್ಧಾಂತವಾದಿಗಳ ಪಕ್ಷವೊಂದು ತಯಾರಾಗಿತ್ತು. ಇದು ಆದರ್ಶಜ್ಯೋತಿ ಶೋಷಕರಿಗೆ ಸರಿಯಾಗಿ ಸಹಾಯ ಮಾಡುತಿತ್ತು. ೧೯೩೦ರ ವರೆಗೆ ಬ್ರಿಟಿಷ ಜನತೆಯಲ್ಲಿ ಭಾರತದ ಬಗ್ಗೆ ಕರ್ತವ್ಯಬುದ್ಧಿ ಎಚ್ಚತ್ತಿತ್ತು. ಈ ಎಲ್ಲಕ್ಕೂ ದೆಚ್ಚಾಗಿ ಪ್ರಾಚೀನ ಸಾಮ್ರಾಜ್ಯವಾದ ಉಸಿರುಬಿಡುತಿತ್ತು; ಪರಿವರ್ತನೆ ಅನಿವಾರ್ಯವಾಗಿತ್ತು.

ವಿಶ್ವದ ಅನ್ಯ ಮಹಾಪುರುಷರಂತೆಯೇ ಗಾಂಧೀಜಿ ಸರಿಯೊದ ಸಮಯದಲ್ಲಿ ಸರಿಯಾದ ಸ್ಥಾನದಲ್ಲಿದ್ದರು: ಯುಗದ ಅವಶ್ಯಕತೆಗಳು ಮತ್ತು ಸ್ವರ್ಣಿಮ ಸಂದರ್ಭಗಳ ಸಂಧಿಸ್ಥಳದಲ್ಲಿತ್ತು ಅವರ ಸ್ಥಾನ. ಹೀಗೆ ಹೇಳುವುದರಿಂದ ಅವರ ಮಹಾನತೆಗೆ ಅವಗಣನೆಯಾದಂತಾಗದೆ ಗುಣಗಾಣನೆಯೇ ಆಗುವುದು. ಅವರಲ್ಲಿ ಮಹಾನ್ ಗುಣಗಳಿದ್ದುವು; ಆಗಲೇ ಅವರು ಮಹಾತ್ಮರಾಗಿದ್ದರು.

ಗಾಂಧೀಜಿ ಪರಮ ಸಜ್ಜನರಾಗಿದ್ದರು; ಬಹಳ ಪ್ರಿಯರಾಗಿದ್ದರು. ಅವರ ಸರ್ವಹಿತ ಭಾವನೆಯು ಪ್ರಖರ ಮತ್ತು ಆನಂದದಾಯಕವಾಗಿತ್ತು. ಅವರ ಸಾನ್ನಿಧ್ಯದಲ್ಲಿ ಪೂರ್ಣತ್ವದ ಸಾಧನೆಯು ಸುಗಮವೆನಿಸುತಿತ್ತು.

ಮಕ್ಕಳ ಮಮತೆಯ Regd. Trade Mark

'ಬಿಕ್ಕೊ'ರವರ

ಗ್ಲೂಕೋಸ್ ಕೂಡಿದ ಪೆಪ್ಪರ್ ಮಿಠಾಯಿಗಳು ರುಚಿಕರ, ಸೇವನೆಗೆ ಪ್ರಸಿದ್ಧಿಪಟ್ಟಿವೆ.

BICCO

'ಬಿಕ್ಕೊ'ರವರ

ಹಣ್ಣಿನ ಶರಬತ್ತುಗಳು

ಅತಿಥಿಗಳ ಆದರದ ಸತ್ಕಾರಕ್ಕೆ ಅತ್ಯನುಕೂಲ.

ತಯಾರಕರು:

ಭಾರತ್ ಇಂಡಸ್ಟ್ರಿಯಲ್ ಎಂಡ್ ಕ್ಯಾನಿಂಗ್ ಕಂಪನಿ ಲಿಮಿಟೆಡ್, ಕಾಪು, ದ. ಕ.

ಕವಿವಾಣಿ

ಮಾನವನ ಮುನ್ನಡೆಗೆ ಸಾಹಿತ್ಯ ದೀಪ

ಕವಿಯ ವಾಣಿ ಮಾನವನ ಇತಿಹಾಸ ಮಾತ್ರವೇ ಆಗಬಾರದು; ಅದು ಅತನ ಕೈದೀವಿಗೆಯಾಗಿ ಮುನ್ನಡೆಸಬೇಕು; ಜಯಶ್ರೀಯನ್ನು ತಂದು ಅತಗೊಪ್ಪಿಸಬೇಕು—ಎನ್ನುತ್ತಾರೆ ವಿಲಿಯಂ ಫಾಕ್‌ನರ್.

ವಿಶ್ವವ್ಯಾಪಿಯಾಗಿರುವ ಆಧಿಭೌತಿಕ ಭಯವೇ ನಮ್ಮ ಮುಂದಿರುವ ಸಂಕಟಗಳಲ್ಲಿ ಅಗ್ರಗಣ್ಯವಾದುದು. ನಿಜವಾಗಿ ನೀಡಬೇಕಾದುದಕ್ಕಿಂತ ಅಧಿಕ ಮಹತ್ವವನ್ನು ನಾವು ಇದಕ್ಕೆ ಇತ್ತಿದ್ದೇವೆ. ಇಂದು ಆಧ್ಯಾತ್ಮಿಕ ಅಥವಾ ಆಂತರಿಕ ಸಮಸ್ಯೆಯೆಂಬುದು ಏನೂ ಉಳಿದಿಲ್ಲ. ಇಂದಿನ ಸಮಯ ಏನಾದರೂ ಪ್ರಶ್ನೆಯೆಂದು ನಮ್ಮನ್ನು ಕಾಡುತ್ತಿರುವುದಾದರೆ ಅದು ಒಂದೇ ಒಂದು— ನಾನು ಎಂದು ಅಣುಬಾಂಬಿಗೆ ಈಡಾಗಿ ನಾರಿ ಹೋಗುವೆನೋ—ಎಂಬುದು

ಈ ಕಾರಣದಿಂದಲೇ ಇಂದಿನ ಹೊಸ ಸೀಳಿಗೆಯ ಲೇಖಕ ಲೇಖಿಕೆಯರ ಕೃತಿಗಳಲ್ಲಿ ಮಾನವಮನಸದ ಅಥವಾ ಆಂತರಿಕ ಸಮಸ್ಯೆಗಳ ಬಗ್ಗೆ ಏನೊಂದೂ ವಿವೇಚನೆ ನಡೆಯುವುದಿಲ್ಲ. ಈ ಪ್ರಶ್ನೆಗಳು ರಚನೆಗಳಲ್ಲಿ ಎತ್ತಿಕೊಳ್ಳಲ್ಪಡುತಿದ್ದರೆ, ಆಕೃತಿಗಳು ಸಫಲ ಹಾಗೂ ಸುಂದರವೆನಿಸಬಹುದಿತ್ತು. ಸುಖ-ದುಃಖ, ಹರ್ಷಶೋಕ ಮತ್ತು ಸಂಘರ್ಷ ಮಾದುರ್ಯಗಳ ಎರಡೂ ಅವಸ್ಥೆಗಳ ಚಿತ್ರಣವಿರುವ, ಸಾಮಂಜಸವಿರುವ ಕೃತಿಗಳೇ ಶ್ರೇಷ್ಠಸಾಹಿತ್ಯವೆನಿಸುವುದು.

ಲೇಖಕರು ಈ ಯೆಲ್ಲ ಆಂತರಿಕ ಮಾನವೀಯ ಪ್ರಶ್ನೆಗಳನ್ನು ಸರಿಯಾಗಿ ಅಧ್ಯಯನ ನಡೆಸಬೇಕು ಎಂಬುದೇ ಈಗಿನ ಕಾಲದ ಅವಶ್ಯಕತೆ. ಭಯಭೀತರಾಗುವುದು ಇಲ್ಲವೇ ಧೈರ್ಯಗುಂದುವುದಕ್ಕಿಂತ ಹಿರಿದಾದ ಹೀನತೆ ಮತ್ತೊಂದಿಲ್ಲವೆಂಬುದನ್ನವರು ತಿಳಿಯಬೇಕು. ಪ್ರೇಮ, ತ್ಯಾಗ, ಕರುಣೆ, ಆತ್ಮಗೌರವ, ಸಹಾನುಭೂತಿ ಮೊದಲಾದ ಪ್ರಾಚೀನ ಸರಂಪರಾಗತ ಶಾಶ್ವತ ಮೂಲ್ಯಗಳನ್ನು ತಮ್ಮ ಕೃತಿಗಳಲ್ಲಿ ಅಳವಡಿಸಿಕೊಳ್ಳುವತ್ತಲೂ ಅವರ ದೃಷ್ಟಿ ಹರಿಯಬೇಕು. ಇವುಗಳಿಲ್ಲದ ಯಾವುದೇ ಕೃತಿಯು ಮಹತ್ವವನ್ನು ಪಡೆದರೂ ಅದು ಕ್ಷಣಿಕ ಹಾಗೂ ಅಶಾಶ್ವತವಾಗಿರುವುದು.

ಲೇಖಕನು ಇವನ್ನರಿಯದೆ ತನ್ನ ರಚನೆಯನ್ನು ಮಾಡುತ್ತ ಹೋಗುವುದಾದರೆ, ಅತನ ಪರಿಶ್ರಮವು ನಿರರ್ಥಕವಾಗುತ್ತದೆ. ವಸ್ತುತಃ ಈ ಶಾಶ್ವತ ಮೂಲ್ಯಗಳನ್ನು ಮುಟ್ಟದ ರಚನೆಗಳಹಿನ್ನೆಲೆಯಲ್ಲಿ ಪ್ರೇಮವಿರುವುದಿಲ್ಲ; ಬದಲು ವಾಸನೆಯಿರುವುದು. ಇವುಗಳಲ್ಲಿ ಕರುಣೆ ಅಥವಾ ಸಹಾನುಭೂತಿಯಂತಹ ಮಾನವೀಯ ಭಾವನೆಗಳು ಸರ್ವಥಾ ಲೋಪವಾಗಿರುವುದು ಬಹು ದುಃಖದ ಸಂಗತಿ. ಹೀಗಿರುವಾಗ ಯಾವನೇ ಲೇಖಕನು ಸಮವೇದನೆ ಹಾಗೂ ಸಹಾನುಭೂತಿಯನ್ನು ಪ್ರದರ್ಶಿಸಿದರೆ, ಅದು ಕೇವಲ ಶಾಬ್ದಿಕ ಮತ್ತು ನಿರಾಧಾರವಾಗಿದೆ. ಅದರಲ್ಲೂ ಯಾವನೊಬ್ಬನನ್ನು ದ್ರವೀಭೂತನಾಗಿಸುವ ಶಕ್ತಿಯುಳಿದಿರುವುದಿಲ್ಲ. ಈ ರಚನೆಗಳಲ್ಲಿ ಲೇಖಕನ ಹೃದಯದ ಮಿಡಿತವಿರುವ ಬದಲು ದೇಹಗ್ರಂಥಿಗಳ ಜಡತೆ ತುಂಬಿರುವುದು.

ಈ ಯೆಲ್ಲ ವಿಷಯಗಳತ್ತ ಗಂಭೀರತಾಪೂರ್ವಕವಾಗಿ ವಿಚಾರಿಸದಿರುವವರೆಗೆ ಸಾಹಿತ್ಯಕಾರನು ಬರೆಯುತ್ತ ಮುಂದುವರಿದರೂ ಅದು ಮಾನವನ ಅಂತ್ಯೇಷ್ಟಿಯಲ್ಲಿ ಭಾಗವಹಿಸುವಂತಹುದಾಗುವುದು. ಆದರೆ, ಮಾನವನು ಅಜೇಯನು. ಅತನು ನಾಶಹೊಂದುವನೆಂದು ಒಪ್ಪಿಕೊಳ್ಳುವುದಾದರೂ ಅದು ಪತನದ ಮಾರ್ಗವಾಗುವುದು. ಮೃತ್ಯುವಿನ ಅಂತಿಮ ಘಂಟೆ ಬಾರಿಸುವಾಗಲೂ, ಅಥವಾ ಜೀವನಸಂಧ್ಯೆ ಕಾಲಿರಿಸಿದ್ದರೂ ಅತನು ಅಶಾ ಜೀವಿಯಾಗಿಯೇ ಇರುತ್ತಾನೆ; ಆಗಲೂ ಅತನ ತುಟಿಗಳೆಡೆಯಿಂದ ಒಂದು ಮೆತ್ತಗಿನ ಧ್ವನಿಯು ನೆಲ್ಲನೆ ಹೊರ ಹೊಮ್ಮುವುದು—ಆ ಸ್ವರವು ಅಕ್ಲಾಂತವಾಗಿರುವುದು —ಇದರಿಂದಾಗಿಯೇ ಅತ ಅಜರ ಹಾಗೂ ಅಮರ ಎಂದು ಹೇಳಲೇ ಬೇಕಾಗುತ್ತದೆ.

ಆದರೆ, ಇದನ್ನು ಸ್ವೀಕರಿಸುವುದು ಸಾಧ್ಯವಿಲ್ಲ. ಮಾನವನು ಉಸಿರಾಡುವಂತೆ ಜೀವಿಸಲಾರನು. ಅತನು ಎದೆಯುಬ್ಬಿಸಿ ಮುನ್ನಡೆದರೆ ಮಾತ್ರ ವಿಜಯಿಯಾಗುವನು. ಮಾನವನು ತನ್ನ ಸ್ವರವು ಅನ್ಯ ಜೀವಗಳೊಡನೆ ಹೋಲಿಸುವಾಗ ಅಕಂಪಿತವಾಗಿರುವುದರಿಂದ ಮಾತ್ರ ಅಮರನಾಗಿಲ್ಲ; ತನ್ನ ಸತತ ಜಾಗೃತ ಆತ್ಮದಿಂದ, ತನ್ನ ಸಹಿಷ್ಣುತೆ, ತ್ಯಾಗ ಮತ್ತು ಪರುಷಾರ್ಥಗಳಿಂದ ಅತನು ನಿಜವಾಗಿ ಅಮರನಾಗುತ್ತಾನೆ.

ಆದುದರಿಂದಲೇ ಲೇಖಕರು ತಮ್ಮ ರಚನೆಗಳಲ್ಲಿ ಈ ಶಾಶ್ವತ ಮೂಲ್ಯಗಳನ್ನು ಪ್ರತಿಷ್ಠಾಪಿಸಿಕೊಳ್ಳುವುದು ತಮ್ಮ ಕರ್ತವ್ಯವೆಂದು ತಿಳಿಯಬೇಕು. ಮಾನವರ ಸಹನಾ ಶಕ್ತಿಯನ್ನು ಹೆಚ್ಚಿಸುವುದು, ಅವರ ಹೃದಯವನ್ನು ಸುದೃಢಗೊಳಿಸುವುದು, ಸಾಹಸ, ನ್ಯಾಯ, ಆಶೆ, ಸ್ವಾಭಿಮಾನ, ಸಹಿಷ್ಣುತೆ, ಕರುಣೆ ಮತ್ತು ತ್ಯಾಗ ಇವೇ ಬಲಿದಾನಗಳ ಸ್ಮರಣೆಯನ್ನು ಅವರಿಗೆ ಮಾಡಿಕೊಡುವುದು ತಮ್ಮ ಕರ್ತವ್ಯವೆಂಬುದನ್ನು ಸಾಹಿತ್ಯಕಾರರು ಅವಶ್ಯ ತಿಳಿದಿರಬೇಕು. ಹೀಗಾದಲ್ಲಿ ಮಾತ್ರ ಮಾನವೇತಿಹಾಸದ ಗೌರವವು ಉಳಿಯುವುದು ಸಾಧ್ಯವೆನಿಸುವುದು.

ಕವಿವಾಣಿಯು ಮಾನವನ ಇತಿಹಾಸ ಲೇಖ ಮಾತ್ರವಾಗಿಯೇ ಉಳಿಯಬೇಕಾಗಿಲ್ಲ. ಅದು ಅತನನ್ನು ಮುನ್ನಡೆಸುವ ಕೈದೀವಿಗೆಯಾಗಬಹುದು; ಅತನನ್ನು ವಿಜಯದತ್ತ ಕರೆದೊಯ್ಯಬೇಕು; ಅತನಿಗೆ ಅಮರನಾಗುವ ಮಹಾಶಕ್ತಿಯನ್ನು ಒದಗಿಸಿಕೊಡಬೇಕು.

ಅನುರೂಪಕ್ರಿಯಾರಹಿತವಾದ ಸುಂದರವಾಣಿಯು ಸುಗಂಧರಹಿತ ಸುಂದರ ಪುಷ್ಪದಂತೆ ವ್ಯರ್ಥ; ಅನುಕೂಲ ಕ್ರಿಯಾಯುಕ್ತ ಸುಂದರವಾಣಿಯು ಸುಗಂಧಯುಕ್ತ ಸುಂದರ ಪುಷ್ಪದಂತೆ ಸಾರ್ಥಕವಾಗಿದೆ—ಎಂಬ 'ಧಮ್ಮಪದ'ದ ಉಕ್ತಿಯನ್ನು ನಾವು ಅವಶ್ಯ ಜ್ಞಾಪಿಸಿಕೊಳ್ಳಬೇಕು.

The Moolky Bank, Ltd.
MULKI.
ಡಿಪೋಸಿಟು ಮೇಲಣ ಆಕರ್ಷಕ ಬಡ್ಡಿ ದರಗಳು—

1ರಿಂದ 4 ತಿಂಗಳ ವರೆಗೆ		4%
5 ,, 12	,,	4½%
13 ,, 24	,,	4¾%

ರೂ. 8,000/- ಮತ್ತು ಮೇಲಣ ಡಿಪೋಸಿಟಿಗೆ ¼% ಹೆಚ್ಚು
ಸೇವಿಂಗ್ಸ್ ಬೇಂಕ್ ಲೆಕ್ಕಕ್ಕೆ 2½%
ಚಾಲ್ತಿ ಶೇಷಕಾತಿಗೆ ¼%
ಸುಲಭ ಬಡ್ಡಿ ದರದಲ್ಲಿ ಚಿನ್ನಾಭರಣಗಳ ಮೇಲೆ ಮತ್ತು ಇತರ ರೀತಿಯಲ್ಲಿ ಸಾಲಕೊಡಲಾಗುವುದು.
ಯಂ. ಆರ್. ಯಬ್ಬಾ. ಪೂಂಜ.
ಮೆನೇಜರ್,
ಮೂಲ್ಕಿ ಬೇಂಕ್ ಲಿ. ಮುಲ್ಕಿ.

ಇವಳು ನಾರಿ!

ನಾರಿಯ ಬಗ್ಗೆ ಪುರುಷನ ಉದ್ಗಾರ

ಸಂಗ್ರಹಕಾರರು: ಶ್ರೀ ಎಸ್. ಎಂ. ಶೆಟ್ಟಿ, ಶಿಮುಂಜೆಸರಕಾರಿ.

ನಾರಿಯು ಪ್ರಪಂಚದಲ್ಲಿ ಏನೇನು ಮಾಡಬೇಕಾಗಿರುತ್ತದೋ ಅವೆಲ್ಲವೂ ಪುತ್ರಿ, ಸಹೋದರಿ, ಹೆಂಡತಿ ಮತ್ತು ತಾಯಿ ಇವರ ಪಾವನ ಕರ್ತವ್ಯಗಳನ್ನೊಳಗೊಂಡಿವೆ. —'ಸ್ಟೀಲ್'.

ಎಲ್ಲಿ ಸ್ತ್ರೀಯ ಸನ್ಮಾನವಾಗುತ್ತದೋ, ಅಲ್ಲಿ ದೇವತೆಗಳು ಪ್ರಸನ್ನರಾಗುತ್ತಾರೆ. —ಮನು.

ಯಾವ ಸಮಾಜದಲ್ಲಿ ನಾರಿಯ ಸನ್ಮಾನವಾಗುವುದಿಲ್ಲವೋ ಅದು ಪತನ ಮತ್ತು ವಿನಾಶದ ಕಂದಕದಲ್ಲಿ ಅದೃಶ್ಯವಾಗುತ್ತದೆ. —ರಮನ್.

ಸನಗಾಗಿ ಚಾರಿತ್ರ್ಯ, ಸಂತಾನಕ್ಕಾಗಿ ಮಮತೆ, ಸಮಾಜಕ್ಕಾಗಿ ಶೀಲ, ವಿಶ್ವಕ್ಕಾಗಿ ದಯೆ, ಮತ್ತು ಪ್ರಾಣಿ ವರ್ಗಕ್ಕೆ ಕರುಣೆಯನ್ನು ತೋರುವ ಮಹಾಕೃತಿ. —ನಾರಿ. —ರಮನ್.

ನಾರಿಯ ನಿರ್ಮಾಣವು ಜಗತ್ತನ್ನು ಮಂಗಗೊಳಿಸಲಿಕ್ಕಲ್ಲ. ತನ್ನ ಪುರುಷನನ್ನು ಸುಖಿಯಾಗಿಡಲಿಕ್ಕಾಗಿದೆ. —ಎಡ್ಮಂಡ್ ಬರ್ಕ್.

ಸ್ತ್ರೀ ಮತ್ತು ಪುರುಷ ಇವ ವಿಶ್ವರೂಪೀ ಅಂಕುರದ ಎರಡೆಲೆಗಳು.—ಜಾಯಸಿ.

ಸ್ತ್ರೀಯರೆಂದೂ ಕುರೂಪಿಯರಲ್ಲ. ಆದರೆ ತನ್ನನ್ನು ಸಿಂಗರಿಸಿಕೊಳ್ಳುವ ಕಲೆ ತಿಳಿಯದ ಎಷ್ಟೋ ಸ್ತ್ರೀಯರಿರುವರು. —ಲಾ ಬ್ರೈಯರ್.

ಎಂದಿನ ವರೆಗೆ ಸ್ತ್ರೀಯ ಅವಸ್ಥೆಯಲ್ಲಿ ಸುಧಾರಣೆ ಯಾಗುವುದಿಲ್ಲವೋ ಅಂದಿನ ವರೆಗೆ ವಿಶ್ವಕಲ್ಯಾಣವು ಸಾಧ್ಯವಿಲ್ಲ. ಏಕೆಂದರೆ ಒಂದು ಹಕ್ಕಿಯು ಒಂದೇ ರೆಕ್ಕೆಯನ್ನು ಬಡಿದುಕೊಂಡು ಹಾರುವುದು ಸಂಪೂರ್ಣ ಅಸಂಭವ. —ವಿವೇಕಾನಂದ.

ಪುರುಷನ ಎಲ್ಲಾ ವಿಚಾರಗಳು ನಾರಿಯ ಒಂದು ಭಾವುಕತೆಯ ಕಣಕ್ಕೆ ಸಾಟಿಯಾಗಲಾರವು. —ಪಂಚ್.

ಪವಿತ್ರ ನಾರಿಯು ಸೃಷ್ಟಿಕರ್ತನ ಸರ್ವೋತ್ಕೃಷ್ಟ ಕೃತಿಯಾಗಿರುತ್ತಾಳೆ. ಅವಳು ಸೃಷ್ಟಿಯ ಸಂಪೂರ್ಣ ಸೌಂದರ್ಯವನ್ನು ಅತ್ಯವತ್ ಮಾಡಿಕೊಂಡಿರುತ್ತಾಳೆ. —ರವೀಂದ್ರನಾಥ್ ಠಾಗೋರ್.

ಚಂದ್ರನ ಕಲೆಗಳಂತೆಯೇ ನಾರಿಯ ಹೃದಯವು ಯಾವಾಗಲೂ ಪರಿವರ್ತನಶೀಲವಾಗಿರುತ್ತದೆ. ಆದರೆ ಆದರಲ್ಲಿ ಯಾವಾಗಲೂ ಒಂದೇ ಒಂದು ಪುರುಷನ ಆವಾಸವಿರುತ್ತದೆ. —ಪಂಚ್.

ನೆರಳಿನಲ್ಲಿ ಮಾತ್ರ ಸುಗಂಧವೀಯುವ ಪುಷ್ಪವೆಂದರೆ ನಾರಿ. —ಲೆಮನೀಸ್.

ಸ್ತ್ರೀಗೆ ಮರಣ ದಂಡನೆಯನ್ನು ವಿಧಿಸಿದಾಗ ಕೂಡ ಆಕೆ ತನ್ನ ಶೃಂಗಾರಕ್ಕಾಗಿ ಸ್ವಲ್ಪ ಸಮಯವನ್ನು ಅವಶ್ಯವಾಗಿಯೇ ಯಾಚಿಸುವಳು. —ಚೈರಿ ಫರ್ಗ್.

ನಾರಿಯು ಪ್ರಥಮ ಉನ್ಮಾದದಲ್ಲಿ ತನ್ನ ಇನಿಯನನ್ನು ಪ್ರೀತಿಸುವಳು. ಉಳಿದೆಲ್ಲಾ ವೇಳೆಗಳಲ್ಲಿ ಆಕೆ ಪ್ರೀತಿಸುವುದು ಬರೇ ಪ್ರೇಮವನ್ನು. —ಬಾಯ್ಸ್ ಡಾನ್ ಜುವಾನ್.

ಬಾಣದ ಆಘಾತದಿಂದ ಘಾಸಿಗೊಂಡ ಪಾರಿವಾಳವು ತನ್ನ ಗಾಯವನ್ನು ಗರಿಗಳಿಂದ ಮುಚ್ಚಿಕೊಳ್ಳುವಂತೆ ನಾರಿಯು ತನ್ನ ಕಂತಾಪವನ್ನು ಪುರುಷನಿಂದ ಮರೆಸಲೆತ್ನಿಸುತ್ತಾಳೆ. —ಅನಾಮಧೇಯ.

ಹಿರಣ್ಣಯ್ಯ ಮಿತ್ರಮಂಡಳಿ.
— ಪ್ರಕಟಣೆ —
ದಿವಂಗತ K. ಹಿರಣ್ಣಯ್ಯನವರಿಂದ ವಿರಚಿತವಾದ "ದೇವದಾಸಿ, ಎಚ್ಚಮ ನಾಯಕ" ನಾಟಕವನ್ನಾಗಲೀ, ಅಥವಾ ಆ ನಾಟಕದ ಯಾವ ಭಾಗವನ್ನೇ ಆಗಲೀ ಯಾವ ನಾಟಕ ಕಂಪೆನಿಯವರೂ ಆಡಬೇಕಾದರೆ ನಾಟಕ ಒಂದಕ್ಕೆ ಇಪ್ಪತ್ತೈದು ರೂಪಾಯಿಗಳ ಗೌರವ ಧನವಾಗಿ (25=00) ದಿ. ಹಿರಣ್ಣಯ್ಯನವರ ಏಕಮಾತ್ರ ಪುತ್ರರಾದ H. ನರಸಿಂಹ ಮೂರ್ತಿಯವರಿಗೆ ಕಳುಹಿಸಿಕೊಟ್ಟು ಅನುಮತಿ ಪಡೆದು ನಾಟಕವಾಡಬೇಕು. ಹಾಗೊಂದು ವೇಳೆ ಆಡಿದ್ದೇ ಆದರೆ ಕಂಪೆನಿಯು ಪ್ರಾರಂಭಿಸಿದ ದಿನದಿಂದ ಈ ದಿನದ ವರೆಗೂ ಗೌರವ ಧನ ವಸೂಲು ಮಾಡಲಾಗುವುದು.
ಕ್ಯಾಂಪ್—ಹಾಸನ
28—1—1961
—ಡಿ. ಎಂ. ರಂಗಪ್ಪ.
ಮೆನೇಜಿಂಗ್ ಪ್ರೊಪ್ರೈಟರ್.
ಹಣ ಕಳುಹಿಸುವ ವಿಳಾಸ:
H. ನರಸಿಂಹ ಮೂರ್ತಿ,
ಪ್ರೊಪ್ರೈಟರ್, ಹಿರಣ್ಣಯ್ಯ ಮಿತ್ರಮಂಡಳಿ,
H. O. ತುಮಕೂರು.

ಕಥಾವಿಹಾರ

(೨ನೇ ಪುಟದಿಂದ)

ಶಕುಂತಲೆ— ನಾನು ತಮ್ಮಂತಹ ಾನ್ಯ ಪುರುಷರಿಂದ ಸೇವೆಮಾಡಿಸಿಕೊಂ ು, ನನ್ನನ್ನು ಅಪರಾಧಿಯನ್ನಾಗಿ ಮಾ ಕೊಳ್ಳಲಾರೆ! (ಎನ್ನುತ್ತ ಹೋಗುವಳು)

ದುಷ್ಯಂತ—(ಶಕುಂತಲೆಯನ್ನು ತಡೆ) ಸುಂದರೀ! ಇನ್ನೂ ಅಸ್ತಮಾನವಾಗಿ ್ಲ. ಅದರ ವೇಳೆ, ನಿನ್ನೀ ಅವಸ್ಥೆಯು ....ನಿನ್ನ ಎರಡು ಸ್ತನಗಳೂ, ಕಮಲದ ಯಿಂದ ಮುಚ್ಚಲ್ಪಟ್ಟವೆ! ಇಂತಹ ಪರಿ ತಿಯಲ್ಲಿ ನೀನು ಪುಷ್ಪಶಯ್ಯೆಯನ್ನು ಜಿಸಿ, ಈ ತಾಪವನ್ನು ಸಹಿಸುತ್ತ ಹೇಗೆ ೂರಟುಹೋಗಬಲ್ಲೆ?

ಶಕುಂತಲೆ—ಬಿಡಿ! ಬಿಡಿ! ನನ್ನನ್ನು ಟ್ಟು ಬಿಡಿ! ನಾನು ಸ್ವತಃ ನನ್ನ ಆಧೀ ಳಾಗಿಲ್ಲ. ಈ ಸಖಿಯರೇ ನನ್ನ ಸಹಾಯ ರಾಗಿರುವಾಗ—ನಾನೇನೇ ಏನು ಮಾಡಬಲ್ಲೆ?

ರಾಜ—ಓಹ್! ನಾನು ಅನಮಾನಿತ ದೆ!

ಶಕು—ಸ್ವಾಮಿ! ನಾನು ತಮಗೆ ಏ ೂ ಹೇಳುತ್ತಿಲ್ಲ. ನನ್ನ ಭಾಗ್ಯವನ್ನು ಹ ಯುತ್ತೇನೆ!

ರಾಜ—ಭಾಗ್ಯವು ನಿನ್ನಿಚ್ಛೆಯಂತೆ ಕೆ ಸಮಾಡುತ್ತಿರುವಾಗ ನೀನದನ್ನು ದೂ ಸುವುದಾದರೂ ಏಕೆ?

ಶಕು—ದೂಷಿಸದೆ ಅಂತಹ ಭಾಗ್ಯ ಂದೇನು? ನನ್ನನ್ನು ಪರಾಧೀನೆಯನ್ನಾ ಮಾಡಿಯೂ, ಇನ್ನೊಬ್ಬರ ಗುಣಗಳಿ , ಮುಗ್ಧಳಾಗಿಸುವ, ಆ ನನ್ನ ಭಾಗ್ಯ, ಾರ್ಭಾಗ್ಯವೇ ಸರಿ.

ರಾಜ—ಮಿಲನ ಸುಖಾಪೇಕ್ಷಿಗಳಾದ ರುಣಿಯರು, ತಮ್ಮ ಸುಂದರಾಂಗಗಳ ನ್ನು ಅರ್ಪಿಸಲೂ ಕಾತರರಾಗಿರುತ್ತಾರೆ. ಂತು ಈ ತರುಣಿಯರಲ್ಲಿ ಅಪೇಕ್ಷೆ ಬಲ ಾಗಿದ್ದರೂ, ತಮ್ಮ ಪ್ರಿಯರಿಗೆ ವಿರೋಧ ಾಗಿ ವರ್ತಿಸುತ್ತಾರೆ. ಇದರಿಂದ ತಿಳಿಯು ದೇನೆಂದರೆ, ಕಾಮನೂ ಸಮಯ ನೋ , ಇವರನ್ನು ಪೀಡಿಸುವುದಲ್ಲ; ಇವರೂ ೂಡ ಕಾಮನನ್ನು ಪೀಡಿಸುತ್ತ ವೃಥಾ ಾಲಹರಣ ಮಾಡುತ್ತಾರೆ.

(ಶಕುಂತಲೆ ಮುಂದೆ ಹೋಗುತ್ತಾಳೆ! ುಷ್ಯಂತ ಆಕೆಯ ಸೆರಗನ್ನು ಹಿಡಿಯು ತ್ತಾನೆ!) ಆಗ ಶಕುಂತಲೆ—ಸ್ವಾಮಿ! ಗೌ ವ ರಕ್ಷಣೆ ಮಾಡಿರಿ! ನೋಡಿ ಋಷಿವ ರು ಅತ್ತಿತ್ತ ತಿರುಗಾಡುತ್ತಿರುವರು.

ರಾಜಾ—ಸುಂದರೀ ... ನೀನು ನಿನ್ನ ಿರು ಹಿರಿಯರಿಗಾಗಿ ಹೆದರ ಬೇಡ, ಲೋ ಾ ವ್ಯವಹಾರವನ್ನರಿತ ಕಣ್ವರು, ನಿನ್ನ ಿ ಕಾರ್ಯಕ್ಕಾಗಿ. ಕೋಪಿಸಿಕೊಳ್ಳಲಾ ರು. ಏಕೆಂದರೆ ಈ ಮೊದಲು ಎಷ್ಟೋ ುಂದಿ ಋಷಿ ಕನ್ಯೆಯರು ಗಾಂಧರ್ವ ವಿವಾಹ ಮಾಡಿಕೊಂಡಿದ್ದಿದೆ! ಮತ್ತೆ ಹಿರಿ ಯರು ಅದನ್ನು ಅನುಮೋದಿಸಿದ್ದೂ ಇದೆ. ನಾನದನ್ನು ಕೇಳಿಬಲ್ಲೆ. (ಓಹ್! ನಾನು ಪ್ರಕಾಶಕ್ಕೆ ಬಂದು ಬಿಟ್ಟೆನೇ?) ಎನ್ನುತ್ತ ರಾಜ, ಹಿಂದೆ ಸರಿಯುವನು. ಶಕುಂತಲೆ ಂದು ಹೆಜ್ಜೆ ಮುಂದಿಟ್ಟು—ಹೇಳುವಳು —ಸ್ವಾಮಿ....ಈ ದಾಸಿಯು ತಮ್ಮ ಇ ಚ್ಛೆಯನ್ನು ಪೂರ್ಣಗೊಳಿಸಲಿಲ್ಲ. ಆದರೆ, ೇವಲ—ಸಂಭಾಷಣೆಯು ಮೂಲಕ, ಪರಿ ತಿತಳಾದ, ನನ್ನನ್ನು ಮರೆಯಬಾರದು.

ರಾಜ—ಸುಂದರೀ ... ದಿವಸದ ಅವ ಸಾನ ಕಾಲದಲ್ಲಿ ಭಾಂಯೆ ಯು ದೂರ ಸರಿ ದರೂ ಹೇಗೆ ವೃಕ್ಷದ ಮೂಲ ಭಾಗವ ನ್ನು ಬಿಡುವುದಿಲ್ಲವೋ ಹಾಗೆಯೇ ನೀನೂ ಕೂಡ ದೂರ ಸರಿದು ಹೋಗುತ್ತಿದ್ದರೂ ನನ್ನ ಹೃದಯವನ್ನು ಬಿಡುವುದಿಲ್ಲವಲ್ಲ?

ಶಕುಂತಲೆ—ಹಾಯ್! ಇವರ ಮಾತು ಕೇಳಿದ ಬಳಿಕ ನನ್ನ ಕಾಲುಗಳು ಚಲಿ ಸುವುದೇ ಇಲ್ಲವಲ್ಲ? ಸರಿ, ಇಲ್ಲೇ ಮರದ ಮರೆಯಲ್ಲಿದ್ದು ಕೊಂಡು—ಇವರ ಭಾವನೆ ಗಳನ್ನವಲೋಕಿಸುತ್ತೇನೆ.

ರಾಜ— ನಮ್ಮ ಅನುರಾಗವು ಪ್ರವಾ ಹದಂತೆ, ನಿನ್ನ ಮೂಲಕ ಪ್ರವಹಿಸಿದು ದು, ಸ್ಪಷ್ಟವಿದ್ದು ಮತ್ತೂ ನೀನು ನನ್ನ ನ್ನು ಬಿಟ್ಟು ಉಪೇಕ್ಷೆಯಿಂದ ಹೊರಟು ಹೋಗುವಿಯಲ್ಲ? ಕೋಮಲವಾದ ಶಿರೀ ಷ ಸುಮದ ವೃಂತವು ಹೇಗೆ ಕಠಿಣವಾಗಿ ರುವುದೋ ಹಾಗೆಯೇ ಕೋಮಲವಾದ ಹಾಗೂ, ಗಾಢವಾದ ಪ್ರೇಮದಿಂದ, ಉ ಪಭೋಗಿಸಲು ಯೋಗ್ಯವಾದ ನಿನ್ನ ಈ ರೂಪ ಇರುವಾಗ. ನಿನ್ನ ಹೃದಯವು ಹೇ ಗೆ ಇಷ್ಟು ಕಠಿಣವಾಯಿತೋ?

ಶಕು—ಈ ನುಡಿಗಳನ್ನು ಕೇಳಿದ ಬಳಿ ಕ, ಮುಂದೆ ನಡೆಯುವ ಶಕ್ತಿಯೇ ನನ್ನ ಲ್ಲಿ ಉಳಿದಿಲ್ಲ.

ರಾಜ—ಈಲತಾ ಮಂಟಪದಲ್ಲಿ ಪ್ರಿ ಯೆಯ ಹೊರತು, ನಾನೊಬ್ಬನೇ ಏನು ಮಾಡಲಿ? (ಮುಂದೆ ನೋಡಿ) ಓಹ್! ನನಗೆ ಮುಂದುವರಿಯಲೂ ಆಗದಂತೆ, ವಿಘ್ನ ಬಂದೊದಗಿತು. ಸುಗಂಧಿತವಾದ ಶಕುಂತಲೆಯ, ಮೃಣಾಲ ಕಂಕಣವು ನನ್ನ ಹೃದಯ ಬಂಧನದ ಕಂಕಣದಂತೆ, ಮುಂದೆ ಬಿದ್ದಿರುವುದು! (ಎತ್ತಿ ಕೊಳ್ಳು ವನು.)

ಶಕು— (ತನ್ನ ಕೈನೋಡಿಕೊಂಡು) ಓಹ್! ನನ್ನ ಶರೀರವು ಕೃಶವಾದುದರಿಂದ ಮೃಣಾಲಕಂಕಣ ಕೆಳಗೆ ಬಿದ್ದುದು, ನನ ಗೆ ತಿಳಿಯಲೇ ಇಲ್ಲ.

ರಾಜ—ಪ್ರೇ ಪ್ರಿಯೆ! ನಿನ್ನ ಸುಂದರ ಹಸ್ತವನ್ನಗಲಿದ್ದೂ ಸಹ ಈ ನಿನ್ನ ವಿಲಾಸಾಲಂಕಾರ ಕಂಕಣವು, ಅಚೇತನ ವಾಗಿದ್ದೂ ಸಹ ಈಗ ಅದು, ಈ ದುಃವಿ ಯಾದ ವ್ಯಕ್ತಿಗೆ ಆಶ್ವಾಸನವನ್ನು ನೀಡು ತ್ತಿದೆ! ಆದರೆ, ನೀನು, ನೀನು, ಅದನ್ನೂ ಕೂಡ ಮಾಡಲಿಲ್ಲನಲ್ಲ!

ಶಕುಂತಲೆ— ಇನ್ನು ನನ್ನಿಂದ ಸ್ವಾ ಮಿಯೊಡನೆ ಕೂಡದಿರಲು ಸಾಧ್ಯವೇ ಇಲ್ಲ! ಕಡಮಾಡಲೂ ಸಾಧ್ಯವಿಲ್ಲ. ಇದೇ ನೆಪದಿಂದ ಅವರ ಮುಂದೆ ಹೋಗುತ್ತೇ ನೆ! (ಹತ್ತಿರ ಹೋಗುವಳು)

ರಾಜ— (ಸಂತಸದೊಡನೆ) ಓಹ್! ನನ್ನ ಪ್ರಾಣಪ್ರಿಯೆ ಬಂದೇಬಿಟ್ಟಳು! ಇಷ್ಟು ದುಃಖಪಡಿಸಿಯೂ, ದೈವವು ಈಗ ನನ್ನ ಮೇಲೆ, ಕೃಪೆ ಮಾಡಿ ಉಪಕಾರ ಮಾಡಿತು!

'ಜಾತಕ ಪಕ್ಷಿಯು, ತನ್ನ ಕ್ಷಾಮ ಕಂಠದಿಂದ, ನೀರಿಗಾಗಿ ಪ್ರಾರ್ಥನೆ ಮಾ ಡಿತು- ಆಗ ನವಮೇಘವು ಜಾತಕ ಪಕ್ಷಿ ಯ ಬಾಯಿಯಲ್ಲಿ ನವಜಲವನ್ನು ಸುರಿ ಯಿತು!'

ಶಕುಂತಲೆ— (ರಾಜನ ಮುಂದೆ ಬಂ ದು) ಆರ್ಯಾ! ನಡುದಾರಿಯಲ್ಲಿ ನೆನ ಪಾಯಿತು- ಆದಕ್ಕಾಗಿಯೇ ನನ್ನ ಕಂಕಣ ವನ್ನು ತೆಗೆದುಕೊಂಡು ಹೋಗಲಿಕ್ಕಾಗಿ ಯೇ ಬಂದೆ! ಅದನ್ನು ತಾವು ಎತ್ತಿಕೊಂ ಡಿರಬಹುದೆಂದು, ನನ್ನ ಹೃದಯವೇ ನನ ಗೆ ಹೇಳಿತು! ಅದನ್ನು ನನಗೆ ಕೊಟ್ಟು ಬಿಡಿ! ಮತ್ತು ನನ್ನನ್ನೂ ಕಮ್ಮನ್ನೂ ಇ ಲ್ಲಿಯ ಮುನಿ ಜನರು ನೋಡದಂತೆ, ಜಾಗ್ರತೆ ವಹಿಸಿರಿ!

ರಾಜ— ಅದರೆ, ನಾನಿದನ್ನು ಒಂದು ಶರ್ತದ ಮೇಲೆ ಮಾತ್ರ ಕೊಡಬಲ್ಲೆ.

ಶಕುಂತಲೆ—ಯಾವ ಶರ್ತದ ಮೇಲೆ..?

ರಾಜ — ಇದನ್ನು ನಾನೇ ನಿನ್ನ ಕೈಗೆ ತೊಡಿಸಬೇಕು. ಇದೇ ಆ ಶರ್ತ!

ಶಕುಂತಲೆ— ಓಹ್! ಬೇರೆ ಉಪಾ ಯವೇ ಇಲ್ಲವೇ?... ಹಾಗಾದರೆ ಆಗಲಿ! (ಎಂದು ಮುದುಡಿಕೊಂಡು ಕುಳಿತುಕೊ ಳ್ಳುವಳು.)

ರಾಜ— ನಡೆ, ಈ ಶಿಲೆಯ ಮೇಲೆ ಕುಳಿತುಕೊಳ್ಳೋಣ (ಕುಳಿತುಕೊಳ್ಳುವ ರು) (ದುಷ್ಯಂತನು ಶಕುಂತಲೆಯ ಕೈ ಹಿಡಿದು) ಆಃ ಎಷ್ಟು ಸುಂದರ! ಎಷ್ಟು ಮಧುರ ಇವರ ಸ್ಪರ್ಶ! ಕಾಮರೂಪೀ ವೃಕ್ಷವು ಹರನ ಕೋಪಾಗ್ನಿಯಿಂದ ಸು ಟ್ಟು ಭಸ್ಮವಾಗಿದೆ! ಆದರೆ ಆ ಬಳಿಕ ವಿ ಧಾತನು ಅಮೃತವನ್ನು ಸುರಿದು, ಈ ಹಸ್ತರೂಪೀ ಅಂಕುರವನ್ನು ಸೃಷ್ಟಿಸಿರು ವನೇ!

ಶಕುಂತಲೆ— (ರೋಷಾಂಚಿತಳಾಗಿ) ಅರ್ಯಪುತ್ರಾ! ಬೇಗ, ಬೇಗ ಮಾಡಿ!

ರಾಜ—(ಸಹರ್ಷದಿಂದ, ಸ್ವಗತ) ಈ ಮಾತು, ಪತಿಗೆ ಹೇಳುವ ಮಾತು. ಇದ ನ್ನು ಕೇಳಿ ನನಗೆ ವಿಶ್ವಾಸವುಂಟಾಗುತ್ತಿ ದೆ! ಸುಂದರೀ! ಈ ಮೃಣಾಲ ಕಂಕಣದ ಸಂಧಿ ಸ್ಥಾನ ಸರಿಯಾಗಿಲ್ಲ. ಅದುದರಿಂದ ಇದನ್ನು ಬೇಕಾದರೆ, ಬೇರೆ ರೀತಿಯಿಂದ ತೊಡಿಸುತ್ತೇನೆ! (ತುಂಬಾ ಹೊತ್ತು ಮಾ ಡಿ ತೊಡಿಸುತ್ತ) ಸುಂದರೀ... ನೋಡು, ಶಲೆಯ ಮೂಲಕ ನವಸೌಂದರ್ಯವ ನ್ನು ಹೊಂದಲು, ಚಂದ್ರನು ಆಕಾಶವ ನ್ನು ಬಿಟ್ಟು ಶ್ಯಾಮಲತೆಯಂತಿರುವ ನಿನ್ನ ಕೋಮಲ ಹಸ್ತದಲ್ಲಿ ಬಂದು ಬಿದ್ದಿದೆ! ಮತ್ತು—ಈ ಮೃಣಾಲ ರೂಪದಿಂದ, ಅ ದರ ಎರಡು ಭಾಗಗಳೂ ಜೋಡಿಯಾಗಿ ಬೆಳಗಿವೆ!

ಶಕು— ಕಿವಿಗಳಲ್ಲಿಯ ಕಮಲಪುಷ್ಪ ದ ಧೂಳು ಕಣ್ಣಿಗೆ ಬಿದ್ದುದರಿಂದ, ಇದ ನ್ನು ನೋಡಲು ನಾನು ಸಮರ್ಥಳಾಗಿಲ್ಲ!

ರಾಜ— ನೀನು ಅಪೇಕ್ಷಿಸುವೆಯಾದ ರೆ, ನಾನದನ್ನು ಊದಿ ತೆಗೆದು ಹಾಕ ಬಲ್ಲೆ!

ಶಕುಂತಲೆ—ನೀವು ಹಾಗೆ ಮಾಡುವಿ ರಾದರೆ ನಾನು ನಿಮಗೆ ಕೃತಜ್ಞಳಿರುತ್ತೇ ನೆ! ಆದರೆ ನನಗೆ ನಿಮ್ಮಮೇಲೆ ವಿಶ್ವಾಸ ವಿಲ್ಲ! (ಅಂದರೆ ಕಣ್ಣಿನ ಕಸ ತೆಗೆವ ನೆಪ ದಲ್ಲಿ ಆತ ಇನ್ನೇನಾದರೂ ಮಾಡಿಬಿಟ್ಟರೆ? ಎಂದು, ಪಾಪ! ಶಕುಂತಲೆಗೆ ಭಯ!)

ರಾಜ—ಚಿಃ ಚಿಃ ಹಾಗೆ ಎಂದಿಗೂ ಆ ಗಲಾರದು. ಹೊಸದಾಗಿ ಬಂದ ಸೇವಕ ನು, ತನ್ನ ಸ್ವಾಮಿಯ ಆಜ್ಞೆಗಿಂತ, ಹೆಚ್ಚು ಮುಂದುವರಿಯಲಾರ! ನಿನ್ನ ಆಜ್ಞೆಯ ವಿರುದ್ಧ ನಾನು ವರ್ತಿಸಲಾರೆ!

ಶಕುಂತಲೆ—ನಮ್ಮ ಈ ವಿಶೇಷವಾದ ಯಾವ ಆದರಭಾವವಿದೆಯೋ ಅದೇ ನನ್ನ ಗೆ, ಅವಿಶ್ವಾಸಕ್ಕೆ ಕಾರಣವಾಗಿ ತೋರು ತ್ತದೆ.

ರಾಜ—ಏ ... ಮದಿರಾಕ್ಷಿ! ನನ್ನಿಂದ ಏನಾದರೂ, ಅವಿಹಿತ ವರ್ತನೆ ನಡೆದೀ ತೆಂದು, ನೀನು ಶಂಕಿಸಬೇಡ!

ಶಕು—ಆರ್ಯಾ! ನೀವೇನೋ ಹೆಚ್ಚು ಮೌನಗ್ರಹಣ ಮಾಡುತ್ತಿರುವಿರಲ್ಲ?

ರಾಜ—ನಾನು ನಿನ್ನ ಕರ್ಣ ಕಮಲ ದ ಹತ್ತಿರ ನೋಡುತ್ತಿರುವುದರಿಂದ, ನಿನ್ನ ಕಣ್ಣಿಳನ್ನು ನೋಡಲಾರೆ!

ಶಕು—ಸರಿ, ಈಗ ನನ್ನ ಕಣ್ಣು ನಿ ರ್ಮಲವಾಯಿತು. ನೀವು ನನ್ನ ಈ ಪ್ರಿ ಯಕಾರ್ಯವನ್ನು ಮಾಡಿರುವಿರಿ! ಆದರೆ ನಾನು ನಿಮಗೆ, ಯಾವ ಉಪಕಾರವನೂ ಮಾಡಿಲ್ಲ! ಇದನ್ನು ನೆನೆದು ನಾನು ಲಜ್ಜಿ ತಳಾಗಿದ್ದೇನೆ!

ರಾಜ—ಸುಂದರೀ...ಏನು ಉಪಕಾ ರ ಮಾಡಬೇಕೆಂದಿರುವೆ? ನಾನು ನಿನ್ನ ಸುಂದರವಾದ ಮುಖಕಮಲವನ್ನು ಆ ಘ್ರಾಣಿಸಿದ್ದೇನೆ! ಅದೂ ಒಂದು ನಿನ್ನದು ಉಪಕಾರವೇ ಸರಿ! ಹೇಗೆಂದರೆ ಭ್ರಮರ ವು, ಕೇವಲ ಕಮಲದ ಸುಗಂಧ ಮಾತ್ರ ದಿಂದಲೇ ಸಂತುಷ್ಟಗೊಳ್ಳುತ್ತದೆ!

ಶಕುಂತಲೆ—(ನಗುತ್ತ) ಒಂದ ವೇಳೆ ಭ್ರಮರವು ಅಷ್ಟರಿಂದಲೇ ತೃಪ್ತಿಹೊಂದ ದಿದ್ದರೆ, ಮತ್ತೇನು ಮಾಡುತ್ತದೆ?

(ದುಷ್ಯಂತನು ಆಕೆಯ ಚಂದ್ರವದನ ವನ್ನು ಹಿಡಿದೆತ್ತಿ)— ....ಹೀಗೆ....ಎನ್ನು ತ್ತಾನೆ! ಆಕೆ ತನ್ನ ತುಟಿಗಳನ್ನು ಬೆರಳು ಗಳಿಂದ ಮುಚ್ಚಿಕೊಳ್ಳುತ್ತಾಳೆ!

ಅಷ್ಟರಲ್ಲಿ ನೇಪಥ್ಯದಿಂದ—"ಪೇ ಚ ಕ್ರವಾಕ ವಧು! ರಾತ್ರಿಯಾದುದರಿಂದ ಇ ನ್ನು ನಿನ್ನ ಸಹ ಚರನನ್ನು ಕಳುಹಿಸು!" ಎಂಬ ಧ್ವನಿ ಕೇಳಿಸುತ್ತದೆ. ಗೌತಮಿ ಯೂ ಅತ್ತ ಬಂದುದರಿಂದ, ದುಷ್ಯಂತ ಶಕುಂತಲಾ ಸಂವಾದಕ್ಕೆ ತಡೆಯುಂಟಾ ಗಿ ಪ್ರೇಮಿಗಳಿಗೆ ರಸಭಂಗವಾದಂತಾ ಯಿತು! ('ಶಾಕುಂತಲ"ದಿಂದ.)

"ಈಗ ಬೇಡವಿದೆಂದು ಮದನಾಂಗಿ
ತಡೆಯುತಿರೆ!
ಪ್ರೇಮದಾಲಿಂಗನವು ಬಿಗಿಯಾಗೆ
ಬೇಗ!
ಯಾರೊ ಕರೆದಾಧ್ವನಿಯು ಕೇಳುತಿರ
ಲಾಕ್ಷಣದಿ
ರಸಭಂಗವಾದುದಾ ಪ್ರೇಮಿಗಳಿಗಾಗಾ!"



ಕುಮಾರಿ ಬಿಲ್ಲೆಗಳು

(Registered)

ಈ ದೇಶೀಯ ತಯಾರಿಕೆಯ ಗುಣಾಂಶವು ವರ್ಷಗಟ್ಟಲೆ ಯಿಂದ ವಿಖ್ಯಾತವಾಗಿದೆ ಮತ್ತು ಪ್ರಮುಖ ಕೆಮಿಸ್ಟರಿಂದ ಈ ಕೆಳಗಿನ ದರಗಳಲ್ಲಿ ವಿಕ್ರಯಿಸಲ್ಪಡುತ್ತದೆ. ಟ್ಯೂಬಿಗೆ ರೂ. 3=00 (ಸಾದಾ), ರೂ. 5=00(ಸ್ಪೆಶ್ಯಲ್), ರೂ. 8=00 (ಎಕ್ಸ್ಟ್ರಾ ಸ್ಪೆಶ್ಯಲ್).

P. DEVEE & Co. (M. I.) CALCUTTA—40

ಸ್ಥಾಪಕರು: ಪಾ ಕಂಪೆನಿ, ಮಂಗಳೂರು—1.

ನವಯುಗ ವಾರ ಪತ್ರಿಕೆಗೆ ಚಂದಾದಾರರಾಗಿ ಪ್ರೋತ್ಸಾಹಿಸಿರಿ

NAVAYUGA
REGD. NO.B. G. 176

UDIPI, THURSDAY
9—2—1961

LICENSE NO. 31
Licensed to Post without Prepayment

ಆಧ್ಯಾತ್ಮ ವಿಚಾರ

ಭಗವದ್ಗೀತೆಯ ಪ್ರಕಾಶ

ದೃಢಚಿತ್ತದಿಂದ ಪರಮಾತ್ಮ ಧ್ಯಾನ ಮಾಡಿದರೆ, ಆತನನ್ನೇ ಅನನ್ಯವಾಗಿ ಶರಣು ಹೊಕ್ಕು ಪರಮ ಭಕ್ತನೆನಿಸಿ, ನಮ್ಮ ಹಿತಾಹಿತವೆಲ್ಲವನ್ನೂ ಆತನಿಗೇನೇ ಸಮರ್ಪಣೆ ಮಾಡಿದರೆ, ಅವನು ನಮ್ಮ ಕೈ ಬಿಡಲಾರ. ಪರಮಾತ್ಮನ ಭಕ್ತರು ಎಂದೂ ನಾಶವಾಗುವುದಿಲ್ಲ.

ಶ್ರೀ ಎಂ. ಬಿ. ಶಂಕರ ರಾವ್, ಐ. ಎ. ಎಸ್, (ನಿವೃತ್ತ)

ಕಿರಣ ೮: ಚ್ಯುತಿಯಿಲ್ಲದ ಯೋಗ

ಅರ್ಜುನ—ಬ್ರಹ್ಮಜ್ಞಾನವೆಂದರೇನು? ಆತ್ಮವೆಂದರೇನು? ಕರ್ಮವೆಂದರೇನು? ದೇವಾಂಶವೆಂದರೇನು? ಯಜ್ಞವೆಂದರೇನು?—ಮಧುಸೂಧನನೇ ವಿವರಿಸು.

ಭಗವಾನ—ನಾಶವಿಲ್ಲದ ಶಾಶ್ವತವಸ್ತು ಬ್ರಹ್ಮಜ್ಞಾನಕ್ಕೆ ಆತ್ಮದ ಒಳಗೆ ವಾಸ—ಎಂದರೆ ಆತ್ಮವೇ ಬ್ರಹ್ಮಜ್ಞಾನದ ಬೀಡು. ಸೃಷ್ಟಿಗೆ ಕಾರಣಭೂತವಾದ ಸೃಷ್ಟಿಸುವ 'ಅಪಾರಶಕ್ತಿ'ಯೇ ಕರ್ಮವು. ಸೃಷ್ಟಿಗೆ ಸಂಬಂಧಿಸಿದ ಎಲ್ಲಾ ವಸ್ತುಗಳಿಗೂ ನಾಶವಿದೆ. ಸೃಷ್ಟಿಗೆ ಹೊರಪಟ್ಟ ಪರಬ್ರಹ್ಮನೇ ನಾನು. ಯಜ್ಞವೂ, ದೇವಾಂಶನೂ ನನ್ನೊಳಗೆ ಸೇರಿವೆ. ಮರಣಕಾಲದಲ್ಲಿ ಎಲ್ಲಾ ಆಶೆಗಳನ್ನು ಬಿಟ್ಟು ನನ್ನನ್ನೇ ಧ್ಯಾನಿಸುವ ಮಾನವನು ನನ್ನಲ್ಲಿ ಕೂಡುವನು. ಇದರಲ್ಲಿ ಎಳ್ಳಿನೇಳಷ್ಟಾದರೂ ಸಂಶಯವಿಲ್ಲ. ಮರಣಕಾಲದಲ್ಲಿ ನನ್ನನ್ನು ಧ್ಯಾನಿಸಿ ಇತರ ಆಶೆಗಳನ್ನು ಮರೆತರೆ ನನ್ನ ಸಾನಿಧ್ಯವು ಲಭಿಸುವುದು. ಆದರೆ ಸದಾಕಾಲದಲ್ಲಿಯೂ ನನ್ನನ್ನು ಧ್ಯಾನಿಸುವ ಮಾನವನಿಗೆ ಮಾತ್ರ ಮರಣಕಾಲದಲ್ಲಿ ನನ್ನ ಧ್ಯಾನದ ಭಾಗ್ಯವು ಸಿಕ್ಕುವುದು. ನನ್ನ ಧ್ಯಾನವನ್ನು ಎಡೆಬಿಡದೆ ಮಾಡುವವನು ನನ್ನ ಬಳಿಯಲ್ಲಿಯೇ ಬರುವನು, ಆತನು ಯಾವ ಮಾಯಾಜಾಲದಲ್ಲಿಯೂ ಸಿಲುಕನು. ಯೋಗಬಲದಿಂದ ಮರಣಕಾಲದಲ್ಲಿ ನನ್ನನ್ನೇ ಧ್ಯಾನಿಸಿ ಬೇರೆ ಎಲ್ಲಾ ವಿಷಯಗಳನ್ನು ತ್ಯಜಿಸಿದವನು ನನ್ನಲ್ಲಿ ಒಂದಾಗುವನು. ಸೂರ್ಯನಿಂದಲೂ ಮಿಗಿಲಾಗಿ ಪ್ರಕಾಶಿಸುವ, ಕಣ್ಣುಗಳಿಗೆ ಗೋಚರವಾಗದ ಪರಮಾತ್ಮನನ್ನು ಸದಾ ಧ್ಯಾನಿಸುವವನು ಸಂಪೂರ್ಣ ಜ್ಞಾನಿಯಾಗುವನು. ಆತನು ಮುಕ್ತಿಯನ್ನು ಪಡೆಯುವನು. ಆತನ ಯೋಗವು ಚ್ಯುತಿಯಿಲ್ಲದ ಯೋಗವೆನಿಸುವುದು. ದೇಹದ ನವದ್ವಾರಗಳನ್ನು ಮುಚ್ಚಿ, ಮನಸ್ಸನ್ನು ಹೃದಯದಲ್ಲಿ ನೆಲೆಮಾಡಿ, ಪ್ರಾಣರ್ಪಣೆಗಳನ್ನು ಮಸ್ತಕದವರೆಗೆ ಎಳೆದು ಧ್ಯಾನವನ್ನು ಮಾಡಿ "ಓಂ" ಎಂಬ ಒಂದೇ ಒಂದು ಶಬ್ದವನ್ನು ಉಚ್ಚರಿಸಿ ಯೋಗಾಭ್ಯಾಸಮಾಡುವ ಮಾನವನು ಮರಣಕ್ಕೆ ಹೆದರದೇ ಮುಕ್ತಿಯನ್ನು ಪಡೆಯುವನು. ಅವನಿಗೆ ಪುನರ್ಜನ್ಮವಿಲ್ಲ. ಈ ತರಹದ ದಿವ್ಯಯೋಗಕ್ಕೆ ಚ್ಯುತಿಯಿಲ್ಲ. ಆದರೆ ಆ ಧ್ಯಾನದಲ್ಲಿ ನಿಶ್ಚಲ ಭಕ್ತಿಯೂ, ಶ್ರದ್ಧೆಯೂ ಇರತಕ್ಕದ್ದು. ಈ ಧ್ಯಾನವನ್ನು ಹಗಲಲ್ಲಿ, ಶುಕ್ಲಪಕ್ಷದಲ್ಲಿ ಉತ್ತರಾಯಣದಲ್ಲಿ ಮಾಡಬೇಕು. ರಾತ್ರಿಯಲ್ಲಿ, ಕೃಷ್ಣಪಕ್ಷದಲ್ಲಿ ಮತ್ತು ದಕ್ಷಿಣಾಯಣದಲ್ಲಿ ಈ ಧ್ಯಾನಕ್ಕೆ ಶಕ್ತಿಯು ಕಡಿಮೆ.

ಕಿರಣ ೯: ವಿಜ್ಞಾನ ಯೋಗ

ಭಗವಾನ:—ಅರ್ಜುನನೇ ಜ್ಞಾನದ ರಹಸ್ಯವನ್ನು ನಿಮಗೆ ವಿವರಿಸುತ್ತೇನೆ. ಜ್ಞಾನದಲ್ಲಿ ಪ್ರಸಿದ್ಧವಾದ ವಿಜ್ಞಾನವೂ, ರಹಸ್ಯವೂ, ಶುದ್ಧತೆಯೂ ಸೇರಿವೆ. ಅನುಭವದಿಂದಲೇ ಇವುಗಳನ್ನು ಅರ್ಥಮಾಡಿಕೊಳ್ಳಬೇಕು. ಜ್ಞಾನದಲ್ಲಿ ಧರ್ಮವಿದೆ. ಧರ್ಮವನ್ನು ಅನುಸರಿಸುವುದು ಕಷ್ಟವಲ್ಲ. ಜ್ಞಾನವು ಶಾಶ್ವತವಾದುದು. ಈ ಸೂತ್ರನಂಬದ ಅಜ್ಞಾನಿಗಳು ದುಷ್ಟರ ಸಂಗವನ್ನು ಸೇರಿ ಪುನರ್ ಜನ್ಮಕ್ಕೆ ಎಡೆ ಕೊಡುವರು. ಈ ಜಗತ್ತಿನಲ್ಲಿ ಎಲ್ಲಾ ಎಡೆಗಳಲ್ಲಿಯೂ ನಾನಿರುವೆನು. ಎಲ್ಲಾ ಜೀವ ಜಂತುಗಳೂ ನನ್ನನ್ನೇ ಆಧರಿಸಿರುವವು. ನಾನು ಮಾತ್ರ ಯಾವ ವಸ್ತುವನ್ನು ಆಧರಿಸಿಕೊಂಡಿಲ್ಲ. ಇದು ನನಲ್ಲಿರುವ ವಿಜ್ಞಾನದ ಬಲದಿಂದ. ವಿಜ್ಞಾನಿಗಳ ನನ್ನನ್ನು ಸರಿಯಾಗಿ ತಿಳಿದುಕೊಳ್ಳುವರು. ಆದರೂ ಜಗತ್ತು ನನ್ನ ಬಲವನ್ನು ನಂಬಿಕೊಂಡಿಲ್ಲ. ಇದು ವಿಚಿತ್ರವೆಂದು ಕಾಣಬಹುದು. ಚಿತ್ರದೊಡನೆ ವಿಚಿತ್ರವಿದ್ದೇಯಿದೆ. ನನ್ನ ಶಕ್ತಿಯು ಎಲ್ಲಾ ಜೀವಿಗಳಲ್ಲಿದೆ. ಅಚರ ವಸ್ತುಗಳಲ್ಲೂ ಇದೆ. ವಿಜ್ಞಾನಿಗಳು ಇದನ್ನು ಶೋಧಿಸಲು ಶಕ್ತರು. ಆಕಾಶದಲ್ಲಿ ವಾಯು ಸಂಚಾರವಿರುವಂತೆ ಎಲ್ಲಾ ಚರಾಚರ ವಸ್ತುಗಳಲ್ಲಿ ನಾನು ಸಂಚರಿಸುತ್ತಿದ್ದೇನೆ. ಯುಗಾಂತರದಲ್ಲಿ ಇವೆಲ್ಲವೂ ನಾನು ಸೃಷ್ಟಿಸಿದ ಪ್ರಕೃತಿಯಲ್ಲಿ ಐಕ್ಯವಾಗುವ ವೇಳೆ ನಾನು ನವೀನ ಯುಗವನ್ನು ಉಂಟುಮಾಡುತ್ತೇನೆ. ನನ್ನದೇ ಆಗಿರುವ ಪ್ರಕೃತಿಯನ್ನು ನಾನು ನನ್ನ ಸ್ವಾಧೀನದಲ್ಲಿರಿಸಿ ಪ್ರತಿ ಯುಗದಲ್ಲಿಯೂ ನವೀನವಾದ ಜೀವ ಜಂತುಗಳನ್ನು ಸೃಷ್ಟಿಸುತ್ತೇನೆ. ಈ ಕರ್ಮವು ನನ್ನನ್ನು ಬಂಧಿಸುವುದಿಲ್ಲ. ನಾನು ನಿರ್ಗಾಣ್ಯನಾಗಿಯೇ ಉಳಿಯುತ್ತೇನೆ. ನನ್ನ ಅಪಾರ ಶಕ್ತಿಯಿಂದ ನಾಶವಾಗುವ ಜಗತ್ತು. ನನ್ನಿಂದಲೆ ಪುನರ್ ಸೃಷ್ಟಿಯಾಗುವುದು. ಕರ್ಮಗಳು ಹುಟ್ಟುವವು. ನಾನು ಮಾನವ ರೂಪದಲ್ಲಿ ಅವತರಿಸುವಾಗ ಮೂಢರು ನನ್ನನ್ನು ತುಚ್ಛೀಕರಿಸುವರು. ಇದಕ್ಕೆ ಅವರ ಅಜ್ಞಾನವೇ ಕಾರಣ. ಅಜ್ಞಾನಿಗಳು ದುಷ್ಟರೂ, ಆಶಾಬದ್ಧರೂ, ಬುದ್ಧಿ ವಿಹೀನರೂ ಆಗಿರುವರು. ವಿಜ್ಞಾನಿಗಳು ನನ್ನ ಶಕ್ತಿಯನ್ನು ಶೋಧಿಸಿ ಮುಂದುವರಿಯುವರು. ಅವರು ನನ್ನ ಮಹಿಮೆಯನ್ನು ತಿಳಿಯುವರು. ನನಗೆ ನಾಶವಿಲ್ಲವೆಂದೂ, ಎಲ್ಲಾ ಚರಾಚರ ಜೀವಿ ವಸ್ತುಗಳಲ್ಲಿ ನಾನಿದ್ದು, ನಾನು ಅವುಗಳಿಗೆ ಮೂಲ ಕಾರಣನು ಎಂಬುದನ್ನು ಪರಿಶೋಧಿಸಿ ಧನ್ಯರಾಗುವರು. ಅಂತಃಕರಣ ಧನೆಯೇ ವಿಜ್ಞಾನಿಗಳ ವೃತವಾಗುವುದು. ಅವರು ನನ್ನನ್ನು ಪ್ರೀತಿಯಿಂದಲೂ, ಭಕ್ತಿಯಿಂದಲೂ ಪೂಜಿಸುವರು. ನಾನೇ ಯಜ್ಞಮೂರ್ತಿಯು. ನಾನೇ ಔಷಧದ ಬಳ್ಳಿಯು. ನಾನೇ ವೇದ ಮೂರ್ತಿಯು. ಕರಗುವ ಬೆಣ್ಣೆಯೂ ನಾನೇ. ಬೆಂಕಿಯೂ ನಾನೇ. ಯಜ್ಞದ ಜವಿಸ್ಸೂ ನಾನೇ. ಈ ವಿಶ್ವದ ಪಿತನೂ, ಮಾತೆಯೂ, ಮುಕ್ತಾತನೂ ನಾನೇ. ನಾನೇ ಜಗತ್ತಿನ ಅಡಿಗಟ್ಟು. ನಾನೇ "ಓಂ" ಕಾರ್ವರೂಪಿ. ನಾನೇ ಸೃಷ್ಟಿಯ ಮೂಲಕಾರಣನು. ನಾನೇ ಜಗತ್ತಿನ ಅಧಾರನು. ನಾನೇ ನ್ಯಾಯಾಧಿಪತಿಯು. ನಾನೇ ಕಾಕ್ಷಿಗಾರನು ನಾನೇ ಮನೆಯು. ನಾನೇ ಶರಣನು ನಾನೇ ಗೆಳೆಯನು. ನನ್ನಿಂದಲೇ ಸೃಷ್ಟಿ. ನನ್ನಿಂದಲೇ ಪ್ರಳಯ. ನಾನೇ ಉಳಿವ ಭೂಮಿ. ನಾನೇ ಧನದ ಗೃಹ. ನಾನೇ ನಾಶವಿಲ್ಲದ ಬೀಜ. ಮಳೆಯು ಸುರಿವುದು ನನ್ನ ಶಕ್ತಿಯಿಂದ. ಜೀವಗಳು ಬದುಕುವುದ. ನನ್ನ ಬಲದಿಂದ. ಮರಣಕ್ಕೂ ನಾನೇ ಕಾರಣ ಭೂತನು. ನಾನು ಎಲ್ಲೆಯೂ ಗೋಚರನೆ, ಅಂತೆಯೇ ಎಲ್ಲಿಯೂ ಅಗೋಚರನು. ದುರಾಶೆಗಳನ್ನು ಸಂಪೂರ್ಣವಾಗಿ ತ್ಯಜಿಸಿ ನನ್ನಲ್ಲಿ ಶರಣಾದವರು ಮತ್ತು ನನ್ನಲ್ಲಿ ಏಕಾಗ್ರಚಿತ್ತದ ಭಕ್ತಿಯನ್ನು ಇರಿಸಿದವರು ಸಂಪೂರ್ಣ ಜ್ಞಾನಿಗಳು. ಅವರನ್ನು ಸಂರಕ್ಷಿಸುವ ಭಾರವು ನನ್ನದು. ನನ್ನ ಸ್ವಭಾವವನ್ನು ತಿಳಿಯದ ಅಜ್ಞಾನಿಗಳು ನಾಶ ಹೊಂದುವರು. ಮಾನವನು ತಾನು ಮಾಡುವ ಎಲ್ಲಾ ಕರ್ಮಗಳನ್ನು ನನಗೆ ಅರ್ಪಿಸಿದರೆ ಆತನು ತ್ಯಾಗಿಯಾಗುವನು ಆತನು ಮರಣಕ್ಕೆ ಹೆದರನು. ಪಾಪಿಗಳು ಕೂಡ ನನ್ನನ್ನು ಪೂಜಿಸಬಹುದು. ಪಾಪಿಗಳನ್ನು ಕೂಡ ಕರ್ಮದ ದಾರಿಗೆ ಎಳೆವುದು ನನ್ನ ಶಕ್ತಿಯೇ. ನನ್ನ ಭಕ್ತನಿಗೆ ಎಂದೂ ನಾಶವಿಲ್ಲ. ಎಂತಹ ಪಾಪಿಯೂ, ನನ್ನಲ್ಲಿ ದೃಢ ಭಕ್ತಿ ಇಟ್ಟರೆ ಆತನು ಮಾಡಿದ ಪಾಪಗಳು ದಹಿಸಿ ಹೋಗುವವು. ಈ ಜಗತ್ತಿನಲ್ಲಿ ದುಃಖಗಳೇ ಅಧಿಕವಾಗಿವೆ. ನನ್ನನ್ನು ಪೂಜಿಸುವ ಮಾನವರಿಗೆ ದುಃಖಗಳಿಂದ ಬಿಡುಗಡೆಯಾಗಬಹುದು.

ಕುಂದಾಪುರ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

O. S. 437/1960

B. ಆನಂದ ಭಟ್ಟ — ವಾದಿ.

K. ಸದಾನಂದ ಭಟ್ಟ — ಪ್ರತಿವಾದಿ.

ಕುಂದಾಪುರ ತಾಲ್ಲೂ ಕೋಟೇಶ್ವರ ಗ್ರಾಮದಲ್ಲಿರುವ ನಾಗಾ ಭಟ್ಟರ ಮಗ K. ಸದಾನಂದ ಭಟ್ಟರಿಗೆ ಈ ಮೂಲ್ಕ ತಿಳಿಯಪಡಿಸುವುದೇನಂದರೆ—

ಪ್ರತಿವಾದಿಯು ವಾದಿಗೆ ತಾ. 15.8.1950 ರಲ್ಲು ರೂ. 1500.00ಕ್ಕೆ ಬರೆಕೊಟ್ಟ ಡಿಮಾಂಡು ನೋಟಿನ ಹಣ ಬಡ್ಡಿ ಕೂಡಾ ಬರಮಾಡಿಕೊಳ್ಳುವರೆ ವಾದಿಯು ಪ್ರತಿವಾದಿಯ ಮೇಲೆ ದಾಖಲು ಮಾಡಿದ ನೋಟಿನ ದಾವೆಯು ತಾ. 17—2—1961ಕ್ಕೆ ಮೇಲಿನ ಕೋರ್ಟಿನಲ್ಲಿ ತನ್ನಿಗೆ ಇಟ್ಟಿರುತ್ತದೆ. ಆ ಕುರಿತು ವಿನಾದರೂ ಆಕ್ಷೇಪಣೆಗಳಿದ್ದರೆ ಸದ್ರಿ ದಿನ್ನ ಹಗಲು ಹನ್ನೊಂದು ಗಂಟೆಗೆ ಮೇಲಿನ ಕೋರ್ಟು ಮುಂದೆ ಹಾಜ್ರಾಗಿ ಜ್ಯಾಬೀರು ಮಾಡಿಕೊಳ್ಳತಕ್ಕದ್ದು ಎಂಬ ಸಂಗ್ತಿ ಈ ಮೂಲ್ಕ ತಿಳಿಯಪಡಿಸಿದೆ.

K. Mahabaleshwara Adiga,
Advocate for Plff.

Coondapoor, Date 17...1...61.

● ಜೀವನವು ಆವಶ್ಯಕತೆಗಳ ಆಗರ. ನಿರೀಕ್ಷಿತ ಆವಶ್ಯಕತೆಗಳ ಪೂರೈಕೆಗಾಗಿ ಆರ್ಥಿಕ ಅನುಕೂಲತೆಯ ಸೌಲಭ್ಯವೊಂದು ಸ್ವಲ್ಪ ಕಾಲಕ್ಕೆ ಮುಂದಾಗಿ ಕೈಗೆ ಬಂದಾಗ.....

● ಸಮಯಕ್ಕೆ ಸರಿಯಾಗಿ ಆ ಹಣವನ್ನು ವಿನಿಯೋಗಿಸಲು ಸಾಧ್ಯವಾಗುವಂತೆ ಒಂದು ನಿರ್ದಿಷ್ಟ ಅವಧಿಗೆ ಠೇವಣಾತಿಯಾಗಿಡಲು.....

● ಕಾಯಂ ಠೇವಣಾತಿ ●
[FIXED DEPOSIT]
ಅನುಕೂಲವಾಗಿದೆ.

ಸಿಂಡಿಕೇಟ್ ಬೇಂಕ್

ನಿಮ್ಮ ಠೇವಣಾತಿಗೆ ಉತ್ತಮ ಭದ್ರತೆಯೊಂದಿಗೆ ಯೋಗ್ಯ ಬಡ್ಡಿಯೂ ದೊರಕುವಂತೆ ಇತ್ತೀಚೆಗೆ ಕಾಯಂ ಠೇವಣಾತಿಯ ಮೇಲಿನ ಬಡ್ಡಿಯ ದರವನ್ನು ಹೆಚ್ಚಿಸಿದೆ.

೧೯೬೦ನೇ ವರುಷದ ಅಂತ್ಯಕ್ಕೆ ಸಿಂಡಿಕೇಟ್ ಬೇಂಕಿನ ಠೇವಣಾತಿಯು ರೂ. ೧,೭೨,೦೦,೦೦೦ ಹೆಚ್ಚಿಗೆಯಾಗಿ ಒಟ್ಟು ಠೇವಣಾತಿಯು ರೂ. ೧೮,೮೦,೦೦,೦೦೦ಗಳಷ್ಟಾಗಿದೆ.

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್ ಲಿಮಿಟೆಡ್
ಉಡುಪಿ (ಮೈಸೂರು ರಾಜ್ಯ)

ಸೂಚನೆ

"ನವಯುಗ"ದಲ್ಲಿ ಪ್ರಕಟಣೆಗಾಗಿ ಲೇಖನಗಳನ್ನು ಆಮಂತ್ರಿಸಲಾಗಿದೆ. ಇವು ಚಿಕ್ಕದಿರ ಬೇಕಲ್ಲದೆ ಕಾಗದದ ಒಂದೇ ಮಗ್ಗುಲಿನಲ್ಲಿರಬೇಕು. ಲೇಖಕಬಂಧುಗಳು ಸಹಕರಿಸಬೇಕಾಗಿ ವಿನಂತಿ. —ಸಂ.ನ.

ಅಮೃತಾಂಜನ
ಎಲ್ಲಾ ನೋವುಗಳಿಗೆ ಸಿದ್ಧೌಷಧ
ಎಲ್ಲಾತರದ ಸಿಡಿತ ಮತ್ತು ನೋವುಗಳಿಗೆ
30 ವರ್ಷ ಪ್ರಾಯದ
ವಾಕರ್ಟ್ ಡಾಕ್ಟರ್
ಅಮೃತಾಂಜನ ಲಿ. ಬೊಂಬಾಯಿ, ಮದ್ರಾಸು, ಕಲ್ಕತ್ತಾ

Edited, Printed & Published by K. H. Shetty, at the Navayuga Press, Udipi, S. India.

40th year of publication. 16-2-1961 ೪೦ನೇ ವರ್ಷ

ಸಂಪುಟ ೪೦ Vol. 40

ನವಯುಗ

ಸಂಚಿಕೆ ೨೩ No. 23

ಬೆಲೆ 0=13

ಕನ್ನಡಿಗರು ಹತವೀರರಾಗಿದ್ದಾರೆಯೆ?

ಕನ್ನಡಿಗರ ಅನೇಕತೆಯ, ನಿರ್ಬಲತೆಯ ಲಾಭವನ್ನು ಕೇಂದ್ರ ಸರಕಾರದ ಮೂಲಕ ದಕ್ಷಿಣದ ಬೇರೆ ರಾಜ್ಯಗಳು ಪಡೆಯುವುದರಿಂದ ನಮಗಾಗುತ್ತಿರುವ ನಷ್ಟವನ್ನು ತಪ್ಪಿಸಬೇಕು; ನಾವೆಲ್ಲಾ ಒಂದುಗೂಡಿ ಸಬಲರಾಗಬೇಕು.

ಶ್ರೀ ಗೋಂಶಾ.

"ಹೋರಿಯನ್ನು ನೆಚ್ಚಿ ಹೊಲ ಮಾಡಬಾರದು; ಸೋರಿಯನ್ನು ನೆಚ್ಚಿ ಬೇರೆಯಾಗಬಾರದು" ಎಂಬ ಒಂದು ಗಾದೆ ಮಾತು ವ್ಯವಹಾರದಲ್ಲಿದೆ. ನಮ್ಮ ರಾಜ್ಯ ಸರಕಾರ ಕೂಡ ಇದಬಾರದವನ್ನಲ್ಲಿ ವಿಶ್ವಾಸವಿಟ್ಟು, ತನ್ನ ಕಾಲಿಗೆ ತಾನೇ ಕೊಡಲಿಯೇಟನ್ನು ಹಾಕಿಕೊಳ್ಳುವಂತಾಗಿರುವುದು ಕನ್ನಡಿಗರ ದುರ್ದೈವ. ಕಾರವಾರದಿಂದ ಮಂಗಳೂರಿನ ತನಕದ ೨೦೦ ಮೈಲುದ್ದದ ಕರಾವಳಿ ಕನ್ನಡ ರಾಜ್ಯದಲ್ಲಿದ್ದರೂ ಸರಾಸರಿ ೨೦ ಮೈಲಿಗೊಂದೆಂಬಂತೆ ಬಂದರಗಳು ಇಲ್ಲಿದ್ದರೂ ಈ ಬಂದರಗಳ ಅಭಿವೃದ್ಧಿಯ ಕಡೆಗೆ ರಾಜ್ಯ ಸರಕಾರ ಈ ನಾಲ್ಕು ವರ್ಷಗಳಲ್ಲಿ [ಕೊಡಬೇಕಾದಷ್ಟು ಗಮನ ಕೊಟ್ಟಿಲ್ಲವೆಂಬುದು ಕನ್ನಡಿಗರಿಗೆ ಮಾತ್ರವಲ್ಲ; ಭಾರತಕ್ಕೇನೇ ಗೊತ್ತು. ಆಗಾಗ ಮಂಗಳೂರು ಹಾಗೂ ಕಾರವಾರ ಬಂದರಗಳನ್ನು ಅಭಿವೃದ್ಧಿಪಡಿಸುವ ಮಾತುಕತೆಗಳು, ನಡೆದು ವಾಗ್ದಾನಗಳು ಬಂದಿರಬಹುದಾದರೂ ಅದು ಕಾರ್ಯರೂಪಕ್ಕೆ ಇಳಿಯಲೇ ಇಲ್ಲ. ಈ ತೆರದ ವಾಗ್ದಾನಗಳಿಂದಲೇ ಕೃಪ್ತಿಪಟ್ಟುಕೊಳ್ಳುವಷ್ಟು ಅಲ್ಪತೃಪ್ತರು ಕನ್ನಡಿಗರಲ್ಲವೆಂಬುದನ್ನು ಮೊದಲಾಗಿ ಕನ್ನಡಿಗರೇ ತಿಳಿದುಕೊಳ್ಳಬೇಕು.

ಕನ್ನಡ ರಾಜ್ಯದ ಹೊಸಪೇಟೆಯ ಬಳಿಯ ಕಬ್ಬಿಣದ ಅದುರುಗಳನ್ನು ವಿದೇಶಗಳಿಗೆ ನಿರ್ಯಾತಮಾಡಿ ವಿದೇಶ ವಿನಿಮಯಗಳಿಸುವ ಹವಣಿಕೆಯಿಂದಲಾದರೂ ಹೊಸಪೇಟೆ, ಹಬ್ಬಳ್ಳಿ, ಕಾರವಾರ ರೈಲು ದಾರಿಯು ನಿರ್ಮಾಣವಾಗುವುದು, ಕಾರವಾರ ಬಂದರವು ಅಭಿವೃದ್ಧಿ ಹೊಂದುವುದು ಎಂದು ಆಶಿಸಿದ ಜನರ ಆಸೆಗೆ ಹಿಮಕರಗಿದ ನೀರೆರಚಿದಂತಾಗಿದೆ. ಏಕೆಂದರೆ, ಈ ಅದುರುಗಳನ್ನು ಹೊಸಪೇಟೆಯಿಂದ ಗುಂತಗಲ್ಲಿಗಾಗಿ ವಿಜಯವಾಡಕ್ಕೂ, ಮತ್ತೆ ಮದ್ರಾಸಿಗೋ ಒಯ್ದು ಅಲ್ಲಿಂದ ರವಾನೆ ಮಾಡುವ ಗಾಳಿ ವರ್ತಮಾನವಿದೀಗ ಸತ್ಯವೆಂದು ತಿಳಿದು ಬಂದಿದೆ. ಇದಕ್ಕಾಗಿ ಬ್ರಾಡ್‌ಗೇಜ್ ರೇಲು ದಾರಿಯ ರಚನೆಯಾಗುತ್ತದೆ. ಜತೆಗೆ ಆಂಧ್ರದ ಅಥವಾ ತಮಿಳು ನಾಡಿನ ಬಂದರಗಳು ಮತ್ತಷ್ಟು ಬೆಳೆಯುತ್ತವೆ; ಕನ್ನಡದ ಬಂದರು ಕಾರವಾರ ಕೂರುತ್ತ ಬೀಳುತ್ತದೆ. ಅದೇ ರೀತಿಯಲ್ಲಿ ರಾಜ್ಯದ ಒಳನಾಡಿನ ಸಂಪತ್ತನ್ನು ರಫ್ತು ಮಾಡುವುದಕ್ಕೆ ಸ್ವಯಂ ಔದ್ಯಮೀಕರಣ ಹೊಂದಿರುವ ಮಂಗಳೂರು ಬಂದರದ ಮಾತೂ ಹಿಂದೆಹಿಂದೆ ಹೋಗುತ್ತ ಬರುತ್ತಿದೆ. ಹಾಸನ ಮಂಗಳೂರು ರೇಲ್ವೆಯ ಸರ್ವೆ ಅದೆಂದೋ ನಡೆದಿದ್ದರೂ ತೃತೀಯಯೆ ಯೋಜನೆಯಲ್ಲಿಯಾದರೂ ಅದು ಕೈಗೂಡುವುದೆಂದು ಸಂಪೂರ್ಣ ಆಸೆಯಿಟ್ಟುಕೊಳ್ಳುವಂತಿಲ್ಲ. ಬಂದರಗಳ ಅಭಿವೃದ್ಧಿಯ ಹೆಸರಿನಲ್ಲಾದರೂ ಒಳನಾಡಿನೊಡನೆ ರೇಲು ಸಂಬಂಧವಿಲ್ಲದ ಈ ಎರಡು ನಗರಗಳಿಗೆ ರೇಲು ದಾರಿಯೂ ಗುವುದು, ಇದರಿಂದ ಬಂದರಗಳು ಬೆಳೆಯುವುದು ಮಾತ್ರವಲ್ಲ, ರಾಜ್ಯದ ಆರ್ಥಿಕ ಸ್ಥಿತಿಯೂ ಉನ್ನತವಾಗುತ್ತದೆ ಎಂಬ ನಮ್ಮ ಕನಸು ಕನಸಾಗಿಯೇ ಉಳಿಯುವಂತಾಗಿದೆ.

ಕನ್ನಡಿಗರ ದುರ್ದೈವದಿಂದಾಗಿ ಕನ್ನಡ ನಾಡಿನಲ್ಲಿ ಹೊಸ ರೇಲು ದಾರಿಗಳ ರಚನೆಯಾಗುವ ಸೂಚನೆಗಳಿಲ್ಲ, ದ್ವಿತೀಯ ಯೋಜನಾವಧಿಯಲ್ಲಾದರೂ ಇಲ್ಲಿ ಹೊಸತಾಗಿ ಅದ ರೇಲು ಮಾರ್ಗದ ಪ್ರಮಾಣವೆಷ್ಟು? ಮೂರನೆಯ ಯೋಜನೆಯಲ್ಲಾದರೂ ಕರ್ನಾಟಕದ ವಿಸ್ತಾರಕ್ಕೆ ಜನಸಂಖ್ಯೆಗೆ ಸರಿಯಾದ ದಾಮಾಶಯದಲ್ಲಿ ರೇಲುದಾರಿ ರಚನೆಯಾಗುತ್ತದೆಯೆ? ಹೊಸಪೇಟೆಗೆ ವಿಜಯವಾಡ ಅಥವಾ ಮದ್ರಾಸುಗಳೇ ಅತಿ ಸಮೀಪದ ಬಂದರುಗಳೆಂದು ತಿಳಿದಿರುವ ಮೇಧಾವಿಗಳು ಕನ್ನಡನಾಡಿನಲ್ಲೇ ಇರುವಾಗ ಇತರರನ್ನು ದೂರಿತಾನೇ ಏನು ಪ್ರಯೋಜನ? ಶೇಂಕಾರಯುಕ್ತವಾಗಿ ಆಡುವುದರಲ್ಲೇ ನಿಪುಣರಾದ ಕರ್ನಾಟಕದವರು ಈ ಭವ್ಯ ಪರಂಪರೆಯನ್ನು ಇನ್ನು ಮುಂದಕ್ಕಾದರೂ ಬಿಟ್ಟುಕೊಡಬೇಕು. ಕಡಿಮೆ ಮಾತನಾಡಬೇಕು; ಹೆಚ್ಚು ಮಾಡಿತೋರಿಸಬೇಕು. ಜನತೆಯನ್ನು ರಂಗುರಂಗಿನ ಮಾತುಗಳಿಂದ ವಂಚಿಸುವ ಧುರೀಣರು ತಮ್ಮ ಈ ಹೊಲಸು ಕೃತಿಗೆ ತಿಲಾಂಜಲಿಯಿಯಬೇಕು. ಕನ್ನಡನಾಡಿನಲ್ಲಿರುವ "ಮೈಸೂರು ಸರಕಾರ" ತಾನು ಆ ಹಿಂದಿನ ಕರಾವಳಿಯಲ್ಲದ ಮೈಸೂರು ರಾಜ್ಯವನ್ನು ಮಾತ್ರ ನೋಡಿಕೊಳ್ಳುತ್ತಿರುವೆನೆಂದು ತಿಳಿದಿದ್ದರೆ, ತಪ್ಪನ್ನು ತಿದ್ದಿಕೊಂಡು ಕರಾವಳಿ ಸಹಿತ ರಾಜ್ಯವನ್ನಾಳುತಿದ್ದೇನೆಂದೂ ಇಲ್ಲಿ ಬಂದರುಗಳಿಗೆಯೆಂದೂ ಅವುಗಳನ್ನೇ ಅಭಿವೃದ್ಧಿಪಡಿಸಿದರೆ

(೧೨ನೇ ಪುಟ ನೋಡಿರಿ)

ಶ್ರೀ. ಎ. ಬಿ. ಶೆಟ್ಟಿ ಸ್ಮಾರಕ ನಿಧಿ.

ಶ್ರೀ ಎ. ಬಿ. ಶೆಟ್ಟಿ ಸ್ಮಾರಕದ ಕೆಲಸವು ಮುಂದುವರಿಯುತ್ತಿದೆ. ವೆನ್‌ಲೋಕ್ ಆಸ್ಪತ್ರೆಯಲ್ಲಿ ಶ್ರೀ ಶೆಟ್ಟಿ ತೈಲ ಚಿತ್ರವನ್ನು ಅನಾವರಣ ಮಾಡಿಯಾದೆ. ಶ್ರೀ ರಾಮಕೃಷ್ಣ ವಿದ್ಯಾರ್ಥಿ ಭವನದಲ್ಲಿ ಶಿಲಾ ಪ್ರತಿಮೆಯನ್ನು ಇಡುವ ಕೆಲಸ ನಡೆಯುತ್ತಿದೆ. ಇನ್ನೂ ಹೆಚ್ಚಿನ ಕೆಲಸಗಳನ್ನು ಕೈಗೊಳ್ಳುವದೇ ಸ್ಮಾರಕ ಕಮಿಟಿಯು ಆಲೋಚಿಸುತ್ತದೆ. ಈ ಎಲ್ಲಾ ಕೆಲಸಗಳಿಗೆ ಹೆಚ್ಚಿನ ದ್ರವ್ಯಾನುಕೂಲತೆಯ ಅವಶ್ಯವಿರುವುದರಿಂದ ಸ್ಮಾರಕ ನಿಧಿಗೆ ಸಹಾಯ ಮಾಡಲಿಚ್ಛಿಸುವವರು ಆದಷ್ಟು ಬೇಗನೆ ತಮ್ಮ ಸಹಾಯ ನೀಡಬೇಕಾಗಿ ಈ ಮೂಲಕ ವಿನಂತಿ.

ಶ್ರೀ ಎ. ಬಿ. ಶೆಟ್ರ ಸ್ಮಾರಕ ನಿಧಿಗೆ ಇಸ್ವರ ವರೆಗೆ ಧನ ಸಹಾಯ ಮಾಡಿದವರು:—

ಹೆಸರು	ಮೊಬಲಗು
1. ಡಾ. ಎನ್. ವಿಶ್ವನಾಥ ಅಡ್ಯಂತಾಯ—ಬೊಂಬಾಯಿ	1,150=00
2. ಶ್ರೀ ರಾವ್ ಬಹದೂರ್ ಕೆ. ಟಿ. ಆಳ್ವ, ಬಿಜೈ, ಮಂಗಳೂರು	1,001=00
3. ,, ಪಿ. ನಿಶಿಲ ಪೂಂಜ ಮತ್ತು ಎ. ಸಂಜೀವ ಪೂಂಜ, ಅತ್ತಾವರ, ಮಂಗಳೂರು	1,000=00
4. ಡಾ. ಎಮ್. ವೇಣು ಗೋಪಾಲ ಶೆಟ್ಟಿ, ಮಂಗಳೂರು	1,000=00
5. ಡಾ. ಎಂ. ದೇವದಾಸ ಆಡಪ್ಪ, ಅತ್ತಾವರ, ಮಂಗಳೂರು	1,000=00
6. ಶ್ರೀ ಕೆ. ಸುಂದರರಾಮ ಶೆಟ್ಟಿ, ವಕೀಲ್, ಮಂಗಳೂರು	750=00
7. ಶ್ರೀ ಪಿ ಸುಬ್ಬಯ್ಯ ನಾಯ್ಕ, ಬೋಳಾರ, ಮಂಗಳೂರು	500=00
8. ,, ರಾವ್ ಬಹದೂರ್ ಎನ್. ಎಮ್. ಅಡ್ಯಂತಾಯ, ಕದ್ರಿ, ಮಂಗಳೂರು	150=00
9. ,, ಕೆ. ಬಿ. ನಾಯ್ಕ, ನಾಯ್ಕ್ ಸ್ಟುಡಿಯೋ, ಮಂಗಳೂರು	101=00
10. ಡಾ ಬಿ. ರಾಮ ಮೂರ್ತಿ, ಮದ್ರಾಸು	100=00
11. ,, ಕೆ. ಕೆ. ಹೆಗ್ಡೆ. ಆರೋಗ್ಯ ಮಂತ್ರಿ, ಮೈಸೂರು ಸರಕಾರ, ಬೆಂಗಳೂರು	100=00
12. ಶ್ರೀ ಪಿ. ಎಮ್. ಹೆಗ್ಡೆ, ಮಂಗಳೂರು	100=00
13. ,, ಎಚ್. ದಾಸಣ್ಣ ಆಳ್ವ, ವಕೀಲ್, ಮಂಗಳೂರು	50=00
14. ,, ಎಸ್. ಬಿ. ಶೆಟ್ಟಿ, ಮೆನೇಜರ್, ವಿಜಯ ಬೇಂಕ್, ಮೈಸೂರು	10=00
15. ,, ಪಿ. ವೀರರಾಘವನ್ ಮತ್ತು ಪಿ. ಸುಬ್ರಹ್ಮಣ್ಯನ್, ಮದ್ರಾಸು	5=00
ಜುಮ್ಲಾ	7017=00

ಮಂಗಳೂರು ತಾ. 9-2-1961. } ಕೆ. ಟಿ. ಆಳ್ವ, ಅಧ್ಯಕ್ಷ. ಪಿ. ಎಮ್. ಹೆಗ್ಡೆ, ಕೋಶಾಧಿಕಾರಿ.

ವಿ. ಸೂ.— ಸಹಾಯಧನವನ್ನು ಈ ಕೆಳಗಿನ ವಿಳಾಸಕ್ಕೆ ದಯಮಾಡಿ ಕಳುಹಿಸಿರಿ:

Sri P. M. Hegde,
Kodialbail, Mangalore-3.

ಮಂಗಳೂರಲ್ಲಿ ಈಗಾಗಲೇ ತೆರೆಯಲ್ಪಟ್ಟು ಪ್ರಗತಿಯಿಂದ ಮುಂದೆ ಸಾಗುತ್ತಿರುವ ಇನ್ನೊಂದು ಪ್ರಸಿದ್ಧ ಜವುಳಿ ಮಳಿಗೆ—

ಸಾರೀ ಎಂಪೋರಿಯಮ್

ಕೆಥೊಲಿಕ್ ಕ್ಲಬ್ಬಿನ ಎದುರು, ಹಂಪನಕಟ್ಟಾ, ಮಂಗಳೂರು-1

ನಿಮ್ಮ ಉತ್ತಮ ಆಯ್ಕೆಗೆ ಯೋಗ್ಯವೆಂದೆನಿಸಿದ ರೇಶ್ಮೆ ಸೀರೆಗಳೂ, ಹತ್ತಿ ನೂಲಿನ ಸೀರೆಗಳೂ ಸರ್ವೋತ್ಕೃಷ್ಟವಾಗಿವೆ, ಯಾವತ್ತೂ ತರದ ಶರ್ಟಿಂಗ್, ಕೋಟಿಂಗ್, ಚಿಂಟ್ಸ್, ಸಿಲ್ಕ್, ನೈಲಾನ್ ಇತ್ಯಾದಿ ಬಟ್ಟೆಬರೆಗಳಿಗೂ ಸಂದರ್ಶಿಸಿರಿ—

SAREE EMPORIUM

Opposit Catholic Club,
HAMPANKATTA, MANGALORE—1.

ESTD. 1921

NAVAYUGA
KANNADA WEEKLY,
UDIPI.

Founder:
Late Sri A. B. Shetty,
Former Minister for Public Health, Govt. of Madras & Govt. of Mysore.

ನವಯುಗ

ಪ್ರತಿ ಗುರುವಾರ
ಉಡುಪಿಯಿಂದ ಹೊರಡುವ
ರಾಷ್ಟ್ರೀಯ ವಾರಪತ್ರಿಕೆ

ಸ್ಥಾಪನೆ: ೧೯೨೧.

ಗೌರವ ಸಂಪಾದಕರು:
ಎಸ್. ಗೋಪೀಚಂದ ರಾವ್, ವಿದ್ವಾನ್.
ಬಿ. ಶಾಮರಾಯ ಶೆಟ್ಟಿ, ಬಿ. ಎ., ಎಲ್. ಟಿ.

ಸಂಚಾಲಕ ಸಂಪಾದಕರು:
ಕೆ. ಹೊನ್ನಯ್ಯ ಶೆಟ್ಟಿ.

ಜಾಹೀರಾತು ದರಗಳು:
ನಿಯಮಿತ (ಕಂಟ್ರಾಕ್ಟ್)
ಕಲಂ ಇಂಚಿಗೆ ರೂ. 2-50
ಅನಿಯಮಿತ (ಕೆಜುವಲ್)
ಕಲಂ ಇಂಚಿಗೆ ರೂ. 3-50
ಹೆಚ್ಚಿನ ವಿವರಗಳಿಗೆ ವ್ಯವಹರಿಸಿರಿ.

ಚಂದಾ:
ವಾರ್ಷಿಕ ಚಂದಾ (ಅಂಚೆವೆಚ್ಚ ಸೇರಿ) ರೂ. 6-75
ಬಿಡಿಪ್ರತಿ ರೂ. 0-13

ಚಂದಾಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬೇಂಕಿನ ಯಾವುದೇ ಶಾಖೆಯಲ್ಲಿ ಯಾವ ಪಿರ್ಜೂ ಇಲ್ಲದೆ 'ನವಯುಗ'ದ ಖಾತೆಗೆ ಜಮೆ ಮಾಡುವಸೌಕರ್ಯವಿರುವುದು.

ಕಥಾವಿಹಾರ

ಸಾವಿರಗಳನ್ನು ಅರಸಿಕೊಂಡು...

ಈ ಸಾವಿರಗಳ ಪೆಡಂಭೂತ ರಾಮ ರಾಯರ ಹೆಣ್ಣು ಹೊತ್ತ ಹೃದಯವನ್ನು ಬಲಿ ತೆಗೆದುಕೊಂಡಿತು. ನಿರಪರಾಧಿ ಹೆಣ್ಣಿನ ಬಾಳು ಸಮಾಜದ ವಿಷಜಂತುಗಳ ತುತ್ತಾಯಿತು. ಹೆಣ್ಣು ಹೆಡೆದ ಅಸಹಾಯಕ ಹೃದಯಗಳ ಮೊರೆಯನ್ನೂ ಅರಣ್ಯ ರೋದನವಾಗಿಯೇ ಉಳಿದಿದೆ. ಅದರ ಮಿಡಿತಕ್ಕೆ ಓಗೊಡುವವರಾರು?

ಶ್ರೀ ಪಾದೂರು ಜನಾರ್ಧನ ಆಚಾರ್ಯ.

"ಇಪ್ಪತ್ತೈದು ಸಾವಿರ ರೂಪಾಯಿ .....! ಇಷ್ಟು ಹಣವನ್ನು ನೀನು ಎಲ್ಲಿಂದ ತರುವೆ ಅಪ್ಪ? ಪಾಪ, ನನ್ನಿಂದಾಗಿ ನಿನ್ನ ಮನಸ್ಸಿಗೆ ಎಷ್ಟು ನೋವು, ಎಷ್ಟು ಚಿಂತೆ? ಸರಿ, ನನ್ನನ್ನೇ ಮಾರಿ ಅವರಿಗೆ ಆ ಹಣವನ್ನು ಕೊಟ್ಟು ಬಿಡು. ಛೆ... ನನ್ನನ್ನು ಮಾರಿದರೆ ಮತ್ತೆ ಮದುವೆಯಾರಿಗೆ? ಹಾಗಾದರೆ ಈ ಇಪ್ಪತ್ತೈದು ಸಾವಿರದ ಹೊರತು ನನಗೆ ಜೀವನದಲ್ಲಿ ಮದುವೆಯೇ ಇಲ್ಲವೆ? ಅಪ್ಪ, ನೀನೂ ಇ ಇದಕ್ಕೆ ಸಮ್ಮತಿಸುವೆಯಾ? ನೀನೂ ನನ್ನ ಕೈ ಬಿಟ್ಟಿಯಾ ಅಪ್ಪ...! ಅಪ್ಪ"

ತಂದೆಯ ಬಳಿಯಲ್ಲಿ ಮಲಗಿದ್ದ ಲತಾ ಏನೇನೋ ಕನವರಿಸುತಿದ್ದಳು. ಮಗಳ ಕೂಗನ್ನು ಕೇಳಿ ರಾಮರಾಯರು ಎಚ್ಚತ್ತರು. ಲತಾ ಇನ್ನೂ ಏನೇನೋ ಹರಟುತಿದ್ದಳು. ಕನವರಿಸುತಿದ್ದ ಮಗಳನ್ನೆಬ್ಬಿಸಿದರು ರಾಮರಾಯರು.

"ಏನೇ ಲತಾ, ಏನದು ಮಾತಾಡುತ್ತಿರುವುದು?"

"ಏನಿಲ್ಲಪ್ಪ, ನಾನೇನು ಮಾತನಾಡಿದೆ...!"

ಮಗಳು ನಿದ್ದೆಯಲ್ಲಿಯೂ ದುಃಖವನ್ನು ಮೆಲುಕು ಹಾಕುತಿದ್ದುದನ್ನು ತಿಳಿದ ರಾಮ ರಾಯರ ಕಣ್ಣಂಚಿನಿಂದ ಕಣ್ಣೀರ ಹನಿಯೊಂದು ಕೆಳಕ್ಕುರುಳಿತು.

"ಲತಾ, ನನಗೆಲ್ಲ ಗೊತ್ತು ನೀನು ಏನೇನು ಮಾತಾಡಿದೆ ಎಂಬುದು. ನಿನ್ನ ತಾಯಿ ತೀರಿದಾಗ ಎಳೆಯ ಕೂಸಾಗಿದ್ದ ನೀನೇ ನನ್ನ ಬಾಳಿನ ಸರ್ವಸ್ವವೆಂದು ನಿನ್ನನ್ನು ನೋಡಿದ ಮಗಳೆ, ನಿನ್ನ ಸುಖಕ್ಕಾಗಿ ನಿದ್ದೆ ಆಯಾಸಗಳನ್ನು ಗಣಿಸದೆ ಹೊಟ್ಟೆ ಬಟ್ಟೆ ಕಟ್ಟಿ ನಿನ್ನನ್ನು ಸಾಕಿದೆ. ಈಗ ಬೆಳೆದ ನಿನಗೆ ಮದುವೆಯನ್ನು ಮಾಡಿ ನಿನ್ನ ಸುಖವನ್ನು ನೋಡುವ ಭಾಗ್ಯವನ್ನು ಮಾತ್ರ ನಾನು ಪಡೆದಿಲ್ಲ ಲತಾ. ದಿನಗಟ್ಟಲೆ ಹೊಟ್ಟೆಯುರಿಯನ್ನಾದರೂ ಸಹಿಸಿಯೇನು; ಆದರೆ ಒಂದೇಪೊಂದು ತೊಟ್ಟು ಕಣ್ಣೀರು ನಿನ್ನ ಕಣ್ಣಲ್ಲಿ ಕಂಡರೆ ಮಾತ್ರ ನಾನು ಸಹಿಸೆನು ಮಗಳೆ. ದಿನದ ಕರ್ತವ್ಯನ್ನೇ ಪೂರೈಸುವುದು ನಮಗೆ ಕಷ್ಟವಾಗಿರುವಾಗ ಇಪ್ಪತ್ತೈದು ಸಾವಿರ ಕೊಟ್ಟು ನಿನಗೆ ಮದುವೆಯನ್ನು ಹೇಗೆ ಮಾಡಲಿ? ಎಂದಿನ ತನಕ ಈ ವರದಕ್ಷಿಣೆಯ ಪೆಡಂಭೂತ ಸಮಾಜದಿಂದ ತೊಲಗಲಾರದೋ ಅಂದಿನ ತನಕ ಹೆಣ್ಣು ಹೆತ್ತ ನನ್ನಂತಹವರಿಗೆ ಕಣ್ಣೀರ ತರ್ಪಣೆಯೇ ವಿನಃ ಬೇರೆ ಗತಿಯಿಲ್ಲ. ಹೆಣ್ಣು ಹೆತ್ತ ಹೊಟ್ಟೆಯ ಉರಿ ಎಂದಿನ ತನಕ ಜನತೆಗೆ ಅರಿವಾಗಲಿಕ್ಕಿಲ್ಲವೋ, ಅದುವರೆಗೂ ನನ್ನಂತಹವನು ಜೀವನ್ಮೃತ. ಬಡವರಿಗೆ ಬದುಕಲು ಪಾರಿಯಿಲ್ಲಪ್ಪ. ಲತಾ, ನೀನು ಪಾಪಿಯೂದ ನನ್ನ ಮಗಳಾಗಿ ಹುಟ್ಟಬಾರದಿತ್ತು. ನಿನಗೆ ಯಾವ ಸುಖವನ್ನು ಕೊಡಲೂ ನಾನು ಶಕ್ತನಾಗಿಲ್ಲ ಮಗಳೆ."

ತಂದೆಯ ದುಃಖದಲ್ಲಿ ಬೆರೆತಿದ್ದ ಲತಾ ಮೂಕಳಾಗಿದ್ದಳು. ಪ್ರಯತ್ನಪಟ್ಟರೂ ಒಂದೇಪೊಂದು ಶಬ್ದವೂ ಲತೆಯ ಬಾಯಿಯಿಂದ ಹೊರಡದಂತಿತ್ತು. ಪರಸ್ಪರ ಮಾತಿಲ್ಲದೆ ತಂದೆ ಮಗಳಿಬ್ಬರೂ ಕುಳಿತಿದ್ದರು. ಮೂಕವೇದನೆಯೆಂ ಮೌನರೂಪದಲ್ಲಿ ಅವರನ್ನು ಆವರಿಸಿತ್ತು.

ಹೊರಗಿನಿಂದ ಕದ ತಟ್ಟುವ ಸದ್ದು ಕೇಳಿ ರಾಮ ರಾಯರು ಬಾಗಿಲು ತೆಗೆದರು. ಪೋಸ್ಟುಮೇನ್ ಪತ್ರವೊಂದನ್ನು ಅವರ ಕೈಗಿತ್ತು ಹೊರಟು ಹೋದ. ರಾಮ ರಾಯರು ಪತ್ರವನ್ನು ತಿರುಗಿಸಿ ನೋಡಿದರು. ಪತ್ರದ ಹಿಂಬದಿಯಲ್ಲಿ ಬರೆದಿತ್ತು. "ಮಾಧವ ರಾವ್—ಅರಸೀಕೆರೆ". ಮಗಳ ಮದುವೆಯ ವಿಷಯವಾಗಿಯೇ ಮಾಧವ ರಾಯರು ಪತ್ರ ಬರೆದಿರಬೇಕೆಂದು ಊಹಿಸಲು ರಾಮ ರಾಯರಿಗೆ ಕಷ್ಟವಾಗಲಿಲ್ಲ. ಮಾಧವ ರಾಯರು ಈ ರೀತಿ ಬರೆದಿದ್ದರು:

"ಪ್ರಿಯ ರಾಮ ರಾಯರಿಗೆ— ನಮ್ಮ ಸ್ನೇಹ. ತರುವಾಯ ನಿಮ್ಮ ಮಗಳ ಮದುವೆಯ ವಿಷಯ ಮರುಟಪಾಲಿಗೆ ನೀವು ಉತ್ತರ ಬರೆಯಬೇಕು.. ನಿಶ್ಚಯ ತಾಂಬೂಲವಾಗಿದ್ದರೂ ಚಿಂತಿಲ್ಲ, ವರದಕ್ಷಿಣೆಯ ಹಣವನ್ನು ಮುಂಚಿತವಾಗಿ ಕೊಡದಿದ್ದಲ್ಲಿ ನಮ್ಮ ನಿಮ್ಮೊಳಗೆ ಸಂಬಂಧವಿಲ್ಲ. ನಮ್ಮ ಹುಡುಗನಿಗೆ ಬೇರೆ ಹೆಣ್ಣು ಸಿಗದೆಂಬ ಭೀತಿಯೂ ನಮಗಿಲ್ಲ. ಚೆನ್ನಾಗಿ ವಿಚಾರ ಮಾಡಿ ಕೂಡಲೇ ಉತ್ತರ ಬರೆಯಿರಿ."

ರಾಮ ರಾಯರು ಒಮ್ಮೆ ಭಗವಿಗಿಳಿದು ಹೋದರು. ಮಾಧವ ರಾಯರು ಇಷ್ಟು ಕಠಿಣವಾಗಿ ಪತ್ರ ಬರೆಯಬಹುದೆಂದು ಅವರು ಊಹಿಸಿರಲಿಲ್ಲ. "ವರದಕ್ಷಿಣೆಯ ಹಣವನ್ನು ಮುಂಗಡವಾಗಿ ಕೊಡದಿದ್ದಲ್ಲಿ ನಮ್ಮ ನಿಮ್ಮೊಳಗೆ ಸಂಬಂಧವಿಲ್ಲ"—ದುಡ್ಡಿಗಾಗಿ ಮದುವೆ. ದುಡ್ಡಿಲ್ಲದಿದ್ದಲ್ಲಿ ಸಂಬಂಧವಿಲ್ಲ—ಆಹಾ! ಎಂತಹ ನ್ಯಾಯ. ನಿಶ್ಚಯ ತಾಂಬೂಲವಾದ ಬಳಿಕ ಮದುವೆಯಾಗದಿದ್ದರೆ ಬೇರೆ ಯಾರೂ ಲತಾನನ್ನು ವರಿಸಲಿಕ್ಕಿಲ್ಲ. ಹಾಗಾದರೆ ನನ್ನ ಮಗಳು ಎಂದಿಗೂ ಅವಿವಾಹಿತೆಯಾಗಿಯೇ ಉಳಿಯಬೇಕೆ? ಆಗ ಸಮಾಜ ಅವಳಿಗೆ ಸ್ಥಾನಕೊಡುವುದೆ? ಆಗವಳು ಎಲ್ಲ ವಿಧದಲ್ಲಿಯೂ ಸಮಾಜಬಾಹಿರೆ. ಎಷ್ಟು ಹೆಣ್ಣುಹೆತ್ತ ಹೃದಯಗಳು ಈ ರೀತಿ ಮರುಗುತ್ತಿಲ್ಲ! ಆದರೆ, ಎಂದೆಂದಿಗೂ ಅದು ಮೂಕ ವೇದನೆಯೇ ಹೊರತು ಅದನ್ನು ಕೇಳುವವರು ಯಾರೂ ಯಿಲ್ಲ.

ಒಂದೆರಡು ಬಾರಿ ಓದಿದ ಬಳಿಕ ಮಾಧವರಾಯರ ಪತ್ರ ಲತಾಳ ಕೈಯಿಂದ ತಾನಾಗಿಯೇ ಜಾರಿ ಕೆಳಗೆ ಬಿದ್ದಿತು. ಆಕೆ ಕಲ್ಲು ಗೊಂಬೆಯಂತೆ ಕುಳಿತೇ ಇದ್ದಳು. ಮನೆಯ ವಾತಾವರಣವನ್ನು ಸ್ಮಶಾನ ಮೌನವು ಆವರಿಸಿತ್ತು. ತಂದೆ ಮಗಳು ಎದುರೆದುರಾಗಿ ಮೂಕರಂತೆ ಕುಳಿತಿದ್ದರು. ನೆಲದಲ್ಲಿ ಬಿದ್ದಿದ್ದ ಮಾಧವರಾಯರ ಪತ್ರವು ಮಾತ್ರ ಗಾಳಿಗೆ ಅತ್ತಿತ್ತ ಚಲಿಸುತಿತ್ತು—ಇಪ್ಪತ್ತೈದು ಸಾವಿರದ ನಿರೀಕ್ಷಣೆಯಲ್ಲಿ.

ತಂದೆ ಮಗಳ ಬಾಳು ಯಾಂತ್ರಿಕವಾಗಿಯೇ ಸಾಗುತಿತ್ತು. ಬೆಳಗ್ಗೆ ಐದು ಗಂಟೆಗೆ ಎದ್ದು ಲತಾ ಉಪಾಹಾರಕ್ಕೆ ಏನಾದರೂ ತಯಾರಿಮಾಡುತಿದ್ದಳು. ಅಷ್ಟರಲ್ಲಿ ರಾಮರಾಯರೂ ಎದ್ದು ಮಗಳ ಕೆಲಸಗಳಲ್ಲಿ ಸಹಾಯಕರಾಗುತಿದ್ದರು. ಅನಂತರ ಇಬ್ಬರೂ ಒಟ್ಟಿಗೆ ಕುಳಿತು ಉಪಾಹಾರ ಮುಗಿಸಿ ರಾಮರಾಯರು ಹತ್ತಿರದ ಅಂಗಡಿಗೆ ಕೆಲಸಕ್ಕೆ ಹೋಗುತಿದ್ದರು. ತಂದೆ ಹಿಂದಿರುಗುವ ಹೊತ್ತಿಗೆ ಲತಾ ತಿಂಡಿ ತೀರ್ಥ ತಯಾರಿಸುವಳು. ದಿನದ ಬಹುಭಾಗವು ಮೌನದಲ್ಲೇ ಕಳೆಯುತಿತ್ತು. ಇಬ್ಬರ ಮನಸ್ಸಿನಲ್ಲಿಯೂ ವೇದನೆಯು ಒಳಗೊಳಗೇ ಕೊರೆಯುತಿತ್ತು. ಆದರೆ ಪರಸ್ಪರ ದುಃಖವನ್ನು ತೋಡಿಕೊಂಡರೆ ಅದು ಇನ್ನಮಡಿಯಾದೀತೆಂಬ ಭಯದಿಂದ ಇಬ್ಬರೂ ಮೂಕವೇದನೆಯನ್ನೇ ಅನುಭವಿಸುತಿದ್ದರು. ಲತಾ ಒಮ್ಮೊಮ್ಮೆ ಗತಿಸಿದ್ದ ತನ್ನ ತಾಯಿಯ ಭಾವಚಿತ್ರದೆದುರಿಗೆ ನಿಂತು ತಾಯಿಯ ಮುಖವನ್ನೇ ನೋಡುವಳು. ನಿರ್ಜೀವ ಚಿತ್ರದ ಆಡಕವಾ

(೧೦ನೇ ಪುಟ ನೋಡಿರಿ)

ಠೇವಣಾತಿಗಳು.....ಆಕರ್ಷಕ ಬಡ್ಡಿ ದರಗಳು

ಜೀವನದ ವೆಚ್ಚವು ದಿನೇ ದಿನೇ ಹೆಚ್ಚುತ್ತಲಿದ್ದರೂ, ಕಷ್ಟಪಟ್ಟು ಉಳಿಸಿದ ನಿಮ್ಮ ಹಣಕ್ಕೆ—ಅತ್ಯಗತ್ಯವಿರುವ ಸುರಕ್ಷಿತತೆ ಮತ್ತು ಭದ್ರತೆಗಳೊಂದಿಗೆ—ಅತ್ಯಾಕರ್ಷಕ ದರದಲ್ಲಿ ಬಡ್ಡಿ ಕೊಟ್ಟು, ನಿಮ್ಮನ್ನು ಸಂತುಷ್ಟರಾಗಿ ಮಾಡಲು

ಕೊರ್ಪೊರೇಶನ್ ಬೇಂಕು

ತಾನು ಠೇವಣಾತಿಗಳ ಮೇಲೆ ಕೊಡುವ ಬಡ್ಡಿ ದರಗಳನ್ನು ಇತ್ತೀಚೆಗೆ ಬದಲಾಯಿಸಿದೆ.

ವಿವರಗಳನ್ನು
ನಿಮಗೆ ಸಮೀಪವಿರುವ ಇದರ ಶಾಖೆಯಿಂದ ಪಡೆಯಬಹುದು.

ದಿ. ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್

ವಿಜ್ಞಾನ

ಹಿಪ್ನಾಟಿಸಂ ಅಥವಾ ಸ್ತಂಭನವಿದ್ಯೆ

ಅಲೌಕಿಕ ಕಾರ್ಯಗಳನ್ನು ಮಾಡಿ ತೋರಿಸುವ ಹಿಪ್ನಾಟಿಸಂನ್ನು ಇನ್ನೊಬ್ಬರ ಮೇಲೆ ಮಾತ್ರ ಪ್ರಯೋಗಿಸಬೇಕಾಗುತ್ತದೆ. ಪ್ರಯೋಗಕ್ಕೆ ಗುರಿಯಾದವನ ಬುದ್ಧಿಗೆ ಸಿಲುಕುವ ಕೆಲಸಗಳನ್ನೂ ಆತನಿಂದ ಮಾಡಿಸುವುದು ಸಾಧ್ಯ.

"ರಂಜನೆ", ಬೆಂಗಳೂರು,

"ಹಿಪ್ನಾಟಿಸಂ" ಹೆಸರನ್ನು ಕೇಳಿದ ಕ್ಷಣ ನೀವು ಅರ್ಥಮಾಡಿಕೊಳ್ಳುವಿರಿ. ಇದು ಮಾಯ ಮಂತ್ರ ಜಾದು ಎಂದು. ಆದರೆ ಇದು ತಪ್ಪೆಂದು ತಿಳಿಯಲು ನಿಮಗೆ ಮೂರು ನಿಮಿಷಗಳು ಸಾಕು.

ಇದಕ್ಕೆ ಕನ್ನಡದಲ್ಲಿ ಸರಿಯಾದ ಅರ್ಥ ಕೊಡುವುದಾದರೆ 'ಸ್ತಂಭನ' ಅಥವಾ 'ಮೋಹನ' ಎನ್ನಬಹುದು. ಇದಕ್ಕೆ ಮೂಲ ಮಂತ್ರಗಳಿಗಿರುವಂತೆ ಯಾವ ವಿಧಾನದ ಕಟ್ಟುಪಾಡು ಇಲ್ಲ. ಇಂದು ಈ ಅಣು ಯುಗದಲ್ಲಿ 'ಹಿಪ್ನಾಟಿಸಂ'ನ ಸ್ಥಾನ ಉನ್ನತ ಸ್ಥಿತಿಯನ್ನೇರುತ್ತಿದೆ. ಇದರಿಂದ ಬಹಳೇ ಕಾರ್ಯಗಳನ್ನು ನಡೆಸುತ್ತಾರೆ.

ಸ್ತಂಭನದ ಗುಣಗಳಲ್ಲಿ ಒಂದು ಸ್ತಂಭನಕ್ಕೊಳಗಾದವನು ಸ್ತಂಭಿಸುವವನ ಕೈಗೊಂಬೆಯಾಗುತ್ತಾನೆ. ಆಗ ಅವನಿಂದ ಅನೇಕ ಕಾರ್ಯಗಳನ್ನು ಮಾಡಿಸಬಹುದು.

'ಹಿಪ್ನಾಟಿಸಂ'ನ ತಳಹದಿ ಏಕಾಗ್ರತೆ, ಕುತೂಹಲ. ನೀವೂ ಕೆಲವೊಮ್ಮೆ ಹಿಪ್ನಾಟಿಸಂ ನಡೆಸಿರುತ್ತೀರಿ. ಆದರೆ ಅದು ನಿಮಗೆ ಗೊತ್ತಿಲ್ಲದೇ ನಡೆದಿರುವ ಕ್ರಿಯೆ. ನಿಮ್ಮ ಮನಸ್ಸನ್ನು ಒಂದೇ ವಿಷಯದ ಮೇಲೆ ಕೇಂದ್ರೀಕರಿಸಿ ಅದನ್ನು ನಿಮ್ಮ ಇಚ್ಛೆಗೆ ಬಂದಂತೆ ಆಡಿಸಬಹುದು. ಇದೇ 'ಹಿಪ್ನಾಟಿಸಂ' ಮೂಲ. ಒಂದೇ ದಿನದಲ್ಲಿ ಕಲಿಯುವ ವಿದ್ಯೆ ಇದಲ್ಲ. ಇದು ಕ್ರಮೇಣ ಸಾಧಿಸಬಹುದಾದ ವಿದ್ಯೆ.

'ಹಿಪ್ನಾಟಿಸಂ' ಕಲಿತವರ ಮೆದುಳು ಒಂದೇ ವಿಷಯದ ಮೇಲೆ ಕೇಂದ್ರೀಕರಿಸುವುದರಿಂದ ಅವಕ್ಕೆ ಕೆಲಸದ ಒತ್ತಡವಿರುತ್ತೆ (Mental strain). ಆದ್ದರಿಂದ ಇದನ್ನು ಕಲಿತವರ ಮೆದುಳು ಬೇಗ ಶಕ್ತಿಯುಳ್ಳದ್ದಾಗುತ್ತೆ. 'ಹಿಪ್ನಾಟಿಸಂ'ನ್ನು ಒಬ್ಬ ವ್ಯಕ್ತಿಯ ಮೇಲೆ ಬಹಳ ಹೊತ್ತು ಪ್ರಯೋಗಿಸಲು ಸಾಧ್ಯವಿಲ್ಲ. 'ಕ್ಲೋರೋಫಾರಂ'ನಂತೆ ಇದೂ ಆ ವ್ಯಕ್ತಿಯ ಮೆದುಳಿನ ಶಕ್ತಿಯನ್ನವಲಂಬಿಸಿದೆ. ಒಂದು ವ್ಯಕ್ತಿಯ ಮೇಲೆ ನಿಯಮಿತ ಕಾಲಕ್ಕಿಂತ ಹೆಚ್ಚುಕಾಲ ಇದನ್ನು ಪ್ರಯೋಗಿಸಿದ್ದೇ ಆದರೆ ಆತನಿಗೆ ಮೊದಲಿನಂತೆ ಜ್ಞಾನ ಬರುವುದೇ ಕಷ್ಟವಾಗಿ ಹುಚ್ಚನಾಗುವ ಸಂಭವವುಂಟು.

ಸ್ತಂಭನಕ್ಕೊಳಗಾಗುವ ಹಂತದಲ್ಲಿರುವ ಚಿತ್ತಭ್ರಮೆಯಲ್ಲಿ ಎರಡು ವಿಧ. ಮೊದಲನೆಯದರಲ್ಲಿ, ಇಂತಹ ಚಿತ್ತಭ್ರಮೆಗೊಳಗಾಗಲ್ಪಟ್ಟವರಿಗೆ ಒಂದು ರಟ್ಟಿನ ಚೂರು ಕೊಟ್ಟು 'ಇದು ನಿನ್ನ ಭಾವ ಚಿತ್ರ, ಇಲ್ಲಿ ನೋಡು ಕಣ್ಣು, ಮೂಗು, ಈ ರೀತಿ ಹಲವಾರು ವಿಷಯಗಳನ್ನು ವರ್ಣಿಸಿ ಆ ರಟ್ಟನ್ನು ಅದೇ ರೀತಿಯ ರಟ್ಟುಗಳೊಡನೆ ಸೇರಿಸಿ ಕೊಟ್ಟು, ಅವನ ಭಾವ ಚಿತ್ರ ತೆಗೆದು ಕೊಡೆಂದರೆ ಆತ ತನ್ನ ಭಾವಚಿತ್ರವೆಂದು ತೋರಿಸಿದ ರಟ್ಟನ್ನೇ ತೆಗೆದುಕೊಡುವನು. ಇದರಿಂದ ಆ ರಟ್ಟಿನ ರಚನೆ, ಹಾಗು ಮೇಲು ಭಾಗದ ಸೂಕ್ಷ್ಮ ಏರು ಪೇರುಗಳೇ ಆತನ ಚಿತ್ರಕ್ಕೆ ಆಧಾರವಾಗಿರುತ್ತ ಹಾಗು ಊಹಿಸಿದ ಚಿತ್ರವಾಗಿರುತ್ತದೆ.

ಎರಡನೆಯದು ಆತನಿಗೆ ಒಂದು ಪದಾರ್ಥವೇ ಆಗಲಿ, ವ್ಯಕ್ತಿಯೇ ಆಗಲಿ ಇನ್ನಿಲ್ಲವಾದನೆಂದು ಹೇಳಿದಲ್ಲಿ ಆತ ಆ ಪದಾರ್ಥ ಯಾ ವ್ಯಕ್ತಿಯನ್ನು ಸಂಪೂರ್ಣವಾಗಿ ನಿರ್ಲಕ್ಷಿಸುತ್ತಾನೆ. ಆಗ ಆ ಪದಾರ್ಥ ಯಾ ವ್ಯಕ್ತಿಯೇ ಸ್ವತಃ ಎದುರಿಗೆ ಇದ್ದರೂ ಹಾಗು ಮಾತಾಡಿಸಿದರೂ ಆ ವಿಷಯದಲ್ಲಿ ಗಮನವೇ ಇರುವುದಿಲ್ಲ. ಅವರ ಬಗ್ಗೆ ಆತನ ಎಲ್ಲಾ ಇಂದ್ರಿಯಗಳೂ ಮೈ ಮರೆತಿರುತ್ತದೆ. ಇದೆಲ್ಲ ಮೆದುಳಿನ ಒಂದು ನರಗಳ ಗುಂಪಿನಿಂದಲೇ ನಡೆಯಲ್ಪಟ್ಟು ದೇಹದ ಇತರ ನರಗಳಲ್ಲೆಲ್ಲಾ ಅಧಿಕಾರ ನಡೆಸುತ್ತದೆ.

'ಹಿಪ್ನಾಟಿಸಂ'ನ್ನು ಗಂಡಸರಿಗಿಂತ ಹೆಂಗಸರ ಮೇಲೆ ಸುಲಭವಾಗಿ ಪ್ರಯೋಗಿಸಬಹುದು. ಕಾರಣ ಅವರ ಚಂಚಲತೆ. ಸ್ಥಿರ ಚಿತ್ತವುಳ್ಳ ಹಾಗು ಬಲಾಢ್ಯನಾದ ಮನುಷ್ಯನಲ್ಲಿ 'ಹಿಪ್ನಾಟಿಸಂ'ನ ಆಟ ಯಶಸ್ವಿಯಾಗಿ ಸಾಗುವುದಿಲ್ಲ.

ನೀವು ಯಾವುದನ್ನು ಕುರಿತು ಸ್ಥಿರ ಚಿತ್ತದಿಂದ ಅಪ್ಪಣೆ ಮಾಡುತ್ತೀರೋ ಅದು ನಿಮ್ಮಲ್ಲಿನ ಅದ್ಭುತವಾದ ಸೂಜಿಗಲ್ಲಿನಂತಹ ಶಕ್ತಿಯಿಂದ ಹತ್ತಿರ ಬರುತ್ತದೆ ಮತ್ತು ಇಚ್ಛಿಸಿದಂತೆ ಆಡಲೂ ತೊಡಗುತ್ತದೆ.

ಒಮ್ಮೆ ಸ್ವಿಜರ್‌ಲಂಡಿನ ಪ್ರಮುಖ ರಸ್ತೆಯಲ್ಲಿ ಒಬ್ಬ ಬಳೀ ಬಟ್ಟೆಯನ್ನುಟ್ಟಿದ್ದ ಹೆಂಗಸಿನಿಂದ ಒಬ್ಬನ ಕೊಲೆಯಾಯಿತು. ಜನ ಆಕೆಯನ್ನು ಹಿಡಿಯಬಂದರೂ ಆಕೆ ಓಡಲಿಲ್ಲ. ಆಕೆಯಲ್ಲಿ ಜ್ಞಾನವಿರಲಿಲ್ಲವೆಂಬುದನ್ನು ಗ್ರಹಿಸಲು ಜನರಿಗೆ ವೇಳೆಯೂ ಗಲಿಲ್ಲ. ಕೋರ್ಟಿನಲ್ಲಿ ಅವಳಿತ್ತ ಹೇಳಿಕೆ: ಬಾರಿನಲ್ಲಿ ನಾನು ಒಬ್ಬನೊಡನೆ ನಾಟ್ಯವಾಡುತ್ತಿದ್ದೆ. ಆತನ ಕಣ್ಣುಗಳು ಆಕರ್ಷಕವಾಗಿದ್ದುವು. ಅವನನ್ನುನೋಡುತ್ತಿದ್ದಂತೆ ನನ್ನ ಮನಸ್ಸೆಲ್ಲ ಅಲ್ಲೆ ನೆಟ್ಟಿತ್ತು. ಬೇರೆ ಬದಲಾಗಲೇ ಇಲ್ಲ. ಮತ್ತೆ ನಾನು ಬುದ್ಧಿ ತಿಳಿದಾಗ ಪೋಲೀಸ್ ಬಂಧನದಲ್ಲಿದ್ದೆ.

ಜರ್ಮನಿಯ ಗ್ರೂಸೆನ್ ಎಂಬಾತ ಸ್ತಂಭನದಲ್ಲಿ ಪಾಂಡಿತ್ಯ ಪಡೆದಿದ್ದ. ತನ್ನ ಪ್ರಣಯದ ಹಾದಿಗೆ ಬಹಳ ಯುವತಿಯರನ್ನು ಸೆಳೆದಿದ್ದ. ತನ್ನ ಹಾದಿಗೆ ಬರದವನ್ನು ಇದರ ಮೂಲಕ ಆತ್ಮಹತ್ಯೆಮಾಡಿಕೊಳ್ಳುವಂತೆ ಮಾಡಿ ಛಲ ಕುರಿಸಿಕೊಳ್ಳುತ್ತಿದ್ದ. ಒಮ್ಮೆ ಆತ್ಮಹತ್ಯೆಮಾಡಿ ಕೊಳ್ಳುವುದರಲ್ಲಿ ವಿಫಲಳಾಗಿ ಎಚ್ಚತ್ತ ಹೆಂಗಸು ಆತನನ್ನು ಸೆರೆಮನೆಗಟ್ಟಿದಳು.

ಹಿಪ್ನಾಟಿಸಂ ಕಲಿತ ಮಹಾಶಯರು ಪ್ರಥಮತಃ ಸ್ತಂಭಿಸಲು ಬಹಳ ಕಾಲ ತೆಗೆದುಕೊಳ್ಳುತ್ತಾರೆ. ಕಾರಣ ಅವರ ಪಾಂಡಿತ್ಯ, ಅವರ ಸ್ಥಿರತೆ ಇನ್ನೂ ಬಾಲ್ಯಾವಸ್ಥೆಯಲ್ಲಿರುತ್ತದೆ. ಕ್ರಮೇಣ ಇಂತಹ ಅನೇಕ ಪ್ರಯೋಗಗಳಿಂದ ಅವರ ಈ ಸ್ತಂಭಿಸುವ ಶಕ್ತಿ ಶೀಘ್ರ ಪರಿಣಾಮಕಾರಿಯಾಗುತ್ತೆ.

ಸ್ತಂಭಿಸಲು ಬಹುಶೀಘ್ರ ಹಾಗು ಪರಿಣಾಮಕಾರಿಯಾದ ಅಂಗವೆಂದರೆ ಕಣ್ಣು ಹಾಗು ಮೆದುಳು. ಆಕರ್ಷಕವಾದ ನೀಲ ನಯನವುಳ್ಳವರು ಸ್ತಂಭನವನ್ನು ಕಲಿತರೆ ಅವರು ಬಹುಬೇಗ ಹಿಪ್ನಾಟಿಸಂನ ವಿಶಾರದರಾಗಬಹುದು. ಸ್ತಂಭನವನ್ನು ಕಲಿತವರನ್ನು ಸುಲಭವಾಗಿ ಗುರುತಿಸುವಿಕೆ ಅವರ ಕಣ್ಣುಗಳು ಬಹಳ ಕಾಂತಿಯುತವಾಗಿದ್ದು ಕಣ್ಣಿನ ಸುತ್ತಲೂ ಆಳವಾದ ಗುಳಿಬಿದ್ದಿರುತ್ತದೆ. ಅಂತಹ ಕಣ್ಣುಗಳನ್ನು ಒಮ್ಮೆ ನೋಡಿದರೆ ಮತ್ತೊಮ್ಮೆ ನೋಡಬೇಕೆನಿಸುತ್ತದೆ.

ಸ್ತಂಭನವನ್ನು ವ್ಯಕ್ತಿಯ ಮೇಲೆ ಅಲ್ಲದೆ ವಸ್ತು ಹಾಗು ಶಬ್ದಗಳ ಮೇಲೂ ನಡೆಸಬಹುದು. ಇದು ಬಹಳ ಕಷ್ಟದ ಕೆಲಸವಾಗಿರುತ್ತದೆ.

ಒಮ್ಮೆ ಸ್ವೀಡನ್ನಿನಲ್ಲಿ ಒಬ್ಬ ದಾದಿಯನ್ನು ಶಿಶುಹತ್ಯೆ ಮುಖದ್ದಮೆಯ ಮೇಲೆ ವಿಚಾರಣೆ ನಡೆಸಿದರು. ಆಕೆ ಕೇಳಿದಳು 'ಅಂದು ನನಗೊಂದು ಪತ್ರ ಬಂತು ಅದ

(೧೦ನೇ ಪುಟ ನೋಡಿರಿ)



ಅಮೆರಿಕೆಯ 29ನೆಯ ಉಪಗ್ರಹ ಎಕ್ಸ್ ಪ್ಲೋರರ್ 8ನ್ನು ಹಾರಿಸಲು ಸಿದ್ಧಪಡಿಸುವಾಗ ತೆಗೆದ ಚಿತ್ರ.

ಸ್ಥಾಪನೆ: 1924

ದಿ ಕರ್ಣಾಟಕ ಬೇಂಕ್ ಲಿಮಿಟೆಡ್

(ಶೆಡ್ಯೂಲ್ಡ್ ಬೇಂಕ್)

ಪ್ರಧಾನ ಆಫೀಸು: ಮಂಗಳೂರು—3.

ಈ ಕೆಳಗಿನ ಬಡ್ಡಿದರಗಳಲ್ಲಿ ಠೇವಣಾತಿಗಳನ್ನು ಸ್ವೀಕರಿಸಲಾಗುವುದು.

ಒಂದು ತಿಂಗಳಿಗೆ	.... ಸಾ||	ಸೇಕಡಾ 3-75	ನ.ಪೈಸೇ
ಮೂರು ತಿಂಗಳುಗಳಿಗೆ	....	,,	4-00	,,
ಆರು ತಿಂಗಳುಗಳಿಗೆ	....	,,	4 25	,,
12 ತಿಂಗಳುಗಳಿಂದ 23 ತಿಂಗಳುಗಳ ವರೆಗೆ	....	,,	4-50	,,
24 ತಿಂಗಳುಗಳಿಂದ 48 ತಿಂಗಳುಗಳ ವರೆಗೆ	....	,,	4 75	,,

"ಹನಿ ಡಿಪೋಸಿಟ್ಸ್" ನಲ್ಲಿ

ನಿಮ್ಮ ದೈನಂದಿನ ಉಳಿತಾಯವನ್ನು ವಿನಿಯೋಗಿಸಿರಿ.

THE KARNATAKA BANK LIMITED.

ವಿಚಾರ ವರ್ಷ

ನಮ್ಮ ಶೈಕ್ಷಣಿಕ ಸಮಸ್ಯೆಗಳು

ಶಿಕ್ಷಣದಂತಹ ಪವಿತ್ರ ಕ್ಷೇತ್ರದಲ್ಲಿ ಕೊಳಚೆ ತುಂಬಿಸಿ ಅದು ನಾರುವಂತೆ ಮಾಡಬಾರದು. ಸರಕಾರ—ಅಧಿಕಾರಿಗಳು, ಶಿಕ್ಷಕರು ಹಾಗೂ ರಕ್ಷಕರು ಮೊದಲಿತ್ತ ಗಮನಹರಿಸಬೇಕಾಗಿದೆ.

ಶ್ರೀ ಎಸ್. ಗೋಪೀಚಂದರಾವ್.

"ದೇಶಕ್ಕೆ ಜನರು ಉಪ್ಪಿದ್ದ ಹಾಗೆ" ಎಂಬ ಗಾದೆಯ ಮಾತು ವಿಶ್ವವಿದಿತವಿದೆ. ಈ ಜನರು ಸುದೃಢರೂ ಧೃಢಕಾಯರೂ ಸಾಹಸಿಗಳೂ ಧೀರವೀರರೂ ಸುಶಿಕ್ಷಿತರೂ ಆಗಿದ್ದರೆ ಆಗ ದೇಶದ ಕೀರ್ತಿಕೈಕೆ ನವಿಲಗರಿಯೇರಿಸಿದಂತಾಗುವುದು. ಉಪ್ಪೊಂದಿಲ್ಲವಾದರೆ ಊಟವೇ ಸಪ್ಪೆಯಾಗುವಂತೆ ಜನರಿಲ್ಲದ ದೇಶ ಬಯಲು ಮರಳುಗಾಡು; ಉಪ್ಪಿನೊಡನೆ ಇತರ ಮಸಾಲೆಗಳೂ ಸೇರಿದರೆ ಅದು ಸ್ವಾದಿಷ್ಟವೆನಿಸುವಂತೆ ಪ್ರಜೆಯು ಗುಣಶೀಲಸ್ವಭಾವಾದಿಗಳಿಂದ ನಿಜವಾದ ದೇಶಜನೆನಿಸಬಲ್ಲನು.

ನಮ್ಮ ಭಾರತ ಸ್ವಾತಂತ್ರ್ಯಕ್ಕೆ ಕೆಲ ವರ್ಷ ಹಿಂದೆ ಹಾಗೂ ಅನಂತರದ ಈ ದಿನಗಳಲ್ಲಿ ಅಪಾರ ಕಾರಣದಿಂದಲೋ ಶಿಕ್ಷಣ ಕ್ಷೇತ್ರವು ಕುಂಟುತ್ತ ಸಾಗುತ್ತಿದೆ. ವೈದಿಕ, ಪುರಾಣ ಮತ್ತು ಇತಿಹಾಸ ಕಾಲಾವಧಿಗಳಲ್ಲಿ ಶಿಕ್ಷಣದ ಪ್ರಚಾರ ಈಗಿನ ಬಣ್ಣದ ಬೀಸಣಿಗೆಯಂತೆ ಇದ್ದಿರಲಿಲ್ಲವಾದರೂ ಆ ಕಾಲದ ಭಾರತೀಯರು ಲೋಕವ್ಯವಹಾರದಲ್ಲಿ ಚದುರರಾಗಿದ್ದರು ತಮ್ಮ ಅತ್ಯಾಶ್ಚರ್ಯಕರವಾದ ಚಮತ್ಕಾರಗಳಿಂದ ಬೆರಗುಗೊಳಿಸುತಿದ್ದರು. ಆದರೆ, ಒಂದುಮಾತನ್ನು ನಾವೀಗ ಅವಶ್ಯ ಗಮನಿಸಬೇಕು. ಹಿಂದೆ ನಮ್ಮ ದೇಶದಲ್ಲಿ ಈಗಿನಂತೆ ಶಿಕ್ಷಣ ಸಂಸ್ಥೆಗಳ ಸಂಖ್ಯೆ ಹೆಚ್ಚಿರಲಿಲ್ಲ; ಬಹುಶಃ ಅವು ಸುವಿಸ್ತೃತ ರೂಪವನ್ನು ಧರಿಸಿದಂತೆಯೇ ತೋರುವುದಿಲ್ಲ. ನಾಮಾಸ್ಯವಾಗಿ ಮನೆಯ ಹಿರಿಯನೇ ಮನೆಯ ಮಕ್ಕಳು ಪ್ರಾಪ್ತ ವಯಸ್ಕರಾದೊಡನೆಯೇ ವಿದ್ಯಾಭ್ಯಾಸಕ್ಕೆ ನಾಂದಿಯಿಡುವ ಪದ್ಧತಿಯುದ್ದಿತೆಂದು ತಿಳಿಯುತ್ತದೆ. ಇನ್ನು ಉಚ್ಚ ವಿದ್ಯಾಧ್ಯಯನಕ್ಕಾಗಿ ಮಾತ್ರ ನಿಯಮಿತ ಸಂಖ್ಯೆಯ ಕೇಂದ್ರಗಳಿಗೆ ತೆರಳ ಬೇಕಾಗಿತ್ತು. ಆದರೆ, ಇಂದಿನ ಪರಿಸ್ಥಿತಿ ಅಂತಿರುವುದಿಲ್ಲ. ಮನೆಯಲ್ಲಿ ಹೆತ್ತವರಿಗೆ ಅವರ ಸಾಂಸಾರಿಕ ತಾಪತ್ರಯಗಳನ್ನೆದುರಿಸುವುದರಿಲ್ಲೇ ತಲೆ ಚಿಟ್ಟು ಹಿಡಿವಾಗ, ಮಕ್ಕಳ ವಿದ್ಯೆಯತ್ತ ಸೂಕ್ಷ್ಮಸಲು ಗಮನವಿರುವುದುಂಟೆ? ಹಾಗಾಗಿ, ಶಿಕ್ಷಣವೆಂಬುದು ಮನೆಯಿಂದ ಹೊರಗೆ ಪಡೆಯುವ ಒಂದು ಸೊತ್ತು ಎಂಬ ದುರ್ಭಾವನೆ ಹುಟ್ಟಿಕೊಂಡಿತು; ತಮ್ಮ ಮನಸ್ಸಿನಂತೆ ತಮ್ಮ ಮಕ್ಕಳು ನಡೆಯಲು ಸನ್ನದ್ಧರಾಗಿದ್ದರಿಂದ ಕಲಿಸುವ ಶಿಕ್ಷಕರನ್ನು ಬೊಟ್ಟಿಟ್ಟು ದೂರ ತೊಡಗಿದರು; ಇದೇ ಆಚರಣೆ ಮಾಮೂಲೆಂಬಂತೆ ಬಂದು ಅಧ್ಯಾಪಕ ವರ್ಗದವರ ಸ್ವಾಭಿಮಾನಕ್ಕೆ ಕೊಡಲಿಯೇಟೆನಂತಾಗಿ ಅವರು ತಮ್ಮ ಶಕ್ತಿಯನ್ನು ಕಳೆದುಕೊಳ್ಳುವಂತಾಯಿತು. ಅಧ್ಯಾಪಕರೆಂದರೆ, ಮನೆಯ ನೌಕರನಿಗಿಂತಲೂ ನಿಷ್ಕೃಷ್ಟ, ಅಕ್ಷರ ಮಾರಿ ಜೀವಿಸುವ ನಶ್ವರಪ್ರಾಣಿಯೆಂಬ ಭಾವನೆ ಬಲಿಯಿತು. ಅಧ್ಯಾಪಕರ ಆ ಸ್ವಾಭಾವಿಕ ತೇಜಸ್ಸು, ವೀರ್ಯ, ವಿದ್ಯಾವಂತಿಕೆ ಕಾಲಕ್ರಮದಲ್ಲಿ ಮಾಯವಾಗತೊಡಗಿತು.

ಬ್ರಿಟಿಷರ ಆಡಳಿತಾವಧಿಯಲ್ಲಿ ಇಲ್ಲಿ ಸ್ಥಾಪನೆಗೊಂಡ ಶಿಕ್ಷಣ ಸತ್ರಗಳು ಆಧುನಿಕತೆಯನ್ನು ಬೀರತೊಡಗಿದುವು. ಪ್ರಾಥಮಿಕ ಶಿಕ್ಷಕರಾಗಿ ದೇಶೀಯ ಅಧ್ಯಾಪಕರೇ ನೇಮಿತರಾಗುತಿದ್ದುದರಿಂದ ಅವರ ಮೇಲೆ ಬಲವಾದ ಹತೋಟಿಯಿಡುವುದು ಅವಶ್ಯವೆಂದು ಶಾಸನಕರ್ತರು ನಿರ್ಧರಿಸಿದರು. ಹೈಸ್ಕೂಲ್ ಹಾಗೂ ಕಾಲೇಜುಗಳಲ್ಲಿ ಭಾರತೀಯರಿಗೆ ಕೆಲಸ ದೊರೆಯುವುದೇ ದುಷ್ಕರವಾಗಿದ್ದ ಕಾಲವೊಂದಿತ್ತು. ಪ್ರಾಥಮಿಕ ಶಿಕ್ಷಣಕ್ಷೇತ್ರದಲ್ಲಿ ಪ್ರತ್ಯಕ್ಷವಾಗಿ ಆಂಗ್ಲೇಯರ ಕಾರ್ಯಭಾರ ಅತಿಕಡಿಮೆ; ಅದರೂ ಅದರ ಮೇಲೆ ನಿಯಂತ್ರಣ ಮಾತ್ರ ಅತಿಯಾಗಿತ್ತು; ಅದೇ ಇಂದಿಗೂ ಮುಂದುವರಿಯುತ್ತ ಬರುತ್ತಿದೆ.

ದೇಶೀಯ ಜನರೇ ಶಿಕ್ಷಕರಾಗಿರುವ ಈ ಪ್ರಾಥಮಿಕ ಶಿಕ್ಷಣ ಕ್ಷೇತ್ರದ ಕರ್ಮಚಾರಿಗೆ ಅಧಿಕ ವೇತನ ಕೊಡುವುದು ಅನಗತ್ಯ ಮತ್ತು ಅನಪೇಕ್ಷಿತವೆಂಬ ಭಾವನೆಯ ಸರಕಾರದಡಿ ಅಂದು ಕಡಿಮೆ ವೇತನಕ್ಕೆ ಗೌರವ ಹಾಗೂ ಪೂಜ್ಯಪದವೆಂಬ ಸದ್ಭಾವನೆಯಿಂದ ದುಡಿದವರು ಪ್ರಾಥಮಿಕ ಶಿಕ್ಷಕರು. ತಮ್ಮ ದಾರಿದ್ರ್ಯ ಪರಂಪರೆಯನ್ನು ಗಮನಿಸದೆ ಗುರುವಿಗಿಂತ ಶಿಷ್ಯ ಮೇಲಾಗಬೇಕೆಂಬ ಏಕಮೇವ ಅಭಿಲಾಷೆಯಿಂದ ನಿರ್ವಂಚನೆಯಿಂದ ಸೇವೆ ಸಲ್ಲಿಸುತ್ತ ಬಂದವರು ಇವರು ತಮ್ಮ ಪಾಂಡಿತ್ಯವನ್ನು ಶಿಷ್ಯನಲ್ಲಿ ಪ್ರತಿಬಿಂಬಿಸಿ, ಆತನಲ್ಲಿ ಜೀವದ ಜೀತನವನ್ನು ಜಾಗ್ರತಗೊಳಿಸಿದವರು ಇವರು. ಆದರೆ, ಇಂತಹ ವಾಸ್ತವಿಕ ಕರ್ಮಯೋಗಿಗಳ ಕಡೆಗೆ ಅಂದಿನ ಸರಕಾರ ಗಮನಕೊಡುವ ಪರಿಪಾಠ ಇಟ್ಟುಕೊಂಡಿರಲಿಲ್ಲ; ಅವರ ಜೀವನ ಸುಖ-ದುಃಖಗಳನ್ನು ಕೇಳಿ ತಿಳಿಯುವತ್ತ ಕಿವಿಕೊಡುತ್ತಿರಲಿಲ್ಲ. ಇದೇ ಮಾದರಿ ಮುಂದುವರಿಯುತ್ತ ಬಂದು ಪ್ರಾಥಮಿಕ ಶಿಕ್ಷಕರ ಬಾಳು ಗೋಳಾಗಿಯೇ ಬಿಟ್ಟಿತು. ಅವರ ಜೀವನದ ಕಣ್ಣೀರ ಕಾಲುವೆಯೂಗುತ್ತ ಬಂತು. ಜನಜೀವನದಲ್ಲಿ ಸಾಂಪತ್ತಿಕ ಸ್ಥಿತಿಯು ಮಹತ್ವದ ಸ್ಥಾನವನ್ನು ಆಕ್ರಮಿಸಿದೊಡನೆಯೇ ಆರ್ಥಿಕವಾಗಿ ಹಿಂದುಳಿದಿದ್ದ ಈ ಪ್ರಾಥಮಿಕ ಶಿಕ್ಷಕರು ನಿಸ್ತೇಜರಾದರೆ ಅದರಲ್ಲಿ ಆಶ್ಚರ್ಯವೇನು?

ತಮ್ಮಲ್ಲಿಂಬೇಕಾದ, ಇದ್ದಿರಬಹುದಾದ ಸಹಜ ತೇಜಸ್ಸು ಮತ್ತು ವೀರ್ಯವನ್ನು ಕಳೆದುಕೊಂಡ ಅಧ್ಯಾಪಕರು ಮೇಲಿನ ಅಧಿಕಾರಿಗಳು ಹಾಕಿದ ತಾಳಕ್ಕೆ ಕುಣಿಯಲೇ ಬೇಕಾಗಿ ಬಂತು. ಆಗ ಅಧಿಕಾರಿಗಳು ತಮ್ಮ ಅಧಿಕಾರದ ಬಲದಿಂದ ಪ್ರಾಥಮಿಕ ಶಿಕ್ಷಕರನ್ನು ಗೋಳು ಹೊಡೆಸುವ ರಾಕ್ಷಸೀ ಕಾರ್ಯದಲ್ಲಿಯೇ ಆನಂದ ವಿಭೋರರಾಗಲು ತೊಡಗಿದರೆ ಅದು ವಿಶೇಷವೆನಿಸದು. ಕೆಲವೊಂದು ಅಧಿಕಾರಿಗಳು ಮಾನವತೆಯ ಪ್ರತಿ ಮೂರ್ತಿಗಳಂತೆ ವರ್ತಿಸಿರಬಹುದಾದರೂ ಮಾನವತೆಯನ್ನೆ ಕಳೆದುಕೊಂಡು "ಪಶು ಪ್ರಾಣಿ"ಗಳಂತೆ ಜೀವನಕ್ಕಾಗಿ ತಾಕಲಾಡುವ ಅಧ್ಯಾಪಕರಿಗೆ ಅದು ತಿಳಿಯಬೇಕಾದರೂ ಹೇಗೆ? ಅಂತೆಯೇ ಉನ್ನತ ಆದರ್ಶಗಳನ್ನು ಇಟ್ಟುಕೊಂಡು ನುರ್ಯೂದಿಯಿಂದಿರ ಬಯಸುವ ಅಧ್ಯಾಪಕರಾದರೂ ಹತ್ತರೊಡನೆ ಹನ್ನೊಂದು ಎಂಬಂತೆ ಮಹಾಪ್ರವಾಹದಲ್ಲಿ ಕೊಚ್ಚಿಯೇ ಹೋದರು.

ಹೀಗೆ ಪ್ರಾಥಮಿಕ ಶಿಕ್ಷಕರು ತೇಜೋವಧೆ ಹೊಂದಿದರು. ಇಂದು ತಮ್ಮ ನಿಷ್ಪ್ರಯೋಜಕ ಸ್ಥಿತಿಗೆ ತಾವೇ ಕಾರಣರೆಂಬ ತಿಳಿವು ಅವರಲ್ಲಿ ಮೂಡಿದೆಯೆಂದು ಹೇಳುವಂತಿಲ್ಲ. ತಾವು ಸಮಾಜ ನಿರ್ಮಾತೃಗಳು ಎಂಬ ಭಾವನೆ ಅವರಲ್ಲಿ ಜಾಗ್ರತವಾಗಬೇಕು. ತಮಗೆ ಒಪ್ಪಿಸಿದ ಮಹಾ ಕರ್ತವ್ಯ ಪಾಲನೆಯಲ್ಲಿ ಅವರು ವಂಚನೆ ಮಾಡಬಾರದು; ಅಧಿಕಾರಿಗಳೆಂದರೆ, ದೊಗ್ಗಾಲು ಹಾಕುವ ತಮ್ಮ ಮಾಮೂಲು ಕ್ರಮವನ್ನು ಬಿಟ್ಟುಕೊಟ್ಟು ನ್ಯಾಯಕ್ಕೆ, ಧರ್ಮಕ್ಕೆ ಬಗ್ಗಬೇಕು. ತಪ್ಪುಮಾಡದೆಯಿರುವವನು, ತನ್ನ ಕರ್ತವ್ಯವನ್ನು ಆತ್ಮಸಾಕ್ಷಿಯಂತೆ ಮಾಡಿದವನು, ನಿರ್ವಂಚನೆಯಿಂದ ತನ್ನ ಕೆಲಸಗಳನ್ನು ನಿರ್ವಹಿಸುವವನು ಯಾರಿಗೇ ಆಗಲಿ ಹೆದರಬೇಕೇಕೆ? ಆದರೆ, ಈ ರೀತಿಯ ಸೇವೆ ಸಲ್ಲಿಸುವವಂದರೂ 'ಅಧಿಕಾರ'ಗಳಿಗಿರುವ 'ಅಧಿಕಾರ ಮಿತಿ'ಯಂದಾಗಿ ಅವರೇನೆಂದರೂ ತಲೆ ತಗ್ಗಿಸಿಯೇ ಬಿಡಬೇಕಾಗಿದೆ. ಮಕ್ಕಳೆದುರಲ್ಲಿಯೇ ಶಿಕ್ಷಕರನ್ನು ಮುಖಭಂಗಗೊಳಿಸುವ ಅಧಿಕಾರಿಗಳು, ಮಾತು ಮಾತಿಗೆ ಸರ್ಟಿಫಿಕೇಟ್ ಕೇನ್ಸಲ್ ಮಾಡಿಬಿಡುತ್ತೇನೆ ಎಂದು ಹೆದರಿಸುವ ಅಧಿಕಾರಿಗಳು ಪರೋಕ್ಷವಾಗಿ ಅಧ್ಯಾಪಕನ ಆತ್ಮತೇಜಸ್ಸನ್ನು ಇರಿಯುವುದಿಲ್ಲವೆ?

ಶಿಕ್ಷಣದ ಸಮಸ್ಯೆಯೆಂದರೆ ಇಂದು ಮುಂದೆ ನಿಲ್ಲುವ ಪ್ರಶ್ನೆಗಳು ಒಂದೆರಡಲ್ಲ. ಮಕ್ಕಳ ಹೆತ್ತವರು, ಶಿಕ್ಷಕರು, ಶಾಲೆಗಳ ಒಡೆಯರು, ಅಧಿಕಾರಿಗಳು ಹಾಗೂ ಸರಕಾರ ಎಲ್ಲರೂ ಇಂದು ಕಲಿತುಕೊಳ್ಳಬೇಕಾದ ಸಂಗತಿಗಳು ಅನೇಕವಿವೆ. ಶಿಕ್ಷಕರ ಸಗಾರ ಕಡಿಮೆ; ಅದನ್ನು ಏರಿಸಿದರೆ, ಶಿಕ್ಷಣಕ್ಷೇತ್ರ ಉನ್ನತವಾಗುವುದೆಂದು ಹೇಳಿದರೆ; ಅಷ್ಟರಿಂದಲೇ ಸಾಧ್ಯವಿಲ್ಲ. ಅಧ್ಯಾಪಕರ ಜೀವನ ಸ್ಥಿತಿ ಹೀನವಿದೆ; ಅದನ್ನು ಉನ್ನತಗೊಳಿಸುವುದೂ ಈ ಸಾಧನೆಯಲ್ಲಿ ಒಂದು ಹೆಜ್ಜೆಯಷ್ಟೇ ಹೊರತು ಅದುವೇ ತಾರಕವೆಂದರೆ ಮರುಳುಮಾತು. ಹೆತ್ತವರಿಂದ ಹಿಡಿದು ಸರಕಾರದವರೆಗೆ ಇಂದು ತಂತಮ್ಮ 'ಅಧಿಕಾರ ಮಿತಿ'ಯ ಬಗ್ಗೆಯೇ ಚಿಂತಿಸುತ್ತ ಹೋಗುವವರೇ ಹೆಚ್ಚಲ್ಲದೆ ತಮ್ಮ ಕರ್ತವ್ಯವೇನು ಎಂಬುದತ್ತ ಯಾರೂ ದೃಷ್ಟಿಹರಿಸುವ ಕಷ್ಟವಹಿಸುವುದಿಲ್ಲ. ನಮ್ಮ ಸಮಾಜ, ನಮ್ಮ ಜನರು ನಮ್ಮ ಅಧಿಕಾರಿಗಳು ಹಾಗೂ ನಮ್ಮ ಸಮಾಜ, ನಮ್ಮ ಅಧಿಕಾರಿಗಳು ಹಾಗೂ ನಮ್ಮ ಸರಕಾರ ತಂತಮ್ಮ ಕರ್ತವ್ಯವೇನೆಂಬುದನ್ನು ಅರಿಯದವರೆಗೆ ನಮ್ಮ ದೇಶ ಉದ್ಧಾರವಾಗುವುದಿಲ್ಲ. ಅಧಿಕಾರ ಚಲಾಯಿಸುವುದರಿಂದ ಕೆಲಸವಾಗಿಯುವುದು; "ಎಲ್ಲರ ಹೊಟ್ಟೆಯೂ ತುಂಬಲಿ" ಎಂದು ಗಾರೀಶಂಕರದಿಂದ ಆಜ್ಞೆ ಹೊರಟಿ ಮಾತ್ರಕ್ಕೆ ಹಸಿವು ಹಿಂಗುವುದಾದರೆ ಯಾರು ಯಾತಕ್ಕೆ? ಈ ಬಗ್ಗೆ ನಾವು ನಮಗಿಂತ ಕ್ಷುಲ್ಲಕವಾದ ಪ್ರಾಣಿಗಳಿಂದ ಪಾಠಕಲಿಯಬೇಕು. ಇರುವೆಗಳು, ಜೇನುನೊಣಗಳು ಹೇಗೆ ತಮ್ಮ ಕರ್ತವ್ಯದಲ್ಲಿ ನಿರತವಾಗಿವೆ? ಅವುಗಳಿಂದಾದರೂ ಅಧಿಕಾರದ ಮಾತೆತ್ತುವುದುಂಟೆ? ಆದರೆ, ನಾವಾದರೋ ಪ್ರತಿಯೊಂದಕ್ಕೂ ಅಧಿಕಾರ ದಂಡವನ್ನು ಎತ್ತುತ್ತೇವೆ! ಎತ್ತುವುದಾದರೂ ಚಿಂತೆಯಿಲ್ಲ; ಆ ದಂಡವನ್ನು ಎತ್ತುವಷ್ಟು ಶಕ್ತಿಯಾದರೂ ಎಷ್ಟು ಜನರಲ್ಲಿದೆ? ಎಂತಲೇ ಎತ್ತುವ ನಟನೆ ಮಾಡುತ್ತೇವೆ! ನಮ್ಮ ನಟನೆಯಿಂದಲೇ ಕಣ್ಣುಕತ್ತಲೆಕಾಣುವ ಹೇಡಿ ಅದರ ಆಸುತಿಯಾಗುತ್ತಾನೆ! ಆಗ ನಾವು ಗೆದ್ದೆವೆಂಬ ಶುಷ್ಕಾಭಿಮಾನ ಪಡುತ್ತೇವೆ!

ಆದರೆ, ಇದರಿಂದ ಸಮಸ್ಯೆ ಪರಿಹಾರಗೊಳ್ಳದು. ಕೇವಲ ಮಾತಾಡುತ್ತ ಹೋಗುವುದರಿಂದ ಸಮಸ್ಯೆ ಬಗೆಹರಿಯದು. ಶಿಕ್ಷಣದಂತಹ ಪವಿತ್ರಕ್ಷೇತ್ರದಲ್ಲಿ ಕೊಳೆ ಚೆಹರಿಸುತ್ತ ಅದನ್ನೇ ಕಂಡು ಆನಂದಪಡುವುದು ಎಷ್ಟಕ್ಕೂ ತರವಲ್ಲ. ಇದರಿಂದ ಭವಿಷ್ಯವೇ ಅಂಧಕಾರಮಯವಾಗುವುದು. ಆದುದರಿಂದ ಸಮಾಜವು ಶಿಕ್ಷಕರನ್ನು ಗೌರವ ಭಾವನೆಯಿಂದ ಒಳಗೂ ಹೊರಗೂ ನೋಡಬೇಕು. ಅಧ್ಯಾಪಕರಾದರೂ ತಾವು ಭವ್ಯ ಜನಾಂಗ ರೂಪಿಸುವ ಹೊಣೆ ಹೊತ್ತಿದ್ದೇವೆ; ತಾವು ಇದರಲ್ಲಿ ಅಸಡ್ಡೆ ತೋರಿದರೆ ಮುಂದಿನ ರಾಷ್ಟ್ರ ಪೀಳಿಗೆಯ ಶಾ

(ಕೆಳ ಪುಟ ನೋಡಿರಿ)

40 ವರ್ಷಗಳ ಭದ್ರ ಹಾಗೂ ಸಮರ್ಥ ಬೇಂಕಿಂಗ್ ಸೇವೆ

ದಿ. ಪಾಂಗಾಳ ನಾಯಕ್ ಬೇಂಕ್ ಲಿ.,

ಪ್ರಧಾನ ಕಛೇರಿ: ಉಡುಪಿ, (ದ. ಕನ್ನಡ.)

ನಮ್ಮ 3 ವರ್ಷ ವಾಯಿದೆಯ ಕ್ಯಾಷ್ ಸರ್ಟಿಫಿಕೇಟುಗಳಲ್ಲಿ ಶೇವಣಿ ಮಾಡಿರಿ.
ಬಡ್ಡಿ ಶೇಕಡಾ 5ರಂತೆ. ರೂ. 87-00 3 ವರ್ಷಗಳ
ಅಂತ್ಯದಲ್ಲಿ ಬಡ್ಡಿ ಕೂಡಿ ರೂ. 100-00 ಒದಗಿಸುವುದು.

ಕರೆ, ಚಿಕ್ಕವಾಯಿದೆ, ನಿರಖು ಶೇವಣಾತಿಗಳ ಮೇಲೆ
ಬಡ್ಡಿ ಶೇಕಡಾ 4½ರ ವರೆಗೆ.

ರೂ. 1 ಕೋಟಿಗೂ ಮಿಕ್ಕಿದ ಚಲಾವಣಾ ಭಂಡವಾಳ

ಶಾಖೆಗಳು: ಬೆಂಗಳೂರು, ಮಂಗಳೂರು, ಬೇಲೂರು, ಶಿವಮೊಗ್ಗ.
ಭದ್ರಾವತಿ, ತುಮಕೂರು, ಕುಣಿಗಲ್, ಕಾಸರಗೋಡು, ಇತ್ಯಾದಿ.

(ಸ್ಥಾಪನೆ: 1920)

ವಿಶ್ವಸ್ವಾಸ್ಥ್ಯ

ಮಾನಸಿಕ ರೋಗಕ್ಕೆ ಪರಿಹಾರವೇನು?

ವೈಜ್ಞಾನಿಕ ಸಂಶೋಧನೆಗಳಿಂದ ಹಳೆಯ ರೋಗಗಳಿಗೆ ಮದ್ದು ಸಿದ್ಧಿಸಿದೆಯನದರೂ ಹೊಸತಾಗಿ ಮಾನಸಿಕ ರೋಗಗಳನ್ನು ಸೃಷ್ಟಿಸುತ್ತ ಮುಂದುವರಿದಿದೆ. ಈ ರೋಗಗಳಿಗೆ ಚಿಕಿತ್ಸೆಯನ್ನು ಕಂಡು ಹಿಡಿಯಲು ವಿಜ್ಞಾನವು ಅಸಮರ್ಥವಾಗಿದೆಯೆ? ಆಧ್ಯಾತ್ಮಿಕ ವಿಕಾಸದಿಂದ ಇದು ಸಾಧ್ಯವೆನಿಸೀತೆ?

ಜಾಗತಿಕ ಆರೋಗ್ಯ ಸಂಸ್ಥೆಯ ಸಮ್ಮೇಳನವು ಭಾರತದ ರಾಜಧಾನಿ ನವದೆಹಲಿಯಲ್ಲಿ ಸೇರಿತು. ೧೯೫೬ರ ನಂತರ ಭಾರತದಲ್ಲಿ ಆಯೋಜಿತವಾದ ಅಂತಾರಾಷ್ಟ್ರೀಯ ಸಮ್ಮೇಳನಗಳಲ್ಲಿ ಇದು ಗಣನೀಯ ಸ್ಥಾನವನ್ನು ಪಡೆದಿದೆ. ದೇಶವಿದೇಶಗಳ ವೈದ್ಯರನ್ನು ಸ್ವಾಗತಿಸುವುದರೊಡನೆ ನಮ್ಮ ಸಾರ್ವಜನಿಕ ಆರೋಗ್ಯ ಹಾಗೂ ವೈದ್ಯಕೀಯ ಕ್ಷೇತ್ರದಲ್ಲಿ ಉನ್ನತಿಗೆ ಕಾರಣೀಭೂತವಾದ ಎಲ್ಲ ದೇಶಗಳನ್ನೂ ವಯಕ್ತಿಕವಾಗಿ ಸ್ಮರಿಸುವ ಅಪೂರ್ವ ಸಂದರ್ಭವಿದು ಎಂದು ಹೇಳಬಹುದು.

ಈ ಅವಕಾಶದಲ್ಲಿ ಕೇಂದ್ರ ಆರೋಗ್ಯ ಮಂತ್ರಿ ಶಾಖೆಯವರು ಒಂದು "ಆರೋಗ್ಯ ಪ್ರಗತಿ ಪ್ರದರ್ಶಿನಿ"ಯನ್ನು ಏರ್ಪಡಿಸಿದ್ದು ಇದನ್ನು ಉಪರಾಷ್ಟ್ರಪತಿ ಡಾ. ಸರ್ವಪಲ್ಲಿ ರಾಧಾಕೃಷ್ಣನ್‌ರವರು ಉದ್ಘಾಟಿಸಿದರು. ತಮ್ಮ ಉದ್ಘಾಟನಾ ಭಾಷಣದಲ್ಲಿ ಡಾ. ರಾಧಾಕೃಷ್ಣನರು ಶಾಂತಿಪೂರ್ಣ ಸಹಕಾರ್ಯದ ಕ್ಷೇತ್ರದಲ್ಲಿ ವಿಶ್ವ ಆರೋಗ್ಯ ಸಂಸ್ಥೆಯು ನೀಡಿದ ಸಹಯೋಗವನ್ನು ಪ್ರಶಂಸಿಸಿದರು. ಈ ಸಮ್ಮೇಳನದಲ್ಲಿ ವಿಶ್ವದ ಉಚಿತ ಆರೋಗ್ಯಮಟ್ಟವನ್ನು ವಿಮರ್ಶಿಸಲು ಪ್ರಪಂಚದ ಸುಮಾರು ೧೦೦ ರಾಷ್ಟ್ರಗಳ ವೈದ್ಯರು ಸಮಾಗಮಿಸಿ ಪರಸ್ಪರ ಸಹಾಯ ನೀಡುತ್ತಿರುವರು. ಈ ಎಲ್ಲಾ ದೇಶಗಳು ತಮ್ಮ ಜನತೆಯನ್ನು ಪ್ಲೇಗು ಮೊದಲಾದ ಸೋಂಕು ರೋಗಗಳಿಂದ ಉಳಿಸುವ ಉಪಾಯವನ್ನು ಚಿಂತಿಸುತ್ತಿರುವರು. ಒಂದು ರಾಷ್ಟ್ರವು ಆರೋಗ್ಯ ಶಾಲಿಯಾಗಿದ್ದರೆ ಮಾತ್ರ ಉಳಿದುವೂ ರೋಗವಿದೂರವಾಗಬಹುದು. ಏಕೆಂದರೆ, ಇಂದಿನ ಪ್ರಪಂಚ ಬಹಳಷ್ಟು ಸಂಕುಚಿತಗೊಂಡಿದೆ.

ವಿಶ್ವ ಆರೋಗ್ಯ ಸಂಸ್ಥೆಯು ಜಾತಿ, ಧರ್ಮ, ರಾಜಕಾರಣ, ಆರ್ಥಿಕ ಹಾಗೂ ಸಾಮಾಜಿಕ ಪರಿಸ್ಥಿತಿಗಳಲ್ಲಿ ಯಾವುದೇ ತಾರತಮ್ಯವನ್ನು ತೋರಿಸದೆ, ಆರೋಗ್ಯಗಳಿಸುವುದು ಮಾನವನಾದವನ ಮೂಲ ಅಧಿಕಾರವೆಂಬ ಉದಾರ ತತ್ವವನ್ನು ಒಪ್ಪಿಕೊಂಡಿದೆ. ಪ್ರತಿಯೊಬ್ಬನೂ ಸರ್ವೋಚ್ಚ ಆರೋಗ್ಯವಂತನಾಗಬೇಕು ಎಂಬುದೇ ಈ ಸಂಸ್ಥೆಯ ಉನ್ನತ ಆದರ್ಶವಾಗಿದೆ. ಎಲ್ಲ ದೇಶದ ಪ್ರಜಾಕೋಟಿಯು ಆರೋಗ್ಯವಂತವಾಯಿತೆಂದರೆ, ಪ್ರತಿ ರಾಷ್ಟ್ರದ ಪ್ರಜೆಯೂ ಸುದೃಢನಾಗುವನು; ಮತ್ತು ಇದರಿಂದಾಗಿ ವಿಶ್ವಶಾಂತಿ ಸ್ಥಾಪನೆಗೊಳ್ಳಲು ಅನುಕೂಲವಾಗುವುದು.

ಭಾರತದಲ್ಲಿ ಮಲೇರಿಯಾ, ರಾಜಯಕ್ಷ್ಮ, ಕುಷ್ಠ ಮೊದಲಾದ ರೋಗಗಳು ಕ್ರೂರವಾಗಿ ಕಾಡುತ್ತಿವೆ. ಆದರೂ ಇವುಗಳನ್ನು ವಿಶ್ವ ಆರೋಗ್ಯ ಸಂಸ್ಥೆಯ ಸಹಾಯದಿಂದ ಕಡೆಗಟ್ಟುವ ಪ್ರಯತ್ನವು ನಡೆಯುತ್ತ ಬಂದಿದೆ; ಮತ್ತದು ಸ್ವಲ್ಪ ಮಟ್ಟಿಗೆ ಸಾಧ್ಯವಾಗಿದೆ. ಇದಕ್ಕಾಗಿ ಭಾರತೀಯರು ಈ ಸಂಸ್ಥೆಗೆ. ಕೃತಜ್ಞರಾಗಿರಬೇಕಾಗಿದೆ. ಸಲ್ಫಾಡ್ರಗ್ಸ್, ಆ್ಯಂಟಿಬಯೋಟಿಕ್ಸ್, ರೇಡಿಯೋ ಚಿಕಿತ್ಸೆ ಮೊದಲಾದ ನವನವೀನ ಸಂಶೋಧನೆಗಳಿಂದಾಗಿ ಹಸಿವೆ, ಬಡತನ ಮತ್ತು ಪೋಷಕಾಂಶಗಳ ಅಭಾವದಿಂದ ತಲೆದೋರುವ ವಿವಿಧ ಮಹಾರೋಗಗಳನ್ನು ಗುಣಪಡಿಸುವ ಸಾಧ್ಯತೆಯೊಗ ತೋರಿಬರುತ್ತಿದೆ. ಆದರೆ, ಒಂದೆಡೆ ಗುಣಹೊಂದಲಾರವೆಂಬ ವಿಶ್ವಾಸವಿಟ್ಟಿದ್ದ ಭಯಾನಕ ಮಾರಕ ರೋಗಗಳನ್ನೂ ಗುಣಪಡಿಸಲು ಪರಿಣಾಮಕಾರಿಯೂದ ಔಷಧಿಗಳನ್ನು ನಾವು ಹುಡುಕಿ ಆದರಲ್ಲಿ ಯಶಸ್ವಿಗಳಾಗುತಿದ್ದೇವೆ; ಆದರೊಡನೆಯೇ ಹಳೆಯ ರೋಗಗಳ ಸ್ಥಾನದಲ್ಲಿ ಹೊಸ ಹೊಸ ರೋಗಗಳ ನಿರ್ಮಾಣಕ್ಕೆ ನಾವೇ ನಾಂದಿ ಹಾಕುತಿದ್ದೇವೆ. ಆರೋಗ್ಯವೆಂದರೆ ರೋಗಗಳಿಂದ ದೂರವಿರುವುದು ಎಂದು ಮಾತ್ರ ಅರ್ಥವಲ್ಲ; ಪ್ರಾಣಿಯು ಪರಿಪೂರ್ಣತೆಗೇನೇ ವಿಶಾಲಾರ್ಥದಲ್ಲಿ ಹಾಗೆ ಹೇಳಬಹುದು.

ಮಾನವನು ತನ್ನನೇ ತಾನು ಸರಿಯಾಗಿ ನೋಡಿಕೊಂಡರೆ, ಆತನು ತಾನು ಅಪರ್ಯಾಪ್ತನೆಂದೂ, ತನ್ನಲ್ಲಿ ಯಾವುದೋ ಒಂದು ವಸ್ತುವು ಕಡಿಮೆಯಿದೆಯೆಂದೂ ಖಂಡಿತಕ್ಕೂ ತಿಳಿದುಕೊಳ್ಳಬಲ್ಲನು. ಆತನು ಒಂದು ರೀತಿಯಲ್ಲಿ ಯೋಚಿಸಿದರೆ ಮತ್ತೊಂದು ವಿಧಾನದಲ್ಲಿಯೇ ಕಾರ್ಯಮಗ್ನನಾಗುತ್ತಾನೆ. ಇದರಿಂದ ಅವನ ಪ್ರಕೃತಿ ಪ್ರವೃತ್ತಿಗಳು ಕವಲಾಗಿ ಕೀಟಲೆ ಕೊಡುವುವು. ಈ ಭಾವನಾತ್ಮಕ ಒತ್ತಡದಿಂದಾಗಿ ಆತನಲ್ಲಿ ಶಾರೀರಿಕ ಅವ್ಯವಸ್ಥೆಯು ತಲೆದೋರುವುದು. ಬಾಹ್ಯ ಉಪಾಯಗಳಿಂದ ನಾವು ಈ ವಿಷನ್ನಾವಸ್ಥೆಯಿಂದ ದೂರವುಳಿಯುವುದು ಅಸಾಧ್ಯ, ಮಾನಸಿಕ ಶಾಂತಿಯ ಉಪದೇಶದಿಂದಲೂ ಈ ಕೊರತೆಯು ತುಂಬಿ ಬರುವುದಿಲ್ಲ.

ವಿಜ್ಞಾನದಲ್ಲಿ ಬಹಳಷ್ಟು ಮುಂದುವರಿಯುತ್ತಿರುವ ನಾವು ನಮ್ಮ ಕಷ್ಟಕಾರ್ಪಣ್ಯಗಳನ್ನು ನಿವಾರಿಸಲು ಬದ್ಧಕಂಕಣರಾಗಿ ದುಡಿಯುತ್ತೇವೆ ಆದರೆ, ಈ ಕ್ಷೇತ್ರದಲ್ಲಿ ಮುಂದುವರಿದಂತೆ ನಾವು ನಮಗರಿವಿಲ್ಲದಂತೆಯೇ ವಿನಾಶದ ದಾರಿಯನ್ನೂ ತುಳಿಯುತಿದ್ದೇವೆ. ಮಾನವನನ್ನು ನಷ್ಟಗೊಳಿಸುವ, ಆತನನ್ನು ಕಷ್ಟಕ್ಕೆ ಗುರಿಮಾಡುವ ಸಾಧನಗಳನ್ನೂ ಅತ್ಯಂತ ವೇಗವಾಗಿ ನಾವು ತಯಾರಿಸಿಕೊಳ್ಳುತಿದ್ದೇವೆ. ಅಣ್ವಸ್ತ್ರಗಳು ಮಾನವನಲ್ಲಿ ಹುಟ್ಟಿಸಿದ ಭಯಂಕರ ಭಾವನೆಗಳನ್ನೇ ನಾವಿಲ್ಲಿ ಉದಾಹರಿಸ ಬಹುದು; ವಿಶ್ವ ಆರೋಗ್ಯ ಸಂಸ್ಥೆಯ ಈ ಸಮ್ಮೇಳನಕ್ಕೆ ಆಗಮಿಸಿದ ಪ್ರತಿನಿಧಿಗಳಲ್ಲಿ ಕೆಲವು ಸದಸ್ಯರಾದರೂ ಇಂಕಹ ಘೋರ ಅಣುಸರಿಕ್ಷೆಗಳ ಬಗೆ ವಿರೋಧಾಭಿಪ್ರಾಯವನ್ನು ವ್ಯಕ್ತಪಡಿಸುತ್ತಿರುವುದು ಶುಭಸಮಾಚಾರವಾಗಿದೆ.

ವಿಶ್ವದಲ್ಲಿ ಶಾಂತಿಸ್ಥಾಪನೆ ಮಾಡುವುದಕ್ಕೆ ನೈತಿಕ ಪ್ರಯತ್ನವು ಅವಶ್ಯಳವಾಗಿದೆ. ಇದರೊಂದಿಗೆ ಆಧ್ಯಾತ್ಮಿಕ ಪ್ರಯಾಸವೂ ಅತ್ಯಗತ್ಯವೆಂಬ ಕಟು ಸತ್ಯವನ್ನು ನಾವು ಅಲ್ಲಗಳೆಯುವಂತಿಲ್ಲ. ಭ್ರಮಪೂರ್ಣ ಮಸ್ತಿಷ್ಕ, ರುಗ್ಣ ಆತ್ಮ ಮತ್ತು ವಿಚಲಿತಹೃದಯಗಳಿರುವವರಿಗೆ ನಾವು ಶಾಂತಿಯಿಂದಿರುವುದಾದರೂ ಹೇಗೆ? ಮಾನವ ಜೀವನದ ಅಂತಿಮ ಸತ್ಯವೆಂದರೆ, 'ಆತ್ಮಾನಂ ವಿದ್ಧಿ' ಅಥವಾ ತನ್ನನ್ನು ತಾನೇ ಅರಿತುಕೊಳ್ಳುವುದು, ಧರ್ಮದ ಭೇದಭಾವವನ್ನು ದೂರೀಕರಿಸಿ ಪೀಡಿತರೆಲ್ಲರ ಬಗ್ಗೆ ಸಹಾನುಭೂತಿಯನ್ನು ಪ್ರಕಟಿಸುವುದು. ಪ್ರೇಮವೆಂಬುದೇ ಆತ್ಮದ ಶಾಂತಿ ಮತ್ತದು ಮಾತ್ರವೇ ಶಾಂತಿಯನ್ನು ನೀಡಬಲ್ಲ ಅದ್ಭುತ ಶಕ್ತಿಯಾಗಿದೆ. ತಿರಸ್ಕಾರವು ಆತ್ಮಕ್ಕೆ ತಗಲಿದ ರೋಗ. ಈ ಭಾವನೆಯು ಮಾನವನನ್ನೇ ಕ್ಷಯಿಸುತ್ತಿರುವುದು.

ಆಧ್ಯಾತ್ಮಿಕ ಹಾಗೂ ಆಧಿಭೌತಿಕ ರೋಗಗಳ ನಿರ್ಮೂಲನೆಯಿಂದ ಮಾತ್ರವೇ ವಿಶ್ವಶಾಂತಿಯು ಸ್ಥಾಪನೆಗೊಳ್ಳಬಹುದು. ಈ ರೋಗ ದೂರೀಕರಣವೆಂಬುದು ಒಬ್ಬಿಬ್ಬ ವ್ಯಕ್ತಿ ಅಥವಾ ಒಂದೆರಡು ರಾಷ್ಟ್ರಗಳು ಒಂದುಗೂಡಿ ಮಾಡಬಲ್ಲ

(ಅನೇ ಪುಟ ನೋಡಿರಿ)

ನಿಮ್ಮ ಕನಸುಗಳಿಗೆ ಸಹಾಯದ ಅವಶ್ಯಕತೆ

ಉಳಿತಾಯ— ಕ್ರಮವಾಗಿ ಉಳಿತಾಯ ಮಾಡುವದು, ಕನಸನ್ನು ನನಸಾಗಿ ಮಾಡಲು ಉತ್ತಮವಾದೊಂದು ಮಾರ್ಗ.

ಕೆನರಾ ಬ್ಯಾಂಕು, ನಿಮ್ಮ ಉಳಿತಾಯಕ್ಕೆ ಸಹಾಯ ಒದಗಿಸಲು ಅದ್ವಿತೀಯವೂ ಅನುಕೂಲವೂ ಆದ ಯೋಜನೆಗಳನ್ನು ಒದಗಿಸುತ್ತಿದೆ. ನಿಮ್ಮ ಆವಶ್ಯಕತೆಗಳಿಗೆ ಉತ್ತಮವಾದ ಒಂದನ್ನು ಆರಿಸಿರಿ ಮತ್ತು ಇಂದಿನಿಂದಲೇ ಉಳಿತಾಯವನ್ನು ಆರಂಭಿಸಿರಿ.

(1) **3 ವರ್ಷ ಮತ್ತು 5 ವರ್ಷಗಳ ಕ್ಯಾಶ ಸರ್ಟಿಫಿಕೇಟುಗಳು**

ಇಂದು ರೂ. 81 00 ವಿನಿಯೋಗಿಸಿರಿ ಮತ್ತು 5 ವರ್ಷಗಳ ನಂತರ ರೂ. 100-00 ಪಡೆಯಿರಿ.

ಇಂದು ರೂ. 88-75 ವಿನಿಯೋಗಿಸಿರಿ ಮತ್ತು 3 ವರ್ಷಗಳ ನಂತರ ರೂ. 100-00 ಪಡೆಯಿರಿ.

(2) **ಹೊಸ ಮಾದರಿಯ ಕ್ಯುಮಲೇಟಿವ್ ಠೇವಿನ ಯೋಜನೆ**

ಪ್ರತಿ ತಿಂಗಳು ರೂ. 5/-, ರೂ. 10/-, ರೂ. 20/- ಅಥವಾ ರೂ. 50/- ರ ಕೂಪನುಗಳನ್ನು ಕೊಳ್ಳಿರಿ ಮತ್ತು ನಮ್ಮ ಕ್ಯುಮಲೇಟಿವ್ ಠೇವಿನ ಯೋಜನೆಯಲ್ಲಿ ವಿನಿಯೋಗಿಸಿರಿ.

(3) **ಉಚಿತ ಬಡ್ಡಿ ಸಾಲದ ಉಳಿತಾಯಗಳ ಠೇವಿನ ಯೋಜನೆ**

ನೀವು ಮನಃಪೂರ್ವಕವಾಗಿ ಉಳಿಸಲು, ಭಾರತದಲ್ಲಿ ಪ್ರಥಮವಾಗಿ ಈ ಆದರ್ಶ ಯೋಜನೆಯನ್ನು ನಾವು ಪ್ರಾರಂಭಿಸಿದ್ದೇವೆ. ಉಚಿತ ಬಡ್ಡಿ ಸಾಲವನ್ನು ಪಡೆಯಿರಿ ಮತ್ತು ಆ ಸಾಲದ ಹಣದ ಮೇಲೆ ಬಡ್ಡಿಯನ್ನು ದೊರಕಿಸಿರಿ. ಈ ಸಾಲವನ್ನು ಸುಲಭ ಕಂತುಗಳಲ್ಲಿ ಮರುಪಾವತಿ ಮಾಡಬಹುದು.

ನಿಮ್ಮ ಕನಸುಗಳು ನನಸಾಗಲು ನಾವು ಸಹಾಯ ಮಾಡುವೆವು

ಕೆನರಾ ಬ್ಯಾಂಕ್ ಲಿಮಿಟೆಡ್

(Estd: 1906)

ರಿಜಿಸ್ಟರ್ಡ್ ಕಚೇರಿ:	ಆಡಳಿತದ ಕಚೇರಿ:	ವಿದೇಶಿ ಇಲಾಖೆಗಳು:
ಲೈಟ್ ಹೌಸ್ ಹಿಲ್, ಮಂಗಳೂರು.	ಬೆಂಗಳೂರು	ಮುಂಬಯಿ, ಕಲಕತ್ತ ಮತ್ತು ಮದ್ರಾಸು.

—: ನಿಮ್ಮ ಸೇವೆಗಾಗಿ 85 ಕ್ಕೂ ಮೀರಿ ಶಾಖೆಗಳು ಹಬ್ಬಿವೆ :—

ಉಡ್ಪಿ ಡಿ. ಮು. ಕೋರ್ಟಿನಲ್ಲಿ

S. C. No 649/1960.

M. ಪಿಲಿ ಶಟ್ಟಿ —ವಾದಿ.

ಮತ್ತು

B. ಜಯರಾಮ ಹೆಗ್ಡೆ. ಹೆಬ್ರಿ ಬೀಡು ಶ್ರೀಧರ ಬಲ್ಲಾಳರ ಮಗ. ಉಡ್ಪಿ ತಾಲೂಕು ಹಿರೇಬೆಟ್ಟು ಗ್ರಾಮದ ಅಗ್ರಬೈಲು—ಪ್ರತಿವಾದಿ.

ಯಿಬರೊಳಗೆ

ಪ್ರತಿವಾದಿಗೆ—

ಪ್ರತಿವಾದಿಯು ವಾದಿಯಿಂದ ಮೋಪನಸಾರ ಕೊಡುವುದಾಗಿ ಎಡ್ವಾನ್ಸು ಪಡೆಕೊಂಡ ಅಲ್ಪ, ಬಡ್ಡಿ, ಕಾಗಾ ಬರವಾಡಿಕೊಳ್ಳುವರೇ ಮಾಡಿದ ವ್ಯಾಜ್ಯವು ತಾರೀಕು 24—2—1961 ಕ್ಕೆ ಯಿಟ್ಟಿರುವುದರಿಂದ ಪ್ರತಿವಾದಿಯು ತನ್ನ ಉದಾಹರಣೆಯಿದ್ದರೆ, ಆ ದಿನ್ನ ಹಗಲು ಗಂಟೆ 10ಕ್ಕೆ ಈ ಕೋರ್ಟು ಮುಂದೆ ಹಾಜ್ರಾಗಿ ಜ್ಞಾಪೀರು ಮಾಡಿಕೊಳ್ಳತಕ್ಕದ್ದು. ತಪ್ಪಿದ್ದೆ ಆತನ ಗೈರುಹಾಜರಿಯಲ್ಲಿ ಈ ವ್ಯಾಜ್ಯವು ಏಕಪಕ್ಷೀಯನಿಸಲ್ಪಡುತ್ತದೆ.

B. S. Hegde.
Vakil for Plff.

ಉಡ್ಪಿ. 4—2—1961.

ಧರ್ಮ ರಕ್ಷಣೆಯನ್ನು ಯಾವ ರೀತಿಯಿಂದಲೂದರೂ ಅವಶ್ಯ ಮಾಡಬೇಕು; ಅಸತ್ಯದಿಂದಲೇ ಧರ್ಮವು ರಕ್ಷಿಸಲ್ಪಡುವುದಾದರೆ, ಅಂತಹ ಅಸತ್ಯವು ಸತ್ಯಕ್ಕಿಂತಲೂ ಹಿರಿದಾಗುವುದು.

ನವಯುಗ

ವರುಷ ೪೦	ಉಡುಪಿ ೧೬-೨-೬೧	ವಾರ ೨೩

ಲುಮುಂಬಾರ ಹತ್ಯೆ

ವಿಶ್ವದ ರಾಜಕಾರಣದಲ್ಲಿಯೇ ಒಂದು ಪ್ರಳಯಂಕರವೆನಿಸಿದ ಘಟನೆಗಳಲ್ಲಿ ಪ್ರಮುಖ ಪಾತ್ರ ವಹಿಸಿದ ಲುಮುಂಬಾರವರ ಹತ್ಯೆ ನಡೆದಿದೆಯೆಂಬ ಸಮಾಚಾರದಿಂದ ಕಾಂಗೋದ ಸನ್ನಿವೇಶವು ಮತ್ತಷ್ಟು ದುರಂತವಾಗಿ ಪರಿಣಮಿಸಬಹುದು. ಕತ್ತಲೆಯ ಕಾಂಗೋವು ಸ್ವತಂತ್ರವಾದ ಬೆನ್ನಲ್ಲೇ ಅಲ್ಲಿ ರಕ್ತಪಾತವಾಗುವ ಹೆದರಿಕೆಯೂ ತಲೆದೋರಿ, ಅಲ್ಲಿನ ವಿವಿಧ ಪ್ರದೇಶಗಳ ನಡುವೆ ಹೋರಾಟದ ಸಿದ್ಧತೆಯೂ ನಡೆದಿತ್ತು. ಮುಖ್ಯವಾಗಿ ಕಾಂಗೋ ಒಕ್ಕೂಟದಿಂದ ಪ್ರತ್ಯೇಕವಾದ ಕಟಾಂಗವು ಲುಮುಂಬಾರ ಬಲವಾದ ವೈರಿಯೊಗಿದ್ದು, ಇದರಿಂದಲೇ ಅವರ ಹಾಗೂ ಅವರ ಸಹಚರರ ಕೊಲೆಯಾಯಿತು ಎಂಬ ವರ್ತಮಾನವು ಬಂದಿದೆ. ಸೆರೆಯಾಳುಗಳಾಗಿದ್ದ ಲುಮುಂಬಾರವರು ಕಟಾಂಗದಿಂದ ಪಲಾಯನ ಮಾಡಿದ್ದರೆಂದೂ ಆ ಸಂದರ್ಭದಲ್ಲಿಯೇ ಕಟಾಂಗದ ಒಂದು ಹಳ್ಳಿಯಲ್ಲಿ ಅವರ ಕೊಲೆಯು ನಡೆಯಿತೆಂದೂ ಕಟಾಂಗದ ವರದಿಯಿಂದ ತಿಳಿದುಬಂದಿದೆ. ಕಟಾಂಗದ ಆಂತರಿಕ ಮಂತ್ರಿ ಶ್ರೀ ಮುನುಂಗೋರವರಿಗೆ ಓರ್ವ ಹಳ್ಳಿಗನು ಈ ಬಗ್ಗೆ ತಿಳಿಸಿದನೆಂದೂ ವರದಿಯಾಗಿದೆ.

ಶ್ರೀ ಲುಮುಂಬಾರವರ 'ಪಲಾಯನ ಹಾಗೂ ಮರಣ'ಗಳ ಪ್ರಶ್ನೆಗಳಿಂದ ಸಮಾಧಾನವಾಗುವಂತಿಲ್ಲ. ಅವರ ಕೊಲೆಯನ್ನು ಕಟಾಂಗದ ಹಳ್ಳಿಗರು ಮಾಡಿದರೇ ಅಥವಾ ಶ್ರೀ ಶೋಂಬೆಯವರ ಸರಕಾರವೇ ಮಾಡಿಸಿತೇ ಎಂಬ ಪ್ರಶ್ನೆ ಬಗೆಹರಿಯಬೇಕಾಗಿದೆ. ಪಲಾಯನದ ಸಂಗತಿಕೂಡ ಹೀಗೆಯೇ. ಶ್ರೀ ಲುಮುಂಬಾ ಹಾಗೂ ಅವರ ಇರ್ವರು ಸಹಚರರು ಜೇಲಿನಲ್ಲಿದ್ದಾಗಲೇ ಅವರನ್ನು ಗುಂಡಿಕ್ಕಿ ಕೊಲ್ಲಲಾಗಿರಬೇಕು; ಅಥವಾ ಮರಣೋನ್ಮುಖರಾಗುವಂತೆ ಹೊಡೆದಿರಬೇಕು; ಕಟಾಂಗದ ಸರಕಾರವೇ ಪಲಾಯನದ ವ್ಯವಸ್ಥೆಯನ್ನು ಏರ್ಪಡಿಸಿ, ತನ್ನ ಮೇಲೆ ಬರಬಹುದಾದ ದುಷ್ಕೀರ್ತಿಯನ್ನು ತೇಲಿಸಿಬಿಡುವ ಪ್ರಯತ್ನ ನಡೆಸಿತೆಂದು ಊಹಿಸುವ ಅವಕಾಶವೂ ಇದೆ. "ಕಟಾಂಗ ಸರಕಾರವು ಲುಮುಂಬಾರ ಹತ್ಯೆ ಮಾಡಿದ ಹಳ್ಳಿಯ ಮೇಲೆ ಯಾವ ಕ್ರಮವನ್ನೂ ಕೈಗೊಳ್ಳ ಬಯಸುವುದಿಲ್ಲ. ಆ ಹಳ್ಳಿಗೆ ಹಿಂದೆಯೇ ಸಾರಿದ್ದಂತೆ ೮ ಸಾವಿರ ಡಾಲರ್ ಬಹುಮಾನವನ್ನು ಕೊಡಲಾಗುವುದು" ಎಂಬ ಮುನುಂಗೋರವರ ಉದ್ಗಾರದಿಂದ ಈ ಬಗೆಯ ಸಂದೇಹಕ್ಕೆ ಮತ್ತಷ್ಟು ಎಡೆದೊರೆಯುತ್ತದೆ. ಮುಂದುವರಿದ ಮುನುಂಗೊ, "ಲುಮುಂಬಾರ ಹತ್ಯೆಯ ಸುದ್ದಿಯಿಂದ ನನಗೇನೂ ದುಃಖವಾಗಿಲ್ಲ; ಸಾವಿರಾರು ಜನರ ವಧೆಗೆ ಕಾರಣವಾದ ಅವರ ಬಗ್ಗೆ ಬಹಿರಂಗ ವಿಚಾರಣೆ ನಡೆಸುತಿದ್ದರೂ ವ್ಯತ್ಯುದಂಡನೆಯೇ ಅವರಿಗೆ ದೊರೆಯುತಿತ್ತು" ಎಂದು ಹೇಳಿ ವಿಶ್ವಸಂಸ್ಥೆಯು ಈ ಬಗ್ಗೆ ಯಾವುದೇ ಕ್ರಮ ಕೈಗೊಳ್ಳುವುದಕ್ಕೆ ಕಟಾಂಗದ ವಿರೋಧವನ್ನು ವ್ಯಕ್ತಪಡಿಸಿದರು.

ಲುಮುಂಬಾರವರ ನೀತಿಯಿಂದ ಕಾಂಗೋವಿನಲ್ಲಿ ಗೊಂದಲವೆದ್ದಿತು ನಿಜವೆ. ಅಲ್ಲಿ ನಡೆದ ರಾಜಕೀಯ ಕ್ರಾಂತಿಗೆ ಮೂಲ ಬೀಜವೂ ಅವರೇ. ಬೆಲ್ಜಿಯಂ ಸರಕಾರದ ವಿಲಕ್ಷಣಧೋರಣೆಯಿಂದ ನೊಂದ ಲುಮುಂಬಾರು ತುಸುಕಠೋರರಾಗಿ ವರ್ತಿಸಿದರೆಂಬುದನ್ನೂ ಅಲ್ಲಗಳೆಯುವಂತಿಲ್ಲ. ಲುಮುಂಬಾರ ಬಗ್ಗೆ ಸಿಡಿದೆದ್ದ ರಾಜ್ಯಗಳಲ್ಲಿ ತೀವ್ರ ವಿರೋಧಾಭಿಪ್ರಾಯವಿದ್ದು ಇವರ ಕೊಲೆಯ ಪ್ರಶ್ನೆಯು ತೀರ ಅನಿರೀಕ್ಷಿತವೆನ್ನುವಂತಿಲ್ಲ. ನಿಕಟ ದೂರದಲ್ಲಿಯೇ ಅದು ಘಟಿಸುವ ದುಷ್ಟಚಿಹ್ನೆಗಳು ತೋರ 'ತೊಡಗಿದ್ದುವು. ಆದರೂ ಲುಮುಂಬಾರಂತಹ ವ್ಯಕ್ತಿಯ ಕೊಲೆಯೆಂಬುದು ಸಾಮಾನ್ಯವೆಂದು ಹಾರಿಸಿಬಿಡುವುದು ಸಾಧ್ಯವಿಲ್ಲ. ಏಕೆಂದರೆ, ರಾಜಕೀಯ ಉದ್ದೇಶಗಳಿಗಾಗಿ ಉಚ್ಚ ವರ್ಗದ ರಾಜಕೀಯ ರಂಗದ ಸ್ಥಾನಾಪನ್ನರಿಂದಲೇ ಈ ಕಗ್ಗೊಲೆ ನಡೆದಿರಬೇಕು ಎಂಬುದನ್ನು ಅಲ್ಲಗಳೆಯುವಂತಿಲ್ಲ. ಕೆಲ ತಿಂಗಳುಗಳಿಂದ ಕಟಾಂಗವು ಯುದ್ಧ ಸಿದ್ಧತೆಗೆ ತೊಡಗಿತ್ತೆಂದೂ ಅದು ಸೈನ್ಯ ತಯಾರಿ ನಡೆಸುತ್ತಿದೆಯೆಂದೂ ಶ್ರೀ ದಯಾಳರ ವರದಿಯನ್ನು ಕಾಣುವಾಗ, ಅಲ್ಲಿ ಯಾವದೇ ಯುದ್ಧದ ಬೀಜವು ಆಗಲೇ ಬಿತ್ತಲ್ಪಟ್ಟಿದೆಯೆಂಬ ಕಲ್ಪನೆಗೆ ಅವಕಾಶವಿದೆ. ಸಂಯುಕ್ತ ರಾಷ್ಟ್ರಸಂಘದ ಪಡೆಯು ಕಾಂಗೋವಿನಲ್ಲಿ ತನ್ನ ಕಾರ್ಯದಲ್ಲಿ ತೊಡಗಿರುವಾಗಲೇ ಅಲ್ಲಿಯ ಹೇಯಘಟನೆಗಳು ನಡೆಯುತ್ತಿರುವುದನ್ನು ನಾವು ಅವಲೋಕಿಸಿದರೆ, ಲುಮುಂಬಾರ ಹತ್ಯೆಯಿಂದಾಗಿ ಕಾಂಗೊ ಪರಿಸ್ಥಿತಿ ಸುಧಾರಿತವಾಗುವುದೆಂದು ನಂಬುವುದು ಕಷ್ಟ. ಬದಲಿಗೆ ಅದು ಮತ್ತಷ್ಟು ಜಿಗುಟಾಗಿಯೇ ಉಳಿಯುವ ನಿರೀಕ್ಷೆಯಿದೆ. ಕಟಾಂಗವು ಒಪ್ಪದೆ ಇದ್ದರೂ ಸಂಯುಕ್ತ ರಾಷ್ಟ್ರ ಸಂಘವು ಲುಮುಂಬಾರ ಹತ್ಯೆಗೆ ಕಾರಣೀಭೂತರಾದವರನ್ನು ಕಂಡುಹಿಡಿದು ನ್ಯಾಯ ವಿಚಾರಣೆಗೆ ಗುರಿಪಡಿಸುವುದು ಅಪೇಕ್ಷಣೀಯವಾಗಿದೆ. ಮಾನವತೆಯ ದೃಷ್ಟಿಯಿಂದ ಇದು ಅತ್ಯವಶ್ಯವಾಗಿದೆ. ಕಟಾಂಗ ಸರಕಾರವು ಈ ಕೊಲೆಯಲ್ಲಿ ತನ್ನ ಪಾತ್ರವು ಎಳ್ಳಷ್ಟು ಇಲ್ಲವೆಂಬುದನ್ನು ಸಮರ್ಥಿಸಿ ಹೇಳಿಕೆಯನ್ನಿತ್ತಿದೆಯಾದರೂ ಈ ಹೇಳಿಕೆಯನ್ನು ಸತ್ಯವೆಂದು ನಂಬಲು ವಿಶ್ವಾಸ ಸಾಲದಂತಾಗಿದೆ. ಲುಮುಂಬಾರ ಕೊಲೆಯಿಂದ ಹೊಸ ಹೊಸ ಪ್ರಶ್ನೆಗಳೇ ಏಳತೊಡಗಿವೆ. ಪಶ್ಚಿಮದ ರಾಷ್ಟ್ರಗಳ ಕಾಂಗೋ ನೀತಿಯಲ್ಲಿ ಅವಶ್ಯ ಬದಲಾವಣೆಗಳಾಗುವ ಸಂಭವವಿದೆ. ಕಾಂಗೋವಿನಲ್ಲಿ ವಿಶ್ವಸಂಸ್ಥೆಯು ಮಾಡಬೇಕಾದ ಕರ್ತವ್ಯಗಳ ಹೊರೆಯು ಇದರಿಂದಾಗಿ ಮತ್ತಷ್ಟು ಹೆಚ್ಚಿದೆ. ಅದೇನು ಮಾಡಲಿರುವುದೋ ಕಾದು ನೋಡಬೇಕು. ಆದರೂ ಈ ಬಗ್ಗೆ ಕೂ

ಸಂಕ್ಷಿಪ್ತ ಸುದ್ದಿಗಳು

ನಾಟಕೀಯ ಸೋಗೆ?

ಪಶ್ಚಿಮ ಬಂಗಾಲದ ವಿಧಾನ ಸಭೆಯಲ್ಲಿ ಬೇರುಬಾರಿಯ ಒಂದು ಭಾಗವನ್ನು ಪಾಕಿಸ್ತಾನಕ್ಕೆ ಹಸ್ತಾಂತರಿಸುವ ಬಗ್ಗೆ ತೀವ್ರ ಭಿನ್ನಾಭಿಪ್ರಾಯವು ಮೊದಲು ಇತ್ತು. ಆದರೆ, ಕೇಂದ್ರ ಸರಕಾರವು ನೆಹರೂ—ನೂನ ಒಡಂಬಡಿಕೆಗೆ ಬಲವಾಗಿ ಕೂರಿ, ಸಂವಿಧಾನದಲ್ಲಿಯೂ ತಿದ್ದುಪಡಿ ಮಾಡಿಕೊಳ್ಳಲು ನಿರ್ಧರಿಸಿದುದರಿಂದ, ಪಶ್ಚಿಮ ಬಂಗಾಳ ಸರಕಾರಕ್ಕೆ ಈ ಬಗ್ಗೆ ಒಪ್ಪಿಗೆಯನ್ನು ಪಡೆಯಲೇ ಬೇರಾಗಿ ಬಂದಿದೆ. ಬೇರುಬಾರಿಯನ್ನು ಉಳಿಸಿಕೊಳ್ಳಲು ಸರಕಾರವು ಅಸಮರ್ಥವಾಯಿತೆಂದು ವಿರೋಧಿ ದಳಗಳು ಮಂಡಿಸಿದ ಒಂದು ಅವಿಶ್ವಾಸಗೊತ್ತುವಳಿಯು ಪ್ರಚಂಡ ಬಹುಮತದಿಂದ ಬಿದ್ದು ಹೋದುದರಿಂದ, ಲಂಕಸವಾಗಿ ನಿಷ್ಪಕ್ಷಪಾತ ವಿಚಾರಣೆ ನಡೆಸಲು ಶಕ್ಯವಿದ್ದಷ್ಟು ಪ್ರಯತ್ನ ನಡೆಸುವುದೂ ಅದರ ಕರ್ತವ್ಯಗಳಲ್ಲಿ ಒಂದೆಂದು ಹೇಳಬಹುದಾಗಿದೆ.

ಮಹಾರಾಜರ ಪದಚ್ಯುತಿ

ಭಾರತದಲ್ಲಿ ರಾಜ್ಯವಿಲ್ಲದ ಮಹಾರಾಜರುಗಳು ಬಹುಸಂಖ್ಯೆಯಲ್ಲಿ ಇದ್ದಾರೆ. ಅವರ ಇಂದಿನ ಸೊತ್ತು ಎಂದರೆ ಕೇವಲ ವರ್ಷಾಸನ ಮಾತ್ರ. ಇಬಸ್ತಾರದ ೨.೧ ಲಕ್ಷ ವರ್ಷಾಸನ ಪಡೆಯುತಿದ್ದ ಮಹಾರಾಜ ಪ್ರವೀಣಚಂದ್ರ ಭಂಜದೇವರು ಅಲ್ಲಿಯ ಆಡಳಿತಗಾರರೆಂದು ಮಾನ್ಯತೆ ಪಡೆದಿದ್ದರು. ಆದರೆ, ಅವರ ಇತ್ತೀಚಿನ ವರ್ತನೆಯಿಂದಾಗಿ ಅವರನ್ನು ಅದೇ ರೀತಿ ಮನ್ನಿಸುವುದು ರಾಷ್ಟ್ರಹಿತ ದೃಷ್ಟಿಯಿಂದ ಸರಿಯಲ್ಲವೆಂದು ರಾಷ್ಟ್ರಪತಿಗಳು ಅವರನ್ನು ಕಿತ್ತುಹಾಕಿ ಅವರ ತಮ್ಮ ವಿಜಯಚಂದ್ರ ಭಂಜದೇವರನ್ನು ಆ ಸ್ಥಾನಕ್ಕೆ ನೇಮಿಸಿದ್ದಾರೆ. ಸಂಸ್ಥಾನಿಕರ ಹೊಸ ಸಂಸ್ಥೆಯೊಂದನ್ನು ತಾನು ಸ್ಥಾಪಿಸಬಯಸುವುದಾಗಿಯೂ ಭಾರತದಲ್ಲಿ ಹಿಂದೂ ರಾಜ್ಯವನ್ನು ಮರಳಿ ಸ್ಥಾಪಿಸಲು ತಾವು ಯತ್ನಿಸುವುದಾಗಿಯೂ ಪ್ರವೀಣರು ಹೇಳಿದ್ದು ಈ ಬಗ್ಗೆ ಮಾತುಕತೆ ನಡೆಸುತಿದ್ದರು. ಪ್ರವೀಣಚಂದ್ರರನ್ನು ಸ್ಥಾನಬದ್ಧತೆಯ ಕಾಯದೆಯನ್ವಯ ಮಧ್ಯಪ್ರದೇಶ ಸರಕಾರವು ಬಂಧಿಸಿತ್ತು. ಈ ಮೊದಲೊಮ್ಮೆ ಬರೋಡದ ಮಹಾರಾಜರ ಬಗ್ಗೆಯೂ ರಾಷ್ಟ್ರಪತಿಗಳು ವಿಶೇಷಾಜ್ಞೆಯೊಂದನ್ನು ಹೊರಡಿಸಿದ್ದರು. ಪ್ರಜಾಪ್ರಭುತ್ವದ ಈ ಯುಗದಲ್ಲಿ ವಿಶಾಲ ತಳಹದಿಯ ಸಮಾಜ ರಚನೆಯು ತ್ವರಿತಗತಿಯಿಂದ ಆಗುತ್ತಿರುವಾಗ ಹಿಂದಿನ ಜಾಡಿನಲ್ಲಿಯೇ ನಡೆಯಬೇಕೆಂಬ ಆಶಯವಿರುವುದು ಸರಿಯಾಗಲಾರದು. ಮಹಾರಾಜ ಪ್ರವೀಣಚಂದ್ರರು ಯುಗವಾಣಿಯನ್ನು ಕೆಳಗಿನಿಗೇಳಿ ತನ್ನ ಸ್ವಾರ್ಥ ಸಾಧನೆಗಾಗಿಯೇ ದೇಶಹಿತವನ್ನು ಬದಿಗಿಡಲು ಮುಂದಾದುದರಿಂದಲೇ ಇಂತಹ ದುರ್ಘಟನೆ ಸಂಭವಿಸುವಂತಾಯಿತು. ನಮ್ಮ ಭಾರತದಲ್ಲಿರುವ ಇತರ ಮಹಾರಾಜ ಬಿರುದಾಂಕಿತರು ಈ ಘಟನೆಯಿಂದ ಅವಶ್ಯ ಪಾಠ ಕಲಿಯಬೇಕಾಗಿದೆ.

ನಿಜವಾಗಿ ಪ. ಬಂಗಾಳದ ವಿಧಾನ ಸಭಾ ಸದರಲ್ಲಿ ಈ ಬಗ್ಗೆ ತೀವ್ರಸಕ್ತಿ ಇತ್ತೆಂದು ಸಂದೇಹಕ್ಕೆಡೆಯಾಗುತ್ತದೆ.

ಸಿಂಹರ ಅದ್ಭುತ ಯಶಸ್ಸು

ಸಣ್ಣ ಉಳಿತಾಯ ಯೋಜನೆಯ ಪ್ರಚಾರ ಮತ್ತು ತನ್ಮೂಲಕ ಹಣ ಸಂಗ್ರಹಿಸಲು ಪಾದಯಾತ್ರೆಗೆ ತೊಡಗಿದ ಶ್ರೀಮತಿ ತಾರಕೇಶ್ವರಿ ಸಿಂಹರವರು ಮಂಗಳೂರಿನಲ್ಲಿ ಅದ್ಭುತ ಯಶಸ್ಸು ಪಡೆದರು. ದ. ಕನ್ನಡ ಜಿಲ್ಲೆಯಲ್ಲಿ ೬೦—೬೧ರ ಅವಧಿಯಲ್ಲಿ ಸಂಗ್ರಹಿಸಬೇಕೆಂದು ನಿರ್ಧರಿಸಿದ್ದ ೬೨ ಲಕ್ಷ ರೂಪಾಯಿಗಳಿಗಿಂತಲೂ ಎರಡು ಲಕ್ಷ ಅಧಿಕವಾಗಿ ಕೂಡಿಬಂದಿದೆಯೆಂದು ಗೊತ್ತಾಗಿದೆ. ಬೆಂಗಳೂರು, ಮೈಸೂರು ಮಡಿಕೇರಿ ಮತ್ತು ಮಂಗಳೂರುಗಳ ಪಾದಯಾತ್ರೆಯ ವೇಳೆ ಒಟ್ಟು ಸಂಗ್ರಹವಾದ ರೂ. ೩೫ ಲಕ್ಷಗಳಲ್ಲಿ ೧೫ ಲಕ್ಷ ಕೇವಲ ಈ ಒಂದು ಜಿಲ್ಲೆಯಲ್ಲೇ ಒಟ್ಟುಸೇರಿದೆ.

ಹುರುಯೊಳಿನ ಯೋಗ್ಯತೆ

ಕಾಂಗ್ರೆಸ್ ಪಕ್ಷದ ಕಡೆಯಿಂದ ಮುಂಬರುವ ಚುನಾವಣೆಗಳಲ್ಲಿ ಸ್ಪರ್ಧಿಸುವ ಉಮೇದ್ವಾರರನ್ನು ಆರಿಸುವಾಗ ಅವರು ಸಮಾಜಕ್ಕೆ ಮಾಡಿದ ಸೇವೆ, ಪಾರ್ಲಿಮೆಂಟರಿ ಚಟುವಟಿಕೆಗಳಲ್ಲಿ ಅವರು ತೋರಿಸುತ್ತಿರುವ ಆಸ್ಥೆ ಹಾಗೂ ಆರ್ಥಿಕ ಮತ್ತು ಸಾಮಾಜಿಕ ಸ್ಥಾನಮಾನಗಳನ್ನು ಗಮನಿಸಬೇಕೆಂದು ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಕಾರ್ಯದರ್ಶಿಯವರಪರಿಷತ್ತು ನಿರ್ಧರಿಸಿದೆ. ಈವೊದಲಿನ ಚುನಾವಣೆಗಳಲ್ಲೂ ಇದೇ ತತ್ವಗಳನ್ನು ಹೆಚ್ಚು ಕಡಿಮೆ ಅನುಸರಿಸಲಾಗಿತ್ತು. ಮಿಶ್ರಲ್ಲ ಯೋಗ್ಯತೆಗಳು ಮೂಲೆಪಾಲಾಗಿ ಕೇವಲ ಆರ್ಥಿಕ ಸ್ಥಿತಿಯೇ ಯೋಗ್ಯತೆಯ ಮಾನದಂಡವಾಗಿ ಪರಿಣಮಿಸಿದ್ದುದನ್ನು ಈ ಮೊದಲು ಕಂಡಿರುವಾಗ, ಈ ಸಲವೂ ಈ ಪರಂಪರೆಗೆ ವ್ಯತ್ಯಯ ಬರಲಾರದು. ಎಂದು ಹೇಳಬಹುದು. ನಿಜವಾದ ಸಮಾಜ ಸೇವಕರಲ್ಲಿ ನಮ್ಮ ವಿಧಾನ—ಸಭೆ ಮಂಡಳಿಗಳ ಪ್ರತಿನಿಧಿತ್ವ ಪಡೆದವರ ಸಂಖ್ಯೆ ಎಷ್ಟು?

ಪರಿಷ್ಕೃತ ವೇತನ

ಮೈಸೂರು ಸರಕಾರಿ ನೌಕರರ ಪರಿಷ್ಕೃತ ವೇತನದ ಬಗ್ಗೆ ಸರಕಾರಿ ಘೋಷಣೆ ಇಷ್ಟರಲ್ಲೇ ನಡೆಯಲಿದೆ. ೨೦೦ ವೇತನಸ್ತರವಿದ್ದುದನ್ನು ೯೦ಕ್ಕೆ ಇಳಿಸಿದ ಒಂದು ಮಹಾಕಾರ್ಯವಲ್ಲದೆ ಈ ಹೊಸ ಮಟ್ಟವು ಈಗ ಸೇವೆಯಲ್ಲಿರುವವರಿಗೆ ಲಾಭದಾಯಕವಾಗಿರುವಂತೆ ತೋರುವುದಿಲ್ಲ. ಹೊಸತಾಗಿ ನೌಕರಿಗೆ ಸೇರುವವರಿಗೆ ಮಾತ್ರ ತುಸು ಹೆಚ್ಚಿನ ವೇತನವು ದೊರೆಯುವುದು. ಹಿಂದಿನ ಸರ್ವಿಸನ್ನು ಯಾವುದೇ ರೀತಿಯಲ್ಲಿ ಗಣನೆಗೆ ತಾರದೆ ಇದ್ದುದು ಈ ಪರಿಷ್ಕರಣ ಸಮಿತಿಯು ಮಾಡಿದ ಒಂದು ಮಹಾಪರಾಧವೆಂದು ಹೇಳಬೇಕು ವೈಟೇಜ್ ಕೊಡುವ ಕ್ರಮವನ್ನು ಸರಕಾರವಾದರೂ ಸ್ವೀಕರಿಸೀತೆಂದು ನಂಬಬಹುದೆ?

ಶ್ರೀ ಎ. ಬಿ. ಶೆಟ್ಟಿ ಸ್ಮಾರಕ ನಿಧಿಗೆ ಸಹಾಯ ಮಾಡಿರಿ.

ಅಲ್ಲಲ್ಲಿಯ ಸುದ್ದಿಸಾರ

ಸ್ನಾತಕೋತ್ತರ ವ್ಯಾಸಂಗದ ಉದ್ಘಾಟನೆ—ಮಂಗಳೂರಿನ ಕಸ್ತೂರ್ ಬಾ ಮೆಡಿಕಲ್ ಕಾಲೇಜಿನಲ್ಲಿ ಅನಾಟಮಿ, ಪೆಥೋಲಜಿ, ಬೆಕ್ಟೀರಿಯೋಲೊಜಿಗಳಲ್ಲಿ ಸ್ನಾತಕೋತ್ತರ ಶಿಕ್ಷಣ ವರ್ಗಗಳ ಉದ್ಘಾಟನೆಯನ್ನು ತಾ. 13ರಂದು ಕರ್ನಾಟಕ ಯುನಿವರ್ಸಿಟಿಯ ವೈಸ್ ಚಾನ್ಸಲರ್ ಶ್ರೀ ಡಿ. ಸಿ. ಪಾವಟೆಯವರು ಉದ್ಘಾಟಿಸಿದರು. ನೈಸೂರು ರಾಜ್ಯದಲ್ಲಿ ಪ್ರಪ್ರಥಮವಾಗಿ ಈ ವ್ಯಾಸಂಗವನ್ನು ಪ್ರಾರಂಭಿಸುವ ಸಮಾರಂಭದ ಅಧ್ಯಕ್ಷತೆಯನ್ನು ಮಂಗಳೂರು ನಗರಸಭಾಧ್ಯಕ್ಷ ಶ್ರೀ ಮಹೇಲ್ ಶ್ರೀನಿವಾಸ ನಾಯಕರು ವಹಿಸಿದ್ದರು. ಎಕಡೆಮಿಯ ರಿಜಿಸ್ಟ್ರಾರ್ ಡಾ| ಟಿ. ಎಂ. ಎ. ಪೈಗಳವರು ಸ್ವಾಗತವನ್ನಾಡುತ್ತಾ, ಈ ಕಾಲೇಜಿನಲ್ಲಿ ಪರ್ಸರ್ಡೊಳಗಾಗಿ ಫಾರ್ಮಸ್ಯುಟಿಕಲ್ ವಿಭಾಗವನ್ನು ತೆರೆಯಲಾಗುವುದೆಂದರು. ಪ್ರಿನ್ಸಿಪಾಲ್ ಡಾ| ಜಿ. ಡಿ. ವೇಲಿಯತರು ಸ್ವಾಗತಿಸಿದರು.

ಅ. ಭಾ. ಕೈಮಗ್ಗದ ಸಪ್ತಾಹವು ದ ಕ. ಜಿಲ್ಲಾ ಕೇಂದ್ರ ಸಹಕಾರ ಬೇಂಕಿನಲ್ಲಿ ತಾ. 5ರಂದು ಲೋಕ ಸಭಾ ಸದಸ್ಯರಾದ ಶ್ರೀ ಕೆ. ಆರ್. ಆಚಾರ್ ಇವರ ಅಧ್ಯಕ್ಷತೆಯಲ್ಲಿ ಶ್ರೀ ಕೆ. ಸೂರ್ಯನಾರಾಯಣ ಅಡಿಗ ಇವರಿಂದ ಉದ್ಘಾಟಿಸಲ್ಪಟ್ಟಿತು. ತಾ. 12 ರಂದು ಸಮಾರೋಪ ಸಮಾರಂಭವನ್ನು ಗವರ್ನ್‌ಮೆಂಟ್ ಕಾಲೇಜಿನಲ್ಲಿ ಶ್ರೀ ಬಿ. ಮಂಜಯ್ಯ ಹೆಗ್ಡೆಯವರು ಶ್ರೀ ಕೆ. ಕೆ. ಶೆಟ್ಟಿ, ಎಂ. ಎಲ್. ಸಿ. ಇವರ ಅಧ್ಯಕ್ಷತೆಯಲ್ಲಿ ನೆರವೇರಿಸಿದರು. ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯ ಅಸಿಸ್ಟೆಂಟ್ ಡೈರೆಕ್ಟರ್ ಶ್ರೀ ಎ. ಚೆನ್ನರಾಜ ಅರಸ್ ಅವರು ಸ್ವಾಗತ ಭಾಷಣ ಮಾಡಿದರು. ಶ್ರೀ ಬಿ. ಮಂಜಯ್ಯ ಹೆಗ್ಡೆಯವರು ತಮ್ಮ ಸಮಾರೋಪ ಭಾಷಣದಲ್ಲಿ ಈ ಉದ್ಯಮದಲ್ಲಿರುವವರು ಆ ಕೈಗಾರಿಕೆಯ ದೋಷಗಳನ್ನು ತಾವೇ ಸರಿಪಡಿಸಿಕೊಳ್ಳಬೇಕೆಂದೂ ಇಂತಹ ಕೈಗಾರಿಕೆಗಳ ಉನ್ನತಿಯಿಂದಲೇ ದೇಶದ ಅಭ್ಯುದಯವಾಗುವುದೆಂದೂ ಹೇಳಿದರು. ಶ್ರೀ ಕೆ. ಕೆ. ಶೆಟ್ಟರು ಕೈಮಗ್ಗದ ಕೈಗಾರಿಕೆಯಲ್ಲಿ ಆದ ಪ್ರಗತಿಯು ತೃಪ್ತಿಕರವಾಗಿದೆಯೆಂದೂ, ನೇಕಾರರಲ್ಲಿ ಸುಧಾರಿತ ಮನೋಭಾವ ಉಂಟಾಗಬೇಕಾದುದು ಅಗತ್ಯವೆಂದೂ ಹೇಳಿದರು. ಬಳಿಕ ಪಾರಿತೋಷಕವಿತರಣೆ ಮನರಂಜನಾ ಕಾರ್ಯಕ್ರಮಗಳಾದವು. ಈ ಸಪ್ತಾಹವು ತಾ. 5ರಿಂದ ತಾ. 12ರ ವರೆಗೆ ನಡೆಯಿತು.

ಮುಂಬಯಿ ಕನ್ನಡಿಗರು ಮತ್ತು ಜನಗಣತಿ—ಮುಂಬಯಿ ನಗರದಲ್ಲಿ 3-4 ಲಕ್ಷ ಕನ್ನಡಿಗರಿದ್ದೇವೆಂದು ನಾವು ಹೇಳಿಕೊಳ್ಳುತ್ತೇವೆ. ಇದು ಹೆಚ್ಚಿನವರೆಗೆ ಸತ್ಯ ಸಂಗತಿ. ಆದರೆ 1951ನೇ ಇಸವಿಯ ಜನಗಣತಿಯ ವರದಿ ಪ್ರಕಾರ ಈ ನಗರದಲ್ಲಿ ಬರೇ ಎಪತ್ತು ಸಾವಿರ ಕನ್ನಡಿಗರು ಮತ್ತು ಐದು ಸಾವಿರ ತುಳುವರುಇದೆಂದು ವರದಿಯಾಗಿದೆ. ನಾವು ಎಣಿಕೆಕೊಂಡಿರುವ ನಮ್ಮ ಸಂಖ್ಯಾಬಲಕ್ಕೂ ಜನಗಣತಿಯ ವರದಿಯಲ್ಲಿ ತೋರಿಸಿದ ಕನ್ನಡಿಗರ ಸಂಖ್ಯೆಗೂ ಇಷ್ಟು ವಿಶೇಷ ಅಂತರವಿರಲು ಕಾರಣವೇನು, ಮತ್ತು ಯಾರು, ಎಂದು ನಾವು ಗಮನಿಸಬೇಕಾಗಿದೆ. ಈ ನಗರದ ಯಾವ ಮೂಲೆಗೆ ಹೋದರೂ, ಅಲ್ಲಿ ಕನ್ನಡಿಗರ ಸಂಸಾರಗಳು ಇದ್ದೇ ಇವೆ. ಇಲ್ಲಿಯ ಯಾವ ಕ್ಷೇತ್ರದಲ್ಲಿ ನೋಡಿದರೂ ಕನ್ನಡಿಗರ ಕೈವಾಡ ಇದ್ದೇ ಇದೆ. ಹೀಗಿರುವಾಗ ಕನ್ನಡಿಗರ ಸಂಖ್ಯೆಯು ಬರೇ ಎಪತ್ತು ಸಾವಿರವೆಂದು ತಿಳಿಯುವರೆ ಆಶ್ಚರ್ಯವೆನಿಸುತ್ತದೆ.

ಕನ್ನಡಿಗರಾದ ನಾವು ಈ ನಗರದ ಯಾವ ಮೂಲೆಯಲ್ಲೇ ಇರಲಿ, ಮನೆಮಾತು ಯಾವುದೇ ಇರಲಿ, "ನಾವು ಕನ್ನಡಿಗರು" ಎಂದೇ ಖಾನೇಶು ಮಾರಿಯ ದಾಖಲೆಗಳಲ್ಲಿ ಬರೆಸಬೇಕು. "ನಾವು ಕನ್ನಡಿಗರು" ಎಂದು ಹೇಳಿದಾಗ ನಾವು ಯಾವ ರೀತಿಯಿಂದಲೂ ಕೀಳಾಗುವುದಿಲ್ಲ. ಸ್ವಂತ ಮನೆ ಇಲ್ಲದವರು ತಮ್ಮ ಮಿತ್ರರೊಟ್ಟಿಗೋ, ಸಂಬಂಧಿಕರೊಟ್ಟಿಗೋ, ಸೇರಿಕೊಂಡು ಜನಗಣತಿಯ ಪಟ್ಟಿಯಲ್ಲಿ ತಮ್ಮ ಹೆಸರು ಬರುವಂತೆ ಪ್ರಯತ್ನಿಸಬೇಕು.

ಈ ನಗರದಲ್ಲಿ ಕನ್ನಡಿಗರ ನೂರಾರು ಸಂಘ ಸಂಸ್ಥೆಗಳಿವೆ. ಈ ಸಂಘಗಳು ಈ ಬಗ್ಗೆ ಪ್ರಚಾರ ಕಾರ್ಯವನ್ನು ಕೈಗೊಳ್ಳಬೇಕು, ಮತ್ತು ತಮ್ಮ ತಮ್ಮ ಸದಸ್ಯರೆಲ್ಲರೂ ಜನಗಣತಿಯ ಪಟ್ಟಿಯಲ್ಲಿ ಸೇರಿಸಲ್ಪಡುವಂತೆ ಪ್ರಯತ್ನಿಸಬೇಕೆಂದು ಈ ಮೂಲಕ ಅಪೇಕ್ಷಿಸುತ್ತೇವೆ ಎಂದು ಮೊಗವೀರ ಸಂಸ್ಥಾಪಕ ಮಂಡಳಿಯ ಪರವಾಗಿ ಯಜಾ. ಕೆ. ಪುತ್ರನ್ ಇವರು ವಿನಂತಿಸುತ್ತಾರೆ.

ಮಂಗಳೂರ ಶ್ರೀ ರಾಮಕೃಷ್ಣ ವಿದ್ಯಾರ್ಥಿ ಭವನದ ವಾರ್ಷಿಕೋತ್ಸವ ವು ತಾ.5ರಂದು ಸರಕಾರಿ ಕಾಲೇಜಿನ ಪ್ರಿನ್ಸಿಪಾಲ್ ಶ್ರೀ ಆರ್. ಆರ್. ಉಮಾಜಿಯವರ ಅಧ್ಯಕ್ಷತೆಯಲ್ಲಿ ಜರಗಿತು.

ವಾರ್ಷಿಕೋತ್ಸವದ ಅಂಗವಾಗಿ ಬೆಳಿಗ್ಗೆ ಲಘು ಉಪಹಾರದ ನಂತರ ಭಜನೆ, ಸ್ಪರ್ಧೆ, ಮತ್ತು ಪಂದ್ಯಾಟಗಳು ಜರಗಿದವು. ಸಂಜೆ ವಿದ್ಯಾರ್ಥಾನಾನಂತರ, ಭವನದ ಸುಪರಿಂಟೆಂಡೆಂಟರಾದ ಶ್ರೀ ಸಿ. ಎಸ್. ಶಿವಪ್ಪ ಶೆಟ್ಟರು ಸ್ವಾಗತಿಸಿದರು. ಕಾರ್ಯದರ್ಶಿ ಸುಧಾಕರ ಬಲ್ಲಾಳರು ವರದಿವಾಚನಗೈದರು. ಸಂದೇಶಗಳನ್ನು ಶ್ರೀ ಬಿ. ರಮಾನಾಥ ಹೆಗ್ಡೆಯವರು ಓದಿದರು. ನಂತರ ಶ್ರೀ ಕೆ. ಎನ್. ಮಹಾಬಲ ಶೆಟ್ಟರು ಭವನದ ಸ್ಥಿತಿವಾಚನಗೈದರು. ಕಾರ್ಯದರ್ಶಿ ಶ್ರೀ ಎ. ಬಾಲಕೃಷ್ಣ ಶೆಟ್ಟರು ಉತ್ತರವಿತ್ತರು. ತದನಂತರ ಅಧ್ಯಕ್ಷರು ಬಹುಮಾನ ವಿತರಣೆಗೈದು, ಇಂದಿನ ವಿದ್ಯಾಭ್ಯಾಸದಲ್ಲಿ ಹಾಸ್ಟೆಲ್ ಜೀವನದ ಪ್ರಾಮುಖ್ಯತೆಯನ್ನು ವಿವರಿಸಿ ಅದರಿಂದ ವಿದ್ಯಾರ್ಥಿಗಳಿಗಾಗುವ ಉಪಯೋಗವನ್ನು ಮನಗಾಣಿಸಿದರು.

ವಿವಿಧ ವಿನೋದಾವಳಿಗಳ ಅಂಗವಾಗಿ "ಶ್ರೀ. ಶ. ೨೦೬೧" ಎಂಬ ತುಳು ನಾಟಕವನ್ನೂ, "ಭಾರತ ವಿಜಯ"ವೆಂಬ ಯಕ್ಷಗಾನ ನಾಟಕವನ್ನು ರಂಗಭೂಮಿಯಲ್ಲಿ ಪ್ರದರ್ಶಿಸಲಾಯಿತು. ಮಾಸ್ಟರ್ ವಿಠಲ್ ಇವರ ಶಿಷ್ಯೆ ಕುಮಾರಿ ವಿದ್ಯಾ, ಇವರ ನೃತ್ಯಗಳೂ, ದೇವಶ್ಯ ರಾಮಣ್ಣ ಶೆಟ್ಟಿ ಮತ್ತು ಜಗನ್ನಾಥ ರೈಗಳ ಹಾಸ್ಯಪ್ರದರ್ಶನಗಳೂ ಜರಗಿದವು.

ಹೊಸ ವಾಸ್ಯಂಗ ಕ್ರಮದ ಉದ್ಘಾಟನೆ—ಮನೆಪಾಲದ ಎಕೆಡೆಮಿ ಆಫ್ ಜನರಲ್ ಎಜ್ಯುಕೇಶನಿನ ನೇತೃತ್ವದಲ್ಲಿ ಬ್ಲೂ ಪ್ರಿಂಟ್ ರೀಡಿಂಗ್ ಎಸ್ಟಿಮೇಶನ್ ಮತ್ತು ಕಂಸ್ಟ್ರಕ್ಷನ್ ಕಂಟ್ರೋಲ್ ಸಿಸ್ಟಮ್ ಎಂಬ ನೂತನ ವ್ಯಾಸಂಗ ಕ್ರಮದ ವ್ಯವಸ್ಥೆಯ ಉದ್ಘಾಟನೆಯನ್ನು ತಾ. 10ರಂದು ಅಮೇರಿಕದ ಮಿ. ಹೆರ್ರಿ ಪ್ಲೀಸ್‌ನರ್ ಇವರು ಜರಗಿಸಿದರು. ಡಾ| ಟಿ. ಎಂ. ಎ. ಪೈಗಳು ಸ್ವಾಗತ ಭಾಷಣ ನಡಾಡಿದರು. ಈ ತರಗತಿಗಳನ್ನು ನಡೆಸಲು ಅಮೇರಿಕದಿಂದ ಬಂದಿರುವ ತಜ್ಞ ಇಂಜೀನಿಯರ್ ಮಿ. ಪಿಲಿಪ್ ಮೊರೋವಿಟ್ಸ್‌ರ ಪರಿಚಯವನ್ನು ಶ್ರೀ ಟಿ. ರಮೇಶ ಪೈಗಳು ಮಾಡಿಕೊಟ್ಟರು. ಉದ್ಘಾಟಕರು ಮಿ. ಪಿಲಿಪ್ ಮೊರೋವಿಟ್ಸ್‌ರ ಸೇವಾಬುದ್ಧಿಯನ್ನು ಶ್ಲಾಘಿಸಿ ಎಕೆಡೆಮಿಯ ಸಂಸ್ಥೆಗಳ ಪ್ರಗತಿಗಾಗಿ ಸಂತೋಷ ಸೂಚಿಸಿದರು. ಮಿ. ಮೊರೋವಿಟ್ಸ್‌ರು ತಾವು ನಡೆಸಲಿರುವ ಶಿಕ್ಷಣದ ರೂಪರೇಖೆಯನ್ನಿತ್ತರು. ಶ್ರೀ ಟಿ. ರಮೇಶ ಪೈಗಳು ಧನ್ಯವಾದ ಸಮರ್ಪಣೆ ಮಾಡಿದರು.

ಉಡುಪಿ ಲಾ ಕಾಲೇಜಿನ ವಾರ್ಷಿಕೋತ್ಸವವು ತಾ. 11ರಂದು ಜಸ್ಟಿಸ್ ನಿಟ್ಟೂರು ಶ್ರೀನಿವಾಸರಾಯರ ಅಧ್ಯಕ್ಷತೆಯಲ್ಲಿ ಸಂಭ್ರಮದಿಂದ ಜರಗಿತು. ಡಾ. ಟಿ. ಎಂ. ಎ. ಪೈಗಳು ಸ್ವಾಗತಿಸಿದರು. ಪ್ರಿನ್ಸಿಪಾಲ್ ಶ್ರೀ ಬಿ. ಎಲ್. ಎಸ್. ರೈಯವರು ವರದಿ ವಾಚನ, ಮಾಡಿದರು. ಬಹುಮಾನ ವಿತರಣೆ, ಅಧ್ಯಕ್ಷಭಾಷಣ, ನಂತರ ಮನರಂಜನ ಕಾರ್ಯಕ್ರಮಗಳು ಜರಗಿದವು.

ಕ್ರಿಶ್ಚನ್ ಹೈಸ್ಕೂಲ್‌ನ ವಾರ್ಷಿಕೋತ್ಸವವು ತಾ. 8ರಂದು ರೆ. ಕೆ. ಆರ್. ಕರುಣಾಕರರವರ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ನೆರವೇರಿತು. ಹೆಡ್‌ಮಾಸ್ಟರ್ ಶ್ರೀ ಎ. ಜೋಶುವ ಅವರು ಶಾಲಾ ವರದಿಯನ್ನೋದಿದರು. ಡಾ ಟಿ. ಎನ್. ಕಣ್ಣನ್ ನಂಬಿಯೂರ್ ಅವರು ಸ್ವಸ್ತಿ ವಾಚನ ಗೈದರು. ಬಹುಮಾನ ವಿತರಣೆ ಅಧ್ಯಕ್ಷರ ಭಾಷಣ ಧನ್ಯವಾದಗಳ ನಂತರ ನಾಟಕಾದಿ ಮನೋರಂಜನಾ ಕಾರ್ಯಕ್ರಮಗಳು ಜರಗಿದವು.

ಮುಂಚಿನ ದಿನ ಹಳೆ ವಿದ್ಯಾರ್ಥಿ, ಉಪಾಧ್ಯಾಯರು ಮತ್ತು ರಕ್ಷಕರ ಸಂಘದ ವಾರ್ಷಿಕೋತ್ಸವವು ಡಾ. ಟಿ. ಎಂ. ಎ. ಪೈಗಳ ಅಧ್ಯಕ್ಷತೆಯಲ್ಲಿ ನೆರವೇರಿತು.

ಶ್ರೀ ಪೂರ್ಣಪ್ರಜ್ಞ ಕಾಲೇಜಿನ ವಾರ್ಷಿಕೋತ್ಸವವು ತಾ.13ರಂದು ಅದಮಾರು ಮಠದ ಶ್ರೀ ವಿಭುದೇಶತೀರ್ಥಶ್ರೀಪಾದಂಗಳವರ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ನೆರವೇರಿತು. ಪ್ರಿನ್ಸಿಪಾಲ್ ಶ್ರೀ ಪಿ. ಎಂ. ಇನಾಂದಾರ್ ಇವರು ಕಾಲೇಜಿನ ಪ್ರಗತಿಪರ ವರದಿಯನ್ನು ಓದಿದರು. ವಕೀಲ್ ಬಿ. ಶೀನಪ್ಪ ಹೆಗ್ಡೆಯವರು ಬಹುಮಾನ ವಿತರಣೆಮಾಡಿ ಭಾಷಣಮಾಡಿದರು. ಅಧ್ಯಕ್ಷರ ಭಾಷಣವಾದ ಬಳಿಕ ಶ್ರೀ ಕೌಲಗಿ ಶೇಷಾಚಾರ್ಯರು ಧನ್ಯವಾದಗಳನ್ನರ್ಪಿಸಿದರು ರಾತ್ರಿ ನಾಟಕ ಪ್ರದರ್ಶನವು ಯಶಸ್ವಿಯಾಗಿ ಜರಗಿತು.

ಮದ್ವಾಸದಲ್ಲಿ ಮಧ್ವನವಮಿ ಉತ್ಸವವು—ಮಾಧ್ವಸಂಘದವರ ನೇತೃತ್ವದಲ್ಲಿ ಜನವರಿ ತಾ. 25 ಮತ್ತು 26ರಲ್ಲಿ ಶ್ರೀ ಕೆ. ಸೀತಾರಾಮ ರಾಯರೆ ವಸತಿಯಾದ ದಾಸಪ್ರಸಾದದಲ್ಲಿ ವಿಜೃಂಭಣೆಯಿಂದ ನೆರವೇರಿತು ಪೂಜಾ ಸಮಾರಂಭಗಳೂ ಸಂತರ್ಪಣೆಯೂ ಯಥೋಕ್ತವಾಗಿ ನಡೆಯಿತಲ್ಲದೆ ವಿದ್ವಾಂಸರ ಭಾಷಣಗಳೂ ಜರಗಿದವು.

ಕಾಂಗ್ರೆಸ್ಸಿನ ವಜ್ರೋತ್ಸವ ಸಮಾರಂಭ—ಇದರ ಅಂಗವಾಗಿ ಜಿಲ್ಲಾ ಕಾಂಗ್ರೆಸ್ಸಿನ ನೇತೃತ್ವದಲ್ಲಿ ಮಂಗಳೂರಿನ ಕೇಂದ್ರ ಮೈದಾನದಲ್ಲಿ ಸಾರ್ವಜನಿಕ ಸಭೆಯೊಂದು ತಾ. 4ರಂದು ಶ್ರೀ ಟಿ. ಎ. ಪೈಗಳ ಅಧ್ಯಕ್ಷತೆಯಲ್ಲಿ ಜರಗಿ ಶ್ರೀಗಳಾದ ರಮಾನಾಥ, ಬಿ. ಎಮ್. ಇನಿಬ್ಬ, ಕೆ. ಆರ್ ಆಚಾರ್, ಎಮ್. ಸಿ, ಕೆ. ಕೆ. ಶೆಟ್ಟಿ ಎಂ. ಎಲ್. ಸಿ, ಕೆ. ಸೂರ್ಯನಾರಾಯಣ ಅಡಿಗ ಮೊದಲಾದವರ ಸಂದರ್ಭೋಚಿತ ಭಾಷಣಗಳಾದುವು.

ಕನ್ನಡ ಸಾಹಿತ್ಯ ಸಮ್ಮೇಲನ—ಕಳದ ದಶಂಬರದಲ್ಲಿ ಜರಗಿದ ಛತ್ತೀಸ್ಗಡ ಕನ್ನಡ ಸಾಹಿತ್ಯ ಸಮ್ಮೇಲನದ ಸ್ವಾಗತ ಸಮಿತಿಯ ಕೊನೆಯ ಸಭೆಯೊಂದು ಮುಕುಂದ ನಿವಾಸದಲ್ಲಿ ತಾ 11ರಂದು ಡಾ. ಟಿ. ಮಾಧವ ಪೈಗಳ ಅಧ್ಯಕ್ಷತೆಯಲ್ಲಿ ಜರಗಿ ಅಯ ವ್ಯಯವನ್ನು ಮಂಜೂರು ಮಾಡಲಾಯಿತು. ರೂ. 6500ರಷ್ಟು ಜಮೆಯಾಗಿ ರೂ.11125 ರಷ್ಟು ಖರ್ಚಾಗಿರುತ್ತದೆ. ಕೊರತೆ ಬಿದ್ದಹಣ ರೂ. 4619 ರಷ್ಟನ್ನು ತುಂಬಿಸಿದ ಎಕೇಡೆಮಿ ಆಫ್ ಜನರಲ್ ಎಜ್ಯುಕೇಶನ್ ಮತ್ತು ಸಹಕರಿಸಿದವರೆಲ್ಲರಿಗೂ ಧನ್ಯವಾದಗಳನ್ನರ್ಪಿಸಲಾಯಿತು.

ಉಡುಸಿಯ ಹಿಂದೀ ಪ್ರಚಾರ ಪ್ರಚಾರ ಪರಿಷತ್ತಿನ—ಮೂರನೆಯ ವಾರ್ಷಿಕ ಸಭೆಯು ಶ್ರೀ ಉ. ಲಕ್ಷ್ಮೀನಾರಾಯಣ ಕೆನೆಯವರ ಅಧ್ಯಕ್ಷತೆಯಲ್ಲಿ ಜರಗಿತು. ವಿಜ್ಞಾನದ ಉಪಕಾರಗಳನ್ನು ವಿವರಿಸಿ, ಶ್ರೀಗಳಾದ ಸಿ. ಚಂದ್ರಶೇಖರ ಚಡಗ, ಎ. ವೆಂಕಟ್ರಾಜ, ಎಂ. ರಮೇಶ ಪಡಿಯೂರ ವಿಜ್ಞಾನದ ಅನರ್ಥ ಪರಂಪರೆಗಳನ್ನು ವಿವರಿಸಿ, ಶ್ರೀಗಳಾದ ವಿಲಿಯಂ ಸಿಂಟೋ, ಸಿ. ರಾಜಗೋಪಾಲಾಚಾರ್ಯ, ಪಿ. ಕೆ ಸದಾಶಿವರಾವ್, ಇವರು ಭಾಷಣಾನಾಡಿದರು ಶ್ರೀ ಕೆ. ದಾಮೋದರ ಪ್ರಭುತಾಳರು ಭೌತಿಕ ವಿಜ್ಞಾನವು ಬೆಳೆದಂತೆಯೇ ಆಧ್ಯಾತ್ಮಿಕ ವಿಜ್ಞಾನವೂ ಬೆಳೆದು ಬಂದರೆ ಮಾತ್ರ ಪ್ರಯೋಜನವೆಂದರು ಅಧ್ಯಕ್ಷ ಭಾಷಣದ ನಂತರ ಪರಿಷತ್ತಿನ ಸಾಹಿತ್ಯ ಕಾರ್ಯದರ್ಶಿ ಶ್ರೀ ರಮೇಶ ಪಡಿಯೂರರು ಆಭಾರ ಮನ್ನಿಸಿದರು.

ನಿಟ್ಟೂರು ಹಾ. ಎ. ಶಾಲೆಯ ವಜ್ರಮಹೋತ್ಸವವು—ತಾ. 10 ಮತ್ತು 11ರಂದು ನಡೆಯಿತು. ಮೊದಲದಿನ ಶ್ರೀ ಆರೂರು ಲಕ್ಷ್ಮೀನಾರಾಯಣ ರಾಯರೂ ಎರಡನೆಯ ದಿನ ಶ್ರೀ ಎಂ. ಮಧ್ವರಾಜರೂ ಅಧ್ಯಕ್ಷಸ್ಥಾನವನ್ನಲಂಕರಿಸಿದ್ದರು. ವೆ. ರೆ. ಮೊಸ್ಲಿಂಜರ್ ಆರ್. ಡಿ. ಸಿಕ್ವೇರರು ಬಹುಮಾನಗಳನ್ನು ವಿತರಣೆಮಾಡಿದರು. ಶ್ರೀ ಎಸ್. ಎಲ್. ನಾರಾಯಣ ಭಟ್ಟರು ಹಸ್ತಲಿಖಿತ ಪತ್ರಿಕೆ "ಚಂದ್ರಿಕಾ"ವನ್ನು ಉದ್ಘಾಟಿಸಿದರು. ಎರಡೂ ದಿನ ರಾತ್ರಿ ಮನರಂಜನ ಕಾರ್ಯಕ್ರಮಗಳಿದ್ದವು.

ತಾ. 12ರಂದು ಆರ್. ಆರ್. ಕಂಜೂರರ ಹಿರಿತನದಲ್ಲಿಹಳೆಯ ವಿದ್ಯಾರ್ಥಿ ಸಂಘದ ವಾರ್ಷಿಕೋತ್ಸವವು ನೆರವೇರಿತು ರಾತ್ರಿ ತುಳು ಹಾಗೂ ಕನ್ನಡ ನಾಟಕಗಳು ಅಭಿನಯಿಸಲ್ಪಟ್ಟವು ಶಾಲೆಯ ಅಧ್ಯಾಪಕರು ಅಡಿದ "ಅಪರಾಧಿ"ಎಂಬ ನಾಟಕವು ಉತ್ತಮ ರೀತಿಯಿಂದ ಅಭಿನಯಿಸಲ್ಪಟ್ಟಿತು, ಮನೋಜ್ಞವಾಗಿತ್ತು.

ಉಡ್ಪಿ ಡಿ ಮು. ಕೋರ್ಟಿನಲ್ಲಿ

S. C. 550/1958,
S. E. P. 637/1960.

ಲಕ್ಷ್ಮೀನಾರಾಯಣ ಭಟ್ಟ —ಅರ್ಜಿದಾರ.

ಮತ್ತು

ಮಹಾಮ್ಮದ್ ಸಾಹೇಬ್ಜಾನ್ ಸಾಹೇಬ—ಮಹಮದ್ ಹಸನ್ ಸಾಹೇಬರ ಮಗ ಉಡ್ಪಿ ತಾಲೂಕು ತೆಂಕನಾಡು— ಎದ್ರಿ—ಇವರೊಳಗೆ

ಸದ್ರಿ ಎದ್ರಿಗೆ ಈ ಮೂಲಕತಿಳಿಯಪಡಿಸುವುದೇನೆಂದರೆ,—

ಮೇಲ್ಕಂಡ ಅಮಲ್ಜಾರಿಯಲ್ಲಿ ನಿಮಗೆ ಕೈಹಿಡಿವಾರಂತೆ ಅಪೇಕ್ಷಿಸಿ ನಿಮಗೆ ಸಿ. ಪಿ. ಸಿ. ಕೋಡಿನ 21ನೇ ಆರ್ಡರ್ 37ನೇ ರೂಲು ಪ್ರಕಾರದ ನೋಟೀಸಿನ ಬಗ್ಗೆ ಅಮಲ್ಜಾರಿ ಅರ್ಜಿಯನ್ನು ತಾ. 21—2—1960 ಕ್ಕೆ ಯಿಟ್ಟಿರುತ್ತದೆ. ಆಕ್ಷೇಪಸಾಮಂಥಾದ್ದು ಯಿದ್ದರೆ ಆ ದಿವಸ ಪೂರ್ವಾಹ್ನ 11ಗಂಟೆಗೆ ಸದ್ರಿ ಕೋರ್ಟಿನಮುಂದೆ ಹಾಜ್ರಾಗಿ ಜ್ಞಾಪಿಸಿರಿ ಮಾಡಿಕೊಳ್ಳಬಹುದು.

K. Ramakrishna Rao.
Vakil for petitioner.

Udipi. Dated 14—2—1961

ಕಾರ್ಕಳ ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ

O. S No. 57/1957
R. 1. A. No. 1591/57
R. E. P. No. 750/1960

Rev. Father Anthony Noronha, Vicar of Udyavar Church—ವಾದಿ, ಅರ್ಜಿದಾರ.

ಮತ್ತು

1. ಅಲೆಕ್ಸ್ ಸೋಜ, 2. ಸತ್ತಲ ಬಾಯಿ, 3. ಮರಿಯಾ ಬಾಯಿ, 4. ಬ್ರಿಜ್ಜತ್ ಬಾಯಿ, 5. ಯಿಸಬೆಲ್ಲಾ ಬಾಯಿ, 6. ಸಿಲ್ವೆಸ್ಟರ್ ಸೋಜ, 7. ಮಿಂಗಿಲ ಸೋಜ, 8. ಮಗ್ದಲಿನ ಬಾಯಿ— ಬಾಬಿಯಾನ್ ಲೋರೆಸ್ ಮುಹಾತರಿರ ಮಕ್ಕಳು. ಕಾರ್ಕಳ ತಾಲ್ಲುಕು ಬೆಳುವಾಯಿ ಗ್ರಾಮ— ಪ್ರತಿವಾದಿರು, ಎದ್ರಿರು.

ಸದರಿ ಅಮ್ಲಜ್ಜಾರಿಯ 2-4ರಿಂದ 8ನೇ ಎದ್ರೀರಿಗೆ—

ಮೇಲ್ಕಂಡ ಡಿಕ್ರಿಯ ಮೇಲೆ ಅರ್ಜಿದಾರನು ನಡ್ಸಿದ ಮೇಲಿನ ಅಮ್ಲಜ್ಜಾರಿಯು, ನಿಮ್ಮ ಸಾಜರಾತಿಯ ಬಗ್ಗೆ ಮೇಲ್ಕಂಡ ಕೋರ್ಟಿನಲ್ಲಿ ತಾರೀಕು 9—3...1961ನೇ ಬೆಳಿಗ್ಗೆ 10 ಗಂಟೆಗೆ ಇಟ್ಟಿರುವದರಿಂದ ಸದರಿ ಅಮ್ಲಜ್ಜಾರಿಯ ವಿಷಯದಲ್ಲಿ ನಿಮ್ಮ ಉದಾಸರಣೆಯು ಇರುವಲ್ಲಿ ನೀವು ಸದರಿ ತಾರೀಕಿನಲ್ಲು ಸ್ವತಹಾ ವಕೀಲ ಮುಖಾಂತರ ಹಾಜರಾಗಿ ಜ್ಞಾಪಿಸಿ ಮಾಡಿಕೊಳ್ಳಬಹುದಾಗಿಯೂ, ತಪ್ಪಿದ್ದಲ್ಲಿ ಸದರಿ ಅಮ್ಲಜ್ಜಾರಿಯು, ನಿಮ್ಮ ಗೈರ ಹಾಜರಿಯಲ್ಲಿ ತೀರ್ಮಾನಿಸಲ್ಪಡುತ್ತದೆಂಬದಾಗಿಯೂ, ಈ ಮೂಲಕ ನಿಮಗೆ ತಿಳಿಸೋಣಾಗುತ್ತದೆ.

A N. S. Achar,
Advocate for Petitioner.

Karkala, 14-2-1961.

ಪುಸ್ತಕ ವಿಮರ್ಶೆ

(ವಿಮರ್ಶೆಗಾಗಿ ಪುಸ್ತಕಗಳನ್ನು ಕಳುಹಿಸುವವರು ಎರಡೆರಡು ಪ್ರತಿಗಳನ್ನು ಕಳುಹಿಸಬೇಕಾಗಿ ವಿನಂತಿ.—ಸಂ. ನ.)

ಹೆಕ್ಕಿನರಸಣ್ಣ—(ಸಣ್ಣ ಕಥೆಗಳ ಸಂಕಲನ) ಲೇಖಕರು: ಪ್ರೊ| ಎಲ್. ಆರ್. ಹೆಗಡೆ, ಎಂ. ಎ. ಪ್ರಕಾಶಕರು: ಜ್ಞಾನಸಾಧನ ಗ್ರಂಥಮಾಲೆ, ಕುಮಟಾ ಉ. ಕನ್ನಡ. ಪುಟಗಳು: ೧೩೦. ಬೆಲೆ: ರೂ. ೧–೫೦.

ಲೇಖಕ ಶ್ರೀ ಹೆಗಡೆಯವರು ಬೇರೆ ಬೇರೆ ಕಾಲಗಳಲ್ಲಿ ಬರೆದು ವಿವಿಧ ಪತ್ರಿಕೆಗಳಲ್ಲಿ ಪ್ರಕಟಿಸಿದ್ದ ೧೧ ಕಥೆಗಳನ್ನು ಒಂದಾಗಿ ಸಂಗ್ರಹಿಸಿ ಈ ಸಂಗ್ರಹವಲ್ಲಿ ಕನ್ನಡಿಗರ ಕೈಗೆ ಇಟ್ಟಿದ್ದಾರೆ. 'ಹೆಕ್ಕಿನರಸಣ್ಣ' ಎಂಬುದರ ಎರಡನೆಯ ಭಾಗಗಳನ್ನು ಮಾತ್ರ ಮೊಸರಾಗಿ ಬರೆದು ಇದರಲ್ಲಿ ಅಡಕಪಡಿಸಿದ್ದಾರೆ. ಈ ಕಥೆಯೇ ಸಂಗ್ರಹದಲ್ಲಿ ಅಕಾರದಲ್ಲಿಯೂ ಗುಣದಲ್ಲಿಯೂ ದೊಡ್ಡದೆನ್ನಬಹುದು. ಸೂಕ್ಷ್ಮಾಕ್ಷಿಗಳಲ್ಲಿರುವ ಮಾನವತೆಯನ್ನು ಚಿತ್ರಿಸುವ 'ಕಾಳನಾಯಿ', ಸಮಾಜದಲ್ಲಿ ಶಾಂತಿಯ ಹೆಸರಿನಲ್ಲಿ ಅಶಾಂತಿ ಹರಡಿಸುವ ಜೋಯಿಸರ ದುಷ್ಪ್ರವೃತ್ತಿಯ ಅಭ್ಯಾಸವಾದ 'ರಂಗಪ್ಪನ ಚಾವಡಿ', ಸಳ್ಳಿಯ ಹೆಗಡಿಸರ ಸಾಹಸ ಹಾಗೂ ಧೈರ್ಯತೀಚಿತೆಯನ್ನು ತಿಳಿಯಪಡಿಸುವ 'ಹೆಣ್ಣಿನ ಸಾಹಸ' ಹಾಗೂ 'ಹಕ್ಕಿನರಸಣ್ಣ' ಉತ್ತಮ ಕಥೆಗಳು. ಉಳಿದವುಗಳ ವಸ್ತುವಾದರೂ ಸಾಮಾನ್ಯವೇ ಎನ್ನಬಹುದು ಸಾಮಾನ್ಯವಾಗಿ ನಿರ್ದಿಗಳಾಗಿ ಹರಿಯುವ ಪ್ರೊ| ಹೆಗಡೆಯವರ ಕಥನ ಶೈಲಿಯಲ್ಲಿ ಗಡಸು ಕಡಿಮೆಯೆಂದೇ ಹೇಳಬೇಕು. ಸಣ್ಣ ಕಥೆಗಳಿಗೆ ಅಂದ್ಯಯಷ್ಟಿಯಂತಿರುವ ತೀಸ್ರ ಓಟ ಎಲ್ಲಿಯೂ ತೋರಿಬರುವುದಿಲ್ಲ. ಒಂದು ದೊಡ್ಡ ಕಾದಂಬರಿಯ ವಸ್ತುವನ್ನು ಕೆಲವಾರು ಪುಟಗಳಲ್ಲಿ ಸಾರಾಂಶದಂತೆ ಬರೆದರೆ ಅದು ಸಾಹಿತ್ಯವಾಗುತ್ತದೆ; ಆದರೂ ಸಣ್ಣ ಕಥೆಗಳಲ್ಲಿರಬೇಕಾದ ತೀವ್ರತೆ—ಪ್ರಟನಾ ಪ್ರಾಧಾನ್ಯಗಳ ಅಭಾವವಿರುತ್ತದೆ. ಕಥನ ಶೈಲಿಯೊಂದರಲ್ಲಿ ಇನ್ನೂ ಹೆಚ್ಚಿನ ಆಕರ್ಷಣೆಯನ್ನು ತಂದುಕೊಂಡಲ್ಲಿ ಶ್ರೀ ಹೆಗಡೆಯವರ ಲೇಖನಿಯ ಕಸುವು ಮತ್ತೂ ಅಧಿಕವಾಗುವುದು ಖಂಡಿತ. ಈ ಸಂಗ್ರಹದ ಕಥೆಗಳಲ್ಲಿ ಉತ್ತರ ಕನ್ನಡ ಜಿಲ್ಲೆಯ ಜನ ಜೀವನದ ವಿವಿಧ ಮುಖಗಳನ್ನು ವಸ್ತುವನ್ನಾಗಿ ಆರಿಸಿಕೊಂಡಿದ್ದಾರೆ; ಇದು ಸ್ತುತ್ಯವೇ ಇದರಿಂದ ಇನ್ನೂ ಹೊರ ಬರಲಿರುವ ಕೃತಿಗಳು ದೋಷವಿದೂರವಾಗಲೆಂದು ಬಯಸಿ, ಜ್ಞಾನ ಸಾಧನ ಗ್ರಂಥಿ ಮಾಲೆಯು ಉತ್ತಮ ಜ್ಞಾನ ಸಾಧನ ಸಾಹಿತ್ಯ ಕೃತಿಗಳನ್ನು ತನ್ನಲ್ಲಿ ಕೋದುಕೊಳ್ಳುವಂತಾಗಲೆಂದು ಹಾರೈಸುವೆವು.

ಕನ್ನಡ ಚಲನ ಚಿತ್ರೋದ್ಯಮ: ಬರೆದವರು: ಶ್ರೀ ಕುಮಾರ ವೆಂಕಣ್ಣ. ಪ್ರಕಾಶಕರು: ಕಟಕ ಪ್ರಕಾಶನ, ಗಾಂಧಿ ನಗರ, ಬೆಂಗಳೂರು, ೧೯. ಪುಟಗಳು ೬೮. ಬೆಲೆ: ರೂ. ೦–೪೦.

ಭಾರತದ ಕೈಗಾರಿಕೆಗಳಲ್ಲಿ ಎಂಟನೆಯ ಸ್ಥಾನವನ್ನು ಪಡೆದ ಚಲಚ್ಚಿತ್ರೋದ್ಯಮದಲ್ಲಿ ೧೭೦ ಕೋಟಿ ರೂಪಾಯಿಗೂ ಮಿಕ್ಕಿದ ಬಂಡವಳ ತೊಡಗಿಸಲಾಗಿದೆ. ಮೂವತ್ತು ವರ್ಷಗಳ ಹಿಂದೆ ಕನ್ನಡದಲ್ಲಿಯೂ ಪ್ರಾರಂಭವಾದ ಈ ಉದ್ಯಮಕ್ಕೆ ಇಲ್ಲಿ ಆದರೆ ಬೆಳವಣಿಗೆಗೆ ಸಾಕಷ್ಟು ಅವಕಾಶವಿದ್ದರೂ ಇದರಲ್ಲಿ ಕೈಹಾಕಿದ ದುಷ್ಟ ವ್ಯಕ್ತಿಗಳ ದೆಸೆಯಿಂದಾಗಿ, ಸಜ್ಜನರು ಕೈಸುಟ್ಟುಕೊಂಡರು; ಕನ್ನಡದಲ್ಲಿ ಚಲನ ಚಿತ್ರೋದ್ಯಮಕ್ಕೆ ಭವಿಷ್ಯವೇ ಇಲ್ಲವೆಂಬ ತಪ್ಪು ಭಿಪ್ರಾಯ ಹುಟ್ಟಿಕೊಳ್ಳುವಂತಾಗಿದೆ. ಆದರೂ ಈಗೀಗ ಸಹಕಾರಿ ಪದ್ಧತಿಯಿಂದ ಈ ಉದ್ಯಮಕ್ಕೆ ತೊಡಗಿದವರಿದ್ದಾರೆ. ಕನ್ನಡ ಚಿತ್ರೋದ್ಯಮದ ಗತೇತಿಹಾಸವನ್ನು, ಅದು ಅಪಮಾನಿತವಾಗಲು ಇದ್ದ ಮೂಲಕಾರಣಗಳನ್ನು ವಿವರಿಸಿ, ಮುಂದೆ ಅದರ ಅಭಿವೃದ್ಧಿಗೆ ಮಾರ್ಗವನ್ನು ತೋರಿಸಿಕೊಡುವ ಈ ಪುಸ್ತಕವು ಚಿತ್ರ ಹಿತೈಷಿಗಳಿಗೆ ಕೈದೀವಿಗೆಯಂತಿದೆ. ಈ ದಿಸೆಯ ಪ್ರಥಮ ಹೊತ್ತಗೆಯಿದೆ. ಚಲಚ್ಚಿತ್ರಕ್ಷೇತ್ರದಲ್ಲಿಯೇ ತಮ್ಮ ಜೀವನವನ್ನು ಕಳೆಯುತ್ತಿರುವ ಶ್ರೀ ಕುಮಾರ ವೆಂಕಣ್ಣನವರು ನಿಷ್ಠೆಯ ಪಾತಿವ್ರತ್ಯದಿಂದ ತಮ್ಮ ಲೇಖನಿ ಹರಿಸಿದ್ದಾರೆ. ಅದು ಕೆಲವೊಮ್ಮೆ ಕಠೋರವಾಗಿ ತೋರಿಬಂದರೂ ಸತ್ಯವನ್ನು ಮರೆಮಾಚುವುದು ಅನ್ಯಾಯವಲ್ಲವೆ? ಸತ್ಯವು ಅಪ್ರಿಯವಾದರೂ ಅದನ್ನು ಹೇಳಿಯೇ ಬಿಡುವ ಸಾಹಸ ಲೇಖಕರದು. ಈ ಹೊತ್ತಗೆಯಿಂದ ಕನ್ನಡ ಚಲನ ಚಿತ್ರೋದ್ಯಮದಲ್ಲಿ ಹೊಸ ಹಗಲು ಮೂಡುವ ಆಸೆಯಿಲ್ಲವಾದರೂ ಆರುಣೋದಯಕ್ಕಾದರೂ ಇದು ಕಾರಣವಾದೀತು; ಆಗಲಿ.

ವಿಶ್ವಸ್ವಾಸ್ಥ್ಯ

(ಶೇಷ ಪುಟದಿಂದ)

ಅದ್ಭುತ ಪವಾಡವಲ್ಲ. ಎಲ್ಲ ರಾಷ್ಟ್ರಗಳೂ ಈ ಮಹಾಕಾರ್ಯದಲ್ಲಿ ಸಹಯೋಗ ನೀಡಬೇಕಾಗಿದೆ. ಒಕ್ಕಟ್ಟಿನಿಂದ ಈ ಯೆಲ್ಲ ರೋಗಗಳನ್ನು ನಿವಾರಿಸಲು ಏಕ ಸೂತ್ರದ ಪ್ರಯತ್ನಗಳು ನಡೆಯುವುದಿಲ್ಲವಾದರೆ, ಸಮಾಜವು—ವಿಶ್ವವು ಖಂಡಿತಕ್ಕೂ ಅಧಃಪತನ ಹೊಂದುವುದು; ಮಾನವನ ಜೀವನವು ಅಪಾಯ ಭಯದಿಂದ ತತ್ತರಿಸುತ್ತಲೇ ಇರಬೇಕಾಗಿದೆ.

ಆಧುನಿಕ ಸಮಾಜ ಜೀವನ ಪ್ರಣಾಳಿಯು ಪರಿವರ್ತನೆಗೊಳ್ಳುತ್ತ ಹೋಗುವುದು ಅನುಭವನೇದ್ಯವಾಗಿದೆ. ಶಾಂತಿ-ಸುಖಾನುಭೂತಿಗಳ ಅಭಾವವು ಇಂದಿನ ಸಮಾಜದಲ್ಲಿ ನಮಗೆ ಕಂಡು ಬರುತ್ತದೆ. ಮಾನವನು ಅನ್ನ ಬಟ್ಟೆಗಳಿಂದಾಗಲೀ ವಿಲಾಸ ಸಾಧನಗಳಿಂದಾಗಲೀ ಮಾತ್ರವೇ ಜೀವಿಸುವುದಿಲ್ಲ. ಆತನಿಗೆ ತೃಪ್ತಿಬೇಕು, ಮಾನಸಿಕ ಶಾಂತಿಬೇಕು ಇವೆರಡೂ ಒಂದನ್ನೊಂದು ಹೊಂದಿಕೊಂಡಿರುವ ಅನುಪಮ ಸಿದ್ಧಿಗಳು ವಿಜ್ಞಾನವು ಭೀಮಕಾಯವಾಗಿ ಬಲಿಯುತ್ತ ಮುಂದುವರಿದು ಜನ ಜೀವನದಲ್ಲಿ ಅದ್ಭುತ ಕ್ರಾಂತಿಯೆಸಗಿರುವುದು ಸರಿಯೇ; ಆದರೆ, ಸ್ವಬಲದಿಂದ ಮಾನವನನ್ನು ತನ್ನ ಕೈತ ದಾಸನನ್ನಾಗಿ ಮಾಡಿಕೊಂಡಿದೆಯೆಂಬುದು ನಿರ್ವಿವಾದ. ದಾಸ್ಯದಲ್ಲಿ ತೃಪ್ತಿ ಶಾಂತಿಗಳು ಲಭಿಸಬೇಕಾದರೂ ಎಲ್ಲಿಂದ? ಇದರಿಂದಾಗಿಯೇ ವಿಶ್ವವು ದಿನೇ ದಿನೇ ಅಸ್ವಸ್ಥ ಬಿಳುತ್ತಿರುವುದು ದೃಗ್ಗೋಚರವಾಗಿ ತ್ತಿದೆ. ಈ ಜಾಗತಿಕ ಆರೋಗ್ಯ ಸಂಸ್ಥೆಯು ಈ ಅಧಿವೇಶನವು ಅಧಿಭೌತಿಕ ರೋಗಗಳ ಬಗ್ಗೆ ಪರಿಶೀಲನೆ ನಡೆಸಬಹುದು. ಮಾನಸಿಕ ರೋಗಗಳ ಬಗ್ಗೆ ಚಿಂತಿಸುವವರಾರು?

ಕಾರಂತರ ಪುಸ್ತಕಗಳು

ಅಳಿದ ಮೇಲೆ (ಹೊಸ ಕಾದಂಬರಿ)	2–75
ಪಂಚಯುತು (ಕಾದಂಬರಿ)	2–50
ನಮ್ಮೊಳುತ್ತಿಲಿನ ಕಡಲು	1–75
ಪರಮಾಣು—ಇಂದು—ನಾಳೆ	3–00

ಸಿಗುವ ಸ್ಥಳ:
ನವಭಾರತ ಬುಕ್ ಡಿಪೊ, ಉಡುಪಿ.

ಶಾದಿನೂಲು — (ನವೀನ ಶಿಕ್ಷಣ ಕೈಗನ್ನಡಿ, ಶಿಕ್ಷಕರ ಕೈಪಿಡಿ) ಲೇಖಕರು: ಶ್ರೀ ಯು. ದೇವರಾಜರಾವ್ ಪ್ರಕಾಶಕರು: ಅಭ್ಯಾಸಿ ಅಧ್ಯಾಪಕರ ಉದ್ಯೋಗ ಸಂಘ, ಸರಕಾರಿ ಉಪಾಧ್ಯಾಯರ ಮೂಲ ಶಿಕ್ಷಣ ತರಬೇತಿ ವಿದ್ಯಾಲಯ, ಹಾಸನ. ಪುಟಗಳು: ೨೦. ಬೆಲೆ: ೦–೫೦.

ಮೂಲ ಶಿಕ್ಷಣದ ತತ್ವವನ್ನು ಭಾರತ ಹಾಗೂ ವಿವಿಧ ರಾಜ್ಯ ಸರಕಾರಗಳು ಅಂಗೀಕರಿಸಿ ಅದನ್ನು ಕಾರ್ಯಗತಗೊಳಿಸುವತ್ತ ಧಾವಿಸುತ್ತಿವೆ. ಈ ಬಗೆಯ ಶಿಕ್ಷಣ ಕ್ರಮದಲ್ಲಿ ಪತ್ತಿ ಹಿಂಜಿ ನೂಲುವುದು—ನೂತ ನೂಲನ್ನು ನೇಯುವುದು ಪ್ರಮುಖಾಂಗ. ಆದುದರಿಂದ, ಬುನಾದಿ ಅಥವಾ ಮೂಲ ಶಿಕ್ಷಣ ಶಾಲೆಯ ಅಧ್ಯಾಪಕರಿಗೂ ಹಿರಿಯ ಮಕ್ಕಳಿಗೂ ಈ ನೂಲಿನ ಬಗ್ಗೆ ಹೆಚ್ಚಿನ ವಿವರಗಳು ತಿಳಿದಿರುವುದು ಅಗತ್ಯ. 'ಶಾದಿ ನೂಲು' ಎಂಬ ಈ ಎಳೆಯ ಕೈಗನ್ನಡಿಯಲ್ಲಿ ಕೈಯಲ್ಲಿ ನೂಲು ತಯಾರಿಸುವ ನೂಲಿನ ವಿವಿಧ ಅಳತೆಗಳು, ಬಗೆ ಬಗೆಯ ನೂಲಿನ ನೂಲುವ ಕ್ರಮ ಮತ್ತು ಅವುಗಳ ಹೆಸರು ಇತ್ಯಾದಿಗಳ ವಿವರಣೆಗಳಿದ್ದು ಇದು ಉಪಯುಕ್ತವಿದೆ.

ಗೋರಾ.

ಚಂದಾದಾರರಲ್ಲಿ ವಿನಂತಿ.

'ನವಯುಗ'ದ ಚಂದಾ ಹಣ ಬಾಕಿ ಇರುವ ಚಂದಾದಾರರು ದಯಮಾಡಿ ತಮ್ಮ ಚಂದಾಹಣವನ್ನು ಈಗಲಾದರೂ ಆದಷ್ಟು ಶೀಘ್ರ ಕಳುಹಿಸಿಕೊಡುವಂತೆ ಕೇಳಿ ಕೊಳ್ಳುತ್ತೇವೆ.

ಚಂದಾ ಹಣವನ್ನು ಸಿಂಡಿಕೇಟ್ ಬ್ಯಾಂಕಿನ ಯಾವದೇ ಶಾಖೆಯಲ್ಲಿ ಯಾವ ಖರ್ಚೂ ಯಿಲ್ಲದೆ ನವಯುಗದ ಲೆಕ್ಕಕ್ಕೆ ಪಾವತಿ ಮಾಡಬಹುದು. ಇದೇ ತಾ. 20ರೊಳಗೆ ಚಂದಾದಾರರಿದ್ದರೆ ಪತ್ರಿಕೆಯನ್ನು ಕ್ರಮಶಃ ವಿ. ಪಿ. ಮಾಡಿಕಳುಹಿಸುವೆವು. ಅದನ್ನಾದರೂ ಸ್ವೀಕರಿಸಿ ಸಹಕರಿಸುವಂತೆ ವಿನಂತಿ.

ಮೆನೇಜರ್.

ಹೊಸ ಯೋಜನೆ — ಅಮೂಲ್ಯ ಪ್ರಕಟಣೆ

ಎರಡು ವರ್ಷಗಳ ಅಭ್ಯಾಸಪೂರ್ಣ ಸತತ ಪರಿಶ್ರಮದಿಂದ ಸಂಗ್ರಹಿಸಲಾಗುತ್ತಿರುವ ವಿಚಾರ ವೈವಿಧ್ಯಗಳ ಉಪಯುಕ್ತ ಹೆಬ್ಬೊತ್ತಿಗೆ—

ಬೆಡಗಿನ ಉಡುಪು

[ಸಚಿತ್ರ]

- ಉಡುಪಿ ತಾಲೂಕಿನ ಸಮಗ್ರ ವಿಚಾರಗಳನ್ನು ಕೂಲಂಕುಶವಾಗಿಯೂ, ಸಿಪ್ತಕ್ಷಪಾತವಾಗಿಯೂ ನಿರೂಪಿಸುವ ಅಪೂರ್ವ ಸಾಹಸ.
- ತಾಲೂಕಿನ ಎಪ್ಪತ್ತಮೂರು ಪಂಚಾಯತುಗಳು, ನೂರಹದಿನೈದರಷ್ಟು ಗ್ರಾಮಗಳು— ಇವುಗಳ ಇತಿಹಾಸ, ಸಾಂಸ್ಕೃತಿಕ ವೈಭವ—ಪೌರಾಣಿಕ ಪಾವಿತ್ರ್ಯ—ಭಾಷೆ, ಜಾತಿ. ಸಂಪ್ರದಾಯ ಹಾಗೂ ಸಾಮಾಜಿಕ ಜನ ಜೀವನ - ವ್ಯಾವಹಾರಿಕ ವಿಶೇಷತೆ—ಪ್ರಾಮುಖ್ಯ ಮನೆತನ, ಸಂಘ, ಸಂಸ್ಥೆಗಳ ಹಿರಿಮೆ—ಉಡುಪಿ ತಾಲೂಕಿನವರಾಗಿದ್ದು ಪರಊರುಗಳಲ್ಲಿ ನಾಧಿಸಿದ—ಸಾಧಿಸುತ್ತಿರುವ ಮಹನೀಯರ ಕೀರ್ತಿ ಪರಿಚಯ—ಪ್ರತಿಯೊಂದು ಗ್ರಾಮ ದೇವಸ್ಥಾನಗಳ ಪುರಾಣೇತಿಹಾಸ— ರಾಜಕೀಯ ವೈವಿಧ್ಯತೆ—ಹಾಗೂ ಇನ್ನಿತರ ಎಲ್ಲಾ ವಿಚಾರಗಳನ್ನೂ ಸಚಿತ್ರವಾಗಿ ಸಂಗ್ರಹಿಸಲಾಗಿದೆ. ಇದೀಗ ಪ್ರಕಟಣೆಗೆ ಸಿದ್ಧವಾಗುತ್ತಿದೆ.

ಇನ್ನೊಂದು ವಿಶೇಷತೆ: ಡ್ಯಾರೆಕ್ಟರಿಯ ಮಾದರಿಯಲ್ಲಿ ಪ್ರಕಟವಾಗಲಿರುವ ಈ ಪ್ರಕಟಣೆಯಲ್ಲಿ ಉಡುಪಿ ತಾಲೂಕಿನ ಹಾಗೂ ಈ ತಾಲೂಕಿಗೆ ಸೇರಿದವರಾಗಿದ್ದು ಇದೀಗ ಹೊರ ನಾಡಿನಲ್ಲಿರುವ ಮಹನೀಯರ ಪರಿಚಯವನ್ನು ಅವರ ಉದ್ಯೋಗ, ವ್ಯಾವಹಾರಿಕ ವೈವಿಧ್ಯತೆಗೆ ಸರಿಯಾಗಿ ಕ್ರಮಾನುಗತವಾಗಿ ಭಾವಚಿತ್ರದೊಂದಿಗೆ ಪ್ರಕಟಿಸುವ ವಿಶೇಷ ವ್ಯವಸ್ಥೆ ಇದೆ.

ಈ ಹಿರಿ ಹೊತ್ತಗೆಯಲ್ಲಿ ಉಡುಪಿ ತಾಲೂಕಿನ ಎಲ್ಲಾ ಊರುಗಳ ವಿಶೇಷತೆಗಳನ್ನು ಛಾಯಾಚಿತ್ರ ಮೂಲಕವೂ ನಿರೂಪಿಸಲಾಗಿದೆ.

ಮಹಾಜನರ ಸಲಹೆ, ಸೂಚನೆ, ಸಹಕಾರಗಳನ್ನು ತೀವ್ರವಾಗಿ ಸ್ವಾಗತಿಸಲಾಗುವುದು. ವಿವರಗಳಿಗೆ ಪತ್ರವ್ಯವಹಾರ ನಡೆಸಿರಿ—

"ಪ್ರತಿಮಾ ಪ್ರಕಾಶನ", ಉಡುಪಿ-

ಮಕ್ಕಳ ಮಮತೆಯ 'ಬಿಕ್ಕೊ'ರವರ ಗ್ಲೂಕೋಸ್ ಕೂಡಿದ ಪೆಪ್ಪರ್ ಮಿಠಾಯಿಗಳು ರುಚಿಕರ, ಸೇವನೆಗೆ ಪ್ರಸಿದ್ಧಿ ಪಟ್ಟಿವೆ.

Regd. Trade Mark

BICCO

'ಬಿಕ್ಕೊ'ರವರ ಹೆಣ್ಣಿನ ಪರಬತ್ತುಗಳು ಅತಿಥಿಗಳ ಆದರದ ಸತ್ಕಾರಕ್ಕೆ ಅತ್ಯನುಕೂಲ.

ತಯಾರಕರು:
ಭಾರತ್ ಇಂಡಸ್ಟ್ರಿಯಲ್ ಎಂಡ್ ಕ್ಯಾನಿಂಗ್ ಕಂಪೆನಿ ಲಿಮಿಟೆಡ್, ಕಾಸರ, ದ. ಕ.

ಕುಮಾರಿ ಬಿಲ್ಲೆಗಳು

(Registered)

ಈ ದೇಶೀಯ ತಯಾರಿಕೆಯ ಗುಣಾಂಶವು ವರ್ಷಗಟ್ಟಲೆಯಿಂದ ವಿಖ್ಯಾತವಾಗಿದೆ ಮತ್ತು ಪ್ರಮುಖ ಕೆಮಿಸ್ಟರಿಂದ ಈ ಕೆಳಗಿನ ದರಗಳಲ್ಲಿ ವಿಕ್ರಯಿಸಲ್ಪಡುತ್ತದೆ. ಟ್ಯೂಬಿಗೆ ರೂ. 3=00 (ಸಾದಾ), ರೂ. 5=00(ಸ್ಪೆಶ್ಯಲ್), ರೂ. 8=00 (ಎಕ್ಸ್ಟ್ರಾ ಸ್ಪೆಶ್ಯಲ್).

P. DEVEE & Co. (M. I.) CALCUTTA—40

ಸ್ವಾಕಿಸ್ವರು: ಷಾ ಕಂಪೆನಿ, ಮಂಗಳೂರು—1.

ಅಧ್ಯಾತ್ಮ ವಿಚಾರ

ಭಗವದ್ಗೀತೆಯ ಪ್ರಕಾಶ

ಸೃಷ್ಟಿಯಲ್ಲಿರುವ ಎಲ್ಲಾ ಒಳ್ಳೆಯ ವಸ್ತುಗಳಲ್ಲಿಯೂ ಪರಮಾತ್ಮನ ಅಂಶವಿದೆ. ಪರಮಾತ್ಮನು ವಿಶ್ವವ್ಯಾಪಿಯು; ಅಣುರೇಣುತೃಣ ಕಾಷ್ಠಗಳಲ್ಲಿಯೂ ಹರಡಿರುವವನು.

ಶ್ರೀ ಎಂ. ಬಿ. ಶಂಕರ ರಾವ್, ಐ. ಎ. ಎಸ್. (ನಿವೃತ್ತ)

ಕಿರಣ ೧೦: ದಿವ್ಯಜ್ಞಾನಯೋಗ

ಭಗವಾನಃ–ಪರಾಕ್ರಮಿಯೂದ ಅರ್ಜುನನೇ, ನನ್ನ ಉಪದೇಶವನ್ನು ಸರಿಯಾಗಿ ಕೇಳು. ನಿನಗೆ ಒಳ್ಳಿತಿನ ದಾರಿಯನ್ನು ತೋರಿಸುತ್ತೇನೆ. ಸುರರಿಗೂ, ಮುನಿಗಳಿಗೂ ನನ್ನ ಹುಟ್ಟು ತಿಳಿದಿಲ್ಲ. ನನ್ನಿಂದಲೆ ಸುರರೂ, ಋಷಿಗಳೂ ಉತ್ಪನ್ನರಾದರು. ನನಗೆ ಆದಿಯೂ ಇಲ್ಲ, ಅಂತ್ಯವೂ ಇಲ್ಲವೆಂಬುದನ್ನು ಅರಿತವನು ಮತ್ತು ನಾನು ಸಕಲ ಜಗತ್ತಿನ ಒಡೆಯನು ಎಂದು ಏಕಾಗ್ರಚಿತ್ತದಿಂದ ನಂಬಿದವನು ಪ್ರಪಂಚದ ಮೋಹಜಾಲದಲ್ಲಿ ಸೆರೆಬಿದ್ದು ಪಾಪಗಳನ್ನು ಸಂಗ್ರಹಿಸಲಾರನು. ವಿವೇಕ, ಜ್ಞಾನ, ಬುದ್ಧಿ, ಸಹನೆ, ಸತ್ಯ, ಇಂದ್ರಿಯನಿಗ್ರಹ, ಶಾಂತತೆ, ಸಂತೋಷ, ದುಃಖ, ಜನನ, ಮರಣ, ಭಯ, ಧೈರ್ಯ, ಅಹಿಂಸೆ, ಸ್ಥಿತಪ್ರಜ್ಞತೆ ತೃಪ್ತಿ, ತಪ, ದಾನ, ಕೀರ್ತಿ ಮೊದಲಾದ ಬೇರೆ ಬೇರೆ ಮಾನವ ಗುಣಗಳು ನನ್ನಿಂದ ಅಂಕುರಿಸುವವು. ಸಪ್ತ ಋಷಿಗಳೂ, ನಾಲ್ಕು ಮನುಗಳೂ, ನನ್ನ ಮಾನಸಶಕ್ತಿಯಿಂದ ಹುಟ್ಟಿ ನನ್ನ ಸ್ವಭಾವದ ಒಂದೊಂದು ಅಂಶವನ್ನು ವಹಿಸಿರುವರು. ಅವರಿಂದ ಸೃಷ್ಟಿಯ ಎಲ್ಲಾ ಜೀವಜಂತುಗಳು ಹೊರಬಂದವು. ಈ ಅದ್ಭುತವಾದ ನನ್ನ ಶಕ್ತಿಯನ್ನು ಅರಿತವರು ನನ್ನಲ್ಲಿ ಭಿನ್ನವಿಸಿದ ಭಕ್ತಿಯನ್ನಿಡುವರು. ನಾನು ಎಲ್ಲಾ ವಸ್ತುಗಳಿಗೂ ಮೂಲಾಧಾರನು. ನನ್ನಿಂದಲೇ ಎಲ್ಲವೂ ಸೃಷ್ಟಿ. ಸಂಪೂರ್ಣಜ್ಞಾನಿಗಳಿಗೆ ಇದು ತಿಳಿದೇ ಇದೆ. ಅವರ ಬಾಳಿಕೆಯನ್ನು ನಾನು ಅರಿಯುತ್ತಿದ್ದೇನೆ. ಅವರ ಚಿತ್ತವು ನನ್ನಲ್ಲಿ ಗೂಡಿರುವುದು. ಅವರಲ್ಲಿ ನನ್ನ ತೃಪೆಯು ಬೀರುವುದು. ಅವರ ಹೃದಯದಲ್ಲಿ ನಾನು ವಾಸಿಸುವೆನು.

ಅರ್ಜುನಃ— ಕೃಷ್ಣನೇ, ನೀನೇ ಪರಿಶುದ್ಧಾತ್ಮನಾದ ದೇವನು. ನಾರದ, ವ್ಯಾಸ ಮೊದಲಾದ ಮುನಿಪುಂಗವರು ನಿನ್ನ ಶಕ್ತಿಯನ್ನು ಜಗತ್ತೆಲ್ಲಾ ಸ್ತುತಿಸಿ ಹಾಡಿರುವರು. ದೇವನೇ, ನೀನು ಈವರೆಗೆ ಹೇಳಿದುದೆಲ್ಲಾ ಸತ್ಯವೆಂದು ಭಾವಿಸುತ್ತೇನೆ. ನಿನ್ನ ದಿವ್ಯ ಸ್ವರೂಪಯೋಗವು ಮತ್ತು ಅದರ ಭಾಗ್ಯವು ಸುರರಿಗೂ, ಅಸುರರಿಗೂ ಸಿಕ್ಕಲಿಲ್ಲ. ನೀನಾರೆಂದು ನನಗೆ ಮಾತ್ರ ಗೊತ್ತು. ನಿನ್ನ ದಿವ್ಯಸ್ವರೂಪವನ್ನು ವಿವರಿಸು.

ಭಗವಾನಃ—ನನ್ನಸ್ವರೂಪವುವಿಶಾಲವಾದುದು ಎಲ್ಲಾ ಜೀವಿಗಳಲ್ಲಿರುವ ಆತ್ಮನು ನಾನೇ. ನಾನೆ ಆದಿಯು, ನಾನೆ, ಮಧ್ಯ, ನನ್ನಿಂದಲೇ ಸರ್ವನಾಶವೆಂಬುದನ್ನು ತಿಳಿ. ಆದಿತ್ಯದಲ್ಲಿ ನಾನು ವಿಷ್ಣು. ಪ್ರಕಾಶದಲ್ಲಿ ನಾನು ರವಿ. ಸುರರಲ್ಲಿ ನಾನು ದೇವೇಂದ್ರನು. ಇಂದ್ರಿಯಗಳಲ್ಲಿ ನಾನೇ ಮನಸ್ಸು ಜೀವ ಜಂತುಗಳಲ್ಲಿ ನಾನೇ ಸೂರ್ಯಪ್ರಜ್ಞನು. ರುದ್ರರಲ್ಲಿ ನಾನೇ ಶಂಕರ. ಯಕ್ಷರಾಕ್ಷಸರಲ್ಲಿ ನಾನೇಕುಬೇರನು ವಸ್ತುಗಳಲ್ಲಿ ನಾನುಅಗ್ನಿಯು, ಪರ್ವತಗಳಲ್ಲಿ ನಾನು ಮೇರು. ಪುರೋಹಿತರಲ್ಲಿ ನಾನೇ ಬೃಹಸ್ಪತಿಯು. ಸೇನಾಧಿಪರಲ್ಲಿ ನಾನೇ ಸ್ಕಂದನು ಉದಕ ಪ್ರವಾಹಗಳಲ್ಲಿ ನಾನು ಸಾಗರನು, ಮಹರ್ಷಿಗಳಲ್ಲಿ ಭೃಗುವು. ಶಬ್ದ ಭಂಡಾರದಲ್ಲಿ ನಾನೇ "ಓಂ" ವೃಕ್ಷಗಳಲ್ಲಿ ನಾನೇ ಅಶ್ವಥ ದೇವ ಮುನಿಗಳಲ್ಲಿ ನಾನು ನಾರದನು. ಗಂಧರ್ವರಲ್ಲಿ ನಾನೇ ಚಿತ್ರರಥನು. ಯೋಗಿಗಳಲ್ಲಿ ನಾನೇ ಕಪಿಲನು. ಕುದುರೆಗಳಲ್ಲಿ ನಾನೇ ಉಚ್ಚೈಶ್ರವನು. ಹಸ್ತಿಗಳಲ್ಲಿ ಐರಾವತನು, ಮಾನವರಲ್ಲಿ ರಾಜೇಶ್ವರನು. ಆಯುಧಗಳಲ್ಲಿ ನಾನೇ ಗುಡುಗು ಮಿಂಚು. ಪಶುಗಳಲ್ಲಿ ನಾನೇ ಕಾಮಧೇನು. ಸೃಷ್ಟಿಯನ್ನುಂಟುಮಾಡುವಾಗ ನಾನೇ ಕಂದರ್ಪನು. ಸರ್ಪಗಳಲ್ಲಿ ನಾನೇ ವಾಸುಕಿಯು ನಾಗಗಳಲ್ಲಿ ನಾನು ಅನಂತನು, ಜಲದೇವತೆಗಳಲ್ಲಿ ವರುಣನು. ನಾನೇ ಯಮನು, ನಾನೇ ಪ್ರಹ್ಲಾದನು, ನಾನೇ ಕಾಲನು ಎಂಬುದನ್ನು ತಿಳಿ. ಮೃಗಗಳಲ್ಲಿ ನಾನು ಸಿಂಹನು. ಪಕ್ಷಿಗಳಲ್ಲಿ ಗರುಡನು. ಶುದ್ಧವಸ್ತುಗಳಲ್ಲಿ ವಾಯುವು ಯೋಧರಲ್ಲಿ ರಾಮನು, ಮೀನುಗಳಲ್ಲಿ ತಿಮಿಂಗಿಲ, ನದಿಗಳಲ್ಲಿ ಗಂಗೆ ಎಂಬುದನ್ನು ಅರಿತುಕೊಳ್ಳು. ವಿಜ್ಞಾನ ಶಾಸ್ತ್ರದಲ್ಲಿ ನಾನು ಆತ್ಮನು. ಸೃಷ್ಟಿಯಲ್ಲಿ ಆದಿ ಸ್ವರೂಪನೂ, ಅಂತ್ಯಸ್ವರೂಪನೂ ನಾನೇ. ತರ್ಕಗಳಲ್ಲಿ ಕಾರಣಕಾರನೂ, ಅಕ್ಷರಗಳಲ್ಲಿ 'ಅ' ಕಾರನೂ, ಶಬ್ದಕೂಟದಲ್ಲಿ ದ್ವಂದ್ವನು. ಎಲ್ಲವನ್ನೂ ಮಾಡುವವನೂ ಕೊಡುವವನೂ ನಾನೇ. ನಾನೇ ನಾಶಕಾರನು. ನಾನೇ ಮರಣ ಸ್ವರೂಪಿಯು. ಮುಂದಾಗುವ ಸೃಷ್ಟಿಗಳಿಗೂ ನಾನೇ ಕಾರಣಭೂತನು. ಸ್ತ್ರೀಶಕ್ತಿಯಲ್ಲಿನಾನುಕೀರ್ತಿಯು, ನಾನೇ ಲಕ್ಷ್ಮೀಯು, ನಾನೇ ಶಾರದೆಯು, ನಾನೇ ಜ್ಞಾಪಕ ಶಕ್ತಿಯು ಮತ್ತು ನಾನೇ ವಿವೇಕಿಯು. ನಾನೇ ಪಾತಿವ್ರತೆ—ನಾನೇ ಕ್ಷಮೆ. ವೇದಗಳಲ್ಲಿ ನಾನು ಸಾಮನು, ಮಂತ್ರಗಳಲ್ಲಿ ಗಾಯತ್ರಿಯು, ಮಾಸಗಳಲ್ಲಿ ಮಾರ್ಗಶೀರ್ಷನು, ಋತುಗಳಲ್ಲಿ ವಸಂತಋತು, ದಿವ್ಯಜ್ಞಾನಿಗಳಲ್ಲಿ ಜ್ಯೋತಿಯು, ಆಗಿರುವೆನು. ನಾನೇ ವಿಜಯಿಯು, ನಾನೇ ಸಾಹಸಿಯು, ನಾನೇ ಉತ್ತಮನು. ನಾನೇ ವಾಸುದೇವನು, ನಾನೇ ಅರ್ಜುನನು, ನಾನೇ ವೇದವ್ಯಾಸನು, ನಾನೇ ಧರ್ಮಯೋಧನು ಆಗಿರುವೆನು. ಗುಪ್ತ ವಸ್ತುಗಳಲ್ಲಿ ನಾನು ಮೌನಿ, ವಿವೇಕಿಗಳಲ್ಲಿ ನಾನು ಬುದ್ಧಿ; ಎಲ್ಲಾ ಬೀಜಗಳಲ್ಲಿಯೂ ನಾನೇ. ನಾನಿಲ್ಲದ ಚರ ವಸ್ತುವೂ ಇಲ್ಲ, ಅಚರವಸ್ತುವೂ ಇಲ್ಲ, ನನ್ನ ಎಲ್ಲಾ ಸ್ವರೂಪಗಳನ್ನು ಎಣಿಸಲಿಕ್ಕೆ ಅಸಾಧ್ಯ. ನಾನು ಸಂಕ್ಷೇಪವಾಗಿ ನನ್ನ ಕೆಲವು ಸ್ವರೂಪಗಳನ್ನು ಮಾತ್ರ ತಿಳಿಸಿರುವೆನು. ನನ್ನ ಜ್ಯೋತಿಯಿಂದಲೇ ಎಲ್ಲವೂ ನಡೆಯುತ್ತಿದೆ ಈ ನನ್ನ ಭಾಷಣದಿಂದ ನಿನಗಾಗುವ ಪ್ರಯೋಜನವೇನು? ಇಡಿ ಜಗತ್ತೇ ನಾನು. ಅಂತೆಯೆ ಜಗತ್ತಿನಲ್ಲಿರುವ ಎಲ್ಲಾ ಅಣುಗಳು ಕೂಡ ನಾನೇ.

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ, ಪ್ರತಿಯೊಬ್ಬರಿಗೂ ಅತ್ಯುಪಯುಕ್ತವಾದ ಹೊಸ ಪುಸ್ತಕ

LETTER WRITING MADE EASY

ಸುಲಭದಲ್ಲಿ ಪತ್ರಲೇಖನ

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.

ಬೆಲೆ ರೂ. 1-4-0 (1=25).

ಮನೆಯೆಂದಾದಲ್ಲಿ ಇರಲೇಬೇಕಾದ ಗೃಹವೈದ್ಯ

ಮನೆ ಮದ್ದು

ಬರೆದವರು: ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್, ಎಲ್.ಎಂ.ಎಮ್ ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಯಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ. ಹರಿಗೆ ವಿಧಾನ ಸವಿಸ್ತಾರವಾಗಿ ಕೊಡಲ್ಪಟ್ಟಿದೆ. ಬೆಲೆ ರೂ. ಎರಡು.

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ— ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—. ದಿ| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

(ENGLISH MADE EASY)

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ. ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು.

ಬೆಲೆ: ರೂ. ಎರಡು. ಉತ್ತಮ ಪ್ರತಿ: ರೂ. ಎರಡೂವರೆ

ವಿ. ಸೂ.—ಅಯಾಯ ಪುಸ್ತಕದ ಬೆಲೆಯೊಂದಿಗೆ ಟಪ್ಪಾಲು ಖರ್ಚಿಗಾಗಿ 0=25 N.P ಸೇರಿಸಿ ಮನಿಯಾರ್ಡರು ಮಾಡಿದರೆ ಪುಸ್ತಕಕಳಿಸಲಾಗುವುದು,

ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ಸಿಗದಿದ್ದರೆ ನಮಗೆ ಬರೆಯಿರಿ.

ನವಭಾರತ ಪುಸ್ತಕ ಭಂಡಾರ, ಉಡುಪಿ

ವಿಚಾರ ವರ್ಷ

(೪ನೇ ಪುಟದಿಂದ)

ಪಕ್ಕೆ ಗುರಿಯೂದೇವು ಎಂಬುದನ್ನು ಕಂಡುಕೊಂಡು, ಕರ್ತವ್ಯ ನಿರ್ವಹಿಸಬೇಕು. ಅಧಿಕಾರಿಗಳು ತಾವು ವೈಯಕ್ತಿಕ ಪ್ರತಿಷ್ಠೆಯನ್ನು ಬಯಸದೆ ಸಮಾಜದ ಹಿತವನ್ನು ಸಾಧಿಸಲು ತಮ್ಮ ಅಧಿಕಾರ ದಂಡವನ್ನು ಉಚಿತವರಿತು ಬಳಸಬೇಕು; ಸರಕಾರವು ಈ ಕ್ಷೇತ್ರದ ಮಹಾನತೆಯನ್ನು ಕಂಡುಕೊಂಡು ಈ ವಿಭಾಗಕ್ಕೆ ಆರ್ಥಿಕ ಸಹಾಗೂ ಮತ್ತಿತರ ಅನುಕೂಲತೆಯನ್ನು ಒದಗಿಸಿ ಕೊಡಬೇಕು.

ಹಿಂದೆ ಅವಶ್ಯಕತೆಯಿದ್ದವರು, ಬುದ್ಧಿಶಾಲಿಗಳು ಮತ್ತು ಅನುಕೂಲವಂತರು ಮಾತ್ರ ಪಡೆಯುತಿದ್ದ ಶಿಕ್ಷಣ ಈಗ ಅನಿವಾರ್ಯವಾಗ ತೊಡಗಿದೆ. ಅದರ ಕ್ಷೇತ್ರ ವಿಶಾಲವಾಗುತ್ತ ಬರುತ್ತಿದೆ. ಕ್ಷೇತ್ರ ಸುವಿಸ್ತೃತಗೊಳ್ಳುವಾಗ, ವಿದ್ಯಾಮಟ್ಟವು ತನ್ನಿಂದತಾನೇ ಕುಸಿಯುತ್ತ ಬರುವುದು ಸ್ವಾಭಾವಿಕವೇ. ಇದರ ಪ್ರತ್ಯಕ್ಷ ನಿದರ್ಶನಗಳು ಈಗಾಗಲೇ ದೃಗ್ಗೋಚರವಾಗ ತೊಡಗಿವೆ.

ಇಳಿಯುತ್ತಿರುವ ಮಟ್ಟವನ್ನೆತ್ತರಿಸಲು ಪಾಠ್ಯಕ್ರಮವನ್ನಷ್ಟೇ ಬಿಗಿಗೊಳಿಸಿದರೆ ಏನೂ ಪ್ರಯೋಜನವಿಲ್ಲ. ಏಕೆಂದರೆ, ಪಾಠ್ಯಕ್ರಮ ಶಿಥಿಲವಾಗುವುದಿಲ್ಲ; ಅದು ಕಾರ್ಯಗತವಾಗುವ ಪ್ರಮಾಣದಲ್ಲಿ ಹ್ರಾಸವಾಗುವುದು. ಈ ಹ್ರಾಸವನ್ನು ಯಾವ ರೀತಿಯಿಂದಲೂ ಸಂಪೂರ್ಣ ತಡೆಗಟ್ಟುವುದು ಸಾಧ್ಯವಿಲ್ಲ. ಆದರೂ ಸಮರ್ಥ ಶಿಕ್ಷಕರ ಸಹಾಯದಿಂದ ಒಂದಲ್ಪ ಭಾಗವನ್ನು ತುಂಬಿಕೊಳ್ಳುವುದು ಮಾತ್ರ ಸಾಧ್ಯವಾಗಬಹುದು. ಇದಕ್ಕಾಗಿ ಯೋಗ್ಯತಾ ಸಂಪನ್ನರನ್ನಷ್ಟೇ ಅಧ್ಯಾಪಕ ವೃತ್ತಿಗೆ ಆಕರ್ಷಿಸ ಬೇಕಾಗುವುದು. ಶಿಕ್ಷಣದಂತಹ ಅಮೂಲ್ಯ ಕ್ಷೇತ್ರದಲ್ಲಿ ಯೋಗ್ಯತೆಯನ್ನು ಕಡೆಗಣಿಸಿ ಕೇವಲ ಸರ್ಟಿಫಿಕೇಟುಗಳಿಗೆ ಮಹಾನತೆ ಬಂದುದರ ಪರಿಣಾಮವೇ ಇಂದು ಇಲ್ಲಿ ತೋರುವ ಹೊಲಸಿಗೆ ಮೂಲ ಕಾರಣವಾಗಿದೆ. ಇದನ್ನು ತಡೆಗಟ್ಟುವ ಇಚ್ಛೆ ಕಾರ್ಯರೂಪಕ್ಕೆ ಬಂದಲ್ಲಿ ಮಾತ್ರ ಪ್ರಶ್ನೆಗೆ ಪರಿಹಾರ ಲಭಿಸೀತು. ಇಲ್ಲವಾದರೆ, ನಮ್ಮೆಲ್ಲ ಸುಂದರ ಸ್ವಪ್ನಗಳು ಕಾಗದದ ಕಂತೆಯಲ್ಲೇ ಉಳಿದು ಒಂದುದಿನ ಅಗ್ನಿ ನಾರಾಯಣನಿಗೆ ಆಹುತಿಯಾಗುವುವು.

ವರ್ಗ—ಊಳಿಗ

ಮೊದಲಾದ ಯಾವತ್ತೂ ತರದ

ಎಕೌಂಟ್ ಪುಸ್ತಕಗಳು

ವಿವಿಧ ಸೈಜುಗಳಲ್ಲಿ

ದೊರೆಯುತ್ತವೆ.

ವಿಚಾರಿಸಿರಿ—

ನವಯುಗ ಪ್ರೆಸ್, ಉಡುಪಿ

ಕಥಾವಿಹಾರ

(೨ನೇ ಪುಟದಿಂದ)

ಗಿದ್ದ ಮೊತ್ತತ್ವ ಮಗಳ ದುಃಖದಲ್ಲಿ ಭಾಗಿಯೂಗುತಿತ್ತು. ಯಂತ್ರಿಕವಾಗಿ ದಿನಗಳು ಒಂದೊಂದಾಗಿಯೇ ಕಳೆದು ಹೋಗುತಿದ್ದುವು.

ಮಾಧವರಾಯರ ಸತ್ಕಕ್ಕೆ ಹೇಗೆ ಉತ್ತರ ಕೊಡಬೇಕೆಂಬುದೇ ರಾಮರಾಯರಿಗೆ ಸಮಸ್ಯೆಯಾಗಿತ್ತು. ಇದ್ದ ಹೊಲ ಮನೆ ಎಲ್ಲ ಸುಮಿಹೋದಬಳಿಕ ಇಪ್ಪತ್ತೈದು ಸಾವಿರ ಕೂಡಿಸಾಕುವುದಾದರೂ ಹೇಗೆ? ತನ್ನ ಮಗಳ ಮನೆ ಉಳಿಯಬೇಕಾದರೆ, ಮಗಳ ಬಾಳು ನೆಟ್ಟಗಾಗಬೇಕಾದರೆ ಇಪ್ಪತ್ತೈದು ಸಾವಿರ ಬೇಕೇ ಬೇಕು. ಅದೂ ಮುಂಗತವಾಗಿಯೇ ಕೊಡಬೇಕು. ಸಮಸ್ಯೆಗಳು ಎಂದಿಗೂ ಬಗೆಹರಿಸಲಾಗದಂತೆ ತೋರಿತು ರಾಮರಾಯರಿಗೆ. ಹಾಗಾದರೆ ಮಾಧವರಾಯರಿಗೆ ಈಗ ಏನು ಉತ್ತರ ಕೊಡಬೇಕು? ಪ್ರಶ್ನೆಯು ಪ್ರಶ್ನೆಯಾಗಿಯೇ ಉಳಿಯಿತು.

ಇದ್ದಕ್ಕಿದ್ದಂತೆ ಒಂದು ದಿನ ಪ್ರಾತಃಕಾಲ ಮಾಧವರಾಯರು ತನ್ನ ಮನೆಗೆ ಚಿತ್ರೈಸಿದುದನ್ನು ಕಂಡು ಆಶ್ಚರ್ಯವೂ ಭೀತಿಯೂ ಉಂಟಾಯಿತು ರಾಮರಾಯರಿಗೆ.

"ಪತ್ರ ಬರೆದುದಕ್ಕೂ ಉತ್ತರಿಸದೆ ಸುಮ್ಮಗೆ ಕುಳಿತಿರೇನೋ ರಾಮರಾವ್. ಇನ್ನು ತಡೆಯಲಿಕ್ಕೆ ಸಾಧ್ಯವಿಲ್ಲ. ನಿಮ್ಮ ಕಡೆಯ ನಿರ್ಧಾರವನ್ನು ಒಪ್ಪಿಸಿಬಿಡಿ. ಮುಂದಿನ ಕೆಲಸವನ್ನು ನಾನು ಆಲೋಚಿಸಬೇಕಾಗಿದೆ.

ತುಸು ಗಡುಸಾಗಿಯೇ ಮಾತಾಡಿದರು ಮಾಧವರಾವ್.

"ನನ್ನ ಅಸಹಾಯಕತ್ವವನ್ನು ಪುನಃ ನಾನು ಹೇಳಿಕೊಳ್ಳಬೇಕಾಗಿಲ್ಲ ಮಾಧವರಾಯರೆ. ನಮ್ಮ ಮೇಲೆ ಕೃಪೆಯಿಟ್ಟು ನೀವು "ಹುಂ" ಅಂದರೆ ನನ್ನ ಸಮಸ್ಯೆಗಳೆಲ್ಲ ದೂರಾಗುತ್ತವೆ. ಒಮ್ಮೆ ಮದುವೆ ಆಗಲಿ; ಬಳಿಕ ಕಂಡವರ ಮನೆಯಲ್ಲಿ ಕತ್ತೆಚಾಕರಿ ಮಾಡಿಯಾದರೂ ನಿಮ್ಮ ಹಣವನ್ನು ಸಲ್ಲಿಸುತ್ತೇನೆ ಮಾಧವರಾಯರೆ. ಬಡವರ ಮೇಲೆ ದಯತೋರಬೇಕು"

ರಾಮರಾಯರ ಮನಸ್ಸು ದಯೆಗಾಗಿ ಅಂಗಲಾಚುತಿತ್ತು.

"ಆಗದ ಹೋಗದ ಮಾತನ್ನು ಹೇಳಿ ಪ್ರಯೋಜನವಿಲ್ಲ ರಾಮರಾವ್. ನಮ್ಮ ಹುಡುಗನಿಗೆ ಹೆಣ್ಣು ಸಿಗದೆಂಬ ಭೀತಿಯಿಂದ ನಿಮ್ಮ ಬಳಿಗೆ ಬಂದಿಲ್ಲ ತಿಳಿಯಿತೆ? ವರದಕ್ಷಿಣೆಯ ಹಣವನ್ನು ಮುಂಗಡವಾಗಿ ಕೊಡದಿದ್ದಲ್ಲಿ ನಿಮ್ಮ ಸಂಬಂಧವು ಬೇಕಾಗಿಲ್ಲ. ಕಡೆಯದಾಗಿ ಹೇಳುತಿದ್ದೇನೆ—ಬರುವ ಮೊದಲನೆ ತಾರೀಕಿನೊಳಗೆ ನೀವು ಏನೂ ಹೇಳದಿದ್ದಲ್ಲಿ ನಾವು ಬೇರೆ ಅಂದಾಜು ಮಾಡಬೇಕಾಗುತ್ತದೆ."

ಮಾಧವರಾವ್ ದುಡುಕುತ್ತಲೇ ದರದರನೆ ಇಳಿದು ಹೋದರು

"ನನ್ನ ಮಗಳ ಜೀವನವನ್ನು ಬೀದಿಗೆಳೆಯುತ್ತೀರಾ ಮಾಧವರಾವ್."

ನಿಸ್ಸಹಾಯಕ ಧ್ವನಿಯು ರಾಮರಾಯರ ಕಂಠದಿಂದ ಹೊರಹೊಮ್ಮಿತ್ತು. ಆದರೆ ಅದನ್ನು ಉತ್ತರಿಸುವಷ್ಟು ತಾಳ್ಮೆಯನ್ನು ಪಡೆದಿದ್ದಿಲ್ಲ ಮಾಧವರಾಯರು "ಗಂಡು ಹೆತ್ತ ಹೃದಯ."

ರಾಮರಾಯರಿಗೆ ಜೀವನವು ಜಿಗುಪ್ಸೆಯಾಗಿ ಕಾಣ ತೊಡಗಿತು. ಮಾಧವರಾಯರ ಪಾಷಾಣ ಹೃದಯದಲ್ಲಿ ದಯೆಯು ಒಂದು ಬಿಂದುವೂ ಇಲ್ಲವೆಂಬುದು ಅವರಿಗೆ ಅರಿವಾಯಿತು. ವರದಕ್ಷಿಣೆಯ ಪಿಡಂಭೂತವಾಗಿ ಅವರು ತನ್ನ ಶಕ್ತಿಯನ್ನು ಹೀರುತಿದ್ದಂತೆ ಭಾಸವಾಯಿತು ಅವರಿಗೆ. ಆದರೆ ತಾನು ಏನೂ ಮಾಡುವಂತಿಲ್ಲ!

ದಿನದಿಂದ ದಿನಕ್ಕೆ ರಾಮರಾಯರ ಆರೋಗ್ಯವು ಹಾಳಾಗ ತೊಡಗಿತು. ಚಿಂತೆಯ ಜ್ವಾಲೆ ಪ್ರತಿ ಕ್ಷಣವೂ ಅವರನ್ನು ಸುಡ ತೊಡಗಿತು. ಇದ್ದಕ್ಕಿದ್ದಂತೆ ರಾಮರಾಯರು ಹಾಸಿಗೆ ಹಿಡಿದು ಬಿಟ್ಟರು. ತಂದೆಯ ಅಸ್ವಸ್ಥದಿಂದ ಗಾಬರಿಗೊಂಡಳು ಲತಾ. ರಾಮರಾಯರ ಪರಿಸ್ಥಿತಿಯು ಶೋಚನೀಯವಾಯಿತು. ಲತಾ ಅಸಹಾಯಕಳಾಗಿ ತಂದೆಯ ಬಳಿಯಲ್ಲೇ ಕುಳಿತುಕೊಂಡಳು.

"ಲತಾ, ಇದು ವರೆಗೆ ನಿನ್ನನ್ನು ಸಾಕಿದೆ ಮಗಳೆ, ಆದರೆ ನಿನ್ನ ಸುಖವನ್ನು, ನಿನ್ನ ಸಂಸಾರವನ್ನು ನೋಡುವ ಭಾಗ್ಯ ಮಾತ್ರ ನನಗಿಲ್ಲ."

ಜ್ವರವು ನೆತ್ತಿಗೇರಿದುದರಿಂದ ರಾಯರು ಏನೇನೋ ಮಾತಾಡುತಿದ್ದರು. ತಾಯಿಯನ್ನು ಕಳೆದುಕೊಂಡ ನಿನ್ನನ್ನು ಅಸಹಾಯಕಳಾಗಿಯೇ ಬಿಟ್ಟು ಹೋಗುತಿದ್ದೇನೆ ಮಗಳೆ. ಇಪ್ಪತ್ತೈದು ಸಾವಿರ ರೂಪಾಯಿ ಮಾಧವರಾಯರ ಕೈಗಿತ್ತು ನಿನಗೆ ಮದುವೆ ಮಾಡುವ ಭಾಗ್ಯ ನನಗಿಲ್ಲ. ಅಸಹಾಯಕಳಾದ ನಿನ್ನನ್ನು ಸಮಾಜದ ವಿಷ ನಾಲಗೆಯ ಮೇಲಿಟ್ಟು ಹೋಗುತಿದ್ದೇನೆ, ಇದು ನನ್ನ ಗೋಳಲ್ಲ—ಸಾವಿರಾರು ಮಂದಿ ಹೆಣ್ಣುಹೆತ್ತ ಅಸಹಾಯಕ ಹೃದಯಗಳ ಮೋರೆ. ಆದರೆ ಅದನ್ನು ಕೇಳಿದಷ್ಟು ಸವಾಜದ ಕಿವಿ ಕಿವುಡಾಗಿದೆ ಲತಾ, ನೀನು ಮಾತ್ರ ಜೀವನದಲ್ಲಿ ಎಂತ ಅಹ ಕಷ್ಟಗಳು ಬಂದರೂ ಕಣ್ಣೊರಸಬೆಡ. ನಿನ್ನ ಮುಖವನ್ನೊಮ್ಮೆ ಕಣ್ತುಂಬ ನೋಡಬೇಕಾಗಿದೆ ಲತಾ...."

ರಾಯರ ದೃಷ್ಟಿ ಲತಾಳ ಮುಖದಲ್ಲಿ ಶಾಂತಿಯನ್ನರರುತಿತ್ತು. ಲತಾ ಮೂಕಳಾಗಿ ತಂದೆಯ ತಲೆಯನ್ನು ನೇವರಿಸುತಿದ್ದಳು. ಕಣ್ತುಂಬ ಮಗಳನ್ನು ನೋಡಿದ ಬಳಿಕ ಆ ಕಣ್ಣುಗಳು ಶಾಶ್ವತವಾಗಿ ಮುಚ್ಚಿ ಕೊಂಡವು. ಲತಾ "ಅಪ್ಪಾ" ಎಂದು ತಂದೆಯ ದೇಹವನ್ನು ತಬ್ಬಿದಳು. ಆದರೆ ರಾಯರ ಪ್ರಾಣಗಳು ಅಪ್ಪರಲ್ಲೇ ಹಾರಿ ಹೋಗಿದ್ದುವು—ಇಪ್ಪತ್ತೈದು ಸಾವಿರದ ನ್ವೇಷಣೆಗೆ.

ವಿಜ್ಞಾನ

(೩ನೇ ಪುಟದಿಂದ)

ರಲ್ಲಿ ಏಕಾಂತದಲ್ಲಿ ಮಗುವಿನ ಪಕ್ಕದಲ್ಲಿ ಕುಳಿತು ಆ ಪತ್ರವನ್ನು ಓದುವಂತೆ ಎಲ್ಲವಿನ ಅಣತಿಯಿಟ್ಟು, ಬರೆದಿತ್ತು. ಅದೇರೀತಿ ನಾನು ಮಾಡಬೇಕಾಗಿ ಬಂತು. ಅಂತೆ ಮಗುವಿನ ಪಕ್ಕದಲ್ಲಿ ಕುಳಿತು ಓದ ತೊಡಗಿದೆ ಪ್ರನಃ ನನಗೆ ಜ್ಞಾನ ತಿಳಿದಾಗ ಆ ಮಗುವಿನ ಕತ್ತನ್ನು ಕೈ ಅದು ಮುತ್ತಿತ್ತು ಮಗು ಸತ್ತಿತ್ತು. ಭಯದಿಂದ ಚೀರಿದ ನನ್ನ ಧ್ವನಿಗೆ ಓಗೊಟ್ಟು ಬಂದಾತ ಮಗು ಸತ್ತದ್ದನ್ನು ತಿಳಿದುಕೊಂಡು ಪತ್ರವನ್ನೂ ತೆಗೆದುಕೊಂಡು ತಪ್ಪಿಸಿಕೊಳ್ಳುವಂತೆ ಉಪದೇಶಿಸಿ ಓಡಿದ. ಅದರೂ ನಾನು ಸಿಕ್ಕಿಬಿದ್ದೆ."

ಇವೆಲ್ಲಾ ಮನುಷ್ಯನಿಗೆ ಆಗುವ ತೊಂದರೆಯೊದರೆ, ಇದರಿಂದ ಪ್ರಯೋಜನ ಮಾಡುವವರೂ ಇದ್ದಾರೆ. ವೈದ್ಯರು ಇವರಲ್ಲಿ ಮುಖ್ಯರಾದವರು. ಇತ್ತೀಚಿನ ಸಂಶೋಧನೆಯ ಫಲವಾಗಿ ಹಿಪ್ನಾಟಿಸಂನ್ನು ವೈದ್ಯದಲ್ಲಿ ಬಹಳ ಮಟ್ಟಿಗೆ ಅಳವಡಿಸಿಕೊಂಡಿದ್ದಾರೆ. ಇದು ವರೆಗೂ ಬಹು ಮಟ್ಟಿಗೆ ಗುಣಪಡಿಸಲಾಗದಿದ್ದ ಮಾನಸಿಕ ರೋಗವನ್ನು ಇಂದು ಇದರಿಂದ ಸುಲಭವಾಗಿ ಕಂಡು ಹಿಡಿದು ತಕ್ಕ ಚಿಕಿತ್ಸೆಯನ್ನು ನಡೆಸಿ ಜಯಭೇರಿ ಭಾರಿಸಿದೆ ವೈದ್ಯಶಾಸ್ತ್ರ ಇದರಿಂದ (೧) ಅಸಿಡ್ರತೆ (೨) ವಾತಕೂಲ ಅಥವಾ ಹರಿವಾತ (೩) ಭೂತೋನ್ಮಾದ (ಹಿಸ್ಟೀರಿಯೂ) ವನ್ನು ಶಾಶ್ವತವಾಗಿ ಗುಣಪಡಿಸಬಹುದು. ಹಿಪ್ನಾಟಿಸಂನಿಂದ ಬಹುಜನಕ್ಕೆ ಹೆತ್ತಿಕೊಂಡಿರುವ ಇಚ್ಛೆಇಲ್ಲದ ಚಟಗಳನ್ನು ಬಿಡಿಸಬಹುದು. ಇದರ ಸಂಭಂದವಾದ ೧. ದೀರ್ಘ ವಾತಗ್ರಸ್ತರನ್ನು ೨. ಲಕ್ವಾ ೩. ಅಪಸ್ಮಾರ ಅಥವಾ ಮೂರ್ಛೆರೋಗ ೪. ಅಗ್ನಿಮಾಂದ್ಯ ೫. ಮುಟ್ಟಿನ ಸಂಬಂಧದ ಹಾಗು ೬. ಇತರ ಕುಡಿಯುವ ಚಟಗಳು ೭. ಉಗುರು ಕಡಿಯುವಿಕೆ ೮. ಮಲಬದ್ಧತೆ ಅಲ್ಲದೇ ೯. ಮುಖದ ಹಾಗು ಇತರ ಸ್ಪಂಧನ ರೋಗಗಳನ್ನು ಬುಡಸಹಿತ ನಾಶಮಾಡುತ್ತಾರೆ.

ಹಿಪ್ನಾಟಿಸಂನ ಜನಕ 'ಮೈಸಿಗರ್'ನ ಗುರು ಮೆಸ್ಮರನು ಸಂಗೀತ ಧುರೀಣೆ 'ಮೇರಿ ಥೆರೆಸಾಪೆರಾಡಿಸ್'ಳ ಕಣ್ಣುಗಳು ಬರುವಂತೆ ಮಾಡಿದನಲ್ಲದೇ ಆಕೆ ಅನುಭವಿಸುತ್ತಿದ್ದ ಹಿಸ್ಟೀರಿಯೊವನ್ನು ಗುಣಪಡಿಸಿದ್ದನು.

ಒಮ್ಮೆ ಬ್ರಿಟನ್ನಿನಲ್ಲಿ ಒಂದು ಅರೋಗ್ಯಕರವಾಗಿದ್ದ ೬ ವರ್ಷದ ಶಿಶು ಬರಬರುತ್ತಾ ಕೃಶಿಸತೊಡಗಿತು. ಭಯಗೊಂಡ ತಂದೆ ಬೇಕಾದಷ್ಟು ಔಷಧೋಪಚಾರ ಮಾಡಿ ನೋಡಿದ. ಆದರೆ ಪ್ರಯೋಜನ ತೋರದೆ ಕೊನೆಗೆ ಹಿಪ್ನಾಟಿಸಂನ ಶರಣು ಹೋಗಬೇಕಾಯ್ತು. ಸ್ತಂಭನಕ್ಕೊಳಪಡಿಸಲ್ಪಟ್ಟ ಮಗು ತನ್ನ ರೋಗಕ್ಕೆ ಕಾರಣವನ್ನು ತಿಳಿಸಿತು. "ನನ್ನ ತಮ್ಮ ಹುಟ್ಟಿದಂದಿನಿಂದ ನನ್ನ ತಂದೆ ನನ್ನನ್ನು ಸರಿಯಾಗಿ ಗಮನಿಸುತ್ತಲೇ ಇಲ್ಲ" ಎಂದು. ಎಚ್ಚೆತ್ತ ತಂದೆಯ ಬುದ್ಧಿವಂತಿಕೆಯಿಂದಾಗಿ ಮಗು ಬೇಗನೆ ಸ್ವಸ್ಥಿತಿಗೆ ಬಂತು.

ಶಸ್ತ್ರಚಿಕಿತ್ಸೆಯಲ್ಲಿ ಇದು ವಿಶೇಷವಾಗಿ ಉಪಯೋಗಿಸಲ್ಪಡುತ್ತೆ. ಅದ್ದರಿಂದಲೇ ಇಂದು ಇದು ಪಾಶ್ಚಿಮಾತ್ಯ ದೇಶಗಳಲ್ಲಿ ಬಹಳ ಮುಂದುವರಿದಿದೆ. ಪ್ರತಿ ಆಸ್ಪತ್ರೆಯಲ್ಲೂ ಹಿಪ್ನಾಟಿಸಂ ಪರಿಣತರಿದ್ದಾರೆ.

ಗುಣಾವ ಗುಣಗಳುಳ್ಳ ಹಿಪ್ನಾಟಿಸಂ ಇಂದು ಅಮೇರಿಕೆಯಲ್ಲಿ ಬಹಳ ಪ್ರಚಾರದಲ್ಲಿದೆ. ಇಲ್ಲಿ ಪ್ರಪಂಚದ ಬೇರಾವ ದೇಶದಲ್ಲಿಲ್ಲದಷ್ಟು ಜನ ಹಿಪ್ನಾಟಿಸಂ ಕಲಿತಿರೂ ಇದು ಅವರ ಲೈಂಗಿಕ ಸುಖಕ್ಕಾ ಮೀಸಲಾಗಿದೆ.

(ಆಧಾರಗಳಿಂದ)

ದಿ ವಿಜಯಾ ಬೇಂಕ್ ಲಿಮಿಟೆಡ್, ಕಾಪು.

ಏಲಂ ನೋಟೀಸು.

ಈ ಕೆಳಗೆ ಹೆಸರು ಕಾಣಿಸಿದವರು ಸದ್ರಿ ಬೇಂಕಿನಲ್ಲಿ ನಗದ ಈಡಿನ ಮೇಲೆ ಸಾಲ ಪಡೆಕೊಂಡು, ಕ್ಲಪ್ತ ವಾಯಿದೆಗೆ ಅಸಲು ಬಡ್ಡಿ ವಗೈರೆ ಬಾಕಿ ಮಾಡಿರುವುದರಿಂದಲೂ ಸದ್ರಿ ಸಾಲವನ್ನು ಬರಮಾಡಿಕೊಳ್ಳುವರೆ ಅವರಿಗೆ ರಿಜಿಸ್ಟ್ರಿ ನೋಟೀಸು ಬಿಟ್ಟಲ್ಲಿಯೂ ಸದ್ರಿಯವುಗಳನ್ನು ಬಿಡಿಸಿಕೊಂಡು ಹೋಗುವರೆ ತಪ್ಪಿದ ಕಾರಣ, ಸದ್ರಿಯವರು ಈಡಿಟ್ಟ ನಗಗಳನ್ನು ಇದೇ ಬರುವ ತಾ. 2-3-1961ನೇ ಗುರುವಾರ ಮಧ್ಯಾಹ್ನ ಗಂಟೆ 4ಕ್ಕೆ ಸರಿಯಾಗಿ ಆಥವಾ ಬ್ಯಾಂಕಿಗೆ ಯುಕ್ತ ಕಂಡ ಇತರ ಯಾವುದೇ ದಿನಗಳಲ್ಲಿ ಪುನಃ ನೋಟೀಸು ಕೊಡದೆಸೇ ಬ್ಯಾಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವುದು. ತಿಳಿದರಿಲಿ.

ಸಾಲದ ನಂಬ್ರ ಮತ್ತು ತಾರೀಕು	ಹೆಸರು ಮತ್ತು ವಿಳಾಸ	ಬೊಬಲಗು ಬಡ್ಡಿ ಸಮೇತ 31-12-1960ರ ವರೆಗೆ
942/16-12-57	ಕೆ. ಮೆಣ್ಣ ಸೇರಿಗಾರ್, ಪ್ರೊಪ್ರೈಟರ್, ಸೈಕಲ್ ಸ್ಟೋರ್ಸ್, ಕಾಪು.	25 = 96
63/5-2-58	ಕುರುಂಬಿಲ ಸೆಟ್ಟಿ, ದೇವಪ್ಪ ಸೆಟ್ಟ ಅಳಿಯ, ಬೆಳಪು ಗುತ್ತು, ಪೋಸ್ಟು ಉಚ್ಚಿಲ.	91 = 87
276/23-5-58	ಅಣ್ಣಪ್ಪ ಪೂಜಾರಿ, ಚಿಂಗ ಪೂಜಾರಿಯವರ ಅಳಿಯ, ಮಂತಿಮೂರು, ಪೋಸ್ಟು ಮಲ್ಲಾರು.	80 = 06
350/9-6-59	ಕೃಷ್ಣಪ್ಪ ಕೆ. ಮೊಂಡನ್, ಕಾಡ್ಯ ಕಳ್ಳೇರರ ಮಗ, ಪೊಲಿಪು ಪಡು ಗ್ರಾಮ, ಪೋಸ್ಟು ಕಾಪು	128 = 82
368/16-6-59	ಮೋನು ಸೆಟ್ಟಿ, ಗುಡ್ಡ ಸೆಟ್ಟ ಅಳಿಯ, ಯೇಣ ಗುಡ್ಡೆ, ಪೋಸ್ಟು ಕಟಪಾಡಿ.	72 = 69
379/19-6-59	ಮುದ್ದು ಸುವರ್ಣ, ಕಂಡ್ಡರ ಸುವರ್ಣರ ಮಗ, ಮಲ್ಲಾರು ಗ್ರಾಮ, ಪೋಸ್ಟು ಮಲ್ಲಾರು.	24 = 80
519/1-8-59	ಕೃಷ್ಣ ಸೆಟ್ಟಿ, ಶೀನ ಸೆಟ್ಟ ಅಳಿಯ, ಪಡು ಇರ್ಮಾಡಿ, ಕುತ್ಯಾರು, ಪೋಸ್ಟು ಕುತ್ಯಾರು.	53 = 24
707/30-9-59	ಕೃಷ್ಣಪ್ಪ ಸಾಲಿಯಾನ್, ಹೊರಲ ಪೂಜಾರಿಯವರ ಮಗ, ಪಡು ಗ್ರಾಮ, ಪೋಸ್ಟು ಕಾಪು	52 = 55

Office of the Bank,
KAUP,
9—2—1961.

ಬಿ. ಭಾಸ್ಕರ ಸೆಟ್ಟಿ,
ಏಜೆಂಟ್.

ಮಹಿಳಾಮಂಡಳ

ಸಮಾಜೋನ್ನತಿಯಲ್ಲಿ ಸ್ತ್ರೀಯ ಹೊಣೆಗಾರಿಕೆ

ಸಮಾಜವು ಉನ್ನತವಾಗಬೇಕೆಂದು ಬಯಸುವವರು ಅದು ಪತನಗೊಳ್ಳಲು ಮೂಲಕಾರಣರಾರು ಎಂಬುದನ್ನು ಯೋಚಿಸಬೇಕು. ನಾರಿಯ ಚರಿತ್ರೆ ನಾಡಿನ ಚರಿತ್ರೆ ರೂಪಿಸುವುದರಿಂದ ನಾರಿ ಪತಿತಳಾದರೆ ನಾಡೂ ಪತಿತವಾದಂತೆ ಅಲ್ಲವೆ?

ಪುರುಷ ಮತ್ತು ಸ್ತ್ರೀಯರು ಒಂದು ಬಂಡಿಯ ಎರಡು ಚಕ್ರಗಳು. ಮಾನವನು ಸಮಾಜದ ಅಂಗ. ಪುರುಷನೇ ಇರಲಿ, ಸ್ತ್ರೀಯೇ ಆಗಲಿ ಮಾನವನ ಉನ್ನತಿ ಆದರೆ ಮಾತ್ರ ಸಮಾಜದ ಉನ್ನತಿಯೂ ಆಗುತ್ತದೆ. ವೈಜ್ಞಾನಿಕ ದೃಷ್ಟಿಯಿಂದ ವೀಕ್ಷಿಸಿದಾಗ ನಮ್ಮ ದೇಶವೂ ನಮ್ಮ ಸಮಾಜವೂ ಉನ್ನತಿಯ ಪಥವತ್ತ ಸಾಗುತ್ತಿದೆ. ಆದರೆ, ವೈಚಾರಿಕ ದೃಷ್ಟಿಕೋಣದಿಂದ ನಾವು ನೋಡುವುದಾದರೆ, ದಿನೇದಿನೇ ನಮ್ಮ ಸಮಾಜ ಪತನದತ್ತ ಧಾವಿಸುತ್ತಿರುವುದು ಗೋಚರವಾಗುತ್ತದೆ. ಈಗ ಇದು ಪ್ರಶ್ನೆಯನ್ನು ಎತ್ತಬಹುದು ಸಮಾಜ ತನ್ನೊಳಕ ದೇಶವು ಪತನವಾಗುತ್ತಿರುವುದಕ್ಕೆ ಮೂಲಕಾರಣರಾರು? ನಾನೋ ಅಥವಾ ನರನೋ?

ಪ್ರಾಚೀನ ಕಾಲದಿಂದಲೂ ನಮ್ಮ ಭಾರತೀಯ ನಾಗರಿಕತೆ ಮತ್ತು ಸಂಸ್ಕೃತಿಗಳಲ್ಲಿ ಸ್ತ್ರೀಗೆ ಉಚ್ಚ ಸ್ಥಾನವನ್ನು ಗಳಿಸಿದೆ. ಇದ ಕಾರಣವನ್ನು ನಾವು ಸಂಶೋಧಿಸುವುದಾದರೆ, ಆ ಕಾಲದ ನಮ್ಮ ನಾರಿಯರ ಮಹತ್ವ ಹಾಗೂ ಅವರ ಪವಿತ್ರ ಚರಿತ್ರೆಯೇ ಇದಕ್ಕೆ ಹೇತುವೆಂದು ತಿಳಿಯುವುದು. ಆ ಕಾಲದಲ್ಲಿ ಸ್ತ್ರೀಯು ಮನೆಯೊಡತಿಯಾಗಿ "ಗೃಹಿಣಿ" ಎಂದು ಕರೆಯಲ್ಪಡುತ್ತಿದ್ದಳು. ಆಕೆಯು ದೇವಿಯಂತೆ ಪೂಜಿಸಲ್ಪಡುತಿದ್ದಳು. ಆಕೆ ತನ್ನ ಪೂರ್ವಜರ ಹೆಸರಿದ ತೋರಿಸಿಕೊಟ್ಟು ಮಾರ್ಗದಲ್ಲಿ ನಡೆದು ವರಿಯುತಿದ್ದಳು. ಸತೀ ಅನಸೂಯೆ ಹಾಗೂ ಗಾರ್ಗಿ, ಮೈತ್ರೇಯಿಯರ ಹೆಸರನ್ನು ನಾವು ಮರೆಯುವುದುಂಟೆ? ನಿಜವಾಗಿಯೂ ನಾರಿಯು ಮನೆಯ ಬೆಳಕು; ಮನೆಯ ಸ್ವರೂಪಳು. ಆದರೆ, ಇಂದಿನ ನಾರಿಯರು ಇದನ್ನು ಮನಸ್ವಿಯಾಗಿ ತಿಳಿದುಕೊಳ್ಳುವುದಿಲ್ಲ. ಇಂದಿನ ನಾರಿಯರು ಪತಿತರಾದುದರಿಂದಲೇ ಸಮಾಜದ ಪತನ ಪ್ರಾರಂಭವಾಯಿತು. ನೈತಿಕಸ್ತರವು ಇಳಿಯುವುದಕ್ಕೂ ಅಂದಿನಿಂದಲೇ ಮೊದಲಾಯಿತು. ಸಮಾಜದ ನೈತಿಕ ಉನ್ನತಿಯ ಹೊಣೆಗಾರಿಕೆಯು ನೂರಕ್ಕೆ ನೂರರಷ್ಟು ಸ್ತ್ರೀಯರ ಮೇಲೆಯೇ ಇದೆ; ಇದು ಇರುವುದೂ ಅಗತ್ಯವೇ. ಆದರೆ, ಇಂದಿನ ಪರಿಸ್ಥಿತಿ ಹೇಗಿದೆಯೆ? ನಿಜವಾಗಿಯೂ ವಿರುದ್ಧವಿದೆ. ಇಂದು ಸ್ತ್ರೀಯು ವಿಶ್ವದ ಪ್ರತಿಯೊಂದು ಕ್ಷೇತ್ರದಲ್ಲಿಯೂ ಪುರುಷರಂತೆಯೇ ಮುಮುಕಬಯಸುತ್ತಾಳೆ. ಮನೆಯ ನಾಲ್ಕು ಗೋಡೆಗಳ ಕೋಟೆ, ಮಕ್ಕಳ ಕಿಂಚಾಟ, ಹಿರಿಯರ ಆದೇಶ—ಮೊದಲಾದುವು ದಿನದಿಂದ ದಿನಕ್ಕೆ ಆಕೆಗೆ ಅಪ್ರಿಯವೆನಿಸತೊಡಗಿವೆ. ಈ ಭಾವದಿಂದ—ಬಂಧನದಿಂದ ಆಕೆ ಬಿಡುಗಡೆ ಹೊಂದುವ ತಹತಹ ಪಡುತ್ತಾಳೆ; ಅವಕಾಶವನ್ನು ಹುಡುಕುತ್ತಿರುತ್ತಾಳೆ. ತಾನು ಪುರುಷನಿಗಿಂತ ಯಾವುದರಲ್ಲಿಯೂ ಕಡಿಮೆಯಲ್ಲ; ಆತನಂತೆಯೇ ಧೈರ್ಯ ಸಾಹಸಗಳಿಂದ ಎಲ್ಲೆಲ್ಲಿಯೂ ಓಡಾಡಬಲ್ಲೆ ಎಂಬ ಭಾವನೆ ಆಕೆಯಲ್ಲಿ ಬೆಳೆಯುತ್ತಿದ್ದು ಗೂಡಿನೊಳಗಿನ ಗಿಳಿಯಂತೆ ಸದಾ ಹಾರಲು ಅವ್ವಳಿಸುತ್ತಾಳೆ. ಈ ಕಾರಣದಿಂದಲೇ ಸಮಾಜದ ತಲೆಕೆಳಗಾಗುತ್ತಿರುವಂತೆ ಕೆಲವರಿಗೆ ಭಾಸವಾಗತೊಡಗಿದೆ. ಇಂದು ಸ್ತ್ರೀಯು ಧಾರ್ಮಿಕ ಹಾಗೂ ನೈತಿಕ ವಿಚಾರವು ಮೊದಲಿಗಿಂತ ಸಂಪೂರ್ಣ ಶಿಥಿಲವಾಗಿ ಹೋಗಿದೆ.

ಇಂದು ನಾರಿಯ ಏಕಮೇವ ಆದರ್ಶವೆಂದರೆ, ಯಾವುದೇ ವಿಧಾನವಿರಲಿ ಮನಬಂದಂತೆ ಜೀವನ ಕಳೆಯುವುದು. ಪರಲೋಕವೆಂಬುದು ಆಕೆಯ ಪಾಲಿಗೆ ಉಳಿದಿಲ್ಲ; ಐಹಿಕ ಸುಖಗಳನ್ನು ಮಾತ್ರ ಆಕೆಯು ಬಯಸುತ್ತಾಳೆ. ಪತಂಗ ಅಥವಾ ಸ್ವತಂತ್ರ ಮೈನಾ ಹಕ್ಕಿಯಾಗಿರುವ ನಾರಿ ಸ್ವಾತಂತ್ರ್ಯಪಡೆಯುವ ಸಲುವಾಗಿ ಕೇವಲ ಪಾತರಗಿತ್ತಿ ಅಥವಾ ಮೈನಾ ಮಾತ್ರವಲ್ಲ ಪೂರ್ಣರೂಪದಲ್ಲಿಯೇ ಆಕೆ ಅವುಗಳಂತೆಯೇ ಆಗಿಹೋಗಿದ್ದಾಳೆ. ಆಕೆಯು ಕಣ್ಣುಗಳಿಗಿಂದು ತೋರುವ ಏಕವೇವ ವಸ್ತುವೆಂದರೆ, ಸ್ವಸುಖ ಮಾತ್ರ. ಪರಮಾತ್ಮನ ಉಪಾಸನೆಗೆ ಆಕೆಗೆ ಬಿಡುವಿಲ್ಲ; ದಿನರಾತ್ರಿ ವಿಲಾಸದಲ್ಲಿ ಮುಳುಗಾಡುವುದು, ಸ್ವಾತಂತ್ರ್ಯದ ಅಶುದ್ಧ ಅರ್ಥ ಕಲ್ಪಿಸಿಕೊಳ್ಳುವುದು, ಪ್ರತಿಪ್ರಕಾರಗಳಿಂದಲೂ ತನ್ನ ವಿವಿಧ ಇಚ್ಛಾಪೂರ್ತಿ ಮಾಡಿಕೊಳ್ಳುವುದು ಆಕೆಯ ಜೀವನದ ಉದ್ದೇಶವಾಗಿ ಪರಿಣಮಿಸಿವೆ. ಆಕೆ ನಾರೀತ್ವವನ್ನು ಮರೆತುಬಿಟ್ಟು ಪುರುಷನೊಡನೆ ಭುಜಗೊಟ್ಟು ನಡೆಯಲು ಬಯಸುತ್ತಾಳೆ.

ಪುರುಷರಲ್ಲಿರುವ ಅಪೂರ್ವ ಶಕ್ತಿ ಸ್ತ್ರೀಯರಲ್ಲಿದೆ ಅದೇ ತಾಯ್ತನದ ಶಕ್ತಿ. ತಾಯಿಯ ಸಂಸ್ಕಾರಗಳ ಪ್ರಭಾವವು ಆಕೆಯ ಮಕ್ಕಳ ಮೇಲೂ ಬೀಳದಿರುವುದಿಲ್ಲ. ತಾಯಿಯೊಡನಿಲ್ಲ ದೂಷಿತ ವಿಚಾರಗಳಿಗೆ ಮನಗೊಟ್ಟರೆ, ಆಕೆಯಲ್ಲಿ ಹುಟ್ಟಿದವರೂ ಅಂತೆಯೇ ಆಗುವರು. ಮಕ್ಕಳ ಮೆದುಳು ಖಾಲಿ ಕಾಗದದ ಹಾಳೆಯಂತಿರುತ್ತದೆ; ಇದರ ಮೇಲೆ ಬೀಳುವ ಅರಂಭದ ಗೀರುಗಳು ಅವುಗಳ ಜೀವಿತಾಂತ್ಯದವರೆಗೂ ಉಳಿಯುತ್ತವೆ. ತಾಯಿಯ ಆಚಾರ-ವಿಚಾರ—ಆಹಾರ—ವಿಹಾರಗಳೇ ಮಗುವಿನ ಭವಿಷ್ಯವನ್ನು ರೂಪಿಸಬಲ್ಲ ಕರ್ತಾರ. ಅಪಂಶುದ್ಧ ಜೀವನ ನಡೆಸುವ ನಾರಿಯರ ಸಂತಾನ ಉಜ್ವಲ ಚರಿತ್ರವಾಗುವುದಾದರೂ ಹೇಗೆ?

ನಾರಿಯ ಈ ತೊಳಕು ಹಾಗೂ ನಗ್ನರೂಪವನ್ನು ನೋಡಿ ಪುರುಷನೂ ತನ್ನ ಕರ್ತವ್ಯವನ್ನು ಮರೆತುಬಿಡುತ್ತಾನೆ. ಸ್ತ್ರೀಯು ತನ್ನ ತಾಯಿ ಅಥವಾ ಸೋದರಿ ಎಂಬ ಪೂರ್ವಜರ ಉಕ್ತಿಯನ್ನೂ ಮರೆಯುತ್ತಾನೆ. ಪುರುಷರು ಇಂದು ತಪ್ಪು ದಾರಿಯನ್ನು ತುಳಿಯುತ್ತಾರೆ ನಿಜ; ಆದರೆ, ಇದಕ್ಕೆ ಬಹುಮಟ್ಟಿಗೆ ಸ್ತ್ರೀಯರೇ ಕಾರಣವಲ್ಲವೆ? ನಾರಿಯು ಸಮಾಜದ ಪಂಚಾಂಗ. ಇದು ಗಟ್ಟಿಮಟ್ಟಾಗಿದ್ದರೆ ಸಮಾಜರೂಪೀ ಭವನವು ನಿರ್ದೋಷವಾಗಿ, ಸುದೃಢವಾಗುವುದು. ಆದುದರಿಂದ ಸಮಾಜದ ಉನ್ನತಿಯಾಗಬೇಕಾದರೆ, ಸ್ತ್ರೀಯರ ಆಚಾರ ವ್ಯವಹಾರಗಳು ಉನ್ನತವಾಗಬೇಕು.

ನಾರಿಯರು ದಾರಿತಪ್ಪಲು ಪುರುಷನೂ ಕಾರಣನಾಗಬಹುದು. ಆದರೆ, ಬೀಡಿಯ ಕಾಮಣ್ಣನವರ ಕಾಮಕೇಳಿಗೆ ಕಾಮಿನಿಯೇ ಕಾರಣಳೆಂಬುದನ್ನು ಸಂಪೂರ್ಣ ಅಲ್ಲಗಳೆಯುವಂತಿಲ್ಲ. ಇದನ್ನೇ ನಾರಿ—ನರರಮಟ್ಟಿಗೂ ಅನ್ವಯಿಸಿಕೊಂಡರೆ, ಸಮಾಜವು ಭವ್ಯವಾಗಬೇಕಾದರೆ, ಪುರುಷನಿಗಿಂತಲೂ ಸ್ತ್ರೀಯ ಉತ್ತರದಾಯಿತ್ವ ಅಧಿಕ. ಆಕೆಯು ತನ್ನ ಕರ್ತವ್ಯವನ್ನು, ಹೊಣೆಗಾರಿಕೆಯನ್ನು ಸರಿಯಾಗಿ ಅರ್ಥಮಾಡಿಕೊಂಡರೆ, ಅದರಂತೆ ನಡೆಯಲು ತೊಡಗಿದರೆ, ಮುಂದಿನ ಜನಾಂಗವು ಉನ್ನತವಾಗುವುದು. ದೇಶದ ನಾಗರಿಕರು ಸಚ್ಚಿಂತ್ರರೆನಿಸುವರು.

(ಹಿಂದೀ ಲೇಖನದ ಆಧಾರದಿಂದ)



ಭಾರತದರ್ಶನ.

ವಿವಿಧ ಮಾದರಿಯ ಸಹಕಾರಿ ಸಂಸ್ಥೆಗಳು ಭಾರತದ ಎಲ್ಲೆಡೆಗಳಲ್ಲಿ ಸ್ಥಾಪನೆಗೊಂಡಿವೆ. ಅಧಿಕೋತ್ಪತ್ತಿಯನ್ನು ಗಳಿಸಿ ಅದನ್ನು ಉತ್ತಮ ವಿತರಣೆ ಮಾಡುವ ಆಶೆಯು ಒಟ್ಟುಗೂಡಿ ದುಡಿಯುವುದನ್ನು ನಮಗೆ ಕಲಿಸಿತು.

ಗುಜರಾತಿದ ಕೈರಾ ಜಿಲ್ಲೆಯ ಗಂಭೀರ ಎಂಬಲ್ಲಿನ ಮಹಿಳಾಗರ ಬಾಥಾ ಸಹಕಾರಿ ವ್ಯವಸಾಯ ಸಂಘದ ಕೃಷಿಕ ಸದಸ್ಯರು ಕಾರ್ಯಮಗ್ನರಾಗಿರುವುದನ್ನು ಈ ಚಿತ್ರದಲ್ಲಿ ಕಾಣಬಹುದು.

ಬದಲಾವಣೆಗೆಂದು ಒಮ್ಮೆ
ಎಸ್. ಆರ್. ಬೀಡಿಯನ್ನು
ಬಳಸಿ ನೋಡಿರಿ,
ಅಂದರೆ ನೀವು ತೆಪ್ಪದೆ ಅದನ್ನೇ
ಎಂದೆಂದಿಗೂ ಕೊಂಡು
ಕೊಳ್ಳುವಿರಿ.



S.R. BEEDI WORKS,
UDIPI, S.K.

ಎಲ್ಲಾ ಕಡೆಗಳಲ್ಲಿಯೂ ಮಾರಲ್ಪಡುತ್ತವೆ.

ie Moolky Bank, Ltd.
MULKI.
ಫೋಸಿಟು ಮೇಲಣ ಆಕರ್ಷಕ
ಬಡ್ಡಿ ದರಗಳು—
ರಿಂದ 4 ತಿಂಗಳ ವರೆಗೆ 4%
5 ,, 12 ,, 4½%
3 ,, 24 ,, 4½%
8,000/- ಮತ್ತು ಮೇಲಣ
ಡಿಪೋಸಿಟಿಗೆ ¼% ಹೆಚ್ಚು
ವಿಂಗ್ಸ್ ಬೇಂಕ್ ಲೆಕ್ಕಕ್ಕೆ 2½%
ಲ್ತಿ ಶೇವಣಾತಿಗೆ ¼%
ಸುಲಭ ಬಡ್ಡಿ ದರದಲ್ಲಿ ಚಿನ್ನಾಭರಣ
ಮೇಲೆ ಮತ್ತು ಇತರ ರೀತಿಯಲ್ಲಿ
ಕೊಡಲಾಗುವುದು.
ಯಂ. ಆರ್. ಯಬ್. ಪೂಂಜ,
ಮೆನೇಜರ್,
ಮೂಲ್ಕಿ ಬೇಂಕ್ ಲಿ. ಮುಲ್ಕಿ.

ಸೂಚನೆ

"ನವಯುಗ"ದಲ್ಲಿ ಪ್ರಕಟಿಸಲಾಗಿ ಲೇಖನಗಳನ್ನು ಆಮಂತ್ರಿಸಲಾಗಿದೆ. ಇವು ಚಿಕ್ಕದಿರ ಬೇಕಲ್ಲದೆ ಕಾಗದದ ಒಂದೇ ಮಗ್ಗುಲಿನಲ್ಲಿರಬೇಕು. ಲೇಖಕಬಂಧುಗಳು ಸಹಕರಿಸಬೇಕಾಗಿ ವಿನಂತಿ. —ಸಂ.ನ.

NAVAYUGA WEEKLY, UDIPI.
REGD. NO.BG. 176

16-2-1961

LICENSE NO. 31
Licensed to Post without Prepayment

ಕ್ಷ-ಕಿರಣ

ಭವರೋಗ ರಾಮಬಾಣ—ಮರವೆ

ಮರವೆಯಿಂದಲೆ ಇಹವು, ಮರವೆಯಿಂದಲೆ ಪರವು, ಮರವೆ ಯೊಂದಿಲ್ಲದಿರೆ ಮರಳಿನಾ ಈ ಜಗದಿ ಹುರುಳಿಲ್ಲವೆಂದ.....

ಶ್ರೀ ನಾಗರಾಜ, 'ಹಿಂದೀರತ್ನ', ಉಜಿರೆ.

ಇಪ್ಪತ್ತಾರರ ನವಹರೆಯದ ಯುವಕ, ಇಪ್ಪತ್ತೊಂದರ ಯುವತಿ— ನವವಿವಾಹಿತರು.ಒಬ್ಬರನ್ನೊಬ್ಬರು ಅತಿಯಾಗಿ ಪ್ರೀತಿಸುತ್ತಾರೆ. ಒಬ್ಬರ ಮೇಲೊಬ್ಬರಿಗೆ ಎಲ್ಲಿಲ್ಲದ ಆಕ್ಕರೆ. ಗಂಡನಿಗೆ ನೂರೈವತ್ತು ರೂಪಾಯಿಯ ನೌಕರಿಯಿದೆ. ಸಂಜೆ ಆಫೀಸು ಬಿಟ್ಟೊಡನೆ ಗಂಡ ಮನೆಗೆ ಬರುತ್ತಾನೆ. ಇಬ್ಬರೂ ವಾಕಿಂಗಿಗೆ ಇಲ್ಲವೇ ಸಿನೇಮಾಕ್ಕೆ ಜೊತೆಯಾಗಿ ಹೋಗುವರು. ನಗುವರು ಹುಚ್ಚುಚ್ಚು ಮಾತಾಡುವರು. ಅಂತೂ ಆವರನೊಂದು ಆದರ್ಶ ದಾಂಪತ್ಯ. ಅಪೂರ್ವ ಜೋಡಿ!

ಒಂದು ದಿನ ಎಂದಿನಂತೆ ಆಫೀಸಿನಿಂದ ಬರಬೇಕಾದ ಸಮಯಕ್ಕೆ ಪತಿಬರಲಿಲ್ಲ. ಅರ್ಧಗಂಟೆ ಕಡವಾಗಿದೆ. ಒಂದು ಕಾರು ಬಂದು ಮನೆಯ ಅಂಗಳದಲ್ಲಿ ನಿಂತಿತು. ನಾಲ್ಕು ಜನರು ಆಕೆಯ ಪತಿಯ ಶವವನ್ನು ಕಾರಿನಿಂದ ಇಳಿಸಿದರು, ಬೀದಿಯಲ್ಲಿ ಬರುವಾಗ, ತನ್ನಾಕೆಗೆ ಪ್ರಿಯವಾದ ಹೂವನ್ನು ಕೊಳ್ಳಲೆಂದು ಹೋದ ಪತಿ, ಲಾರಿಯೊಂದರ ಚಕ್ರದಡಿಗೆ ಬಿದ್ದು ಗತಪ್ರಾಣನಾಗಿದ್ದ. ಸಂಬಂಧಿಕರಿಗೆಲ್ಲಾ ಕರೆಹೋಯ್ತು. ಶವದಹನ ನಡೆದಾಗ ಆ ತರುಣ ಪತ್ನಿಯ ಗೋಳೇ ಗೋಳು! ತನ್ನನ್ನು ಬಿಡಿ- ಚಿತೆಯನ್ನೇರುತ್ತೇನೆ—ಎಂದು ಬೊಬ್ಬಿರಿಯುತ್ತಾಳೆ. ಎಲ್ಲರೂ ಸೇರಿ ತಡೆದಿಡುತ್ತಾರೆ.

ಎರಡು ತಿಂಗಳು ಕಳೆಯಿತು. ಆ ವಿಧವೆಯ ಮನೆಗೆ ಹೋಗಿ ನೋಡಿದರೆ, ಹಿಂದಿನ ಆ ಕೆದರಿದ ಕೂದಲು, ಊದಿದ ಕಣ್ಣು—ಎಂದೂ ಕಾಣಿಸದು! ಶಾಂತ ಗಂಭೀರವಾಗಿದೆ — ಮುಖ. ಹತ್ತಿರದಲ್ಲೇ ನಾಲ್ಕಾರು ಪತ್ರಿಕೆಗಳು — ಒಂದನ್ನಾಕೆ ಓದುತ್ತಿರುವಳು. ಬಹುಶಃ ಯಾವುದೋ ವಾದದ ಕತೆಯಿರಬೇಕು.

ಇನ್ನೂ ಹಿಂದೆರಡು ತಿಂಗಳು ಕಳೆದ ಒಳಿಕ ನೀವಾಕೆಯನ್ನು ಸಿನಿಮಾ ಮಂದಿರದ ಬಳಿ ಕಂಡರೆ— ಆಕೆ, ಯಾವುದೋ ಒಂದು ಪ್ರಣಯ ಕತೆಯ ಸಿನಿಮಾ ನೋಡಲು—ಬಂದುದನ್ನು ಗೊತ್ತು ಹಚ್ಚಬಹುದು! ಮತ್ತಷ್ಟು ಗಮನವಿರಿಸಿದಲ್ಲಿ, ಆವಳ ಜೊತೆಗೆ ಇನ್ನೋರ್ವ ಯುವಕನನ್ನೂ ಕಾಣಬಹುದು! ಬಹುಶಃ ಜೀವನೆಂಮನೆಯವನಿರಬಹುದು. ಸಿನಿಮಾ ಬಿಟ್ಟೊಡನೆ ಇಬ್ಬರೂ ಒಂದೇ ಜಟಕಾ ಬಂಡಿಯನ್ನೇರುವುದನ್ನು ಕಂಡು ಮತ್ತಷ್ಟು ಚಕಿತರಾಗಬಹುದು!

ಇದಾದ ನಾಲ್ಕಾರು ತಿಂಗಳಲ್ಲೇ— ಬ್ರಹ್ಮ ಸಮಾಜದಲ್ಲೋ ಅಥವಾ ಬೇರಿನ್ನೆಲ್ಲೋ ಆವರೀರ್ವರ ವಿವಾಹ ನಡೆಯಿತೆಂಬ ವಂದಿಯನ್ನು ಸ್ಥಳೀಯ ಪತ್ರಿಕೆಗಳಲ್ಲಿ ಕಾಣಬಹುದು.

—ಇದೀಗ ನಮ್ಮ ಸಮಾಜದಲ್ಲಿ—ಇಂದಿನ ದಿನಗಳಲ್ಲಿ ಕಾಣಬಹುದಾದ ಒಂದು ಘಟನೆ. ಆರಂಭದಿಂದ ಕೊನೆಯ ತನಕ ಹಲವಾರು ಘಟ್ಟಗಳಲ್ಲಿ ಆ ಯುವತಿಯ ಮನಸ್ಸಿನ ಮೇಲೆ—ಮರೆವು ತನ್ನ ಕೈವಾಡವನ್ನು ಹೇಗೆ ತೋರಿಸಿತೆಂಬುದನ್ನು ಕಾಣುತ್ತೇವೆ. ಪತಿಯ ಚಿತೆಯನ್ನೇರುತ್ತೇನೆ —ಎಂದ ಆ ಯುವತಿಯನ್ನು ತಡೆಯದಿದಿದ್ದಲ್ಲಿ—ಮರೆವಿನ ಸಂಜೀವಿನಿ ತನ್ನ ಕಾರ್ಯಕೈಗೊಳ್ಳದಿದ್ದಲ್ಲಿ ಆಕೆಯ ಪುನರ್ವಿವಾಹವೆಂದಾದರೂ ಸಂಭವನೀಯವೇ?

ಮನುಷ್ಯ ತನ್ನ ಜೀವನದಲ್ಲಿ ಎದುರಿಸುವ—ಎದುರಿಸಬೇಕಾಗಿ ಬರುವ ಸುಖ ದುಃಖಗಳು ಹಲವಾರು. ತಂದೆ, ತಾಯಿ, ಅಣ್ಣ—ತಂಗಿ, ಹೆಂಡತಿ, ನಾದಿನಿ—ಇತ್ಯಾದಿಯಾಗಿ ಅಪ್ತರನ್ನು ಕಳಕೊಂಡಾಗ ಈ ಪ್ರಪಂಚವೇ ನಿಃಸಾರವೆನ್ನಿಸುತ್ತದೆ; ಆಘಾತವನ್ನೆದುರಿಸಲಾರದೆ, ನಿಃಸಹಾಯನಾಗಿ ಆತ್ಮಹತ್ಯೆಗೇ ಮನ ಮುಂದಾಗುತ್ತದೆ. ತಮ್ಮನ್ನು—ತಮ್ಮ ಮನಸ್ಸನ್ನು ಹತೋಟಿಯಲ್ಲಿಟ್ಟುಕೊಳ್ಳಬಲ್ಲವರು- ಮಾತ್ರ ಆತ್ಮಹತ್ಯದಿಂದ ಪಾರಾಗುವರು.

ಆದರೆ ನಾಲ್ಕು ದಿನ ಕಳೆಯಲಿ. ಆ ದುಃಖದ ಭಾರ ಸ್ವಲ್ಪ ಹಗುರೆನಿಸುವುದು. ಒಂದು ವರ್ಷ ಕಳೆದಾಗ, ವಸಂತಾದಿ ಋತುಗಳ ಬದಲಾವಣೆಯಾದಾಗ, ಪ್ರಕೃತಿಯೇ, ಪ್ರಸಂಚವೇ, ಬದಲಾದಾಗ 'ಪರಿಸ್ಥಿತಿಯ ಶಿಶು'ವೆನಿಸಿದ ಮನುಷ್ಯ ಬದಲಾಗದಿರಲಾರ. ಆಗ ಆ ದುಃಖ ಎಲ್ಲೋ ನೆನಪಿನ ಮೂಲೆಯಲ್ಲಿ ಸೇರಿಹೋಗುತ್ತದೆ. ಹತ್ತಿಪ್ಪತ್ತು ವರ್ಷ ಕಳೆದಾಗಲಂತು ಅದಕ್ಕಿಂತ ಹೆಚ್ಚಿನ ದುಃಖ ಅನುಭವಿಸಿಯೋ—ಇಲ್ಲವೇ—ಆ ದುಃಖವನ್ನು ಮರಿಸಬಲ್ಲ ಸುಖವನ್ನು ಅನುಭವಿಸಿಯೋ—ಅಂತೂ ಮನುಷ್ಯ ಹಳೆಯ ನೋವನ್ನು ನುಂಗಿಬಿಟ್ಟಿರುತ್ತಾನೆ. ಬೇರೊಬ್ಬರು ಜ್ಞಾಪಿಸಿಕೊಟ್ಟಾಗ ನೆನಪು ಮಾಡಿಕೊಳ್ಳಲು ಹತ್ತಾರು ನಿಮಿಷ ಬೇಕಾಗುವಷ್ಟೂ ಮರೆತು ಬಿಡಬಹುದು.

ಇಂತಹ ಸ್ಥಿತಿಗೆ ತಲಪುವುದು ದೌರ್ಬಲ್ಯವೆಂದರೂ ಸರಿಯೇ! ಅದರೂ ಅದು ಅವನ ಪಾಲಿಗೊಂದು ವರದಾನವಾಗಿ ಪರಿಣಮಿಸಿದೆ. ಇಲ್ಲದಿದ್ದರೆ, ಭೂಲೋಕ ತನ್ನ ಅಲ್ಪ ದುಃಖಗಳ ಬಗ್ಗೆ ಕೂಡಾ ಶೋಕಿಸುತ್ತಾ ಮಾನವಲೋಕವೇ 'ರೋದನಾಲಯ'ವಾಗಿ ಪರಿಣಮಿಸಿ, ಜನರೆಲ್ಲಾ ಅಳುಬುರುಕರಾಗಿ ಬಿಡುತ್ತಿದ್ದರು.

ಅನ್ನು ಮೊತ್ತವಲ್ಲದೆ ಕಂಡದ್ದು, ಕೇಳಿದ್ದು, ಊಹಿಸಿದ್ದು, ಯೋಚಿಸಿದ್ದು,— ಎಲ್ಲವನ್ನೂ ಸದಾಕಾಲವೂ ಜ್ಞಾಪಕದಲ್ಲಿ ಇಟ್ಟುಕೊಂಡರೆ, ನಮ್ಮ ಮಿದುಳೊಂದು ಭಾರೀ ಉಗ್ರಾಣದಂತಾಗಿ, ಅದೊಮ್ಮೆಗೆ ಬಂದೀತು! ಅಲ್ಲಿಂದ ಬೇಕಾದುದು ಬೇಕಾದುದೂ ಎಲ್ಲವೂ ಸೇರಿಕೊಂಡಲ್ಲಿಂದ ನಮಗೆ ಬೇಕಾದುದನ್ನು ಹೆಕ್ಕಿಕೊಳ್ಳುವುದೂ ಕಷ್ಟವಾದೀತು ಗಾಳಿ ಹೆಚ್ಚಾಗಿ ತುಂಬಿದ ಕುಟ್ಟೆಂಡಿನಂತಾದೀತು! ಅಂದರೆ ಹುಚ್ಚುಹಿಡಿದೀತು ಪ್ರಪಂಚವೊಂದು ಹುಚ್ಚರ ಆಸ್ಪತ್ರೆಯಾದೀತು!

ಅದಕ್ಕಾಗಿಯೇ ಮನಃಶಾಸ್ತ್ರಜ್ಞರು 'ದುಃಖ' ನೋವುಗಳನ್ನು ಶವಸಂಗೊಳಿಸಬಲ್ಲ ಸಿದ್ಧೌಷಧ-ಮರವೇ ಎಂದು ಕರೆದಿರುವುದು!

ಕನ್ನಡಿಗರು ಹತವೀರರಾಗಿದ್ದಾರೆಯೆ?

(ಂನೇ ಸುಟಿದಿಂದ)

ರಾಜ್ಯ ಸಂಪ್ರತ್ತು ಹೆಚ್ಚುವುದೆಂದೂ ಮೊದಲಾಗಿ ತಿಳಿದುಕೊಳ್ಳಬೇಕು.

ರಾಷ್ಟ್ರೀಯ ಆರ್ಥಿಕ ಸಂಶೋಧನಾ ಮಂಡಳಿಯು ಇತ್ತೀಚೆಗೆ ಒಂದು ವರದಿಯನ್ನು ಆರ್ಪಿಸಿ ಮಂಗಳೂರು ಬಂದರವನ್ನು ಒಂದು ಆಳವಾದ ಬಂದರವಾಗಿ ಬೆಳೆಸಬೇಕೆಂದೂ ಹಾಸನ-ಮಂಗಳೂರು ರೇಲುದಾರಿಯನ್ನು ತಡವಾಡದೆ ರಚಿಸಬೇಕೆಂದೂ ಮಲ್ಪೆಯನ್ನು ಹಡಗುಕಟ್ಟುವ ಅಥವಾ ಮೀನುಗಾರಿಕೆಯ ಬಂದರವಾಗಿಯೋ ವಿಶಿಷ್ಟರೀತಿಯಲ್ಲಿ ಬೆಳೆಸಬೇಕೆಂದೂ ಹೇಳಿದೆಯೆಂದು ತಿಳಿದು ಬರುತ್ತದೆ. ಈ ವರದಿಯ ಹೇಳಿಕೆಗಳು ಯಾವ ಘಟ್ಟಕ್ಕೆ ಬಂದು ನಿಲ್ಲುವುದೆಂದು ನಾವು ಈಗಲೇ ಹೇಳುವಂತಿಲ್ಲ. ಕೇವಲ ಕೇಂದ್ರಕೊಡುತ್ತದೆ, ಕೊಡುವಾಗಕೊಂಡು ಕೊಳ್ಳುವ" ಎಂಬ ನೀತಿಯನ್ನು ನಮ್ಮ ಸರಕಾರ ಹಿಡಿದುದರಿಂದಲೇ ನಾವು ಬಯಸ್ಸಿದ್ದೆಲ್ಲಾ ಬೇರೆ ರಾಜ್ಯಗಳ ಪಾಲಿಗೆ ಹೋಯಿತು. ಕೆಜ್ಜೆದೆಯ ಕನ್ನಡಿಗರು ಕಸುವಿಲ್ಲದವರೆಂಬುದನ್ನೂ ಕನ್ನಡಿಗರ ವೈಸೂರು ಸರಕಾರ ನಿರ್ಬಲವೆಂಬುದನ್ನೂ ಇದುವರೆಗೆ ತೋರಿಸಿಕೊಟ್ಟಂತಾಯಿತು.

ಕನ್ನಡಿಗರೂ ಅವರ ಸರಕಾರವೂ ಇದುವರೆಗೆ ಕೈಸೀಡಿ ನಿರೀಕ್ಷಿಸಿದುದು ಸಾಕು. ನಮ್ಮ ವಿಧಾನ ಸಭೆ—ಮಂಡಲಗಳ ಸದಸ್ಯರೂ ಲೋಕ ಸಭೆ—ರಾಜ್ಯ ಸಭಾ ಸದಸ್ಯರೂ ಕನ್ನಡದ ಮುಖ್ಯ ಆವಶ್ಯಕತೆಯಾದ ಬಂದರಗಳ ಅಭಿವೃದ್ಧಿ ಮತ್ತು ಒಳನಾಡು ಹಾಗೂ ಬಂದರ ನಗರಗಳ ಸಂಬಂಧವಾಗಿ ಸಾರಿಗೆ ವ್ಯವಸ್ಥೆಯನ್ನು ಪಡೆದುಕೊಳ್ಳಲು ಏಕ ಕಂಠದಿಂದ ಕೂಗಬೇಕು. 'ಪರಮೇಶ್ವರೋವಾ ದಿಲ್ಲೀಶ್ವರೋವಾ' ನೀತಿಯನ್ನು ಆವಶ್ಯ ಬಿಟ್ಟುಬಿಡಬೇಕು. ಕನ್ನಡನಾಡಿನ ಅಯೂತ ನಿರ್ದೋಷಗಳನ್ನು ನಿರ್ವಹಿಸಲು ಸಮರ್ಥವಾದ ಬಂದರಗಳನ್ನು ಕನ್ನಡನಾಡಿನಲ್ಲಿಯೇ ಕಟ್ಟುವಂತೆ ರಚನಾತ್ಮಕ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕು. ಕನ್ನಡನಾಡಿನ ಸರಕಾರ ತನ್ನೆಲ್ಲಾ ಶಕ್ತಿಯನ್ನು ಕೇಂದ್ರೀಕರಿಸಿ ಈ ಬಗ್ಗೆ ಹೋರಾಡಬೇಕು. ದ್ವಿತೀಯ ಯೋಜನೆಯ ಅಂತಿಮ ಘಟ್ಟದಲ್ಲಿ ಕನ್ನಡಿಗರ ಸುಸಂಘಟಿತ ಪ್ರಯತ್ನದ ಫಲವಾಗಿ ಶರಾವತಿಕೊಳ್ಳದ ಯೋಜನೆಯು ಅಡಕವಾಗಿರುವುದನ್ನು ಸಂಸ್ಮರಿಸಬೇಕು. ಅದೇ ರೀತಿಯ ಅದಕ್ಕಿಂತಲೂ ಹೆಚ್ಚಿನ ಪ್ರಯತ್ನ ಬಂದರ- ರೇಲು ದಾರಿಗಳ ಬಗ್ಗೆ ನಡೆಯಬೇಕು; ತ್ವರಿತದಲ್ಲಿಯೇ ಜಯಶಾಲಿಯಾಗಬೇಕು. ಕನ್ನಡಿಗರಲ್ಲಿಯೂ ಕೆಚ್ಚು ಇದೆಯೆಂಬುದನ್ನು ತೋರಿಸಿಕೊಡಬೇಕು.

ಆದರೆ, ಈ ರೀತಿ ನಡೆಯಲು ಕನ್ನಡಿಗರು ಸಿದ್ಧರಿರುವರೆ? ಕನ್ನಡಿಗರು, ಕನ್ನಡಿಗರ ಸರಕಾರದ ಬಲವೆಲ್ಲ ಚಲ್ಲಾಪಿಲ್ಲಿಯಾಗಿ ಹರಡಿ ದುರ್ಬಲವಾಗುವುದನ್ನು, ಆವಶ್ಯಕತೆಯಿಲ್ಲದಲ್ಲಿ ಉಪಯೋಗವಾಗುವುದನ್ನು ನಾವು ವೀಕ್ಷಿಸುವಾಗ, ಕನ್ನಡಿಗರಲ್ಲಿ ಅನೇಕತೆ, ಅತಂತ್ರತೆ, ಅಕರ್ಮಣ್ಯತೆಗಳು ತಾಂಡವವಾಡಿ ಅಧಿಕಾರಕ್ಕಾಗಿ ಲಾಭಕ್ಕಾಗಿ ಬೇರೆ ಬೇರೆಯವರು ಬೇರೆ ಬೇರೆಯಾಗಿ ತಮ್ಮ ತಮ್ಮೊಳಗೆ ಕತ್ತಿ ವಸೆಯುತ್ತಿರುವಾಗ ಕನ್ನಡಿಗರನ್ನು ಕನ್ನಡಾಂಬೆಯೇ ಕೈಬಿಟ್ಟಿದ್ದಾಳೆನ್ನಬೇಕು. ಆದರೆ, ಇದೇ ದುಸ್ಥಿತಿ. ಮುಂದಕ್ಕೂ ಮುಂದುವರಿಯಗೊಟ್ಟರೆ, 'ಸ್ವರ್ಣಾದನಾಡು ಕನ್ನಡನಾಡು" ಉಂಡುಣಲಿಕ್ಕಿರದ ಅರ ನೋಲಗವಾದೀತು. ಆದುದರಿಂದ ಕನ್ನಡಿಗರೆಲ್ಲರೂ ಒಂದಾಗಿ ಮೊದಲು ಕೂಡಬೇಕು—"ಕನ್ನಡಿಗರು ಒಂದೇ; ಕನ್ನಡ ಒಂದೇ"—ಆಗ ನಮ್ಮ ಬೇಡಿಕೆಗಳನ್ನು ತಿರಸ್ಕರಿಸುವ ಧೈರ್ಯವೂ ದಿಲ್ಲೀಶ್ವರರಿಗೆ ಬರಲಾರದು.

ಪಿಗ್ಮಿ—೧

ಪ್ರಸಿದ್ಧ ಮನಶ್ಶಾಸ್ತ್ರಜ್ಞ ಸ್ಕ್ಯಾಕೆಡೂಗಲ್ ಹೇಳಿರುವಂತೆ ಮಾನವನ ಸಹಜ ಗುಣಗಳಲ್ಲಿ ಸಂಗ್ರಹ ಪ್ರವೃತ್ತಿ—ಕೂಡಿಡುವ ಬುದ್ಧಿ, ಉಳಿತಾಯ ಭಾವನೆಯೂ ಒಂದು. ಮಾನವನ ಜೀವನದ ಹೋರಾಟಕ್ಕೆ, ವಿಜಯಕ್ಕೆ ಬೇಕಾದ ಎಲ್ಲಾ ಶಕ್ತಿ-ಆವಶ್ಯಕತೆಗಳನ್ನು ಪರಮಾತ್ಮನು ಬಾಲ್ಯದಲ್ಲಿಯೇ ದೇಜರೂಪದಲ್ಲಿ ಒದಗಿಸುವನು. ಅಂತೆಯೇ ಸಂಗ್ರಹ ಪ್ರವೃತ್ತಿಯು ಕೂಡಾ. ಇದನ್ನು ಚಿಕ್ಕ ಮಕ್ಕಳಲ್ಲಿ ನಾವು ಧಾರಾಳವಾಗಿ ಕಾಣಬಹುದು. ಪುಟ್ಟ ಬಾಲಕರು ತಮ್ಮ ಕುತೂಹಲವನ್ನು ಕೆರಳಿಸುವ ವಸ್ತುಗಳನ್ನು ಆಸ್ಥೆಯಿಂದ ಸಂಗ್ರಹಿಸುತ್ತಿರುವುದನ್ನು ನೋಡಿದವರಾರು?

ಈ ಸಂಗ್ರಹಬುದ್ಧಿಯು ಅಭಿವೃದ್ಧಿಯೂ ಆಗಬಹುದು; ಉಂಟಾಗೊಳ್ಳಲೂ ಬಹುದು. ಅದು ಸಂದರ್ಭ ಮತ್ತು ಅವಕಾಶಗಳನ್ನಾಧರಿಸಿದೆ. ಯಾವುದೇ ಒಂದು ಕ್ರಿಯೆ ಮತ್ತೆ ಮತ್ತೆ ಆ ವರ್ತನಗೊಂಡಲ್ಲಿ ಅದು ಬಲಿತು ಅಭ್ಯಾಸವಾಗಿ ಮಾರ್ಪಡುವುದು — ಕೂರಲು ಕಲಾವಿದನ ಕೈಬೆರಳುಗಳು ಅವಸಿಗೆ ತಿಳಿಯದೆಯೇ ಮುಂದು ಮುಂದಕ್ಕೆ ಚಲಿಸುವಂತೆ,

ಕೂಡಿಡುವ ಗುಣವೂ ಹಾಗೆಯೇ—
ಉಳಿತಾಯದ ಭಾವನೆಯು ಬಲಿತು
ಸ್ಥಿರ ಅಭ್ಯಾಸವಾಗಲು; ಸುಲಭ ಸಾಧ್ಯವಾಗಲು:

-ಪಿಗ್ಮಿ

ದಿ ಕೆನರಾ ಇಂಡಸ್ಟ್ರಿಯಲ್ & ಬೇಂಕಿಂಗ್ ಸಿಂಡಿಕೇಟ್ ಲಿಮಿಟೆಡ್

Edited, Printed & Published by K. H. Shetty, at the Navayuga Press, Udipi, S. India.

40th year of publication. 23-2-1961 ೪೦ನೇ ವರ್ಷ

ಸಂಪುಟ ೪೦ Vol. 40

ನವಯುಗ

ಸಂಚಿಕೆ ೨೪ No. 24

ಬೆಲೆ ೧-13

ಪ್ರಚಲಿತ ಪ್ರಸಂಗ

ನಾಗಾರಾಜ್ಯದಲ್ಲಿ ನವಮನ್ವಂತರ

ಭಾರತ ಸರಕಾರವು ನಾಗಾನಾಯಕರೊಡನೆ ಮಾಡಿಕೊಂಡ ಒಡಂಬಡಿಕೆಯಂತೆ ನಾಗಾರಾಜ್ಯದಲ್ಲಿ ಮಧ್ಯಮಿಕ ಮಂಡಳವು ಉಘ್ಘಾಟನೆಯಾಯಿತು. 'ಅಹಿಂಸಾಪರರಾಗಿ ಕರ್ತವ್ಯಪಾಲಕರಾಗಿ ಶಾಂತಿ ಸ್ಥಾಪಿಸುವಲ್ಲಿ ನಾಗಾಜನರು ಹಿಂದುಳಿಯಬಾರದು.

ನಾಗಾ ಪ್ರದೇಶದ ಜನಕಾಮನೆಯನ್ನು ಅರಿತುಕೊಂಡು ಅದನ್ನು ಪೂರೈಸುವ ಆಶ್ವಾಸನವಿತ್ತ ಭಾರತ ಸರಕಾರವು ಇದೀಗ ಅವರ ಬೇಡಿಕೆಯನ್ನು ಮನ್ನಿಸುವ ಕಾರ್ಯಕ್ರಮಗಳಲ್ಲಿ ತೊಡಗಲು ಆರಂಭವಾಡಿದೆ. ಪ್ರತ್ಯೇಕ ಸ್ವತಂತ್ರ ನಾಗಾರಾಜ್ಯದ ಬೇಡಿಕೆಯನ್ನು ಮುಂದಿಟ್ಟು ಹಿಂಸಾಚರಣೆಯಲ್ಲಿ ಫಿಜೊವಿನ ನೇತೃತ್ವದಲ್ಲಿರುವ ಒಂದು ನಾಗಾಜನರ ಪಂಗಡ ಬೆಂಬಲವು ಇಳಿಮುಖವಾಗಿ, ಭಾರತ ಸರಕಾರದ ಆಧೀನದ ಒಂದು ಪ್ರತ್ಯೇಕ ರಾಜ್ಯಸ್ಥಾಪನೆಗೆ ಅಲ್ಲಿ ಬೆಂಬಲ ಹೆಚ್ಚುತ್ತಿದ್ದು, ನಾಗಾ ಪ್ರದೇಶದಲ್ಲಿ ಶಾಂತಿ ಮತ್ತು ಸುವ್ಯವಸ್ಥೆಯನ್ನು ಕಾಪಾಡುವ ಉದ್ದೇಶದಿಂದ ಅವರ ೧೬ ಬೇಡಿಕೆಗಳನ್ನು ಭಾರತ ಸರಕಾರವು ಮನ್ನಿಸಿತ್ತು. ಇದೇ ತಿಂಗಳ ೧೮ರಂದು ನಾಗಾ ನೇತಾರರು ಮತ್ತು ಭಾರತ ಸರಕಾರಗಳ ನಡುವಾದ ಒಡಂಬಡಿಕೆಯನ್ನೆಯ ಮಹತ್ವದ ಹೆಜ್ಜೆಯಾಗಿ ನಾಗಾ ಪ್ರದೇಶದ ವಿವಿಧ ಜಾತಿಗಳ ಪ್ರತಿನಿಧಿಗಳಿಂದ ಕೂಡಿದ ಮಧ್ಯಾವಧಿ ಮಂಡಳವನ್ನು ಅಸಾಮದ ರಾಜ್ಯಪಾಲ ಶ್ರೀ ಶ್ರೀನಾಗೇಶರು ಉದ್ಘಾಟಿಸಿದರು.

ಕೊಹಿಮಾದಲ್ಲಿ ಸಮಾವೇಶಗೊಂಡಿದ್ದ ಈ ಸಂಬಂಧದ ಸಭೆಯೊಂದರಲ್ಲಿ ಎಂಟು ಸಹಸ್ರ ನಾಗಾ ಜನರು ಭಾಗ ವಹಿಸಿದ್ದರು. ನಾಗಾ ಜನತೆಯು ರಾಜ್ಯಪಾಲರಿಗೆ ಉತ್ಸಾಹದಿಂದ ನೀಡಿದ ಸ್ವಾಗತ ಹಾಗೂ ನಡೆಸಿದ ಮೆರವಣಿಗೆಗಳಿಂದ ತಮ್ಮ ಬೇಡಿಕೆಯ ಸಿದ್ಧಿಸಿದುದಕ್ಕೆ ಅವರು ತೃಪ್ತಿಯನ್ನು ಪ್ರದರ್ಶಿಸುವಂತಿತ್ತು. ಈ ಪ್ರದೇಶದ ೧೬ ಜಾತಿಗಳ ಪ್ರತೀಕವಾಗಿ ಮೆರವಣಿಗೆಯ ದಾರಿಯಲ್ಲಿ ೧೬ ಮಂಟಪಗಳು ರಚಿತವಾಗಿದ್ದುವು.

"ನಾವು ಜೀವಂತವಿರಲು ಬಯಸುವುದಾದರೆ, ನಮ್ಮ ಹಿಂಸಾ ಪ್ರವೃತ್ತಿಯನ್ನು ದೂರವಿಡಬೇಕು. ವಿಕ್ಷುಬ್ಧವಾಗಿ ಹೋಗಿರುವ ನಾಗಾ ಪ್ರದೇಶದಲ್ಲಿ ಶಾಂತಿ ಮತ್ತು ಸಾಮಾನ್ಯ ಸ್ಥಿತಿಯನ್ನು ಸ್ಥಾಪಿಸುವುದೇ ಅತಿ ದೊಡ್ಡ ಸಮಸ್ಯೆಯಾಗಿದೆ. ಇದರ ಜತೆಗೆ ಭಾರತ ಸರಕಾರ ಹಾಗೂ ನಮ್ಮೊಳಗಾದ ೧೬ ಒಡಂಬಡಿಕೆಗಳನ್ನು ಕಾರ್ಯರೂಪಕ್ಕೆ ತರಬೇಕಾಗಿದೆ." ಎಂದು ನಾಗಾ ಸಮ್ಮೇಳನದ ಅಧ್ಯಕ್ಷ ಡಾ| ಇಕಂಗಾಲಿಟೊ ರವರು ಹೇಳಿ, ಫಿಜೋನ ಕೈಕೆಳಗಿನ ನಾಗಾ ನೇಶನಲ್ ಕೌನ್ಸಿಲಿನ ಮೂಲಕ ಹತ್ಯೆ, ರಕ್ತಪಾತ ಮತ್ತು ನಷ್ಟಗಳುಂಟಾದುದರಿಂದ ಅವರನ್ನು ಮೇಲೆ ದೋಷಾರೋಪಣೆ ಮಾಡಿದರು. ಕ್ರೂರಕೃತಿಗಳನ್ನು ತ್ಯಜಿಸಿ ಸೌಹಾರ್ದದಿಂದ ಬಾಳುವುದರಿಂದಲೇ ನಾಗಾ ಜನರ ಏಳಿಗೆಯೆಂಬುದನ್ನು ಅವರು ಒತ್ತಿ ಹೇಳಿದರು.

ಉಘ್ಘಾಟಕರಾದ ರಾಜ್ಯಪಾಲ ಶ್ರೀ ನಾಗೇಶರು ಪ್ರತಿನಿಧಿಗಳ ಪ್ರತಿಜ್ಞಾ ವಿಧಿಯನ್ನು ಮಾಡಿಸುತ್ತ, ಕಳೆದ ಕೆಲವು ವರ್ಷಗಳಲ್ಲಿ ನಾಗಾ ಗುಡ್ಡಕಾಡುಗಳ ಜನತೆಗೆ ಮತ್ತು ಅಧಿಕಾರಿಗಳಿಗೆ ಉಪದ್ರವ, ಚಿಂತೆ ಮತ್ತು ಸಂಕಟಗಳು ಎದುರು ಬರುತಿದ್ದುವು. ನಾಗಾ ಜನರು ಶಾಂತಿಯನ್ನು ಬಯಸುತ್ತಿರುವುದು ಸ್ವಾಭಾವಿಕವೇ ಅವರು ಶಾಂತಿಯನ್ನುಳಿಸಿ, ತಮ್ಮ ಶಕ್ತಿಯನ್ನು ವ್ಯರ್ಥಹರಿಯಗೊಡದೆ. ರಚನಾತ್ಮಕ ಕಾರ್ಯಗಳಲ್ಲಿ ತೊಡಗಿಸಲು ಬದ್ಧಕಂಕಣರಾಗಲಿ;ಎಂದು ಹಾರೈಯ್ಸಿದರು.

ಸರಕಾರ ಮತ್ತು ಜನತೆಯು ಕಳೆದ ಕಾಲವನ್ನು ಮರೆತು ಬಿಟ್ಟು, ಹೊಸ ಮನ್ವಂತರೋದಯವಾಗುವಂತಾಗಲೆಂಬುದೇ ಈ ಹೊಸ ವ್ಯವಸ್ಥೆಯ ಉದ್ದೇಶ. ಇದು ಕೈಗೂಡಿತೆಂದರೆ, ನಾಗಾ ಪರ್ವತಕಾಡುಗಳಲ್ಲಿ ಹರಡಿದ್ದ ಉಪದ್ರವ ಅಂಧಕಾರದನಡುವೆ ದಿವ್ಯ ಜ್ಯೋತಿಯೊಂದು ಉದಿಸಿದಂತಾಗುವುದು ನಾಗಾ ಪ್ರದೇಶದ ಹಿತಕ್ಕಾಗಿ ಉದ್ವೇಗ ಮತ್ತು ಕೋಪದ ಭಾವನೆಗಳನ್ನು ದೂರೀಕರಿಸಿ, ದುಡಿಯಬೇಕು ಮತ್ತು ಭಾರತದ ನಾಗರಿಕರಾಗಿ ಸೇರಿಕೊಂಡು ಕಾರ್ಯತತ್ಪರರಾಗುವ ಸಂಕಲ್ಪವನ್ನವರು ಮಾಡಬೇಕು. ಭಾರತದ ಸ್ವಾತಂತ್ರ್ಯದ ಫಲವನ್ನು ಇತರ ಜನರು ಅನುಭವಿಸುವಂತೆಯೇ ನಾಗಾ ಜನರೂ ಅನುಭೋಗಿಸುವಂತಾಗಬೇಕು.

ನಾಗಾರಾಜ್ಯದ ಈ ಮಧ್ಯಾವಧಿ ಮಂಡಳದ ನೇಮಕವು ಪ್ರಥಮ ಹೆಜ್ಜೆಯಾಗಿದೆ. ಮುಂದಕ್ಕೆ ನಾಗಾಪ್ರದೇಶವನ್ನು ಪ್ರತ್ಯೇಕವಾಗಿ ರಚಿಸಲಾಗುವುದು. ಆಗ ಇದಕ್ಕೊಂದು ವಿಧಾನಸಭೆ ಹಾಗೂ ಸಚಿವ ಸಂಪುಟವು ನಿರ್ಮಾಣಗೊಳ್ಳುವುದು. ಈ ನಡುವಣ ಸಾಂಕ್ರಾಮಿಕ ಸಮಯದಲ್ಲಿ ಈ ಮಾಧ್ಯಮಿಕ ಸಮಿತಿ ಮತ್ತು ಪ್ರಶಾಸನ ಪರಿಷತ್ತು ಒಂದುಗೂಡಿ ರಾಜ್ಯಾಭಿವೃದ್ಧಿಯತ್ತ ರಚನಾತ್ಮಕ ಕಾರ್ಯಕ್ರಮಗಳನ್ನು ಕೈಗೊಳ್ಳುವುದು ಅತ್ಯವಶ್ಯ. ಅಸ್ತವ್ಯಸ್ತವಾಗಿದ್ದ ರಾಜ್ಯದಲ್ಲಿ ಹಿಂಸಾಚಾರವನ್ನು ತಡೆದು ಶಾಶ್ವತ ಶಾಂತಿಯನ್ನು ಸ್ಥಾಪಿಸುವುದೇ ಇಂದು ಅದು ಎದುರಿಸಬೇಕಾದ ಪ್ರಧಾನ ಕರ್ತವ್ಯವೆನಿಸಿದೆ.

"ಭಾರತದ ಯಾವ ಮೂಲೆಯ ಜನರೇ ಇಂಲಿ ತಮ್ಮ ಮೂಲ ಸಂಸ್ಕೃತಿಗೆ ಅನುಸಾರವಾಗಿ ಯಾವುದೇ ರಾಜ್ಯದಲ್ಲಿ

(೧೨ನೇ ಪುಟ ನೋಡಿರಿ)

R. O. C. No. B 3/681/61

UDIPI MUNICIPALITY.

NOTICE

Is hereby given that the right of collecting fees in the Municipal Markets, Cart Stands, Jutka Stand, Mutton stalls and slaughter house for the year 1961—62 will be sold by public auction by the Municipal Commissioner, Udipi on Tuesday the 28th February 1961 at 3 P. M. in the Municipal Office, Udipi.

The sale is subject to the rules in force. The three existing mutton stalls will be sold separately.

Further particulars or information may be had from the Municipal Office, Udipi. on all working days during office hours.

I Joshua,
Commissioner.

Municipal Office, Udipi,
Dated 17—2—1961

R. O. C. No. B 3/681/61

ಉಡುಪಿ ಮುನ್ಸಿಪಾಲಿಟಿ

ನೋಟೀಸು

ಈ ಮೂಲಕ ತಿಳಿಯಪಡಿಸುವುದೇನೆಂದರೆ:— 1961-62ನೇ ವರ್ಷದಲ್ಲಿ ಉಡುಪಿ ಮುನ್ಸಿಪಾಲಿಟಿಯ ಆದಾಯತೆಕ್ಕೆ ಬಳಪಟ್ಟ ಮಾರ್ಕೇಟುಗಳು, ಗಾಡಿ ಚೌಕ, ಜಟ್ಕಾ ಚೌಕ, ಮಟನ್ ಸ್ಟಾಲ್ಸ್ ಮತ್ತು ವಧಾಗೃಹದಲ್ಲಿ ವರಿ ವಸೂಲು ಮಾಡುವ ಹಕ್ಕನ್ನು ಮುನ್ಸಿಪಲ್ ಕಮಿಶನರರವರು ತಾರೀಕು 28-2-1961ನೇ ಮಂಗಳವಾರ ಅಪರಾಹ್ನ ಘಂಟೆ3-00ಕ್ಕೆ ಮುನ್ಸಿಪಲ್ ಆಫೀಸಿನಲ್ಲಿ ಆ ಕುರಿತು ಜ್ಞಾರಿಯಲ್ಲಿರತಕ್ಕ ನಿಯಮಗಳಿಗನುಸಾರವಾಗಿ ಬಹಿರಂಗವಾಗಿ ಏಲಂ ಮೂಲಕ ಮಾರಾಟ ಮಾಡುವರು.

ಮೂರು ಮಟನ್ ಸ್ಟಾಲುಗಳನ್ನು ಪ್ರತ್ಯೇಕ ಪ್ರತ್ಯೇಕವಾಗಿ ಏಲಂ ಮಾಡಲಾಗುವುದು.

ಈ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಆಫೀಸು ಸಮಯ, ಮುನ್ಸಿಪಲ್ ಆಫೀಸಿಗೆ ಬಂದು ತಿಳಿಕೊಳ್ಳಬಹುದು.

ಐ. ಜೋಶುವ,
ಕಮಿಶನರ್.

ಮುನ್ಸಿಪಲ್ ಆಫೀಸ್, ಉಡುಪಿ
ತಾ. 17-2-1961

ಮಂಗಳೂರಲ್ಲಿ ಈಗಾಗಲೇ ತೆರೆಯಲ್ಪಟ್ಟು ಪ್ರಗತಿಯಿಂದ ಮುಂದೆ ಸಾಗುತ್ತಿರುವ ಇನ್ನೊಂದು ಪ್ರಸಿದ್ಧ ಜವುಳಿ ಮಳಿಗೆ—

ಸಾರೀ ಎಂಪೋರಿಯಮ್

ಕೆಥೊಲಿಕ್ ಕ್ಲಬ್ಬಿನ ಎದುರು, ಹಂಪನಕಟ್ಟಾ, ಮಂಗಳೂರು-1

ನಿಮ್ಮ ಉತ್ತಮ ಆಯ್ಕೆಗೆ ಯೋಗ್ಯವೆಂದೆನಿಸಿದ ರೇಶ್ಮೆ ಸೀರೆಗಳೂ, ಹತ್ತಿ ನೂಲಿನ ಸೀರೆಗಳೂ ಸರ್ವೋತ್ಕೃಷ್ಟವಾಗಿವೆ, ಯಾವತ್ತೂ ತರದ ಶರ್ಟಿಂಗ್, ಕೋಟಿಂಗ್, ಚಿಂಟ್ಸ್, ಸಿಲ್ಕ್, ನೈಲಾನ್ ಇತ್ಯಾದಿ ಬಟ್ಟೆಬರೆಗಳಿಗೂ ಸಂದರ್ಶಿಸಿರಿ —

SAREE EMPORIUM

Opposit Catholic Club,
HAMPANKATTA, **MANGALORE—1.**

NAVAYUGA WEEKLY, UDIPI.
REGD. NO. BG. 176

16—2—1961

LICENSE NO. 31
Licensed to Post without Prepayment

ಪ್ರ-ಕಿರಣ

ಭವರೋಗ ರಾಮಬಾಣ—ಮರವೆ

ಮರವೆಯಿಂದಲೆ ಇಹವು, ಮರವೆಯಿಂದಲೆ ಪರವು ಮರವೆ
ಯೊಂದಿಲ್ಲದಿರೆ ಮರಳಿನಾ ಈ ಜಗದಿ ಹುರುಳಿಲ್ಲವೆಂದ.....

ಶ್ರೀ ನಾಗರಾಜ, 'ಹಿಂದೀರತ್ನ', ಉಜಿರೆ.

ಇಪ್ಪತ್ತಾತ್ತಾರರ ನವಹರೆಯದ ಯುವಕ, ಇಪ್ಪತ್ತೈದರ ಯುವತಿ— ನವವಿವಾಹಿತರು. ಒಬ್ಬರನ್ನೊಬ್ಬರು ಅತಿಯಾಗಿ ಪ್ರೀತಿಸುತ್ತಾರೆ. ಒಬ್ಬರ ಮೇಲೊಬ್ಬರಿಗೆ ಎಲ್ಲಿಲ್ಲದ ಅಕ್ಕರೆ. ಗಂಡನಿಗೆ ನೂರೈವತ್ತು ರೂಪಾಯಿಯ ನೌಕರಿಯಿದೆ. ಸಂಜೆ ಆಫೀಸು ಬಿಟ್ಟೊಡನೆ ಗಂಡ ಮನೆಗೆ ಬರುತ್ತಾನೆ. ಇಬ್ಬರೂ ವಾಕಿಂಗಿಗೆ ಇಲ್ಲವೇ ಸಿನೇಮಕ್ಕೆ ಜೊತೆಯಾಗಿ ಹೋಗುವರು. ನಗುವರು ಹುಚ್ಚುಚ್ಚು ಮಾತಾಡುವರು. ಅಂತೂ ಅವರನೊಂದು ಆದರ್ಶ ದಾಂಪತ್ಯ. ಅಸೂರ್ವ ಜೋಡಿ!

ಒಂದು ದಿನ ಎಂದಿನಂತೆ ಆಫೀಸಿನಿಂದ ಬರಬೇಕಾದ ಸಮಯಕ್ಕೆ ಪತಿಬರಲಿಲ್ಲ. ಅರ್ಧಗಂಟೆ ತಡವಾಗಿದೆ. ಒಂದು ಕಾರು ಬಂದು ಮನೆಯ ಅಂಗಳದಲ್ಲಿ ನಿಂತಿತು. ನಾಲ್ಕು ಜನರು ಆಕೆಯ ಪತಿಯ ಶವವನ್ನು ಕಾರಿನಿಂದ ಇಳಿಸಿದರು, ಬೀದಿಯಲ್ಲಿ ಬರುವಾಗ, ತನ್ನಾಕೆಗೆ ಪ್ರಿಯವಾದ ಹೂವನ್ನು ಕೊಳ್ಳಲೆಂದು ಹೋದ ಪತಿ, ಲಾರಿಯೊಂದರ ಚಕ್ರದಡಿಗೆ ಬಿದ್ದು ಗತಪ್ರಾಣನಾಗಿದ್ದ. ಸಂಬಂಧಿಕರಿಗೆಲ್ಲಾ ಕರೆಹೋಯ್ತು ಶವದಹನ ನಡೆದಾಗ ಆ ತರುಣ ಪತ್ನಿಯ ಗೋಳೇ ಗೋಳು! ತನ್ನನ್ನು ಬಿಡಿ- ಚಿತೆಯನ್ನೇರುತ್ತೇನೆ—ಎಂದು ಬೊಬ್ಬಿರಿಯುತ್ತಾಳೆ. ಎಲ್ಲರೂ ಸೇರಿ ತಡೆದಿಡುತ್ತಾರೆ.

ಎರಡು ತಿಂಗಳು ಕಳೆಯಿತು. ಆ ವಿಧವೆಯ ಮನೆಗೆ ಹೋಗಿ ನೋಡಿದರೆ, ಹಿಂದಿನ ಆ ಕೆದರಿದ ಕೂದಲು, ಊದಿದ ಕಣ್ಣು—ಒಂದೂ ಕಾಣಿಸದು! ಶಾಂತ ಗಂಭೀರವಾಗಿದೆ — ಮುಖ. ಹತ್ತಿರದಲ್ಲೇ ನಾಲ್ಕಾರು ಪತ್ರಿಕೆಗಳು — ಒಂದನ್ನಾಕೆ ಓದುತ್ತಿರುವಳು. ಬಹುಶಃ ಯಾವುದೋ ವಾರದ ಕತೆಯಿರಬೇಕು.

ಇನ್ನೂ ಒಂದೆರಡು ತಿಂಗಳು ಕಳೆದ ಬಳಿಕ ನೀವಾಕೆಯನ್ನು ಸಿನಿಮಾ ಮಂದಿರದ ಬಳಿ ಕಂಡರೆ— ಆಕೆ, ಯಾವುದೋ ಒಂದು ಪ್ರಣಯ ಕತೆಯ ಸಿನಿಮಾ ನೋಡಲು—ಬಂದುದನ್ನು ಗೊತ್ತು ಹೆಚ್ಚಬಹುದು! ಮತ್ತಷ್ಟು ಗಮನವಿರಿಸಿದಲ್ಲಿ, ಆವಳ ಜೊತೆಗೆ ಇನ್ನೋರ್ವ ಯುವಕನನ್ನೂ ಕಾಣಬಹುದು! ಬಹುಶಃ ಅವಳ ನೆರಮನೆಯವನಿರಬಹುದು. ಸಿನಿಮಾ ಬಿಟ್ಟೊಡನೆ ಇಬ್ಬರೂ ಒಂದೇ ಜಟಕಾ ಬಂಡಿಯನ್ನೇರುವುದನ್ನು ಕಂಡು ಮತ್ತಷ್ಟು ಚಕಿತರಾಗಬಹುದು!

ಇದಾದ ನಾಲ್ಕಾರು ತಿಂಗಳಲ್ಲೇ— ಬ್ರಹ್ಮ ಸಮಾಜದಲ್ಲೋ ಅಥವಾ ಬೇರಿನ್ನೆಲ್ಲೋ ಅವರೀರ್ವರ ವಿವಾಹ ನಡೆಯಿತೆಂಬ ವರದಿಯನ್ನು ಸ್ಥಳೀಯ ಪತ್ರಿಕೆಗಳಲ್ಲಿ ಕಾಣಬಹುದು.

—ಇದೀಗ ನಮ್ಮ ಸಮಾಜದಲ್ಲಿ—ಇಂದಿನ ದಿನಗಳಲ್ಲಿ ಕಾಣಬಹುದಾದ ಒಂದು ಘಟನೆ. ಆರಂಭದಿಂದ ಕೊನೆಯ ತನಕ ಹಲವಾರು ಘಟ್ಟಗಳಲ್ಲಿ ಆ ಯುವತಿಯ ಮನಸ್ಸಿನ ಮೇಲೆ—ಮರೆವು ತನ್ನ ಕೈವಾಡವನ್ನು ಹೇಗೆ ತೋರಿಸಿತೆಂಬುದನ್ನು ಕಾಣುತ್ತೇವೆ. ಪತಿಯ ಚಿತೆಯನ್ನೇರುತ್ತೇನೆ—ಎಂದ ಆ ಯುವತಿಯನ್ನು ತಡೆಯದಿದ್ದಿದ್ದಲ್ಲಿ—ವತ್ತಿನಿನ ಸಂಜೀವಿನಿ ತನ್ನ ಕಾರ್ಯಕೈಗೊಳ್ಳದಿದ್ದಲ್ಲಿ ಆಕೆಯ ಪುನರ್ವಾಹವೆಂದಾದರೂ ಸಂಭವನೀಯವೇ?

ಮನುಷ್ಯ ತನ್ನ ಜೀವನದಲ್ಲಿ ಎದುರಿಸುವ—ಎದುರಿಸಬೇಕಾಗಿ ಬರುವ ಸುಖ ದುಃಖಗಳು ಹಲವಾರು. ತಂದೆ, ತಾಯಿ, ಅಣ್ಣ—ತಂಗಿ, ಹೆಂಡತಿ, ನಾದಿನಿ—ಇತ್ಯಾದಿಯಾಗಿ ಆಪ್ತರನ್ನು ಕಳಕೊಂಡಾಗ ಈ ಪ್ರಪಂಚವೇ ನಿಃಸಾರವನ್ನಿಸುತ್ತದೆ; ಆಘಾತವನ್ನೆದುರಿಸಲಾರದೆ, ನಿಃಸಹಾಯನಾಗಿ ಆತ್ಮಹತ್ಯೆಗೇ ಮನ ಮುಂದಾಗುತ್ತದೆ. ತನ್ನನ್ನು—ತಮ್ಮ ಮನಸ್ಸನ್ನು ಹತೋಟಿಯಲ್ಲಿಟ್ಟುಕೊಳ್ಳಬಲ್ಲವರು— ಮಾತ್ರ ಆತ್ಮಹತ್ಯೆಯಿಂದ ಪಾರಾಗುವರು.

ಆದರೆ ನಾಲ್ಕು ದಿನ ಕಳೆಯಲಿ. ಆ ದುಃಖದ ಭಾರ ಸ್ವಲ್ಪ ಹಗುರೆನಿಸುವುದು. ಒಂದು ವರ್ಷ ಕಳೆದಾಗ, ವಸಂತಾದಿ ಋತುಗಳ ಬದಲಾವಣೆಯಾದಾಗ, ಪ್ರಕೃತಿಯೇ, ಪ್ರಸಂಚವೇ, ಬದಲಾದಾಗ 'ಪರಿಸ್ಥಿತಿಯ ಶಿಶು'ವೆನಿಸಿದ ಮನುಷ್ಯ -ಬದಲಾಗದಿರಲಾರ. ಆಗ ಆ ದುಃಖ ಎಲ್ಲೋ ನೆನಪಿನ ಮೂಲೆಯಲ್ಲಿ ಸೇರಿಹೋಗುತ್ತದೆ. ಹತ್ತಿಪ್ಪತ್ತು ವರ್ಷ ಕಳೆದಾಗಲಂತು ಆದಕ್ಕಿಂತ ಹೆಚ್ಚಿನ ದುಃಖ ಅನುಭವಿಸಿಯೇ—ಇಲ್ಲವೇ—ಆ ದುಃಖವನ್ನು ಮರಿಸಬಲ್ಲ ಸುಖವನ್ನು ಅನುಭವಿಸಿಯೇ—ಅಂತೂ ಮನುಷ್ಯ ಹಳೆಯ ನೋವನ್ನು ನುಂಗಿಬಿಟ್ಟಿರುತ್ತಾನೆ. ಬೇರೊಬ್ಬರು ಜಜ್ಜಾಪಿಸಿಕೊಟ್ಟಾಗ ನೆನಪು ಮಾಡಿಕೊಳ್ಳಲು ಹತ್ತಾರು ನಿಮಿಷ ಬೇಕಾಗುವಷ್ಟು ಮರೆತು ಬಿಡಬಹುದು.

ಇಂತಹ ಸ್ಥಿತಿಗೆ ತಲಪುವುದು ದೌರ್ಬಲ್ಯವೆಂದರೂ ಸರಿಯೇ! ಆದರೂ ಅದು ಅವನ ಪಾಲಿಗೊಂದು ವರದಾನವಾಗಿ ಪರಿಣಮಿಸಿದೆ. ಇಲ್ಲದಿದ್ದರೆ, ಭೂಲೋಕ ತನ್ನ ಅಲ್ಪ ದುಃಖಗಳ ಬಗ್ಗೆ ಕೂಡಾ ಶೋಕಿಸುತ್ತಾ ಮಾನವಲೋಕವೇ 'ಶೋದನಾಲಯ'ವಾಗಿ ಪರಿಣಮಿಸಿ, ಜನರೆಲ್ಲಾ ಅಳುಬುರುಕರಾಗಿ ಬಿಡುತ್ತಿದ್ದರು.

ಅಷ್ಟು ಮಾತ್ರವಲ್ಲದೆ ಕಂಡದ್ದು, ಕೇಳಿದ್ದು, ಊಹಿಸಿದ್ದು, ಯೋಚಿಸಿದ್ದು,—ಎಲ್ಲವನ್ನೂ ಸದಾಕಾಲವೂ ಜ್ಞಾಪಕದಲ್ಲಿ ಇಟ್ಟುಕೊಂಡರೆ, ನಮ್ಮ ಮಿದುಳೊಂದು ಭಾರೀ ಉಗ್ರಾಣದಂತಾಗಿ, ಅದೊಮ್ಮೆಗೆ ಬಂದೀತು! ಅಲ್ಲಿಂದ ಬೇಕಾದುದು ಬೇಕಾದಾಗಲೂ ಎಲ್ಲವೂ ಸೇರಿಕೊಂಡಲ್ಲಿಂದ ನಮಗೆ ಬೇಕಾದುದನ್ನು ಹೆಕ್ಕಿಕೊಳ್ಳುವುದೂ ಕಷ್ಟವಾದೀತು ಗಾಳಿ ಹೆಚ್ಚಾಗಿ ತುಂಬಿದ ಕುಚ್ಚೆಂಡಿನಂತಾದೀತು! ಅಂದರೆ ಹುಚ್ಚುಹಿಡಿದೀತು ಪ್ರಪಂಚವೊಂದು ಹುಚ್ಚರ ಆಸ್ಪತ್ರೆಯಾದೀತು!

ಆದಕ್ಕಾಗಿಯೇ ಮನಃಶಾಸ್ತ್ರಜ್ಞರು 'ದುಃಖ' ನೋವುಗಳನ್ನು ಶಮನಗೊಳಿಸಬಲ್ಲ ಸಿದ್ಧೌಷಧ-ಮರವೇ ಎಂದು ಕರೆದಿರುವುದು!

ಕನ್ನಡಿಗರು ಹತವೀರರಾಗಿದ್ದಾರೆಯೆ?

(ನಿನ್ನೆ ಸುಟಿದಿಂದ)

ರಾಜ್ಯ ಸಂಪತ್ತು ಹೆಚ್ಚುವುದೆಂದೂ ಮೊದಲಾಗಿ ತಿಳಿದುಕೊಳ್ಳಬೇಕು.

ರಾಷ್ಟ್ರೀಯ ಆರ್ಥಿಕ ಸಂಶೋಧನಾ ಮಂಡಳಿಯು ಇತ್ತೀಚೆಗೆ ಒಂದು ವರದಿಯನ್ನು ಅರ್ಪಿಸಿ ಮಂಗಳೂರು ಬಂದರವನ್ನು ಒಂದು ಅಳವಾದ ಬಂದರವಾಗಿ ಬೆಳೆಸಬೇಕೆಂದೂ ಹಾಸನ-ಮಂಗಳೂರು ರೇಲುದಾರಿಯನ್ನು ತಡವಾಡದೆ ರಚಿಸಬೇಕೆಂದೂ ಮಂಪ್ಪೆಯನ್ನು ಹೆಡಗುಕಟ್ಟುವ ಅಥವಾ ಮೀನುಗಾರಿಕೆಯ ಬಂದರವಾಗಿಯೋ ವಿಶಿಷ್ಟರೀತಿಯಲ್ಲಿ ಬೆಳೆಸಬೇಕೆಂದೂ ಹೇಳಿದೆಯೆಂದು ತಿಳಿದು ಬರುತ್ತದೆ. ಈ ವರದಿಯ ಹೇಳಿಕೆಗಳು ಯಾವ ಘಟ್ಟಕ್ಕೆ ಬಂದು ನಿಲ್ಲುವುದೆಂದು ನಾವು ಈಗಲೇ ಹೇಳುವಂತಿಲ್ಲ. ಕೇವಲ ಕೇಂದ್ರಕೊಡುತ್ತದೆ, ಕೊಡುವಾಗಕೊಂಡು ಕೊಳ್ಳುವ" ಎಂಬ ನೀತಿಯನ್ನು ನಮ್ಮ ಸರಕಾರ ಹಿಡಿದುದರಿಂದಲೇ ನಾವು ಬಯಸ್ಸಿದ್ದೆಲ್ಲಾ ಬೇರೆ ರಾಜ್ಯಗಳ ಪಾಲಿಗೆ ಹೋಯಿತು. ಕೆಚ್ಚೆದೆಯ ಕನ್ನಡಿಗರು ಕಸುವಿಲ್ಲದವರೆಂಬುದನ್ನೂ ಕನ್ನಡಿಗರ ಮೈಸೂರು ಸರಕಾರ ನಿರ್ಬಲವೆಂಬುದನ್ನೂ ಇದುವರೆಗೆ ತೋರಿಸಿಕೊಟ್ಟಂತಾಯಿತು.

ಕನ್ನಡಿಗರೂ ಅವರ ಸರಕಾರವೂ ಇದುವರೆಗೆ ಕೈಸೀಡಿ ನಿರೀಕ್ಷಿಸಿದುದು ಸಾಕು. ನಮ್ಮ ವಿಧಾನ ಸಭೆ—ಮಂಡಲಗಳ ಸದಸ್ಯರೂ ಲೋಕ ಸಭೆ—ರಾಜ್ಯ ಸಭಾ ಸದರೂ ಕನ್ನಡದ ಮುಖ್ಯ ಅವಶ್ಯಕತೆಯಾದ ಬಂದರಗಳ ಅಭಿವೃದ್ಧಿ ಮತ್ತು ಒಳನಾಡು ಹಾಗೂ ಬಂದರ ನಗರಗಳ ಸಂಬಂಧವಾಗಿ ಸಾರಿಗೆ ವ್ಯವಸ್ಥೆಯನ್ನು ಪಡೆದುಕೊಳ್ಳಲು ಏಕ ಕಂಠದಿಂದ ಕೂಗಬೇಕು. 'ಪರಮೇಶ್ವರೋವಾ ದಿಲ್ಲೀಶ್ವರೋವಾ' ನೀತಿಯನ್ನು ಅವಶ್ಯ ಬಿಟ್ಟು ಬಿಡಬೇಕು. ಕನ್ನಡನಾಡಿನ ಆಯಾತ ನಿರ್ಯಾತಗಳನ್ನು ನಿರ್ವಹಿಸಲು ಸಮರ್ಥವಾದ ಬಂದರಗಳನ್ನು ಕನ್ನಡನಾಡಿನಲ್ಲಿಯೇ ಕಟ್ಟುವಂತೆ ರಚನಾತ್ಮಕ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕು. ಕನ್ನಡನಾಡಿನ ಸರಕಾರ ತನ್ನೆಲ್ಲಾ ಶಕ್ತಿಯನ್ನು ಕೇಂದ್ರೀಕರಿಸಿ ಈ ಬಗ್ಗೆ ಹೋರಾಡಬೇಕು. ದ್ವಿತೀಯ ಯೋಜನೆಯ ಅಂತಿಮ ಘಟ್ಟದಲ್ಲಿ ಕನ್ನಡಿಗರ ಸುಸಂಘಟಿತ ಪ್ರಯತ್ನದ ಫಲವಾಗಿ ಶರಾವತಿಕೊಳ್ಳದ ಯೋಜನೆಯು ಅಡಕವಾಗಿರುವುದನ್ನು ಸಂಸ್ಮರಿಸಬೇಕು. ಅದೇ ರೀತಿಯ ಆದಕ್ಕಿಂತಲೂ ಹೆಚ್ಚಿನ ಪ್ರಯತ್ನ ಬಂದರ- ರೇಲು ದಾರಿಗಳ ಬಗ್ಗೆ ನಡೆಯಬೇಕು; ತ್ವರಿತದಲ್ಲಿಯೇ ಜಯಶಾಲಿಯಾಗಬೇಕು. ಕನ್ನಡಿಗರಲ್ಲಿಯೂ ಕೆಚ್ಚು ಇದೆಯೆಂಬುದನ್ನು ತೋರಿಸಿಕೊಡಬೇಕು.

ಆದರೆ, ಈ ರೀತಿ ನಡೆಯಲು ಕನ್ನಡಿಗರು ಸಿದ್ಧರಿರುವರೆ? ಕನ್ನಡಿಗರ, ಕನ್ನಡಿಗರ ಸರಕಾರದ ಬಲವೆಲ್ಲ ಚಲ್ಲಾಪಿಲ್ಲಿಯಾಗಿ ಹರಡಿ ದುರ್ಬಲವಾಗುವುದನ್ನು, ಆವಶ್ಯಕತೆಯಿಲ್ಲದಲ್ಲಿ ಉಪಯೋಗವಾಗುವುದನ್ನು ನಾವು ವೀಕ್ಷಿಸುವಾಗ, ಕನ್ನಡಿಗರಲ್ಲಿ ಅನೇಕತೆ, ಅತಂತ್ರತೆ, ಅಕರ್ಮಣತೆಗಳು ತಾಂಡವವಾಡಿ ಅಧಿಕಾರಕ್ಕಾಗಿ, ಲಾಭಕ್ಕಾಗಿ ಬೇರೆ ಬೇರೆಯವರು ಬೇರೆ ಬೇರೆಯಾಗಿ ತಮ್ಮ ತಮ್ಮೊಳಗೆ ಕತ್ತಿ ಮಸೆಯುತ್ತಿರುವಾಗ ಕನ್ನಡಿಗರನ್ನು ಕನ್ನಡಾಂಬೆಯೇ ಕೈಬಿಟ್ಟಿದ್ದಾಳೆನ್ನಬೇಕು. ಆದರೆ, ಇದೇ ದುಸ್ಥಿತಿ ಮುಂದಕ್ಕೂ ಮುಂದುವರಿಯಗೊಟ್ಟರೆ, 'ಸ್ವರ್ಣದನಾಡು ಕನ್ನಡನಾಡು" ಉಂಡುಣಲಿಕ್ಕಿರದ ಊರಸೋಲಗವಾದೀತು. ಆದುದರಿಂದ ಕನ್ನಡಿಗರೆಲ್ಲರೂ ಒಂದಾಗಿ ಮೊದಲು ಕೂಗಬೇಕು—"ಕನ್ನಡಿಗರು ಒಂದೇ; ಕನ್ನಡ ಒಂದೇ"—ಆಗ ನಮ್ಮ ಬೇಡಿಕೆಗಳನ್ನು ತಿರಸ್ಕರಿಸುವ ಧೈರ್ಯವೂ ದಿಲ್ಲೀಶ್ವರರಿಗೆ ಬರಲಾರದು.

ಪಿಗ್ಮಿ—೧

ಪ್ರಸಿದ್ಧ ಮನಶ್ಶಾಸ್ತ್ರಜ್ಞ ಮ್ಯಾಕ್‌ಡೂಗಲ್ ಹೇಳಿರುವಂತೆ ಮಾನವನ ಸಹಜ ಗುಣಗಳಲ್ಲಿ ಸಂಗ್ರಹ ಪ್ರವೃತ್ತಿ—ಕೂಡಿಡುವ ಬುದ್ಧಿ, ಉಳಿತಾಯ ಭಾವನೆಯೂ ಒಂದು. ಮಾನವನ ಜೀವನದ ಹೋರಾಟಕ್ಕೆ, ವಿಜಯಕ್ಕೆ ಬೇಕಾದ ಎಲ್ಲಾ ಶಕ್ತಿ-ಆವಶ್ಯಕತೆಗಳನ್ನು ಸರಮೂತ್ರನು ಬಾಲ್ಯದಲ್ಲಿಯೇ ಬೀಜರೂಪದಲ್ಲಿ ಒದಗಿಸುವನು. ಅಂತೆಯೇ ಸಂಗ್ರಹ ಪ್ರವೃತ್ತಿಯು ಕೂಡಾ. ಇದನ್ನು ಚಿಕ್ಕ ಮಕ್ಕಳಲ್ಲಿ ನಾವು ಧಾರಾಳವಾಗಿ ಕಾಣಬಹುದು. ಪುಟ್ಟ ಬಾಲಕರು ತಮ್ಮ ಕುತೂಹಲವನ್ನು ಕೆರಳಿಸುವ ವಸ್ತುಗಳನ್ನು ಅಸ್ಥಿಯಿಂದ ಸಂಗ್ರಹಿಸುತ್ತಿರುವುದನ್ನು ನೋಡಿದವರಾರು?

ಈ ಸಂಗ್ರಹಬುದ್ಧಿಯು ಅಭಿವೃದ್ಧಿಯೂ ಆಗಬಹುದು; ಕುಂಠಿತಗೊಳ್ಳಲೂ ಬಹುದು. ಅದು ಸಂದರ್ಭ ಮತ್ತು ಅವಕಾಶಗಳನ್ನಾಧರಿಸಿದೆ. ಯಾವುದೇ ಒಂದು ಕ್ರಿಯೆ ಮತ್ತೆ ಮತ್ತೆ ಅ ವರ್ತನೆಗೊಂಡಲ್ಲಿ ಅದು ಬಲಿತು ಅಭ್ಯಾಸವಾಗಿ ಮಾರ್ಪಡುವುದು — ಕುಶಲ ಕಲಾವಿದನ ಕೈಬೆಳಕುಗಳು ಅವನಿಗೆ ತಿಳಿಯದೆಯೇ ಮುಂದು ಮುಂದಕ್ಕೆ ಚಲಿಸುವಂತೆ,

ಕೂಡಿಡುವ ಗುಣವೂ ಹಾಗೆಯೇ—
ಉಳಿತಾಯದ ಭಾವನೆಯು ಬಲಿತು
ಸ್ಥಿರ ಅಭ್ಯಾಸವಾಗಲು; ಸುಲಭ ಸಾಧ್ಯವಾಗಲು:

-ಪಿಗ್ಮಿ

ದಿ ಕೆನರಾ ಇಂಡಸ್ಟ್ರಿಯಲ್ & ಬೇಂಕಿಂಗ್ ಸಿಂಡಿಕೇಟ್ ಲಿಮಿಟೆಡ್

Edited, Printed & Published by K. H. Shetty at the Navayuga Press, Udipi, S. India.

40th year of publication. 23-2-1961 ೪೦ನೇ ವರ್ಷ

ಸಂಪುಟ ೪೦ Vol. 40

ನವಯುಗ

ಸಂಚಿಕೆ ೨೪ No. 24

ಬೆಲೆ 0=13

ಪ್ರಚಲಿತ ಪ್ರಸಂಗ

ನಾಗಾರಾಜ್ಯದಲ್ಲಿ ನವಮನ್ವಂತರ

ಭಾರತ ಸರಕಾರವು ನಾಗಾನಾಯಕರೊಡನೆ ಮಾಡಿಕೊಂಡ ಒಡಂಬಡಿಕೆಯಂತೆ ನಾಗಾರಾಜ್ಯದಲ್ಲಿ ಮಾಧ್ಯಮಿಕ ಮಂಡಳವು ಉದ್ಘಾಟನೆಯಾಯಿತು. 'ಅಹಿಂಸಾಪರರಾಗಿ ಕರ್ತವ್ಯಶೀಲರಾಗಿ ಶಾಂತಿ ಸ್ಥಾಪಿಸುವಲ್ಲಿ ನಾಗಾಜನರು ಹಿಂದುಳಿಯಬಾರದು.

ನಾಗಾ ಪ್ರದೇಶದ ಜನಕಾಮನೆಯನ್ನು ಅರಿತುಕೊಂಡು ಅದನ್ನು ಪೂರೈಸುವ ಆಶ್ವಾಸನವಿತ್ತ ಭಾರತ ಸರಕಾರವು ಇದೀಗ ಅವರ ಬೇಡಿಕೆಯನ್ನು ಮನ್ನಿಸುವ ಕಾರ್ಯಕ್ರಮಗಳಲ್ಲಿ ತೊಡಗಲು ಆರಂಭಮಾಡಿದೆ. ಪ್ರತ್ಯೇಕ ಸ್ವತಂತ್ರ ನಾಗಾರಾಜ್ಯದ ಬೇಡಿಕೆಯನ್ನು ಮುಂದಿಟ್ಟು ಹಿಂಸಾಚರಣೆಯಲ್ಲಿ ಫಿಜೋವಿನ ನೇತೃತ್ವದಲ್ಲಿರುವ ಒಂದು ನಾಗಾಜನರ ಪಂಗಡಕ್ಕೆ ಬೆಂಬಲವು ಇಳಿಮುಖವಾಗಿ, ಭಾರತ ಸರಕಾರದ ಅಧೀನದ ಒಂದು ಪ್ರತ್ಯೇಕ ರಾಜ್ಯಸ್ಥಾಪನೆಗೆ ಅಲ್ಲಿ ಬೆಂಬಲ ಹೆಚ್ಚುತ್ತಿದ್ದು, ನಾಗಾ ಪ್ರದೇಶದಲ್ಲಿ ಶಾಂತಿ ಮತ್ತು ಸುವ್ಯವಸ್ಥೆಯನ್ನು ಕಾಪಾಡುವ ಉದ್ದೇಶದಿಂದ ಅವರ ೧೬ ಬೇಡಿಕೆಗಳನ್ನು ಭಾರತ ಸರಕಾರವು ಮನ್ನಿಸಿತ್ತು. ಇದೇ ತಿಂಗಳ ೧೮ರಂದು ನಾಗಾ ನೇತಾರರು ಮತ್ತು ಭಾರತ ಸರಕಾರಗಳ ನಡುವಾದ ಒಡಂಬಡಿಕೆಯನ್ವಯ ಮಹತ್ವದ ಹೆಜ್ಜೆಯಾಗಿ ನಾಗಾ ಪ್ರದೇಶದ ವಿವಿಧ ಜಾತಿಗಳ ಪ್ರತಿನಿಧಿಗಳಿಂದ ಕೂಡಿದ ಮಧ್ಯಾವಧಿ ಮಂಡಳವನ್ನು ಅಸಾಮದ ರಾಜ್ಯಪಾಲ ಶ್ರೀ ಶ್ರೀನಾಗೇಶರು ಉದ್ಘಾಟಿಸಿದರು.

ಕೊಹಿಮಾದಲ್ಲಿ ಸಮಾವೇಶಗೊಂಡಿದ್ದ ಈ ಸಂಬಂಧದ ಸಭೆಯೊಂದರಲ್ಲಿ ಎಂಟು ಸಹಸ್ರ ನಾಗಾ ಜನರು ಭಾಗ ವಹಿಸಿದ್ದರು. ನಾಗಾ ಜನತೆಯು ರಾಜ್ಯಪಾಲರಿಗೆ ಉತ್ಸಾಹದಿಂದ ನೀಡಿದ ಸ್ವಾಗತ ಹಾಗೂ ನಡೆಸಿದ ಮೆರವಣಿಗೆಗಳಿಂದ ತಮ್ಮ ಬೇಡಿಕೆಯ ಸಿದ್ಧಿಸಿದುದಕ್ಕೆ ಅವರು ತೃಪ್ತಿಯನ್ನು ಪ್ರದರ್ಶಿಸುವಂತಿತ್ತು. ಈ ಪ್ರದೇಶದ ೧೬ ಜಾತಿಗಳ ಪ್ರತೀಕವಾಗಿ ಮೆರವಣಿಗೆಯ ದಾರಿಯಲ್ಲಿ ೧೬ ಮಂಟಪಗಳು ರಚಿತವಾಗಿದ್ದುವು.

"ನಾವು ಜೀವಂತವಿರಲು ಬಯಸುವುದಾದರೆ, ನಮ್ಮ ಹಿಂಸಾ ಪ್ರವೃತ್ತಿಯನ್ನು ದೂರವಿಡಬೇಕು. ವಿಕ್ಷುಬ್ಧವಾಗಿ ಹೋಗಿರುವ ನಾಗಾ ಪ್ರದೇಶದಲ್ಲಿ ಶಾಂತಿ ಮತ್ತು ಸಾಮಾನ್ಯ ಸ್ಥಿತಿಯನ್ನು ಸ್ಥಾಪಿಸುವುದೇ ಅತಿ ದೊಡ್ಡ ಸಮಸ್ಯೆಯಾಗಿದೆ. ಇದರ ಜತೆಗೆ ಭಾರತ ಸರಕಾರ ಹಾಗೂ ನಮ್ಮೊಳಗಾದ ೧೬ ಒಡಂಬಡಿಕೆಗಳನ್ನು ಕಾರ್ಯರೂಪಕ್ಕೆ ತರಬೇಕಾಗಿದೆ." ಎಂದು ನಾಗಾ ಸಮ್ಮೇಳನದ ಅಧ್ಯಕ್ಷ ಡಾ॥ ಇಕಂಗಾಲಿಬೊ ರವರು ಹೇಳಿ, ಫಿಜೋನ ಕೈಕೆಳಗಿನ ನಾಗಾ ನೇಶನಲ್ ಕೌನ್ಸಿಲಿನ ಮೂಲಕ ಹತ್ಯೆ, ರಕ್ತಪಾತ ಮತ್ತು ನಷ್ಟಗಳುಂಟಾದುದರಿಂದ ಅವರನ್ನು ಮೇಲೆ ದೋಷಾರೋಪಣೆ ಮಾಡಿದರು. ಕ್ರೂರಕೃತಿಗಳನ್ನು ತ್ಯಜಿಸಿ ಸೌಹಾರ್ದದಿಂದ ಬಾಳುವುದರಿಂದಲೇ ನಾಗಾ ಜನರ ಏಳಿಗೆಯೆಂಬುದನ್ನು ಅವರು ಒತ್ತಿ ಹೇಳಿದರು.

ಉದ್ಘಾಟಕರಾದ ರಾಜ್ಯಪಾಲ ಶ್ರೀ ನಾಗೇಶರು ಪ್ರತಿನಿಧಿಗಳ ಪ್ರತಿಜ್ಞಾ ವಿಧಿಯನ್ನು ಮಾಡಿಸುತ್ತ, ಳೆದ ಕೆಲವು ವರ್ಷಗಳಲ್ಲಿ ನಾಗ ಗುಡ್ಡಕಾಡುಗಳ ಜನತೆಗೆ ಮತ್ತು ಅಧಿಕಾರಿಗಳಿಗೆ ಉಪದ್ರವ, ಚಿಂತೆ ಮತ್ತು ಸಂಕಟಗಳು ಎದುರು ಬರುತಿದ್ದುವು. ನಾಗಾ ಜನರು ಶಾಂತಿಯನ್ನು ಬಯಸುತ್ತಿರುವುದು ಸ್ವಾಭಾವಿಕವೇ ಅವರು ಶಾಂತಿಯನ್ನಳಿಸಿ, ತಮ್ಮ ಶಕ್ತಿಯನ್ನು ವ್ಯರ್ಥಪಡಿಸಿಗೊಡದೆ. ರಚನಾತ್ಮಕ ಕಾರ್ಯಗಳಲ್ಲಿ ತೊಡಗಿಸಲು ಬದ್ಧ ಕಂಕಣರಾಗಲಿ;ಎಂದು ಹಾರೈಸಿದರು.

ಸರಕಾರ ಮತ್ತು ಜನತೆಯು ಕಳೆದ ಕಾಲವನ್ನು ಮರೆತು ಬಿಟ್ಟು, ಹೊಸ ಮನ್ವಂತರೋದಯವಾಗುವಂತಾಗಲೆಂಬುದೇ ಈ ಹೊಸ ವ್ಯವಸ್ಥೆಯ ಉದ್ದೇಶ. ಇದು ಕೈಗೂಡಿತೆಂದರೆ, ನಾಗಾ ಪರ್ವತಕಾಡುಗಳಲ್ಲಿ ಹರಡಿದ್ದ ಉಪದ್ರವ ಅಂಧಕಾರದನಡುವೆ ದಿವ್ಯ ಜ್ಯೋತಿಯೊಂದು ಉದಿಸಿದಂತಾಗುವುದು ನಾಗಾ ಪ್ರದೇಶದ ಹಿತಕ್ಕಾಗಿ ಉದ್ವೇಗ ಮತ್ತು ಕೋಪದ ಭಾವನೆಗಳನ್ನು ದೂರೀಕರಿಸಿ, ದುಡಿಯಬೇಕು ಮತ್ತು ಭಾರತದ ನಾಗರಿಕರಾಗಿ ಸೇರಿಕೊಂಡು ಕಾರ್ಯತತ್ಪರರಾಗುವ ಸಂಕಲ್ಪವನ್ನವರು ಮಾಡಬೇಕು. ಭಾರತದ ಸ್ವಾತಂತ್ರ್ಯದ ಫಲವನ್ನು ಇತರ ಜನರು ಅನುಭವಿಸುವಂತೆಯೇ ನಾಗಾ ಜನರೂ ಅನುಭೋಗಿಸುವಂತಾಗಬೇಕು.

ನಾಗಾರಾಜ್ಯದ ಈ ಮಧ್ಯಾವಧಿ ಮಂಡಳದ ನೇಮಕವು ಪ್ರಥಮ ಹೆಜ್ಜೆಯಾಗಿದೆ. ಮುಂದಕ್ಕೆ ನಾಗಾಪ್ರದೇಶವನ್ನು ಪ್ರತ್ಯೇಕವಾಗಿ ರಚಿಸಲಾಗುವುದು. ಆಗ ಇದಕ್ಕೊಂದು ವಿಧಾನಸಭೆ ಹಾಗೂ ಸಚಿವ ಸಂಪುಟವು ನಿರ್ಮಾಣಗೊಳ್ಳುವುದು. ಈ ನಡುವಣ ಸಾಂಕ್ರಾಮಿಕ ಸಮಯದಲ್ಲಿ ಈ ಮಾಧ್ಯಮಿಕ ಸಮಿತಿ ಮತ್ತು ಪ್ರಶಾಸನ ಪರಿಷತ್ತು ಒಂದುಗೂಡಿ ರಾಜ್ಯಾಭಿವೃದ್ಧಿಯತ್ತ ರಚನಾತ್ಮಕ ಕಾರ್ಯಕ್ರಮಗಳನ್ನು ಕೈಗೊಳ್ಳುವುದು ಅತ್ಯವಶ್ಯ. ಅಸ್ತವ್ಯಸ್ತವಾಗಿದ್ದ ರಾಜ್ಯದಲ್ಲಿ ಹಿಂಸಾಚಾರವನ್ನು ತಡೆದು ಶಾಶ್ವತ ಶಾಂತಿಯನ್ನು ಸ್ಥಾಪಿಸುವುದೇ ಇಂದು ಅನು ಎದುರಿಸಬೇಕಾದ ಪ್ರಧಾನ ಕರ್ತವ್ಯವೆನಿಸಿದೆ.

"ಭಾರತದ ಯಾವ ಮೂಲೆಯ ಜನರೇ ಇರಲಿ ತಮ್ಮ ಮೂಲ ಸಂಸ್ಕೃತಿಗೆ ಅನುಸಾರವಾಗಿ ಯಾವುದೇ ರಾಜ್ಯದಲ್ಲಿ

(೧೨ನೇ ಪುಟ ನೋಡಿರಿ)

R. O. C. No. B 3/681/61

UDIPI MUNICIPALITY.

NOTICE

Is hereby given that the right of collecting fees in the Municipal Markets, Cart Stands, Jutka Stand, Mutton stalls and slaughter house for the year 1961—62 will be sold by public auction by the Municipal Commissioner, Udipi on Tuesday the 28th February 1961 at 3 P. M. in the Municipal Office, Udipi.

The sale is subject to the rules in force. The three existing mutton stalls will be sold separately.

Further particulars or information may be had from the Municipal Office, Udipi. on all working days during office hours.

I Joshua,
Commissioner.

Municipal Office, Udipi,
Dated 17—2—1961

R. O. C. No. B 3/681/61

ಉಡುಪಿ ಮುನ್ಸಿಪಾಲಿಟಿ

ನೋಟೀಸು

ಈ ಮೂಲಕ ತಿಳಿಯಪಡಿಸುವುದೇನೆಂದರೆ:— 1961—62ನೇ ವರ್ಷದಲ್ಲಿ ಉಡುಪಿ ಮುನ್ಸಿಪಾಲಿಟಿಯ ಆಡಳಿತಕ್ಕೆ ಒಳಪಟ್ಟ ಮಾರ್ಕೇಟುಗಳು, ಗಾಡಿ ಚಾಳಿ, ಜಟ್ಕಾ ಚೌಕ, ಮಟನ್ ಸ್ಟಾಲ್ಸ್ ಮತ್ತು ವಧಾಗೃಹದಲ್ಲಿ ವರಿ ವಸೂಲು ಮಾಡುವ ಹಕ್ಕನ್ನು ಮುನ್ಸಿಪಲ್ ಕಮಿಶನರರು ತಾರೀಕು 28—2—1961ನೇ ಮಂಗಳವಾರ ಅಪರಾಹ್ನ ಘಂಟೆ 3.00ಕ್ಕೆ ಮುನ್ಸಿಪಲ್ ಆಫೀಸಿನಲ್ಲಿ ಅ ಕುರಿತು ಜ್ಯಾರಿಯಲ್ಲಿರತಕ್ಕ ನಿಯಮಗಳಿಗನುಸಾರವಾಗಿ ಬಹಿರಂಗವಾಗಿ ಏಲಂ ಮೂಲಕ ಮಾರಾಟ ಮಾಡುವರು.

ಮೂರು ಮಟನ್ ಸ್ಟಾಲುಗಳನ್ನು ಪ್ರತ್ಯೇಕ ಪ್ರತ್ಯೇಕವಾಗಿ ಏಲಂ ಮಾಡಲಾಗುವುದು.

ಈ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಆಫೀಸು ಸಮಯ, ಮುನ್ಸಿಪಲ್ ಆಫೀಸಿಗೆ ಬಂದು ತಿಳಿಕೊಳ್ಳಬಹುದು.

ಐ. ಜೋಶುವ,
ಕಮಿಶನರ್.

ಮುನ್ಸಿಪಲ್ ಆಫೀಸ್, ಉಡುಪಿ
ತಾ. 17-2-1961

ಮಂಗಳೂರಲ್ಲಿ ಈಗಾಗಲೇ ತೆರೆಯಲ್ಪಟ್ಟು ಪ್ರಗತಿಯಿಂದ ಮುಂದೆ ಸಾಗುತ್ತಿರುವ ಇನ್ನೊಂದು ಪ್ರಸಿದ್ಧ ಜವುಳಿ ಮಳಿಗೆ—

ಸಾರೀ ಎಂಪೋರಿಯಮ್

ಕೆಥೊಲಿಕ್ ಕ್ಲಬ್ಬಿನ ಎದುರು, ಹಂಪನಕಟ್ಟಾ, ಮಂಗಳೂರು-I

ನಿಮ್ಮ ಉತ್ತಮ ಆಯ್ಕೆಗೆ ಯೋಗ್ಯವೆಂದೆನಿಸಿದ ರೇಶ್ಮೆ ಸೀರೆಗಳೂ, ಹತ್ತಿ ನೂಲಿನ ಸೀರೆಗಳೂ ಸರ್ವೋತ್ಕೃಷ್ಟವಾಗಿವೆ, ಯಾವತ್ತೂ ತರದ ಶರ್ಟಿಂಗ್, ಕೋಟಿಂಗ್, ಚಿಂಟ್ಸ್, ಸಿಲ್ಕ್, ನೈಲಾನ್ ಇತ್ಯಾದಿ ಬಟ್ಟೆಬರೆಗಳಿಗೂ ಸಂದರ್ಶಿಸಿರಿ —

SAREE EMPORIUM

Opposit Catholic Club,
HAMPANKATTA, MANGALORE—1.